ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ, ಹೊಸಪೇಟೆ, ಬಳ್ಳಾರಿ ಜಿಲ್ಲೆ
ಕರ್ನಾಟಕ - ೫೮೩.೨೭೬

ದಕ್ಷಿಣ ಕನ್ನಡ ಜಿಲ್ಲೆಯ ಗೇರು ಉದ್ದಿಮೆ: ವರ್ತಮಾನ ಮತ್ತು ಭವಿಷ್ಯ ಒಂದು ಅಧ್ಯಯನ

ಪಿ.ಹೆಚ್.ಡಿ ಪದವಿಗಾಗಿ
ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ
ಅಧ್ಯಯನ ಪ್ರಬಂಧ

ಮೂಲಕ- ಡಾ। ಹಾಮಾನಾ ಸಂಶೋಧನಾ ಕೇಂದ್ರ
ಶ್ರೀ. ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು ಉಜಿರೆ, ದ.ಕ

ಸಂಶೋಧಕರು

ಶ್ರೀಮತಿ ಯಶೋದಾ ರಾಮಚಂದ್ರ ಎಂ.ಎ
ಅರ್ಥಶಾಸ್ತ್ರ ಉಪನ್ಯಾಸಕಿ
ನೆಹರೂ ಮೆಮೋರಿಯಲ್ ಕಾಲೇಜು
ಸುಳ್ಯ ದ.ಕ. ೫೭೪ ೨.೩೯

ಮಾರ್ಗದರ್ಶಕರು

ಡಾ। ಬಿ. ಪ್ರಭಾಕರ ಶಿಶಿಲ ಎಂ.ಎ., ಪಿಹೆಚ್.ಡಿ
ನಿರ್ದೇಶಕರು,
ಡಾ। ಬ್ರಹ್ಮಾನಂದ ಅರ್ಥಶಾಸ್ತ್ರ ಅಧ್ಯಯನ ಕೇಂದ್ರ
ಕಾವ್ಯ ಕಾಂತಮಂಗಲ
ಅಜ್ಜಾವರ ಸುಳ್ಯ ದ.ಕ

೨೦೧೫

ಕನ್ನಡ ವಿಶ್ವವಿದ್ಯಾಲಯ ಹಂಪಿ
ಡಾ. ಹಾಮಾನಾ ಸಂಶೋಧನಾ ಕೇಂದ್ರ
ಶ್ರೀ. ಧ. ಮಂ. ಕಾಲೇಜು ಉಜಿರೆ ೫೭೪೨೪೦. ದ.ಕ.

ದಕ್ಷಿಣ ಕನ್ನಡ ಜಿಲ್ಲೆಯ ಗೇರು ಉದ್ದಿಮೆ: ವರ್ತಮಾನ ಮತ್ತು ಭವಿಷ್ಯ ಒಂದು ಅಧ್ಯಯನ

ಪಿ.ಹೆಚ್.ಡಿ ಪದವಿಗಾಗಿ
ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ
ಅಧ್ಯಯನ ಪ್ರಬಂಧ

ಮೂಲಕ- ಡಾ। ಹಾಮಾನಾ ಸಂಶೋಧನಾ ಕೇಂದ್ರ
ಶ್ರೀ. ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು ಉಜಿರೆ, ದ.ಕ.

ಸಂಶೋಧಕರು
ಶ್ರೀಮತಿ ಯಶೋದಾ ರಾಮಚಂದ್ರ ಎಂ.ಎ.
ಅರ್ಥಶಾಸ್ತ್ರ ಉಪನ್ಯಾಸಕಿ
ನೆಹರೂ ಮೆಮೋರಿಯಲ್ ಕಾಲೇಜು
ಸುಳ್ಯ ದ.ಕ. 574327

ಮಾರ್ಗದರ್ಶಕರು
ಡಾ। ಬಿ. ಪ್ರಭಾಕರ ಶಿಶಿಲ ಎಂ.ಎ., ಪಿಹೆಚ್.ಡಿ.
ನಿರ್ದೇಶಕರು,
ಡಾ। ಬ್ರಹ್ಮಾನಂದ ಅರ್ಥಶಾಸ್ತ್ರ ಅಧ್ಯಯನ ಕೇಂದ್ರ
ಕಾವ್ಯ ಕಾಂತಮಂಗಲ
ಅಜ್ಜಾವರ ಸುಳ್ಯ ದ.ಕ.

ದೃಢೀಕರಣ ಪತ್ರ

"ದಕ್ಷಿಣ ಕನ್ನಡ ಜಿಲ್ಲೆಯ ಗೇರು ಉದ್ದಿಮೆ: ವರ್ತಮಾನ ಮತ್ತು ಭವಿಷ್ಯ ಒಂದು ಅಧ್ಯಯನ"- ಇದು ನಾನು ಉಜಿರೆಯ ಹಾಮಾನಾ ಸಂಶೋಧನಾ ಕೇಂದ್ರದಲ್ಲಿ ಡಾ। ಬಿ. ಪ್ರಭಾಕರ ಶಿಶಿಲ ಇವರ ಮಾರ್ಗದರ್ಶನದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಪಿ.ಹೆಚ್.ಡಿ ಪದವಿಗಾಗಿ ಸಿದ್ಧಪಡಿಸಿದ ಅಧ್ಯಯನ ಪ್ರಬಂಧವಾಗಿರುತ್ತದೆ. ಇದು ನನ್ನ ಮೂಲ ಮತ್ತು ಸ್ವತಂತ್ರ ರಚನೆಯಾಗಿದ್ದು, ಇದರ ಯಾವುದೇ ಭಾಗ ಎಲ್ಲೂ ಪ್ರಕಟವಾಗಿಲ್ಲ ಮತ್ತು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

Yashoda

ಉಜಿರೆ
ಫೆಬ್ರವರಿ 2015

ಶ್ರೀಮತಿ ಯಶೋದಾ ರಾಮಚಂದ್ರ
ಸಂಶೋಧಕರು

ಪ್ರಮಾಣ ಪತ್ರ

"ದಕ್ಷಿಣ ಕನ್ನಡ ಜಿಲ್ಲೆಯ ಗೇರು ಉದ್ದಿಮೆ: ವರ್ತಮಾನ ಮತ್ತು ಭವಿಷ್ಯ ಒಂದು ಅಧ್ಯಯನ"

ಎಂಬ ಮಹಾ ಪ್ರಬಂಧವನ್ನು ಕನ್ನಡ ವಿಶ್ವ ವಿದ್ಯಾಲಯ ಹಂಪಿಗೆ ಪಿ.ಹೆಚ್.ಡಿ. ಪದವಿಗಾಗಿ ಶ್ರೀಮತಿ ಯಶೋದಾ ರಾಮಚಂದ್ರರವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಈ ಮಹಾಪ್ರಬಂಧವು ಮೂಲ ರೂಪದ್ದಾಗಿದ್ದು, ಇದರ ಯಾವುದೇ ಭಾಗ ಎಲ್ಲೂ ಪ್ರಕಟವಾಗಿಲ್ಲ ಮತ್ತು ಈ ಮೊದಲು ಯಾವುದೇ ಪದವಿಗಾಗಿ ಇದನ್ನು ಸಲ್ಲಿಸಿರುವುದಿಲ್ಲ ಎಂದು ಪ್ರಮಾಣೀಕರಿಸುತ್ತೇನೆ.

ಡಾ। ಪಿ. ಪ್ರಭಾಕರ ಶಿಶಿಲ
(ಮಾರ್ಗದರ್ಶಕರು)

HOD of Economics & Research Guide
Research & Consultancy Cell
Nehru Memorial College, Sullia, D.K.
08257-230331 Karnataka, India
E-mail : shishilayakshagana@yahoo.com

ಸುಳ್ಯ
ಫೆಬ್ರವರಿ 2015

ಅನುಕ್ರಮಣಿಕೆ

ಅನುಬಂಧ

ಕೋಷ್ಟಕಗಳು

ಚಿತ್ರಗಳು

ನಕ್ಷೆಗಳು

ಭೂಪಟಗಳು

ಅಧ್ಯಾಯ ೧

ಪ್ರಸ್ತಾವನೆ, ಸಮಸ್ಯೀಕರಣ ಮತ್ತು ಅಧ್ಯಾಯ ರೂಪೀಕರಣ

೧.೧ ಪ್ರಸ್ತಾವನೆ

೧.೨ ಸಾಹಿತ್ಯ ಸಮೀಕ್ಷೆ ಮತ್ತು ಸಮಸ್ಯೀಕರಣ

೧.೩ ಅಧ್ಯಯನದ ಮಹತ್ವ

೧.೪ ಅಧ್ಯಯನದ ಉದ್ದೇಶಗಳು

೧.೫ ಅಧ್ಯಯನದ ವಿಧಾನ

೧.೬ ಅಧ್ಯಾಯ ರೂಪೀಕರಣ

ಅಧ್ಯಾಯ ೧
ಪ್ರಸ್ತಾವನೆ, ಸಮಸ್ಯೀಕರಣ ಮತ್ತು ಅಧ್ಯಾಯ ರೂಪೀಕರಣ

೧.೧. ಪ್ರಸ್ತಾವನೆ

ಗೇರು ಒಂದು ಪ್ರಮುಖವಾದ ತೋಟಗಾರಿಕಾ ಪರಿಸರ ಸಹ್ಯ ಬೆಳೆಯಾಗಿದ್ದು ತನ್ನ ಬಹೂಪಯೋಗಿ ಗುಣಗಳಿಂದಾಗಿ ಭಾರತದ ಆರ್ಥಿಕತೆಯಲ್ಲಿ ಪ್ರಮುಖ ವಾಣಿಜ್ಯ ಬೆಳೆ ಎಂಬ ಹೆಗ್ಗಳಿಕೆಯನ್ನು ಗಳಿಸಿಕೊಂಡಿದೆ. ಅತ್ಯಂತ ಹೆಚ್ಚಿನ ರಫ್ತು ಸಾಮರ್ಥ್ಯವನ್ನು ಹೊಂದಿರುವ ಡಾಲರ್ ಬೆಳೆಯಾಗಿರುವ ಗೇರು ದೇಶೀ ಮಾರುಕಟ್ಟೆಯಲ್ಲೂ ಅತ್ಯಧಿಕ ಬೇಡಿಕೆಯನ್ನು ಹೊಂದಿದೆ. ಬೇಡಿಕೆಯ ವಿಕಸನದಿಂದಾಗಿ ಮಾರುಕಟ್ಟೆ ಬೆಲೆ ಏರುತ್ತಲೇ ಹೋಗುತ್ತಿರುವುದರಿಂದ ಇದು ಬೆಳೆಗಾರರಿಗೆ ಒಂದು ಲಾಭದಾಯಕ ಕೃಷಿ ಎನಿಸಿಕೊಂಡಿದೆ. ಗೇರು ಸಂಸ್ಕರಣೆ ಒಂದು ಪ್ರಮುಖ ಉದ್ಯಮವಾಗಿದ್ದು ಉದ್ಯೋಗ ನಿರ್ಮಾಣದಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಗೇರು ಉದ್ಯಮದಲ್ಲಿ ನಿರತರಾದವರಲ್ಲಿ ಮಹಿಳಾ ಉದ್ಯೋಗಿಗಳೇ ಹೆಚ್ಚು ಇರುವುದರಿಂದ ಮಹಿಳಾ ಸಬಲೀಕರಣಕ್ಕೆ ಗೇರು ಉದ್ದಿಮೆ ತನ್ನದೇ ಆದ ದೇಣಿಗೆಯನ್ನು ನೀಡುತ್ತಿದೆ. ಇದು ಗ್ರಾಮೀಣ ಪ್ರದೇಶದಲ್ಲಿನ ಹೆಚ್ಚುವರಿ ಶ್ರಮಿಕರನ್ನು ತೊಡಗಿಸಿಕೊಳ್ಳುವುದರೊಂದಿಗೆ ಸಮಗ್ರ ಗ್ರಾಮೀಣಾಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಮಾನವನಿಗೆ ಪ್ರಕೃತಿ ನೀಡಿದ ಸಹಜವಾದ ಆಹಾರಗಳಲ್ಲಿ ಎರಡು ವಿಧಗಳಿವೆ: ಮೊದಲನೆಯದು, ಭೂಮಿಯ ಒಳಗೆ ಬೆಳೆಯವಂತಹದ್ದು ಮತ್ತು ಎರಡನೆಯದು ಭೂಮಿಯ ಮೇಲೆ ಬೆಳೆಯುವಂತಹದ್ದು. ಭೂಮಿಯ ಮೇಲೆ ಬೆಳೆಯುವಂತಹ ಬೀಜಗಳಲ್ಲಿ ಪ್ರಮುಖವಾದದ್ದು ಗೇರು ಬೀಜ. ಪ್ರಕೃತಿದತ್ತವಾಗಿ ಸಿಗುತ್ತಿದ್ದ ಈ ಬೀಜ ನಂತರದ ದಿನಗಳಲ್ಲಿ ಕೃಷಿ ಪ್ರಕ್ರಿಯೆಗೆ ಒಳಪಟ್ಟು ಕಾಲಕ್ರಮೇಣ ಶ್ರಮವಿಭಜನೆಯನ್ನು ಅಳವಡಿಸಿಕೊಂಡು ಒಂದು ಉದ್ಯಮವಾಗಿ ಬೆಳೆದಿದೆ. ಉದ್ಯೋಗ ನಿರ್ಮಾಣ, ಮಹಿಳಾ ಸಬಲೀಕರಣ, ವಿದೇಶೀ ವಿನಿಮಯ ಗಳಿಕೆಯೊಡನೆ ಪರಿಸರ ಸಹ್ಯ ಸುಸ್ಥಿರ ಅಭಿವೃದ್ಧಿಗೆ ಕಾರಣವಾಗುತ್ತಿರುವುದರಿಂದ ಇದರ ಅಧ್ಯಯನದ ಬಗ್ಗೆ ಅಭಿವೃದ್ಧಿಪರರು ಗಮನಹರಿಸುವಂತಾಗಿದೆ.

ಮಾನವನ ಬಲಹೀನತೆಗಳಲ್ಲಿ ಮದ್ಯಕ್ಕೆ ಮಹತ್ವದ ಸ್ಥಾನ. ಜೀವನದಲ್ಲಿ ಸಂತೋಷವನ್ನು ಅರಸುವುದು ಮಾನವ ಸಹಜ ಗುಣ. ಮದಿರೆಯ ಸೇವನೆಯಿಂದ ಸಂತೋಷ ಪಡುವುದನ್ನು ಕಲಿತ ಮಾನವ ಮದ್ಯವನ್ನು ಉತ್ಪಾದಿಸಲು ಲಭ್ಯವಿರುವ ಎಲ್ಲಾ ಸಂಪನ್ಮೂಲಗಳನ್ನು ಬಳಸಿಕೊಂಡ. ಅವುಗಳಲ್ಲಿ ಗೇರು ಹಣ್ಣು ಕೂಡಾ ಒಂದು. ಗೇರು ಶರಾಬನ್ನು ಕೇವಲ ಗಂಡಸರು ಮಾತ್ರ ಕುಡಿದು ಆನಂದಿಸುವುದಲ್ಲ, ಮದಿರಾಕ್ಷಿಯರೂ ಕುಡಿದು ಮೈ ಮರೆಯುತ್ತಾರೆ. ಬಾಣಂತಿಯರಿಗೆ ಔಷಧ ರೂಪದಲ್ಲಿ ಗೇರು ಮದ್ಯವನ್ನು ಕುಡಿಸಲಾಗುತ್ತದೆ. ಮಾನವ ತಾನು ಯಾವುದನ್ನು ಬಳಸುತ್ತಾನೋ ಅದನ್ನು ದೈವ ದೇವರುಗಳಿಗೆ ಅರ್ಪಿಸುವುದು ಒಂದು ಸಂಪ್ರದಾಯ. ಭೂತಾರಾಧನೆಗೆ ಹೆಸರಾದ ದಕ್ಷಿಣ ಕನ್ನಡದಲ್ಲಿ ಭೂತಗಳಿಗೆ ಶರಾಬು ನೀಡುವ, ಪ್ರೇತಾತ್ಮಗಳಿಗೆ ಶರಾಬು ಇಡುವ ಕ್ರಮವಿದೆ. ಗೇರು ಹಣ್ಣಿನಿಂದ ತಯಾರಿಸುವ ಶರಾಬು ಇಂದು ನಿಷೇಧಕ್ಕೆ ಒಳಗಾಗಿದೆ. ಹಾಗಾಗಿ ಗೇರು ಹಣ್ಣಿನ ಪಾನೀಯ ಉತ್ಪಾದಿಸಿ ಮಾರಾಟ ಮಾಡುವ ಪ್ರಯತ್ನಗಳಾಗುತ್ತಿವೆ.

ಅಲ್ಪಾಯುಷ್ಯ ಗೇರು ಹಣ್ಣಿನ ಪ್ರಮುಖ ಗುಣ. ಗೇರು ಬೀಜಕ್ಕೆ ಆ ಮಿತಿಯಿಲ್ಲ. ಅದೊಂದು ಪ್ರಮುಖ ಆದಾಯದ ಮೂಲ. ಅಲೆಮಾರಿ ಮಾನವ ಕೃಷಿಯನ್ನು ನೆಚ್ಚಿಕೊಂಡು, ಸಂಸಾರವಂದಿಗನಾಗಿ ಒಂದೆಡೆ ನೆಲೆನಿಂತ ಮೇಲೆ ಆಹಾರದ

[illegible]

ಮತ್ತು ಆದಾಯದ ವಿವಿಧ ಮೂಲಗಳನ್ನು ಅವಿಷ್ಕರಿಸುವುದು ಅವನ ಪಾಲಿಗೆ ಅನಿವಾರ್ಯವಾಯಿತು. ಬಯಲು ಗದ್ದೆಗಳು ಆಹಾರ ಬೆಳೆಗಳಿಗೆ ಬಳಕೆಯಾದರೆ, ಎತ್ತರದ ಪ್ರದೇಶಗಳು ಮತ್ತು ಬೆಟ್ಟಗುಡ್ಡಗಳು ತೋಟಗಾರಿಕಾ ಬೆಳೆಗಳಿಗೆ ಬಳಕೆಯಾದವು. ಗೇರು ಬೆಳೆ ಅವುಗಳಲ್ಲೊಂದು. ಈ ದೇಶದಲ್ಲಿ ಗೇರು ಬೀಜದ ಉತ್ಪಾದನೆಯ ಇತಿಹಾಸವನ್ನು ಯಾವ ವರ್ಷಕ್ಕೆ ಒಯ್ಯುವುದೆಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಒಂದು ಐತಿಹ್ಯದ ಪ್ರಕಾರ ಕೇಪ್ ಓಫ್ ಗುಡ್ ಹೋಪ್ ಭೂಶಿರವನ್ನು ಬಳಸಿ ವಾಸ್ಕೋಡ ಗಾಮನು ಕಲ್ಲಿಕೋಟೆಗೆ ಬಂದಿಳಿದಾಗ, ಅಲ್ಲಿ ಗೇರು ಬೀಜದ ತಿರುಳಿನ ಮಾರಾಟವಾಗುವುದನ್ನು ಕಂಡು ಅದೇನೆಂದು ಅವನ ಭಾಷೆಯಲ್ಲಿ ಕೇಳಿದ. ಮಲೆಯಾಳ ವರ್ತಕರು ವಾಸ್ಕೋಡಗಾಮ ಅದರ ಬೆಲೆಯನ್ನು ಕೇಳುತ್ತಿದ್ದಾನೆಂದು ಭಾವಿಸಿ ಮಲೆಯಾಳ ಭಾಷೆಯಲ್ಲಿ ಕಾಸಿನಿ ಎಟ್ಟ್ (ಒಂದು ಕಾಸಿಗೆ ಎಂಟು) ಎಂದು ಉತ್ತರಿಸಿದರಂತೆ. ಹಾಗಾಗಿ ಗೇರು ಬೀಜ ಯುರೋಪಿಯನ್ನರ ಪಾಲಿಗೆ ಕ್ಯಾಶುನೆಟ್ ಆಯಿತು ಎಂಬ ಐತಿಹ್ಯ ಒಂದಿದೆ.[೧]

ಗೋಡಂಬಿಯ ಸೃಷ್ಟಿ ಹಾಗೂ ಹೆಸರಿಗೆ ಸಂಬಂಧಪಟ್ಟ ಒಂದು ಸುಂದರವಾದ ದೃಷ್ಟಾಂತ ಕಥೆಯಿದೆ : "ಸುಂದರವಾದ ಫಲ ಪುಷ್ಪಗಳನ್ನೂ, ಪಶು ಪಕ್ಷಿ ಪ್ರಾಣಿಗಳನ್ನೂ ಸೃಷ್ಟಿಸಿ ಆಯಾಸಗೊಂಡ ಸೃಷ್ಟಿ ಕರ್ತನಾದ ಬ್ರಹ್ಮದೇವನು ಒಂದು ದಿನ ನಿದ್ರೆಯಲ್ಲಿ ಸುಖಾನುಭವ ಪಡುತ್ತಿದ್ದನು. ವಿಶ್ರಮಿಸುತ್ತಿದ್ದ ಗಂಡನನ್ನು ನೋಡಿದ ಸರಸ್ವತಿ ದೇವಿಯು ಗಂಡನ ಅಪೂರ್ಣವಾದ, ಸೃಷ್ಟಿ ಕಾರ್ಯವನ್ನು ಮುಂದುವರಿಸುವ ಪ್ರಯತ್ನ ಮಾಡಿದಳು. ಮಾವಿನ ಹಣ್ಣಿನ ಕೆನ್ನೆಗೆಂಪು, ಕಿತ್ತಳೆಯ ಮೃದುತ್ವ, ಸೀಬೆ ಹಣ್ಣಿನ ಆಕೃತಿಗಳನ್ನು ಆಯ್ದು, ಆಕೆ ಒಂದು ಹೊಸ ಹಣ್ಣನ್ನು ಸೃಷ್ಟಿಸಿದಳು. ತನ್ನ ಸೃಷ್ಟಿಯ ಫಲವನ್ನು ನೋಡಿ ಆನಂದ ಪಡುತ್ತಿದ್ದಂತೆಯೇ ಗಂಡನು ನಿಧಾನವಾಗಿ ಎಚ್ಚರಗೊಂಡನು. ತನ್ನ ತಪ್ಪಿನ ಮನವರಿಕೆಯಾಗುತ್ತಿದ್ದಂತೆಯೇ ತಾನು ಸೃಷ್ಟಿಸಿದ ಹಣ್ಣಿನ ಬೀಜವು ಹೊರಗಿರುವುದರ ಅರಿವು ಅವಳಿಗುಂಟಾಯಿತು. ಆಕೆ ಅತಿ ಅವಸರದಲ್ಲಿ ಗಂಡನಿಗೆ ಗೊತ್ತಾಗದಿರಲೆಂದು ಹಣ್ಣಿನ ಮೇಲ್ಭಾಗದಲ್ಲಿ ಒಂದು ಸಣ್ಣ ಹೊಂಡವನ್ನು ಮಾಡಿ ಬೀಜವನ್ನು ಹೊಂಡದಲ್ಲಿ ಚುಚ್ಚಿ, ಹಣ್ಣನ್ನು ತಲೆಕೆಳಗಾಗಿ ಒಂದು ಮರದಲ್ಲಿ ನೇತಾಡಬಿಟ್ಟಳು. ಬ್ರಹ್ಮದೇವನು ಎಚ್ಚೆತ್ತ ಮೇಲೆ ಸರಸ್ವತಿಗೆ ತನ್ನ ತಪ್ಪನ್ನು ಸರಿಪಡಿಸಲು ಅವಕಾಶವೇ ಸಿಗಲಿಲ್ಲ. ಹಾಗಾಗಿ ಗೋಡಂಬಿಯು ಅಂದಿನಿಂದ ಇಂದಿನವರೆಗೂ ತಲೆಕೆಳಗಾಗಿಯೇ ನೇತಾಡುತ್ತಿದೆ."[೨] ಬೇರೆ ಹಣ್ಣುಗಳ ಬೀಜ ಒಳಗೆ ಆದರೆ ಗೇರು ಹಣ್ಣಿನ ಬೀಜ ಹೊರಗೆ ಎಂಬುದು ಗೋಡಂಬಿಯ ಸೃಷ್ಟಿಯ ಕುರಿತು ಇರುವ ಪುರಾಣ ಕಥೆ.

೧೫೫೮ ರಲ್ಲಿ ಪ್ರಕಟವಾದ ಯಫ್. ಆಂದ್ರೆ ಲೆವಿಟ್ ಎಂಬ ಫ್ರೆಂಚ್ ಪ್ರಕೃತಿ ಶಾಸ್ತ್ರಜ್ಞರು ಬರೆದ "ನಮ್ಮ ಕಾಲದಲ್ಲಿ ಶೋಧಿಸಿದ ಅಂಟಾರ್ಕ್‌ಟಿಕ್ ಫ್ರಾನ್ಸ್ ಅಥವಾ ಅಮೇರಿಕ, ಹಲವು ಭೂ ಭಾಗಗಳು ಮತ್ತು ದ್ವೀಪಗಳ ವಿಚಿತ್ರತೆ" ಎಂಬ ಪ್ರಥಮ ಚಾರಿತ್ರಿಕ ದಾಖಲೆಯ ಕೃತಿಯಲ್ಲಿ ಆ ದ್ವೀಪಗಳ ವರ್ಣನೆಯೊಡನೆ ಗೇರು ಹಣ್ಣಿನ ಬಗೆಗಿನ ವಿವರಣೆ ದೊರೆಯುತ್ತದೆ ". . . . . ವಿಪುಲವಾಗಿ ಹಣ್ಣು ಹಂಪಲು, ಗಡ್ಡೆ ಗೆಣಸು ಮತ್ತು ತರಕಾರಿ ಬೆಳೆಗಳ ಜತೆಗೆ ಕೈಯ ಮುಷ್ಟಿಯ ಗಾತ್ರ ಮತ್ತು ಹೆಬ್ಬಾವಿನ ಮೊಟ್ಟೆಯ ಆಕೃತಿಯ ಹಣ್ಣುಗಳನ್ನು ಬಿಡುವ ಅಕಾಜೂ (Acajous) ಎಂದು ಕರೆಯಲ್ಪಡುವ ಮರಗಳು ಧಾರಾಳವಾಗಿ ಬೆಳೆಯುವ ಈ ದೇಶವು ಇತರ ವಿಷಯಗಳಲ್ಲಿ ಕ್ರೂರ ನರಭಕ್ಷಕ ಜನರ ವಾಸಸ್ಥಾನಕ್ಕೆ ತಕ್ಕುದಾದ ಸ್ಥಳಕ್ಕಿಂತ ಅತೀ ಉತ್ತಮವಾಗಿದೆ. ಅಕಾಜೂ ಮರದ ಹಣ್ಣು ತಿನ್ನಲು ಅಷ್ಟೊಂದು ಹಿತಕರವಾಗಿಲ್ಲವಾದರೂ ಕೆಲವರು ಇದರಿಂದ ಒಂದು ಪಾನೀಯವನ್ನು ತಯಾರಿಸುತ್ತಾರೆ. ಹಣ್ಣಿನ ತುದಿಯಲ್ಲಿ 'ಚೆಸ್ ನೆಟ್' ಹಣ್ಣಿನಷ್ಟು ಗಾತ್ರ ಮತ್ತು ಮೂತ್ರ ಪಿಂಡದ ಆಕಾರದ ಒಂದು ಬೀಜವು ನೇತಾಡುತ್ತಿರುತ್ತದೆ. ಬೀಜದ ಒಳಗಿರುವ ತಿರುಳನ್ನು ಸ್ವಲ್ಪ ಬೇಯಿಸಿದರೆ ತಿನ್ನಲು ರುಚಿಯಾಗಿರುತ್ತದೆ. ಬೀಜದ

ಸಿಪ್ಪೆಯಲ್ಲಿ ಬೇರೆ ಬೀಜಗಳ ಸಿಪ್ಪೆಯಲ್ಲಿರುವುದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಎಣ್ಣೆಯಿರುತ್ತದೆ. ಈ ಮರದ ಎಲೆಗಳು ಸೀಬೆ (Pear) ಹಣ್ಣಿನ ಆಕಾರದಲ್ಲಿದ್ದು ತುದಿಗಳು ಸ್ವಲ್ಪ ಮೊನಚಾಗಿ, ಕೆಂಪಾಗಿರುತ್ತವೆ; ಮರದ ತೊಗಟೆಯು ಕೆಂಪು ಬಣ್ಣವಿದ್ದು ಕಹಿಯಾಗಿರುತ್ತದೆ. ಆದಿವಾಸಿಗಳು ಈ ಮರವನ್ನು ಯಾವುದಕ್ಕೂ ಉಪಯೋಗಿಸುವುದಿಲ್ಲ. ಆದರೆ ನರಭಕ್ಷಕರ ದ್ವೀಪಗಳಲ್ಲಿ ಬೇರೆ ಬೇರೆ ಜಾತಿಯ ಮರಗಳು ಕಡಿಮೆಯಿದ್ದು ಈ ಮರಗಳು ಅಧಿಕವಾಗಿರುವುದರಿಂದ ಇವುಗಳನ್ನು ಕಟ್ಟಿಗೆಯಾಗಿ ಉಪಯೋಗಿಸುತ್ತಾರೆ. "ಅಕಾಜೂ" ಮರದ ಬಗ್ಗೆ ನನಗಿಷ್ಟೇ ಹೇಳಲಿಕ್ಕಿರುವುದು."[೨] ಅಕಾಜೂನಿಂದಾಗಿ ಕ್ಯಾಶ್ಯೂ ಎಂಬ ಹೆಸರು ಬಂದಿರುವ ಸಾಧ್ಯತೆಗಳಿವೆ. ಹಿಂದಿಯಲ್ಲಿ ಗೇರು ಬೀಜವನ್ನು ಕಾಜೂ ಎಂದು ಕರೆಯುವುದು ಕೂಡಾ ಇದೇ ಕಾರಣದಿಂದ ಇರಬಹುದು ಎನಿಸುತ್ತದೆ.

ಗೇರು (Anacardium occidental L) ಇದೊಂದು ಅನಾಕಾರ್ಡಿಯಾಸಿ ಎಂಬ ಗುಂಪಿಗೆ ಸೇರಿದ ಗಿಡ. ಮೂಲತಃ ಪೋರ್ಚುಗೀಸರು ಗೇರು ಬೀಜದ ಉತ್ಪಾದನೆಯನ್ನು ಬ್ರೆಜಿಲ್‌ನಲ್ಲಿ ಪ್ರಾರಂಭಿಸಿದರು . ಹಾಗಾಗಿ ಬ್ರೆಜಿಲ್ ಗೇರು ಬೀಜದ ತವರು ಆಗಿದೆ. ನಂತರ ಇದು ಮೊಜಾಂಬಿಕ್‌ಗೆ ಬಂತು. ಭಾರತಕ್ಕೆ ಮೊಟ್ಟ ಮೊದಲಿಗೆ ಗೇರು ಗಿಡವನ್ನು ಪರಿಚಯಿಸಿದವರು ಪೋರ್ಚುಗೀಸ್ ನಾವಿಕರು. ಭೂ ಸವಕಳಿಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಭಾರತದ ನೆಲಕ್ಕೆ ೧೫೬೩ ಮತ್ತು ೧೫೭೮ ರ ನಡುವೆ ಈ ಗಿಡವನ್ನು ಪೋರ್ಚುಗೀಸರು ಪರಿಚಯಿಸಿದರು. ಇಂದು ಸುಮಾರು ೨೮ಕ್ಕೂ ಹೆಚ್ಚಿನ ರಾಷ್ಟ್ರಗಳು ಗೇರು ಉತ್ಪಾದನೆ, ಸಂಸ್ಕರಣೆ ಹಾಗೂ ರಫ್ತು ವ್ಯಾಪಾರದಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ. ಅವುಗಳಲ್ಲಿ ಭಾರತ ಕೂಡ ಒಂದು. ಪೋರ್ಚುಗೀಸರು ಇದನ್ನು ಪ್ರಪಂಚಕ್ಕೆ ಮೊಟ್ಟ ಮೊದಲಿಗೆ ಪರಿಚಯಿಸಿದ್ದರೂ, ಅಂತಾರಾಷ್ಟ್ರೀಯ ವ್ಯಾಪಾರೀ ವಲಯದಲ್ಲಿ ಗೋಡಂಬಿಯನ್ನು ಪರಿಚಯಿಸಿದ ಕೀರ್ತಿ ಭಾರತದ್ದು. ಕ್ರಿ.ಶ. ೨೦೦೧ ರವರೆಗೆ ಭಾರತ ಗೇರು ಉತ್ಪಾದನೆ, ಅನುಭೋಗ, ಸಂಸ್ಕರಣೆ ಹಾಗೂ ನಿರ್ಯಾತದಲ್ಲಿ ಪ್ರಪಂಚದ ಅಗ್ರಮಾನ್ಯ ರಾಷ್ಟ್ರ ಎಂದೇ ಗುರುತಿಸಿಕೊಂಡಿತ್ತು. ಆದರೀಗ ವಿಯೆಟ್ನಾಂ ಅತೀ ಹೆಚ್ಚು ಗೋಡಂಬಿ ಉತ್ಪಾದಿಸುವ ರಾಷ್ಟ್ರ ಎಂಬ ಹೆಗ್ಗಳಿಕೆಯನ್ನು ಗಳಿಸಿಕೊಂಡು ಭಾರತದ ಅಗ್ರಮಾನ್ಯತೆಗೆ ಧಕ್ಕೆ ತಂದಿದೆ.

ಗೇರಿಗೆ ಅನೇಕ ವೈದ್ಯಕೀಯ ಉಪಯೋಗಗಳಿವೆ. ಗೋಡಂಬಿ ಮರದ ಬೇರಿನಿಂದ ತಯಾರಿಸಿದ ಕಷಾಯವು ಉತ್ತಮ ಭೇದಿ ಔಷಧ (Purgative) ವೆಂದು ಖ್ಯಾತಿ ಪಡೆದಿದೆ. ಗೋಡಂಬಿಯ ಎಲೆಗಳನ್ನು ಪ್ರಸವಾ ನಂತರದ ಸ್ನಾನದಲ್ಲಿ ಪೂತಿನಾಶಕ (Antiseptic) ವಾಗಿ ಉಪಯೋಗಿಸುತ್ತಾರೆ. ಗೋಡಂಬಿ ಹಣ್ಣನ್ನು 'ಸ್ಕರ್ವಿ' (Scurvey) ರೋಗದ ನಿವಾರಣೆಗಾಗಿ ಬಳಸಲಾಗುತ್ತದೆ. ಗೋಡಂಬಿ ಹಣ್ಣಿನ ರಸವು 'ಸಿಫಲಿಸ್'(Syphilis) ನಂತಹ ಗುಹ್ಯ ರೋಗದ ಚಿಕಿತ್ಸೆಗೆ ಉತ್ತಮವೆಂದು ಸಾಬೀತಾಗಿದೆ. ಗೋಡಂಬಿ ಹಣ್ಣಿನ 'ಸಿರಪ್' ಶೀತ ಮತ್ತು ಕೆಮ್ಮಿಗೆ ಉತ್ತಮ ಔಷಧವಾಗಿ ಬಳಕೆಯಾಗುತ್ತಿದೆ. ಗೋಡಂಬಿ ಹಣ್ಣಿನ ರಸದಿಂದ ತಯಾರಿಸಿದ ಮದ್ಯಸಾರವು ಹೊಟ್ಟೆನೋವಿಗೆ ಉತ್ತಮ ಔಷಧಿ. ಇದನ್ನು ಮಲಬದ್ಧತೆ, ನಿದ್ರಾಹೀನತೆ, ಶೀತ, ಕೆಮ್ಮು, ಮೈನೋವು, ಹೊಟ್ಟೆಯುಬ್ಬರ, ಶೀತ ಜ್ವರ ಮತ್ತು ಸ್ನಾಯುಗಳ ನೋವಿಗಾಗಿ ಉಪಯೋಗಿಸುತ್ತಾರೆ. ಕಾಲರಾ ಮತ್ತು ಭೇದಿಯ ಉಪಶಮನಕ್ಕೂ ಇದನ್ನೇ ಉಪಯೋಗಿಸಬಹುದು. ಹುಳದ ಬಾಧೆಯಿರುವ ಮಕ್ಕಳಿಗೆ ಮತ್ತು ಕಡಿಮೆ ರಕ್ತದೊತ್ತಡವಿರುವವರಿಗೆ ಇದು ಅತ್ಯುತ್ತಮ ಔಷಧಿಯಾಗಿದೆ. ಗೋಡಂಬಿ ತಿರುಳಿನಲ್ಲಿ ಕಾಮೋತ್ತೇಜಕ (Aphrodisiac) ಗುಣಗಳಿವೆಯೆಂದು ಹೇಳಲಾಗಿದೆ. ಗೇರು ಬೀಜದ ಎಣ್ಣೆಯು ಕುಷ್ಠರೋಗ (Leprosy) ನಿವಾರಣೆಯ ಔಷಧೋಪಚಾರದಲ್ಲಿ ಬಳಸಲ್ಪಡುತ್ತದೆ. ಮದ್ಯಸಾರದಲ್ಲಿ ಉಜ್ಜಿ ತೆಗೆದ ಗೇರು ಬೀಜದ ಎಣ್ಣೆಯನ್ನು ಪಾದಗಳಲ್ಲಿ ಕಾಣಿಸಿಕೊಳ್ಳುವ ಬಿರುಕನ್ನು ಗುಣಪಡಿಸಲು ಹಳ್ಳಿಗಳಲ್ಲಿ ಉಪಯೋಗಿಸುತ್ತಾರೆ.[೪]

ಗೋಡಂಬಿ ತನ್ನ ಸ್ವಾದಿಷ್ಟತೆಗೆ, ಸುವಾಸನೆ ಹಾಗೂ ಪೌಷ್ಟಿಕತೆಗೆ ಹೆಸರುವಾಸಿಯಾಗಿದೆ. ಭಾರತೀಯ ಆಯುರ್ವೇದ ಶಾಸ್ತ್ರದಲ್ಲಿ ಗೇರು ಒಂದು ಶಕ್ತಿಶಾಲಿ ಪೌಷ್ಟಿಕ ಆಹಾರ ಎಂದು ದಾಖಲಿಸಲ್ಪಟ್ಟಿದೆ. ಗೋಡಂಬಿ ಒಂದು ಉತ್ತಮ ವೀರ್ಯವರ್ಧಕ, ಉತ್ಸಾಹದಾಯಕ ಹಾಗೂ ಹಸಿವನ್ನು ಹೆಚ್ಚಿಸಬಲ್ಲಂತಹ ಗುಣಗಳನ್ನು ಹೊಂದಿದ್ದು ಕೂದಲಿನ ಬೆಳವಣಿಗೆಗೆ ಉತ್ತಮ ಔಷಧವಾಗಿದೆ. ಇದರ ನಿರಂತರ ಬಳಕೆ ಅನೇಕ ಕಾಯಿಲೆಗಳನ್ನು ನಿವಾರಿಸುತ್ತದೆ. ದೇಹದ ಕೊಬ್ಬು ನಿವಾರಕ ವಿಟಮಿನ್‌ಗಳಾದ A, B, E ಮತ್ತು K ಇರುವುದರಿಂದ ಗೋಡಂಬಿ ಸೇವನೆಯು ರಕ್ತದಲ್ಲಿನ ಕೆಟ್ಟ ಕೊಬ್ಬಿನ ಪ್ರಮಾಣವನ್ನು ಕಡಿಮೆಗೊಳಿಸಿ ಹೃದಯಾಘಾತದ ಪ್ರಮಾಣವನ್ನು ತಗ್ಗಿಸುತ್ತದೆ. ಇದರಲ್ಲಿ ವಿಟಮಿನ್ ಬಿ ಇರುವುದರಿಂದ ದೇಹದಲ್ಲಿ ಲವಲವಿಕೆಯನ್ನು ಕಾಯ್ದುಕೊಳ್ಳುವುದಕ್ಕೆ ಸಹಾಯ ಮಾಡುತ್ತದೆ. ರಕ್ತಹೀನತೆಗೂ ಇದು ಪರಿಣಾಮಕಾರಿ ಔಷಧ. ಇದರಲ್ಲಿ ಕಬ್ಬಿಣದ ಅಂಶ ಸಮೃದ್ಧವಾಗಿರುವುದರಿಂದ ಇದರ ನಿರಂತರ ಬಳಕೆ ಅನೇಕ ಕಾಯಿಲೆಗಳಿಗೆ ದಿವ್ಯೌಷಧವಾಗಿದೆ.[೫]

ಕರ್ನಾಟಕದಲ್ಲಿ ಸುಮಾರು ೭೦,೦೧೨ ಹೆಕ್ಟೇರು ಪ್ರದೇಶದಲ್ಲಿ ಗೇರು ಬೆಳೆಯುತ್ತಿದ್ದು ೧,೧೫,೨೧೮ ಟನ್‌ಗಳಷ್ಟು ಗೇರು ಉತ್ಪಾದನೆಯನ್ನು ಮಾಡುತ್ತಿದೆ. ಈ ಬೆಳೆ ವ್ಯಾಪಕವಾಗಿ ಕರಾವಳಿ ಪ್ರದೇಶ ಅಂದರೆ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಬೆಳೆಯಲಾಗುತ್ತಿದ್ದು ಉಳಿದಂತೆ ಕೋಲಾರ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ಬೆಳಗಾಂ ಹಾಗೂ ಶಿವಮೊಗ್ಗದಲ್ಲೂ ಸ್ವಲ್ಪ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ದಕ್ಷಿಣ ಕನ್ನಡ ಮೊದಲ ಸ್ಥಾನದಲ್ಲಿದ್ದು (೪೨.೯೪%) ಉಡುಪಿ (೩೫.೯೧%) ಮತ್ತು ಬೆಳಗಾಂ(೬.೩೫%) ಅನುಕ್ರಮವಾಗಿ ೨ನೇ ಹಾಗೂ ಮೂರನೇ ಸ್ಥಾನದಲ್ಲಿವೆ. ಗೇರು ಉತ್ಪಾದನೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ ರಾಜ್ಯದಲ್ಲೇ ಮುಂಚೂಣಿಯಲ್ಲಿ (೪೯.೭೭%) ಉಡುಪಿ ಮತ್ತು (೩೭.೧೭%) ಬೆಳಗಾಂ(೫.೫೫%) ಆ ನಂತರದ ಸ್ಥಾನವನ್ನು ಆಕ್ರಮಿಸಿವೆ. ಬಯಲು ಸೀಮೆಗಳೆನಿಸಿಕೊಂಡ ದಾವಣಗೆರೆ, ತುಮಕೂರು, ಹಾಸನ, ಚಾಮರಾಜನಗರ ಮತ್ತು ಮೈಸೂರು ಈ ಜಿಲ್ಲೆಗಳಲ್ಲೂ ಇತ್ತೀಚೆಗೆ ಗೇರು ಬೆಳೆ ಬೆಳೆಯಲಾಗುತ್ತಿದ್ದು, ಕರ್ನಾಟಕವು ಭಾರತದ ಅತೀ ದೊಡ್ಡ ಗೇರು ಬೆಳೆಯ ಪ್ರದೇಶವೆನಿಸಿಕೊಂಡಿದೆ.

ದ.ಕ. ಜಿಲ್ಲೆ ಗೋಡಂಬಿ ರಫ್ತು ವ್ಯಾಪಾರದ ಕೇಂದ್ರವಾಗಿದ್ದು ಸುಮಾರು ೫೦ ಕ್ಕೂ ಮಿಕ್ಕಿದ ಗೋಡಂಬಿ ಸಂಸ್ಕರಣಾ ಕೇಂದ್ರಗಳು ದ.ಕ. ಜಿಲ್ಲೆಯಲ್ಲಿವೆ. ಬಹುತೇಕ ಉದ್ಯಮಗಳು ಖಾಸಗಿ ಒಡೆತನಕ್ಕೆ ಸೇರಿವೆ. ಹೆಚ್ಚಿನ ಬಂಡವಾಳದ ಅವಶ್ಯಕತೆಯಿಂದಾಗಿ ಪಾಲುದಾರಿಕೆಯಲ್ಲಿ ಬಹುತೇಕ ಉದ್ಯಮಗಳು ನಡೆಯುತ್ತಿವೆ. ಕರ್ನಾಟಕ ರಾಜ್ಯದ ೭೦% ಉತ್ಪಾದನೆ ಕರಾವಳಿಯಲ್ಲೇ ಆಗುತ್ತಿದೆ. ಮಂಗಳೂರು ಗೋಡಂಬಿ ಸಂಸ್ಕರಣೆಯ ತವರು. ಕರ್ನಾಟಕದ ಕೃಷಿ ಉತ್ಪನ್ನಗಳ ರಫ್ತು ವ್ಯಾಪಾರದಲ್ಲಿ ಗೋಡಂಬಿಯ ಪಾಲು ೧೧.೦೮%, ಒಟ್ಟು ರಫ್ತು ವ್ಯಾಪಾರದಲ್ಲಿ ೧.೯೭% ರಷ್ಟಿದೆ. ದ.ಕ. ಜಿಲ್ಲೆಯ ಗೇರು ಉತ್ಪಾದನಾ ಸಾಮರ್ಥ್ಯ ಕೂಡ ಅತ್ಯಂತ ಹೆಚ್ಚು ಎಂದರೆ ಇಳುವರಿ ಒಂದು ಹೆಕ್ಟೇರಿಗೆ ೭೧೪ ಕೆ.ಜಿ.ಯಷ್ಟಿದೆ. ಅತ್ಯಂತ ಹೆಚ್ಚಿನ ಉದ್ಯೋಗವನ್ನು ಸೃಷ್ಟಿಸುವ ಮೂಲಕ ದಕ್ಷಿಣ ಕನ್ನಡ ಜಿಲ್ಲೆಯ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಯಲ್ಲಿ ಗೇರು ಉದ್ಯಮ ನಿರ್ಣಾಯಕ ಎಂದೆನಿಸಿಕೊಂಡಿದೆ.[೬]

೧.೨ ಸಾಹಿತ್ಯ ಸಮೀಕ್ಷೆ ಮತ್ತು ಸಮಸ್ಯೀಕರಣ

ಭಾರತದಲ್ಲಿ ಗೇರು ಉದ್ಯಮದ ಬಗೆಗಿನ ಲಭ್ಯ ಸಾಹಿತ್ಯವನ್ನು ಅಖಿಲ ಭಾರತ ಮಟ್ಟದ ಅಧ್ಯಯನ, ಪ್ರಾಂತೀಯ ಅಧ್ಯಯನ ಮತ್ತು ದ.ಕ. ಜಿಲ್ಲಾ ಸಂಬಂಧೀ ಅಧ್ಯಯನವೆಂದು ವಿಂಗಡಿಸಿ ಸಮೀಕ್ಷೆಗೆ ಒಳಪಡಿಸಲಾಗಿದೆ.

೧.೨.೧. ಅಖಿಲ ಭಾರತ ಮಟ್ಟದ ಅಧ್ಯಯನಗಳು : ಜೂಲಿಯಾ ಎಫ್ ಮೋರ್ಟನ್ (೧೯೬೧) "The Cashew's Brighter Future" ಎಂಬ ಲೇಖನದಲ್ಲಿ ಗೇರು ಮರದ ವೈಶಿಷ್ಟ್ಯವನ್ನು ಅದರ ವೈದ್ಯಕೀಯ ಮೌಲ್ಯಗಳನ್ನು ಮತ್ತು ಗೇರು ಮರದ ವಿವಿಧ ಪ್ರಯೋಜನಗಳನ್ನು ವಿವರಿಸಿದ್ದಾರೆ. ಗೇರು ಗಿಡಕ್ಕೆ ತಗಲುವ ರೋಗಗಳು ಮತ್ತು ಅವುಗಳ ನಿಯಂತ್ರಣದ ಬಗ್ಗೆ ಉಲ್ಲೇಖ ಮಾಡಿ ಗೇರು ಸಂಸ್ಕರಣೆಯ ವಿವಿಧ ಪ್ರಕ್ರಿಯೆಗಳ ಬಗ್ಗೆ ವಿವರಿಸಿದ್ದಾರೆ. ಗೋಡಂಬಿ ಹಾಗೂ ಗೇರು ಹಣ್ಣಿನ ಪ್ರಯೋಜನಗಳು ಹಾಗೂ ಗೇರು ಬೀಜದ ದ್ರವದ ಕುರಿತಂತೆ ಉಲ್ಲೇಖ ಮಾಡಿ ಬೇರೆ ಬೇರೆ ದೇಶಗಳಲ್ಲಿ ಗೇರು ಉದ್ಯಮದ ಬೆಳವಣಿಗೆಯ ಸಾಧ್ಯತೆಗಳ ಬಗ್ಗೆ ವಿವರಿಸಿದ್ದಾರೆ. ಇದು ಗೇರು ಕೃಷಿಯ ಭವಿಷ್ಯದ ಬಗ್ಗೆ ಧನಾತ್ಮಕ ಚಿಂತನೆ ನಡೆಸಿರುವ ಒಂದು ಬರಹ.[೭]

ಟಿ. ಎಂ. ವೆಂಕಟರಾಮನ್(೧೯೭೯), "Cashew Development Programme in India" ಎಂಬ ಗೇರು ಅಭಿವೃದ್ಧಿಯ ಕುರಿತ ತಮ್ಮ ಅಧ್ಯಯನ ವರದಿಯಲ್ಲಿ ೨ ನೇ ಪಂಚವಾರ್ಷಿಕ ಯೋಜನೆಯ ಪ್ರಾರಂಭದ ಹಂತದಲ್ಲಿ ಗೇರು ಕೃಷಿ ಪ್ರದೇಶದ ವಿಸ್ತರಣೆಗೆ ಸರಕಾರವು ಆದ್ಯತೆ ನೀಡಿದುದನ್ನು ದಾಖಲಿಸಿ ಆಗ ಆರಂಭಗೊಂಡ ಸರಕಾರೀ ಗೇರು ತೋಪುಗಳ ವಿವರಣೆ ನೀಡಿದ್ದಾರೆ. ನಾಲ್ಕು ಹಾಗೂ ಐದನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಗೇರು ಉತ್ಪಾದನೆ ಪ್ರೋತ್ಸಾಹ ನೀಡಲು ಸರ್ಕಾರ ರೂಪಿಸಿದ ಅನೇಕ ಯೋಜನೆಗಳನ್ನು ಈ ವರದಿಯಲ್ಲಿ ಪ್ರಸ್ತಾಪಿಸಲಾಗಿದೆ.[೮]

ಕಣ್ಣನ್ ಕೆ. ಪಿ. (೧೯೮೪), "Cashew Development In India. Potentialities And Constraints" ಎಂಬ ಗ್ರಂಥದಲ್ಲಿ ಗೇರು ಬೆಳೆ ಮಾರುಕಟ್ಟೆ ಹಾಗೂ ಕಾರ್ಮಿಕರ ಸ್ಥಿತಿಗತಿಗಳ ಬಗ್ಗೆ ವಿಶ್ಲೇಷಣೆ ಮಾಡಲಾಗಿದೆ. ೮೦ ರ ದಶಕದಲ್ಲಿ ಅಂತರಾಷ್ಟ್ರೀಯ ವ್ಯಾಪಾರ ವಲಯದಲ್ಲಿ ಗೋಡಂಬಿ ರಫ್ತು ವ್ಯಾಪಾರದಲ್ಲಿ ಭಾರತ ಪ್ರಭಾವಿ ಪಾತ್ರ ವಹಿಸಿದ್ದು ಆ ದಿನಗಳಲ್ಲೂ ಕಚ್ಚಾ ಗೇರಿನ ಸಮಸ್ಯೆ ಇತ್ತು; ಗೇರು ಸಂಸ್ಕರಣಾ ಘಟಕಗಳಿಗೆ ಅತ್ಯಂತ ದೊಡ್ಡ ಕೊರತೆಯಾಗಿ ಕಾಡಿತ್ತು. ಆ ನಿಟ್ಟಿನಲ್ಲಿ ಗೇರು ಬೆಳೆಯುವ ಪ್ರದೇಶವನ್ನು ವಿಸ್ತರಿಸುವ ಯೋಜನೆಗಳನ್ನು ಹಾಗೂ ಕೇರಳದಲ್ಲಿ ಗೋಡಂಬಿ ಉದ್ಯಮದ ಬೆಳವಣಿಗೆ ಮತ್ತು ಸಮಸ್ಯೆಗಳನ್ನು ದಾಖಲಿಸಲಾಗಿದೆ. ಮಂಗಳೂರು ಗೋಡಂಬಿ ವ್ಯಾಪಾರದ ತವರು. ಕ್ರಮೇಣ, ಅದರ ಪ್ರಭಾವ ಪಕ್ಕದ ಕೇರಳ ರಾಜ್ಯಕ್ಕೂ ಆಯಿತು. ಕೇರಳದ ಕಾರ್ಮಿಕ ಸಂಘಟನೆಗಳು ಹೆಚ್ಚು ಬಲಿಷ್ಠವಾಗಿದ್ದು, ಕಾರ್ಮಿಕರ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಸಿದವು. ಕನಿಷ್ಠ ವೇತನ ಜಾರಿ, ಮೂಲಭೂತ ಸೌಕರ್ಯಗಳ ಪೂರೈಕೆ ಹಾಗೂ ಬಾಲ ಕಾರ್ಮಿಕರ ನೇಮಕಾತಿಗೆ ತಡೆ ಇತ್ಯಾದಿಯಾಗಿ ಕೇರಳ ಮಾಡಿದ ಪ್ರಯತ್ನಗಳನ್ನು ಇದು ದಾಖಲಿಸಿದೆ. ಸಾಮಾಜಿಕ ನ್ಯಾಯ ನೀಡುವಲ್ಲಿ ಗೇರು ಉದ್ಯಮದ ಬೆಳವಣಿಗೆ ಅನಿವಾರ್ಯ ಎನ್ನುವುದನ್ನು ಈ ಅಧ್ಯಯನ ಅಧಿಕೃತವಾಗಿ ದಾಖಲಿಸುತ್ತದೆ.[೯]

ಸುರೇಶ್ ಜಾಂನ್ತೆ (೧೯೯೮), "Cashew Processing and Marketing" ಎಂಬ ಲೇಖನದಲ್ಲಿ ಭಾರತದ ಕೃಷಿ ವ್ಯವಸ್ಥೆಯಲ್ಲಿ ಗೇರು ಪ್ರಮುಖವಾದ ಸ್ಥಾನ ಪಡೆದಿದ್ದು ಒಂದು ಲಾಭದಾಯಕ ಆರ್ಥಿಕ ಉತ್ಪನ್ನವೆನಿಸಿಕೊಂಡಿರುವುದನ್ನು ದಾಖಲಿಸಲಾಗಿದೆ. ಪೋರ್ಚುಗೀಸರು ಗೇರು ಬೀಜವನ್ನು ಭಾರತದಲ್ಲಿ ಪರಿಚಯಿಸಿದವರಾದರೂ ೧೯೨೦ ರ ನಂತರ ಅದನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ವಾಣಿಜ್ಯ ಉತ್ಪನ್ನವಾಗಿಸಿದ್ದು ಭಾರತದ ವೆಂಗುರ್ಲಾದ ಟೋರ್ನೆ ಹಾಗೂ ಜಾಂನ್ತೆ ಮನೆತನದವರು ಎಂದು ಈ ಲೇಖನ ತಿಳಿಸುತ್ತದೆ. ಗೋವಾ ಸಮೀಪದ ವೆಂಗುರ್ಲಾದ ಶಂಕರ ಬಾಲಕೃಷ್ಣ ಟೋರ್ನೆ ಎಂಬುವವರು ಗೇರು ಸಂಸ್ಕರಣೆಯನ್ನು ವ್ಯವಸ್ಥಿತವಾಗಿ ಪ್ರಾರಂಭಿಸುವುದರ ಜೊತೆಗೆ ಅದನ್ನು ಅಮೇರಿಕಾಕ್ಕೆ ರಫ್ತು ಮಾಡುವಲ್ಲಿ ವಿಶೇಷ ಮುತುವರ್ಜಿ ವಹಿಸಿದರು. ಆ ಕಾರಣದಿಂದಾಗಿ ಭಾರತದ ಗೋಡಂಬಿ ಅಂತಾರಾಷ್ಟ್ರೀಯ ಮಾರುಕಟ್ಟೆ ಪ್ರವೇಶ ಮಾಡಿದಂತಾಯಿತು. ಜಾಂನ್ತೆ

ಮನೆತನವು ಅಮೇರಿಕಾದ ಜೊತೆ ವ್ಯಾಪಾರ ಒಪ್ಪಂದ ಮಾಡಿಕೊಂಡು ಗೋಡಂಬಿ ಉದ್ಯಮಕ್ಕೆ ಒತ್ತು ಕೊಟ್ಟರು. ಗೋಡಂಬಿಗೆ ಇದ್ದ ವ್ಯಾಪಕ ಬೇಡಿಕೆಯಿಂದಾಗಿ ಕಚ್ಚಾಗೇರು ಬೀಜವನ್ನು ಆಗ ಆಮದು ಮಾಡಿಕೊಳ್ಳಲಾಗುತ್ತಿತ್ತು. ಬಗೆ ಬಗೆಯ ಸ್ವಾದವುಳ್ಳ ಗೋಡಂಬಿಯನ್ನು ತಯಾರಿಸಿ ರಫ್ತು ಮಾಡುವ ಪರಿಪಾಠ ಕಾಲ ಕ್ರಮೇಣ ಪ್ರಾರಂಭವಾಯ್ತು. ಗೋಡಂಬಿಯನ್ನು ಬಡವರ ಬೆಳೆ ಶ್ರೀಮಂತರ ಆಹಾರ ಎಂದು ಕರೆಯಬೇಕಾಗಿ ಬಂದ ಸಂದರ್ಭವನ್ನು ಅವರು ಸಕಾರಣವಾಗಿ ವಿವರಿಸಿದ್ದಾರೆ.[೧೦]

ಸುರಿಯ ನಾರಾಯಣನನ್ ಪಿ. (೧೯೯೮), ತಮ್ಮ "Cashew the Wonder Nut –Elixir of Life" ಎಂಬ ಲೇಖನದಲ್ಲಿ ಗೋಡಂಬಿಯ ವೈದ್ಯಕೀಯ ಮೌಲ್ಯಗಳ ಬಗ್ಗೆ ಉಲ್ಲೇಖ ಮಾಡುತ್ತಾ ಗೋಡಂಬಿ ಒಂದು ದಿವ್ಯೌಷಧ, ಅದೊಂದು ಸಂಜೀವಿನಿ ಇದ್ದಂತೆ. ಎಲ್ಲಾ ಬಗೆಯ ವಿಟಮಿನ್, ಪ್ರೋಟಿನ್‌ಗಳನ್ನೊಳಗೊಂಡ ಇದು ಹೃದಯ ಸಂಬಂಧೀ ಕಾಯಿಲೆಗಳನ್ನೂ ತಡೆಗಟ್ಟುತ್ತದೆ. ಸೌಂದರ್ಯವರ್ಧಕವಾಗಿಯೂ ಗೋಡಂಬಿ ಪ್ರಯೋಜನಕಾರಿ. ವಿದೇಶಿಯರು ಇದನ್ನು ಹೆಚ್ಚು ಇಷ್ಟಪಡುವುದು ಇದರ ಔಷಧೀಯ ಗುಣಗಳಾಗಿ ಎಂದಿದ್ದಾರೆ.[೧೧]

ಗಿರಿಧರ ಪ್ರಭು (೧೯೯೮), "Cashewnuts-Is India's Global Leadership Sustainable?" ಎಂಬ ತಮ್ಮ ಲೇಖನದಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಗೋಡಂಬಿ ವ್ಯಾಪಾರದಲ್ಲಿ ಭಾರತದ ನೇತೃತ್ವದ ಬಗ್ಗೆ ಉಲ್ಲೇಖ ಮಾಡಿದ್ದಾರೆ. ೧೯೨೦ರ ತನಕ ಒಂದು ಅರಣ್ಯ ಬೆಳೆ ಎನಿಸಿಕೊಂಡಿದ್ದ ಗೇರು ಆ ಬಳಿಕ ಒಂದು ಆರ್ಥಿಕ, ವಾಣಿಜ್ಯ ಬೆಳೆಯಾಗಿ ಪರಿವರ್ತನೆಯಾಯಿತು. ಹಾಗಾಗಿ ಗೇರು ಉತ್ಪಾದನೆಗೆ, ಸಂಸ್ಕರಣೆಗೆ ಹಾಗೂ ಮಾರಾಟಕ್ಕೆ ಪ್ರೋತ್ಸಾಹ ಸಿಕ್ಕಿತು. ಹಾಗೂ ಮಾರುಕಟ್ಟೆಗೆ ಸಂಘಟಿತ ರೂಪ ದೊರಕಿತು. ಇಂದಿಗೂ ಭಾರತ ಗೇರು ಉತ್ಪಾದನೆ ಸಂಸ್ಕರಣೆ ರಫ್ತು ಹಾಗೂ ಅನುಭೋಗದಲ್ಲಿ ಏಕಸ್ವಾಮ್ಯತೆಯನ್ನು ಮೆರೆದಿದೆ. ಭಾರತದ ಗೇರು ಉದ್ಯಮದ ವೈಶಿಷ್ಟ್ಯತೆ ಎಂದರೆ ಇದು ಹೆಚ್ಚು ಶ್ರಮ ಆಧಾರಿತವಾದದ್ದು ಮತ್ತು ವಿಕೇಂದ್ರಿಕರಣಕ್ಕೆ ಹೆಚ್ಚು ಸಾಧ್ಯತೆಯುಳ್ಳದ್ದು. ಭಾರತದ ಕಾರ್ಮಿಕರು ಗೇರು ಸಂಸ್ಕರಣೆಯಲ್ಲಿ ಉಳಿದೆಲ್ಲಾ ದೇಶಗಳ ಕಾರ್ಮಿಕರಿಗಿಂತ ಹೆಚ್ಚು ಸಮರ್ಥರು. ಇಲ್ಲಿ ಶ್ರಮ ವೆಚ್ಚವೂ ಕಡಿಮೆ. ನಾವು ಗೇರು ಉತ್ಪಾದನೆ ಮತ್ತು ರಫ್ತಿನ ತಳಹದಿಯನ್ನು ಬಲಪಡಿಸಿದ್ದೇ ಆದಲ್ಲಿ ದೇಶದ ಆಹಾರ ಭದ್ರತೆಗೆ ಹೆಚ್ಚಿನ ದೇಣಿಗೆ ನೀಡಿದಂತಾಗುತ್ತದೆ. ಏಕೆಂದರೆ ೧ ಕೆ. ಜಿ. ಗೋಡಂಬಿಯನ್ನು ರಫ್ತು ಮಾಡಿದರೆ ೨೫ ಕೆ.ಜಿ. ಗೋಧಿ ಅಥವಾ ಅಕ್ಕಿಯನ್ನು ಆಮದು ಮಾಡಿಕೊಳ್ಳಬಹುದು. ಹಾಗಾಗಿ ದೇಶದ ಆಹಾರ ಭದ್ರತೆಗೆ ಇದು ಪೂರಕವಾಗಿದೆ ಎಂದು ಪ್ರಭು ಅವರು ವಿಶ್ಲೇಷಿಸಿದ್ದಾರೆ.[೧೨]

ಅರಿಂದಮ್ ಪಾಲ್ ಮತ್ತು ಕೆ.ಎಸ್. ಸೋಮಯಾಜಿ (೧೯೯೯), "A Status Paper on Cashew Processing Industry" ಎಂಬ ಲೇಖನದಲ್ಲಿ ಗೇರು ಸಂಸ್ಕರಣೆಯ ವಿವಿಧ ಆಯಾಮಗಳ ಬಗ್ಗೆ ಚರ್ಚಿಸಿದ್ದಾರೆ. ಪ್ರಾರಂಭದಲ್ಲಿ ಗುಡಿ ಕೈಗಾರಿಕೆಯಾಗಿ ಸ್ಥಾಪನೆಗೊಂಡ ಗೇರು ಸಂಸ್ಕರಣಾ ಘಟಕಗಳು ಆ ನಂತರದಲ್ಲಿ ಒಂದು ವ್ಯವಸ್ಥಿತವಾದ, ಶ್ರಮ ಆಧಾರಿತ ಲಾಭದಾಯಕ ಉದ್ಯಮವಾಗಿ ಬೆಳೆದು ಬಂದ ಬಗೆಯನ್ನು ವಿವರಿಸಿದ್ದಾರೆ. ೬೦ ಕ್ಕೂ ಮಿಕ್ಕ ರಾಷ್ಟ್ರಗಳಿಗೆ ಭಾರತ ಗೋಡಂಬಿಯನ್ನು ರಫ್ತು ಮಾಡುತ್ತಿದ್ದು ಸಾಕಷ್ಟು ವಿದೇಶಿ ವಿನಿಮಯವನ್ನೂ ಗಳಿಸುತ್ತಿದ್ದುದನ್ನು ಅವರು ದಾಖಲಿಸಿದ್ದಾರೆ. ಗೇರು ಕಾರ್ಖಾನೆಗಳಲ್ಲಿ ಯಂತ್ರಗಳನ್ನು ಬಳಸಬಹುದಾದರೂ ಹೆಚ್ಚಾಗಿ ದೈಹಿಕ ಶ್ರಮವನ್ನೇ ಪ್ರಧಾನವಾಗಿ ಬಳಸುವುದು ಹೆಚ್ಚು ಸೂಕ್ತ ಎನ್ನುವುದು ಅವರ ಬಹುಮುಖ್ಯ ಸಲಹೆಯಾಗಿದೆ.[೧೩]

ಡಿ. ಬಾಲಸುಬ್ರಮಣಿಯನ್ (೨೦೦೧), ತಮ್ಮ "Cashew Processing Industries in India (Overall Analysis)" ಎಂಬ ಲೇಖನದಲ್ಲಿ ಗೇರು ಕಾರ್ಖಾನೆಗಳ ಆರ್ಥಿಕ ಮಹತ್ವವನ್ನು ಉಲ್ಲೇಖಿಸಿದ್ದಾರೆ. ೬೨% ಘಟಕಗಳು ಉತ್ಪಾದನೆಯೊಂದಿಗೆ ರಫ್ತು ವ್ಯಾಪಾರವನ್ನು ಮಾಡುತ್ತಿದ್ದು, ಬಹುತೇಕ ಕಾರ್ಖಾನೆಗಳು ಖಾಸಗಿ ಮಾಲಿಕತ್ವದಲ್ಲಿ ನಡೆಯುತ್ತಿವೆ. ಸರ್ಕಾರದ ಹಣಕಾಸು ಸಂಸ್ಥೆಗಳ ಹಾಗೂ ಬ್ಯಾಂಕುಗಳ ನೆರವಿನೊಂದಿಗೆ ಈ ಘಟಕಗಳು ಕಾರ್ಯ ನಿರ್ವಹಿಸುತ್ತಿದ್ದು ೫೦% ಘಟಕಗಳು ಕಚ್ಚಾಗೇರನ್ನು ಆಮದು ಮಾಡಿಕೊಳ್ಳುವುದರೊಂದಿಗೆ ವರ್ಷವಿಡೀ ಉತ್ಪಾದನೆಯಲ್ಲಿ ತೊಡಗಿಸಿಕೊಳ್ಳುತ್ತಿವೆ. ಸರಾಸರಿ ಸುಮಾರು ೫೦ ರಿಂದ ೪೦೦ ಉದ್ಯೋಗಿಗಳನ್ನು ಬಳಸಿಕೊಳ್ಳುವ ಸಾಮರ್ಥ್ಯ ಹೊಂದಿರುವ ಗೇರು ಕಾರ್ಖಾನೆಗಳು ಶೇ. ೬೦ ರಿಂದ ೬೫% ರಷ್ಟು ಮಹಿಳಾ ಉದ್ಯೋಗಿಗಳನ್ನೇ ಹೊಂದಿರುವುದನ್ನು ಈ ಅಧ್ಯಯನ ಗುರುತಿಸುತ್ತದೆ. ಗೇರು ಕಾರ್ಖಾನೆಗಳ ಸಮಸ್ಯೆಗಳನ್ನು ಚರ್ಚಿಸುತ್ತಾ ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಗೋಡಂಬಿಗೆ ಬೇಡಿಕೆ ಹೆಚ್ಚುತ್ತಿದ್ದು, ಭಾರತದ ಅಗ್ಗದ ಶ್ರಮ ವೆಚ್ಚವು ಗೇರು ಕಾರ್ಖಾನೆಗಳ ಬೆಳವಣಿಗೆಗೆ ಒಂದು ಪೂರಕ ಅಂಶ ಎನ್ನುವುದನ್ನು ಈ ಅಧ್ಯಯನ ಕಂಡುಕೊಂಡಿದೆ.[೧೪]

ಕೆ. ಸಿ. ಜಾನ್(೨೦೦೨), ತಮ್ಮ "Cashew : Cashing in on Exports" ಎಂಬ ಲೇಖನದಲ್ಲಿ ಪ್ರಾರಂಭದಿಂದಲೂ ಗೇರನ್ನು ಒಂದು ಅರಣ್ಯೀಕರಣದ ಭಾಗವಾಗಿ, ಭೂ ಸಂರಕ್ಷಣೆಯ ಹಾಗೂ ಬಂಜರು ಭೂಮಿ ಅಭಿವೃದ್ಧಿಯ ದೃಷ್ಟಿಯಿಂದ ನೋಡಿದ ಕಾರಣ ಗೇರು ಕೃಷಿಗೆ ವಿಶೇಷ ಮುತುವರ್ಜಿ ನೀಡಲಿಲ್ಲ. ಹಾಗಾಗಿ ಭಾರತದಲ್ಲಿ ಸಾಕಷ್ಟು ಗೇರು ಉತ್ಪಾದನೆ ಆಗುತ್ತಿಲ್ಲ ಮತ್ತು ಆಮದು ಮಾಡಿಕೊಳ್ಳಬೇಕಾಗಿದೆ ಎಂದು ಹೇಳಿದ್ದಾರೆ. ಗೋಡಂಬಿಯಲ್ಲಿರುವ ಪೌಷ್ಟಿಕತೆಯ ಅಂಶಗಳನ್ನು ವಿವರಿಸುತ್ತಾ ಗೋಡಂಬಿಯ ಅಂತರ್ರಾಷ್ಟ್ರೀಯ ವ್ಯಾಪಾರದ ಮಹತ್ವವನ್ನು ಪ್ರತಿಪಾದಿಸಿದ್ದಾರೆ. ಬೆಲೆಯ ಸ್ಥಿರತೆಗಾಗಿ ಸರ್ಕಾರ ನೇರವಾಗಿ ರೈತರಿಂದ ಗೇರುಬೀಜವನ್ನು ಕೊಂಡುಕೊಳ್ಳಬೇಕು. ಹೆಚ್ಚಾಗಿ ಗೋಡಂಬಿ ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಮಾರಾಟವಾಗುವುದರಿಂದ ಸಣ್ಣ ರೈತರಿಗೆ ಹಾಗೂ ಸಣ್ಣ ವ್ಯಾಪಾರಸ್ಥರಿಗೆ ಗೇರು ಬೀಜದ ಬೆಲೆ ನಿರ್ಧರಿಸಲು ಸಾಧ್ಯವಾಗದು. ಈ ನಿಟ್ಟಿನಲ್ಲಿ ರೈತರಿಗೆ ಸೂಕ್ತ ಅರಿವು ನೀಡಬೇಕು ಮತ್ತು ಮಾರುಕಟ್ಟೆಯ ಬಗ್ಗೆ ಸವಿವರವಾದ ಮಾಹಿತಿ ನೀಡಬೇಕು. ಜೊತೆಗೆ ಭಾರತ ಸರ್ಕಾರ ಗೇರು ಬೆಳೆಯುವ ಪ್ರದೇಶವನ್ನು ವಿಸ್ತರಿಸಬೇಕು. ಬಂಜರು ಭೂಮಿಯಲ್ಲಿ ಹಾಗೂ ರಾಷ್ಟ್ರೀಯ ಹೆದ್ದಾರಿಗಳ ಇಕ್ಕೆಲಗಳಲ್ಲಿ ಗೇರನ್ನು ಬೆಳೆಸುವ ಪ್ರಯತ್ನ ಮಾಡಬೇಕು ಎಂದು ಸಲಹೆ ನೀಡಿದ್ದಾರೆ. ಅದಕ್ಕಾಗಿ ಪ್ರತ್ಯೇಕ ಗೇರು ಅಭಿವೃದ್ಧಿ ನಿಗಮವನ್ನು ಸ್ಥಾಪಿಸಬೇಕು ಎನ್ನುವುದು ಅವರ ಸಲಹೆಯಾಗಿದೆ.[೧೫]

ಕೆ. ಆರ್. ಸುಂದರವರದರಾಜನ್ ಮತ್ತು ಕೆ. ಆರ್. ರಾಜೇಶ್ ಕುಮಾರ್ (೨೦೦೨), ತಮ್ಮ "Production and Trade Instability in Cashew-An Economic Analysis" ಎಂಬ ಲೇಖನದಲ್ಲಿ ಗೇರು ಉದ್ಯಮದಲ್ಲಿ ಭಾರತದ ಪ್ರಥಮ ಸ್ಥಾನವನ್ನು ಉಳಿಸಿಕೊಳ್ಳಲು ಗೇರು ಉತ್ಪಾದನೆ ಹೆಚ್ಚಿಸಬೇಕಾಗಿದೆ ಎಂದು ಉಲ್ಲೇಖಿಸಿದ್ದಾರೆ. ಈಗಿರುವ ಉತ್ಪಾದನೆಯನ್ನು ಎರಡು ಪಟ್ಟು ಏರಿಸಿದರೂ ಮಾರುಕಟ್ಟೆಯ ಸಮಸ್ಯೆ ಉಂಟಾಗಲಾರದು. ಉತ್ಪಾದನೆಯ ಹೆಚ್ಚಳದಿಂದ ಬೆಲೆಗಳ ಅಸ್ಥಿರತೆಯನ್ನು ನಿವಾರಿಸಲು ಸಾಧ್ಯ ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ.[೧೬]

M.R ಶರ್ಮ (೨೦೦೨), "Credit Support from NABARD for Development of Cashewnut Plantation in India" ಎಂಬ ತಮ್ಮ ಲೇಖನದಲ್ಲಿ ೧೯೮೨ ರಲ್ಲಿ ಪ್ರಾರಂಭವಾದ ನಬಾರ್ಡ್ ಉಳಿದ

[illegible]

ಗ್ರಾಮೀಣ ಆರ್ಥಿಕ ಚಟುವಟಿಕೆಗಳ ಜೊತೆ ಗೇರು ಕೃಷಿಗೂ ಪ್ರೋತ್ಸಾಹ ನೀಡುತ್ತಿರುವುದರ ಬಗ್ಗೆ ಪ್ರಸ್ತಾಪಿಸಿದ್ದಾರೆ. ಕೇರಳ, ಕರ್ನಾಟಕ ಮತ್ತು ಒರಿಸ್ಸಾ ರಾಜ್ಯಗಳಲ್ಲಿ ವಿಶ್ವ ಬ್ಯಾಂಕಿನ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವಲ್ಲಿ ನಬಾರ್ಡ್ ಕಾರ್ಯ ನಿರತವಾಗಿರುವುದನ್ನು ದಾಖಲಿಸಿದ್ದಾರೆ. ಹಳೆ ಗೇರು ತಳಿಗಳನ್ನು ನಾಶಮಾಡಿ ಹೊಸ ಸುಧಾರಿತ ತಳಿಗಳನ್ನು ಅಭಿವೃದ್ಧಿ ಪಡಿಸುವ ಸಲುವಾಗಿ, ಗೇರು ಕಾರ್ಖಾನೆಗಳ ಸ್ಥಾಪನೆಗೆ, ಯಂತ್ರೋಪಕರಣಗಳಿಗೆ, ಮೂಲಭೂತ ಸೌಕರ್ಯಗಳಿಗೆ ಅದು ನೆರವು ನೀಡುತ್ತಿರುವ ಅಂಶವನ್ನು ಉಲ್ಲೇಖಿಸಿದ್ದಾರೆ. ಗೇರು ಸಸಿ ನೆಡಲು ಬೇಕಾದ ಉಪಕರಣಗಳು ಸೂಕ್ತ ಸಮಯದಲ್ಲಿ ದೊರಕದೆ ಇರುವುದು, ವೈಜ್ಞಾನಿಕ ಹಾಗೂ ನಿರ್ದೇಶಿತ ರೀತಿಯಲ್ಲಿ ಗೇರು ಕೃಷಿ ಮಾಡದಿರುವುದರಿಂದ ಸಣ್ಣ ರೈತರು ಗೇರು ಕೃಷಿ ನಿರ್ವಹಣೆಯಲ್ಲಿ ವಿಫಲರಾಗಿರುವುದು, ಅಸಮರ್ಪಕ ಮಾರುಕಟ್ಟೆ ವ್ಯವಸ್ಥೆ, ಸಾಂಪ್ರದಾಯಿಕ ಸಂಸ್ಕರಣಾ ವಿಧಾನದಿಂದಾಗಿ ಗೋಡಂಬಿಯ ಗುಣಮಟ್ಟದ ಕುಸಿತ ಹಾಗೂ ಕನಿಷ್ಠ ಬೆಲೆ, ರಾಜ್ಯ ಸರ್ಕಾರ ಮತ್ತು ಸಂಶೋಧನಾ ಕೇಂದ್ರಗಳು ಹಾಗೂ ಇತರ ಸರ್ಕಾರೇತರ ಸಂಸ್ಥೆಗಳ ಮತ್ತು ಬ್ಯಾಂಕುಗಳ ನಡುವಿನ ಸಮನ್ವಯದ ಕೊರತೆ ಇವುಗಳೇ ಗೇರು ಉದ್ಯಮದ ಪ್ರಮುಖ ಸಮಸ್ಯೆಗಳೆಂದು ವಿಶ್ಲೇಷಿಸಿದ್ದಾರೆ.[೧೭]

ಮೃದುಲ ಈಪನ್ ಮತ್ತಿತರರು (೨೦೦೩), "Liberalization Gender and Livelihoods The Cashew Unit Case- Working Paper 3" ಯಲ್ಲಿ ದಕ್ಷಿಣ ಭಾರತ ಮತ್ತು ಮೊಜಾಂಬಿಕ್ ದೇಶದ ಗೇರು ಉದ್ಯಮದ ತುಲನಾತ್ಮಕ ವಿಶ್ಲೇಷಣೆ ಮಾಡಿದ್ದಾರೆ. ಈ ಅಧ್ಯಯನದಲ್ಲಿ ಅಂತರ್ರಾಷ್ಟ್ರೀಯ ಪರಿಸರ ಹಾಗೂ ಅಧ್ಯಯನ ಸಂಸ್ಥೆಯ ತಜ್ಞರು ಜಾಗತೀಕರಣದ ಹಿನ್ನೆಲೆಯಲ್ಲಿ ಗೇರು ಉದ್ಯಮವು ಜನರ ಜೀವನೋಪಾಯದ ಮೂಲಗಳು, ಲಿಂಗ ವ್ಯವಸ್ಥೆ ಹಾಗೂ ಮಾರುಕಟ್ಟೆಯ ಮೇಲೆ ಮಾಡಿರುವ ಪರಿಣಾಮಗಳ ಬಗ್ಗೆ ವಿಶ್ಲೇಷಿಸಿದ್ದಾರೆ. ಕೇರಳ ಹಾಗೂ ತಮಿಳುನಾಡಿನ ಗೇರು ಉದ್ಯಮದ ಹಿನ್ನೆಲೆಯಲ್ಲಿ ಈ ಅಧ್ಯಯನ ನಡೆದಿದ್ದು ಗೇರು ಪೂರೈಕೆಯ ವ್ಯವಸ್ಥೆಯ ಮೇಲೆ ಜಾಗತೀಕರಣದ ಪರಿಣಾಮಗಳ ಬಗ್ಗೆ ಬೆಳಕು ಚೆಲ್ಲಲಾಗಿದೆ. ಜಾಗತೀಕರಣ ಹಾಗೂ ಆರ್ಥಿಕ ಉದಾರೀಕರಣದ ಪ್ರಕ್ರಿಯೆ ಪ್ರಪಂಚದ ಅನೇಕ ವರ್ಗಗಳ ಜೀವನ ನಿರ್ವಹಣೆಯ ಮೂಲ ಸ್ವರೂಪದಲ್ಲಿ ಗಣನೀಯ ಬದಲಾವಣೆ ತಂದಿರುವುದರ ಬಗ್ಗೆ ಪ್ರಸ್ತಾಪಿಸುತ್ತಾ ಬಡ ಹಾಗೂ ದುರ್ಬಲ ವರ್ಗದ ವಿಶೇಷವಾಗಿ ಮಹಿಳೆಯರ ಜೀವನ ನಿರ್ವಹಣೆಯ ಸಮಸ್ಯೆಗಳನ್ನು ವಿಶ್ಲೇಷಿಸಿದ್ದಾರೆ. ಬಡತನ ಹಾಗೂ ಅನಕ್ಷರತೆಯ ಅನಿವಾರ್ಯತೆ ಮಹಿಳೆಯರನ್ನು ಕಡಿಮೆ ವೇತನಕ್ಕೆ ದುಡಿಯುವಂತೆ ಮಾಡಿರುವುದಲ್ಲದೆ ಪ್ರತಿಕೂಲ ಕೆಲಸದ ಪರಿಸರದಲ್ಲೂ ದುಡಿಯುವಂತೆ ಒತ್ತಡ ಹೇರಿದೆ. ಗೇರು ಸಂಸ್ಕರಣೆಯ ಕೆಲವು ಪ್ರಕ್ರಿಯೆಗಳು ಮಹಿಳೆಯರಿಗಾಗಿಯೇ ಮೀಸಲಾಗಿದ್ದು, ಕೆಳ ಜಾತಿಯ ಮಹಿಳೆಯರಷ್ಟೇ ಆ ಕೆಲಸ ಮಾಡಬಲ್ಲರು ಎಂಬ ಸಾಮಾಜಿಕ ದೃಷ್ಟಿಕೋನವು ಬೆಳೆದು ಬಂತು. ಜಾತಿ ಪದ್ಧತಿಯ ಕರಿಛಾಯೆ ಉದ್ಯಮದ ಮೇಲೂ ಇತ್ತು ಎಂಬುದನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ತಮಿಳುನಾಡಿನ ಮಹಿಳಾ ಕಾರ್ಮಿಕರಿಗಿಂತ ಕೇರಳದ ಮಹಿಳಾ ಕಾರ್ಮಿಕರು ಹೆಚ್ಚು ಶೋಷಿತರಾಗಿದ್ದರು. ಹಾಗಾಗಿ ಕ್ರಮೇಣ ಕೇರಳ ರಾಜ್ಯದ ಕಾರ್ಮಿಕ ಕಾನೂನು ಮತ್ತು ಸೌಲಭ್ಯಗಳ ಕೊರತೆಯಿಂದಾಗಿ ತಮಿಳುನಾಡಿಗೆ ಉದ್ಯಮ ವರ್ಗಾವಣೆಯಾಗಬೇಕಾಯಿತು ಎಂದು ಈ ವರದಿ ತಿಳಿಸುತ್ತದೆ. ಉದ್ಯಮದ ಪ್ರಗತಿಗೆ ಸರಕಾರದ ನೀತಿ ನಿಯಮಗಳು ಇನ್ನಷ್ಟು ಒತ್ತು ಕೊಡಬೇಕು ಎಂಬುದು ಈ ವರದಿಯ ಉದ್ದೇಶವಾಗಿದೆ.[೧೮]

ಎಂ. ಜಿ. ಭಟ್, ನಾಯಕ್ ಎಂ. ಜಿ. ಮತ್ತು ನಾಗರಾಜ ಕೆ. ವಿ. (೨೦೦೬), "Prospects of Cashew in Next Decade with Reference to North Eastern States" ಎಂಬ ಲೇಖನದಲ್ಲಿ ಭಾರತದಲ್ಲಿ ಗೇರು

ಬೆಳೆಯುವ ರಾಜ್ಯಗಳ ಬಗ್ಗೆ ಉಲ್ಲೇಖ ಮಾಡಿದ್ದಾರೆ. ೧೯೫೦ರಲ್ಲಿ ದೇಶದಲ್ಲಿ ಗೇರು ಕೃಷಿ ಸಂಶೋಧನಾ ಕೇಂದ್ರಗಳು ಪ್ರಾರಂಭವಾಗುವುದರೊಂದಿಗೆ ಸುಧಾರಿತ ಕೃಷಿಗೆ ಚಾಲನೆ ನೀಡಲಾಯಿತು ಎಂದಿದ್ದಾರೆ. ಕೇರಳ, ಕರ್ನಾಟಕ, ಆಂಧ್ರಪ್ರದೇಶ, ಅಸ್ಸಾಂ, ಮಹಾರಾಷ್ಟ್ರಗಳಲ್ಲಿ ಗೇರು ಕೃಷಿ ಸಂಶೋಧನಾ ಕೇಂದ್ರಗಳ ಬೆಳವಣಿಗೆ ಹಾಗೂ ಅವುಗಳ ಪ್ರಭಾವೀ ಪಾತ್ರದ ಬಗ್ಗೆ ವಿವರಿಸುತ್ತಾ ಭಾರತದ ಗೇರು ಉದ್ಯಮದ ಸಾಮರ್ಥ್ಯ, ಸಮಸ್ಯೆಗಳು, ಅವಕಾಶಗಳು ಮತ್ತು ಸವಾಲುಗಳ ಕುರಿತಂತೆ ವಿವರಿಸಿದ್ದಾರೆ. ಉತ್ತರಾಂಚಲ ರಾಜ್ಯಗಳಾದ ಅಸ್ಸಾಂ, ಮೇಘಾಲಯ ಮಣಿಪುರ, ನಾಗಾಲ್ಯಾಂಡ್, ತ್ರಿಪುರ ಹಾಗೂ ಅರುಣಾಚಲ ಪ್ರದೇಶಗಳಲ್ಲಿ ಗೇರು ಬೆಳೆಗೆ ಇರುವ ವಿಪುಲವಾದ ಸಾಧ್ಯತೆಗಳ ಬಗ್ಗೆ ಚರ್ಚಿಸಿದ್ದಾರೆ. ಗೇರು ಬೀಜದ ಬೇಡಿಕೆಯು ಪೂರೈಕೆಗಿಂತ ಅಧಿಕವಾಗಿರುವುದರಿಂದ ಸಂಸ್ಕರಣಾ ಘಟಕಗಳು ಕಚ್ಚಾಬೀಜವನ್ನು ಪರದೇಶಗಳಿಂದ ಆಮದು ಮಾಡಿಕೊಳ್ಳಬೇಕಾದ ಅಗತ್ಯವನ್ನು ಉಲ್ಲೇಖಿಸುತ್ತದೆ. ತೀಕ್ಷ್ಣ ಮತ್ತು ವಿಸ್ತೃತ ಗೇರು ಕೃಷಿಯಿಂದ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕೆಂದು ಈ ಲೇಖನ ಪ್ರತಿಪಾದಿಸುತ್ತದೆ.[೧೯]

ಎಸ್. ಎಸ್. ವಾಡ್ಕರ್, ಎಸ್. ಆರ್. ಬಗಡೆ, ವಿ. ಎನ್. ಜಲಾಗಾಂವಕರ್ (೨೦೦೭) ತಮ್ಮ "Indian Cashew Processing and Export" ಎಂಬ ಕೃತಿಯಲ್ಲಿ ಗೇರು ಉತ್ಪಾದನೆಯಲ್ಲಿ ಭಾರತದ ಉನ್ನತ ಸ್ಥಾನಕ್ಕೆ ಆತಂಕ ಎದುರಾದುದನ್ನು ಸಕಾರಣವಾಗಿ ದಾಖಲಿಸುತ್ತಾರೆ. ಮಹಾರಾಷ್ಟ್ರದ ಗೇರು ಉದ್ಯಮವನ್ನು ಕೇಂದ್ರವಾಗಿಟ್ಟುಕೊಂಡು ಉದ್ಯಮದ ಬಗ್ಗೆ ವಿಸ್ತೃತ ಚರ್ಚೆ ನಡೆಸಿದ್ದಾರೆ. ಉತ್ಪಾದನೆ, ಸಂಸ್ಕರಣೆ, ರಫ್ತು ವ್ಯಾಪಾರದ ಬಗ್ಗೆ ಸವಿವರವಾಗಿ ಉಲ್ಲೇಖ ಮಾಡುತ್ತಾ ಜಾಗತಿಕ ಹಾಗೂ ದೇಶೀ ಮಟ್ಟದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿದ್ದಾರೆ. ಸಂಸ್ಕರಣಾ ಪ್ರಕ್ರಿಯೆ, ವೆಚ್ಚ ಹಾಗೂ ಲಾಭಾಂಶಗಳ ಬಗ್ಗೆ ದಾಖಲಿಸಿದ್ದಾರೆ. ಗೋಡಂಬಿ ರಫ್ತು ವ್ಯಾಪಾರದ ವಿವಿಧ ಆಯಾಮಗಳನ್ನು ಪರಿಚಯಿಸುತ್ತಾ ಸಮಸ್ಯೆಗಳನ್ನು ಹಾಗೂ ಸವಾಲುಗಳನ್ನು ಸಾದರ ಪಡಿಸಿದ್ದಾರೆ. ಉದ್ಯಮದ ಬೆಳವಣಿಗೆಯ ದೃಷ್ಟಿಯಿಂದ ಸಲಹೆಗಳನ್ನಿತ್ತು ಕಚ್ಚಾಗೇರಿನ ಉತ್ಪಾದನೆಯ ಹೆಚ್ಚಳ ಅನಿವಾರ್ಯ ಎಂದಿದ್ದಾರೆ.[೨೦]

ರಾಜ್ ಮೋಹನ್ ಪಿಳ್ಳೈ ಮತ್ತು ಶಾಂತಾ ಪಿ. (೨೦೦೮), "The world Cashew Industry" ಎಂಬ ಗ್ರಂಥದಲ್ಲಿ ಕೇರಳ ರಾಜ್ಯದ ಗೇರು ಉದ್ಯಮದ ವಿವಿಧ ಆಯಾಮಗಳನ್ನು ಕೇಂದ್ರವಾಗಿರಿಸಿಕೊಂಡು ಒಟ್ಟು ಉದ್ಯಮದ ವಿವಿಧ ಮಜಲುಗಳನ್ನು ಪರಿಚಯಿಸುವ ಪ್ರಯತ್ನ ಮಾಡಿದ್ದಾರೆ. ಕೇರಳ ರಾಜ್ಯ ಸರಕಾರದ ನೀತಿ ನಿಯಮಗಳು ಉದ್ಯಮದ ಮೇಲೆ ಮಾಡಿರುವ ಪರಿಣಾಮಗಳ ಬಗ್ಗೆ ಚರ್ಚಿಸುತ್ತಾ ಜಾಗತಿಕ ನೆಲೆಯಲ್ಲಿ ಭಾರತದ ಸ್ಥಿತಿಗತಿಗಳ ಬಗ್ಗೆ ವಿಶ್ಲೇಷಣೆ ನಡೆಸಿದ್ದಾರೆ. ಗೇರು ಉದ್ಯಮದಲ್ಲಿ ಗುರುತಿಸಿಕೊಂಡಿರುವ ಬೇರೆ ಬೇರೆ ರಾಷ್ಟ್ರಗಳನ್ನು ಉಲ್ಲೇಖಿಸಿ ಚರ್ಚಿಸಿದ್ದಾರೆ. ಹಾಗೂ ಉಪ ಉತ್ಪನ್ನಗಳ ಪರಿಣಾಮಕಾರಿ ಬಳಕೆ ಬಗ್ಗೆ ಪ್ರಸ್ತಾಪಿಸಿದ್ದಾರೆ. ಗೋಡಂಬಿ ರಫ್ತು ವ್ಯಾಪಾರದಲ್ಲಿ ಭಾರತದ ಮಹತ್ವವನ್ನು ತಿಳಿಸುತ್ತಾ ಮುಂಬರುವ ದಿನಗಳಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಭಾರತ ಎದುರಿಸಬೇಕಾದ ಸವಾಲುಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ನಾಜೂಕಿನ ಗೇರು ಸಂಸ್ಕರಣಾ ಪ್ರಕ್ರಿಯೆಯಲ್ಲಿ ಮಹಿಳಾ ಕಾರ್ಮಿಕರ ಪಾತ್ರದ ಬಗ್ಗೆ ಶ್ಲಾಘಿಸಿದ್ದು ಭಾರತದ ಗೋಡಂಬಿಯ ಸ್ವಾದ ಮತ್ತು ಗುಣಮಟ್ಟ ಪ್ರಪಂಚದಲ್ಲೇ ಉತ್ಕೃಷ್ಟವಾದದ್ದು ಎಂದಿದ್ದಾರೆ. ಗೇರು ಉದ್ಯಮದ ಲಾಭಾಂಶದಲ್ಲಿ ಒಂದಷ್ಟು ಭಾಗವನ್ನು ಗೋಡಂಬಿಯ ಎಲ್ಲಾ ವೈಶಿಷ್ಟ್ಯತೆಗಳನ್ನು ವೈದ್ಯಕೀಯ ಗುಣಗಳನ್ನು ಪ್ರಚಾರಗೊಳಿಸುವ ಕಾರ್ಯದಲ್ಲಿ ತೊಡಗಿಸಿಕೊಂಡದ್ದೇ ಆದಲ್ಲಿ ಗೇರು ಉದ್ಯಮ ಇನ್ನೂ ಹೆಚ್ಚಿನ ಮಹತ್ವ ಪಡೆಯಬಲ್ಲದು ಎಂದಿದ್ದಾರೆ.[೨೧]

ನಾಯರ್ ಜಿ. ಕೆ. ಯವರು (೨೦೦೯), "Business Line" ನಲ್ಲಿ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಗೋಡಂಬಿಯ ಬೇಡಿಕೆ ಕುಸಿಯಲು ಅಮೇರಿಕಾದ ಆರ್ಥಿಕ ಮುಗ್ಗಟ್ಟು ಕಾರಣವಾಯಿತು. ವಿಯಟ್ನಾಂನಿಂದ ಎದುರಿಸಬೇಕಾದ ತೀವ್ರ ಪೈಪೋಟಿ ಭಾರತದ ರಫ್ತು ವ್ಯಾಪಾರ ಕುಸಿಯಲು ಪ್ರಮುಖ ಕಾರಣವಾಯ್ತು. ವಿಯೆಟ್ನಾಂನ ಉತ್ಪಾದನಾ ಹೆಚ್ಚಳ, ಸಂಸ್ಕರಣಾ ಘಟಕದ ಆಧುನೀಕರಣ, ಯಂತ್ರಗಳ ಬಳಕೆ, ಕಡಿಮೆ ವೆಚ್ಚ ಇವುಗಳಿಂದಾಗಿ ಅಮೇರಿಕಾದ ಮಾರುಕಟ್ಟೆಯಲ್ಲಿ ತೀವ್ರ ಪೈಪೋಟಿ ತಂದೊಡ್ಡಿತು ಎಂಬುದಾಗಿ ವಿಶ್ಲೇಷಿಸಿದ್ದಾರೆ.[೨೨]

ವೆಂಕಟೇಶ ಎನ್. ಹುಬ್ಬಳ್ಳಿ (೨೦೦೯), "Transfer of Technology and Development Aspects" ಎಂಬ ಲೇಖನದಲ್ಲಿ ಗೇರು ಉದ್ಯಮದ ಬೆಳವಣಿಗೆಯಲ್ಲಿ ಕಚ್ಚಾಗೇರು ಉತ್ಪಾದನೆಯ ಪ್ರಾಮುಖ್ಯತೆಯ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಕೈಗೊಂಡ ಸುಧಾರಿತ ತಂತ್ರಜ್ಞಾನದ ಬಳಕೆ ಹಾಗೂ ಅದರ ಸಮರ್ಪಕ ಅನುಷ್ಠಾನದ ಕುರಿತು ಚರ್ಚಿಸಿದ್ದಾರೆ. ಹೊಸ ತಂತ್ರಜ್ಞಾನವನ್ನು ರೈತರ ಕೈಗೆಟುಕುವಂತೆ ಮಾಡಲು ಅನುಸರಿಸಬೇಕಾದಂತಹ ಕ್ರಮಗಳ ಬಗ್ಗೆ ತಿಳಿಸುತ್ತಾ ಹೆಚ್ಚುತ್ತಿರುವ ಕಚ್ಚಾಗೇರಿನ ಬೇಡಿಕೆಯನ್ನು ಪೂರೈಸುವ ನಿಟ್ಟಿನಲ್ಲಿ ಉತ್ಪಾದನೆ ಹೆಚ್ಚಿಸುವುದು ಅನಿವಾರ್ಯ ಎಂದಿದ್ದಾರೆ. ಗೇರು ಹಣ್ಣನ್ನು ಒಂದು ಆರ್ಥಿಕ ವಸ್ತುವಾಗಿ ಪರಿಗಣಿಸಿ ಆ ನಿಟ್ಟಿನಲ್ಲಿ ಅದನ್ನು ಬಳಸಲು ಗುಡಿ ಕೈಗಾರಿಕೆಗಳನ್ನು ಪ್ರೋತ್ಸಾಹಿಸಬೇಕು ಮತ್ತು ಮಾರುಕಟ್ಟೆ ಸಂಬಂಧಿ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸಬೇಕು ಎಂದಿದ್ದಾರೆ.[೨೩]

ಕೆ. ಎನ್. ರಾವ್(೨೦೦೯), "Cashew Crop Insurance by Agriculture Insurance Company of India Ltd" ಈ ಲೇಖನದಲ್ಲಿ ಗೇರು ಕೃಷಿ ವಿಮಾ ಯೋಜನೆಯನ್ನು ಸವಿವರವಾಗಿ ಚಿತ್ರಿಸಿದ್ದಾರೆ. ಭಾರತೀಯ ಕೃಷಿ ವಿಮಾ ಸಂಸ್ಥೆ ೨೦ ಡಿಸೆಂಬರ್ ೨೦೦೨ ರಲ್ಲಿ ಪ್ರಾರಂಭವಾಗಿದ್ದು ಪ್ರತಿವರ್ಷ ಎರಡು ಕೋಟಿ ರೈತರನ್ನು ವಿಮಾ ವ್ಯಾಪ್ತಿಯಲ್ಲಿ ಸೇರ್ಪಡೆಗೊಳಿಸುವ ಉದ್ದೇಶವನ್ನು ಹೊಂದಿರುತ್ತದೆ. ರೈತರ ಬದುಕಿನ ಅನಿಶ್ಚಿತತೆಯನ್ನು ನಿವಾರಿಸುವುದರೊಂದಿಗೆ ಗ್ರಾಮೀಣ ಭಾರತದಲ್ಲಿ ಆರ್ಥಿಕ ಸ್ಥಿರತೆಯನ್ನು ಕಾಪಾಡುವುದು ಈ ಸಂಸ್ಥೆಯ ಮುಖ್ಯ ಉದ್ದೇಶವಾಗಿರುತ್ತದೆ. ಗೇರು ಬೆಳೆಗೆ ಸಂಬಂಧಿಸಿದಂತೆ ಉತ್ಪಾದನೆ, ಆ ಸಂಬಂಧಿ ಗಂಡಾಂತರಗಳನ್ನು ಇವುಗಳನ್ನು ಪರಿಗಣಿಸಿ ವಿಮಾ ಸೌಲಭ್ಯ ಒದಗಿಸಲಾಗುವುದು. ಗೇರು ಗಿಡಗಳ ಉತ್ಪಾದನಾ ಅವಧಿ, ಅದರ ಸ್ವರೂಪ, ಒಟ್ಟು ಆಯಸ್ಸು ಇವನ್ನೆಲ್ಲಾ ಮಾನದಂಡವಾಗಿಟ್ಟುಕೊಳ್ಳಲಾಗುವುದು. ವಿಮಾ ಮಾಡಿದ ಮೂವತ್ತು ದಿನಗಳ ಮೇಲೆ ಫಲಾನುಭವಿಗಳಿಗೆ ಪ್ರಯೋಜನ ದೊರಕುವುದು ಎಂದಿದ್ದಾರೆ.[೨೪]

ಗೇರು ಸಂಸ್ಕರಣಾ ಘಟಕಗಳ ಇತಿಹಾಸ ಮತ್ತು ಬೆಳವಣಿಗೆಗಳ ಬಗ್ಗೆ ಎಸ್. ಎ. ಚವ್ಹಾನ್ ಮತ್ತು ಎಂ. ಎಸ್. ಗಾಂವ್ಕರ್(೨೦೧೦), "Prospects of on Farm Processing in Cashew" ಎಂಬ ತಮ್ಮ ಲೇಖನದಲ್ಲಿ ಉಲ್ಲೇಖಿಸಿದ್ದಾರೆ. ಭಾರತದ ಬೇರೆ ರಾಜ್ಯಗಳಲ್ಲಿ ಗೋಡಂಬಿಯ ಮಹತ್ವ ತಿಳಿಯುವ ಮೊದಲೇ ಅದನ್ನು ರಫ್ತು ಮಾಡಿದ ಕೀರ್ತಿ ಕರಾವಳಿ ಭಾಗವಾದ ಮಾಲ್ವನ್, ವೆಂಗುರ್ಲೆ ಹಾಗೂ ಗೋವಾಕ್ಕೆ ಸಲ್ಲುತ್ತದೆ. ನಂತರದ ದಿನಗಳಲ್ಲಿ ಅಮೇರಿಕಾದ ಉದ್ಯಮಿಗಳಿಗೆ ಗೋಡಂಬಿಯಲ್ಲಿ ಆಸಕ್ತಿ ಬೆಳೆದು, ಅದರ ಉತ್ಪಾದನೆಗೆ ಹಣಕಾಸಿನ ನೆರವು ನೀಡಲು ಪ್ರಾರಂಭಿಸಿದರು. ಪ್ರಾರಂಭದಲ್ಲಿ ಮಹಾರಾಷ್ಟ್ರದಲ್ಲಿ ಉತ್ಪಾದನೆಯಾಗುತ್ತಿದ್ದ ಕಚ್ಚಾಗೇರು ಬೀಜ ಸಂಸ್ಕರಣೆಗಾಗಿ ಕೇರಳಕ್ಕೆ ರವಾನೆಯಾಗುತ್ತಿತ್ತು. ಸಂಸ್ಕರಣಾ ಪ್ರಕ್ರಿಯೆಯಲ್ಲಿ ಹಲವಾರು ಸುಧಾರಣೆಗಳು ಕಂಡು ಬಂದವು. ಕ್ರಮೇಣ ಮಹಾರಾಷ್ಟ್ರದ ಹಲವು ಜಿಲ್ಲೆಗಳಲ್ಲಿ

ಸ್ಥಳೀಯವಾಗಿ ಗೇರು ಸಂಸ್ಕರಿಸುವ ಸಣ್ಣ ಘಟಕಗಳು ಪ್ರಾರಂಭಗೊಂಡವು. ಇದರಿಂದಾಗಿ ಗೇರು ಉತ್ಪಾದನೆಗೆ ಇನ್ನಷ್ಟು ಪ್ರೋತ್ಸಾಹ ದೊರೆತಂತಾಯಿತು. ಮಾತ್ರವಲ್ಲ ಗ್ರಾಮೀಣ ಮಟ್ಟದಲ್ಲಿ ವ್ಯಾಪಕವಾದ ಉದ್ಯೋಗಾವಕಾಶ, ಅದರಲ್ಲೂ ಮಹಿಳೆಯರಿಗೆ ಸೃಷ್ಟಿಯಾಯಿತು. ಪರಿಣಾಮವಾಗಿ ನಗರದತ್ತ ವಲಸೆ ಹೋಗುವ ಪ್ರವೃತ್ತಿಗೆ ಕಡಿವಾಣ ಬಿತ್ತು. ಮಹಿಳೆಯರ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿಗಳು ಉತ್ತಮಗೊಳ್ಳುವುದರೊಂದಿಗೆ ಸಾಮಾಜಿಕ ಪರಿವರ್ತನೆಗೆ ಅವಕಾಶ ಮಾಡಿಕೊಟ್ಟಿತು ಎಂದಿದ್ದಾರೆ. ಇದರೊಂದಿಗೆ ಸ್ಥಳೀಯ ಸಣ್ಣ ಘಟಕಗಳು ಆರ್ಥಿಕವಾಗಿಯೂ ಹೆಚ್ಚು ಲಾಭದಾಯಕ ಎಂದು ಲೇಖಕರು ದಾಖಲಿಸಿದ್ದಾರೆ. ಕಡಿಮೆ ಬಂಡವಾಳ ಹೂಡಿಕೆಯಿಂದ ಹೆಚ್ಚು ಲಾಭಗಳಿಸುವುದರೊಂದಿಗೆ ವ್ಯಾಪಕ ಉದ್ಯೋಗ ಅವಕಾಶ ಸೃಷ್ಟಿಸುವುದು ಸಣ್ಣ ಘಟಕಗಳ ವೈಶಿಷ್ಟ್ಯ ಎನ್ನುತ್ತಾ ಇಂತಹ ಘಟಕಗಳಿಗೆ ಸರಕಾರದ ವತಿಯಿಂದ ನೆರವು ಅಗತ್ಯ ಎಂದು ಸೂಚಿಸಿದ್ದಾರೆ.[೨೫]

೮. ಕೆ. ಶಾಹಲ್ ಹಸನ್ ಮುಸ್ಲಿಯರ್ (೨೦೧೦), "Challenges and Opportunities for Indian Cashews In Global Market" ಎಂಬ ತಮ್ಮ ಲೇಖನದಲ್ಲಿ ಗೇರು ಸಂಸ್ಕರಣಾ ಘಟಕ ಸ್ಥಾಪನೆಯಾದ ಕುರಿತಂತೆ ಬೆಳಕು ಚೆಲ್ಲಿದ್ದಾರೆ. ಮಂಗಳೂರು ಗೇರು ಉದ್ಯಮದ ಪ್ರಮುಖ ಕೇಂದ್ರವಾಗಿದ್ದು ಅಲ್ಲಿ ಪ್ರಾರಂಭವಾದ ಘಟಕಗಳ ಬಗ್ಗೆ ಮಾಹಿತಿ ನೀಡಿದ್ದಾರೆ. ಗೇರು ಉದ್ಯಮ ಅಭಿವೃದ್ಧಿ ಹೊಂದಲು ಕಚ್ಚಾಗೇರು ಉತ್ಪಾದನೆಯಲ್ಲಿ ನಾವು ಸ್ವಾವಲಂಬನೆ ಸಾಧಿಸಬೇಕು ಎಂದಿರುವ ಲೇಖಕರು ಜಾಗತಿಕ ಮಾರುಕಟ್ಟೆಯಲ್ಲಿ ಭಾರತದ ಮುಂದಿರುವ ಅವಕಾಶಗಳು ಹಾಗೂ ಎದುರಿಸಬೇಕಾದ ಸವಾಲುಗಳ ಕುರಿತಂತೆ ಚರ್ಚಿಸಿದ್ದಾರೆ. ಗೇರು ಉದ್ಯಮದಲ್ಲಿ ಭಾರತದ ಮಹತ್ವದ ಬಗ್ಗೆ ವಿವರಿಸುತ್ತಾ ಗೇರು ಸಂಸ್ಕರಣೆಯ ಇತಿಹಾಸವನ್ನು ದಾಖಲಿಸಿದ್ದಾರೆ. ೧೯೨೦ ರಲ್ಲಿ ಮೊಟ್ಟ ಮೊದಲ ಬಾರಿಗೆ ಕೇರಳದ ಕೊಲ್ಲಂನಲ್ಲಿ ಗೇರು ಸಂಸ್ಕರಣಾ ಘಟಕ ಪ್ರಾರಂಭವಾಯಿತು ಎಂಬ ಉಲ್ಲೇಖದೊಂದಿಗೆ ಉದ್ಯಮದಲ್ಲಿ ಕರ್ನಾಟಕದ ಅದರಲ್ಲೂ ಮುಖ್ಯವಾಗಿ ಮಂಗಳೂರಿನ ಪಾತ್ರವನ್ನು ವಿವರಿಸಿದ್ದಾರೆ. ಹಾಗೂ ಉದ್ಯಮದ ಮುಂಚೂಣಿಯಲ್ಲಿದ್ದ ಹಲವು ಉದ್ಯಮಿಗಳನ್ನು ಹೆಸರಿಸಿದ್ದಾರೆ. ಗೇರು ಕೃಷಿಯಲ್ಲಿ ಸುಧಾರಿತ ತಂತ್ರಜ್ಞಾನದ ಅಳವಡಿಕೆ ಅನಿವಾರ್ಯ ಎಂದಿರುವ ಲೇಖಕರು ಗೇರು ಬೀಜದ ಆಮದು ಮೇಲಿನ ಅವಲಂಬನೆ ಕಡಿಮೆಯಾಗಬೇಕು ಎಂದಿದ್ದಾರೆ. ಮುಂಬರುವ ದಿನಗಳಲ್ಲಿ ಆಮದು ಗೇರು ಬೀಜದ ಪೂರೈಕೆ ಕುಸಿಯುವ ಸಾಧ್ಯತೆ ಇರುವುದರಿಂದ ದೇಶೀ ಉತ್ಪಾದನೆ ಏರಿಕೆ ಅನಿವಾರ್ಯ ಎನ್ನುವ ಲೇಖಕರು ಜಾಗತಿಕ ಮಟ್ಟದಲ್ಲಿ ಭಾರತ ಎದುರಿಸಬೇಕಾದ ತೀವ್ರ ಪೈಪೋಟಿ ಮುಂದಿನ ದಿನಗಳಲ್ಲಿ ಒಂದು ಸವಾಲಾಗಿ ಪರಿಣಮಿಸಲಿದೆ ಎನ್ನುತ್ತಾರೆ. ವಿಯೆಟ್ನಾಂ ಈಗಾಗಲೇ ಭಾರತದ ಗೇರು ಸಾರ್ವಭೌಮತ್ವಕ್ಕೆ ಸಂಚಕಾರ ತಂದಿದ್ದು ಈ ಕುರಿತು ಗಂಭೀರ ಚಿಂತನೆಯ ಅಗತ್ಯವಿದೆ ಎಂದಿದ್ದಾರೆ. ನಮ್ಮ ದೇಶಕ್ಕೆ ಕಚ್ಚಾಗೇರನ್ನು ಪೂರೈಸುತ್ತಿರುವ ರಾಷ್ಟ್ರಗಳು ತಮ್ಮದೇ ಆದ ಗೇರು ಸಂಸ್ಕರಣಾ ಘಟಕಗಳನ್ನು ಪ್ರಾರಂಭಿಸುತ್ತಿರುವುದರಿಂದ, ನಾವು ದೇಶಿ ಉತ್ಪಾದನೆಯನ್ನು ಹೆಚ್ಚಿಸುವ ಅನಿವಾರ್ಯತೆ ಇದೆ. ಕಚ್ಚಾಗೇರು ಉತ್ಪಾದನೆ ಹೆಚ್ಚಿಸಲು ಗೇರು ಬೆಳೆಯುವ ಪ್ರದೇಶವನ್ನು ವಿಸ್ತರಿಸಬೇಕಾಗಿದೆ. ಪ್ಲಾಂಟೇಶನ್ ಮಾದರಿಯಲ್ಲಿ ಗೇರು ಬೆಳೆಯಬೇಕು ಮತ್ತು ಭೂಮಿತಿ ಕಾಯಿದೆಯಿಂದ ಗೇರು ಪ್ಲಾಂಟೇಷನ್‌ಗಳನ್ನು ಹೊರತುಪಡಿಸಬೇಕು. ಇದರೊಂದಿಗೆ ಗೋಡಂಬಿಯ ಪೌಷ್ಟಿಕತೆಯನ್ನು ಔಷಧೀಯ ಮಹತ್ವವನ್ನು ಹೆಚ್ಚು ಪ್ರಚಾರಗೊಳಿಸಬೇಕು. ಆ ಬಗ್ಗೆ ಇನ್ನಷ್ಟು ಸಂಶೋಧನೆಗಳಾಗಬೇಕು. ಅಂತರಾಷ್ಟ್ರೀಯ ಮಟ್ಟದಲ್ಲಿ ಗೇರು ಉದ್ಯಮದಲ್ಲಿ ಪ್ರಭಾವಿಯಾಗಿರುವ ವಿಯೆಟ್ನಾಂ, ಬ್ರೆಜಿಲ್ ದೇಶಗಳ ಸಹಕಾರದೊಂದಿಗೆ ಗೋಡಂಬಿಯ ಮಹತ್ವವನ್ನು ಜಾಗತಿಕ ಮಟ್ಟದಲ್ಲಿ ಪರಿಚಯಿಸುವ ಪ್ರಯತ್ನ ಮಾಡಬೇಕು. ಮೌಲ್ಯವರ್ಧಿತ ಗೋಡಂಬಿಯನ್ನು ಮಾರುಕಟ್ಟೆಯಲ್ಲಿ ಪರಿಚಯಿಸಬೇಕಾಗಿದೆ. ಗೇರು

ಉದ್ಯಮದ ಉಪ ಉತ್ಪನ್ನಗಳನ್ನು ಪರಿಣಾಮಕಾರಿಯಾಗಿ ಬಳಸುವ ನಿಟ್ಟಿನಲ್ಲಿ ಸಂಶೋಧನೆಗಳು ಆಗಬೇಕಾಗಿದೆ. ಗೇರು ಬೀಜದ ಸಿಪ್ಪೆಯನ್ನು ಬಳಸಿ ಕೈಗಾರಿಕೆಗಳಲ್ಲಿ ಮಾಲಿನ್ಯ ನಿಯಂತ್ರಣ ಮಾಡುವ ತಂತ್ರಜ್ಞಾನವನ್ನು ಸುರತ್ಕಲ್ ಇಂಜಿನಿಯರಿಂಗ್ ಸಂಸ್ಥೆ ಈಗಾಗಲೇ ಕಂಡುಹಿಡಿದಿದೆ. ಒಟ್ಟಿನಲ್ಲಿ ಭಾರತಕ್ಕೆ ಗೇರು ಉದ್ಯಮದಲ್ಲಿರುವ ಪರಿಣಿತಿ ಹಾಗೂ ಅನುಭವದಿಂದ ಮುಂದಿನ ದಿನಗಳಲ್ಲಿ ಉಜ್ವಲ ಭವಿಷ್ಯವನ್ನು ಕಂಡುಕೊಳ್ಳುವ ಭರವಸೆ ಇದೆ ಎಂದು ಅಭಿಪ್ರಾಯ ಪಟ್ಟಿರುತ್ತಾರೆ.[೨೬]

ಕೆ. ಎಸ್. ಮಹೇಶ್ ಮತ್ತು ಸಿ. ಪಿ. ಅಪ್ಪಣ್ಣ (೨೦೧೦), "Role of NABARD in Cashew Promotion" ಎಂಬ ತಮ್ಮ ಲೇಖನದಲ್ಲಿ ನಬಾರ್ಡ್ ಸಂಸ್ಥೆ ಗೇರು ಉತ್ಪಾದನೆ ಮತ್ತು ಸಂಸ್ಕರಣೆಯನ್ನು ಪ್ರೋತ್ಸಾಹಿಸುವ ದಿಕ್ಕಿನಲ್ಲಿ ಅನೇಕ ಹಣಕಾಸು ನೀತಿಯನ್ನು ಕೈಗೊಂಡ ಬಗ್ಗೆ ವಿವರಿಸುತ್ತಾ, ಕೃಷಿ ಸಂಬಂಧಿ ಸಂಸ್ಕರಣಾ ಘಟಕಗಳಿಗೆ ಹಣಕಾಸಿನ ಉತ್ತೇಜನ, ಶೀತಲೀಕರಣ ಘಟಕಗಳ ಸ್ಥಾಪನೆ ಇತ್ಯಾದಿ ಸೌಲಭ್ಯಗಳನ್ನು ನೀಡುತ್ತಿರುವುದರ ಬಗ್ಗೆ ಪ್ರಸ್ತಾಪಿಸಿದ್ದಾರೆ. ವಿಶೇಷವಾಗಿ ಬೇರೆ ಬೇರೆ ರಾಜ್ಯಗಳ ಗೇರು ಉತ್ಪಾದನಾ ವೆಚ್ಚವನ್ನು ಆಧರಿಸಿ ಹಣಕಾಸಿನ ನೆರವನ್ನು ನೀಡುವ ಯೋಜನೆ ನಬಾರ್ಡ್ ಸಂಸ್ಥೆಯದ್ದು. ಗೇರು ಉದ್ಯಮದ ಕುರಿತಂತೆ ವಾರ್ಷಿಕ ಹಣಕಾಸಿನ ಯೋಜನೆಯನ್ನು ಆಧರಿಸಿ ಅವುಗಳ ಸಾಮರ್ಥ್ಯದ ಅಗತ್ಯತೆಯ ಆಧಾರದಲ್ಲಿ ಬಂಡವಾಳವನ್ನು ಪೂರೈಸುತ್ತಿದೆ. ಜೊತೆಗೆ ರಾಷ್ಟ್ರೀಯ ಹಾಗೂ ಅಂತರ್‍ರಾಷ್ಟ್ರೀಯ ವಿಚಾರ ಸಂಕಿರಣಗಳ ಮೂಲಕ ಸುಧಾರಿತ ತಂತ್ರಜ್ಞಾನವನ್ನು ಹೆಚ್ಚು ಹೆಚ್ಚು ಪ್ರಚಾರಪಡಿಸುವಲ್ಲಿ ನಬಾರ್ಡ್ ಯಶಸ್ವಿಯಾಗಿದೆ. ಆದಿವಾಸಿ ಅಭಿವೃದ್ಧಿ ನಿಧಿಯ ಆಶ್ರಯದಲ್ಲಿ ಕರ್ನಾಟಕವನ್ನು ಒಳಗೊಂಡಂತೆ ಅನೇಕ ರಾಜ್ಯಗಳಲ್ಲಿ ಗೇರು ಬೆಳೆಯುವ ಪ್ರದೇಶವನ್ನು ವಿಸ್ತರಿಸಲಾಗಿದೆ (Wadi Approach). ಆದಿವಾಸಿ ಅಭಿವೃದ್ಧಿ ಕಾರ್ಯಕ್ರಮ ಹಾಗೂ ಆದಿವಾಸಿ ಅಭಿವೃದ್ಧಿ ನಿಧಿಯ ಆಶ್ರಯದಲ್ಲಿ ಕ್ರಮವಾಗಿ ೨೫,೪೫೦ ಎಕರೆ ಹಾಗೂ ೨೮,೪೦೦ ಎಕರೆಯಷ್ಟು ವಾಡಿಗಳು ಎಂದರೆ ಸಣ್ಣ ಗೇರು ತೋಟಗಳನ್ನು ಕ್ರಮವಾಗಿ ಬೆಳೆಸಿದ್ದಾರೆ. ವ್ಯವಸ್ಥಿತ ಹಾಗೂ ವೈಜ್ಞಾನಿಕ ಗೇರು ವ್ಯವಸಾಯಕ್ಕೆ ಗುಂಪು ಅಭಿವೃದ್ಧಿ ಯೋಜನೆಯಡಿಯಲ್ಲಿ "ಗೇರು ಗುಂಪು"ಗಳನ್ನು ವಿಶೇಷವಾಗಿ ಮಹಾರಾಷ್ಟ್ರದ ಸಿಂಧದುರ್ಗ ಜಿಲ್ಲೆಯಲ್ಲಿ ಉತ್ತೇಜಿಸಲಾಗಿದೆ. ಗೇರು ಸಂಸ್ಕರಣಾ ಘಟಕಗಳಿಗೆ ಹಣಕಾಸಿನ ನೆರವಿನ ಕುರಿತಂತೆ ಒಂದು ಮಾದರಿ ಯೋಜನೆ ರೂಪಿಸಿ ಎಲ್ಲಾ ಬ್ಯಾಂಕುಗಳಿಗೆ ನೀಡಲಾಗಿದ್ದು ಇದರಿಂದ ಗೇರು ಉದ್ಯಮ ಕೈಗೆತ್ತಿಕೊಳ್ಳುವ ಉದ್ಯಮಿಗಳಿಗೆ ತಮ್ಮ ಉದ್ದೇಶಿತ ಯೋಜನೆಗಳ ಕುರಿತು ಪ್ರಸ್ತಾಪ ಸಲ್ಲಿಸಲು ಹೆಚ್ಚು ಸಹಕಾರಿಯಾಗಿದೆ ಎನ್ನುತ್ತಾ ಗೇರು ಮಾರುಕಟ್ಟೆ ಹಾಗು ಹಣಕಾಸಿನ ನೆರವಿನಲ್ಲಿ ನಬಾರ್ಡ್‌ನ ಪಾತ್ರದ ಬಗ್ಗೆ ವಿವರಣೆ ನೀಡಿದ್ದಾರೆ.[೨೭]

ಶಾಲಿನಿ ಯಾದವ್ (೨೦೧೦), "Economics of Cashew in India" ಎಂಬ ತಮ್ಮ ಅಧ್ಯಯನ ವರದಿಯಲ್ಲಿ ಕೇರಳ, ಒರಿಸ್ಸಾ ಹಾಗೂ ತಮಿಳುನಾಡಿನ ಗೇರು ಉತ್ಪಾದನೆ, ಮಾರುಕಟ್ಟೆ ಮತ್ತು ಸಂಸ್ಕರಣೆಯ ಕುರಿತಂತೆ ಮಾಡಿದ ಅಧ್ಯಯನದ ಫಲಿತಗಳನ್ನು ದಾಖಲಿಸಿದ್ದಾರೆ. ತಮ್ಮ ಅಧ್ಯಯನ ವರದಿಯಲ್ಲಿ ಕೇರಳ, ಒರಿಸ್ಸಾ ಮತ್ತು ತಮಿಳುನಾಡು ಈ ಮೂರು ರಾಜ್ಯಗಳ ಗೇರು ಉದ್ಯಮದ ಉತ್ಪಾದನೆ ಸಂಸ್ಕರಣೆ ಹಾಗೂ ಮಾರುಕಟ್ಟೆಯನ್ನು ಆಧರಿಸಿ ಅಭಿಪ್ರಾಯಗಳನ್ನು ದಾಖಲಿಸಿದ್ದಾರೆ. ಗೇರು ಕೃಷಿಯಲ್ಲಿ ಸುಧಾರಿತ ತಂತ್ರಜ್ಞಾನದ ಅಳವಡಿಕೆ ಉತ್ಪಾದನೆ ಹೆಚ್ಚಿಸುವಲ್ಲಿ ಅನಿವಾರ್ಯ ಕ್ರಮ ಎಂದಿದ್ದಾರೆ. ಗೇರು ಸಂಸ್ಕರಣೆ ಹಾಗೂ ಗೇರು ಬೀಜದ ದ್ರವದ ಉತ್ಪಾದನೆಯು ಆರ್ಥಿಕವಾಗಿ ಲಾಭದಾಯಕ ಎಂದು ನಿರೂಪಿಸಿದ ಲೇಖಕರು ಬಂಡವಾಳ ಹೂಡಿಕೆ, ವೆಚ್ಚ ಹಾಗೂ ಲಾಭದ ಪ್ರಮಾಣವನ್ನು ವಿಶ್ಲೇಷಿಸಿದ್ದಾರೆ. ಮಾರುಕಟ್ಟೆಯ ವಿಚಾರಕ್ಕೆ ಸಂಬಂಧಿಸಿದಂತೆ ಖಾಸಗಿ ಹಾಗೂ ಸರಕಾರದ ಸಹಭಾಗಿತ್ವ ಅತ್ಯಂತ ಅಗತ್ಯ ಎಂಬುದನ್ನು ಪ್ರತಿಪಾದಿಸಿದ್ದಾರೆ. ಉದ್ಯಮದ

ಸಮಸ್ಯೆಗಳನ್ನು ವಿವರವಾಗಿ ಚರ್ಚಿಸಿ ಫಲಿತಗಳನ್ನು ದಾಖಲಿಸಿದ್ದಾರೆ. ಭಾರತದಲ್ಲಿ ಶ್ರಮವೆಚ್ಚ ಕಡಿಮೆ ಹಾಗೂ ಗೋಡಂಬಿ ಅನುಭೋಗ ಹೆಚ್ಚು. ಆದುದರಿಂದ ಗೋಡಂಬಿ ಉದ್ಯಮದಲ್ಲಿ ಭಾರತಕ್ಕೆ ಉತ್ತಮ ಭವಿಷ್ಯವಿದೆ ಎಂಬುದಾಗಿ ಭರವಸೆಯ ಮಾತುಗಳನ್ನಾಡಿದ್ದಾರೆ. ಉದ್ಯಮಕ್ಕೆ ಹಣಕಾಸಿನ ಸೌಲಭ್ಯ, ಮೂಲಭೂತ ಸೌಕರ್ಯಗಳು ಹಾಗೂ ಸಾಕಷ್ಟು ಪ್ರಚಾರದ ಅಗತ್ಯವಿದೆ ಎನ್ನುತ್ತಾರೆ. ಗೇರು ಬೀಜದ ಎಣ್ಣೆ ಹಾಗೂ ಗೇರು ಹಣ್ಣಿನ ಸಮರ್ಪಕ ಬಳಕೆಯಾದಲ್ಲಿ ಆರ್ಥಿಕ ಹೊರೆ ಕಡಿಮೆಯಾಗುವುದು. ಜೊತೆಗೆ ಉದ್ಯಮ ಇನ್ನಷ್ಟು ಆಕರ್ಷಣೀಯ ಎನಿಸಿಕೊಳ್ಳಬಹುದು ಎಂದಿದ್ದಾರೆ. ಗೇರು ಉದ್ಯಮವನ್ನು ಬಲಪಡಿಸುವ ನಿಟ್ಟಿನಲ್ಲಿ ಸೂಕ್ತ ಸಲಹೆಗಳನ್ನಿತ್ತಿದ್ದಾರೆ. [೨೮]

ಡಾ। ವಿಘ್ನೇಶ್ವರ ವರ್ಮುಡಿ (೨೦೧೧), "Cashew : Time to Raise Production" ಎಂಬ ತಮ್ಮ ಲೇಖನದಲ್ಲಿ ಗೇರು ಉದ್ಯಮದ ಮಹತ್ವದ ಬಗ್ಗೆ ದಾಖಲಿಸುತ್ತಾ ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಉದ್ಯಮದ ಪಾತ್ರದ ಬಗ್ಗೆ ವಿವರಿಸಿದ್ದಾರೆ. ಗೇರು ಪರಿಷ್ಕರಣೆ ಹಾಗೂ ಮಾರುಕಟ್ಟೆಯ ವಿವಿಧ ಮಜಲುಗಳನ್ನು ಚರ್ಚಿಸಿದ್ದಾರೆ. ಉದ್ಯಮದ ಸಮಸ್ಯೆಗಳನ್ನು ಪಟ್ಟಿ ಮಾಡುತ್ತಾ ಅನುಸರಿಸಬೇಕಾದ ಸೂಕ್ತ ಕ್ರಮಗಳನ್ನು ಸೂಚಿಸಿದ್ದಾರೆ. ವಿಶೇಷವಾಗಿ ಗೇರು ಬೀಜದ ಮಾರುಕಟ್ಟೆ ವ್ಯವಸ್ಥೆಯನ್ನು ಬಲಪಡಿಸುವುದು ಅನಿವಾರ್ಯ ಎನ್ನುತ್ತಾ ಗೋವಾ ರಾಜ್ಯದ ರೀತಿಯಲ್ಲಿ ಸಹಕಾರಿ ಮಾರುಕಟ್ಟೆ ವ್ಯವಸ್ಥೆ ಅತ್ಯಂತ ಸೂಕ್ತ ಎಂದಿದ್ದಾರೆ. ಉದ್ಯಮದ ಭವಿಷ್ಯದ ಬಗ್ಗೆ ಉಲ್ಲೇಖಿಸುತ್ತಾ ಉತ್ಪಾದನೆ ಹೆಚ್ಚಳಕ್ಕೆ ಬೇಕಾದ ಎಲ್ಲಾ ಕ್ರಮಗಳನ್ನು ಸರಕಾರ ಕೈಗೊಂಡಿದ್ದು ಅದರ ಸಮರ್ಪಕ ಅನುಷ್ಠಾನವಷ್ಟೇ ಆಗಬೇಕು ಎಂದು ಭಾವಿಸುತ್ತಾರೆ.[೨೯]

೧.೨.೨ ಪ್ರಾಂತೀಯ ಮಟ್ಟದ ಅಧ್ಯಯನಗಳು: ಎಂ. ಅಬ್ದುಲ್ ಸಲಾಮ್ ಇವರ (೧೯೯೬), "Traditional Rubber Planters Turn to Cashew" ಎಂಬ ಅಧ್ಯಯನ ವರದಿಯು ಕೇರಳದ ಎರ್ನಾಕುಲಂ ಜಿಲ್ಲೆಯ ಒಂದು ಪ್ರದೇಶದಲ್ಲಿ ರೈತರು ರಬ್ಬರ್ ಬೆಳೆಯನ್ನು ಬಿಟ್ಟು ಗೇರು ಬೆಳೆದ ಬಗ್ಗೆ ಬೆಳಕು ಚೆಲ್ಲಿದೆ. ಸಾಂಪ್ರದಾಯಿಕವಾಗಿ ಮೂರು ಅವಧಿಗೆ ರಬ್ಬರ್ ಬೆಳೆಯುತ್ತಿದ್ದ ರೈತರು ಮೊದಲ ಬಾರಿಗೆ ಸುಧಾರಿತ ಗೇರು ಕೃಷಿಯತ್ತ ಒಲವು ತೋರಿಸಿದ್ದರು. ಈ ಕುರಿತು ಲೇಖಕರು ಕ್ಷೇತ್ರಾಧ್ಯಯನ ಮಾಡಿರುತ್ತಾರೆ ಮತ್ತು ಅದರ ಫಲಿತಗಳನ್ನು ದಾಖಲಿಸಿದ್ದಾರೆ. ಗೇರು ಕೃಷಿ ರಬ್ಬರ್‌ಗಿಂತ ಲಾಭದಾಯಕ. ಕಾರಣ ಇದು ಶೀಘ್ರ ಫಲ ನೀಡುವ ಮರ, ಕಡಿಮೆ ಮಧ್ಯಂತರ ಅವಧಿ ಉಳ್ಳದ್ದು ಮತ್ತು ವಿಶೇಷ ಮುತುವರ್ಜಿ ಬೇಕಾಗಿಲ್ಲ. ಒಳ ಬೆಳೆಯಾಗಿ ಅನಾನಸು ಬೆಳೆಯುವುದರಿಂದ ಆರ್ಥಿಕ ಲಾಭ ಜಾಸ್ತಿ. ರಬ್ಬರ್‌ಗೆ ಬೇಕಾದಂತೆ ಪರಿಣಿತ ಕೆಲಸಗಾರರ ಅವಶ್ಯಕತೆ ಇಲ್ಲ. ರಬ್ಬರ್‌ಗಿಂತ ಗೇರು ಪರಿಸರಕ್ಕೆ ಪೂರಕ. ಎಲ್ಲಕ್ಕೂ ಮಿಗಿಲಾಗಿ ಗೋಡಂಬಿಗೆ ಇರುವ ಬೇಡಿಕೆ ನಿರಂತರವಾಗಿ ಹೆಚ್ಚುತ್ತಿರುವುದರಿಂದ ಸಂಸ್ಕರಣಾ ಘಟಕಗಳಿಂದ ಕಚ್ಚಾಗೇರಿಗೆ ಬೇಡಿಕೆ ಹೆಚ್ಚುತ್ತಿದೆ. ರಬ್ಬರ್‌ಗಿಂತ ಗೇರು ಬೆಳೆಗೆ ಅವಕಾಶಗಳು ಜಾಸ್ತಿ ಎಂದು ನಿರೂಪಿಸಿದ್ದಾರೆ.[೩೦]

ಡಾ॥ ಗುಳೆದ ಗುಡ್ಡ (೨೦೦೫), ಧಾರವಾಡ ವಿಶ್ವ ವಿದ್ಯಾನಿಲಯದಲ್ಲಿ ಪಿಹೆಚ್. ಡಿ. ಪದವಿಗಾಗಿ ಸಲ್ಲಿಸಿದ "Production and Export Performance of Cashew An Economic Analysis" ಎಂಬ ಮಹಾ ಪ್ರಬಂಧದಲ್ಲಿ ದಕ್ಷಿಣ ಕನ್ನಡ ಹಾಗೂ ಬೆಳಗಾಂ ಜಿಲ್ಲೆಗಳನ್ನು ಆಧರಿಸಿ ಉದ್ಯಮದ ಬಗ್ಗೆ ಮಾಡಿದ ಅಧ್ಯಯನದ ಫಲಿತಗಳನ್ನು ದಾಖಲಿಸಿದ್ದಾರೆ. ಜಾಗತಿಕ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಗೇರು ಉದ್ಯಮದ ಮಹತ್ವವನ್ನು ಚರ್ಚಿಸುತ್ತಾ ಕರ್ನಾಟಕದ ಗೇರು ಅಭಿವೃದ್ಧಿಯನ್ನು ಪರಿಶೀಲಿಸಿದ್ದಾರೆ. ಅಧ್ಯಯನದ ಅವಧಿಯನ್ನು ಉದಾರೀಕರಣದ ಪೂರ್ವದ ಮತ್ತು ಉದಾರೀಕರಣದ ನಂತರದ ಅವಧಿಯೆಂದು ವಿಭಜಿಸಿ ಚರ್ಚಿಸಿದ್ದಾರೆ. ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಇರುವ ಅಡ್ಡಿಗಳನ್ನು ವಿವರಿಸುತ್ತಾ ಸೂಕ್ತ

ಪರಿಹಾರಗಳನ್ನು ನೀಡಿದ್ದಾರೆ. ಅದೇ ರೀತಿ ರಫ್ತು ವ್ಯಾಪಾರದ ಹಾಗೂ ಮಾರುಕಟ್ಟೆಯ ಸಮಸ್ಯೆಗಳನ್ನು ಕೂಲಂಕಷವಾಗಿ ಚರ್ಚಿಸಿ ಪರಿಹಾರಗಳನ್ನು ಸೂಚಿಸಿರುತ್ತಾರೆ. ಅಧ್ಯಯನದಲ್ಲಿ ದಕ್ಷಿಣ ಕನ್ನಡ ಹಾಗೂ ಬೆಳಗಾಂ ಜಿಲ್ಲೆಯ ಗೇರು ಕೃಷಿಯ ಆದಾಯ ಮತ್ತು ವೆಚ್ಚದ ಪರಾಮರ್ಶೆ ನಡೆಸಿ ಫಲಿತಗಳನ್ನು ದಾಖಲಿಸಿದ್ದಾರೆ. ಅದೇ ರೀತಿ ಗೋಡಂಬಿ ರಫ್ತು ವ್ಯಾಪಾರದ ಹಾಗೂ ಮಾರುಕಟ್ಟೆಯ ಸಾಧ್ಯತೆಗಳು ಹಾಗೂ ಆರ್ಥಿಕ ಆಯಾಮಗಳನ್ನು ವಿಶ್ಲೇಷಿಸಿದ್ದಾರೆ.[೩೧]

ಎಸ್.ಎಸ್. ಗುಳಿದಗುಡ್ಡ, ಬಿ.ಎಲ್. ಪಾಟೀಲ್ ಮತ್ತು ಜಿ.ಕೆ. ಹಿರೇಮಠ (೨೦೦೬), "An Appraisal of Finacial Feasibility of Investment in Cashew Plantation in Karnataka" ಎಂಬ ಲೇಖನದಲ್ಲಿ ಗೇರು ಕೃಷಿಯಲ್ಲಿ ಬಂಡವಾಳದ ಬಳಕೆಯ ಬಗ್ಗೆ ಉಲ್ಲೇಖ ಮಾಡಿರುತ್ತಾರೆ. ಗೇರು ಕೃಷಿಯಲ್ಲಿ ಕರ್ನಾಟಕದಲ್ಲಿ ಮೊದಲ ಸ್ಥಾನದಲ್ಲಿರುವ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಮೂರನೇ ಸ್ಥಾನದಲ್ಲಿರುವ ಬೆಳಗಾಂ ಜಿಲ್ಲೆಯನ್ನು ತುಲನಾತ್ಮಕ ಅಧ್ಯಯನಕ್ಕೆ ಆಯ್ದುಕೊಂಡಿದ್ದು, ದಕ್ಷಿಣ ಕನ್ನಡ ಜಿಲ್ಲೆಯ ಉತ್ಪಾದನಾ ವೆಚ್ಚ ೧ ಹೆಕ್ಟೇರಿಗೆ ರೂ. ೧೧,೫೪೯.೨೪ ಆಗಿದ್ದು, ಬೆಳಗಾಂ ಜಿಲ್ಲೆಯಲ್ಲಿ ಇದು ರೂ. ೯೬೯ಗಳಾಗಿರುತ್ತದೆ. ಅದರ ಆಂತರಿಕ ಪ್ರತಿಫಲ ದ.ಕ. ಜಿಲ್ಲೆಯಲ್ಲಿ ೧೫.೯೯% ಹಾಗೂ ಬೆಳಗಾಂನಲ್ಲಿ ೧೭.೫೦% ಆಗಿರುತ್ತದೆ ಎಂದಿದ್ದಾರೆ. ಆಂತರಿಕ ಪ್ರತಿಫಲ ಹೆಚ್ಚಿರುವ ಸ್ಥಳಗಳಲ್ಲಿ ಗೇರು ತೋಟದ ಮೇಲೆ ಬಂಡವಾಳ ಹೂಡುವುದರಿಂದ ಆರ್ಥಿಕವಾಗಿ ಹೆಚ್ಚು ಲಾಭ ಗಳಿಸಬಹುದೆಂದು ಈ ಲೇಖನ ಸಾಬೀತುಪಡಿಸುತ್ತದೆ.[೩೨]

ವೆಂಕಟಕುಮಾರ್. ಆರ್ (೨೦೦೬), ತಮ್ಮ "Socio Economic Impact of Cashew Cultivation in Kannur District of Kerala-India" ಎಂಬ ಲೇಖನದಲ್ಲಿ ಕೇರಳ ಗೇರು ಕೃಷಿಯಲ್ಲಿ ಒಂದು ಸಾಂಪ್ರದಾಯಿಕ ರಾಜ್ಯ ಎನಿಸಿಕೊಂಡಿದ್ದು ಕೇರಳದ ಗೇರು ಕೃಷಿಯ ಬೆಳವಣಿಗೆ, ಸುಧಾರಿತ ಕೃಷಿ ತಂತ್ರಜ್ಞಾನಕ್ಕೆ ರೈತರ ಸ್ಪಂದಿಸುವಿಕೆ, ತಂತ್ರಜ್ಞಾನದ ಅಭಿವೃದ್ಧಿ ಹಾಗೂ ಅನುಷ್ಠಾನಗಳ ನಡುವಿನ ಅಂತರ ಸಾಮಾಜಿಕ ಹಾಗೂ ಆರ್ಥಿಕ ಪರಿಣಾಮಗಳು ಮತ್ತು ಪ್ರಸ್ತುತ ಸ್ಥಿತಿಯ ಅಭಿವೃದ್ಧಿಗೆ ಬೇಕಾದ ಕೌಶಲಗಳ ಬಗ್ಗೆ ವಿವರಿಸುತ್ತಾ ಹೋಗಿದ್ದಾರೆ. ತಮ್ಮ ಅಧ್ಯಯನಕ್ಕೆ ಅತೀ ಹೆಚ್ಚು ಗೇರು ಕೃಷಿ ಭೂಮಿಯನ್ನು ಹೊಂದಿರುವ ಕಣ್ಣೂರು ಜಿಲ್ಲೆಯನ್ನು ಆಯ್ಕೆ ಮಾಡಿದ್ದು, ಬೀಜಾಂಕುರ ಸಸಿಗಳ ತೋಟ ಹಾಗೂ ಕಸಿ ಕಟ್ಟಿದ ಗಿಡಗಳ ತೋಟ ಹೊಂದಿರುವ ಎರಡು ಬಗೆಯ ರೈತರ ಗುಂಪುಗಳನ್ನು ಆಯ್ದುಕೊಂಡು ಸಮೀಕ್ಷೆ ಮಾಡಿರುತ್ತಾರೆ. ಗೇರು ಬೆಳೆಯ ಆಯ್ಕೆಗೆ ಇರುವ ಕಾರಣಗಳನ್ನು ಉಲ್ಲೇಖಿಸುತ್ತಾ, ಇದರಿಂದಾದ ಆರ್ಥಿಕ ಹಾಗೂ ಸಾಮಾಜಿಕ ಪರಿವರ್ತನೆಗಳನ್ನು ದಾಖಲಿಸಿದ್ದಾರೆ. ಬಹುತೇಕ ರೈತರು ಸಣ್ಣ ಹಾಗೂ ಅಂಚಿನ ರೈತರುಗಳಾಗಿದ್ದು ಕಡಿಮೆ ಶಿಕ್ಷಣ ಪಡೆದವರಾಗಿರುತ್ತಾರೆ ಮತ್ತು ಕುಟುಂಬದ ಸದಸ್ಯರುಗಳನ್ನೇ ಬಳಸಿಕೊಂಡು ಕೃಷಿ ಮಾಡುತ್ತಿರುವುದರಿಂದ ಬಂಡವಾಳ ಹೂಡಿಕೆ ಕಡಿಮೆ ಹಾಗೂ ಲಾಭದಾಯಕತೆ ಅಧಿಕ ಎಂಬ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ರೈತರ ಆರ್ಥಿಕ ಸಾಮರ್ಥ್ಯದೊಂದಿಗೆ ಸಾಮಾಜಿಕ ಭಾಗವಹಿಸುವಿಕೆಯು ಸಕಾರಾತ್ಮಕವಾಗಿ ಹೆಚ್ಚುತ್ತಿದೆ ಎಂಬುದನ್ನು ಸಾಬೀತು ಪಡಿಸುತ್ತಾರೆ. ಗೇರು ಕೃಷಿ ಅತ್ಯಂತ ಸುಲಭದಲ್ಲಿ ಕಡಿಮೆ ಬಂಡವಾಳ ಹಾಗೂ ಶ್ರಮದಿಂದ ಮಾಡಬಹುದು. ಆದುದರಿಂದ ಗೇರು ಹೆಚ್ಚು ಸುರಕ್ಷಿತ ಕೃಷಿ ಎನಿಸಿಕೊಂಡಿದೆ ಎನ್ನುವುದು ಅವರ ಅಧ್ಯಯನದ ಸಾರವಾಗಿದೆ. ಆದರೆ ದೊಡ್ಡ ಹಿಡುವಳಿದಾರರು ಹೆಚ್ಚು ಬಂಡವಾಳ ಹೂಡಲು ಸಮರ್ಥರಾದುದರಿಂದ ರಬ್ಬರ್ ಪ್ಲಾಂಟೇಶನ್‌ನತ್ತ ಒಲವು ತೋರಿಸುತ್ತಿರುವುದನ್ನು ಅವರು ಉಲ್ಲೇಖಿಸಿದ್ದಾರೆ.[೩೩]

[illegible]

ಎಸ್.ಎಸ್. ಗುಳೆದಗುಡ್ಡ, ಬಿ.ಹೆಚ್. ಪಾಟೀಲ್, ಎ.ಎ. ಪಾಟೀಲ್ ಮತ್ತು ಹೆಚ್. ಬಸವರಾಜ (೨೦೦೭), ಇವರು "Marketing Costs and Margins of Raw Cashew Nut in Karnataka" ದಲ್ಲಿ ಕಚ್ಚಾಗೇರು ಮಾರುಕಟ್ಟೆಯ ವಿವಿಧ ಆಯಾಮಗಳನ್ನು ವಿಶೇಷವಾಗಿ ಕರ್ನಾಟಕದ ದಕ್ಷಿಣಕನ್ನಡ ಮತ್ತು ಬೆಳಗಾಂ ಜಿಲ್ಲೆಗಳ ಕುರಿತಂತೆ ವಿಶ್ಲೇಷಿಸಿದ್ದಾರೆ. ಗೇರು ಉತ್ಪಾದನೆ ಹೆಚ್ಚಿಸುವಲ್ಲಿ ಉತ್ತಮ ಮಾರುಕಟ್ಟೆ ವ್ಯವಸ್ಥೆ ಅನಿವಾರ್ಯ. ಮಾರುಕಟ್ಟೆಯಲ್ಲಿನ ಕ್ರೊಯ ಪೂರ್ವ ಗುತ್ತಿಗೆದಾರರು, ಸ್ಥಳೀಯ ಮಧ್ಯವರ್ತಿಗಳು ಬೆಲೆಯ ಹೆಚ್ಚಿನ ಭಾಗವನ್ನು ಆಕ್ರಮಿಸಿಕೊಳ್ಳುತ್ತಾರೆ ಎಂಬುದು ಲೇಖಕರ ನಿಲುವು. ಇದಕ್ಕೆ ಪೂರಕ ಮಾಹಿತಿಗಳನ್ನು ನೀಡುತ್ತಾ ಅಧ್ಯಯನ ವ್ಯಾಪ್ತಿಯ ಎರಡು ಜಿಲ್ಲೆಗಳ ಮಾರುಕಟ್ಟೆ ವೆಚ್ಚವನ್ನು ವಿಶ್ಲೇಷಿಸಿದ್ದಾರೆ. ಉತ್ಪಾದಕ ಹಾಗೂ ಸಂಸ್ಕರಣಾ ಘಟಕಕ್ಕೆ ನೇರ ಸಂಪರ್ಕ ಇದ್ದರೆ, ಮಧ್ಯವರ್ತಿಗಳನ್ನು ನಿವಾರಿಸಿ ಉತ್ಪಾದಕರಿಗೆ ಹೆಚ್ಚಿನ ಬೆಲೆ ಪಡೆಯಲು ಸಾಧ್ಯ ಎನ್ನುತ್ತಾರೆ.[೩೪]

ಕೆ. ಹರೀಶ್ ಕುಮಾರ್ ಮತ್ತು ಬಿ. ಚಿನ್ನಪ್ಪ (೨೦೧೦), ತಮ್ಮ ಲೇಖನ "Economic Analysis of Cashew Processing in Karnataka" ದಲ್ಲಿ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ೩೦ ಗೇರು ಸಂಸ್ಕರಣಾ ಘಟಕಗಳ ಬಗ್ಗೆ ಅಧ್ಯಯನ ನಡೆಸಿ ವರದಿ ಮಾಡಿರುತ್ತಾರೆ. ಲೇಖಕರು ಕಂಡುಕೊಂಡಂತೆ ೧೯೨೦ ರ ದಶಕದಲ್ಲಿ ಭಾರತದಲ್ಲಿ ವ್ಯವಸ್ಥಿತವಾಗಿ ಗೇರು ಸಂಸ್ಕರಣೆ ಪ್ರಾರಂಭಗೊಂಡಿದ್ದು, ಶ್ರಮ ವಿಭಜನೆಯ ನೀತಿಯನ್ನು ಅಳವಡಿಸಿಕೊಂಡ ಉದ್ಯಮ ಶ್ರಮ ಆಧಾರಿತವಾಗಿ ಬೆಳೆದುಕೊಂಡು ಬಂದಿರುತ್ತದೆ. ಉದ್ಯಮದಲ್ಲಿ ಮಾನವ ಶ್ರಮಕ್ಕೆ ಪ್ರಾಶಸ್ತ್ಯ ಜಾಸ್ತಿ ಎಂಬುದು ಇಲ್ಲಿ ಗಮನಾರ್ಹ. ಸಂಸ್ಕರಣಾ ಪ್ರಕ್ರಿಯೆಯಲ್ಲಿ ಬರುವ ಸ್ಥಿರ ಹಾಗೂ ಚರ ವೆಚ್ಚಗಳ ವಿಶ್ಲೇಷಣೆ ಮಾಡುತ್ತಾ ಕಚ್ಚಾಗೇರಿನ ವೆಚ್ಚವು ಒಟ್ಟು ವೆಚ್ಚದ ಶೇ. ೮೧ ರಷ್ಟಿದೆ ಎಂದಿದ್ದಾರೆ. ಗೇರು ಸಂಸ್ಕರಣಾ ಘಟಕಗಳು ದೊಡ್ಡ ಪ್ರಮಾಣದ್ದು ಆದಲ್ಲಿ ಲಾಭದ ಪ್ರಮಾಣ ಜಾಸ್ತಿ. ಕಾರಣ ಬೃಹತ್ ಪ್ರಮಾಣದ ಗೋಡಂಬಿ ಉತ್ಪನ್ನ ಹಾಗೂ ಉಪ ಉತ್ಪನ್ನಗಳ ಪರಿಣಾಮಕಾರಿ ಬಳಕೆ ಆಗುತ್ತದೆ. ಸಣ್ಣ ಘಟಕಗಳ ಸಾಮರ್ಥ್ಯದ ಸುಧಾರಣೆಗೆ ಹೆಚ್ಚಿನ ಬಂಡವಾಳ ಹೂಡಿಕೆ ಮಾಡುವ ಮೂಲಕ ಅವುಗಳನ್ನು ಪುನರುಜ್ಜೀವನಗೊಳಿಸುವ ಪ್ರಯತ್ನ ಮಾಡಬೇಕಾಗಿದೆ ಎಂದು ಸಲಹೆ ನೀಡಿದ್ದಾರೆ.[೩೫]

೧.೨.೩ ದಕ್ಷಿಣ ಕನ್ನಡ ಜಿಲ್ಲೆಯ ಅಧ್ಯಯನಗಳು : ಡಾ॥ ಪೌಲ್ ಅಲೆಕ್ಸಾಂಡರ್ ರೇಗೊ (೧೯೯೧), ಇವರು ಮಂಗಳೂರು ವಿಶ್ವವಿದ್ಯಾಲಯದಲ್ಲಿ ಪಿಹೆಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾ ಪ್ರಬಂಧ "Use Efficiency In Cashew Cultivation-A Case Study In Dakshina Kannada District" ನಲ್ಲಿ ಗೇರು ಕೃಷಿಯ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸುವ ಕುರಿತಂತೆ ಚರ್ಚಿಸಿದ್ದಾರೆ. ಸಂಪನ್ಮೂಲಗಳ ನಿರ್ವಹಣೆ (Resource Management) ಮತ್ತು ಆ ಕುರಿತಂತೆ ಸಂಶೋಧನಾತ್ಮಕ ಸಮಸ್ಯೆಗಳು ಇಲ್ಲಿ ಪ್ರಾಮುಖ್ಯತೆ ಪಡೆದುಕೊಂಡಿವೆ. ಅತ್ಯಂತ ಕಡಿಮೆ ಆದ್ಯತೆ ನೀಡುತ್ತಿದ್ದರೂ, ಗೇರು ಕೃಷಿ ಲಾಭದಾಯಕವಾಗಿದ್ದು, ಇನ್ನಷ್ಟು ಹೆಚ್ಚಿನ ಗಮನ ನೀಡಿದ್ದೇ ಆದಲ್ಲಿ ಮತ್ತು ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸಿದಲ್ಲಿ ಗೇರು ಕೃಷಿಗೆ ಉಜ್ವಲ ಭವಿಷ್ಯ ಇದೆ ಎಂಬುದನ್ನು ಪ್ರಸ್ತುತಪಡಿಸಲಾಗಿದೆ. ಅರಣ್ಯೀಕರಣ ಹಾಗೂ ಪರಿಸರ ಸಮತೋಲನ ಕಾಯ್ದುಕೊಳ್ಳುವಲ್ಲಿಯೂ ಗೇರು ಕೃಷಿ ಮಹತ್ವದ್ದು ಎಂದು ಅಭಿಪ್ರಾಯ ಪಟ್ಟಿದ್ದಾರೆ.[೩೬]

ಬಾಲಸುಬ್ರಮಣಿಯನ್. ಡಿ (೨೦೦೦), ತಮ್ಮ ಲೇಖನ "Status Report on Cashew Processing Industries In Dakshina Kannada District" ದಲ್ಲಿ ದ. ಕ. ಜಿಲ್ಲೆಯ ಗೇರು ಸಂಸ್ಕರಣಾ ಘಟಕಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಒಟ್ಟು ೯೪ ಘಟಕಗಳಲ್ಲಿ ೫೯ ಘಟಕಗಳ ಸಮೀಕ್ಷೆ ನಡೆಸಿ ಫಲಿತಗಳನ್ನು ದಾಖಲಿಸಿದ್ದಾರೆ. ಸುಮಾರು ಶೇ. ೫೮ ಉದ್ಯಮಗಳು ೮೦ ರ ದಶಕದಲ್ಲಿ ಪ್ರಾರಂಭವಾಗಿದ್ದು ನಂತರದ ದಶಕದಲ್ಲಿ ಹೊಸ ಉದ್ಯಮಗಳ ಪ್ರಾರಂಭದ ಪ್ರಮಾಣ ಶೇ. ೨೨ ಕ್ಕೆ ಕುಸಿಯಿತು. ಆದಾಗ್ಯೂ ಈಗಾಗಲೇ ಪ್ರಾರಂಭವಾಗಿರುವ ಉದ್ಯಮಗಳು ಲಾಭದಾಯಕವಾಗಿ ನಡೆಯುತ್ತಿರುವುದು ಉದ್ಯಮದ ಭವಿಷ್ಯದ ಬೆಳವಣಿಗೆಯ ಬಗೆ ಭರವಸೆಯನ್ನು ಮೂಡಿಸುತ್ತದೆ. ಸುಮಾರು ಶೇ. ೮೧ ರಷ್ಟು ಉದ್ಯಮಗಳು ಪಾಲುದಾರಿಕೆಯಲ್ಲಿ ಪ್ರಾರಂಭವಾಗಿದ್ದು ಶೇಕಡಾ ೫೭ ರಷ್ಟು ಗೇರು ಸಂಸ್ಕರಣಾ ಘಟಕಗಳು ವಾರ್ಷಿಕ ೧೦೦ ರಿಂದ ೫೦೦ ಟನ್ ಕಚ್ಚಾ ಗೇರನ್ನು ಸಂಸ್ಕರಣೆ ಮಾಡುವ ಸಾಮರ್ಥ್ಯವನ್ನು ಹೊಂದಿದ್ದು ೯೦ ರಿಂದ ೯೫ ಶೇಕಡಾ ಮಹಿಳಾ ಉದ್ಯೋಗಿಗಳು ಇವುಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಗೇರು ಉದ್ಯಮದ ಉಪ ಉತ್ಪನ್ನವಾದ ಗೇರು ಬೀಜದ ದ್ರವ (CNSL) ವನ್ನು ಕೆಲವೇ ಕೆಲವು ಘಟಕಗಳು ಹೊರ ತೆಗೆಯುತ್ತಿವೆ ಎಂದಿರುವ ಅವರು ದ.ಕ. ಜಿಲ್ಲೆಯ ಗೇರು ಸಂಸ್ಕರಣಾ ವಿಧಾನದ ಬಗ್ಗೆ ವಿಶ್ಲೇಷಿಸುತ್ತಾ ಅಲ್ಲಿನ ಸಮಸ್ಯೆಗಳ ಬಗ್ಗೆ ಚರ್ಚಿಸಿದ್ದಾರೆ. ಯಂತ್ರಗಳ ಬಳಕೆಯ ಸಾಧ್ಯತೆಗಳಿದ್ದರೂ ನಿರುದ್ಯೋಗದ ಸಮಸ್ಯೆ ಉಂಟಾಗುವ ಮುಖಾಂತರ ಸಾಮಾಜಿಕ ದುಷ್ಪರಿಣಾಮ ಬೀರುವ ಸಾಧ್ಯತೆಗಳಿವೆ. ಹಾಗಾಗಿ ಸರಳ ಯಂತ್ರಗಳ ಬಳಕೆಯ ಕುರಿತು ಸಲಹೆ ನೀಡಿರುತ್ತಾರೆ.[೫೭]

ಸುದರ್ಶನ ಕುಮಾರ್ (೨೦೦೯), "Socio Economic Analysis of Cashewnut Processing Unit In Karkala Taluk" ಎಂಬ ತಮಿಳುನಾಡಿನ ಸೇಲಂ ವಿಶ್ವವಿದ್ಯಾಲಯದಲ್ಲಿ ಎಂಫಿಲ್ ಪದವಿಗಾಗಿ ಸಲ್ಲಿಸಿದ ತಮ್ಮ ಸಂಶೋದನಾ ಪ್ರಬಂಧದಲ್ಲಿ ಗೇರು ಉತ್ಪಾದನೆಯ ಪ್ರಾಮುಖ್ಯತೆಗಳ ಬಗ್ಗೆ ಉಲ್ಲೇಖ ಮಾಡುತ್ತಾ ಗೇರು ಸಂಸ್ಕರಣಾ ಘಟಕಗಳ ಬೇರೆ ಬೇರೆ ಪ್ರಕ್ರಿಯೆ ಬಗ್ಗೆ ಮಾಹಿತಿ ನೀಡಿದ್ದಾರೆ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ ತಾಲೂಕಿನ ಗೇರು ಉದ್ಯಮದಲ್ಲಿ ದುಡಿಯುತ್ತಿರುವ ಕಾರ್ಮಿಕರ ಸ್ಥಿತಿಗತಿಗಳ ಬಗ್ಗೆ ಚರ್ಚಿಸಿದ್ದಾರೆ. ಕಾರ್ಮಿಕರ ಶಿಕ್ಷಣ, ಸಾಮಾಜಿಕ ಪರಿಸರ, ಕೆಲಸದ ಬಗ್ಗೆ ಅವರಿಗಿರುವ ಅತೃಪ್ತಿ, ವೇತನ, ಸೌಕರ್ಯ ಇತ್ಯಾದಿಗಳನ್ನು ವಿಶ್ಲೇಷಣೆ ಮಾಡಿರುತ್ತಾರೆ.[೫೮]

ಮೇಲಿನ ಎಲ್ಲಾ ಅಧ್ಯಯನಗಳ ಸಾರಾಂಶ ಇಂತಿದೆ: ಕಚ್ಚಾಗೇರು ಉತ್ಪಾದನೆಯ ಹೆಚ್ಚಳದಿಂದ ಬೇಡಿಕೆ ಮತ್ತು ಪೂರೈಕೆಗಳ ನಡುವೆ ಅಂತರವನ್ನು ನಿವಾರಿಸಬೇಕಾಗಿದೆ. ಗೇರು ಉದ್ಯಮದ ಸಮಸ್ತ ಏಳು ಬೀಳುಗಳು ಕಚ್ಚಾಗೇರಿನ ಉತ್ಪಾದನೆಯನ್ನೇ ಅವಲಂಬಿಸಿದೆ. ಕಚ್ಚಾಗೇರಿನ ಉತ್ಪಾದನೆ ಅನಿಶ್ಚಿತತೆಯಿಂದ ಕೂಡಿದ್ದು ಗೇರು ಕೃಷಿ ಆಕರ್ಷಣೆಯನ್ನು ಕಳೆದುಕೊಳ್ಳುತ್ತಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಭಾರತ ತೀವ್ರ ಸ್ಪರ್ಧೆಯನ್ನು ಎದುರಿಸುತ್ತಿದ್ದು ಈ ನಿಟ್ಟಿನಲ್ಲಿ ಸ್ಥಿರ ಬೆಲೆ, ಉತ್ತಮ ಗುಣ ಮಟ್ಟದ ನಡುವೆ ಸಮನ್ವಯ ಸಾಧಿಸಬೇಕಾಗಿದೆ. ಆದರೆ ಇದುವರೆಗೆ ಗೇರು ಉದ್ಯಮದ ಸಮಗ್ರ ಬೆಳವಣಿಗೆಯ ದೃಷ್ಟಿಯಿಂದ ಯಾವುದೇ ಅಧ್ಯಯನ ನಡೆದಿಲ್ಲ ಎಂಬುದು ಕಂಡುಬರುತ್ತದೆ. ಗೇರು ಉದ್ಯಮವನ್ನು ಉತ್ಪಾದನೆ, ಸಂಸ್ಕರಣೆ ಹಾಗೂ ವ್ಯಾಪಾರ ಎಂಬುದಾಗಿ ವಿಭಾಗಿಸಿಕೊಂಡು ಅಧ್ಯಯನ ಮಾಡಬೇಕಾಗುತ್ತದೆ. ಒಟ್ಟು ಉದ್ಯಮದ ಸಮಸ್ಯೆಯ ಮೂಲ ಇರುವುದು ಕಚ್ಚಾಗೇರು ಉತ್ಪಾದನೆಯಲ್ಲಿಯಾದರೂ, ಸಂಸ್ಕರಣೆಯ ನಿರ್ವಹಣಾ ವೆಚ್ಚ, ಕಾರ್ಮಿಕರ ಸ್ಥಿತಿಗತಿಗಳು, ಗೋಡಂಬಿ ವ್ಯಾಪಾರದ ಲೆಕ್ಕಾಚಾರ ಇವೆಲ್ಲವೂ ಮತ್ತೆ ಗೇರು ಉತ್ಪಾದನೆಯ ಮೇಲೆ ಪ್ರಭಾವ ಬೀರುವುದು ಅಷ್ಟೇ ಸತ್ಯ. ಪ್ರತಿಯೊಂದು

ವಿಭಾಗವು ಅಂತರ್ಗತವಾಗಿ ಒಂದಕ್ಕೊಂದು ಪೂರಕ ಹಾಗೂ ಪ್ರೇರಕ. ಈ ನಿಟ್ಟಿನಲ್ಲಿ ಒಂದು ಕ್ರೋಢೀಕೃತ ಅಧ್ಯಯನದ ಅವಶ್ಯಕತೆ ಇದೆ. ಗೇರು ಉದ್ಯಮದ ಸಮಗ್ರ ಅಭಿವೃದ್ಧಿಯ ಒಂದು ಅವಲೋಕನದಿಂದ ಮಾತ್ರ ಗೇರು ಉದ್ಯಮದ ಭವಿಷ್ಯದ ಮೇಲೆ ಬೆಳಕು ಚೆಲ್ಲಲು ಸಾಧ್ಯ. ಪ್ರಸ್ತುತ ಅಧ್ಯಯನ ಈ ನಿಟ್ಟಿನಲ್ಲಿ ಒಂದು ಪ್ರಯತ್ನ ಎಂದು ಹೇಳಬಹುದು.

೧.೩. ಅಧ್ಯಯನದ ಮಹತ್ವ

ಕರ್ನಾಟಕದಲ್ಲಿ ಗೇರು ಉದ್ಯಮದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಮೊದಲ ಸ್ಥಾನದಲ್ಲಿದೆ ಮತ್ತು ರಾಜ್ಯದಲ್ಲೇ ಗೇರು ಉದ್ಯಮದ ಒಂದು ಸಾಂಪ್ರದಾಯಿಕ ನೆಲೆ ಎಂಬುದಾಗಿ ಗುರುತಿಸಿಕೊಂಡಿದೆ. ರಾಜ್ಯದ ಒಟ್ಟು ಗೇರು ಬೆಳೆಯುವ ಪ್ರದೇಶದಲ್ಲಿ ಶೇ. ೪೨.೯೪ ರಷ್ಟು ಭಾಗವನ್ನು, ಮತ್ತು ಉತ್ಪಾದನೆಯಲ್ಲಿ ಶೇ. ೪೯.೬೬ ಭಾಗವನ್ನು ಹೊಂದಿರುವ ದ.ಕ. ಜಿಲ್ಲೆ ಉದ್ಯಮದ ಬೆಳವಣಿಗೆಯಲ್ಲಿ ನಿರ್ಣಾಯಕವೆನಿಸಿದೆ. ಗೇರು ಬೀಜ ಸಂಸ್ಕರಣೆಯಲ್ಲೂ ದ.ಕ. ಜಿಲ್ಲೆ ಪ್ರಮುಖ ಕೇಂದ್ರವಾಗಿದ್ದು ಜಿಲ್ಲೆಯ ಮಂಗಳೂರು ತಾಲೂಕು ಗೋಡಂಬಿ ಉದ್ಯಮದ ತವರು ಎಂದೇ ಪ್ರಸಿದ್ಧಿ ಪಡೆದಿದೆ. ಮೂರು ದಶಕಗಳ ಹಿಂದೆ ಮಂಗಳೂರು ಜಿಲ್ಲೆ ಗೇರು ಹಾಗೂ ಹೆಂಚಿನ ಕಾರ್ಖಾನೆಗಳಿಗಷ್ಟೇ ಹೆಸರು ಪಡೆದುಕೊಂಡಿತ್ತು. ಆದರೆ ಕ್ರಮೇಣ ಹೆಂಚು ಉದ್ಯಮ ನೆಲ ಕಚ್ಚಿದ್ದು ಗೇರು ಕಾರ್ಖಾನೆಗಳು ಅವನತಿಯತ್ತ ಸಾಗಿತು. ದಕ್ಷಿಣ ಕನ್ನಡ ಜಿಲ್ಲೆಯ ವೃತ್ತಿ ಸ್ವರೂಪದಲ್ಲಿ ತೀವ್ರ ತರವಾದ ಬದಲಾವಣೆಗಳು ಕಂಡುಬಂದಿದ್ದು ಹೊಸ ಚಿಂತನೆಗೆ ದಾರಿ ಮಾಡಿಕೊಟ್ಟಿತು. ಜಾಗತೀಕರಣದ ಅಲೆಯಲ್ಲಿ ಕೃಷಿ ವ್ಯವಸ್ಥೆಯು ನೆಲೆಯನ್ನು ಕಳೆದುಕೊಳ್ಳುತ್ತಿದ್ದು ಗೇರು ಉದ್ಯಮವೂ ಸಂಕಷ್ಟಕ್ಕೆ ಸಿಲುಕಿದೆ. ಸುಲಭವೂ, ಲಾಭದಾಯಕವೂ ಆದ ರಬ್ಬರ್ ಬೆಳೆ ಗೇರು ಕೃಷಿಯ ಸ್ಥಾನವನ್ನು ಆಕ್ರಮಿಸಿಕೊಳ್ಳುತ್ತಿದ್ದು ಮುಂಬರುವ ದಿನಗಳಲ್ಲಿ ಪೂರೈಕೆಯ ಸಮಸ್ಯೆ ಇನ್ನಷ್ಟು ಬಿಗಡಾಯಿಸಲಿದೆ. ವಿಭಿನ್ನವಾದ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯುಳ್ಳ ದಕ್ಷಿಣ ಕನ್ನಡ ಜಿಲ್ಲೆ ಕಳೆದ ಒಂದುವರೆ ದಶಕಗಳಿಂದ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸುವಂತಾಗಿರುವುದರಿಂದ ಆರ್ಥಿಕವಾಗಿ ಕೆಲವು ಸಮಸ್ಯೆಗಳು ಸೃಷ್ಟಿಯಾಗಿವೆ. ಬಹುತೇಕವಾಗಿ ಮಹಿಳಾ ಉದ್ಯೋಗಿಗಳನ್ನು ಅದರಲ್ಲೂ ಹಿಂದುಳಿದ ಜಾತಿ, ಪಂಗಡಕ್ಕೆ ಸೇರಿರುವ ಮಹಿಳೆಯರನ್ನೇ ಅವಲಂಬಿಸಿರುವ ಗೇರು ಉದ್ಯಮವು ದಕ್ಷಿಣ ಕನ್ನಡ ಜಿಲ್ಲೆಯ ಸಾಂಸ್ಕೃತಿಕ ಆರ್ಥಿಕ ಹಾಗೂ ಸಾಮಾಜಿಕ ಜೀವನದ ಮೇಲೆ ಬೀರುವ ಪರಿಣಾಮಗಳನ್ನು ವಿಶ್ಲೇಷಿಸುವ ನಿಟ್ಟಿನಲ್ಲಿ ಅಧ್ಯಯನಗಳು ನಡೆಯುವ ಅಗತ್ಯ ಇದೆ. ಇದುವರೆಗಿನ ಅಧ್ಯಯನಗಳು ಗೇರು ಉದ್ಯಮವನ್ನು ಈ ದೃಷ್ಟಿಕೋನದಿಂದ ವಿಶ್ಲೇಷಿಸಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಕುರಿತಂತೆ ಒಂದೆರಡು ಅಧ್ಯಯನಗಳು ಅಧ್ಯಯನಗಳು ನಡೆದಿವೆಯಾದರೂ ಉದ್ಯಮದ ಸಮಗ್ರ ಅಭಿವೃದ್ಧಿಯ ಕುರಿತು ಚಿಂತನೆ ನಡೆದಿಲ್ಲ. ಅದಕ್ಕಾಗಿ ಕಚ್ಚಾಗೇರು ಉತ್ಪಾದನೆ, ಸಂಸ್ಕರಣೆ, ಮಾರಾಟ. ನಿರ್ಯಾತ ಹಾಗೂ ಕಾರ್ಮಿಕರ ಸ್ಥಿತಿಗತಿಗಳ ಬಗ್ಗೆ ಸಮಗ್ರವಾದ ಮತ್ತು ಕ್ರೋಢೀಕೃತ ಅಧ್ಯಯನ ಆಗಬೇಕಾದ ಅಗತ್ಯವಿದೆ. ಆದುದರಿಂದ ದಕ್ಷಿಣ ಕನ್ನಡ ಜಿಲ್ಲೆಯನ್ನು ಕೇಂದ್ರವಾಗಿರಿಸಿಕೊಂಡು ಗೇರು ಉದ್ಯಮದ ವಿವಿಧ ಆಯಾಮಗಳನ್ನು ವಿಶ್ಲೇಷಿಸುವ ಅಗತ್ಯ ಇರುವುದರಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ದಕ್ಷಿಣ ಕನ್ನಡದ ಗೇರು ಉದ್ದಿಮೆಯ ಪ್ರಮುಖ ಸಮಸ್ಯೆಗಳು ಇಂತಿವೆ:

- ಜಾಗತೀಕರಣವು ಕೃಷಿಯನ್ನು ಅವಗಣಿಸಿ ಆನುಷಂಗಿಕ ಮತ್ತು ಸೇವಾ ರಂಗಗಳಿಗೆ ಮಾತ್ರ ಮಹತ್ವ ನೀಡಿರುವುದರಿಂದ ಕೃಷಿ ಭೂಮಿಯ ವಿಸ್ತೀರ್ಣ ಕಡಿಮೆಯಾಗುತ್ತಾ ಬಂದಿದೆ. ಇದರ ಪರಿಣಾಮ ಗೇರು ಬೆಳೆಯ ಮೇಲೆ ಆಗಿದ್ದು, ಗೇರು ಬೆಳೆಯುವ ಪ್ರದೇಶದ ವಿಸ್ತೀರ್ಣವೂ ಕುಗ್ಗುತ್ತಾ ಹೋಗುತ್ತಿದೆ. ಇದರಿಂದಾಗಿ ಆಂತರಿಕ ಉತ್ಪಾದನೆ ಕಡಿಮೆಯಾಗಿ ಗೇರು ಕಾರ್ಖಾನೆ ನಡೆಸುವವರು ಕಚ್ಚಾಗೇರು ಬೀಜವನ್ನು ಆಮದು ಮಾಡಿಕೊಳ್ಳಬೇಕಾದ ದುಸ್ಥಿತಿ ನಿರ್ಮಾಣವಾಗಿದೆ.

- ಇದುವರೆಗೆ ಗೇರು ಬೆಳೆಯುತ್ತಿದ್ದ ರೈತರಲ್ಲಿ, ಅನೇಕರು ಇತ್ತೀಚೆಗೆ ಬಹಳ ಲಾಭದಾಯಕವೂ, ಸುಲಭ ಶೀಲವೂ ಆದ ರಬ್ಬರ್‌ಅನ್ನು ಬೆಳೆಯುತ್ತಿದ್ದಾರೆ. ಗೇರು ಒಂದು ಋತುಸಂಬಂಧೀ ಬೆಳೆ. ಅದು ನಿಸರ್ಗದ ಒಂದು ಕೊಡುಗೆಯಾದುದರಿಂದ ಗೇರು ಬೆಳೆಯಲ್ಲಿ ಇಳಿಕೆಯ ಸೀಮಾಂತ ಪ್ರತಿಫಲ ನಿಯಮ ಅನ್ವಯವಾಗುತ್ತದೆ. ರಬ್ಬರಿಗೆ ಹೋಲಿಸಿದರೆ ಗೇರು ಬೆಳೆ ಕಡಿಮೆ ಲಾಭದಾಯಕ ಎಂಬ ತಪ್ಪು ಅಭಿಪ್ರಾಯ ವ್ಯಾಪಕವಾಗಿ ಹರಡಿದ್ದು ಇದು ಕೂಡಾ ಗೇರು ಕೃಷಿಯ ಅಸ್ತಿತ್ವದ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರುತ್ತಿದೆ. ಅಲ್ಲದೆ ಗೇರು ಉತ್ಪಾದನೆ ತೀರಾ ಅನಿಶ್ಚಿತವಾಗಿರುತ್ತದೆ. ಇದರಿಂದಾಗಿ ಗೇರು ಬೆಳೆಗಾರರ ಬದುಕಲ್ಲೂ ಅನಿಶ್ಚಿತತೆ ಕಾಣಿಸಿಕೊಂಡಿದೆ.
- ಸಂಸ್ಕರಣಾ ಘಟಕಗಳು ಕಚ್ಚಾ ಸರಕಿಗೆ ವಿದೇಶಿ ಗೇರು ಬೀಜವನ್ನು ಅವಲಂಬಿಸಬೇಕಾಗಿ ಬಂದಿರುವುದರಿಂದ ಗೋಡಂಬಿಯ ಬೆಲೆ ಹೆಚ್ಚಾಗಿದೆ. ಕಚ್ಚಾಗೇರಿನ ಆಮದಿನಿಂದಾಗಿ ವಿದೇಶಿ ವಿನಿಮಯವು ಅನಾವಶ್ಯಕವಾಗಿ ಸೋರಿ ಹೋಗುತ್ತಿದೆ.
- ಗೇರು ಬೆಳೆಗೆ ಸಿಂಪಡಿಸಲಾದ ಎಂಡೋಸಲ್ಫಾನ್‌ನಿಂದಾಗಿ ಅನೇಕ ದುಷ್ಪರಿಣಾಮಗಳಾಗಿವೆ. ಬದುಕಿರುವವರು ಅಂಗವಿಕಲತೆಗೆ ಒಳಗಾಗಿ ಜೀವಂತ ಶವಗಳಾಗಿದ್ದಾರೆ. ಅವರಿಗೆ ಪರಿಹಾರ ಒದಗಿಸುವ ಪ್ರಾಮಾಣಿಕ ಪ್ರಯತ್ನಗಳಾಗುತ್ತಿಲ್ಲ. ಇಂತಹ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕಾಗಿದೆ.

ಗೇರು ಬೆಳೆಗಾರರು, ಸಂಸ್ಕರಣಗಾರರು, ಮಾರಾಟಗಾರರು ಮತ್ತು ಕಾರ್ಮಿಕರು ಎದುರಿಸುತ್ತಿರುವ ವರ್ತಮಾನದ ಸಮಸ್ಯೆಗಳನ್ನು ಕ್ಷೇತ್ರಾಧ್ಯಯನದ ಮೂಲಕ ಕಂಡು ಹಿಡಿದು ಸೂಕ್ತ ಪರಿಹಾರಗಳನ್ನು ಸೂಚಿಸುವ ನಿಟ್ಟಿನಲ್ಲಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಅಧ್ಯಯನದ ಅವಧಿಯನ್ನು ೨೦೦೦-೦೧ ರಿಂದ ೨೦೧೦-೧೧ ರವರೆಗೆ ಸೀಮಿತಗೊಳಿಸಿಕೊಂಡು ಜಾಗತೀಕರಣದ ಹಿನ್ನೆಲೆಯಲ್ಲಿ ಸಮಸ್ಯೆಗಳನ್ನು ವಿಶ್ಲೇಷಿಸಲಾಗಿದೆ. ಅಧ್ಯಯನದ ವ್ಯಾಪ್ತಿಯನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಸೀಮಿತಗೊಳಿಸಲಾಗಿದೆ ಹಾಗೂ ಆನುಷಂಗಿಕ ದತ್ತಾಂಶಗಳನ್ನು ಪೂರಕವಾಗಿಟ್ಟುಕೊಂಡು ಮೂಲ ದತ್ತಾಂಶಗಳನ್ನು ವಿಶ್ಲೇಷಣೆಗೆ ಬಳಸಿಕೊಳ್ಳಲಾಗಿದೆ.

೧.೪ ಅಧ್ಯಯನದ ಉದ್ದೇಶಗಳು

ಪ್ರಸಕ್ತ ಅಧ್ಯಯನದ ಉದ್ದೇಶಗಳಿವು:

- ಗೇರು ಉತ್ಪಾದಕರು ಎದುರಿಸುತ್ತಿರುವ ಸಮಸ್ಯೆಗಳನ್ನು ಕ್ಷೇತ್ರಾಧ್ಯಯನದ ಮೂಲಕ ಕಂಡು ಹಿಡಿಯುವುದು.
- ಗೇರು ಸಂಸ್ಕರಣಾ ಘಟಕಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಮತ್ತು ಅವುಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ಸ್ಥಿತಿಗತಿಗಳನ್ನು ಕ್ಷೇತ್ರಾಧ್ಯಯನದ ಮೂಲಕ ವಿಶ್ಲೇಷಿಸುವುದು.
- ಗೇರು ಬೀಜ ಮತ್ತು ಉಪ ಉತ್ಪನ್ನಗಳ ಮಾರಾಟಕ್ಕೆ ಮತ್ತು ನಿರ್ಯಾತಕ್ಕೆ ಸಂಬಂಧಿಸಿದ ಸಮಸ್ಯೆಗಳ ಅಧ್ಯಯನ ನಡೆಸುವುದು.
- ಗೇರು ಉತ್ಪಾದನೆ, ಸಂಸ್ಕರಣೆ ಮತ್ತು ಮಾರಾಟಕ್ಕೆ ಸಂಬಂಧಿಸಿದ ಸಮಸ್ಯೆಗಳ ಅಧ್ಯಯನದ ಫಲಿತಗಳನ್ನು ಕ್ರೋಢೀಕರಿಸಿ ಪರಿಹಾರ ಸೂಚಿಸುವುದು. ಈ ಎಲ್ಲಾ ಉದ್ದೇಶಗಳಿಗೆ ಪೂರಕವಾಗಿ ಅಧ್ಯಾಯ ರೂಪೀಕರಣ ಮಾಡಲಾಗಿದೆ.

೧.೫ ಅಧ್ಯಯನ ವಿಧಾನ

ಪ್ರಸಕ್ತ ಅಧ್ಯಯನವನ್ನು ಉತ್ಪಾದನೆ, ಸಂಸ್ಕರಣೆ ಮತ್ತು ಮಾರಾಟ ಎಂಬ ಮೂರು ವಿಭಾಗಗಳಾಗಿ ವಿಂಗಡಿಸಿ ಕ್ಷೇತ್ರಾಧ್ಯಯನದ ಮೂಲಕ ಮೂಲ ದತ್ತಾಂಶಗಳನ್ನು ಸಂಗ್ರಹಿಸಲಾಗಿದೆ. ಅನುಷಂಗಿಕ ದತ್ತಾಂಶಗಳನ್ನು ಈ ಕೆಳಗಿನ ಕೇಂದ್ರಗಳಿಂದ ಸಂಗ್ರಹಿಸಲಾಯಿತು.

- Directorate of Cashew and Cocoa Development Cochin.
- ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಹೆಬ್ಬಾಳ, ಬೆಂಗಳೂರು.
- ನಿರ್ದೇಶಕರು, ತೋಟಗಾರಿಕಾ ಇಲಾಖೆ ಲಾಲ್‌ಬಾಗ್ ಬೆಂಗಳೂರು.
- ಜಿಲ್ಲಾ ಸಂಖ್ಯಾ ಸಂಗ್ರಹಣಾ ಕೇಂದ್ರ ದ.ಕ. ಮಂಗಳೂರು.
- ತೋಟಗಾರಿಕಾ ಇಲಾಖೆ, ಜಿಲ್ಲಾ ಪಂಚಾಯತ್, ದ.ಕ. ಜಿಲ್ಲೆ ಮಂಗಳೂರು.
- ಕೃಷಿ ವಿಜ್ಞಾನ ಕೇಂದ್ರ ಎಕ್ಕೂರು, ಮಂಗಳೂರು.
- ಕರ್ನಾಟಕ ಗೇರು ಅಭಿವೃದ್ಧಿ ನಿಗಮ, ಮಂಗಳೂರು.
- ನಿರ್ದೇಶನಾಲಯ, ರಾಷ್ಟ್ರೀಯ ಗೇರು ಸಂಶೋಧನಾ ಕೇಂದ್ರ ಪುತ್ತೂರು.
- ನಿರ್ದೇಶನಾಲಯ, ರಾಷ್ಟ್ರೀಯ ಗೇರು ಸಂಶೋಧನಾ ಕೇಂದ್ರ, ಉಳ್ಳಾಲ.
- ಗ್ರಂಥಾಲಯ, ಮಂಗಳೂರು ವಿಶ್ವವಿದ್ಯಾನಿಲಯ ಮಂಗಳೂರು.
- ಗ್ರಂಥಾಲಯ ಕನ್ನಡ ವಿ. ವಿ. ಹಂಪಿ.
- ಹಾ. ಮಾ. ನಾ. ಸಂಶೋಧನಾ ಕೇಂದ್ರ ಉಜಿರೆ.

ಮೂಲ ದತ್ತಾಂಶಗಳನ್ನು ನಾಲ್ಕು ಪ್ರಶ್ನಾವಳಿಗಳ ಮೂಲಕ ಸಂಗ್ರಹಿಸಲಾಯಿತು. (ಅನುಬಂಧ ೧, ೨, ೩ ಮತ್ತು ೪) ಮೊದಲನೆಯದು ಗೇರು ಬೆಳೆಗಾರರಿಗೆ ಸಂಬಂಧಿಸಿದ ಪ್ರಶ್ನಾವಳಿ. ಇದಕ್ಕೆ ಸಂಗ್ರಹಿಸಿದ ದತ್ತಾಂಶಗಳನ್ನು ನೇರ ಸಂದರ್ಶನ ವಿಧಾನದಿಂದ ಸಂಗ್ರಹಿಸಲಾಗಿದೆ. ದಕ್ಷಿಣ ಕನ್ನಡದಲ್ಲಿ ಗೇರು ಬೆಳೆಗಾರರ ಒಟ್ಟು ಸಂಖ್ಯೆ ಅಂದಾಜು ೧೫೮೦, ಅವರಲ್ಲಿ ೧೦೪ ಬೆಳೆಗಾರರನ್ನು ವಕ್ತೃಗಳಾಗಿ ಆರಿಸಿ ಪ್ರಶ್ನಾವಳಿಗಳ ಮೂಲಕ ಹಾಗೂ ನೇರ ಸಂದರ್ಶನದ ಮೂಲಕ ಮೂಲ ದತ್ತಾಂಶ ಕ್ರೋಢೀಕರಿಸಲಾಗಿದೆ. ವಕ್ತೃಗಳನ್ನು ಆರಿಸುವಾಗ ದ.ಕ. ಜಿಲ್ಲೆಯ ಎಲ್ಲಾ ತಾಲೂಕುಗಳಿಗೆ ಪ್ರಾತಿನಿಧ್ಯ ನೀಡಲಾಗಿದೆ. ದೊಡ್ಡ, ಮಧ್ಯಮ ಮತ್ತು ಸಣ್ಣ ಬೆಳೆಗಾರರುಗಳಿಂದ ಸೂಕ್ತ ವಕ್ತೃಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ವಕ್ತೃಗಳ ಆಯ್ಕೆಯಲ್ಲಿ ಎಲ್ಲಾ ವರ್ಗಗಳಿಗೆ ಸೂಕ್ತ ಪ್ರಾತಿನಿಧ್ಯ ನೀಡಲಾಗಿದೆ.

ಎರಡನೇ ಪ್ರಶ್ನಾವಳಿ ಗೇರು ಬೀಜ ಸಂಸ್ಕರಣೆ ಮತ್ತು ನಿರ್ಯಾತಕ್ಕೆ ಸಂಬಂಧಿಸಿದುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ೫೦ ಗೇರು ಬೀಜ ಸಂಸ್ಕರಣಾ ಘಟಕಗಳಿವೆ. ಅವುಗಳಲ್ಲಿ ೧೫ ಘಟಕಗಳನ್ನು ಅಧ್ಯಯನಕ್ಕಾಗಿ ಆರಿಸಿಕೊಳ್ಳಲಾಗಿದೆ. ಹಾಗೇ ಆರಿಸಿಕೊಳ್ಳುವಾಗ ಐದೂ ತಾಲೂಕುಗಳಿಗೆ ಪ್ರಾತಿನಿಧ್ಯ ಸಿಗುವ ಹಾಗೆ ಎಚ್ಚರವಹಿಸಲಾಗಿದೆ. ದೊಡ್ಡ, ಮಧ್ಯಮ ಮತ್ತು ಸಣ್ಣ ಘಟಕಗಳನ್ನೂ ಕೂಡಾ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ವಿವಿಧ ವರ್ಗಗಳಿಗೆ ಪ್ರಾತಿನಿಧ್ಯ ನೀಡಲಾಗಿದೆ.

ಮೂರನೆಯ ಪ್ರಶ್ನಾವಳಿ ಮಹಿಳಾ ಕಾರ್ಮಿಕರಿಗೆ ಸಂಬಂಧಿಸಿದುದು. ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಗೇರು ಸಂಸ್ಕರಣಾ ಘಟಕಗಳಲ್ಲಿ ಸುಮಾರು ೨೦೭೨ ಮಹಿಳಾ ಕಾರ್ಮಿಕರಿದ್ದಾರೆ. ಇವರಲ್ಲಿ ೨೦೦ ಮಹಿಳಾ ಕಾರ್ಮಿಕರನ್ನು ಅಧ್ಯಯನಕ್ಕಾಗಿ ಆಯ್ದುಕೊಳ್ಳಲಾಗಿದೆ. ಇವರು ವಿವಿಧ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯಿಂದ ಬಂದವರು. ಇವರ ಸ್ಥಿತಿಗತಿಗಳನ್ನು ಅರಿಯಲು ಪ್ರತ್ಯೇಕವಾದ ಪ್ರಶ್ನಾವಳಿಯನ್ನು ರೂಪಿಸಲಾಗಿದೆ. ಮಹಿಳಾ ಕಾರ್ಮಿಕರ ಸ್ಥಿತಿಗತಿಗಳ ಅಧ್ಯಯನ ಮಹಿಳಾ ಸಬಲೀಕರಣದ ಬಗ್ಗೆ ಬೆಳಕು ಚೆಲ್ಲುವುದರಿಂದ ಮಹಿಳಾ ಕಾರ್ಮಿಕರ ಅಧ್ಯಯನವನ್ನು ಪ್ರತ್ಯೇಕವಾಗಿ ನಡೆಸಲಾಗಿದೆ.

ಕೊನೆಯ ಪ್ರಶ್ನಾವಳಿ ಗೇರು ಬೀಜ ವ್ಯಾಪಾರಗಾರರಿಗೆ ಸಂಬಂಧಿಸಿದುದು. ಗೇರು ಬೀಜವನ್ನು ಇತರೆ ಕೃಷಿ ಉತ್ಪನ್ನಗಳ ಜೊತೆ ಖರೀದಿಸಿ ವ್ಯಾಪಾರ ಮಾಡುವವರ ಸಂಖ್ಯೆ ಹೆಚ್ಚು. ದ.ಕ. ಜಿಲ್ಲೆಯ ಒಟ್ಟು ೩೮ ಗೇರು ವ್ಯಾಪಾರಿಗಳಲ್ಲಿ ಹನ್ನೆರಡು ಗೇರು ವ್ಯಾಪಾರಿಗಳನ್ನು ಆಯ್ದುಕೊಳ್ಳಲಾಗಿದೆ. ಮತ್ತು ಜಿಲ್ಲೆಯ ಎಲ್ಲಾ ತಾಲೂಕುಗಳಿಗೂ ಪ್ರಾತಿನಿಧ್ಯ ನೀಡಲಾಗಿದೆ.

ನಾಲ್ಕು ಪ್ರಶ್ನಾವಳಿಗಳನ್ನು ಬಳಸಿ ನೇರ ಸಂದರ್ಶನ ವಿಧಾನದಿಂದ ದೊರೆತ ಮೂಲ ದತ್ತಾಂಶಗಳನ್ನು ಕೋಷ್ಟಕಗಳನ್ನಾಗಿ ಮಾಡಿ ವಿಶ್ಲೇಷಣೆಗೆ ಬಳಸಲಾಗಿದೆ. ಸೂಕ್ತ ಮತ್ತು ಸಾಂದರ್ಭಿಕ ರೇಖಾ ಚಿತ್ರಗಳ ಸಹಾಯದಿಂದಲೂ ವಿಶ್ಲೇಷಣೆ ನಡೆಸಲಾಗಿದೆ. ಗಣಿತದ ಇವೆರಡು ಸಲಕರಣೆಗಳ ಜೊತೆಗೆ ಅಗತ್ಯವಿರುವಲ್ಲಿ ಸಂಖ್ಯಾ ಶಾಸ್ತ್ರದ ಪರಿಕರಗಳನ್ನು ಬಳಸಿಕೊಳ್ಳಲಾಗಿದೆ. ಗೇರು ಉತ್ಪಾದನೆ ಮತ್ತು ನಿರ್ಯಾತದ ಭವಿಷ್ಯವನ್ನು ಪ್ರವೃತ್ತಿ ಪ್ರಕ್ಷೇಪಣಾ (Trend Projection) ವಿಧಾನದ ಮೂಲಕ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.. ಸರಳವಾದ ಗಣಿತದ ಸಲಕರಣೆಗಳನ್ನಷ್ಟೇ ಈ ಅಧ್ಯಯನದಲ್ಲಿ ಬಳಸಿಕೊಂಡಿದ್ದು, ಪ್ರಸ್ತುತ ಅಧ್ಯಯನಕ್ಕೆ ಇದು ಪೂರಕವಾಗಿದೆ.

೧.೫ ಅಧ್ಯಾಯ ರೂಪೀಕರಣ

ಪ್ರಸಕ್ತ ಅಧ್ಯಯನದ ಅನುಕ್ರಮಣಿಕೆ ಹೀಗಿರುತ್ತದೆ.

- ಮೊದಲನೆಯ ಅಧ್ಯಾಯವು ಪ್ರಸ್ತಾವನೆ ಮತ್ತು ಸಂಶೋಧನೆಯ ವಿನ್ಯಾಸವನ್ನು ಒಳಗೊಂಡಿರುತ್ತದೆ. ಇದರಲ್ಲಿ ಸಾಹಿತ್ಯ ಸಮೀಕ್ಷೆ, ಸಮಸ್ಯೀಕರಣ, ಪ್ರಸಕ್ತ ಅಧ್ಯಯನದ ಮಹತ್ವ, ಉದ್ದೇಶಗಳು ಹಾಗೂ ಅಧ್ಯಯನದ ವಿಧಾನಗಳನ್ನು ಅಳವಡಿಸಲಾಗಿದೆ.
- ಎರಡನೆ ಅಧ್ಯಾಯವು ಭಾರತದ ಆರ್ಥಿಕತೆಯಲ್ಲಿ ಗೇರು ಉದ್ಯಮದ ಮಹತ್ವ, ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ ಭಾರತದ ಸ್ಥಾನಮಾನ ಮತ್ತು ಸಮಸ್ಯೆಗಳ ವಿಶ್ಲೇಷಣೆ ಮತ್ತು ಗೇರು ಉದ್ದಿಮೆಯಲ್ಲಿನ ಇತ್ತೀಚೆಗಿನ ಆವಿಷ್ಕಾರಗಳ ಬೆಳವಣಿಗೆಗಳ ಹಾಗೂ ಪ್ರಸ್ತುತ ವಿದ್ಯಮಾನದಲ್ಲಿ ಅವುಗಳ ಮಹತ್ವದ ಬಗ್ಗೆ ಚರ್ಚಿಸುತ್ತದೆ.
- ಮೂರನೇ ಅಧ್ಯಾಯದಲ್ಲಿ ಕರ್ನಾಟಕದಲ್ಲಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೇರು ಉದ್ದಿಮೆಯ ಬೆಳವಣಿಗೆ, ಅದಕ್ಕೆ ಸಾಂಸ್ಥಿಕ ನೆರವು ಮತ್ತು ಆರ್ಥಿಕತೆಯಲ್ಲಿ ಅದರ ಮಹತ್ವದ ಬಗ್ಗೆ ವಿಶ್ಲೇಷಣೆ ನಡೆಸಲಾಗಿದೆ.
- ನಾಲ್ಕನೆಯ ಅಧ್ಯಾಯವು ಅಧ್ಯಯನ ಕ್ಷೇತ್ರದ ಪರಿಚಯ ಮತ್ತು ಗೇರು ಬೆಳೆಗಾರರ ಸಮಸ್ಯೆಗಳನ್ನು ಕ್ಷೇತ್ರಾಧ್ಯಯನದ ಆಧಾರದಲ್ಲಿ ವಿಶ್ಲೇಷಿಸಲಾಗಿದೆ.
- ಐದನೇ ಅಧ್ಯಾಯದಲ್ಲಿ ಗೇರು ಸಂಸ್ಕರಣಾ ಘಟಕಗಳ, ಉದ್ದಿಮೆದಾರರ ಮತ್ತು ಕಾರ್ಮಿಕರ ಸಮಸ್ಯೆಗಳನ್ನು ಮೂಲ ದತ್ತಾಂಶಗಳ ಆಧಾರದಲ್ಲಿ ಕಂಡು ಹಿಡಿದು ವಿಶ್ಲೇಷಿಸಲಾಗಿದೆ.

➢ ಆರನೇ ಅಧ್ಯಾಯದಲ್ಲಿ ಗೇರು ಬೀಜ ಮಾರಾಟಗಾರರ ಮತ್ತು ನಿರ್ಯಾತಗಾರರ ಸಮಸ್ಯೆಗಳನ್ನು ಮೂಲ ದತ್ತಾಂಶಗಳ ಆಧಾರದಲ್ಲಿ ಕೂಲಂಕಷವಾಗಿ ಚರ್ಚಿಸಲಾಗಿದೆ.

➢ ಏಳನೇ ಅಧ್ಯಾಯವು ಸಂಶೋಧನೆಯ ಫಲಿತಗಳನ್ನು ಸಂಕ್ಷಿಪ್ತವಾಗಿ ದಾಖಲಿಸಿ ಪರಿಹಾರಗಳನ್ನು ಸೂಚಿಸುತ್ತದೆ.

➢ ಎಂಟನೇ ಅಧ್ಯಾಯವು ಉಪ ಸಂಹಾರವಾಗಿರುತ್ತದೆ.

ಉಲ್ಲೇಖಗಳು ಮತ್ತು ಟಿಪ್ಪಣಿಗಳು

೧. ಗೇರು ಬೀಜದ ವ್ಯಾಪಾರಿ ಸುಳ್ಯದ **ಹಾಜಿ ಅಬೂಬಕರ್** ನೀಡಿದ ಮಾಹಿತಿ.

೨. **ಶಿವರಾಮ ರೈ** ೧೯೮೨, ಗೋಡಂಬಿ, ಪ್ರಸಾರಾಂಗ ಮೈಸೂರು ವಿ. ವಿ ಪುಟ ೧.

೩. ಅದೇ ಪುಟ ೨.

೪. ಅದೇ ಪುಟ ೪.

೫. **Sundersanan, P.K.** 2001, "Cashew nut Good for Health". The Cashew15(1) PP-32-34.

೬. **S. S. Guledagudda**, 2005, Production and Export Performance of Cashew. An economic analysis. Thesis submitted to the University of Agriculture Sciences of Dharwad Page No. 5.

೭. **Julia F Morton** (1961), "The Cashew's Brighter Future". Economic Botany Vol.15 No.1 (Jan-March 1961) PP 57-78.

೮. **Venkatraman T.M.** (1979), "Cashew Development Programme in India". In Proceedings of the International Cashew Symposium. Cashew – Research and Development Cochin Kerala. PP. 232-236.

೯. **Kannan K.P.** 1983, Cashew Development in India-Potentialities and Constraints-Published by Agricole Publishing Authority New Delhi.

೧೦. **Suresh Zantye** (1998), "Cashew Processing and Marketing The Cashew" 12(3) PP 161-164.

೧೧. **Suriya Narayanan.P.** 1998, "Cashew- The Wonder Nut-Elixir of life". Cashew Bulletin 35(7) PP-3-7.

೧೨. **Giridhar Praphu** 1998, "Cashew nuts- Is India's Global Leadership sustainable?" The Cashew 12(3) PP -169-184.

೧೩. **Pal Arindam** and **Somayaji K.S** (1999), "A Status Paper on Cashew Processing Industry" The Cashew 13(3) PP 41-56.

೧೪. **Balasubramanian D.** (2001) "Cashew Processing Industries in India (Overall Analysis)" The Cashew 16(3) PP 21-23.

୧୫. **K.C. John** (2002), "Cashew: Cashing in on Export". Economic and Political weekly, Vol 37. No 32 (Aug 10-16-2008) PP 3324-3325.

୧୬. **Sundaravarada Rajan K.R** and **Rajesh Kumar K.R.** 2002,"Production and Trade Instability in Cashew-an Economic Analysis." The Cashew 16(1) PP-18-22.

୧୭. **Sharma M.R.** (2002), "Credit Support from NABARD for Development of Cashewnut" The Cashew 16(2) PP 5-22.

୧୮. **Mridul Eapen, J. Jeyaranjan, K.N. Harilal, Padmini Swaminatha & Nazreen Kanji** 2003, "Liberalisation Gender and livelihoods: The cashewnut case. Working paper 3" A Report By Internation Institute for Environment and Development."

୧୯. **Bhat M.G., Nayak M.G.** and **Nagaraja.K.V.** 2006. "Prospects cashew in Next Decade with Reference to North Eastern States." The cashew 20(2) PP-27-42.

୨୦. **Wadkar.S.S Bagade S.R, Jalgankar V.N**-2007, Indian Cashew processing and Export Published by Pointer Publishers Jaipur.

୨୧. **Dr. Rajmohan Pillai**, Dr.P.Shantha-2008. World Cashew Industry-An Indian Pergpective. Published by R. Tajan Pillai Foundations Kollam.

୨୨. **Nair G.K.** (2009) Business Line, 22nd August 2009.

୨୩. **Venkatesh.N. Hubballi** 2009, "Transfer of Technology and Development Aspects of Cashew"- In Cashew Research and Development in Humid Tropics with Emphasis on Cashew Apple processing PP 119-124.

୨୪. **K.N.Rao** (2009), "Cashew Crop Insurance by Agriculture Insurance Company of India Ltd" In 7th National Seminar Cashew Development in India Enhancement of Production and Productivity Nov. 2009. Bhuvaneshwar Orissa PP 74-78.

୨୫. **Chavan S.A** and **Gawankar M.S** (2010), "Prospects of on Farm Processing in Cashew" The Cashew and Cocoa Journal 11(2) PP 6-10.

୨୬. **Shahal Hassan Musaliar T.K** -2009 "Challenges And Opportunities for Indian Cashews In Global Market". In 7th National Seminar-Cashew Development in India. Enhancement of Production and Productivity. Nov 2009 Bhuvaneswar Orissa PP 60-63.

୨୭. **Mahesh K.S** and **Appanna C.P** (2010), "Role of NABARD in Cashew Promotion" The Cashew and Cocoa Journal 11(3) PP 6-8.

୨୮. **Shalini Yadav** 2010, "Economics of Cashew in India" A Report. Department of Economics Analysis and Research. NABARD Mumbai.

୨୯. **Dr. Vigneshwara Varmudy** (2011), "Cashew: Time to Raise Production". Facts for You Vol 31 No. 11. PP16-19.

೩೦. **Salam M.A.**, 1996 "Traditional Rubber Planters Turn to Cashew". The cashew10 (2) PP-3-4.

೩೧. **Gulegudda S. S.,** 2005 "Production and Export performance of cashew. An Economic Analysis." Thesis submitted to university of Agricultural sciences Dharwad.

೩೨. **S.S. Guledagudda, B.L. Patil** and **G.K Hiremath** (2006), "An Appraisal of Financial Feasibility of Investment in Cashew Plantations in Karnataka" Agricultural Situation in India 62(12) PP 777 -779.

೩೩. **Venkattakumar R.,** 2006, "Socio Economic Impact of cashew Cultivation in Kannur District of Kerala India". Journal of Plantation Crops. 34(3) PP-709-714.

೩೪. **Guledagudda.S.S., Patil B.L, Patil A.A.** and **Basavaraja H**., 2007, "Marketing Costs and Margins of Raw Cashewnut in Karnataka" The cashew 21(4) PP-24-37.

೩೫. **Harishkumar K.** and **Chinnappa B.** 2010, "Economic Analysis of Cashew Processing in Karnataka". The Cashew and cocoa Journal 2(4) PP-12-20.

೩೬. **Paul Alexander Rego,** 1991, "Resource use efficiency in cashew cultivation-A case study in Dakshina Kannada District" Ph.D Dissertation Mangalore University Mangalore.

೩೭. **Balasubramanian D.** 2000, "Status Report on Cashew Processing Industries of Dakshina Kannada". The Cashew 15(2) :12-25.

೩೮. **Sudarshan Kumar** 2009, "Socio-Economic Analysis of cashewnut processing Unit in Karkala Taluk". Unpublished M. Phil Dissertation submitted to Vinayaka Missions University Salem, Tamil Nadu.

ಅಧ್ಯಾಯ ೨


ಗೇರು ಕೃಷಿ ಮತ್ತು ಉದ್ದಿಮೆ

ಅಧ್ಯಾಯ ೨

ಗೇರು ಕೃಷಿ ಮತ್ತು ಉದ್ದಿಮೆ

ಪ್ರಸ್ತುತ ಅಧ್ಯಾಯ ಗೇರು ಕೃಷಿ ಮತ್ತು ಉದ್ದಿಮೆಯ ಕುರಿತಾದ ಸಮಗ್ರ ಮಾಹಿತಿಗಳನ್ನೊಳಗೊಂಡಿದ್ದು, ಉದ್ಯಮದ ಹಲವು ಆಯಾಮಗಳನ್ನು ಪರಿಚಯಿಸುತ್ತದೆ. ಜಾಗತಿಕ ಮಟ್ಟದಲ್ಲಿ ಗೇರು ಉದ್ಯಮದ ಸ್ಥಿತಿಗತಿಗಳ ಬಗೆಗಿನ ಸ್ಥೂಲವಾದ ಪರಿಚಯದೊಂದಿಗೆ ಭಾರತದಲ್ಲಿ ಗೇರುಕೃಷಿ, ಸಂಸ್ಕರಣೆ, ಆಯಾತ ಹಾಗೂ ನಿರ್ಯಾತಗಳ ಕುರಿತಂತೆ ಸಮಗ್ರವಾದ ವಿವರಣೆಯನ್ನು ಒಳಗೊಂಡಿದ್ದು ಒಟ್ಟು ಉದ್ಯಮದ ಬೆಳವಣಿಗೆಯ ಮೇಲೆ ಬೆಳಕು ಚೆಲ್ಲುತ್ತದೆ.

ಭಾರತದಲ್ಲಿ ಕೃಷಿ ಒಂದು ಜೀವನ ವಿಧಾನ ಮತ್ತು ಒಂದು ಸಂಸ್ಕೃತಿಯೆನಿಸಿದೆ. ಶತ ಶತಮಾನಗಳಿಂದ ಭಾರತೀಯ ಜನಜೀವನದ ಆಚಾರ, ವಿಚಾರ, ಸಂಸ್ಕೃತಿ, ಆರ್ಥಿಕ ಚಿಂತನೆ, ಸಾಮಾಜಿಕ ಜೀವನ ಪದ್ಧತಿಗಳನ್ನು ಕೃಷಿಯು ಪ್ರಭಾವಿಸಿದೆ. ಆ ಕಾರಣದಿಂದ ಸ್ವಾತಂತ್ರ್ಯ ದೊರೆತ ಅನಂತರವೂ ದೇಶದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಅಗತ್ಯವುಳ್ಳ ಯೋಜನೆಗಳನ್ನು ರೂಪಿಸಲು ಕೃಷಿಯನ್ನೇ ಕೇಂದ್ರ ಬಿಂದುವಾಗಿಸಬೇಕಾಯಿತು. ಭಾರತೀಯ ಕೃಷಿ ಕ್ಷೇತ್ರವು ಬೆಳವಣಿಗೆಯಲ್ಲಿ ಅತ್ಯಂತ ಗುರುತರವಾದ ಮಹತ್ತರ ದೂರವನ್ನು ಕ್ರಮಿಸಿದೆ. ಹಿಂದೆ ಕೇವಲ ಜೀವನೋಪಾಯದ ಸಾಧನವಾಗಿದ್ದ ಮತ್ತು ಆಹಾರ ಧಾನ್ಯಗಳ ಉತ್ಪಾದನೆಗಷ್ಟೇ ಸೀಮಿತವಾಗಿದ್ದ ಕೃಷಿ, ಇಂದು ಮಾರುಕಟ್ಟೆ ಕೇಂದ್ರಿತ ವ್ಯವಸಾಯವಾಗಿ ವಿನೂತನ ತಿರುವನ್ನು ಪಡೆದಿದೆ. ಬಗೆ ಬಗೆಯ ಮೌಲ್ಯ ವರ್ಧಿತ ಕೃಷಿ ಉತ್ಪನ್ನಗಳ ಉತ್ಪಾದನೆಯ ಹೆಚ್ಚಳದಿಂದ ಒಟ್ಟು ರಾಷ್ಟ್ರೀಯ ಕೃಷಿ ಉತ್ಪನ್ನದಲ್ಲಿ ಗಮನಾರ್ಹವಾದ ಬದಲಾವಣೆಯಾಗಿದೆ. ಕೃಷಿಗೆ ಸಂಬಂಧಿಸಿದ ವಿವಿಧ ಚಟುವಟಿಕೆಗಳಾದ ತೋಟಗಾರಿಕೆ, ಜಾನುವಾರು ಪಾಲನೆ, ಮೀನು ಕೃಷಿ ಇತ್ಯಾದಿ ಚಟುವಟಿಕೆಗಳು ಕೃಷಿ ಕ್ಷೇತ್ರದ ವ್ಯಾಪ್ತಿಯನ್ನು ಹೆಚ್ಚಿಸುವುದರೊಂದಿಗೆ ಕೃಷಿ ಕ್ಷೇತ್ರದಲ್ಲಿ ಆಗಿರುವ ಧನಾತ್ಮಕ ಬದಲಾವಣೆಯ ದ್ಯೋತಕವಾಗಿರುವುದನ್ನು ಗಮನಿಸಬಹುದಾಗಿದೆ. ಭಾರತದ ಒಟ್ಟು ರಾಷ್ಟ್ರೀಯ ಆದಾಯದಲ್ಲಿ ೨೦೧೨-೧೩ ರಲ್ಲಿ ಪ್ರಾಥಮಿಕ ವಲಯ ಶೇ. ೧೭.೪, ಆನುಷಂಗಿಕ ವಲಯ ಶೇ. ೨೫.೭ ಹಾಗೂ ಸೇವಾ ವಲಯ ಶೇ. ೫೬.೯ರಷ್ಟು ಭಾಗವನ್ನು ಹೊಂದಿರುವುದನ್ನು ಕೆಳಗಿನ ಚಿತ್ರ ೨.೧ ರಲ್ಲಿ ತೋರಿಸಲಾಗಿದೆ.



ಚಿತ್ರ ೨.೧ ರಾಷ್ಟ್ರೀಯ ಆಧಾಯದಲ್ಲಿ ವಿವಿಧ ವಲಯಗಳ ಪಾಲು



ಭಾರತದ ಬಹು ಸಂಖ್ಯೆಯ ಜನರು ತಮ್ಮ ಆಹಾರ ಅಸ್ತಿತ್ವಕ್ಕಾಗಿ ಕೃಷಿ ಹಾಗೂ ಕೃಷಿ ಸಂಬಂಧಿ ಚಟುವಟಿಕೆಗಳನ್ನು ಅವಲಂಬಿಸಿದ್ದಾರೆ. ಸ್ವಾತಂತ್ರ್ಯದ ಹೊಸ್ತಿಲಿನಲ್ಲಿ ಕೃಷಿಯ ದೇಣಿಗೆ ನಮ್ಮ ಒಟ್ಟು ದೇಶೀಯ ಉತ್ಪಾದನೆ (GDP) ೫೦% ಇದ್ದು, ಅದೀಗ ಕ್ರಮೇಣವಾಗಿ ಇಳಿಯುತ್ತಿದ್ದು ೨೦೧೨-೧೩ರಲ್ಲಿ ಇದು ೧೭.೪%ಕ್ಕೆ ಇಳಿದಿದೆ. ಕೃಷಿಯ ತಲಾ ಆದಾಯ ಕನಿಷ್ಠ ಮಟ್ಟಕ್ಕೆ ಕುಸಿದಿರುವುದು ಕಂಡು ಬಂದಿದ್ದು, ಕೃಷಿ ಮತ್ತು ಇತರೆ ವಲಯಗಳ ನಡುವಣ ಅಂತರ ಹೆಚ್ಚುತ್ತಿದೆ. ಅದರೊಂದಿಗೆ ಸರಾಸರಿ ಕೃಷಿ ಹಿಡುವಳಿಯು ಕುಸಿಯುತ್ತಿದ್ದು ೧೯೯೫-೯೬ ರಲ್ಲಿ ೧.೪೧ ಹೆಕ್ಟೇರುಗಳಿದ್ದು ಕ್ರಮೇಣ ೨೦೦೦-೦೧ ರಲ್ಲಿ ೧.೩೩ ಹೆಕ್ಟೇರುಗಳಾಗಿತ್ತು. ೨೦೦೫-೦೬ರಲ್ಲಿ ಇದು ೧.೨೩ ಹೆಕ್ಟೇರಿಗೆ ಕುಸಿದಿದೆ. ೨೦೧೦-೧೧ರಲ್ಲಿ ಇದು ೧.೧೬ ಹೆಕ್ಟೇರಿಗೆ ಕುಸಿದಿದೆ. ಶೇಕಡಾ ೮೨ ರಷ್ಟು ರೈತರು ಸಣ್ಣ ಹಾಗೂ ಅಂಚಿನ ರೈತರುಗಳಾಗಿದ್ದಾರೆ ಮತ್ತು ತೀರಾ ಕನಿಷ್ಠ ಆದಾಯವನ್ನು ಹೊಂದಿದ್ದಾರೆ.[೧] ಕೇಂದ್ರ ಅಂಕಿ ಅಂಶ ಕಛೇರಿ ಹಾಗೂ ಕಾರ್ಯಕ್ರಮ ಅನುಷ್ಠಾನ ಸಚಿವಾಲಯದ ೨೦೧೨-೧೩ರ ವರದಿಯ ಪ್ರಕಾರ ಭಾರತದ ಒಟ್ಟು ದೇಶೀ ಉತ್ಪನ್ನ ಉತ್ಪಾದನಾಂಗ ವೆಚ್ಚ ೨೦೦೪-೦೫ ರ ಸ್ಥಿರ ಬೆಲೆ ಆಧಾರದ ಅನ್ವಯ ರೂ. ೫೫,೦೫,೪೩೭ ಕೋಟಿಯೆಂದು ಅಂದಾಜಿಸಲಾಗಿದೆ.

ಭಾರತದ ಕೃಷಿ ಇಬ್ಬಗೆಯ ಸಮಸ್ಯೆಗಳನ್ನು ಎದುರಿಸುತ್ತಿದೆ. ಮೊದಲನೆಯ ಸಮಸ್ಯೆ ಕಡಿಮೆ ತಲಾ ಆದಾಯ ಮತ್ತು ಕನಿಷ್ಠ ಅಭಿವೃದ್ಧಿಯಾದರೆ, ಎರಡನೆಯ ಸಮಸ್ಯೆ ಆಹಾರ ಹಾಗೂ ಪೌಷ್ಟಿಕತೆಯ ಭದ್ರತೆ ಒದಗಿಸುವುದು. ಭಾರತ ಪ್ರಪಂಚದ ಕೇವಲ ಶೇಕಡಾ ೨.೩ ರಷ್ಟು ಭೂ ಪ್ರದೇಶವನ್ನು ಹೊಂದಿದ್ದು, ಪ್ರಪಂಚದ ಶೇ. ೧೭.೫ ರಷ್ಟು ಜನರಿಗೆ ಆಹಾರದ ಭದ್ರತೆಯನ್ನು ಒದಗಿಸಬೇಕಾಗಿದೆ. ಇದು ಸದ್ಯದ ಪರಿಸ್ಥಿತಿಯಲ್ಲಿ ಬಹುದೊಡ್ಡ ಸವಾಲಾಗಿ ಪರಿಣಮಿಸಿದೆ. ಅಷ್ಟು ಮಾತ್ರವಲ್ಲ ಮುಂದಿನ ದಿನಗಳಲ್ಲಿ ಜನಸಂಖ್ಯಾ ಹೆಚ್ಚಳದೊಂದಿಗೆ ತಲಾ ಆದಾಯ ಹಾಗೂ ಜೀವನ ಮಟ್ಟದ ಸುಧಾರಣೆಯಿಂದಾಗಿ ಆಹಾರದ ಬೇಡಿಕೆ ಮತ್ತಷ್ಟು ಏರಲಿದ್ದು, ಆಹಾರದ ಸಮಸ್ಯೆ ಮತ್ತಷ್ಟು ಬಿಗಡಾಯಿಸಲಿದೆ. ಇರುವ ಭೂ ಸಂಪತ್ತನ್ನು ಹೆಚ್ಚು ಹೆಚ್ಚಾಗಿ ಶೋಷಿಸುವುದರಿಂದ ಸುಸ್ಥಿರ ಅಭಿವೃದ್ಧಿಯ (Sustainable Development) ಕಲ್ಪನೆ ಕರಗಿ ಹೋಗುವ ಸಂಭವವೇ ಜಾಸ್ತಿ. ಆದ್ದರಿಂದ ಕೃಷಿ ಭೂಮಿಯ ಸದ್ಬಳಕೆಯ ಕುರಿತಂತೆ ಚಿಂತಿಸಬೇಕಾಗಿದ್ದು, ಸೀಮಿತ ಭೂಮಿ, ನೀರು ಹಾಗೂ ನೈಸರ್ಗಿಕ ಸಂಪನ್ಮೂಲಗಳನ್ನು ಉತ್ತಮ ತಂತ್ರಜ್ಞಾನದೊಂದಿಗೆ ಮೇಳವಿಸಿ ಅಧಿಕ ಇಳುವರಿಯನ್ನು ಪಡೆಯುವ ಪ್ರಯತ್ನ ಅತ್ಯಗತ್ಯ. ಮುಂಬರುವ ದಿನಗಳಲ್ಲಿ ಕೃಷಿ ಮೇಲಿನ ಒತ್ತಡ ಮತ್ತಷ್ಟು ಹೆಚ್ಚುವ ಸಾಧ್ಯತೆಗಳಿದ್ದು, ಈ ಹೆಚ್ಚುವರಿ ಸಂಖ್ಯೆಯನ್ನು ಹೀರಿಕೊಳ್ಳುವ ನಿಟ್ಟಿನಲ್ಲಿ ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಅವಕಾಶಗಳು ಸೃಷ್ಟಿಯಾಗಬೇಕಾಗಿದೆ. ಕೃಷಿ ರಂಗದಲ್ಲಿ ಆಹಾರ ಉತ್ಪಾದನೆಯನ್ನು ಹೆಚ್ಚಿಸುವುದರೊಂದಿಗೆ ನಾನಾ ಬಗೆಯ ಬೆಳೆಗಳನ್ನು ಬೆಳೆಸುವ ಅಗತ್ಯ ಇದೆ. ವೈವಿಧ್ಯಮಯ ಕೃಷಿ ರಂಗದ ಬೆಳವಣಿಗೆಯಿಂದ ಗ್ರಾಮೀಣ ಜನತೆಗೆ ಸೂಕ್ತ ಉದ್ಯೋಗ, ಆದಾಯ ಹಾಗೂ ಅಭಿವೃದ್ಧಿ ಗಳಿಸಲು ಸಾಧ್ಯ. ಈ ಎಲ್ಲಾ ದೃಷ್ಟಿಯಿಂದ ಗೇರು ಕೃಷಿ ಹಾಗೂ ಸಂಸ್ಕರಣೆಗೆ ಬಹಳ ಮಹತ್ವವಿದೆ. ಇದು ರೈತರ ಆದಾಯವನ್ನು ಹೆಚ್ಚಿಸುವುದರ ಜೊತೆಗೆ ಉದ್ಯೋಗ ಅವಕಾಶಗಳನ್ನು ಸೃಷ್ಟಿಸಬಲ್ಲದು. ಮೇಲಾಗಿ ಭಾರತದಲ್ಲಿ ಕೃಷಿ ಉತ್ಪಾದನೆ ಅನಿಶ್ಚಿತವಾಗಿದ್ದು ಪ್ರಾಕೃತಿಕ ವಿಕೋಪಗಳಂತಹ ಸಮಸ್ಯೆಗಳಿಗೆ ಈಡಾಗಿದೆ. ಆದರೆ ಯಾವುದೇ ಪ್ರತಿಕೂಲ ಪರಿಸ್ಥಿತಿಯಲ್ಲಿ ಬೆಳೆಯ ಬಲ್ಲ ಗೇರು ರೈತರಿಗೆ ಉತ್ತಮ ಪರ್ಯಾಯ ಬೆಳೆಯಾಗಿ ಮೂಡಿ ಬರುವುದಲ್ಲದೆ ಗೇರು ಸಂಸ್ಕರಣಾ ಘಟಕಗಳು ಗ್ರಾಮೀಣಾಭಿವೃದ್ಧಿಯಲ್ಲಿ ನಿರ್ಣಾಯಕ ಪಾತ್ರ ವಹಿಸಬಲ್ಲವು.

೨.೧ ಗೇರು: ಹಲವು ಆಯಾಮಗಳು

ಗ್ರಾಮೀಣ ಕೈಗಾರಿಕೆಗಳು ಆರ್ಥಿಕ ಅಭಿವೃದ್ಧಿಯಲ್ಲಿ ಹಾಗೂ ವಿಕೇಂದ್ರಿಕರಣದಲ್ಲಿ ಮಹತ್ವದ ಪಾತ್ರ ಹೊಂದಿವೆ. ಇವುಗಳು ಗ್ರಾಮೀಣ ಪ್ರದೇಶದ ಸರ್ವತೋಮುಖ ಅಭಿವೃದ್ಧಿಯೊಂದಿಗೆ, ಹೆಚ್ಚುವರಿ ಶ್ರಮಿಕರನ್ನು ಸೇರ್ಪಡೆಗೊಳಿಸಿ ಅಲ್ಲಿನ ಜೀವನ ಮಟ್ಟದಲ್ಲಿ ಸುಧಾರಣೆಯನ್ನು ಸಾಧಿಸುತ್ತವೆ. ಭಾರತದ ಆರ್ಥಿಕತೆ ಕೃಷಿ ಆಧಾರಿತ ಆರ್ಥಿಕತೆ. ಗ್ರಾಮೀಣ ಪ್ರದೇಶದ ಅಭಿವೃದ್ಧಿಯೇ ಭಾರತದ ನೈಜ ಅಭಿವೃದ್ಧಿ. ಈ ನಿಟ್ಟಿನಲ್ಲಿ ಗೇರು ಉದ್ಯಮಕ್ಕೆ ಒಂದು ಮಹತ್ತರವಾದ ಸ್ಥಾನಮಾನವಿದೆ.

ತೋಟಗಾರಿಕಾ ಬೆಳೆಗಳಲ್ಲಿ ಗೇರು ಬೀಜ ಒಂದು ಪ್ರಮುಖವಾದ, ರಫ್ತು ಆಧಾರಿತ ಉತ್ಪನ್ನ ಎಂಬುದಾಗಿ ಮಾನ್ಯತೆ ಪಡೆದಿದೆ. ಸುಮಾರು ನಾಲ್ಕು ಶತಮಾನಗಳ ಹಿಂದೆ ನಮ್ಮ ದೇಶದಲ್ಲಿ ಅಪರಿಚಿತವಾಗಿದ್ದ ಗೋಡಂಬಿಯು ಈಗ ನಮ್ಮ ದೇಶವನ್ನು ಒಳಗೊಂಡಂತೆ ಪ್ರಪಂಚದ ಎಲ್ಲಾ ದೇಶಗಳಲ್ಲಿಯೂ ಮನೆ ಮಾತಾಗಿದೆ. ದಕ್ಷಿಣ ಅಮೇರಿಕಾದ ಬ್ರೆಜಿಲ್ ದೇಶದ ಆಗ್ನೇಯ ಭಾಗವು ಗೋಡಂಬಿಯ ಮೂಲ ಸ್ಥಾನವೆಂದು ನಂಬಲಾಗಿದೆ. ಮಣ್ಣಿನ ಸಂರಕ್ಷಣೆಗಾಗಿ ಪೋರ್ಚುಗೀಸ್ ವಲಸೆಗಾರರು ಗೋಡಂಬಿಯನ್ನು ನಮ್ಮ ದೇಶದ ಪಶ್ಚಿಮ ಕರಾವಳಿಗೆ ತಂದರು. ಗೇರು ಹಣ್ಣಿನ ರಸದಿಂದ ತಯಾರಿಸಿದ 'ಫೆನಿ' ಎಂಬ ಮದ್ಯ ಅವರ ಪಾನೀಯಗಳಲ್ಲಿ ಒಂದೆನಿಸಿತು. ತನ್ನ ಹೊಸ ನೆಲೆಯನ್ನು ಅತಿಯಾಗಿ ನೆಚ್ಚಿಕೊಂಡ ಗೋಡಂಬಿಯು ದೇಶದ ಪಶ್ಚಿಮ ಕರಾವಳಿಯಲ್ಲಿ ಸ್ಥಾಪಿಸಿಕೊಂಡು ಅಲ್ಲಿಂದ ಕ್ರಮೇಣ ಪೂರ್ವ ಕರಾವಳಿಯಲ್ಲಿಯೂ ಹರಡಿಕೊಂಡಿತು.[೨]

ಸಸ್ಯ ವಿಜ್ಞಾನದಲ್ಲಿ ಅನಕಾರ್ಡಿಯಂ ಆಕ್ಸಿಡೆಂಟೇಲ್ (Anacardium Occidentale) ಎಂದು ಕರೆಯಲ್ಪಡುವ ಗೇರು ಮರವು ಅನಾಕಾರ್ಡಿಯೇಸಿ (Anacardiaceae) ಎಂಬ ಕುಟುಂಬಕ್ಕೆ ಸೇರಿರುತ್ತದೆ. ಇದೊಂದು ಬಲಿಷ್ಠವಾದ ಹಾಗೂ ಕ್ಷಾಮ ಸಹಿಷ್ಣು (Drought Tolerent) ಸಸ್ಯ. ಅತ್ಯಂತ ಕಡಿಮೆ ಫಲವತ್ತಾದ ಪ್ರದೇಶದಲ್ಲಿ ಕನಿಷ್ಠ ಗಮನದ ನಡುವೆ ಬೆಳೆಯಬಲ್ಲ ಗುಣ ಉಳ್ಳದ್ದು ಮತ್ತು ಯಾವುದೇ ಬಗೆಯ ಮಣ್ಣಿಗೂ ಹೊಂದಿಕೊಂಡು ಬೆಳೆಯಬಲ್ಲದ್ದು. ಹಾಗಾಗಿ ಸಾಮಾನ್ಯವಾಗಿ ಅಂದಿನಿಂದ ಇಂದಿನವರೆಗೂ ನಿರ್ಲಕ್ಷಿತ ಪ್ರದೇಶದಲ್ಲೇ ಗೇರನ್ನು ಬೆಳೆಯಲಾಗುತ್ತಿದೆ. ಯಾವುದೇ ವಿಶೇಷ ಮುತುವರ್ಜಿ ಇಲ್ಲದೆ ಬೆಳೆಯಬಲ್ಲ ಗೇರು, ಬೇರೆ ಯಾವುದೇ ಕೃಷಿ ಮಾಡಲು ಯೋಗ್ಯವಲ್ಲದ ನೆಲದಲ್ಲೂ ಸಮೃದ್ಧವಾಗಿ ಬೇರೂರಬಲ್ಲದು. ನೆಟ್ಟು ಮೂರನೇ ವರ್ಷದಲ್ಲೇ ಹೂ ಬಿಡಲು ಪ್ರಾರಂಭಿಸುವ ಇದು ಏಳನೇ ವರ್ಷದಲ್ಲಿ ಸ್ಥಿರ ಫಲವನ್ನು ನೀಡುವ ಸಾಮರ್ಥ್ಯವನ್ನು ಗಳಿಸುತ್ತದೆ. ಮೂತ್ರಕೋಶದ ಆಕಾರದ ತಿನ್ನಲು ಯೋಗ್ಯ ಬೀಜವಾದ ಗೋಡಂಬಿ (Kidney Shaped Edible Nut) ಇದರ ಪ್ರಮುಖ ಉತ್ಪನ್ನವಾಗಿರುತ್ತದೆ. (ಅನುಬಂಧ ಛಾಯಾಚಿತ್ರ ಸಂಖ್ಯೆ ೧)

ಪೋರ್ಚ್‌ಗೀಸ್ ಹಾಗೂ ಡಚ್ ನಾವಿಕರು ಇದನ್ನು ಹರಡಲು ಮುಖ್ಯ ಕಾರಣರಾಗಿದ್ದಾರೆ. ಬ್ರೆಜಿಲ್ ದೇಶದಲ್ಲಿ ಇದನ್ನು ಕುರಿತು ಹದಿನಾರನೆಯ ಶತಮಾನದಲ್ಲಿ ಸಚಿತ್ರ ಉಲ್ಲೇಖವೊಂದನ್ನು ಕ್ರಿ. ಶ. ೧೫೫೮ ರಲ್ಲಿ ರಚಿಸಿದ ಕೀರ್ತಿ ದಿವೆಟ್ ಎಂಬ ಫ್ರೆಂಚ್ ನಿಸರ್ಗ ಪ್ರೇಮಿಗೆ ಸಲ್ಲುತ್ತದೆ. ಸ್ಪೇನ್ ನಾವಿಕರು ಭಾರತಕ್ಕೆ ಬಂದು ನೆಲೆಸಿದ ನಂತರ ಗೋಡಂಬಿಯನ್ನು ತಿಂದು ಹರಡಿರಬಹುದೆಂಬ ವಿಚಾರ ವೇದ್ಯವಾಗುತ್ತದೆ. ಇಲ್ಲಿಂದ ಅದು ಪೂರ್ವಾಭಿಮುಖವಾಗಿ ಇಂಡೋನೇಷ್ಯಾದ ಅಂಬಾಯ್ನವನ್ನು ತಲುಪಿತು. ಏಷ್ಯಾದ ಆಗ್ನೇಯ ಭಾಗಕ್ಕೆ ಬಹುಶಃ ಹಕ್ಕಿ, ಬಾವಲಿ, ಕೋತಿ ಮತ್ತು ಮಾನವ ಕೊಂಡೊಯ್ದಿರಬಹುದು. ಅಲ್ಲಿಗೆ ಈ ಬೆಳೆ ಪ್ರವೇಶಿಸಿದ ಬಗ್ಗೆ ಲಾರಿರೊ ಮೊಟ್ಟ ಮೊದಲು ೧೭೯೦ ರಲ್ಲಿ ಉಲ್ಲೇಖಿಸಿದ. ಆದರೆ ಜಾನ್ಸನ್ ಇದನ್ನು ಪೋರ್ಚುಗೀಸರು ಇನ್ನೂ ಮುಂಚೆಯೇ ತಂದು ಹರಡಿರಬಹುದು ಎಂಬ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾನೆ. ಗೋಡಂಬಿಯ ಆಹಾರ ಮೌಲ್ಯ ಔಷಧೀಯ ಗುಣಗಳು ಮತ್ತು ಪೇಯ ಪಾನೀಯಗಳು ಮುಂತಾದ ಬಗ್ಗೆ ಸ್ಪೇನ್ ಜನಕ್ಕೆ ಬಹು ಹಿಂದೆಯೇ ತಿಳಿದಿದ್ದಿತು.[೩]


ಗೇರು ಬೀಜ ತಾನು ಬೆಳೆಯುವ ಪರಿಸರಕ್ಕೆ ಅನುಗುಣವಾಗಿ ವಿವಿಧ ಬಗೆಯ ಬಣ್ಣ ಗಾತ್ರ ಹಾಗೂ ಆಕಾರವನ್ನು ಪಡೆದಿರುತ್ತದೆ. ಬೀಜದ ಒಳಭಾಗದಿಂದ ಅತ್ಯಂತ ಸ್ವಾದಿಷ್ಟವಾದ ತಿರುಳನ್ನು ಸಂಸ್ಕರಣೆಯ ಮೂಲಕ ಹೊರ ತೆಗೆಯುತ್ತಾರೆ. ಗೇರು ಬೀಜವನ್ನು ಒಡೆದು ಒಳಗೆ ಇರುವ ತಿರುಳನ್ನು ಯಂತ್ರಗಳ ಸಹಾಯದಿಂದ ಅಥವಾ ದೈಹಿಕ ಶ್ರಮದ ಮೂಲಕ ಹೊರ ತೆಗೆಯುವ ಪ್ರಕ್ರಿಯೆಯನ್ನು ಸಂಸ್ಕರಣೆ ಎಂದೆನ್ನುತ್ತಾರೆ. ಈ ತಿರುಳನ್ನೇ ಗೋಡಂಬಿ ಎಂದು ಕರೆಯುವುದು. ಗೋಡಂಬಿಗೆ ಅನೇಕ ಹೆಸರುಗಳಿವೆ. ಕನ್ನಡದಲ್ಲಿ ಗೋಡಂಬಿ, ಗೇರು, ಗೇರು ಬೀಜ, ಕೆಂಪು ಗೇರು, ಸೀಮೆ ಬಾದಾಮಿ ಮುಂತಾದ ಹೆಸರುಗಳಿಂದ ಕರೆದರೆ, ಸಂಸ್ಕೃತದಲ್ಲಿ ಅಗ್ನಿ ಕೃತ, ಅರುಶ್ಕರ, ಗುಚ್ಚ ಪುಷ್ಪ, ಪಾರ್ವತಿ, ವೃತ್ತ ಪತ್ರ ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ಬ್ರೆಜಿಲ್ ದೇಶದ 'ತುಪಿ' ಜನಾಂಗದವರು ಗೋಡಂಬಿಯ ಮರವನ್ನು ಅಕಾಜು (Acaju) ಎಂದು ಕರೆಯುತ್ತಿದ್ದರು. ಪೋರ್ಚುಗೀಸರು ಇದೇ ಶಬ್ದವನ್ನು ಕಾಜು (Caju) ಎಂದು ಉಪಯೋಗಿಸಿದರು. ಹಿಂದಿ, ಮರಾಠಿ ಗುಜರಾತಿ ಮತ್ತು ಪಂಜಾಬಿ ಭಾಷೆಗಳಲ್ಲಿ ಇದೇ ಹೆಸರಿನಿಂದ ಗೋಡಂಬಿಯನ್ನು ಕರೆಯಲಾಗುತ್ತಿದೆ. ಬಂಗಾಳದಲ್ಲಿ ಹಿಜಿ ಬಾದಾಮ್ ಮತ್ತು ಅಸ್ಸಾಂನಲ್ಲಿ ಇದನ್ನು "ಕಾಜೂ ಬಾದಾಮ್" ಎನ್ನುತ್ತಾರೆ. ಒರಿಸ್ಸಾ ರಾಜ್ಯಕ್ಕೆ ಗೋಡಂಬಿಯು ಶ್ರೀಲಂಕಾದಿಂದ ಪ್ರವೇಶಿಸಿದುದರಿಂದ ಇದನ್ನು 'ಲಂಕಾ ಬೀಜ' ಎಂದು ಕರೆಯುತ್ತಾರೆ. ಬೀಜದ ಆಕಾರ ಮತ್ತು ಸ್ಥಾನಕ್ಕನುಗುಣವಾಗಿ ತಮಿಳು ಭಾಷೆಯಲ್ಲಿ ಗೋಡಂಬಿಯನ್ನು ಮುಂದಿರಿ ಎಂದು ಹೇಳುತ್ತಾರೆ. ಅದರ ಅರ್ಥ ಹಣ್ಣಿನ ಮುಂಭಾಗದಲ್ಲಿ ಬೀಜ ಅಂಟಿಕೊಂಡಿದೆ ಎಂದು. ಪೋರ್ಚುಗೀಸರ ಮುಖಾಂತರ ಪ್ರವೇಶವಾದುದರಿಂದ ಕೇರಳದಲ್ಲಿ ಗೋಡಂಬಿಯನ್ನು 'ಫರಂಗಿ ಅಂಡಿ' (ಅಂಡೀ ಬೀಜ) ಎಂದೂ, 'ಕಾಸು ಅಂಡಿ' (ದುಡ್ಡಿನ ಬೀಜ) ಎಂದೂ ಕರೆಯುತ್ತಾರೆ. ಇದು ಅತ್ಯಂತ ಪೌಷ್ಟಿಕತೆಯಿಂದ ಕೂಡಿದ್ದು ಆಂಧ್ರ ಪ್ರದೇಶದಲ್ಲಿ ಇದನ್ನು ಮುಂತ ಮಾಮಿಡಿ, ಜೀಡಿ ಮಾಮಿಡಿ ಮುಂತಾದ ಹೆಸರುಗಳಿಂದ ಕರೆಯುತ್ತಾರೆ.[೪] ಇದು ಎಲ್ಲಾ ವರ್ಗದ ಜನರಿಗೂ ಪ್ರಿಯವಾದ ತಿನಿಸು ಆಗಿರುತ್ತದೆ. ಪ್ರಾರಂಭದಲ್ಲಿ ಪ್ರಕೃತಿ ದತ್ತವಾಗಿ ಸಿಗುತ್ತಿದ್ದ ಗೇರು ಬೀಜ ಆನಂತರದ ದಿನಗಳಲ್ಲಿ ಅವುಗಳ ಉತ್ಪಾದನೆ ಹಾಗೂ ಮಾರಾಟದಲ್ಲಿ ಬಳಸಲ್ಪಡುವ ಶ್ರಮ ವೆಚ್ಚದ ಹೆಚ್ಚಳದಿಂದಾಗಿ ಒಂದು ಪ್ರಮುಖ ವಾಣಿಜ್ಯ ಬೆಳೆಯಾಗಿ ಹಾಗೂ ಶ್ರೀಮಂತ ಆಹಾರವಾಗಿ ಪರಿವರ್ತನೆಗೊಂಡಿತು.[೫]

ಗೇರು ತುಂಬಾ ಎತ್ತರಕ್ಕೆ ಬೆಳೆಯದೆ ಹರಡಿಕೊಂಡಂತೆ ಬೆಳೆಯುವ ಹಚ್ಚಹಸಿರಿನ ಮರ. ಹೆಚ್ಚೆಂದರೆ ೧೦ ಮೀಟರ್‌ಗಳಷ್ಟು ಎತ್ತರಕ್ಕೆ ಬೆಳೆಯಬಲ್ಲ ಇದು ಬಲಿಷ್ಠವಾದ ಮತ್ತು ಬರ ಸಹಿಷ್ಣು ಮರ. ಯಾವುದೇ ಬಗೆಯ ಮಣ್ಣಿಗಾಗಲೀ ಅಥವಾ ವಾತಾವರಣಕ್ಕೆ ಆಗಲಿ ಹೊಂದಿಕೊಳ್ಳಬಲ್ಲ ಮರ ಇದು. ಹಿಂದೆ ಗೇರು ಮರವನ್ನು ಒಂದು ದೃಢವಾದ ಉರುವಲು ನೀಡುವ ಮತ್ತು ರುಚಿಕರವಾದ ಹಣ್ಣನ್ನು ನೀಡುವ ಮರ ಎಂದೇ ಪರಿಗಣಿಸಲಾಗುತ್ತಿತ್ತು. ಗೇರು ಬೀಜವನ್ನು ನಿಷ್ಪ್ರಯೋಜಕ ಎಂದೇ ಭಾವಿಸಿ ಎಸೆಯಲಾಗುತ್ತಿತ್ತು.[೬] ಗೇರು ಬೀಜದ ಗಡುಸಾದ ತೊಗಟೆ ಮತ್ತು ಅದರ ವಿಶಿಷ್ಟವಾದ ಜಿಡ್ಡು ಇದರಿಂದಾಗಿ ಗೇರು ಬೀಜವು ಬಳಕೆಯಿಂದ ದೂರ ಉಳಿಯಿತು. ಆದರೆ ಕಾಲ ಕ್ರಮೇಣ ವರ್ಷಗಳು ಉರುಳಿದಂತೆ ಗೇರು ಬೀಜದ ಒಳ ತಿರುಳು ಗೋಡಂಬಿಯನ್ನು ಸಂಸ್ಕರಿಸಿ ಹೊರ ತೆಗೆದು ಬಳಸಲು ಜನರು ಪ್ರಾರಂಭಿಸಿದರು. ಇಂದಿನ ದಿನಗಳಲ್ಲಿ ಇದು ವ್ಯಾಪಕವಾಗಿ ಎಲ್ಲಾ ದೇಶದ ಜನರು ಬಳಸುತ್ತಿರುವುದರಿಂದ ಒಂದು ಪ್ರಮುಖ ಆರ್ಥಿಕ ಉತ್ಪನ್ನವೆಂದು ಪರಿಗಣಿಸಲ್ಪಟ್ಟಿದೆ.

ಗೇರು ಸಾಮಾನ್ಯವಾಗಿ ಉಷ್ಣ ಪ್ರದೇಶಗಳಲ್ಲಿ ೨೮° ಉತ್ತರ ಮತ್ತು ೨೮° ದಕ್ಷಿಣ ಅಕ್ಷಾಂಶದಲ್ಲಿ ಬೆಳೆಯುವ ಬೆಳೆ. ಭಾರತದಲ್ಲಿ ಇದು ಕರಾವಳಿ ತೀರದಲ್ಲಿ ೮° ಉತ್ತರ ಮತ್ತು ೨೮° ದಕ್ಷಿಣ ಅಕ್ಷಾಂಶದಲ್ಲಿ ಬೆಳೆಯುತ್ತದೆ. ವಾಣಿಜ್ಯ ಬೆಳೆಯಾಗಿ

ಗೇರು ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿ ಸಮೃದ್ಧವಾಗಿ ಬೆಳೆಯುತ್ತಿರುವುದು ಮಾತ್ರವಲ್ಲ ಇನ್ನು ಹೆಚ್ಚು ಪ್ರದೇಶಗಳಲ್ಲಿ ಗೇರು ಬೆಳೆಯುವ ಸಾಧ್ಯತೆಗಳು ಇವೆ. ಭೂಪಟ ೨.೧ ರಲ್ಲಿ ವಿಶ್ವದ ಗೇರು ಬೆಳೆಯುವ ಪ್ರದೇಶವನ್ನು ಪ್ರತಿಬಿಂಬಿಸಲಾಗಿದೆ.

ಭೂಪಟ ೨.೧: ವಿಶ್ವದಲ್ಲಿ ಗೇರು ಬೆಳೆಯುವ ಪ್ರದೇಶಗಳು



ಗೇರು ಬೆಳೆಯುವ ಎತ್ತರದ ಪ್ರದೇಶದ ಆಧಾರದಲ್ಲಿ ಹೂ ಬಿಡುವ ಅವಧಿಯು ಅವಲಂಬಿಸಿಕೊಂಡಿದೆ. ಗೇರು ಕೃಷಿಯ ತವರಾದ ಬ್ರೆಜಿಲ್ ಮತ್ತು ತಾಂಜೇನಿಯಾದಲ್ಲಿ ಆಗಸ್ಟ್- ಸಪ್ಟೆಂಬರ್ ನಡುವೆ ಹೂ ಬಿಟ್ಟರೆ, ಮೊಜಾಂಬಿಕ್‌ನಲ್ಲಿ ಅಕ್ಟೋಬರ್ ವೇಳೆಗೆ ಹೂ ಬಿಡುತ್ತದೆ. ಭಾರತದ ಪಶ್ಚಿಮ ಕರಾವಳಿಯಲ್ಲಿ ಅಕ್ಟೋಬರ್‌ನಿಂದ ಮಾರ್ಚ್ ತನಕ ಹೂ ಬಿಟ್ಟರೆ ಪೂರ್ವ ಕರಾವಳಿಯಲ್ಲಿ ೨ ರಿಂದ ೩ ತಿಂಗಳು ತಡವಾಗಿ ಹೂ ಬಿಡುತ್ತದೆ. ಒಟ್ಟಿನಲ್ಲಿ ಉತ್ತರ ಮತ್ತು ದಕ್ಷಿಣ ಭೂ ಮಧ್ಯ ರೇಖೆಯ ನಡುವಿನಲ್ಲಿ ಇದು ಬೇಸಿಗೆಯ ಸಮಯದಲ್ಲಿ ಫಲ ನೀಡುತ್ತದೆ. ಕಡಿಮೆ ಉಷ್ಣತೆ ಮತ್ತು ಹೆಚ್ಚು ಎತ್ತರ ಪ್ರದೇಶ ಈ ಬೆಳೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಯಾವುದೇ ಅಕ್ಷಾಂಶ ರೇಖೆಯಾದರೂ ಅತ್ಯಂತ ಎತ್ತರದ ಪ್ರದೇಶವಾಗಿದ್ದಲ್ಲಿ ಇದು ಹೂ ಬಿಡುವ ಮತ್ತು ಫಲ ಕೊಡುವ ಅವಧಿ ನಿಧಾನವಾಗಬಹುದು. ಸಾಮಾನ್ಯವಾಗಿ ಸಮುದ್ರ ಮಟ್ಟದಿಂದ ೭೦೦ ಮೀಟರ್ ಎತ್ತರ ಪ್ರದೇಶದಲ್ಲಿ ಗೇರು ಬೆಳೆಯುತ್ತದೆ. ಕರಾವಳಿ ಹವಾಮಾನ ಈ ಬೆಳೆಗೆ ಪೂರಕವಾಗಿದ್ದರೂ ಸಮುದ್ರ ತೀರಕ್ಕಿಂತ ಹೆಚ್ಚಾಗಿ ಒಳನಾಡಿನಲ್ಲೂ ಇದನ್ನು ಬೆಳೆಯಲಾಗುತ್ತದೆ.[೭]

ಗೇರು ಅತ್ಯಂತ ಉಷ್ಣತೆ ಇರುವ ಪ್ರದೇಶದಲ್ಲಿ ವೇಗವಾಗಿ ಬೆಳೆಯುತ್ತದೆ. ಗರಿಷ್ಠ ಮಾಸಿಕ ಉಷ್ಣತೆ ೨೪° ಸೆ. ಅಂದ ೨೮° ಸೆ. ಇರುವುದು ಬೆಳೆಗೆ ಸಹ್ಯವೆನಿಸುತ್ತದೆ. ೦° ಸೆ. ಉಷ್ಣತೆಯಲ್ಲೂ ಇದು ಅಲ್ಪ ಕಾಲ ಉಳಿಯಬಹುದಾದರೂ



ಸಾಮಾನ್ಯವಾಗಿ ೨೦° ಸೆ. ಗಿಂತ ಕಡಿಮೆ ಉಷ್ಣತೆಯಲ್ಲಿ ಅದು ದೀರ್ಘಕಾಲ ಬದುಕುವುದಿಲ್ಲ. ಹಾಗಾಗಿ ಬಹುತೇಕ ಗೇರು ಬೆಳೆಯುವ ಪ್ರದೇಶದಲ್ಲಿ ಉಷ್ಣತೆ ೧೫° ಸೆ. ನಿಂದ ೨೫° ಸೆ. ತನಕ ಕನಿಷ್ಠ ಉಷ್ಣತೆ ಮತ್ತು ಗರಿಷ್ಠ ೨೫° ಸೆ ನಿಂದ ೩೫° ಸೆ. ತನಕ ಇರುವುದು ಉತ್ತಮ ಮತ್ತು ಪೂರಕವಾಗಿರುತ್ತದೆ.[೮]

ಗೇರು ಕೃಷಿ ಮಳೆ ನೀರಿನ ಪೂರೈಕೆ ಮತ್ತು ಅದರ ಹಂಚಿಕೆಯನ್ನು ಅವಲಂಬಿಸಿದೆ. ಇದರ ವೈಶಿಷ್ಟ್ಯತೆ ಏನೆಂದರೆ ಅತ್ಯಂತ ಹೆಚ್ಚಿನ ಮತ್ತು ಅತ್ಯಂತ ಕಡಿಮೆ ಮಳೆಯನ್ನು ಭರಿಸುವ ಸಾಮರ್ಥ್ಯ ಹೊಂದಿರುವುದು. ಸರಾಸರಿ ೧೩೦೦ ರಿಂದ ೨೫೦೦ ಮಿ.ಮಿ. ಮಳೆ ಇದಕ್ಕೆ ಅತ್ಯಂತ ಸೂಕ್ತವಾದುದು. ಹೂ ಬಿಡುವ ಸಮಯದಲ್ಲಿ ಸ್ವಲ್ಪ ಮಟ್ಟಿಗೆ ಮಳೆ ಬೀಳುವುದು ಅಪೇಕ್ಷಣೀಯವಾದರೂ ಅತ್ಯಂತ ಹೆಚ್ಚಿನ, ಬಿರುಸಿನ ಮಳೆ ಆ ಸಮಯದಲ್ಲಿ ಫಸಲಿಗೆ ಹಾನಿ ಉಂಟು ಮಾಡುತ್ತದೆ. ಸುಮಾರು ೪ ರಿಂದ ೫ ತಿಂಗಳು ಒಣ ಹವೆ ಇದ್ದದ್ದೇ ಆದಲ್ಲಿ ಗೇರು ಕೃಷಿಯಲ್ಲಿ ಉತ್ತಮ ಇಳುವರಿಗೆ ಸಹಾಯಕವಾಗುತ್ತದೆ. ಕಡಿಮೆ ಎತ್ತರದ ಪ್ರದೇಶದಲ್ಲಿ ೧೫೦೦ ರಿಂದ ೨೦೦೦ ಮಿ. ಮೀ. ಮಳೆ ಹೆಚ್ಚು ಪ್ರಾಶಸ್ತ್ಯವಾದದ್ದು. ಗೇರು ಕೃಷಿಯಲ್ಲಿ ಉತ್ತಮ ಇಳುವರಿಗೆ ಸಮುದ್ರ ತೀರ ಪ್ರದೇಶ ಹೆಚ್ಚು ಸಹಾಯಕವಾಗಬಲ್ಲದು.[೯]

ಗೇರು ಎಲ್ಲಾ ಬಗೆಯ ಮಣ್ಣಿಗೂ ಹೊಂದಿಕೊಳ್ಳಬಲ್ಲ ಸಾಮರ್ಥ್ಯ ಉಳ್ಳದ್ದು. ಸಾಮಾನ್ಯವಾಗಿ ಬೇರೆ ಬೆಳೆಗೆ ಯೋಗ್ಯವಲ್ಲದ, ನಿಕೃಷ್ಟವಾದ ಭೂಮಿಯನ್ನೇ ಗೇರು ಬೆಳೆಗೆ ಆಯ್ದುಕೊಳ್ಳಲಾಗುತ್ತದೆ. ಆದಾಗ್ಯೂ ಗೇರು ಅಂತಹ ಭೂಮಿಯಲ್ಲೂ ಉತ್ತಮ ಇಳುವರಿ ನೀಡಬಲ್ಲದು. ಅರಣ್ಯ ಪ್ರದೇಶಗಳಲ್ಲಿ ಮತ್ತು ಜೇಡಿ ಮಣ್ಣು ಇರುವ ಪ್ರದೇಶಗಳಲ್ಲಿ ಗೇರು ಚೆನ್ನಾಗಿ ಬೆಳೆಯುತ್ತದೆ. ಗೇರು ಬೆಳೆಯುವ ಪ್ರದೇಶ ಜೇಡಿ ಮಣ್ಣಿನಿಂದ ಕೂಡಿದ್ದರೆ ಮರದ ಬೆಳವಣಿಗೆ, ಹೂ ಬಿಡುವ ಸಮಯ, ಅದರ ಉತ್ಪಾದನಾ ಸಾಮರ್ಥ್ಯ ಮತ್ತು ಗೇರು ಬೀಜದ ಗಾತ್ರ ಎಲ್ಲವೂ ಉತ್ತಮವಾಗಿರುತ್ತದೆ.[೧೦]

ಗೇರು ಸಸಿಗಳನ್ನು ಸಾಮಾನ್ಯವಾಗಿ ೭. ೦ ಮೀ. X ೭. ೦ ಮೀ. ನಿಂದ ೧೦. ೦ ಮೀ. X ೧೦. ೦ ಮೀ. ಅಂತರದಲ್ಲಿ ನೆಡಲಾಗುತ್ತದೆ. ಗಿಡಗಳ ನಡುವಿನ ಅಂತರ ಹೆಚ್ಚು ಇದ್ದಲ್ಲಿ ಒಳ ಬೆಳೆಗಳಿಗೆ ಅವಕಾಶ ಹೆಚ್ಚು. ತೋಟಗಾರಿಕಾ ಬೆಳೆಗಳಾದ ಅನಾನಸು, ಬಾಳೆ ಹಣ್ಣು, ಪಪ್ಪಾಯ ಮತ್ತು ಅಲಸಂಡೆ ವಾರ್ಷಿಕ ಬೆಳೆಗಳಾದ ಸುವರ್ಣಗೆಡ್ಡೆ, ಮರಗೆಣಸು ಇತ್ಯಾದಿಗಳನ್ನು ಒಳ ಬೆಳೆಗಳಾಗಿ ಬೆಳೆಯಬಹುದು. ಇವುಗಳಲ್ಲದೆ ಕಾಳು ಮೆಣಸು, ದಾಳಿಂಬೆ ಬೆಳೆಯು ಕೂಡ ಒಳ್ಳೆಯ ಇಳುವರಿ ತರಬಲ್ಲದು. ಒಳ ಬೆಳೆಗಳನ್ನು ಬೆಳೆಸುವುದರಿಂದ ಗೇರು ಪ್ರದೇಶದಲ್ಲಿ ಕಳೆಗಳು ಹುಟ್ಟಿ ಬರುವುದಿಲ್ಲ ಮತ್ತು ಪ್ರಾರಂಭದ ವರ್ಷಗಳಲ್ಲಿ ರೈತರಿಗೆ ಉತ್ತಮ ಆದಾಯವನ್ನು ತಂದು ಕೊಡಬಲ್ಲದು.[೧೧]

ಭಾರತೀಯ ಆಯುರ್ವೇದ ಶಾಸ್ತ್ರದಲ್ಲಿ ಗೇರು ಒಂದು ಶಕ್ತಿಶಾಲಿ ಪೌಷ್ಟಿಕ ಆಹಾರ ಎಂದು ಪರಿಗಣಿಸಲ್ಪಟ್ಟಿದೆ. ಗೋಡಂಬಿಯು ಆಯುರ್ವೇದದಲ್ಲಿ ಪ್ರಮುಖ ಸ್ಥಾನವನ್ನು ಗಳಿಸಿದೆ. ಗೋಡಂಬಿ ಒಂದು ಮಧುರವಾದ ಸ್ವಾದಿಷ್ಟವಾದ ಸುಗಂಧಯುಕ್ತ ತಿನಿಸು ಆಗಿರುವುದರೊಂದಿಗೆ ಉತ್ತಮ ಪೌಷ್ಟಿಕತೆಯಿಂದಾಗಿ ಒಳ್ಳೆಯ ಆರೋಗ್ಯ, ಶಕ್ತಿಯನ್ನು ಮತ್ತು ಸಾಮರ್ಥ್ಯವನ್ನು ನೀಡುವಂತಹುದಾಗಿದೆ. ಇದರ ನಿರಂತರ ಬಳಕೆ ಅನೇಕ ಕಾಯಿಲೆಗಳನ್ನು ನಿವಾರಿಸುತ್ತದೆ. ಜೊತೆಗೆ ವಯೋಮಾನದ ಅಡ್ಡ ಪರಿಣಾಮಗಳನ್ನು ತಗ್ಗಿಸುತ್ತದೆ. ಗೋಡಂಬಿಯಲ್ಲಿರುವ ಬಹಳ ಪೌಷ್ಟಿಕತೆಯ ಸಂಯೋಜನೆಯನ್ನು ಕೋಷ್ಟಕ ೨.೧ ರಲ್ಲಿ ತೋರಿಸಲಾಗಿದೆ.

ಕೋಷ್ಟಕ –೨. ೧ ಗೋಡಂಬಿಯ ಪೌಷ್ಟಿಕತೆಯ ಸಂಯೋಜನೆ

ಪೌಷ್ಟಿಕ ಅಂಶಗಳು	ಶೇಕಡಾ
ಪ್ರೋಟಿನ್	೨೧.೦೦
ಕೊಬ್ಬು	೪೭.೦೦
ತೇವಾಂಶ	೫.೯೦
ಕಾರ್ಬೋಹೈಡ್ರೇಟ್ಸ್	೨೨.೦೦
ನಾರು	೧.೩೦
ರಂಜಕ	೦.೪೫
ಕ್ಯಾಲ್ಸಿಯಂ	೦.೦೫
ಕಬ್ಬಿಣಾಂಶ	5.00 mg/100gm

Source: Manuel Fernadez 2001, Cashew nut: A Health Friendly nut. The Cashew Vol 15v P 11.

ಈ ಎಲ್ಲಾ ಔಷಧೀಯ ಮೌಲ್ಯಗಳಿಂದಾಗಿ ಗೋಡಂಬಿ ಇಂದು ಪ್ರಪಂಚದಾದ್ಯಂತ ಹೆಸರು ವಾಸಿಯಾಗಿದೆ. ಗೇರು ಉದ್ಯಮದ ಲಾಭಾಂಶದಲ್ಲಿ ಒಂದಿಷ್ಟು ಭಾಗವನ್ನು ಗೋಡಂಬಿಯ ಈ ಔಷಧೀಯ ಗುಣಗಳನ್ನು ಪ್ರಚಾರಗೊಳಿಸಲು ತೊಡಗಿಸಿದ್ದೇ ಆದಲ್ಲಿ ಗೇರು ಉದ್ಯಮಕ್ಕೆ ಇನ್ನಷ್ಟು ಮಹತ್ವ ಸಿಗುವುದರಲ್ಲಿ ಸಂಶಯವಿಲ್ಲ. [೧೨]

ಗೋಡಂಬಿ ಉದ್ಯಮದಲ್ಲಿ ಗೇರು ಬೀಜದ ತಿರುಳಿಗೆ ಪ್ರಾಮುಖ್ಯವಾದ ಸ್ಥಾನವಿದ್ದರೂ, ನಿರ್ಲಕ್ಷಿಸಲ್ಪಡುತ್ತಿರುವ ಗೇರು ಹಣ್ಣು ಕೂಡಾ ಒಂದು ಉಪಯುಕ್ತ ವಸ್ತುವಾಗಿದೆ. ಗೇರು ಬೀಜದ ಪ್ರಮಾಣಕ್ಕಿಂತ ೮ ರಿಂದ ೧೦ ಪಟ್ಟು ಅಧಿಕ ತೂಕವಿರುವ ಗೇರು ಹಣ್ಣು ಒಂದು ಸತ್ವಯುತ ಆಹಾರ ಮತ್ತು ಗೇರು ತಿರುಳಿನಷ್ಟೇ ಮೌಲ್ಯವುಳ್ಳದ್ದಾಗಿದೆ. (ಅನುಬಂಧ ಛಾಯಾಚಿತ್ರ ಸಂಖ್ಯೆ ೨) ಆದರೆ ಈ ಬಗ್ಗೆ ಹೆಚ್ಚಿನ ಸಂಶೋಧನೆಗಳು ನಡೆಯದೇ ಇರುವುದು ಮತ್ತು ಹೆಚ್ಚಿನ ಪ್ರಚಾರ ಸಿಗದೇ ಇರುವುದರಿಂದ ಅಮೂಲ್ಯವಾದ ಗೇರು ಹಣ್ಣು ವ್ಯರ್ಥವಾಗಿ ಪೋಲಾಗುತ್ತಿದೆ. ಭಾರತದಲ್ಲಿ ವರ್ಷಕ್ಕೆ ೪೦ ಲಕ್ಷ ಟನ್‌ಗಳಷ್ಟು ಗೇರು ಹಣ್ಣು ಉತ್ಪಾದನೆಯಾಗುತ್ತಿದ್ದರೂ ಅದರಲ್ಲಿ ಕೇವಲ ೧೫ ಶೇಕಡಾ ಮಾತ್ರ ಬಳಕೆಯಾಗುತ್ತಿದೆ.[೧೩] ಗೇರು ಹಣ್ಣಿನಲ್ಲಿ ಅನೇಕ ಪೋಷಕಾಂಶಗಳಿವೆ. (ಕೋಷ್ಟಕ ೨.೨)

ಕೋಷ್ಟಕ ೨.೨: ಗೇರು ಹಣ್ಣಿನ ಪೋಷಕಾಂಶಗಳು (ಪ್ರತಿ ೧೦೦ ಗ್ರಾಂಗಳಲ್ಲಿ)

ತೇವಾಂಶ	೮೭.೯ ಗ್ರಾಂ
ಪ್ರೋಟಿನ್ (ಸಸಾರ ಜನಕ)	೦.೨ ಗ್ರಾಂ
ಮೇದಸ್ಸು	೦.೧ ಗ್ರಾಂ
ಶರ್ಕರ ಪಿಷ್ಟ	೧೧.೬ ಗ್ರಾಂ
ಸುಣ್ಣ	೦.೦೧ ಗ್ರಾಂ
ರಂಜಕ	೦.೦೧ ಗ್ರಾಂ
ಕಬ್ಬಿಣ	೦.೨ ಗ್ರಾಂ
ಬಿ. ಕೆರೋಟಿನ್	೦.೦೯ ಗ್ರಾಂ
ಸಿ ಜೀವಸತ್ವ	೨೬೧.೫ ಮಿಲಿಗ್ರಾಂ

ಆಧಾರ: ನಾರಾಯಣರೆಡ್ಡಿ ಎಂ.ಎ ಗೋಡಂಬಿ ಪುಟ ಸಂಖ್ಯೆ ೯೨.


ಗೇರು ಹಣ್ಣಿನ ಈ ಶ್ರೀಮಂತ ಪೌಷ್ಟಿಕತೆಯನ್ನು ಧನಾತ್ಮಕವಾಗಿ ಬಳಸುವ ನಿಟ್ಟಿನಲ್ಲಿ ಸಾಕಷ್ಟು ಪ್ರಯತ್ನಗಳು ನಡೆಯಬೇಕಾಗಿದೆ. ಈ ಉಪ ಉತ್ಪನ್ನದ ಪರಿಣಾಮಕಾರಿ ಬಳಕೆ ಗೇರು ಉದ್ಯಮಕ್ಕೆ ಸಂಜೀವಿನಿಯಾಗಬಲ್ಲದು. ಪ್ರಸ್ತುತ ಬ್ರೆಜಿಲ್‌ನಲ್ಲಿ ಗೇರು ಹಣ್ಣಿನ ರಸವನ್ನು ಆರ್ಥಿಕವಾಗಿ ಬಳಸಿಕೊಳ್ಳುತ್ತಿದ್ದು, ಭಾರತದ ಗೋವಾದಲ್ಲಿ ಗೇರು ಹಣ್ಣಿನ ರಸವನ್ನು ಮದ್ಯಸಾರ 'ಫೆನ್ನಿ' ತಯಾರಿಕೆಯಲ್ಲಿ ಸ್ವಲ್ಪ ಪ್ರಮಾಣದಲ್ಲಿ ಬಳಸಿಕೊಳ್ಳಲಾಗುತ್ತಿದೆ. ಇದನ್ನು ಹೊರತು ಪಡಿಸಿದರೆ ಭಾರತದ ಇನ್ಯಾವುದೇ ರಾಜ್ಯಗಳಲ್ಲಿ ಗೇರು ಹಣ್ಣಿನ ಆರ್ಥಿಕ ಬಳಕೆ ಇಲ್ಲ. ೧೯೯೭ರಲ್ಲಿ ಕೇರಳ ರಾಜ್ಯದ ಮಡಕತಾರ ಎಂಬಲ್ಲಿ ಗೇರು ಸಂಶೋಧನಾ ಕೇಂದ್ರದಲ್ಲಿ ಗೇರು ಹಣ್ಣಿನ ಆರ್ಥಿಕ ಬಳಕೆಯ ಸಾಧ್ಯತೆಗಳ ಬಗ್ಗೆ ಸಂಶೋಧನೆ ಮಾಡಲಾಯಿತು. ಮೈಸೂರಿನ ಕೇಂದ್ರ ಆಹಾರ ಮತ್ತು ತಾಂತ್ರಿಕ ಸಂಶೋಧನಾ ಸಂಸ್ಥೆಯಲ್ಲೂ ಕೂಡಾ ಈ ಕುರಿತಂತೆ ಪ್ರಯತ್ನಗಳು ನಡೆದಿವೆ. ಕೇರಳ ರಾಜ್ಯದ ತೋಟಗಾರಿಕಾ ನಿಗಮದ ಒಂದು ಹೊಸ ಯೋಜನೆಯಂತೆ ಗೇರು ಹಣ್ಣಿನಿಂದ ಬಯೋ ಎಥನೋಲ್ ಎಂಬ ಇಂಧನ ಉತ್ಪಾದಿಸಬಹುದು ಎಂಬುದರ ಕುರಿತು ಸಂಶೋಧನೆ ನಡೆಸಿದೆ. ಗೇರು ಹಣ್ಣನ್ನು ಸಂಸ್ಕರಿಸಿ ಇಂಧನ ಉತ್ಪಾದನೆ ಮಾಡಬಹುದಾಗಿದ್ದು, ಈ ಮೂಲಕ ಉತ್ಪಾದನೆಯಾಗುವ ಬಯೋ ಎಥನಾಲ್ ಇಂಧನವು ಕಡಿಮೆ ಬೆಲೆಯಲ್ಲಿ ಲಭಿಸಲಿದ್ದು ವಾಹನಗಳ ಎಂಜಿನ್‌ಗಳಿಗೆ ಅತೀ ಹೆಚ್ಚು ಪ್ರಯೋಜನಕಾರಿಯಾಗಿದೆ. ಈ ಬಗ್ಗೆ ಬ್ರೆಜಿಲ್ ದೇಶ ಸೇರಿದಂತೆ ಇತರ ಹಲವಾರು ದೇಶಗಳು ನಡೆಸಿದ ಸಂಶೋಧನೆಯ ಮಾಹಿತಿ ಆಧರಿಸಿ ಕೇರಳ ಸರಕಾರ ಈ ಹೊಸ ಯೋಜನೆಯನ್ನು ಕಾಸರಗೋಡಿನಲ್ಲಿ ಪ್ರಾರಂಭಿಸಲು ಮುಂದಾಗಿದೆ. ಗೇರು ಹಣ್ಣಿನ ಸಮರ್ಪಕ ಬಳಕೆ ಗೇರು ಕೃಷಿಯನ್ನು ಇನ್ನಷ್ಟು ಆಕರ್ಷಕವಾಗಿ ಮತ್ತು ಲಾಭದಾಯಕವಾಗಿ ಮಾಡಬಲ್ಲದು. ಆದರೂ ಗೇರು ಉದ್ಯಮದ ಒಂದು ಪ್ರಮುಖ ಉತ್ಪನ್ನವಾದ ಗೇರು ಹಣ್ಣು ಆರ್ಥಿಕವಾಗಿ ಬಳಸಲ್ಪಡದೆ ದಿವ್ಯ ನಿರ್ಲಕ್ಷ್ಯಕ್ಕೆ ಒಳಗಾಗಿದೆ.

ಗೇರು ಹಣ್ಣನ್ನು ಆವಿಯಲ್ಲಿ ಬೇಯಿಸುವುದರಿಂದ ಅದರಲ್ಲಿರುವ ಚಿರುಸಿನ ಸ್ವಾದವನ್ನು ಸುಲಭವಾಗಿ ಹೋಗಲಾಡಿಸಬಹುದು. ಗೇರು ಹಣ್ಣಿನಿಂದ ಜಾಮ್, ಜೆಲ್ಲಿ, ಕ್ಯಾಂಡಿ, ಕೆಚಪ್, ಚಟ್ನಿ, ಜ್ಯೂಸ್, ಉಪ್ಪಿನಕಾಯಿ ಹೀಗೆ ಅನೇಕ ಆಹಾರ ವಸ್ತುವನ್ನು ತಯಾರಿಸಬಹುದು. ಗೇರು ಹಣ್ಣಿನ ರಸ ತೆಗೆದು ಉಳಿಯುವ ತೊಪ್ಪೆಯಿಂದ ಪ್ರಾಣಿಗಳಿಗೆ ಬೇಕಾದ ಆಹಾರವನ್ನು ಮತ್ತು ಕೃಷಿಗೆ ಬೇಕಾದ ಗೊಬ್ಬರವನ್ನು ತಯಾರಿಸಬಹುದಾಗಿದೆ. ಗೇರು ಹಣ್ಣಿನ ರಸ ವೈದ್ಯಕೀಯ ಮಹತ್ವವನ್ನು ಪಡೆದಿದ್ದು ಸ್ಕರ್ವಿ ಕಾಯಿಲೆಗೆ, ಕೆಮ್ಮು, ಶೀತ, ಹೊಟ್ಟೆನೋವಿಗೆ ಉತ್ತಮ ಔಷಧಿಯಾಗಿದೆ. ಬಾಣಂತಿ ಮಹಿಳೆಯರಿಗೆ ಇದು ಒಂದು ದಿವ್ಯ ಔಷಧ. ಗೇರು ಹಣ್ಣಿನಿಂದ ತಯಾರಿಸಿದ ಮದ್ಯಸಾರವು ಕೂಡಾ ಹಲವು ವಿಶಿಷ್ಟ ವೈದ್ಯಕೀಯ ಗುಣಗಳಿಂದ ಕೂಡಿದೆ.[೧೪] ಗೋವಾ ರಾಜ್ಯದಲ್ಲಿ ಇದಕ್ಕೆ ಮನೆ ವೈದ್ಯರ ಸ್ಥಾನವಿದೆ. ಗೇರು ಹಣ್ಣಿನ ಉತ್ಪಾದನೆಯ ೭೦% ದಷ್ಟು ಫೆನಿ ತಯಾರಿಸಲು ಬಳಸುತ್ತಾರೆ. ಮತ್ತು ಗೇರು ಕೃಷಿಯ ಒಟ್ಟು ಆದಾಯದಲ್ಲಿ ಶೇಕಡಾ ೩೫ ರಷ್ಟು ಫೆನಿ ತಯಾರಿಕೆಯಿಂದ ದೊರಕುತ್ತದೆ. ಗೇರು ಹಣ್ಣಿನ ಮದ್ಯಸಾರ ತಯಾರಿಕೆಯಲ್ಲಿ ಬರೀ ಗೇರು ಹಣ್ಣಿನ ರಸವನ್ನು ಮಾತ್ರ ಉಪಯೋಗಿಸಲಾಗುತ್ತಿದ್ದು ಬ್ರಾಂಡಿ, ವಿಸ್ಕಿ ಮೊದಲಾದ ಪಾನೀಯಗಳ ತಯಾರಿಕೆಯಂತೆ ಇತರೇ ರಾಸಾಯನಿಕ ವಸ್ತುಗಳನ್ನು ಸಂಯೋಜಿಸಲಾಗುವುದಿಲ್ಲ. ದೇಶದ ಮದ್ಯಪಾನ ನಿಷೇಧ ಧೋರಣೆಗಳು ಏನಿದ್ದರೂ ಔಷಧೀಯ ಗುಣಗಳಿಂದ ಕೂಡಿದ ಗೇರು ಹಣ್ಣಿನ ಮದ್ಯಸಾರ ಸೇವನೆಯನ್ನು ನಿಷೇಧಿಸುವ ಅವಶ್ಯಕತೆ ಕಂಡು ಬರುವುದಿಲ್ಲ. ಮದ್ಯಪಾನ ನಿಷೇಧ ಕುರಿತು ರಾಜ್ಯಗಳು ಅನುಸರಿಸಬೇಕಾದ ತತ್ವಗಳ ವಿಚಾರದಲ್ಲಿ ಭಾರತೀಯ ಸಂವಿಧಾನದ ೪೭ ನೇ ವಿಭಾಗದಲ್ಲಿ "ಔಷಧೀಯ ಉಪಯೋಗದ ಹೊರತು, ಆರೋಗ್ಯಕ್ಕೆ ಹಾನಿಕಾರಕವಾದ ಅಮಲು ಪದಾರ್ಥಗಳು ಮತ್ತು ಮೂಲ ಔಷಧ (ಡ್ರಗ್)ಗಳ ಸೇವನೆಯನ್ನು ನಿಷೇಧಿಸುವಲ್ಲಿ ರಾಜ್ಯಗಳು ಪ್ರಯತ್ನಿಸಬೇಕು" ಎಂದು ಉಲ್ಲೇಖಿಸಿರುವುದರಿಂದ ಔಷಧೀಯ ಗುಣಗಳಿಂದ ಕೂಡಿದ ಮದ್ಯಸಾರ

ಸೇವನೆಯನ್ನು ಸಂವಿಧಾನದಲ್ಲಿ ನಿಷೇಧಿಸಿದಂತಿಲ್ಲ.[೧೫] ಭಾರತದ ಗೋಡಂಬಿ ರಫ್ತು ವ್ಯಾಪಾರದೊಂದಿಗೆ ಗೇರು ಹಣ್ಣಿನ ರಸದಿಂದ ತಯಾರಿಸಲಾಗುವ ಫೆನಿಯನ್ನು ರಫ್ತು ಮಾಡುವುದೇ ಆದಲ್ಲಿ ಗೇರು ಹಣ್ಣಿನ ಆರ್ಥಿಕ ಬಳಕೆಯೊಂದಿಗೆ ದೇಶದ ಗೇರು ಬೆಳೆಗಾರರಿಗೂ ಮತ್ತು ದೇಶದ ಆದಾಯಕ್ಕೂ ಹೆಚ್ಚಿನ ಲಾಭವಾಗುವುದರಲ್ಲಿ ಸಂಶಯವಿಲ್ಲ.

೨.೨ ಜಾಗತಿಕ ಮಟ್ಟದಲ್ಲಿ ಗೇರು ಉತ್ಪಾದನೆ

ಗೇರು ಬೀಜವನ್ನು ಪ್ರಮುಖವಾಗಿ ಏಷಿಯಾ, ಆಫ್ರಿಕಾ ಹಾಗೂ ದಕ್ಷಿಣ ಅಮೇರಿಕಾದಲ್ಲಿ ಬೆಳೆಯಲಾಗುತ್ತದೆ. ಏಷಿಯಾದಲ್ಲಿ ಭಾರತ ಮತ್ತು ವಿಯೆಟ್ನಾಂ ಪ್ರಮುಖ ಗೇರು ಬೆಳೆಯುವ ದೇಶಗಳಾಗಿದ್ದು ಆ ನಂತರದ ಸ್ಥಾನವನ್ನು ಕ್ರಮವಾಗಿ ಇಂಡೋನೇಶಿಯಾ, ಫಿಲಿಪೈನ್ಸ್, ಮಲೇಶಿಯಾ, ಥಾಯ್‌ಲ್ಯಾಂಡ್ ಹಾಗೂ ಶ್ರೀಲಂಕಾ ಗಳಿಸಿಕೊಂಡಿದ್ದವು. ಆಫ್ರಿಕಾ ದೇಶಗಳಲ್ಲಿ ಪ್ರಮುಖವಾಗಿ ನೈಜೀರಿಯಾ, ಕೋಟೆ ಡಿ ಐವರಿ ತಾಂಜಾನಿಯಾ, ಮೊಜಾಂಬಿಕ್, ಕೆನ್ಯಾ, ಬೆನಿನ್, ಗಿನಿಯಾ ಬಿಸಾವು, ಘಾನಾ, ಸೆನಗಲ್ ಮತ್ತು ಮಡಗಾಸ್ಕರ್ ಈ ದೇಶಗಳಲ್ಲಿ ಗೇರು ಬೆಳೆಸಲಾಗುತ್ತಿತ್ತು. ಲ್ಯಾಟಿನ್ ಅಮೇರಿಕಾ ದೇಶಗಳಲ್ಲಿ ಬ್ರೆಜಿಲ್, ಕೊಲಂಬಿಯಾ, ಕೋಸ್ಟರಿಕಾ, ಹೊಂಡುರಾಸ್ ಮತ್ತು ಸಾಲ್‌ವಡೋರ್‌ಗಳಲ್ಲಿ ಗೇರು ಬೆಳೆಯಲಾಗುತ್ತದೆ.[೧೬] ಪ್ರಪಂಚದಲ್ಲಿ ಗೇರು ಬೆಳೆಯುವ ಬೇರೆ ಬೇರೆ ರಾಷ್ಟ್ರಗಳನ್ನು ಕೆಳಗಿನ ಭೂಪಟದಲ್ಲಿ ಗುರುತಿಸಲಾಗಿದೆ.



ಭೂಪಟ ೨.೨: ಜಗತ್ತಿನ ಗೇರು ಬೆಳೆಯುವ ರಾಷ್ಟ್ರಗಳು

ಪ್ರಪಂಚದ ಒಟ್ಟು ೨೮ ರಾಷ್ಟ್ರಗಳಲ್ಲಿ ಗೇರು ಬೆಳೆಯುತ್ತಿದ್ದು, ಅವುಗಳ ವಿಸ್ತೀರ್ಣ ಹಾಗೂ ಉತ್ಪಾದನೆಯನ್ನು ಕೋಷ್ಟಕ ೨.೩ರಲ್ಲಿ ನೀಡಲಾಗಿದೆ.

ಕೋಷ್ಟಕ ೨. ೩: ಗೇರು ಬೆಳೆಯುವ ದೇಶಗಳು ಮತ್ತು ಉತ್ಪಾದನೆ (೨೦೧೧)


ಕ್ರ. ಸಂಖ್ಯೆ	ದೇಶಗಳು	ಬೆಳೆಯುವ ಪ್ರದೇಶ ಹೆಕ್ಟೇರುಗಳಲ್ಲಿ	ಒಟ್ಟು ಪ್ರದೇಶದಲ್ಲಿ ಪಾಲು (%)	ಉತ್ಪಾದನೆ (ಮಿಲಿಯನ್ ಗಳಲ್ಲಿ)	ಒಟ್ಟು ಉತ್ಪಾದನೆಯಲ್ಲಿ ಪಾಲು (%)
೧.	ಅಂಗೋಲಾ	೨೮೦೦	೦.೦೫	೧೭೫೦	೦.೦೬
೨.	ಬೆಲ್ಜೈಜ್	೬೯೦	೦.೦೧	೧೦೮೦	೦.೦೩
೩.	ಬೆನಿನ್	೨೪೩೯೦೦	೫.೧೭	೬೯೭೦೦	೨.೫೦
೪.	ಬ್ರೆಜಿಲ್	೭೫೮೯೮೮	೧೬.೧೦	೧೦೪೩೪೨	೩.೭೫
೫.	ಬರ್ಕಿನ್ ಫಾಸೋ	೯೧೦೦	೦.೧೯	೪೮೦೦	೦.೧೭
೬.	ಚೈನಾ	೧೬೦೦	೦.೦೩	೬೪೦	೦.೦೨
೭.	ಕೋಟೆ ಡಿ ಐವರಿ	೮೬೦೦೦೦	೧೮.೨೪	೩೭೦೦೦೦	೧೩.೩೦
೮.	ಡೊಮಿನಿಕನ್ ರಿಪಬ್ಲಿಕ್	೬೧೦೦	೦.೧೨	೧೨೮೩	೦.೦೪
೯.	ಎಲ್ ಸಲ್ವಾಡೋರ್	೩೮೦೦	೦.೦೮	೩೩೮೦	೦.೧೨
೧೦.	ಘಾನಾ	೫೯೦೦೦	೧.೨೫	೨೮೪೦೦	೧.೦೨
೧೧.	ಗಿನಯಾಬಿಸು	೨೪೦೫೦೦	೫.೧೦	೯೧೧೦೦	೩.೨೭
೧೨.	ಹೊಂಡುರಸ್	೧೪೦೦	೦.೦೨	೧೮೫೧	೦.೦೬
೧೩.	ಭಾರತ	೯೨೩೦೦೦	೧೯.೫೮	೬೧೩೦೦೦	೨೨.೦೩
೧೪.	ಇಂಡೋನೇಷ್ಯಾ	೫೭೪೩೫೮	೧೨.೧೮	೧೪೫೦೮೨	೫.೨೧
೧೫.	ಕೇನ್ಯಾ	೭೫೦೦೦	೧.೫೯	೮೬೦೦	೦.೩೧
೧೬.	ಮಡ್ ಗಾಸ್ಕರ್	೧೪೮೦೦	೦.೩೧	೬೨೦೦	೦.೨೨
೧೭.	ಮಲೇಶಿಯಾ	೭೫೦೦	೦.೧೫	೧೨೪೦೦	೦.೪೪
೧೮.	ಮೆಕ್ಸಿಕೋ	೧೪೦೦	೦.೦೨	೨೭೧೯	೦.೦೯
೧೯.	ಮೊಝಾಂಬಿಕ್	೭೭೦೦೦	೧.೬೩	೬೭೨೦೦	೨.೩೪
೨೦.	ನೈಜೀರಿಯಾ	೩೩೦೦೦೦	೭.೦೦	೬೫೦೦೦೦	೨೩.೩೬
೨೧.	ಪೆರು	೪೦೩	೦.೦೧	೨೧೨೪	೦.೦೭
೨೨.	ಫಿಲಿಫೈನ್ಸ್	೨೮೧೩೪	೪.೫೯	೧೩೪೬೮೧	೪.೮೪
೨೩.	ಸೆನಿಗಲ್	೧೬೨೦೦	೦.೩೮	೫೭೦೦	೦.೨೦
೨೪.	ಶ್ರೀಲಂಕಾ	೨೨೭೧೦	೦.೪೮	೬೪೯೦	೦.೨೩
೨೫.	ಥಾಯ್ ಲೆಂಡ್	೨೩೮೪೭	೦.೫೧	೩೭೮೫೭	೧.೩೭
೨೬.	ಟೋಗೋ	೫೦೦	೦.೦೧	೭೯೦	೦.೦೨
೨೭.	ವಿಯೆಟ್ನಾಂ	೩೪೦೩೦೦	೭.೨೨	೨೮೯೮೪೨	೧೦.೪೨
೨೮.	ತಾಂಜೇನಿಯಾ	೯೦,೦೦೦	೧.೯೦	೧೨೧೧೩೫	೪.೩೫
	ಒಟ್ಟು	**೪೬೭,೧೩,೦೩೦**	**೧೦೦%**	**೨೭,೮೨,೧೪೬**	**೧೦೦%**

Source: Venkatesh N. Hubli & R.Jnadevan 2012, Cashew Development in India: Strategies for sustainable Development. Souvenir DCCD Cochi P. 18.

ಬ್ರೆಜಿಲ್ ಗೇರು ಬೆಳೆಯ ತವರು ಎನಿಸಿಕೊಂಡರೂ, ಜಾಗತಿಕ ಮಟ್ಟದಲ್ಲಿ ಭಾರತ ಗೇರು ಬೆಳೆಯ ವಿಸ್ತೀರ್ಣದಲ್ಲಿ ಮೊದಲ ಸ್ಥಾನವನ್ನು ಉಳಿಸಿಕೊಂಡು ಬಂದಿರುವುದು. ನಂತರದ ಸ್ಥಾನದಲ್ಲಿ ಕ್ರಮವಾಗಿ ಕೋಟೆ ಡಿ ಐವರಿ ಹಾಗೂ ಬ್ರೆಜಿಲ್ ಗಳಿಸಿಕೊಂಡಿದೆ. ಗೇರು ಉತ್ಪಾದನೆಯಲ್ಲಿ ಪ್ರಸ್ತುತ ನೈಜೀರಿಯಾ ಮೊದಲ ಸ್ಥಾನದಲ್ಲಿದ್ದರೆ ಕ್ರಮವಾಗಿ ಭಾರತ ಹಾಗೂ ಕೋಟೆ ಡಿ ಐವರಿ ಮುಂಚೂಣಿಯಲ್ಲಿವೆ.

ಅರವತ್ತರ ದಶಕದಲ್ಲಿ ಭಾರತವು ಪ್ರಪಂಚದ ಪ್ರಮುಖ ಗೇರು ಬೆಳೆಯುವ ಪ್ರದೇಶವೆಂದು ಪ್ರಸಿದ್ಧಿ ಪಡೆದಿತ್ತು. ಆ ನಂತರದ ಸ್ಥಾನವನ್ನು ಮೊಜಾಂಬಿಕ್ ಮತ್ತು ತಾಂಜೇನಿಯಾಗಳು ಪಡೆದುಕೊಂಡಿದ್ದವು. ಜಾಗತಿಕ ಮಟ್ಟದಲ್ಲಿ ಕಚ್ಚಾಗೇರು ಉತ್ಪಾದನೆಯ ಪ್ರದೇಶದ ವಿಸ್ತೀರ್ಣ ೫೧೬,೫೫೦ ಹೆಕ್ಟೇರುಗಳಷ್ಟಿದ್ದು ೨೦೧೦ ರ ವೇಳೆಗೆ ಅದು ೪೬೪೩೭೩೦ ಹೆಕ್ಟೇರುಗಳಷ್ಟು ಅಂದರೆ ಶೇಖಡಾ ೭೯೮ ರಷ್ಟು ಹೆಚ್ಚಳ ಕಂಡು ಬಂತು. ಗ್ರಾಮೀಣ ಪ್ರದೇಶದ ಪ್ರಮುಖವಾದ ಜೀವನೋಪಾಯದ ಮಾರ್ಗವಾಗಿ ಗೇರು ಉದ್ಯಮ ಮಹತ್ವ ಪಡೆಯಿತು. ಪೂರ್ವ ಆಫ್ರಿಕಾದ ದೇಶಗಳಾದ ತಾಂಜಾನಿಯಾ, ನೈಜೀರಿಯಾ ಮತ್ತು ಕೇನ್ಯಾದಲ್ಲಿ ೭೦ ರ ದಶಕದಲ್ಲಿ ಗೇರು ಕೃಷಿಯನ್ನು ಪರಿಚಯಿಸಲಾಯಿತು. ಆ ವೇಳೆಗೆ ಮೊಜಾಂಬಿಕ್‌ನಲ್ಲಿ ರಾಜಕೀಯ ಹಾಗೂ ಅಂತರ್ ಯುದ್ಧದಿಂದಾಗಿ ಗೇರು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವಂತಾಯಿತು. ಇಂಡೋನೇಶಿಯಾ, ಮಾಲಿ ಮಲೇಶಿಯಾ, ಪೆರು ಇತ್ಯಾದಿ ದೇಶಗಳು ಗೇರು ಕೃಷಿಯಲ್ಲಿ ಆಸಕ್ತಿ ತೋರಿಸ ತೊಡಗಿದ್ದರಿಂದ ಗೇರು ಕೃಷಿಯಲ್ಲಿ ಏಷ್ಯಾ ಖಂಡಕ್ಕೆ ಮಹತ್ವ ಲಭ್ಯವಾಯಿತು.[೧೭]

ಜಾಗತಿಕ ಮಟ್ಟದಲ್ಲಿ ಕಚ್ಚಾಗೇರು ಉತ್ಪಾದನೆಯ ಪ್ರಮಾಣ ೯೦ ರ ದಶಕದಲ್ಲಿ ಗಣನೀಯವಾಗಿ ಏರಿಕೆಯಾಯಿತು. ವಿಯೆಟ್ನಾಂ ಹೊಸದಾಗಿ ಕಚ್ಚಾಗೇರು ಉತ್ಪಾದನೆಯನ್ನು ಪ್ರಾರಂಭಿಸಿದ್ದು ಈ ಬೆಳವಣಿಗೆಗೆ ಕಾರಣವಾಯಿತು. ಅಲ್ಲಿಯವರೆಗೆ ಭಾರತ ೯೯% ಗೋಡಂಬಿ ಮಾರುಕಟ್ಟೆಯನ್ನು ಹೊಂದಿದ್ದು ಪ್ರಮುಖ ನಿರ್ಯಾತಗಾರ ರಾಷ್ಟ್ರ ಎಂಬ ಹೆಗ್ಗಳಿಕೆಯನ್ನು ಗಳಿಸಿಕೊಂಡಿತ್ತು. ಜಗತ್ತಿನ ಒಟ್ಟು ಕಚ್ಚಾಗೇರಿನ ಉತ್ಪಾದನೆ ೧೯೬೧ ರಲ್ಲಿ ೨೮೯,೪೯೬ ಟನ್‌ಗಳಷ್ಟು ಇದ್ದು ೨೦೧೦ ರಲ್ಲಿ ೨೭,೮೨,೧೪೬ ಟನ್‌ಗಳಾಗೇರಿತು. ಇದು ೭೫೭% ಬೆಳವಣಿಗೆಯಾಗಿದೆ. ೨೦೦೧ ರಿಂದ ೨೦೧೦ ರವರೆಗಿನ ಅವಧಿಯ ದರದಲ್ಲಿ ಕಚ್ಚಾಗೇರಿನ ಉತ್ಪಾದನೆಯಲ್ಲಿ ಶೇ. ೬.೪೯ ಹೆಚ್ಚಳ ದಾಖಲಾಯಿತು. ೧೯೬೧ ರಿಂದ ೨೦೧೦ ರವರೆಗೆ ಜಾಗತಿಕ ಮಟ್ಟದಲ್ಲಿ ಕಚ್ಚಾಗೇರಿನ ಉತ್ಪಾದನೆಯ ಬೆಳವಣಿಗೆಯ ದರವನ್ನು ಚಿತ್ರ ೨.೨ ತೋರಿಸುತ್ತದೆ.



	೧೯೬೧-೭೦	೧೯೭೧-೮೦	೧೯೮೧-೯೦	೧೯೯೧-೨೦೦೦	೨೦೦೧-೨೦೧೦	
ಪ್ರದೇಶ	೫.೪೮	೧.೦೧	೩.೦೭	೬.೭	೩.೪೨	
ಉತ್ಪಾದನೆ	೫.೬೮	-೨.೮೨	೧೩.೫೨	೬.೬೨	೬.೪೯	

ಚಿತ್ರ ೨. ೨. ಜಾಗತಿಕ ಸಂಯುಕ್ತ ವಾರ್ಷಿಕ ಬೆಳವಣಿಗೆಯ ದರ

ಗೇರು ಬೆಳೆಯುವ ಪ್ರದೇಶದ ವಾರ್ಷಿಕ ವಿಸ್ತೀರ್ಣ ೧೯೬೦ ರ ದಶಕದಲ್ಲಿ ವಾರ್ಷಿಕ ಶೇ. ೫.೪೮ ರಷ್ಟು ಬೆಳವಣಿಗೆ ಸಾಧಿಸಿತು. ೧೯೭೦ ರ ದಶಕದಲ್ಲಿ ವಾರ್ಷಿಕ ಬೆಳವಣಿಗೆಯ ದರ ಶೇ. ೧.೦೧ ಕ್ಕೆ ಕುಸಿಯಿತು. ೧೯೮೦ ರ ದಶಕದಲ್ಲಿ ವಾರ್ಷಿಕ ಬೆಳವಣಿಗೆಯ ದರ ಶೇ. ೩.೦೭ ಕ್ಕೇರಿತು. ೧೯೯೦ ರ ದಶಕದಲ್ಲಿ ಅತ್ಯಧಿಕ ಬೆಳವಣಿಗೆಯ ದರವಾದ ಶೇ. ೬.೭೦ ದಷ್ಟಾಯಿತು. ೨೦೦೦ ದ ದಶಕದಲ್ಲಿ ಗೇರು ಬೆಳೆಯುವ ಪ್ರದೇಶದ ವಾರ್ಷಿಕ ಹೆಚ್ಚಳದ ದರವು ಶೇ. ೩.೪೨ ರಷ್ಟಿತ್ತು. ಬೆಳವಣಿಗೆಯ ದರದಲ್ಲಿ ಏರುಪೇರಾದರೂ ಒಟ್ಟು ಬೆಳೆ ವಿಸ್ತೀರ್ಣ ಅವಲೋಕಿತ ದಶಕಗಳಲ್ಲಿ ಏರಿಕೆಯಾಗುತ್ತಾ ಹೋದುದನ್ನು ಕಾಣಬಹುದು. ೧೯೬೦ ರ ದಶಕದಲ್ಲಿ ಗೇರು ಬೆಳೆ ವಿಸ್ತೀರ್ಣ ಹಾಗೂ ಉತ್ಪಾದನೆಯಲ್ಲಿ ಕುಸಿತ ಕಂಡು ಬಂದರೂ ೧೯೭೦ ರ ನಂತರ ಉತ್ಪಾದನೆಯಲ್ಲಿ ತೀವ್ರವಾದ ಏರಿಕೆಯನ್ನು ಕಂಡುಕೊಂಡರೂ ಗೇರು ಪ್ರದೇಶದ ವಿಸ್ತೀರ್ಣದಲ್ಲಿ ಆ ಪ್ರಮಾಣದ ಹೆಚ್ಚಳ ಕಂಡು ಬರಲಿಲ್ಲ. ಆದರೆ ೯೦ ರ ದಶಕದ ಕೊನೆ ಭಾಗದಲ್ಲಿ ಉತ್ಪಾದನೆಯಲ್ಲಿ ಕುಸಿತ ಕಂಡು ಬಂದಿದ್ದು ವಿಸ್ತೀರ್ಣದಲ್ಲಿ ಯಾವುದೇ ಬದಲಾವಣೆ ಆಗದೇ ಇರುವುದನ್ನು ಗಮನಿಸಬಹುದು.

ಗೇರು ಉತ್ಪಾದನೆಯ ವಾರ್ಷಿಕ ದರವು ೧೯೬೦ ರ ದಶಕದಲ್ಲಿ ವಾರ್ಷಿಕ ಶೇಕಡಾ ೫.೬೮ ಇದ್ದದ್ದು ಅನಿರೀಕ್ಷಿತವಾಗಿ ೧೯೭೦ ರ ದಶಕದಲ್ಲಿ –೨.೮೨ ಋಣಾತ್ಮಕತೆಯನ್ನು ದಾಖಲಿಸಿತ್ತು. ಕಾರಣ ಗೇರು ಬೆಳೆಯುವ ಬಹುತೇಕ ರಾಷ್ಟ್ರಗಳು ಕಡಿಮೆ ಇಳುವರಿಯ ಸಮಸ್ಯೆಯಿಂದ ಬಳಲುತ್ತಿದ್ದವು. ಅದರೊಂದಿಗೆ ಕೀಟ ಹಾಗೂ ರೋಗ ಭಾದೆ, ವಯಸ್ಸಾದ ಗೇರು ಮರಗಳು, ಕಳಪೆ ನಿರ್ವಹಣೆ, ಪ್ರತಿಕೂಲ ಹವಾಮಾನ ಇವುಗಳೆಲ್ಲ ಗೇರು ಇಳುವರಿಯ ಕುಸಿತಕ್ಕೆ ಕಾರಣವಾದವು. ನಂತರದ ದಶಕಗಳಲ್ಲಿ ಗೇರು ಉತ್ಪಾದನೆಯ ವಾರ್ಷಿಕ ದರ ಅಧಿಕವಾಗುತ್ತಾ ಹೋಗಿದೆ. ಆದರೆ ೨೦೦೦ ದ ದಶಕದಲ್ಲಿ ಅಲ್ಪ ಪ್ರಮಾಣದ ಇಳಿಕೆ ಕಂಡು ಬಂದಿದೆ. ಅದರ ಹೊರತಾಗಿಯೂ ಗೇರು ಬೆಳೆಯುವ ಪ್ರದೇಶದ ವಿಸ್ತೀರ್ಣ ಮತ್ತು ಉತ್ಪಾದನೆಯ ಹೆಚ್ಚಳ ಆಶಾದಾಯಕವಾಗಿದೆ. ಕೋಷ್ಟಕ ೨.೪ ಐದು ದಶಕಗಳಲ್ಲಿ ವಿಶ್ವದ ಪ್ರಮುಖ ದೇಶಗಳ ಗೇರು ಉತ್ಪಾದನಾ ಸಾಮರ್ಥ್ಯವನ್ನು ತೋರಿಸುತ್ತದೆ.

ಕೋಷ್ಟಕ ೨.೪ ದೇಶಗಳ ಸರಾಸರಿ ಕಚ್ಚಾಗೇರಿನ ಇಳುವರಿ (ಹೆಕ್ಟೇರಿಗೆ ಕೆ.ಜಿ.ಗಳಲ್ಲಿ)

ದೇಶಗಳು	೧೯೬೧–೭೦	೧೯೭೧–೮೦	೧೯೮೧–೯೦	೧೯೯೧–೨೦೦೦	೨೦೦೦–೦೯
ಭಾರತ	೪೪೧.೦೮	೪೧೧.೦೮	೪೪೯.೩೭	೬೧೮.೧೧	೬೯೧.೪೦
ಬ್ರೆಜಿಲ್	೨೦೪.೯೭	೨೦೪.೯೭	೨೦೧.೫೨	೨೦೯.೨೦	೨೬೦.೯೯
ಕೋಟೆ ಡಿ ಐವರಿ	೪೮.೬೫	೫೦.೧೭	೧೫೦.೮೪	೩೪೯.೬೬	೪೦೫.೪೫
ಗಿನಿಯಾ ಬಿಸ್ಸಾವ್	೨೦೦.೮೩	೨೧೧.೧೧	೨೯೨.೯೧	೩೬೧.೪೨	೪೧೨.೬೨
ಇಂಡೋನೇಶಿಯ	ಲಭ್ಯವಿಲ್ಲ	೧೦೯.೬೦	೧೭೪.೯೩	೨೮೩.೫೨	೨೯೩.೬೩
ಮೊಜಾಂಬಿಕ್	೬೨೨.೬೨	೬೦೪.೮೪	೫೭೦.೬೭	೬೯೪.೬೭	೯೪೮.೨೮
ನೈಜೀರಿಯಾ	೬೦೦.೨೪	೬೨೫.೦೦	೬೨೨.೫೦	೮೩೯.೭೮	೧೯೩೪.೯೭
ಟಾಂಜೆನಿಯಾ	೬೨೧.೭೭	೬೦೫.೬೬	೫೫೫.೦೧	೧೦೦೧.೬೦	೧೦೩೪.೭೭
ವಿಯೆಟ್ನಾಂ	೭೦೦.೦೦	೭೦೦.೦೦	೭೮೪.೨೦	೧೨೨೧.೬೦	೨೬೭೬.೫೧
ಜಾಗತಿಕ	೬೩೦.೨೮	೬೨೫.೮೪	೭೩೫.೨೮	೯೨೪.೬೦	೧೨೬೬.೩೭

Source: FAO State Agriculture Crops and Various News

ಕಚ್ಚಾಗೇರಿನ ಇಳುವರಿಯ ಹೆಚ್ಚಳವನ್ನು ದಶ ವಾರ್ಷಿಕಗಳಲ್ಲಿ ದಾಖಲಿಸಲಾಗಿದೆ. ೧೯೬೦ ದಶಕಕ್ಕಿಂತ ಕಡಿಮೆ ಇಳುವರಿ ಭಾರತದಲ್ಲಿ ೧೯೭೦ ರ ದಶಕದಲ್ಲಿ ದಾಖಲಿಸಲಾಗಿದೆ. ಆದರೆ ಆ ಬಳಿಕ ಮೂರು ದಶಕಗಳಲ್ಲಿ ಇಳುವರಿ ಹೆಚ್ಚುತ್ತಾ ಹೋಗಿರುವುದನ್ನು ಗಮನಿಸಬಹುದು. ೧೯೬೦ ರ ದಶಕವನ್ನು ೨೦೦೦ ದ ದಶಕದೊಡನೆ ಹೋಲಿಸಿದಾಗ ಭಾರತದ ಇಳುವರಿ ಶೇ. ೫೬.೭೫ ಹೆಚ್ಚಾಗಿರುವುದು ಕಂಡು ಬರುತ್ತದೆ. ಅಧಿಕ ಇಳುವರಿಯ ಗೇರು ತಳಿಗಳ ಬಳಕೆ, ವೈಜ್ಞಾನಿಕ ಕೃಷಿ ವಿಧಾನಗಳ ಅಳವಡಿಕೆ ಇದಕ್ಕೆ ಪ್ರಮುಖ ಕಾರಣಗಳಾಗಿವೆ. ವಾಸ್ತವವಾಗಿ ಈ ಏರಿಕೆ ಗಣನೀಯವಾದುದಲ್ಲ. ಜಾಗತಿಕವಾಗಿ ಗೇರು ಬೀಜದ ಇಳುವರಿ ಈ ೫೦ ವರ್ಷಗಳಲ್ಲಿ ಶೇ. ೧೦೦.೭೫ ರಷ್ಟು ಹೆಚ್ಚಳವನ್ನು ಸಾಧಿಸಿತ್ತು. ಅದರೊಡನೆ ಹೋಲಿಸಿದರೆ ಭಾರತದ ಗೇರು ಇಳುವರಿ ನಿರಾಶಾದಾಯಕವಾಗಿದೆ. ಭಾರತವನ್ನು ಒಳಗೊಂಡಂತೆ ಪ್ರಸ್ತುತ ೨೮ ರಾಷ್ಟ್ರಗಳು ಗೇರು ಬೆಳೆಯುತ್ತಿವೆ. ಭಾರತವು ಜಗತ್ತಿನ ಶೇಕಡಾ ೧೯.೫೮ ರಷ್ಟು ಗೇರು ಬೆಳೆಯುವ ಪ್ರದೇಶವನ್ನು ಹೊಂದಿದ್ದು, ಅತ್ಯಂತ ಹೆಚ್ಚು ಗೇರು ಬೆಳೆಯುವ ರಾಷ್ಟ್ರ ಎಂದೆನಿಸಿಕೊಂಡಿದೆ. ಆದರೆ ಅದರ ಉತ್ಪಾದನೆಯು ಜಗತ್ತಿನ ಒಟ್ಟು ಉತ್ಪಾದನೆಯಲ್ಲಿ ಕೇವಲ ಶೇಕಡಾ ೨೨.೦೩ ಮಾತ್ರವಾಗಿರುವುದು ಕಂಡು ಬರುತ್ತದೆ. ನೈಜೀರಿಯಾ ಜಗತ್ತಿನ ಶೇಕಡಾ ೭.೦೦ ರಷ್ಟು ಮಾತ್ರ ಗೇರು ಬೆಳೆಯುವ ಪ್ರದೇಶವನ್ನು ಹೊಂದಿದ್ದರೂ ಉತ್ಪಾದನೆಯಲ್ಲಿ ಜಗತ್ತಿನ ಶೇಕಡಾ ೨೩.೩೬ ರಷ್ಟು ಹೊಂದಿರುವುದು ಗಮನಾರ್ಹ. ಇದು ಭಾರತದ ಉತ್ಪಾದನಾ ಸಾಮರ್ಥ್ಯದ ವೈಫಲ್ಯವನ್ನು ಸೂಚಿಸುತ್ತದೆ. ಪ್ರಮುಖ ಕಚ್ಚಾಗೇರು ಉತ್ಪಾದಕ ರಾಷ್ಟ್ರಗಳಲ್ಲಿ ಏಷಿಯನ್ ದೇಶಗಳು ಒಟ್ಟು ಜಾಗತಿಕ ಉತ್ಪಾದನೆಯಲ್ಲಿ ಶೇಕಡಾ ೫೪ ರಷ್ಟು ಪಾಲು ಹೊಂದಿದ್ದು ಆಫ್ರಿಕನ್ ದೇಶಗಳು ಶೇಕಡಾ ೩೫ ರಷ್ಟು ಪಾಲು ಹೊಂದಿವೆ. ಶೇಕಡಾ ೧೧ರಷ್ಟನ್ನು ಅಮೇರಿಕಾ ಉತ್ಪಾದಿಸುತ್ತದೆ.

ಪ್ರಪಂಚದ ಪ್ರಮುಖ ಗೇರು ಬೆಳೆಯುವ ರಾಷ್ಟ್ರಗಳ ಇಳುವರಿಯನ್ನು ಅವಲೋಕಿಸಿದಾಗ ಭಾರತದ ಗೇರು ಇಳುವರಿಯು ಅತ್ಯಂತ ಕಡಿಮೆ ಎಂಬುದು ತಿಳಿದು ಬರುತ್ತದೆ. ಇದನ್ನು ಕೋಷ್ಟಕ ೨.೫ ರಲ್ಲಿ ತೋರಿಸಲಾಗಿದೆ.

ಕೋಷ್ಟಕ ೨.೫ ಪ್ರಪಂಚದ ಪ್ರಮುಖ ಗೇರು ಬೆಳೆಯುವ ರಾಷ್ಟ್ರಗಳ ಇಳುವರಿ (ಕೆ.ಜಿ./ಹೆಕ್ಟೇರ್‌ಗಳಲ್ಲಿ)

ವರ್ಷ	ಭಾರತ	ಬ್ರೆಜಿಲ್	ವಿಯೆಟ್ನಾಂ	ಕೋಟೆ ಡಿ ಐವರಿ	ಮೊಜಾಂಬಿಕ್	ತಾಂಜೇನಿಯಾ
೨೦೦೧-೦೨	೬೪೩	೧೯೪	೧೪೭೦	೬೫೭	೮೨೯	೧೩೫೬
೨೦೦೨-೦೩	೬೨೭	೨೪೭	೨೧೪೫	೩೬೦	೭೭೨	೬೮೮
೨೦೦೩-೦೪	೬೪೯	೨೬೮	೩೫೭೦	೨೯೧	೮೫೧	೧೦೨೧
೨೦೦೪-೦೫	೬೮೬	೨೭೨	೨೭೬೭	೩೫೨	೭೧೬	೧೧೬೦
೨೦೦೫-೦೬	೬೬೩	೨೧೮	೨೭೬೦	೩೫೬	೮೬೯	೧೧೨೫
೨೦೦೬-೦೭	೬೮೫	೩೪೩	೨೭೧೯	೩೬೨	೮೩೮	೮೬೦
೨೦೦೭-೦೮	೭೨೬	೧೯೨	೨೭೪೫	೪೨೪	೮೨೭	೯೯೬
೨೦೦೮-೦೯	೭೬೬	೩೨೫	೨೯೫೭	೪೨೪	೧೪೧೭	೧೦೫೪
೨೦೦೯-೧೦	೭೭೮	೨೮೮	೨೯೫೭	೪೨೪	೧೪೧೭	೧೦೫೪

Source:FAO Stat – Agricultural Crops, 'Trends in World Raw Cahsew Nut (RCN) Area and Production" Cashew Hand book 2011,Global Perspective.

೨೧ ನೇ ಶತಮಾನದ ಮೊದಲ ದಶಕದಲ್ಲಿ ಭಾರತದ ಇಳುವರಿಯನ್ನು ಇತರ ಪ್ರಮುಖ ದೇಶಗಳೊಡನೆ ಹೋಲಿಸಿ ನೋಡಬಹುದು. ೨೦೦೧-೦೨ ರಲ್ಲಿ ಭಾರತದ ಇಳುವರಿ ಹೆಕ್ಟೇರಿಗೆ ೬೪೩ ಕೆ. ಜಿ. ಇದ್ದದ್ದು. ೨೦೦೯-೧೦ರಲ್ಲಿ ೭೭೮ ಕೆ. ಜಿ. ಗಳಿಗೆ ಏರಿದೆ. ಒಂದು ದಶಕದಲ್ಲಿ ಸಾಧಿಸಲಾದ ಏರಿಕೆಯ ದರ ಶೇ. ೨೧ ರಷ್ಟು. ಇದು ಉತ್ತಮ ಪ್ರಗತಿ ಎಂಬುದು ಏನೋ ನಿಜವೆ. ಆದರೆ ವಿಯೆಟ್ನಾಂ ಇದೇ ಅವಧಿಯಲ್ಲಿ ಶೇಕಡಾ ೧೦೧.೧೫ರಷ್ಟು ಮತ್ತು ಮೊಜಾಂಬಿಕ್ ಶೇ. ೭೦.೯೨ರಷ್ಟು ಏರಿಕೆಯನ್ನು ಸಾಧಿಸಿವೆ. ಇವುಗಳೊಡನೆ ಹೋಲಿಸಿದರೆ ಭಾರತದ ಇಳುವರಿ ಏರಿಕೆ ಬಹಳ ಕಡಿಮೆ ಇರುವುದು ಗೋಚರವಾಗುತ್ತದೆ. ಪ್ರಪಂಚದ ಪ್ರಮುಖ ಗೇರು ಬೆಳೆಯುವ ರಾಷ್ಟ್ರಗಳನ್ನು ಅವಲೋಕಿಸಿದಾಗ ವಿಯೆಟ್ನಾಂ ಗೇರು ಉತ್ಪಾದನಾ ಸಾಮರ್ಥ್ಯದಲ್ಲಿ ಮುಂಚೂಣಿಯಲ್ಲಿರುವುದು ಕಂಡು ಬರುತ್ತದೆ. ೨೦೦೯-೧೦ರ ಅಂಕಿ ಅಂಶಗಳ ಪ್ರಕಾರ ವಿಯೆಟ್ನಾಂ ದೇಶದ ಗೇರು ಉತ್ಪಾದನಾ ಸಾಮರ್ಥ್ಯ ಪ್ರತೀ ಹೆಕ್ಟೇರಿಗೆ ೨೯೫೭ ಕೆ. ಜಿ. ಗಳಾಗಿದ್ದು, ಇದು ಭಾರತದ ಉತ್ಪಾದನಾ ಸಾಮರ್ಥ್ಯದ ನಾಲ್ಕು ಪಟ್ಟು ಅಧಿಕವಾಗಿದೆ. ಮೊಜಾಂಬಿಕ್ ದೇಶದಲ್ಲಿ ಪ್ರತೀ ಹೆಕ್ಟೇರಿಗೆ ೧೪೧೭ ಕೆ.ಜಿ. ಗಳಷ್ಟು ಉತ್ಪಾದನೆ ಮಾಡುತ್ತಿದ್ದು ಎರಡನೇ ಸ್ಥಾನದಲ್ಲಿದೆ. ಭಾರತ ಪ್ರಪಂಚದ ಗೇರು ಬೆಳೆಯುವ ಪ್ರದೇಶದ ವಿಸ್ತೀರ್ಣದಲ್ಲಿ ಶೇಕಡಾ ೧೯.೫೮ ರಷ್ಟು ಭಾಗವನ್ನು ಹೊಂದಿದ್ದರೂ ಉತ್ಪಾದನೆ ಶೇ. ೨೨.೦೩ ಮಾತ್ರ. ಆದರೆ ವಿಯೆಟ್ನಾಂ ಪ್ರಪಂಚದ ಗೇರು ಬೆಳೆಯುವ ಪ್ರದೇಶದಲ್ಲಿ ಕೇವಲ ಶೇ. ೭.೨೨ ಭಾಗವನ್ನು ಹೊಂದಿದ್ದರೂ ಶೇ. ೧೦.೪೨ ರಷ್ಟು ಉತ್ಪಾದನೆ ಮಾಡುತ್ತಿದೆ. ಮೊಜಾಂಬಿಕ್ ಕೇವಲ ಶೇ. ೧.೬೩ ಗೇರು ಪ್ರದೇಶದಲ್ಲಿ ಪ್ರಪಂಚದ ಶೇ. ೨.೩೪ ಉತ್ಪಾದನೆ ಮಾಡುತ್ತಿದೆ. ಭಾರತದ ಗೇರು ಉತ್ಪಾದನಾ ಸಾಮರ್ಥ್ಯ ತುಲನಾತ್ಮಕವಾಗಿ ಬಹಳ ಕಡಿಮೆ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಭಾರತದ ಉತ್ಪಾದನಾ ಸಾಮರ್ಥ್ಯ ಕಳೆದ ೧೦ ವರ್ಷಗಳಲ್ಲಿ ಕೇವಲ ಶೇ. ೨೦.೯೯ ಹೆಚ್ಚಳವಾಗಿದ್ದರೆ ವಿಯೆಟ್ನಾಂನಲ್ಲಿ ಇದು ಶೇ. ೧೦೧ ರಷ್ಟು ಹೆಚ್ಚಾಗಿದೆ. ಭಾರತದಲ್ಲಿ ಗೇರು ಕೃಷಿ ಇಳುವರಿಯ ಸಾಮರ್ಥ್ಯ ಹೆಚ್ಚಿಸುವ ಎಲ್ಲಾ ಅಗತ್ಯಗಳು ಇವೆ ಎಂಬುದು ಈ ವಿವರಗಳಿಂದ ತಿಳಿದು ಬರುತ್ತದೆ. ಆದರೆ ಆತಂಕಕಾರಿ ವಿಷಯವೆಂದರೆ ಗೇರು ಉತ್ಪಾದನಾ ಸಾಮರ್ಥ್ಯ ನಂತರದ ವರ್ಷಗಳಲ್ಲಿ ಕುಸಿದಿರುವುದು. ಇದು ಗೇರು ಕೃಷಿಯ ಋಣಾತ್ಮಕ ಬೆಳವಣಿಗೆಯ ದ್ಯೋತಕವಾಗಿದೆ.

೨.೩ ಭಾರತದಲ್ಲಿ ಗೇರು ಕೃಷಿ

ಪ್ರಪಂಚದ ಗೇರು ಉದ್ಯಮದಲ್ಲಿ ಭಾರತದ ಸ್ಥಾನ ಅತ್ಯಂತ ಮಹತ್ವ ಪೂರ್ಣವಾಗಿದೆ. ಭಾರತ ಪ್ರಪಂಚದ ಅತ್ಯಂತ ದೊಡ್ಡ ಗೇರು ಉತ್ಪಾದಕ ಹಾಗೂ ನಿರ್ಯಾತಗಾರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ೨೦೧೨-೧೩ರ ಅಂಕಿ ಅಂಶಗಳ ಪ್ರಕಾರ ಭಾರತ ೭.೨೮ ಲಕ್ಷ ಮಿಲಿಯನ್ ಟನ್‌ಗಳಷ್ಟು ಗೇರು ಬೀಜವನ್ನು ೯.೮೨ ಲಕ್ಷ ಹೆಕ್ಟೇರುಗಳಲ್ಲಿ ಉತ್ಪಾದಿಸಿದೆ. ಮತ್ತು ಭಾರತದ ಉತ್ಪಾದನಾ ಸಾಮರ್ಥ್ಯ ಪ್ರತಿ ಹೆಕ್ಟೇರಿಗೆ ೭೭೨ ಕೆ.ಜಿ. ಗಳೆಂದು ದಾಖಲಿಸಲ್ಪಟ್ಟಿದೆ. ಗೇರು ರಫ್ತು ವ್ಯಾಪಾರದಲ್ಲಿ ಶೇಕಡಾ ೪೪.೪೮ ರಷ್ಟು ಭಾರತದ ಪಾಲಾಗಿದೆ. ದೇಶದ ಕೃಷಿ ಉತ್ಪನ್ನಗಳ ರಫ್ತು ವ್ಯಾಪಾರದಲ್ಲಿ ಗೋಡಂಬಿಯು ಮೂರನೇ ಸ್ಥಾನದಲ್ಲಿದ್ದು, ಗೋಡಂಬಿ, ಗೇರು ಬೀಜದ ಎಣ್ಣೆ (CNSL) ಮತ್ತು ಇತರೆ ಉಪ ಉತ್ಪನ್ನಗಳ ರಫ್ತಿನಿಂದ ೨೦೦೯-೧೦ ರಲ್ಲಿ ರೂ. ೨೯೦೫೮.೮ ಮಿಲಿಯನ್ ಗಳಷ್ಟು ಆದಾಯವನ್ನು ಪಡೆದುಕೊಂಡಿದೆ. ಒಂದು ಮಿಲಿಯ ಜನರಿಗೆ ಉದ್ಯೋಗ ಅವಕಾಶ ನೀಡಿದ್ದು ಗ್ರಾಮೀಣ ಭಾರತದ ಅಭಿವೃದ್ಧಿಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿದೆ. ಜಾಗತಿಕ ಗೇರು ಬೆಳೆಯುವ ಪ್ರದೇಶದ ವಿಸ್ತೀರ್ಣ ಹಾಗೂ ಉತ್ಪಾದನೆಯಲ್ಲಿ ಭಾರತದ ಪಾಲನ್ನು ಕೋಷ್ಟಕ ೨.೬ ರಲ್ಲಿ ವಿವರಿಸಲಾಗಿದೆ.


ಕೋಷ್ಟಕ ೨.೬ ವಿಶ್ವದಲ್ಲಿ ಗೇರು ಬೆಳೆಯುವ ವಿಸ್ತೀರ್ಣ ಮತ್ತು ಗೇರು ಉತ್ಪಾದನೆಯಲ್ಲಿ ಭಾರತದ ಸ್ಥಾನ

ವರ್ಷ	ವಿಸ್ತೀರ್ಣ (ಹೆಕ್ಟೇರುಗಳಲ್ಲಿ)		ಉತ್ಪಾದನೆ (ಟನ್‌ಗಳಲ್ಲಿ)	
	ವಿಶ್ವ	ಭಾರತ	ವಿಶ್ವ	ಭಾರತ
೨೦೦೦-೦೧	೩೨೦೯೪೭೦	೭೦೦೦೦೦	೧೪೨೨೯೬೦	೪೭೦೦೦೦
೨೦೦೧-೦೨	೩೫೦೦೯೬೨	೭೫೦೦೦೦	೧೫೯೮೩೩೧	೫೦೦೦೦೦
೨೦೦೨-೦೩	೩೫೦೨೦೯೩	೭೭೦೦೦೦	೧೬೫೧೬೫೨	೫೩೫೦೦೦
೨೦೦೩-೦೪	೩೭೬೧೨೬೯	೭೮೦೦೦೦	೧೯೨೯೧೨೦	೫೪೪೦೦೦
೨೦೦೪-೦೫	೪೦೮೬೧೯೪	೮೨೦೦೦೦	೨೦೧೩೬೭೦	೫೭೩೦೦೦
೨೦೦೫-೦೬	೪೩೧೧೭೩೦	೮೩೭೦೦೦	೨೨೯೨೩೪೭	೬೨೦೦೦೦
೨೦೦೬-೦೭	೪೧೪೬೯೩೬	೮೫೪೦೦೦	೨೩೩೪೯೬೮	೬೬೫೦೦೦
೨೦೦೭-೦೮	೪೧೧೪೧೭೪	೮೬೮೦೦೦	೨೩೧೧೪೮೫	೬೯೫೦೦೦
೨೦೦೮-೦೯	೪೧೮೪೨೭೨	೮೯೩೦೦೦	೨೪೫೩೬೭೯	೬೧೩೦೦೦
೨೦೦೯-೧೦	೪೧೦೩೦೦೦	೯೨೩೦೦೦	೨೪೮೦೮೧೦	೬೩೦೦೦೦


Source:FAO Stat – Agricultural Crops, 'Trends in World Raw Cahsew Nut (RCN) Area and Production" Cashew Hand book 2011,Global Perspective.

೨೦೦೦-೦೧ ರಲ್ಲಿ ವಿಶ್ವದಲ್ಲಿ ಒಟ್ಟು ೩೨,೦೯೪೭೦ ಹೆಕ್ಟೇರುಗಳಲ್ಲಿ ೧೪೨೨೯೬೦ ಟನ್ನು ಗೇರು ಬೆಳೆಯಲಾಗುತ್ತಿತ್ತು. ೨೦೦೯-೧೦ರಲ್ಲಿ ವಿಶ್ವದಲ್ಲಿ ಗೇರು ಬೆಳೆಯುವ ವಿಸ್ತೀರ್ಣ ೪೧೦೩೦೦೦ ಹೆಕ್ಟೇರಿಗಳಿಗೂ, ಗೇರು ಬೀಜದ ಉತ್ಪಾದನೆ ೨೪೮೦೮೧೦ ಟನ್ನುಗಳಿಗೇರಿತು. ಈ ೧೦ ವರ್ಷಗಳ ಅವಧಿಯಲ್ಲಿ ವಿಶ್ವದಲ್ಲಿ ಗೇರು ಬೆಳೆಯುವ ಪ್ರದೇಶದಲ್ಲಿ ಶೇ. ೨೭.೮೪ ಹೆಚ್ಚಳವಾಯಿತು. ಗೇರು ಬೀಜ ಉತ್ಪಾದನೆಯಲ್ಲಿ ಶೇ. ೭೩.೩೫ ರಷ್ಟು ಹೆಚ್ಚಳ ಸಾಧಿಸಲಾಯಿತು. ಇದೇ ಅವಧಿಯಲ್ಲಿ ಭಾರತದಲ್ಲಿ ಗೇರು ಬೆಳೆಯುವ ಪ್ರದೇಶ ೨೦೦೦-೦೧ ರಲ್ಲಿ ೭ ಲಕ್ಷ ಹೆಕ್ಟೇರಿನಿಂದ ೨೦೦೯-೧೦ರಲ್ಲಿ ೯.೨೩ಲಕ್ಷ ಹೆಕ್ಟೇರಿಗಳಿಗೇರಿತು. ೧೦ ವರ್ಷಗಳಲ್ಲಿ ಏರಿಕೆಯ ಪ್ರಮಾಣ ಶೇ. ೩೧.೮೬ ಆಗಿತ್ತು. ಇದು ಜಾಗತಿಕ ಸರಾಸರಿಯಾದ ಶೇ. ೨೭.೮೪ಕ್ಕಿಂತ ಅಧಿಕ. ಇದೇ ಅವಧಿಯಲ್ಲಿ ಭಾರತದಲ್ಲಿ ಗೇರು ಉತ್ಪಾದನೆ ೨೦೦೦-೦೧ರಲ್ಲಿ ೪.೭ ಲಕ್ಷ ಟನ್ನುಗಳಿದ್ದುದು ೨೦೦೯-೧೦ರಲ್ಲಿ ೬.೩ ಲಕ್ಷ ಟನ್ನುಗಳಿಗೇರಿತು. ೧೦ ವರ್ಷಗಳಲ್ಲಿ ಉತ್ಪಾದನೆ ಶೇ. ೩೪.೦೪ ರಷ್ಟು ಏರಿಕೆ ದಾಖಲಿಸಿದೆ. ಇದು ವಿಶ್ವದ ಏರಿಕೆಯಾದ ಶೇ. ೭೩.೩೫ಕ್ಕಿಂತ ಕಡಿಮೆ. ಭಾರತದಲ್ಲಿ ಬೆಳೆ ವಿಸ್ತೀರ್ಣ ಹೆಚ್ಚಾದರೂ ಇಳುವರಿ ಕಡಿಮೆಯಾದುದರಿಂದ ಉತ್ಪಾದನೆ ಗಣನೀಯವಾಗಿ ಏರಿಕೆಯಾಗಿಲ್ಲ. ೨೦೦೦-೦೧ ರಲ್ಲಿ ವಿಶ್ವದ ಒಟ್ಟು ಗೇರು ಬೆಳೆ ಪ್ರದೇಶದ ವಿಸ್ತೀರ್ಣದಲ್ಲಿ ಭಾರತದ ಪಾಲು ೨೧.೮% ಆಗಿದ್ದು, ೨೦೦೯-೧೦ರ ವೇಳೆಗೆ ಇದು ೨೨.೪% ಆಗಿತ್ತು. ಅಂದರೆ ಕೇವಲ ಶೇಕಡಾ ೧ ರಷ್ಟು ಮಾತ್ರ ಹೆಚ್ಚಳ ಸಾಧಿಸಿದಂತಾಗಿತ್ತು. ಗೇರು ಉತ್ಪಾದನೆಯಲ್ಲಿ ೨೦೦೦-೦೧ರಲ್ಲಿ ೩೩% ಪಾಲನ್ನು ಹೊಂದಿದ್ದ ಭಾರತದ ಉತ್ಪಾದನೆ ೨೦೦೯-೧೦ರಲ್ಲಿ ಶೇಕಡಾ ೨೫.೪ಕ್ಕೆ ಕುಸಿಯಿತು. ವಿಸ್ತೀರ್ಣದಲ್ಲಿ ಅಲ್ಪ ಪ್ರಮಾಣದ ಏರಿಕೆ ಕಂಡು ಬಂದರೂ ಕಚ್ಚಾಗೇರು ಉತ್ಪಾದನೆಯಲ್ಲಿ ಶೇಕಡಾ ೮ ರಷ್ಟು ಕುಸಿತ ಕಂಡು ಬಂತು. ಚಿತ್ರ

೨.೩. ಮತ್ತು ಚಿತ್ರ ೨.೪ ರಲ್ಲಿ ವಿಶ್ವದ ಗೇರು ಬೆಳೆಯ ವಿಸ್ತೀರ್ಣದಲ್ಲಿ ಹಾಗೂ ಉತ್ಪಾದನೆಯಲ್ಲಿ ಭಾರತದ ಸ್ಥಾನವನ್ನು ಸೂಚಿಸುತ್ತದೆ.



ಚಿತ್ರ:೨.೩ ಗೇರು ಬೆಳೆ ವಿಸ್ತೀರ್ಣದಲ್ಲಿ ಭಾರತದ ಪಾಲು ೨೦೦೯-೧೦



ಚಿತ್ರ:೨.೪ ಗೇರು ಉತ್ಪಾದನೆಯಲ್ಲಿ ಭಾರತದ ಪಾಲು ೨೦೦೯-೧೦

ಭಾರತದಲ್ಲಿ ರಾಜ್ಯವಾರು ಗೇರು ಬೆಳೆಯುವ ಪ್ರಮುಖ ರಾಜ್ಯಗಳನ್ನು ಭೂಪಟ ೨.೩ ತೋರಿಸುತ್ತದೆ.

ಭೂಪಟ:೨.೩ ಭಾರತದ ಪ್ರಮುಖ ಗೇರು ಬೆಳೆಯುವ ರಾಜ್ಯಗಳು



ಗೇರು ಉತ್ಪಾದನೆಯು ಭಾರತದಲ್ಲಿ ಹೆಚ್ಚಾಗಿ ಕರಾವಳಿ ತೀರದಲ್ಲಿ ಕಂಡು ಬರುತ್ತದೆ. ಅಲ್ಲಿನ ಹವಾಮಾನ ಗೇರು ಬೆಳೆಗೆ ಹೆಚ್ಚು ಪ್ರಶಸ್ತವಾಗಿರುವುದು ಅದಕ್ಕೆ ಮುಖ್ಯ ಕಾರಣ, ಭಾರತದ ಪ್ರಮುಖ ಗೇರು ಬೆಳೆಯುವ ರಾಜ್ಯಗಳು ಯಾವುವೆಂದರೆ ಕೇರಳ, ಆಂಧ್ರ ಪ್ರದೇಶ, ಕರ್ನಾಟಕ, ಮಹಾರಾಷ್ಟ್ರ, ತಮಿಳುನಾಡು, ಒರಿಸ್ಸಾ, ಗುಜರಾತ್, ಛತ್ತೀಸ್ ಘಡ, ಜಾರ್ಖಂಡ್, ಪಶ್ಚಿಮ ಬಂಗಾಲ, ಬಿಹಾರ, ಮೇಘಾಲಯ, ಮಣಿಪುರ, ತ್ರಿಪುರ, ಅಂಡಮಾನ್ ಮತ್ತು ನಿಕೋಬಾರ್ ರಾಜ್ಯಗಳಲ್ಲಿ ಗೇರು ಬೆಳೆಯಲಾಗುತ್ತದೆ. ಉತ್ತರ ಪ್ರದೇಶ, ಉತ್ತರ ಖಂಡ್, ಹರಿಯಾಣ, ಪಂಜಾಬ್, ಹಿಮಾಚಲ ಪ್ರದೇಶ ಮತ್ತು ಜಮ್ಮು ಕಾಶ್ಮೀರಗಳಲ್ಲಿ ಗೇರು ಕೃಷಿ ಇರುವುದಿಲ್ಲ. ಇದಕ್ಕೆ ಈ ರಾಜ್ಯಗಳ ಪ್ರತಿಕೂಲ ಹವಾಮಾನವೇ ಕಾರಣವಾಗಿರುತ್ತದೆ.

ಭಾರತದ ವಿವಿಧ ರಾಜ್ಯಗಳು ಕಳೆದೊಂದು ದಶಕದಲ್ಲಿ ಗೇರು ಬೆಳೆಯಲ್ಲಿ ಸಾಧಿಸಿದ ಪ್ರಗತಿ ಇಂತಿದೆ. (ಕೋಷ್ಟಕ೨.೭)

ಕೋಷ್ಟಕ ೨.೭ ಭಾರತದ ರಾಜ್ಯವಾರು ಗೇರು ಬೆಳೆಯುವ ಪ್ರದೇಶದ ವಿಸ್ತೀರ್ಣ(೦೦೦ ಹೆಕ್ಟೇರುಗಳಲ್ಲಿ)


ವರ್ಷ	ಕೇರಳ	ಕರ್ನಾಟಕ	ಗೋವಾ	ಮಹಾರಾಷ್ಟ್ರ	ತಮಿಳು ನಾಡು	ಆಂಧ್ರ ಪ್ರದೇಶ	ಒರಿಸ್ಸಾ	ಪಶ್ಚಿಮ ಬಂಗಾಳ	ಇತರೆ	ಒಟ್ಟು
೨೦೦೦-೦೧	೧೦೦	೯೧	೫೫	೧೨೧	೮೬	೧೩೦	೯೦	೮	೧೯	೭೦೦
೨೦೦೧-೦೨	೧೦೦	೯೦	೫೫	೧೪೩	೯೦	೧೩೫	೧೧೦	೯	೧೮	೭೫೦
೨೦೦೨-೦೩	೧೦೦	೯೨	೫೫	೧೪೮	೯೨	೧೩೬	೧೨೦	೯	೧೮	೭೭೦
೨೦೦೩-೦೪	೧೦೧	೯೪	೫೫	೧೪೮	೯೫	೧೩೬	೧೨೪	೯	೧೮	೭೮೦
೨೦೦೪-೦೫	೧೦೨	೯೫	೫೫	೧೬೦	೧೦೫	೧೫೦	೧೨೬	೯	೧೮	೮೨೦
೨೦೦೫-೦೬	೮೦	೧೦೦	೫೫	೧೬೦	೧೨೧	೧೭೦	೧೨೦	೧೦	೨೧	೮೩೭
೨೦೦೬-೦೭	೮೦	೧೦೨	೫೫	೧೬೪	೧೨೩	೧೭೧	೧೨೫	೧೦	೨೪	೮೫೪
೨೦೦೭-೦೮	೮೪	೧೦೩	೫೫	೧೬೭	೧೨೩	೧೭೧	೧೩೧	೧೦	೨೪	೮೬೮
೨೦೦೮-೦೯	೭೦	೧೦೭	೫೫	೧೭೦	೧೩೧	೧೮೨	೧೩೭	೧೧	೩೦	೮೯೩
೨೦೦೯-೧೦	೭೨	೧೧೮	೫೫	೧೭೫	೧೩೩	೧೮೩	೧೪೩	೧೧	೩೩	೯೨೩
೨೦೧೦-೧೧	೭೮	೧೧೯	೫೫	೧೮೧	೧೩೫	೧೮೩	೧೪೯	೧೧	೩೩	೯೪೫

Source: Shalini Yadav 2010, "Economics of cashew in India" ocational paper -50 Department of Economic analysis & Research NABARD Mumbai & www.cashewinfo.com

ಕೇರಳ ರಾಜ್ಯವನ್ನು ಹೊರತು ಪಡಿಸಿದರೆ ಉಳಿದೆಲ್ಲಾ ರಾಜ್ಯಗಳಲ್ಲಿ ಕಚ್ಚಾಗೇರಿನ ಉತ್ಪಾದನೆಯ ಪ್ರದೇಶ ಹೆಚ್ಚಾಗಿದೆ. ಅದರಲ್ಲೂ ಮಹಾರಾಷ್ಟ್ರದಲ್ಲಿ ೧,೨೧,೦೦೦ ಹೆಕ್ಟೇರುಗಳಿಂದ ೧೮೧,೦೦೦ ಹೆಕ್ಟೇರುಗಳಿಗೆ ಅಂದರೆ ಶೇ. ೪೯.೫೮ ರಷ್ಟು ಹೆಚ್ಚಾಗಿದೆ. ಕರ್ನಾಟಕದಲ್ಲೂ ೯೧,೦೦೦ ಹೆಕ್ಟೇರುಗಳಿಂದ ೧,೧೯,೦೦೦ ಹೆಕ್ಟೇರುಗಳಿಗೆ ಏರಿದೆ. ಅಂದರೆ ೩೦.೭೬ ಶೇಕಡಾದಷ್ಟು ಏರಿಕೆಯಾಗಿದೆ. ಆದರೆ ಕೇರಳದಲ್ಲಿ ಮಾತ್ರ ಗೇರು ಬೆಳೆಯುವ ಪ್ರದೇಶದ ವಿಸ್ತೀರ್ಣ ೨೨ ಶೇಕಡಾದಷ್ಟು ಕುಸಿದಿದೆ. ಅಂದರೆ ೧,೦೦,೦೦೦ ಹೆಕ್ಟೇರುಗಳಿಂದ ೭೮,೦೦೦ ಹೆಕ್ಟೇರುಗಳಿಗೆ ಇಳಿದಿದೆ. ಕಾರಣ ಕೇರಳದಲ್ಲಿ ಹೆಚ್ಚು ಲಾಭದಾಯಕ ಎಂದೆನಿಸಿಕೊಂಡಿರುವ ರಬ್ಬರು ಬೆಳೆ ಪ್ರಾಮುಖ್ಯತೆಯನ್ನು ಗಳಿಸಿಕೊಳ್ಳುತ್ತಿದೆ. ಮೊದಲಿಗೆ ಗೇರು ಉತ್ಪಾದನೆಯಲ್ಲಿ ಕೇರಳ ಮೊದಲ ಸ್ಥಾನಿಯಾಗಿತ್ತು. ಪ್ರಸ್ತುತ ಆಂಧ್ರ ಪ್ರದೇಶ ಮೊದಲನೆಯ ಸ್ಥಾನವನ್ನು ಗಳಿಸಿಕೊಂಡಿದೆ. ನಂತರದ ಸ್ಥಾನವನ್ನು

ಮಹಾರಾಷ್ಟ್ರ ಪಡೆದುಕೊಂಡಿದೆ. ೨೦೧೦-೧೧ರ ವರದಿಯಂತೆ ಭಾರತದಲ್ಲಿ ಗೇರು ಉತ್ಪಾದನಾ ಪ್ರದೇಶದಲ್ಲಿ ಪ್ರಮುಖ ರಾಜ್ಯಗಳ ಪಾಲನ್ನು ಚಿತ್ರ ೨.೫ ತೋರಿಸುತ್ತದೆ.

ಚಿತ್ರ ೨.೫: ಗೇರು ಬೆಳೆಯುವ ಪ್ರಮುಖ ರಾಜ್ಯಗಳು ೨೦೧೦-೧೧



Source: Shalini Yadav 2010, "Economics of cashew in India" ocational paper -50 Department of Economic analysis & Research NABARD Mumbai & www.cashewinfo.com

೨೦೧೦-೧೧ ರಲ್ಲಿ ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶ ಸಮಾನವಾದ ಗೇರು ಉತ್ಪಾದನಾ ಪ್ರದೇಶವನ್ನು ಹೊಂದಿದ್ದು ತಮ್ಮ ಪಾರಮ್ಯವನ್ನು ಮೆರೆದಿದ್ದರೆ, ನಂತರದ ಸ್ಥಾನವನ್ನು ಕ್ರಮವಾಗಿ ಒರಿಸ್ಸಾ ಹಾಗೂ ತಮಿಳುನಾಡು ಆಕ್ರಮಿಸಿಕೊಂಡಿವೆ. ಕರ್ನಾಟಕ ೫ ನೇ ಸ್ಥಾನವನ್ನು ಪಡೆದುಕೊಂಡಿದೆ. ಪಶ್ಚಿಮ ಬಂಗಾಲದ ಗೇರು ವಿಸ್ತೀರ್ಣ ಪ್ರದೇಶ ಕೇವಲ ಶೇ. ೧.೬ ಮಾತ್ರವಾಗಿದ್ದರೆ ೨೦೧೦-೧೧ರಲ್ಲಿ ಈ ಹಿಂದೆ ಒಟ್ಟು ಗೇರು ಬೆಳೆ ವಿಸ್ತೀರ್ಣದಲ್ಲಿ ಶೇ. ೧೪ ರಷ್ಟು ಭಾಗವನ್ನು ಹೊಂದಿದ್ದ ಕೇರಳ ಕೇವಲ ಶೇ. ೮.೨೫ ರಷ್ಟು ಮಾತ್ರ ಗೇರು ಭೂಮಿಯನ್ನು ಹೊಂದಿರುವುದು ಕಂಡು ಬರುತ್ತದೆ. ಒಟ್ಟು ಗೇರು ಉತ್ಪಾದನಾ ಪ್ರದೇಶದ ವಿಸ್ತೀರ್ಣವನ್ನು ಹೆಚ್ಚಿಸುವುದಕ್ಕಾಗಿ ಸರಕಾರ ತೀವ್ರ ಕ್ರಮ ಕೈಗೊಂಡಿದ್ದು, ಚತ್ತೀಸ್‌ಗಡದಲ್ಲಿ ೪೦ ಸಾವಿರ ಹೆಕ್ಟೇರುಗಳಷ್ಟು ಭೂಮಿಯನ್ನು ಗೇರು ಕೃಷಿಗಾಗಿ ಬಳಸಿಕೊಳ್ಳಲಾಗುತ್ತಿದೆ. ಸುಮಾರು ೭.೧ ಲಕ್ಷ ಹೆಕ್ಟೇರುಗಳಷ್ಟು ಭೂಮಿ ಇತರ ರಾಜ್ಯಗಳಲ್ಲಿ ಗೇರು ಬೆಳೆಯುವ ಸಾಧ್ಯತೆ ಇರುವ ಪ್ರದೇಶಗಳಾಗಿದೆ. ಪ್ರತಿ ವರ್ಷ ೫೦ ಸಾವಿರ ಹೆಕ್ಟೇರುಗಳಷ್ಟು ಭೂಮಿಯನ್ನು ಗೇರು ಕೃಷಿಗೆ ಬಳಸಲಾಗುತ್ತಿದ್ದು ಪ್ರತಿ ಹೆಕ್ಟೇರಿಗೆ ೨೦೦ ಗಿಡಗಳಂತೆ ೧೦೦ ಲಕ್ಷ ಕಸಿ ಕಟ್ಟಿದ ಸುಧಾರಿತ ಗೇರು ಗಿಡಗಳನ್ನು ನೆಡುವ ಯೋಜನೆಯನ್ನು ಸರಕಾರ ಹೊಂದಿದೆ. ಭಾರತದ ವಿವಿಧ ರಾಜ್ಯಗಳಲ್ಲಿ ಗೇರು ಉತ್ಪದನೆಯ ಪ್ರಮಾಣವನ್ನು ಕೋಷ್ಟಕ ೨.೮ರಲ್ಲಿ ದಾಖಲಿಸಲಾಗಿದೆ.




ಕೋಷ್ಟಕ – ೨.೮ ಭಾರತದ ರಾಜ್ಯವಾರು ಕಚ್ಚಾಗೇರು ಉತ್ಪಾದನೆ ೨೦೧೦-೧೧ (೦೦೦ ಮಿ. ಟನ್)

ವರ್ಷ	ಕೇರಳ	ಕರ್ನಾಟಕ	ಗೋವಾ	ಮಹಾರಾಷ್ಟ್ರ	ತಮಿಳು ನಾಡು	ಆಂಧ್ರ ಪ್ರದೇಶ	ಒರಿಸ್ಸಾ	ಪಶ್ಚಿಮ ಬಂಗಾಳ	ಇತರೆ	ಒಟ್ಟು
೨೦೦೦-೦೧	೭೬	೪೨	೨೫	೯೮	೫೯	೭೫	೫೯	೬	೧೦	೪೫೦
೨೦೦೧-೦೨	೮೭	೪೦	೩೦	೧೦೩	೪೬	೮೬	೫೯	೭	೧೨	೪೭೦
೨೦೦೨-೦೩	೯೦	೪೦	೩೦	೧೧೦	೫೦	೯೦	೭೦	೮	೧೨	೫೦೦
೨೦೦೩-೦೪	೯೫	೪೬	೩೨	೧೨೦	೫೧	೯೫	೭೧	೯	೧೬	೫೩೫
೨೦೦೪-೦೫	೬೪	೪೩	೨೬	೧೭೪	೫೩	೮೮	೭೪	೮	೧೪	೫೪೪
೨೦೦೫-೦೬	೬೭	೪೫	೨೭	೧೮೩	೫೬	೯೨	೭೮	೧೦	೧೫	೫೭೩
೨೦೦೬-೦೭	೭೨	೫೨	೨೯	೧೯೭	೬೦	೯೯	೮೪	೧೦	೧೭	೬೨೬
೨೦೦೭-೦೮	೭೮	೫೬	೩೧	೨೧೦	೬೫	೧೦೭	೯೦	೧೦	೧೮	೬೬೫
೨೦೦೮-೦೯	೭೫	೬೦	೩೦	೨೨೫	೬೮	೧೧೨	೯೫	೧೧	೧೯	೬೯೫
೨೦೦೯-೧೦	೬೬	೫೩	೨೬	೧೯೮	೬೦	೯೯	೮೪	೧೦	೧೭	೬೧೩
೨೦೧೦-೧೧	೭೧	೫೭	೨೪	೨೦೮	೬೫	೧೦೭	೯೧	೧೧	೧೯	೬೫೩

Source: Shalini Yadav 2010, “Economics of cashew in India” ocational paper -50 Department of Economic analysis & Research NABARD Mumbai & www.cashewinfo.com

ಭಾರತದ ಕಚ್ಚಾಗೇರು ಉತ್ಪಾದನೆಯಲ್ಲಿ ೨೦೦೦-೦೧ ರಿಂದ ೨೦೦೯-೧೦ರವರೆಗಿನ ಬೆಳವಣಿಗೆಯನ್ನು ವಿಶ್ಲೇಷಿಸಿದಾಗ ಕುತೂಹಲಕಾರಿ ಅಂಶಗಳು ಗಮನಕ್ಕೆ ಬರುತ್ತದೆ. ಈ ಅವಧಿಯಲ್ಲಿ ಭಾರತದ ಒಟ್ಟು ಗೇರು ಉತ್ಪಾದನೆಯಲ್ಲಿ ಶೇ. ೩೬ರಷ್ಟು ಹೆಚ್ಚಳ ಕಂಡು ಬಂದರೂ ಬೇರೆ ಬೇರೆ ರಾಜ್ಯಗಳ ಸ್ಥಿತಿಗತಿಗಳು ವಿಭಿನ್ನವಾಗಿರುವುದನ್ನು ಗಮನಿಸಬಹುದು. ಕೇರಳ, ಕರ್ನಾಟಕ, ಗೋವಾ ಮತ್ತು ತಮಿಳುನಾಡಿನಲ್ಲಿ ೨೦೦೦-೦೧ರ ಉತ್ಪಾದನೆಗಿಂತ ೨೦೦೯-೧೦ರಲ್ಲಿ ಕಡಿಮೆಯಾಗಿರುವುದನ್ನು ಗಮನಿಸಬಹುದಾಗಿದೆ. ಕೇರಳದಲ್ಲಿ ೨೦೦೦-೦೧ರಲ್ಲಿ ಶೇ. ೧೬.೮ ರಷ್ಟಿದ್ದು ಇದು ೨೦೧೦-೧೧ರ ವೇಳೆಗೆ ಶೇ. ೧೦.೯೦ ಕ್ಕೆ ಕುಸಿದಿದೆ. ದಶಕಗಳ ಬೆಳವಣಿಗೆಯ ದರವನ್ನು ಅವಲೋಕಿಸಿದಾಗ ಒಟ್ಟು ಉತ್ಪಾದನೆ ೭೬ ಮಿಲಿಯ ಟನ್‌ಗಳಿಂದ ೭೧ ಮಿಲಿಯ ಟನ್‌ಗಳಿಗೆ ಕುಸಿದಿದ್ದು ಶೇ.೬.೫೭ರಷ್ಟು ಹಿನ್ನೆಡೆಯನ್ನು ಕಂಡಿದೆ. ಆದರೆ ಕರ್ನಾಟಕದಲ್ಲಿ ದಶಕಗಳ ಬೆಳವಣಿಗೆಯ ದರ ಶೇ. ೩೬ ರಷ್ಟಿದ್ದರೂ ಒಟ್ಟು ಉತ್ಪಾದನೆಯಲ್ಲಿ ಕರ್ನಾಟಕದ ಪಾಲು ೨೦೦೦-೦೧ರಲ್ಲಿ ಶೇ. ೯.೩೩ ಇದ್ದರೆ ೨೦೧೦-೧೧ರಲ್ಲಿ ಅದು ಶೇ. ೮.೭೨ ಕ್ಕೆ ಕುಸಿದಿದೆ. ಮಹಾರಾಷ್ಟ್ರದಲ್ಲಿ ಕಳೆದೊಂದು ದಶಕದಲ್ಲಿ ಶೇ. ೧೧೨ ರಷ್ಟು ಏರಿಕೆ ಕಂಡು ಬಂದಿದ್ದು, ದೇಶದ ಒಟ್ಟು ಉತ್ಪಾದನೆಯಲ್ಲೂ ೨೦೧೦-೧೧ ರಲ್ಲಿ ಶೇ. ೩೨ ರಷ್ಟು ಭಾಗವನ್ನು ಪಡೆದುಕೊಂಡಿದೆ. ಇನ್ನು ಒರಿಸ್ಸಾ, ಆಂಧ್ರಪ್ರದೇಶಗಳಲ್ಲಿ ದಶಕಗಳ ಬೆಳವಣಿಗೆಯ ದರ ತಲಾ ಶೇ. ೫೪ ಹಾಗೂ ಶೇ. ೪೩ ಇದ್ದರೂ ಒಟ್ಟು ಉತ್ಪಾದನೆಯಲ್ಲಿ ಈ ರಾಜ್ಯಗಳ ಪಾಲು ಸ್ಥಿರವಾಗಿದೆ. ಗೋವಾ ಹಾಗೂ ತಮಿಳುನಾಡು ರಾಜ್ಯಗಳಲ್ಲಿ ಕಳೆದೊಂದು ದಶಕಗಳಲ್ಲಿ ಯಾವುದೇ ಬದಲಾವಣೆ ಕಂಡು ಬಂದಿಲ್ಲ. ಭಾರತದ ಒಟ್ಟು ಗೇರು ಉತ್ಪಾದನೆಯನ್ನು ಅವಲೋಕನ ಮಾಡಿದಾಗ ಮಹಾರಾಷ್ಟ್ರವೊಂದರಲ್ಲಿ ಮಾತ್ರ ಭರವಸೆ ಮೂಡಿ ಬರುತ್ತಿದೆ. ಉಳಿದಂತೆ ಒರಿಸ್ಸಾ, ಕರ್ನಾಟಕ, ಆಂಧ್ರ ಪ್ರದೇಶಗಳ ಬೆಳವಣಿಗೆಯ ದರ ಆಶಾದಾಯಕವಾಗಿದ್ದು ಇತರೆ ರಾಜ್ಯಗಳಲ್ಲೂ ಗೇರು ಉತ್ಪಾದನೆಯ ಹೆಚ್ಚಳದ ಸಾಧ್ಯತೆಯನ್ನು ಕಾಣಬಹುದು.

೨೦೦೯-೧೦ ರಲ್ಲಿ ದೇಶದ ರಾಜ್ಯವಾರು ಕಚ್ಚಾಗೇರು ಬೀಜ ಉತ್ಪಾದನೆಯನ್ನು ಚಿತ್ರ ೨.೬ ತೋರಿಸುತ್ತದೆ.



ಚಿತ್ರ ೨.೬ ರಾಜ್ಯವಾರು ಕಚ್ಚಾಗೇರು ಉತ್ಪಾದನೆ

೨೦೧೦-೧೧ ರಲ್ಲಿ ಕಚ್ಚಾಗೇರಿನ ಉತ್ಪಾದನೆಯಲ್ಲಿ ಶೇ. ೩೨ರಷ್ಟು ಪಾಲು ಹೊಂದಿರುವ ಮಹಾರಾಷ್ಟ್ರ ಪ್ರಥಮ ಸ್ಥಾನದಲ್ಲಿತ್ತು. ಆಂಧ್ರಪ್ರದೇಶ (ಶೇ. ೧೬), ಒರಿಸ್ಸಾ (ಶೇ.೧೪), ಕೇರಳ (ಶೇ.೧೧) ತಮಿಳುನಾಡು (ಶೇ.೧೦) ಆ ನಂತರದ ಸ್ಥಾನವನ್ನು ಪಡೆದಿದ್ದವು. ಕರ್ನಾಟಕ ಶೇ. ೯ರಷ್ಟು ಪಾಲಿನೊಡನೆ ೬ ನೆಯ ಸ್ಥಾನವನ್ನು ಅಲಂಕರಿಸಿತ್ತು. ಉಳಿದೆಲ್ಲಾ ರಾಜ್ಯಗಳ ಪಾಲು ಶೇ. ೮ ರಷ್ಟು ಮಾತ್ರವಾಗಿತ್ತು. ಗೇರು ಉತ್ಪಾದನೆಯ ಒಟ್ಟು ಚಿತ್ರಣವನ್ನು ಕೆಳಗಿನ ಕೋಷ್ಟಕ ೨.೯ ರಲ್ಲಿ ನಮೂದಿಸಲಾಗಿದೆ.

ಕೋಷ್ಟಕ ೨.೯ : ಗೇರು ಉತ್ಪಾದನೆಯ ಒಟ್ಟು ಚಿತ್ರಣ (೨೦೧೧-೧೨)

ರಾಜ್ಯಗಳು	ಉತ್ಪಾದನಾ ಪ್ರದೇಶ (೦೦೦ಹೆಕ್ಟೇರುಗಳಲ್ಲಿ)	ಉತ್ಪಾದನೆ (೦೦೦ ಮಿಲಿಯನ್ ಟನ್ ಗಳಲ್ಲಿ)	ಉತ್ಪಾದಕತೆ (ಕೆ.ಜಿ./ಹೆಕ್ಟೇರ್)
ಕೇರಳ	೭೭	೭೩	೯೪೮
ಕರ್ನಾಟಕ	೧೧೬	೬೦	೫೧೭
ಗೋವಾ	೫೫	೨೫	೪೫೫
ಮಹಾರಾಷ್ಟ್ರ	೧೭೪	೨೨೩	೧೨೮೨
ತಮಿಳುನಾಡು	೧೩೧	೬೮	೫೧೯
ಆಂಧ್ರಪ್ರದೇಶ	೧೮೩	೧೧೦	೬೦೧
ಒರಿಸ್ಸಾ	೧೪೨	೯೭	೬೮೩
ಜಾರ್ಖಂಡ್	೧೦	೫	೫೦೦
ಇತರೆ	೪೭	೩೧	೮೬೧
ಒಟ್ಟು	೯೩೫	೬೯೨	೭೪೯

Source: Venkatesh N. Hubli, R.Jnanadeva 2012, Cashew Development in India: Strategies for sustainable Production <u>In</u> Souvenier International Conference on Sustainable Cashew Production "Challenges and Opportunities" October 2012, Goa.



ಭಾರತದ ಒಟ್ಟು ಗೇರು ಕೃಷಿ ಭೂಮಿ ೯.೩೫ಲಕ್ಷ ಹೆಕ್ಟೇರುಗಳಾಗಿದ್ದು ಒಟ್ಟು ಉತ್ಪಾದನೆ ೬.೯೨ ಲಕ್ಷ ಮಿಲಿಯನ್ ಟನ್‌ಗಳು ಹಾಗೂ ೧ ಹೆಕ್ಟೇರಿನ ಸರಾಸರಿ ಇಳುವರಿ ೭೪೯ ಕೆ.ಜಿ. ಆಗಿರುತ್ತದೆ. ಉತ್ಪಾದನೆ ಹಾಗೂ ಉತ್ಪಾದನಾ ಸಾಮರ್ಥ್ಯದಲ್ಲಿ ಮಹಾರಾಷ್ಟ್ರ ಮೊದಲ ಸ್ಥಾನಿಯಾಗಿದ್ದು ಅದರ ಸರಾಸರಿ ಉತ್ಪಾದಕತೆ ೧೨೮೨ ಕೆ.ಜಿ. ಆಗಿರುತ್ತದೆ. ಬಳಿಕದ ಸ್ಥಾನ ಕೇರಳಕ್ಕೆ ಸಲ್ಲುತ್ತದೆ. ಕೇರಳದ ಸರಾಸರಿ ಉತ್ಪಾದಕತೆ ಪ್ರತಿ ಹೆಕ್ಟೇರಿಗೆ ೯೪೮ ಕೆ.ಜಿ.ಗಳು. ಒರಿಸ್ಸಾ (೬೮೩ ಕೆ. ಜಿ.), ಆಂಧ್ರಪ್ರದೇಶ (೬೩೦ ಕೆ.ಜಿ.) ಕರ್ನಾಟಕಕ್ಕಿಂತ (೫೧೭ ಕಿ.ಲೋ) ಮುಂದಿವೆ. ಭಾರತದ ಸರಾಸರಿ ಉತ್ಪಾದಕತೆ ೭೪೯ ಕಿ.ಲೋ. ಕರ್ನಾಟಕಕ್ಕಿಂತ ಅಧಿಕ ಇರುವುದು ಗಮನಾರ್ಹ.

ಮಹಾರಾಷ್ಟ್ರದಲ್ಲಿ ಗೇರು ವಿಶೇಷವಾಗಿ ಕಡಲತೀರದ ಕೊಂಕಣ ಭಾಗದಲ್ಲಿ ಬೆಳೆಯಲಾಗುತ್ತಿದ್ದು ಸೂಕ್ತವಾದ ಹವಮಾನವಿರುವುದರಿಂದ ಇಳುವರಿ ಹೆಚ್ಚು. ೧೯೫೭ರಲ್ಲಿ ಮಹಾರಾಷ್ಟ್ರದ ಕೊಂಕಣ ಕೃಷಿ ವಿದ್ಯಾಪೀಠ ಗೇರು ಕೃಷಿ ಅಭಿವೃದ್ಧಿಗಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು. ೧೯೭೦ ರಿಂದ ಸಾಮಾಜಿಕ ಅರಣ್ಯ ಯೋಜನೆ, ಉದ್ಯೋಗ ಖಾತ್ರಿ ಯೋಜನೆ, ಬಂಜರು ಭೂಮಿ ಅಭಿವೃದ್ಧಿ ಯೋಜನೆ ಹಾಗೂ ತೋಟಗಾರಿಕಾ ಅಭಿವೃದ್ಧಿ ಯೋಜನೆಯಡಿಯಲ್ಲಿ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿದ ಪರಿಣಾಮವಾಗಿ ೧೯೭೪ ಹಾಗೂ ೨೦೦೨ರ ಅವಧಿಯಲ್ಲಿ ಗೇರು ಕೃಷಿ ಭೂಮಿ ಶೇ. ೧೭೮ ರಷ್ಟು ಹೆಚ್ಚಳ ಸಾಧಿಸಿತ್ತು. ಇದರೊಂದಿಗೆ ಮಹಾರಾಷ್ಟ್ರದಲ್ಲಿರುವ ಬಹುತೇಕ ಗೇರು ತೋಟಗಳ ಕಸಿ ಕಟ್ಟಿದ ಸುಧಾರಿತ ತಳಿಗಳಿಂದ ಕೂಡಿದ್ದು ಸುಧಾರಿತ ಕೃಷಿ ಪದ್ಧತಿಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ್ದಾರೆ. ಪರಿಣಾಮವಾಗಿ ಮಹಾರಾಷ್ಟ್ರ ಗೇರು ಉತ್ಪಾದಕತೆಯಲ್ಲಿ ಪ್ರಥಮ ಸ್ಥಾನ ಪಡೆಯುವಂತಾಯಿತು. ಭಾರತದ ಗೇರು ಉದ್ಯಮದಲ್ಲಿ ಕೇರಳದ ಸ್ಥಾನ ಅತ್ಯಂತ ಮಹತ್ವದ್ದು. ಗೇರು ಉತ್ಪಾದನೆ ಹಾಗೂ ಉತ್ಪಾದನಾ ಸಾಮರ್ಥ್ಯದಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿದ್ದ ಕೇರಳ ಕೆಲವು ದಶಕಗಳಿಂದ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತಿರುವುದು ವಿಷಾದನೀಯ. ೧೯೬೦ ರ ದಶಕದಲ್ಲಿ ಕೇರಳ ಸರ್ಕಾರ ಭೂ ಮಸೂದೆ ಕಾಯಿದೆಯನ್ನು ಅನುಷ್ಠಾನಗೊಳಿಸಿದ ಸಂದರ್ಭದಲ್ಲಿ ಗೇರು ತೋಟಗಳನ್ನು ಹೊರತುಪಡಿಸಿ ಕಾಫಿ, ಚಹಾ, ರಬ್ಬರ್, ಏಲಕ್ಕಿಯನ್ನು ತೋಟಗಾರಿಕಾ ಬೆಳೆಯೆಂದು ಘೋಷಿಸಿ ಅವುಗಳಿಗೆ ಭೂಮಿತಿ ಕಾಯಿದೆಯಿಂದ ವಿನಾಯಿತಿ ದೊರಕಿಸಿಕೊಟ್ಟಿತು. ಇತರೆ ಕೃಷಿ ಉತ್ಪನ್ನಗಳ ಜೊತೆ ಗೇರು ಕೃಷಿಯನ್ನೂ ಸೇರಿಸಿ ಭೂಮಿತಿ ಕಾಯಿದೆ ಅನ್ವಯಿಸಿ ಹದಿನೈದು ಎಕರೆಗಳಿಗಿಂತ ಜಾಸ್ತಿ ಒಂದು ಕುಟುಂಬಕ್ಕೆ ಭೂಮಿ ಇರಬಾರದು ಎಂಬ ನಿಯಮ ಜಾರಿಗೆ ಬಂತು. ಈ ಆದೇಶದಿಂದಾಗಿ ಜನ ತಮ್ಮ ಕೃಷಿ ಭೂಮಿಯನ್ನು ಉಳಿಸುವ ಸಲುವಾಗಿ ಗೇರು ಬೆಳೆಯುತ್ತಿದ್ದ ಪ್ರದೇಶಗಳನ್ನು ರಬ್ಬರ್ ತೋಟಗಳಾಗಿ ಪರಿವರ್ತಿಸಿದರು. ಇದರಿಂದಾಗಿ ಕೇರಳದ ಭೂಮಿತಿ ಕಾಯಿದೆ ಗೇರು ಕೃಷಿಗೆ ಪ್ರತಿಕೂಲವಾಗಿ ಪರಿಣಮಿಸಿತು. ಅತ್ಯಂತ ಸುಲಭ ಹಾಗೂ ಲಾಭದಾಯಕ ಎಂದು ಪ್ರಸಿದ್ಧಿ ಪಡೆದ ರಬ್ಬರ್ ಕೃಷಿ ಗೇರು ಭೂಮಿಯನ್ನು ಆಕ್ರಮಿಸಿಕೊಂಡಿತು.[೧೮] ಹವಾಮಾನದ ವೈಪರೀತ್ಯಗಳು, ಬೆಲೆ ಕುಸಿತ, ಪ್ರಾಯಸ್ಥ ತೋಟಗಳ ಕಳಪೆ ಸಾಧನೆ ಇವು ಕೂಡಾ ಗೇರು ಕೃಷಿ ನೆಲೆ ಕಳೆದುಕೊಳ್ಳಲು ಪೂರಕವಾದ ಅಂಶಗಳು ಗೇರು ಉತ್ಪಾದನೆಯಲ್ಲಿ ಮೂರನೇ ಸ್ಥಾನದಲ್ಲಿರುವ ಒರಿಸ್ಸಾ ಶೇ. ೫೯.೭ರಷ್ಟು ಗೇರು ಕೃಷಿ ಭೂಮಿಯನ್ನು ಖಾಸಗಿ ಒಡೆತನದಲ್ಲೂ ಶೇ. ೧೫.೫ ರಷ್ಟು ಒರಿಸ್ಸಾ ಅರಣ್ಯ ಅಭಿವೃದ್ಧಿ ನಿಗಮದ ಅಧೀನದಲ್ಲೂ ಶೇ. ೨೪ರಷ್ಟು ಒರಿಸ್ಸಾ ಸರ್ಕಾರದ ಗೇರು ಅಭಿವೃದ್ಧಿ ನಿಗಮದ ಒಡೆತದಲ್ಲಿದೆ. ಒರಿಸ್ಸಾದ ಮಣ್ಣು, ಹವಾಮಾನ ಗೇರು ಬೆಳೆಗೆ ಹೆಚ್ಚು ಸೂಕ್ತವಾಗಿದ್ದು ಅತ್ಯಂತ ಉದ್ದನೆಯ ಸಮುದ್ರ ತೀರ ಮತ್ತೊಂದು ಪೂರಕ ಅಂಶವಾಗಿದೆ. ಒಟ್ಟು ೩೦ ಜಿಲ್ಲೆಗಳಲ್ಲಿ ೨೮ ಜಿಲ್ಲೆಗಳಲ್ಲಿ ಗೇರು ಬೆಳೆಯುತ್ತಿದ್ದು, ಗೇರು ಕೃಷಿಗೆ ಉತ್ತಮ ಉತ್ತೇಜನ ನೀಡಲಾಗುತ್ತಿದೆ. ರಾಷ್ಟ್ರೀಯ ತೋಟಗಾರಿಕಾ ಮಿಷನ್ ಕಾರ್ಯಕ್ರಮದನ್ವಯ ಗೇರು ಕೃಷಿಗೆ ವಿಶೇಷ ಪ್ರೋತ್ಸಾಹ ನೀಡಿರುವುದರಿಂದ ೨೦೦೫-೦೬ರ ನಂತರದ ವರ್ಷಗಳಲ್ಲಿ

ಉತ್ಪಾದನೆ ಹಾಗೂ ಉತ್ಪಾದಕತೆ ಹೆಚ್ಚುತ್ತಿರುವುದು ಕಂಡು ಬಂದಿದೆ. ಪ್ರಸ್ತುತ ದೇಶದಲ್ಲಿ ಗೇರು ಕೃಷಿ ಉತ್ಪಾದನಾ ಪ್ರದೇಶದ ವಿಸ್ತೀರ್ಣದಲ್ಲಿ ಮೂರನೆಯ ಸ್ಥಾನವನ್ನೂ, (ಆಂಧ್ರಪ್ರದೇಶ ಮೊದಲನೆಯ ಹಾಗೂ ಮಹಾರಾಷ್ಟ್ರ ಎರಡನೆಯ) ಉತ್ಪಾದನೆಯಲ್ಲಿ ಮೂರನೇ ಸ್ಥಾನವನ್ನೂ (ಮಹಾರಾಷ್ಟ್ರ ಮೊದಲನೆಯ ಹಾಗೂ ಆಂಧ್ರ ಪ್ರದೇಶ ಎರಡನೆಯ) ಉತ್ಪಾದನಾ ಸಾಮರ್ಥ್ಯದಲ್ಲೂ ಮೂರನೆಯ ಸ್ಥಾನವನ್ನು (ಮಹಾರಾಷ್ಟ್ರ ಮೊದಲನೆಯ, ಕೇರಳ ಎರಡನೆಯ) ಪಡೆದುಕೊಂಡಿದೆ. ಅದೇ ರೀತಿ ಆಂಧ್ರ ಪ್ರದೇಶದಲ್ಲೂ ೧೯೮೦ ಮತ್ತು ೨೦೦೦-೦೧ರ ನಡುವಿನ ಅವಧಿಯಲ್ಲಿ ಗೇರು ಕೃಷಿ ಭೂಮಿ ಎರಡು ಪಟ್ಟು ಹೆಚ್ಚಳ ಕಂಡುಕೊಂಡಿತು. ಆಂಧ್ರ ಪ್ರದೇಶದ ವಿಶಾಖ ಪಟ್ಟಣ ಹಾಗೂ ಪೂರ್ವ ಮತ್ತು ಪಶ್ಚಿಮ ಗೋದಾವರಿ ತೀರಗಳಲ್ಲಿ ಪ್ರಮುಖವಾಗಿ ಗೇರು ಬೆಳೆಯಲಾಗುತ್ತಿದ್ದು ರಾಜ್ಯದ ಶೇ. ೭೦ರಷ್ಟು ಗೇರು ಭೂಮಿ ಈ ಭಾಗದಲ್ಲಿ ಕಂಡು ಬರುತ್ತದೆ. ತೀಕ್ಷ್ಣ ಕೃಷಿ ಪದ್ಧತಿ ಆಂಧ್ರ ಪ್ರದೇಶದ ವೈಶಿಷ್ಟ್ಯತೆಯಾಗಿದ್ದು ಗೇರು ಬೆಳೆಯೊಂದಿಗೆ ತಾಳೆ, ಮಾವು, ನಿಂಬೆ ಹೀಗೆ ಅನೇಕ ಪ್ರಕಾರದ ಬೆಳೆಯನ್ನು ಮಿಶ್ರ ಬೆಳೆಯಾಗಿ ಬೆಳೆಯುತ್ತಿದ್ದಾರೆ. ಗೇರು ಕೃಷಿಯಲ್ಲೂ ಸುಧಾರಿತ ತಳಿಗಳ ಬಳಕೆ ಹಾಗೂ ವೈಜ್ಞಾನಿಕ ಕೃಷಿ ಪದ್ಧತಿಯ ಅನುಷ್ಠಾನದಿಂದಾಗಿ ಒಂದು ಹೆಕ್ಟೇರಿಗೆ ಸುಮಾರು ೧೬೦೦ ರಿಂದ ೨೦೦೦ ಕಿ.ಲೋ. ಗಳಷ್ಟು ಗೇರು ಬೆಳೆಯಲಾಗುತ್ತದೆ. ಗೇರು ಬೆಳೆ ಪ್ರದೇಶ ವಿಸ್ತೀರ್ಣದಲ್ಲಿ ಮಹಾರಾಷ್ಟ್ರದ ತೀವ್ರ ಪ್ರತಿಸ್ಪರ್ಧಿ ಎನಿಸಿಕೊಂಡಿರುವ ಆಂಧ್ರ ಪ್ರದೇಶ ಉತ್ಪಾದನಾ ಸಾಮರ್ಥ್ಯದಲ್ಲಿ ಪೈಪೋಟಿ ನೀಡುವಲ್ಲಿ ವಿಫಲಗೊಂಡಿದೆ.

೨.೪ ಸರಕಾರ ಮತ್ತು ಗೇರು ಕೃಷಿ

ಭಾರತದಲ್ಲಿ ಗೇರು ಕೃಷಿಯನ್ನು ೧೬ನೇ ಶತಮಾನದ ದ್ವಿತೀಯಾರ್ಧದಲ್ಲಿ ಪರಿಚಯಿಸಲಾದರೂ ಪ್ರಾರಂಭದಲ್ಲಿ ಭೂ ಸವಕಳಿಯನ್ನು ತಡೆಗಟ್ಟುವುದಷ್ಟಕ್ಕೇ ಅದರ ಮಹತ್ವ ಸೀಮಿತವಾಗಿತ್ತು. ೧೯ನೇ ಶತಮಾನದ ಕೊನೆಯ ಭಾಗದಲ್ಲಷ್ಟೇ ಅದು ಒಂದು ಪ್ರಮುಖ ಆರ್ಥಿಕ ಬೆಳೆ ಎಂದು ಗುರುತಿಸಲ್ಪಟ್ಟಿತು. ಸ್ವಾತಂತ್ರ್ಯದ ಅನಂತರದ ವರ್ಷಗಳಲ್ಲಿ ವಿಶೇಷವಾಗಿ ಕೃಷಿ ಅಭಿವೃದ್ಧಿಯ ಸಂಕಲ್ಪದೊಂದಿಗೆ ೧೯೫೧ ರಿಂದ ಪ್ರಾರಂಭವಾದ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಗೇರು ಕೃಷಿ ಪ್ರಾಮುಖ್ಯತೆಯನ್ನು ಗಳಿಸಿಕೊಳ್ಳುವಂತಾಯಿತು. ೨ನೇ ಪಂಚವಾರ್ಷಿಕ ಯೋಜನೆ ಪ್ರಾರಂಭವಾದ ವರ್ಷದಲ್ಲಿ ಮುಖ್ಯವಾಗಿ ೧೯೫೫ರ ಅ ನಂತರ ಗೇರು ಬೆಳೆಯಲ್ಲಿ ವೈಜ್ಞಾನಿಕ ಕೃಷಿ ಪದ್ಧತಿ ಹಾಗೂ ಸಂಶೋಧನೆಗೆ ಚಾಲನೆ ದೊರೆಯಿತು. ಪ್ರಾರಂಭದಲ್ಲಿ ಅರಣ್ಯ ಬೆಳೆಸುವ ಯೋಜನೆಯ ಒಂದು ಭಾಗವಾಗಿ ಗೇರು ಬೆಳೆ ಗುರುತಿಸಿಕೊಂಡಿತ್ತು. ಈ ನಿಟ್ಟಿನಲ್ಲಿ ಖಾಸಗಿ ವಲಯದಿಂದ ಯಾವ ಬಗೆಯ ಚಿಂತನೆಗಳೂ ನಡೆದಿರಲಿಲ್ಲ. ೧೯೬೦ ರಿಂದ ರಾಜ್ಯದ ಕೆಲವೊಂದು ಅಭಿವೃದ್ಧಿ ಸಂಸ್ಥೆಗಳು ಗೇರು ಕೃಷಿಗಾಗಿ ಬಿತ್ತನೆ ಬೀಜಗಳನ್ನು ಮತ್ತು ಬೀಜಾಂಕುರ ಸಸಿಗಳನ್ನು ವಿತರಿಸುವುದಷ್ಟಕ್ಕೇ ಸೀಮಿತಗೊಂಡವು. ೧೯೬೬ರಲ್ಲಿ ಗೇರು ಅಭಿವೃದ್ಧಿ ನಿರ್ದೇಶನಾಲಯದ ಪ್ರಾರಂಭದೊಂದಿಗೆ ಗೇರು ಕೃಷಿಗೆ ಒಂದು ರಾಷ್ಟ್ರೀಯ ದೃಷ್ಟಿಕೋನ ದೊರೆತಂತಾಯಿತು. ದೇಶಾದ್ಯಂತ ಒಂದು ಸಮಗ್ರ ರೀತಿಯ ಆಧುನಿಕ ಗೇರು ಕೃಷಿಗೆ ಚಾಲನೆ ಸಿಕ್ಕಂತಾಯಿತು. ೧೯೫೦ ರಲ್ಲಿ ಭಾರತೀಯ ಕೃಷಿ ಅನುಸಂಧಾನ ಪರಿಷತ್ತು (Indian Council of Agricultural Research (ICAR) ಪ್ರಾರಂಭವಾಗುವುದರೊಂದಿಗೆ ಗೇರು ಸಂಶೋಧನಾ ಪ್ರಕ್ರಿಯೆ ಪ್ರಾರಂಭವಾಯಿತು. ಈ ಯೋಜನೆಯ ಅನ್ವಯ ಕೇರಳದ ಕೊಟ್ಟಾರಕರದಲ್ಲಿ ೧೯೫೨ ರಲ್ಲಿ, ಕರ್ನಾಟಕದ ಉಳ್ಳಾಲದಲ್ಲಿ ೧೯೫೩ರಲ್ಲಿ, ಆಂಧ್ರ ಪ್ರದೇಶದ ಬಾಪಟ್ಲದಲ್ಲಿ ೧೯೫೫ ರಲ್ಲಿ, ಅಸ್ಸಾಂಮಿನ ಪೆರಗಾಂವ್‌ನಲ್ಲಿ ೧೯೫೬ರಲ್ಲಿ, ಮಹಾರಾಷ್ಟ್ರದ ವೆಂಗುರ್ಲೆಯಲ್ಲಿ ೧೯೫೭ರಲ್ಲಿ ಗೇರು ಸಂಶೋಧನಾ ಕೇಂದ್ರಗಳು

ಪ್ರಾರಂಭಗೊಂಡವು.[೧೯] ಈ ಎಲ್ಲಾ ಕೇಂದ್ರಗಳಲ್ಲಿ ಸುಧಾರಿತ ಗೇರು ತಳಿಗಳ ಬಗ್ಗೆ, ಗೇರು ಹೂವಿನ ಜೈವಿಕ ಅಧ್ಯಯನದ ಬಗ್ಗೆ, ಅದರ ಪ್ರಚಾರದ ಬಗ್ಗೆ ಹಾಗೂ ಇನ್ನಿತರೆ ವೈಜ್ಞಾನಿಕ ಆವಿಷ್ಕಾರಗಳ ಬಗ್ಗೆ ಸಂಶೋಧನೆ ಕೈಗೊಳ್ಳಲಾಯಿತು.

೧೯೭೦ ರಲ್ಲಿ ಕೇರಳದ ಕಾಸರಗೋಡಿನಲ್ಲಿ ತೋಟಗಾರಿಕ ಬೆಳೆಗಳ ಸಂಶೋಧನಾ ಕೇಂದ್ರ (Central Plantation Crops Resaerch Institute CPCRI) ಪ್ರಾರಂಭವಾಯಿತು.[೨೦] ಇದರ ಪ್ರಾದೇಶಿಕ ಕೇಂದ್ರವಾದ ಕರ್ನಾಟಕದ ವಿಟ್ಲದಲ್ಲಿ ಗೇರು ಬೆಳೆಯನ್ನು ಒಂದು ಕಡ್ಡಾಯ ಬೆಳೆಯಾಗಿ ಮಾನ್ಯ ಮಾಡಿ ಉತ್ತಮ ಬೀಜಗಳ ತಳಿಗಳನ್ನು ಆವಿಷ್ಕಾರ ಮಾಡಲಾಯಿತು. ೧೯೭೧ ರಲ್ಲಿ ಭಾರತೀಯ ಕೃಷಿ ಅನುಸಂಧಾನ ಪರಿಷತ್ತು ಅಖಿಲ ಭಾರತೀಯ ಸಾಂಬಾರು ಸಮನ್ವಯ ಮತ್ತು ಗೇರು ಬೀಜ ಅಭಿವೃದ್ಧಿ ಯೋಜನೆ (All India Coordinated Spices and Cashewnut Improvement Projects – AICS and CIP) ಎಂಬ ಎರಡು ಜಂಟಿ ಯೋಜನೆಗಳನ್ನು ಜಾರಿಗೊಳಿಸಿತು.[೨೧] ೧೯೮೨ ರಿಂದ ೧೯೮೬ ರ ಅವಧಿಯಲ್ಲಿ ಕರ್ನಾಟಕವನ್ನೊಳಗೊಂಡಂತೆ ನಾಲ್ಕು ರಾಜ್ಯಗಳಲ್ಲಿ ವಿಶ್ವ ಬ್ಯಾಂಕಿನ ನೆರವಿನೊಂದಿಗೆ ಬಹು ರಾಜ್ಯ ಗೇರು ಯೋಜನೆ (Multi State Cashew Project MSCP) ಯನ್ನು ಪ್ರಾರಂಭಿಸಲಾಯಿತು.[೨೨] ಕಸಿ ಕಟ್ಟಿದ ಗೇರು ಗಿಡಗಳನ್ನು ವ್ಯಾಪಕವಾಗಿ ಪರಿಚಯಿಸಲಾಯಿತು. ತಜ್ಞರ ಸಲಹೆಯಂತೆ ೭ನೇ ಪಂಚವಾಷಿಕ ಯೋಜನೆಯ ಅವಧಿಯಲ್ಲಿ ಅಖಿಲ ಭಾರತೀಯ ಸಾಂಬಾರು ಸಮನ್ವಯ ಮತ್ತು ಗೇರು ಬೀಜ ಅಭಿವೃದ್ಧಿ ಯೋಜನೆಯನ್ನು ವಿಭಜಿಸಿ ಗೇರು ಅಭಿವೃದ್ಧಿಗಾಗಿ ಪ್ರತ್ಯೇಕವಾದ ಮತ್ತು ಸ್ವತಂತ್ರವಾದ ರಾಷ್ಟ್ರೀಯ ಗೇರು ಸಂಶೋಧನಾ ಕೇಂದ್ರವನ್ನು (National Research Centre for Cashew NRCC) ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲೂ, ಸಾಂಬಾರು ಸಂಶೋಧನಾ ಕೇಂದ್ರವನ್ನು ಕೇರಳದ ಕಲ್ಲಿಕೋಟೆಯಲ್ಲೂ ಪ್ರಾರಂಭಿಸಲು ನಿಶ್ಚಯಿಸಲಾಯಿತು. ಆ ಪ್ರಕಾರವಾಗಿ ಜೂನ್ ೧೮, ೧೯೮೬ರಲ್ಲಿ ಪುತ್ತೂರಿನಲ್ಲಿ ರಾಷ್ಟ್ರೀಯ ಗೇರು ಸಂಶೋಧನಾ ಕೇಂದ್ರ ಪ್ರಾರಂಭವಾಯಿತು.[೨೩] ಸ್ವತಂತ್ರ ಗೇರು ಯೋಜನೆಯ ಕಛೇರಿಯಾಗಿ ಅಖಿಲ ಭಾರತೀಯ ಗೇರು ಸಂಶೋಧನಾ ಸಮನ್ವಯ ಯೋಜನೆ (All India Co-ordinated Research Project on Cashew (AICRP on cashew) ಪುತ್ತೂರಿನ ರಾಷ್ಟ್ರೀಯ ಗೇರು ಸಂಶೋಧನಾಲಯಕ್ಕೆ ವರ್ಗಾಯಿಸಲ್ಪಟ್ಟಿತ್ತು. ೧೯೮೨ ರ ಬಹು ರಾಜ್ಯ ಗೇರು ಯೋಜನೆ, ೧೯೮೬ ರಲ್ಲಿ ಪುತ್ತೂರಿನಲ್ಲಿ ಪ್ರಾರಂಭವಾದ ರಾಷ್ಟ್ರೀಯ ಗೇರು ಸಂಶೋಧನಾ ಕೇಂದ್ರ ಹಾಗೂ ಸ್ವತಂತ್ರ ಗೇರು ಕೇಂದ್ರ ಕಛೇರಿಯನ್ನು ಸ್ಥಾಪಿಸಿ ರಾಷ್ಟ್ರೀಯ ಗೇರು ಸಂಶೋಧನಾ ಕೇಂದ್ರಕ್ಕೆ ವರ್ಗಾಯಿಸಿದ್ದರಿಂದ ಗೇರು ಅಭಿವೃದ್ಧಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದಂತಾಯಿತು.[೨೪] ಹನ್ನೊಂದನೇ ಪಂಚವಾರ್ಷಿಕ ಯೋಜನೆಯಲ್ಲಿ ಪುತ್ತೂರಿನ ರಾಷ್ಟ್ರೀಯ ಗೇರು ಸಂಶೋಧನಾ ಕೇಂದ್ರವನ್ನು ಮೇಲ್ದರ್ಜೆಗೆ ಏರಿಸಿ ಗೇರು ಸಂಶೋಧನಾ ನಿರ್ದೇಶನಾಲಯ (Directorate of Cashew Research DCR) ಎಂದು ೨೦೦೯ ರಲ್ಲಿ ಮರು ನಾಮಕರಣ ಮಾಡಲಾಯಿತು.[೨೫]

ಎರಡನೇ ಪಂಚವಾರ್ಷಿಕ ಯೋಜನೆಯ ಅನಂತರ ಗೇರು ಕೃಷಿ ಹಾಗೂ ಸಂಶೋಧನೆಗೆ ಸಾಕಷ್ಟು ಪ್ರಾಮುಖ್ಯತೆ ನೀಡಲಾಯಿತು. ಉತ್ತಮ ಕಸಿ ಕಟ್ಟಿದ ಗಿಡಗಳ ವಿತರಣೆ, ಪೌಷ್ಟಿಕಾಂಶಗಳ ನಿರ್ವಹಣೆ, ಗೇರು ಗಿಡಗಳಿಗೆ ಬರುವಂತಹ ರೋಗಗಳ ನಿಯಂತ್ರಣ ಇತ್ಯಾದಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತು ನೀಡಲಾಯಿತು. ಈ ಯೋಜನೆಯಲ್ಲಿ ಸುಧಾರಿತ ಗೇರು ಬೇಸಾಯಕ್ಕೆ ಮಹತ್ವ ದೊರೆಯಿತು. ಸಾಮಾನ್ಯವಾಗಿ ಪ್ರಾಯಸ್ಥ ಗೇರು ತೋಟಗಳನ್ನು ಬೀಜದಿಂದ ತಯಾರಿಸಿದ ಸಸಿಗಳಿಂದ ಬೆಳೆಸಲಾಗಿದ್ದು ತಳಿಗಳ ಶುದ್ಧತೆಯನ್ನು ಕಾಯ್ದುಕೊಳ್ಳಲಾಗಿಲ್ಲ. ಆದ್ದರಿಂದ ನಿರ್ಲಿಂಗ ರೀತಿಯ

ವಿಧಾನವಾದ ಕಸಿಕಟ್ಟುವಿಕೆಯಿಂದ ತಯಾರಿಸಿದ ಗೇರು ಸಸಿಗಳನ್ನೇ ಬೆಳೆಸಲು ಶಿಫಾರಸ್ಸು ಮಾಡಲಾಯಿತು. ಈ ವರೆಗೆ ಸುಮಾರು ೪೦ ಸುಧಾರಿತ ಗೇರು ತಳಿಗಳನ್ನು ಬಿಡುಗಡೆ ಮಾಡಲಾಗಿದ್ದು, ಕರ್ನಾಟಕದಲ್ಲಿ ಉಳ್ಳಾಲ-೧, ಉಳ್ಳಾಲ -೩, ಉಳ್ಳಾಲ-೪, ಯು. ಎನ್. -೫೦, ಎನ್. ಆರ್. ಸಿ. ಸಿ. ಸೆಲೆಕ್ಷನ್ -೨, ಭಾಸ್ಕರ, ಚಿಂತಾಮಣಿ,-೧, (ಬಯಲು ಸೀಮೆಗೆ ಮಾತ್ರ) ವೆಂಗುರ್ಲಾ-೧, ವೆಂಗುರ್ಲಾ-೪, ವೆಂಗುರ್ಲಾ -೭, (ಉತ್ತರ ಕನ್ನಡ) ಈ ರೀತಿಯಾಗಿ ವಿವಿಧ ತಳಿಗಳನ್ನು ಪರಿಚಯಿಸಲಾಯಿತು.[೨೬]

ಸುಧಾರಿತ ಗೇರು ಬೇಸಾಯದೊಂದಿಗೆ ಗೇರು ಗಿಡಗಳ ಸವರುವಿಕೆ ಮತ್ತು ಆಕಾರ ಕೊಡುವಿಕೆಗೆ ಪ್ರಾಶಸ್ತ್ಯ ದೊರೆಯಿತು. ಗಿಡಗಳು ಸ್ವೇಚ್ಛೆಯಿಂದ ಬೆಳೆಯುವುದನ್ನು ತಪ್ಪಿಸಿ, ಅವುಗಳ ಕೊಂಬೆ ರೆಂಬೆಗಳನ್ನು ನಿರ್ದಿಷ್ಟ ರೀತಿಯಲ್ಲಿ ಕತ್ತರಿಸಿ ಉತ್ತಮವಾದ ಆಕಾರವನ್ನು ಕೊಟ್ಟು ಗಾತ್ರವನ್ನು ನಿಯಂತ್ರಿಸುವ ಮೂಲಕ ಗಿಡದ ಉತ್ಪಾದಕತೆಯನ್ನು ಹೆಚ್ಚಿಸುವ ತೋಟಗಾರಿಕಾ ತಂತ್ರಜ್ಞಾನಕ್ಕೆ ಗಿಡಗಳಿಗೆ ಆಕಾರ ಕೊಡುವಿಕೆ (Tree Training) ಎನ್ನುತ್ತಾರೆ. ಈ ರೀತಿಯ ಆಕಾರ ಕೊಡುವಲ್ಲಿ ಗಿಡಗಳ ಸವರುವಿಕೆ ಮುಖ್ಯ ಪಾತ್ರ ವಹಿಸುತ್ತದೆ. ಹಿಂದಿನ ದಿನಗಳಲ್ಲಿ ಆಕಾರ ಕೊಡುವಿಕೆ ಹಾಗೂ ಸವರುವಿಕೆಯ ಕಾರ್ಯವು ಮುಖ್ಯವಾಗಿ ಶೀತ ವಲಯದ ಬೆಳೆಗಳಾದ ಸೇಬು, ದ್ರಾಕ್ಷಿ ಹಾಗೂ ಕೆಲವೊಂದು ಅಲಂಕಾರಿಕ ಸಸ್ಯಗಳಿಗೆ ಮಾತ್ರ ಸೀಮಿತವಾಗಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿನ ಅಧ್ಯಯನದ ಪ್ರಕಾರ ಉಷ್ಣ ವಲಯದ ಹಣ್ಣಿನ ಸಸ್ಯಗಳಾದ ಮಾವು ಮತ್ತು ಗೇರಿನಂತಹ ಮರಗಳಲ್ಲಿ ಕೂಡಾ ಆಕಾರ ಕೊಡುವಿಕೆ ಹಾಗೂ ಸವರುವಿಕೆಯನ್ನು ಅಳವಡಿಸಿಕೊಂಡಲ್ಲಿ ಅವುಗಳ ಉತ್ಪಾದಕತೆಯನ್ನು ಹೆಚ್ಚಿಸಬಹುದೆಂದು ತಿಳಿದು ಬಂದಿರುತ್ತದೆ.[೨೭]

ಎರಡನೆಯ ಯೋಜನಾವಧಿಯ ಬಳಿಕ ಗೇರು ಮರಗಳ ಪುನಃಶ್ಚೇತನವು ಪ್ರಾಮುಖ್ಯತೆಯನ್ನು ಪಡಕೊಂಡಿತು. ಕಡಿಮೆ ಇಳುವರಿ ನೀಡುತ್ತಿರುವ ಗೇರು ಮರಗಳ ಕೊಂಬೆಯನ್ನು ಕತ್ತರಿಸಿ ತೆಗೆದು, ಕಾಂಡದ ಉಳಿದ ಭಾಗದಿಂದ ಬರುವ ಹೊಸ ಚಿಗುರುಗಳಿಗೆ ಉತ್ತಮ ಗುಣ ಮಟ್ಟದ ತಳಿಗಳ ಕಸಿಕಡ್ಡಿಗಳಿಂದ ಕಸಿ ಮಾಡಿ ಅಲ್ಪಾವಧಿಯಲ್ಲಿ ಮರದ ಮೇಲ್ಛಾವಣಿಯನ್ನು ನವೀಕರಿಸಿ, ಮರದ ಉತ್ಪಾದಕತೆಯನ್ನು ಹೆಚ್ಚಿಸುವ ಸುಲಭೋಪಾಯವೇ ಮರಗಳ ಪುನಶ್ಚೇತನ.[೨೮] ಗೇರು ತೋಟಗಳನ್ನು ಪುನಃಶ್ಚೇತನಗೊಳಿಸಿ ಸರಿಯಾಗಿ ನಿರ್ವಹಿಸಿದಲ್ಲಿ ಉತ್ತಮ ಇಳುವರಿ ಸಾಧ್ಯ ಎಂಬುದನ್ನು ಸಾಬೀತು ಮಾಡಲಾಗಿದೆ. ಈ ಕುರಿತು ರೈತರಿಗೆ ಸೂಕ್ತ ಮಾರ್ಗದರ್ಶನ ಹಾಗೂ ತಿಳುವಳಿಕೆ ನೀಡಲಾಗುತ್ತಿದೆ. ಪುನಃಶ್ಚೇತನ ಮಾಡಿದ ಮರಗಳಲ್ಲಿ ಗೇರಿನ ಕಾಂಡ ಹಾಗೂ ಬೇರು ಕೊರೆಯುವ ಹುಳದ ಬಾಧೆಯು ಹೆಚ್ಚಾಗಿ ಕಂಡುಬರುವುದರಿಂದ ಅದನ್ನು ನಿಯಂತ್ರಿಸುವ ಕ್ರಮಗಳನ್ನು ತಿಳಿಸಿಕೊಡಲಾಗುತ್ತಿದೆ.

ಗೇರು ಬೆಳೆಯಲ್ಲಿ ಘನ ಸಾಂದ್ರ ಬೇಸಾಯಕ್ಕೆ ಮಹತ್ವ ದೊರೆತಿದ್ದು ಇದೇ ಕಾಲದಲ್ಲಿ. ಸಾಂದ್ರ ಕೃಷಿ ಮಾಡುವುದರಿಂದ ತೋಟದಲ್ಲಿ ಕಳೆಗಳ ಬೆಳವಣಿಗೆ ತುಂಬಾ ಕಡಿಮೆಯಾಗಿ ಪೋಷಕಾಂಶ ಹಾಗೂ ನೀರಿಗೋಸ್ಕರ ಆಗುವ ಸ್ಪರ್ಧೆಯು ಕಡಿಮೆಯಾಗುತ್ತದೆ. ಸಾಂದ್ರ ಕೃಷಿಯಲ್ಲಿ ಗಿಡಗಳ ಹರಡುವಿಕೆ ಎಕರೆವಾರು ಪ್ರದೇಶದಲ್ಲಿ ಜಾಸ್ತಿಯಾಗಿ ಭೂಮಿಯ ಮೇಲೆ ಸೂರ್ಯನ ಕಿರಣಗಳು ಬೀಳುವುದು ಕಡಿಮೆಯಾಗಿ ಕಳೆಗಳು ಬೆಳೆಯುವುದಿಲ್ಲ. ಭೂಮಿಯಲ್ಲಿ ತೇವಾಂಶ ಹೆಚ್ಚುತ್ತದೆ.[೨೯]

೧೯೮೦ ರ ಅನಂತರ ಗೇರು ಕೃಷಿಯಲ್ಲಿ ಹೊಸ ತಂತ್ರಜ್ಞಾನ, ವಿಶೇಷ ತಳಿಗಳ ಪ್ರಯೋಗ ಮತ್ತು ಉತ್ತಮ ಗೇರು ಕೃಷಿ ನಿರ್ವಹಣೆ ಸಹಿತ ಸಾಕಷ್ಟು ಬದಲಾವಣೆ ಕಂಡು ಬಂತು. ಈ ಎಲ್ಲಾ ಬದಲಾವಣೆಗಳನ್ನು ತರಬೇತಿ, ಪ್ರಚಾರಗಳ ಮೂಲಕ ರೈತರಿಗೆ ತಲುಪಿಸುವ ಪ್ರಯತ್ನ ಕೂಡ ನಡೆಯಿತು. ೨ ನೇ ಪಂಚವಾರ್ಷಿಕ ಯೋಜನೆಯೊಂದಿಗೆ ಗೇರು ಉತ್ಪಾದನೆಯಲ್ಲಿ

[illegible]

ಅಭೂತ ಪೂರ್ವ ಏರಿಕೆ ಕಂಡು ಬಂತು. ಗೇರು ಉತ್ಪಾದನೆಯ ಮೇಲೆ ಪಂಚವಾರ್ಷಿಕ ಯೋಜನೆಯ ಪರಿಣಾಮವನ್ನು ಕೋಷ್ಟಕ೨.೮ ರಲ್ಲಿ ವಿವರಿಸಲಾಗಿದೆ.

ಕೋಷ್ಟಕ:೨.೧೦ ಗೇರು ಕೃಷಿಯಲ್ಲಿ ಪಂಚವಾರ್ಷಿಕ ಯೋಜನೆಯ ಪರಿಣಾಮಗಳು

ಯೋಜನೆಗಳು	ವಿಸ್ತೀರ್ಣ (೦೦೦ ಹೆಕ್ಟೇರು)	ಉತ್ಪಾದನೆ (ಮಿಲಿಯ ಟನ್)	ಉತ್ಪಾದಕತೆ (ಪ್ರತಿ ಹೆಕ್ಟೇರಿಗೆ ಕೆ.ಜಿ.)
I	೧೦೯	–	–
II	೧೮೫	೪೦	೪೦೦
III	೨೬೫	೧೦೦	೪೦೦
IV	೩೫೧	೧೩೫	೪೦೦
V	೪೪೭	೧೮೦	೫೨೪
VI	೫೧೦	೨೨೧	೩೦೫
VII	೫೩೪	೩೦೫	೬೩೫
VIII	೬೫೯	೪೩೦	೭೨೦
IX	೭೫೦	೪೭೦	೭೧೦
X	೮೨೦	೫೪೪	೮೧೦
XI	೯೯೧	೬೯೨	೭೪೯

Source: PP Balasubramanian 2009, Cashew Research & Development In Humid Tropics and Venkatesh N. 2013- Cashew Development in India strategies for non Traditional states In souverin. National Conference on Cashew 20-21 Nov. 2013, Ranchi Jharkand P.26.

ಭಾರತದಲ್ಲಿ ಗೇರು ಅಭಿವೃದ್ಧಿ ಕುರಿತ ಯೋಜನೆ ಪ್ರಾರಂಭವಾಗಿದ್ದು ೨ ನೇ ಪಂಚ ವಾರ್ಷಿಕ ಯೋಜನೆಯಿಂದ. ಗೇರು ಕೃಷಿ ಭೂಮಿಯ ವಿಸ್ತರಣೆ ಹಾಗೂ ಬೀಜಾಂಕುರ ತಳಿಗಳ ಬಳಕೆ ಪ್ರಧಾನವಾದ ಉದ್ದೇಶವಾಗಿತ್ತು. ೭ನೇ ಪಂಚವಾರ್ಷಿಕ ಯೋಜನೆ ತನಕವೂ ಅದೇ ಉದ್ದೇಶದೊಂದಿಗೆ ಸರಕಾರ ಕಾರ್ಯನಿರತವಾಗಿತ್ತು. ೮ನೇ ಪಂಚವಾರ್ಷಿಕ ಯೋಜನೆಯಿಂದ ಕೇಂದ್ರದ ಸಮಗ್ರ ಗೇರು ಅಭಿವೃದ್ಧಿ ಯೋಜನೆ ಅನುಷ್ಠಾನಗೊಂಡಿತು. ಗೇರು ಪ್ರದೇಶದ ವಿಸ್ತರಣೆಯೊಂದಿಗೆ ಆಧುನಿಕ ವಿಧಾನದ ಗೇರು ಕೃಷಿಗೆ ಆದ್ಯತೆ ನೀಡಲಾಯಿತು. ಬೀಜಾಂಕುರ ಗಿಡಗಳ ಬದಲಿಗೆ ಕಸಿ ಕಟ್ಟಿದ ಸುಧಾರಿತ ತಳಿಗಳನ್ನು ವ್ಯಾಪಕವಾಗಿ ಪರಿಚಯಿಸಲಾಯಿತು. ಗೇರು ಬೆಳೆಗೆ ತಗಲುವ ರೋಗ ಬಾದೆಯ ನಿಯಂತ್ರಣ ಮತ್ತು ಆ ಕುರಿತಂತೆ ರೈತರಿಗೆ ಸೂಕ್ತ ಮಾಹಿತಿ ಹಾಗೂ ತರಬೇತಿಯನ್ನು ನೀಡಲಾಯಿತು.

ಈ ನಡುವೆ ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಯಿತು.[೩೦]

- ಸುಧಾರಿತ ತಳಿಗಳ ಹೊಸ ಗೇರು ತೋಟಗಳ ಅಭಿವೃದ್ಧಿ.
- ಬೀಜಾಂಕುರ ಗಿಡಗಳನ್ನು ತೆಗೆದು ಕಸಿಕಟ್ಟಿದ ಸುಧಾರಿತ ತಳಿಗಳನ್ನು ಬಳಸುವುದು.
- ಸಮಗ್ರ ತಂತ್ರಜ್ಞಾನದ ಅಳವಡಿಕೆ.

- ಕೀಟ ಭಾದೆಯನ್ನು ನಿಯಂತ್ರಿಸುವುದು.
- ಪ್ರಾದೇಶಿಕ ಸಸ್ಯ ಪಾಲನಾ ಕ್ಷೇತ್ರವನ್ನು (Nursery) ಅಭಿವೃದ್ಧಿಗೊಳಿಸುವುದು .
- ಮಾದರಿ ಗೇರು ತೋಟಗಳ (Demonstration Plots) ಪ್ರದರ್ಶನ.
- ತಂತ್ರಜ್ಞಾನದ ಅಳವಡಿಕೆಗಾಗಿ ರೈತರಿಗೆ ಸೂಕ್ತ ತರಬೇತಿ.
- ಪರಿಸರಕ್ಕೆ ಹಾನಿಯಾಗದಂತೆ ಗೇರು ತೋಟಗಳ ಸಂರಕ್ಷಣೆ ಮಾಡಲು ರಸಾಯನಿಕಗಳನ್ನು ಬಳಸಲು ರೈತರ ನಡುವೆ ಪ್ರಚಾರಪಡಿಸುವುದು.
- ಮಾರುಕಟ್ಟೆ, ಸಂಸ್ಕರಣೆ ಹಾಗೂ ಇನ್ನಿತರ ಸೌಲಭ್ಯಗಳ ಅಭಿವೃದ್ಧಿ.
- ಉತ್ಪಾದನೆಯ ಸಾಧ್ಯತೆಗಳ ಪರಿಶೀಲನೆ.
- ಗೇರು ಅಭಿವೃದ್ಧಿಗಾಗಿ ಜಾಹಿರಾತು ಕ್ರಮಗಳು.

ಇದೇ ಕಾರ್ಯಕ್ರಮಗಳನ್ನು ಮುಂದಿನ ಒಂಭತ್ತನೇ ಹಾಗೂ ಹತ್ತನೇ ಪಂಚವಾರ್ಷಿಕ ಯೋಜನೆಗಳಲ್ಲೂ ಮುಂದುವರಿಸಲಾಯಿತು. ಗೇರು ಬೆಳೆಯುವ ಪ್ರದೇಶದ ವಿಸ್ತರಣಾ ಯೋಜನೆಗೆ ಕೇರಳದಲ್ಲಿ ಅವಕಾಶ ಇಲ್ಲದೆ ಇದ್ದು ಉಳಿದಂತೆ ಕರ್ನಾಟಕ, ಮಹಾರಾಷ್ಟ್ರ ಆಂಧ್ರಪ್ರದೇಶ, ತಮಿಳು ನಾಡು ಹಾಗೂ ಒರಿಸ್ಸಾ ರಾಜ್ಯಗಳಲ್ಲಿ ಹೆಚ್ಚಿನ ಪ್ರಾಶಸ್ತ್ಯ ನೀಡಲಾಯಿತು. ಗೇರು ಬೆಳೆಯ ಅಸಾಂಪ್ರದಾಯಿಕ ರಾಜ್ಯಗಳಾದ ಉತ್ತರಭಾರತದ ಛತ್ತೀಸಘಡ ಹಾಗೂ ಈಶಾನ್ಯ ಪ್ರಾಂತ್ಯಗಳಲ್ಲಿ ಉತ್ತಮ ಸುಧಾರಿತ ತಳಿಗಳೊಂದಿಗೆ ಆಧುನಿಕ ಕೃಷಿ ಪದ್ಧತಿಯನ್ನು ಅಳವಡಿಸಲಾಯಿತು. ೨೦೦೫ನೇ ಇಸವಿಯ ಒಳಗಾಗಿ ಸುಮಾರು ೧.೫ ಲಕ್ಷ ಹೆಕ್ಟೇರುಗಳಷ್ಟು ಗೇರು ತೋಟ ಬೆಳೆಸುವ ಯೋಜನೆ ಹಮ್ಮಿಕೊಳ್ಳಲಾಗಿತ್ತು. ಸರಕಾರಿ ಸ್ವಾಮ್ಯದ ಗೇರು ತೋಟಗಳಲ್ಲಿ ಬೀಜಾಂಕುರ ಗಿಡಗಳನ್ನು ಬದಲಾಯಿಸಿ ಸುಧಾರಿತ ಗೇರು ತಳಿಗಳನ್ನು ನೆಟ್ಟು ಬೆಳೆಸಲಾಯಿತು. ಆದರೆ ಯೋಜನೆಯ ಅನುಷ್ಠಾನದ ವಿಳಂಬದಿಂದಾಗಿ ೩೧,೦೦೦ ಹೆಕ್ಟೇರುಗಳಷ್ಟು ಖಾಸಗಿ ಹಾಗೂ ಸರಕಾರಿ ವಲಯದಲ್ಲಿ ಗೇರು ತೋಟಗಳನ್ನು ಮಾಡಲಾಯಿತು. ಮೊದಲ ಪಂಚವಾರ್ಷಿಕ ಯೋಜನೆಯ ಅವಧಿಯಿಂದ ಹನ್ನೊಂದನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಗೇರು ಬೆಳೆ ಪ್ರದೇಶದ ವಿಸ್ತೀರ್ಣ ೮ ಪಟ್ಟು ಉತ್ಪಾದನೆ ೧೬ ಪಟ್ಟು ಹಾಗೂ ಉತ್ಪಾದಕತೆ ಶೇಕಡಾ ೮೭.೨೫ರಷ್ಟು ಏರಿಕೆ ಕಂಡು ಬಂದಿದೆ.

ತಂತ್ರಜ್ಞಾನದ ಯಶಸ್ವಿ ವರ್ಗಾವಣೆ ಈ ಯೋಜನೆಗಳ ವೈಶಿಷ್ಟ್ಯತೆಯಾಗಿದ್ದು, ಇದಕ್ಕಾಗಿ ಸ್ವ ಸಹಾಯ ಗುಂಪುಗಳ ಹಾಗೂ ಸರಕಾರೇತರ ಸಂಸ್ಥೆಗಳ ನೆರವನ್ನು ಪಡೆಯಲಾಯಿತು. ಇದಕ್ಕಾಗಿ ೧೭೧೧ ರಷ್ಟು ಮಾದರಿ ಕಸಿಕಟ್ಟಿದ ಗೇರು ತೋಟಗಳನ್ನು ಅಭಿವೃದ್ಧಿ ಪಡಿಸಲಾಯಿತು. ರೈತರಿಗೆ ಸುಧಾರಿತ ತಂತ್ರಜ್ಞಾನದ ಪರಿಚಯ ಮತ್ತು ಪ್ರಾತ್ಯಕ್ಷಿಕೆ ಗಳನ್ನೂ ನೀಡಲಾಯಿತು. ಘನ ಸಾಂದ್ರ ಬೇಸಾಯವನ್ನು ಪ್ರೋತ್ಸಾಹಿಸಲಾಯಿತು. ೫೮೦೦೦ ರೈತರಿಗೆ ಸುಧಾರಿತ ತಂತ್ರಜ್ಞಾನದ ಕುರಿತಂತೆ ತರಬೇತಿ ನೀಡಲಾಯಿತು. ಮಣಿಪುರವನ್ನು ಹೊರತು ಪಡಿಸಿ ಉಳಿದ ಈಶಾನ್ಯ ರಾಜ್ಯಗಳಿಗೆ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸಲು ಸುತ್ತು ನಿಧಿ ಸಹಾಯವನ್ನು ನೀಡಲಾಯಿತು.

ಮೇಲಿನ ಈ ಎಲ್ಲಾ ಸುಧಾರಣಾ ಕ್ರಮಗಳ ಫಲಶ್ರುತಿಯಾಗಿ ಸುಮಾರು ೩.೬೫,೦೦೦ ಹೆಕ್ಟೇರ್ ಗಳಷ್ಟು ಗೇರು ತೋಟ ಅಭಿವೃದ್ಧಿಗೊಂಡಿದ್ದು ಅದರಲ್ಲಿ ೨,೫೫,೦೦೦ ಹೆಕ್ಟೇರುಗಳಷ್ಟು ಹೊಸ ತೋಟ ಸಂಪೂರ್ಣವಾಗಿ ಸುಧಾರಿತ ಗೇರು

ತಳಿಗಳಿಂದ ಕೂಡಿದ್ದು ಬೀಜಾಂಕುರ ಸಸಿಗಳು ಸಂಪೂರ್ಣವಾಗಿ ಮರೆಯಾಗಿ ಹೋಗಿದ್ದು, ಈ ಅವಧಿಯ ವಿಶೇಷ ಸಾಧನೆಯೆಂದೇ ಹೇಳಬೇಕು. ಸುಮಾರು ೯೦ ಪ್ರಾದೇಶಿಕ ಸಸ್ಯ ಪಾಲನಾ ಕ್ಷೇತ್ರಗಳು ಕೇಂದ್ರ ಸರ್ಕಾರದ ನೆರವಿನಿಂದ ಪ್ರಾರಂಭವಾಗಿದ್ದು ವಾರ್ಷಿಕ ೫೦,೦೦೦ ಹೆಕ್ಟೇರುಗಳಷ್ಟು ಭೂಮಿಯನ್ನು ಗೇರು ಕೃಷಿಯ ವ್ಯಾಪ್ತಿಯಲ್ಲಿ ಬರುವಂತೆ ಮಾಡುವಲ್ಲಿ ಯಶಸ್ವಿಯಾಗಿವೆ. ಸುಮಾರು ೨೪೮೧ ರಷ್ಟು ಗೇರು ಕೃಷಿ ಪ್ರಾತ್ಯಕ್ಷಿಕೆಗಳನ್ನು ದೇಶಾದ್ಯಂತ ಗೇರು ಬೆಳೆಯುವ ರಾಜ್ಯಗಳಲ್ಲಿ ಮಾಡಲಾಗಿದೆ. ಸುಮಾರು ೮೦,೦೦೦ ರೈತರು ಇದರ ಫಲಾನುಭವಿಗಳಾಗಿರುತ್ತಾರೆ. ರೈತ ಮೇಳಗಳು, ಪ್ರದರ್ಶನಗಳು, ವಿಚಾರ ಸಂಕಿರಣಗಳು, ಕಾರ್ಯಾಗಾರಗಳು ಇತ್ಯಾದಿಯಾಗಿ ನಡೆಯುತ್ತಿದ್ದು, ಬೇರೆ ಬೇರೆ ಭಾಷೆಗಳಲ್ಲಿ ಹಲವಾರು ಲೇಖನಗಳು ಪ್ರಕಟಗೊಂಡಿವೆ.

ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಬಾರ್ಡ್ ೧೯೮೨ ರಲ್ಲಿ ಸ್ಥಾಪನೆಗೊಂಡಿದ್ದು, ಕೃಷಿಗೆ ಹಾಗೂ ಕೃಷಿ ಸಂಬಂಧಿ ಚಟುವಟಿಕೆಗಳಿಗೆ ವಿಶೇಷ ಪ್ರೋತ್ಸಾಹ ನೀಡುತ್ತಿದೆ. ಗೇರು ಕೃಷಿ ಹಾಗೂ ಗೇರು ಸಂಸ್ಕರಣೆಗೆ ಸಾಲ ಸೌಲಭ್ಯ ನೀಡುವುದರ ಮೂಲಕ ಗೇರು ಉದ್ಯಮದ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ. ವಾಣಿಜ್ಯ ಬ್ಯಾಂಕು, ಸಹಕಾರಿ ಸಂಘಗಳು ಹಾಗೂ ಗ್ರಾಮೀಣ ಪ್ರಾದೇಶಿಕ ಬ್ಯಾಂಕುಗಳಿಗೆ ಮರು ಸಾಲ ಸೌಲಭ್ಯವನ್ನು ನೀಡುವುದರ ಮೂಲಕ ನಬಾರ್ಡ್ ಗೇರು ಕೃಷಿಗೆ ಸೂಕ್ತ ಹಣಕಾಸು ನೆರವನ್ನು ನೀಡುತ್ತಿದೆ. ಗೇರು ಅಭಿವೃದ್ಧಿಗಾಗಿ ದೇಶದ ಪ್ರತಿಯೊಂದು ಜಿಲ್ಲೆಗೂ ಯೋಜನೆಗಳನ್ನು ರೂಪಿಸಿದ್ದು ಕೃಷಿಯೊಂದಿಗೆ ಗೇರು ಸಂಸ್ಕರಣಾ ಘಟಕಗಳಿಗೂ ದುಡಿಯುವ ಬಂಡವಾಳವನ್ನು ಪೂರೈಸುತ್ತಿದೆ. ಗೇರು ಕೃಷಿ ಕುರಿತಾದ ಸಂಶೋಧನೆಗಳು, ಅಭಿವೃದ್ಧಿ ಯೋಜನೆಗಳು, ತಂತ್ರಜ್ಞಾನದ ಅಳವಡಿಕೆ, ವಿಚಾರ ಸಂಕಿರಣಗಳು, ರಾಷ್ಟ್ರೀಯ ಹಾಗೂ ಅಂತರ‍್ರಾಷ್ಟ್ರೀಯ ಕಾರ್ಯಾಗಾರಗಳು ಹೀಗೆ ಗೇರು ಉದ್ಯಮದ ಒಟ್ಟು ಬೆಳವಣಿಗೆಗೆ ನಬಾರ್ಡ್ ಶ್ರಮಿಸುತ್ತಿದೆ. ದೇಶದ ಹಲವು ರಾಜ್ಯಗಳಲ್ಲಿ ಆದಿವಾಸಿ ಅಭಿವೃದ್ಧಿ ಯೋಜನೆಯ ಅನ್ವಯ ಗೇರು ಗಿಡಗಳನ್ನು ವಿತರಿಸುವ ಮೂಲಕ ಗೇರು ಕೃಷಿ ಭೂಮಿ ವಿಸ್ತರಣೆಯನ್ನು ಮಾಡುತ್ತಿದ್ದು ಸಾವಯವ ಮಾದರಿಯಲ್ಲಿ ಗೇರು ಕೃಷಿ ಅಭಿವೃದ್ಧಿಗಾಗಿ ಯೋಜನೆಯನ್ನು ರೂಪಿಸಿದೆ. ಜನರ ಆದಾಯ ಹಾಗೂ ಜೀವನ ಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ಗೇರು ಕೃಷಿ ಸಮುದಾಯ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದು ವಿಶೇಷವಾಗಿ ಮಹಾರಾಷ್ಟ್ರದ ಸಿಂಧದುರ್ಗ ಜಿಲ್ಲೆಯಲ್ಲಿ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. ಗೇರು ಬೆಳೆಯುವ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯವನ್ನು ಒದಗಿಸುವಲ್ಲಿ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಧಿಯು ಸ್ಥಾಪನೆಗೊಂಡಿದ್ದು ಆ ಮೂಲಕ ಗೇರು ಅಭಿವೃದ್ಧಿಗೆ ಬೆಂಬಲ ನೀಡುತ್ತಿದೆ.

೨೦೦೫ ರಲ್ಲಿ ಪ್ರಾರಂಭವಾದ ರಾಷ್ಟ್ರೀಯ ತೋಟಗಾರಿಕಾ ಮಿಶನ್ ಗೇರು ಕೃಷಿಯನ್ನೊಳಗೊಂಡಂತೆ ತೋಟಗಾರಿಕಾ ಕ್ಷೇತ್ರದಲ್ಲ ಮಹತ್ತರ ಬದಲಾವಣೆಗೆ ಕಾರಣವಾಯಿತು. ಗೇರು ತೋಟಗಳ ಅಭಿವೃದ್ಧಿಗೆ ರಾಷ್ಟ್ರೀಯ ತೋಟಗಾರಿಕಾ ಮಿಶನ್ ಯೋಜನೆ ಹಲವು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ಹಣಕಾಸಿನ ನೆರವು ನೀಡಿತು. ಅವು ಇಂತಿವೆ.

- ಹೊಸ ಗೇರು ತೋಟಗಳ ಅಭಿವೃದ್ಧಿಗಾಗಿ ಪ್ರತಿ ಹೆಕ್ಟೇರಿಗೆ ಇಪ್ಪತ್ತು ಸಾವಿರಗಳಂತೆ (೮೫% ಕೇಂದ್ರ ಸರಕಾರ ೧೫% ರಾಜ್ಯ ಸರಕಾರ) ಮೂರು ವಾರ್ಷಿಕ ಕಂತುಗಳಲ್ಲಿ ಗರಿಷ್ಠ ನಾಲ್ಕು ಹೆಕ್ಟೇರುಗಳಿಗೆ ನೀಡಲಾಗುತ್ತದೆ.
- ಅರಣ್ಯ ಇಲಾಖೆ ಹಾಗೂ ನಿಗಮಗಳಿಗೆ ಪ್ರತಿ ಹೆಕ್ಟೇರಿಗೆ ಇಪ್ಪತ್ತು ಸಾವಿರ ರೂಪಾಯಿಗಳಂತೆ ಮೂರು ವಾರ್ಷಿಕ ಕಂತಿನಲ್ಲಿ ಹಳೆಯ ಬೀಜಾಂಕುರ ಗಿಡಗಳನ್ನು ತೆಗೆದು ಕಸಿ ಗಿಡಗಳನ್ನು ನೆಡಲು ನೀಡಲಾಗುತ್ತದೆ.

- ದೊಡ್ಡ ಹಾಗೂ ಸಣ್ಣ ಸಸ್ಯ ಪಾಲನಾ ಕ್ಷೇತ್ರಗಳಿಗೆ ಶೇಕಡಾ ೫೦ ರಂತೆ ಸಹಾಯಧನ ಒದಗಿಸಲಾಗುತ್ತದೆ. ನಾಲ್ಕು ಹೆಕ್ಟೇರು ಪ್ರದೇಶದಲ್ಲಿ ಎರಡು ಲಕ್ಷ ಕಸಿ ಗೇರು ಗಿಡಗಳನ್ನು ಬೆಳೆಸುವ ದೊಡ್ಡ ಸಸ್ಯ ಪಾಲನಾ ಕ್ಷೇತ್ರಗಳಿಗೆ ೧೨.೫೦ ಲಕ್ಷ ರೂ.ಗಳಂತೆ, ಎರಡು ಹೆಕ್ಟೇರು ಪ್ರದೇಶದಲ್ಲಿ ಒಂದು ಲಕ್ಷ ಕಸಿ ಗಿಡಗಳನ್ನು ಬೆಳೆಸುವ ಸಣ್ಣ ಸಸ್ಯ ಪಾಲನಾ ಕ್ಷೇತ್ರಗಳಿಗೆ ರೂ. ೬.೨೫ ಲಕ್ಷ ಗಳಂತೆ ಸಹಾಯ ಧನ ಒದಗಿಸಲಾಗುತ್ತದೆ.
- ಗರಿಷ್ಠ ಹೆಕ್ಟೇರಿಗೆ ಮೂವತ್ತು ಸಾವಿರ ರೂ. (ಮೂರು ವರ್ಷಗಳಿಗೆ) ಯೋಜನಾ ವೆಚ್ಚದ ಶೇ. ೭೫ ರಷ್ಟನ್ನು ಕೂಲಿಯನ್ನು ಹೊರತು ಪಡಿಸಿ ಹಣಕಾಸಿನ ನೆರವನ್ನು ವೈಯಕ್ತಿಕ ಪ್ರಾತ್ಯಕ್ಷಿಕ ತೋಟಗಳಿಗೆ ಹಾಗೂ ಶೇ. ೧೦೦ ನೆರವನ್ನು ಸಾರ್ವಜನಿಕ ಸಂಸ್ಥೆಗಳಿಗೆ (೪೦,೦೦೦ ರೂ. ಮೀರದಂತೆ) ನೀಡಲಾಗುತ್ತದೆ.
- ಕನಿಷ್ಠ ೨ ಹೆಕ್ಟೇರು ಭೂಮಿ ಇರುವ ರೈತನಿಗೆ ರೂ. ೬೦,೦೦೦ ಮೀರದಂತೆ ಶೇ. ೫೦ ಬಾವಿ ತೋಡುವ ವೆಚ್ಚವನ್ನು ಭರಿಸಲಾಗುತ್ತದೆ.
- ತಂತ್ರಜ್ಞಾನದ ಪ್ರಚಾರ ಹಾಗೂ ಅಳವಡಿಕೆಗಾಗಿ ರಾಜ್ಯ ಮಟ್ಟದ ವಿಚಾರ ಸಂಕಿರಣಗಳಿಗೆ ಎರಡು ಲಕ್ಷ ರೂಪಾಯಿ ಹಾಗೂ ಜಿಲ್ಲಾ ಮಟ್ಟದ ವಿಚಾರ ಸಂಕಿರಣಗಳಿಗೆ ರೂ. ೫೦,೦೦೦ ನೀಡಲಾಗುತ್ತದೆ.
- ಪ್ರತಿ ಐವತ್ತು ರೈತರ ಒಂದು ತಂಡಕ್ಕೆ ಮೂರು ದಿನಗಳ ವೈಜ್ಞಾನಿಕ ಗೇರು ತರಬೇತಿ ಕಾರ್ಯಕ್ರಮಗಳಿಗೆ ರೂ. ೯೦,೦೦೦ ಗಳ ಹಣಕಾಸಿನ ನೆರವು ದೊರೆಯಲಾಗುತ್ತದೆ.

ರಾಷ್ಟ್ರೀಯ ತೋಟಗಾರಿಕಾ ಮಿಷಿನ್ ಯೋಜನೆ ಯಶಸ್ವಿಗೊಂಡದ್ದೇ ಆದಲ್ಲಿ ಹದಿಮೂರನೇ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ (೨೦೨೧-೨೨) ಹನ್ನೊಂದು ಲಕ್ಷ ಹೆಕ್ಟೇರುಗಳಿಗಿಂತಲೂ ಅಧಿಕ ಭೂಮಿಯಲ್ಲಿ ಸುಧಾರಿತ ತಳಿಗಳನ್ನು ಬೆಳೆಸಲು ಸಾಧ್ಯ.[೩೧]

ಕಚ್ಚಾಗೇರು ಪೂರೈಕೆ ಹಾಗೂ ಬೇಡಿಕೆಗಳ ನಡುವಿನ ಅಂತರವನ್ನು ಸರಿದೂಗಿಸುವುದರೊಂದಿಗೆ ಭಾರತದ ಗೇರು ಸಂಸ್ಕರಣಾ ಘಟಕಗಳನ್ನು ಸ್ವಾವಲಂಬಿಯನ್ನಾಗಿಸುವುದು ಹನ್ನೊಂದನೇ ಪಂಚವಾರ್ಷಿಕ ಯೋಜನೆಯ ಪ್ರಮುಖ ಆದ್ಯತೆಯಾಗಿತ್ತು. ಇದಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಅಳವಡಿಸಲಾಗಿತ್ತು. ಗೇರು ಪ್ರದೇಶದ ವಿಸ್ತರಣೆ, ಹೊಸ ಗೇರು ತೋಟಗಳ ರಚನೆ, ಹಳೇ ಗೇರು ತೋಟಗಳ ಪುನಶ್ಚೇತನ, ಸಾವಯವ ಕೃಷಿ ಪದ್ಧತಿಯ ಅಳವಡಿಕೆ ಸುಧಾರಿತ ತಂತ್ರಜ್ಞಾನದ ಅಳವಡಿಕೆ, ಸಸ್ಯ ಸಂರಕ್ಷಣಾ ಕ್ರಮಗಳು, ಮೂಲಭೂತ ಸೌಕರ್ಯಗಳ ಪೂರೈಕೆ ಗೇರು ಹಣ್ಣಿನ ಆರ್ಥಿಕ ಬಳಕೆ, ಪ್ರಚಾರ, ಸಸ್ಯ ಪಾಲನಾ ಕ್ಷೇತ್ರದ ಅಭಿವೃದ್ಧಿ ಇವೇ ಮೊದಲಾದ ಉದ್ದೇಶಗಳೊಂದಿಗೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿತ್ತು. ಈವರೆಗಿನ ಪಂಚವಾರ್ಷಿಕ ಯೋಜನೆಗಳಲ್ಲಿ ಅಳವಡಿಸಿದ ಅಭಿವೃದ್ಧಿ ಕಾರ್ಯಕ್ರಮಗಳಿಂದಾಗಿ ಗೇರು ಕೃಷಿಯಲ್ಲಿ ಗಣನೀಯ ಬದಲಾವಣೆ ಕಂಡು ಬಂದವು. ಎಂಟನೇ ಪಂಚವಾರ್ಷಿಕ ಯೋಜನೆಗಿಂತ ಮೊದಲು ಸುಮಾರು ೫.೩೪ ಲಕ್ಷ ಹೆಕ್ಟೇರುಗಳಷ್ಟು ಗೇರು ತೋಟಗಳು ಕೇವಲ ಬೀಜಾಂಕುರ ಸಸಿಗಳಿಂದ ಕೂಡಿದ್ದು ೩.೦೫ ಮಿಲಿಯ ಟನ್ ಗಳಷ್ಟು ಉತ್ಪಾದನೆ ನೀಡುತ್ತಿದ್ದು, ಉತ್ಪಾದನಾ ಸಾಮರ್ಥ್ಯ ಕೇವಲ ಹೆಕ್ಟೇರಿಗೆ ೬೫೦ ಕೆ.ಜಿ.ಗಳಾಗಿದ್ದವು. ಹನ್ನೊಂದನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ವೈಜ್ಞಾನಿಕ ಗೇರು ಕೃಷಿ ವಿಧಾನದ ಅಳವಡಿಕೆಯಿಂದಾಗಿ ೨೦೧೧-೧೨ ರವೇಳೆಗೆ ಗೇರು ಕೃಷಿ ಪ್ರದೇಶದ ವಿಸ್ತೀರ್ಣ ೯.೯೧ ಲಕ್ಷ ಹೆಕ್ಟೇರುಗಳಿಗೆ ಏರಿಕೆಯಾಗಿದ್ದು ಉತ್ಪಾದನೆ ೬.೯೨ ಲಕ್ಷ ಮಿಲಿಯ ಟನ್ ಗಳಾಗಿವೆ. ಇದರೊಂದಿಗೆ ಉತ್ಪಾದನಾ ಸಾಮರ್ಥ್ಯವು ಹೆಕ್ಟೇರಿಗೆ ೭೪೯ ಕೆ. ಜಿ. ಗಳಾಗಿರುವುದು ಉಲ್ಲೇಖಾರ್ಹ.[೩೨]

೧೯೬೫-೬೬ ರಿಂದ ೧೯೮೫-೮೬ ರವರೆಗಿನ ಎರಡು ದಶಕಗಳಲ್ಲಿ ಗೇರು ಉತ್ಪಾದನಾ ಪ್ರದೇಶ ಹಾಗೂ ಉತ್ಪಾದನೆ ತಲಾ ವಾರ್ಷಿಕ ಶೇ. ೬ ರಂತೆ ಹೆಚ್ಚಳ ಕಂಡಿದ್ದರೆ ೧೯೮೫-೮೬ ರಿಂದ ೨೦೧೧-೨೦೧೨ ರವರೆಗಿನ ಎರಡೂವರೆ ದಶಕಗಳಲ್ಲಿ ಗೇರು ಬೆಳೆಯುವ ಪ್ರದೇಶದ ವಿಸ್ತೀರ್ಣ ವಾರ್ಷಿಕ ಶೇ. ೩.೫ ರಂತೆ ಏರಿಕೆಯಾಗಿದ್ದರೆ ಉತ್ಪಾದನೆ ವಾರ್ಷಿಕ ಶೇ. ೭.೫ ರಷ್ಟು ಹೆಚ್ಚಿದೆ. ಈ ಅವಧಿಯಲ್ಲಿ ಕೈಗೊಂಡ ಗೇರು ಕೃಷಿ ಕುರಿತಾದ ಸಂಶೋಧನಾ ಚಟುವಟಿಕೆಗಳು, ಹೊಸ ತಂತ್ರಜ್ಞಾನದ ಅಳವಡಿಕೆ ಗೇರು ಗಿಡಗಳ ಪುನಃಶ್ಚೇತನ ಹಾಗೂ ಸುಧಾರಿತಾ ಕೃಷಿ ಪದ್ಧತಿಯೇ ಇದಕ್ಕೆ ಕಾರಣ ಎಂಬುದು ಸ್ಪಷ್ಟವಾಗುತ್ತದೆ.

೨.೫ ಭಾರತದ ಗೇರು ಸಂಸ್ಕರಣೆ

ಗೇರು ಸಂಸ್ಕರಣಾ ಘಟಕಗಳು ೧೯೨೦ ರ ಸುಮಾರಿಗೆ ಭಾರತದಲ್ಲಿ ಪ್ರಾರಂಭಗೊಂಡವು. ೧೯೨೦ ರ ದಶಕದ ಮಧ್ಯ ಭಾಗದಲ್ಲಿ ಕೇರಳದ ಕೊಲ್ಲಂನಲ್ಲಿ ಗೇರು ಸಂಸ್ಕರಣಾ ಘಟಕ ಪ್ರಾರಂಭಗೊಂಡಿತು. ಆಡಂ ಸ್ಮಿತ್‌ನ ಶ್ರಮ ವಿಭಜನಾ ಸಿದ್ಧಾಂತವನ್ನು ಯಶಸ್ವಿಯಾಗಿ ಅಳವಡಿಸಿಕೊಂಡ ಘಟಕಗಳು ಇಂದಿಗೂ ಅದನ್ನು ಪರಿಣಾಮಕಾರಿಯಾಗಿ ಉಳಿಸಿಕೊಂಡು ಬಂದಿವೆ. ಸಣ್ಣ ಗೃಹ ಕೈಗಾರಿಕಾ ರೂಪದಲ್ಲಿ ಸಂಪೂರ್ಣವಾಗಿ ಶ್ರಮ ಆಧಾರಿತ ಘಟಕವಾಗಿ ಪ್ರಾರಂಭವಾದ ಗೇರು ಉದ್ದಿಮೆ ಇದೀಗ ಭಾಗಶಃ ಮತ್ತು ಕೆಲವೊಂದು ಕಡೆ ಸಂಪೂರ್ಣ ಯಾಂತ್ರೀಕೃತಗೊಂಡ ಒಂದು ಉದ್ದಿಮೆಯಾಗಿ ಹೊರ ಹೊಮ್ಮಿದೆ. ಗೇರು ಬೀಜಕ್ಕೆ ಸಂಬಂಧಿಸಿದಂತೆ ವಾಣಿಜ್ಯ ಚಟುವಟಿಕೆಗಳು ಭಾರತದಲ್ಲಿ ಪ್ರಾರಂಭವಾಗಿ ಒಂದು ಶತಮಾನ ಕಳೆದಿದೆ. ಈ ಅವಧಿಯಲ್ಲಿ ಗೇರು ಉದ್ಯಮ ಹಲವಾರು ಆವಿಷ್ಕಾರಗಳಿಗೆ ಒಳಗಾಗಿ ಬದಲಾಗುತ್ತಿರುವ ಬೇಡಿಕೆಗಳಿಗೆ ಅನುಗುಣವಾಗಿ ಧನಾತ್ಮಕವಾಗಿ ಬೆಳೆದು ಬಂದಿರುವುದನ್ನು ನಾವು ಕಾಣಬಹುದು. ಗೋಡಂಬಿ ಒಂದು ಪ್ರಮುಖ ಆಹಾರ ವಸ್ತು ಎಂದು ಪರಿಗಣಿಸಲ್ಪಟ್ಟು ತನ್ನ ಅಸ್ತಿತ್ವವನ್ನು ಸ್ಥಾಪಿಸುವುದರ ಜೊತೆಗೆ ಗೇರು ಬೀಜದ ದ್ರವ ಒಂದು ಪ್ರಮುಖ ಕೈಗಾರಿಕಾ ಕಚ್ಚಾ ವಸ್ತುವಾಗಿ ಬಳಸುತ್ತಿರುವುದು ಉದ್ಯಮದ ಮಹತ್ವವನ್ನು ಮತ್ತಷ್ಟು ಸಾಬೀತು ಪಡಿಸುತ್ತದೆ. ಇದರೊಂದಿಗೆ ಇತರ ಉಪ ಉತ್ಪನ್ನಗಳಾದ ಗೇರು ಬೀಜದ ಸಿಪ್ಪೆ ಗೇರು ಬೀಜದ ಹೊರ ಕವಚ (ಹಸ್ಕ್) ಮತ್ತು ಗೇರು ಹಣ್ಣು ಪ್ರಮುಖ ಉಪ ಉತ್ಪನ್ನಗಳಾಗಿ ಗೇರು ಉದ್ಯಮದ ಆರ್ಥಿಕ ಮಹತ್ವವನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ.

೧೮೦೦ ನೇ ಇಸವಿಯ ಕೊನೆಯ ಭಾಗದಲ್ಲಿ ಕೇರಳ ರಾಜ್ಯದಲ್ಲಿ ಸಣ್ಣ ಪ್ರಮಾಣದಲ್ಲಿ ಮನೆಗಳಲ್ಲಿ ತೆರೆದ ಬಾಣಲೆಯಲ್ಲಿ ಗೇರು ಬೀಜವನ್ನು ಹುರಿದು, ತಿರುಳನ್ನು ಹೊರ ತೆಗೆದು ಅದನ್ನು ಮಾರಾಟ ಮಾಡುತ್ತಿದ್ದರು. ವಿಶೇಷವಾಗಿ ಸ್ವ ಅನುಭೋಗಕ್ಕಾಗಿಯೇ ಗೋಡಂಬಿಯನ್ನು ಉತ್ಪಾದಿಸುವ ಕ್ರಮ ಜಾರಿಯಲ್ಲಿತ್ತು. ಆ ದಿನಗಳಲ್ಲಿ ಗೋಡಂಬಿಯ ಬಳಕೆ ಹಾಗೂ ಅದರ ಸ್ವಾದಿಷ್ಟತೆಯ ಬಗ್ಗೆ ಬ್ರಿಟಿಷರಿಗೂ ಆಸಕ್ತಿ ಇರಲಿಲ್ಲ. ಅವರು ಕೇವಲ ಭಾರತದ ಟೀ, ಕಾಫಿ, ರಬ್ಬರ್ ಇತ್ಯಾದಿಯಲ್ಲಿಯೇ ಆಸಕ್ತರಾಗಿದ್ದರು. ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಜನರಲ್ ಫುಡ್ ಕಾರ್ಪೋರೇಶನ್ ಸಂಸ್ಥೆಯ ಉದ್ಯೋಗಿಯಾದ ಸ್ವಾಮಿನಾಥನ್ ಎಂಬ ತಮಿಳುನಾಡಿನ ಉದ್ಯಮಿಯೊಬ್ಬರು ಕೊಲ್ಲಂನಲ್ಲಿ ೧೯೨೦ ರಲ್ಲಿ ಮೊಟ್ಟ ಮೊದಲ ಗೇರು ಸಂಸ್ಕರಣಾ ಘಟಕವನ್ನು ಸ್ಥಾಪಿಸಿದರು.[೩೩] ಭಾರತದಲ್ಲಿ ಗೋಡಂಬಿ ಉತ್ಪಾದನೆ ಹಾಗೂ ರಫ್ತು ವ್ಯಾಪಾರದಲ್ಲಿ ಎರಡು ಪ್ರತಿಷ್ಠಿತ ಮನೆತನದವರು ಮುಂಚೂಣಿಯಲ್ಲಿದ್ದರು. ವೆಂಗುರ್ಲೆಯ ಟೋರ್ನೆ ಕುಟುಂಬ ಮತ್ತು ಜಾಂಡ್ತೆ ಕುಟುಂಬದವರು. ವೆಂಗುರ್ಲೆ ಶಂಕರ ಬಾಲಕೃಷ್ಣ ಟೋರ್ನೆ ಎಂಬುವವರು ೧೯೨೮ ರಲ್ಲಿ ಮೊಟ್ಟ ಮೊದಲ ಬಾರಿಗೆ ಗೇರು ಸಂಸ್ಕರಣಾ ಘಟಕವನ್ನು ಸ್ಥಾಪಿಸುವುದರೊಂದಿಗೆ ತಗಡಿನ ಡಬ್ಬಿಗಳಲ್ಲಿ ಗೋಡಂಬಿಯನ್ನು ತುಂಬಿ ಅಮೇರಿಕಾಕ್ಕೆ ಗೋಡಂಬಿಯನ್ನು ರಫ್ತು ಮಾಡಲು ಪ್ರಾರಂಭಿಸಿದರು.[೩೪] ಭಾರತದ ಇತರೆ ಭಾಗಗಳಲ್ಲಿ ಇನ್ನೂ ಗೋಡಂಬಿಯ ಆರ್ಥಿಕ ಲಾಭ ಅರಿವಿಗೆ ಬಂದಿಲ್ಲದ ಆ ದಿನಗಳಲ್ಲಿ

ವೆಂಗುರ್ಲೆ, ಮಾಲ್ವಿನ್ ಹಾಗೂ ಗೋವಾದಲ್ಲಿ ವ್ಯವಸ್ಥಿತವಾದ ರೀತಿಯಲ್ಲಿ ಗೋಡಂಬಿ ಉತ್ಪಾದನೆ ಪ್ರಾರಂಭಗೊಂಡಿತು. ಅಮೇರಿಕಾದ ಮೆ|| ವೀಟಾ ಪ್ಯಾಕ್ ಕಾರ್ಪೋರೇಷನ್ ಸಂಸ್ಥೆಯೊಂದಿಗೆ ವ್ಯಾಪಾರ ಒಪ್ಪಂದಕ್ಕೆ ಸಹಿ ಮಾಡುವುದರೊಂದಿಗೆ ಜಾನ್ಸೆಯವರು ಭಾರತದ ಗೋಡಂಬಿಗೆ ಜಾಗತಿಕ ಮಾರುಕಟ್ಟೆಯನ್ನು ಒದಗಿಸುವುದಕ್ಕೆ ಮುನ್ನುಡಿ ಬರೆದರು. ಅಷ್ಟು ಮಾತ್ರವಲ್ಲದೆ ಗೋಡಂಬಿ ಒಂದು ಸ್ವಾದಿಷ್ಟವಾದ ಆಹಾರ ಎಂಬುದರ ಕುರಿತು ಅಮೇರಿಕಾದಲ್ಲಿ ವ್ಯಾಪಕ ಪ್ರಚಾರ ನೀಡುವಲ್ಲಿ ಯಶಸ್ವಿಯಾದರು. ನಂತರದ ದಿನಗಳಲ್ಲಿ ಅಮೇರಿಕಾದ ವರ್ತಕರು ಭಾರತದ ಗೋಡಂಬಿ ಉತ್ಪಾದನೆಯಲ್ಲಿ ಹೆಚ್ಚಿನ ಆಸಕ್ತಿ ವಹಿಸುವುದರೊಂದಿಗೆ ಆರ್ಥಿಕ ನೆರವನ್ನು ನೀಡಿ ನಿರಂತರ ಪೂರೈಕೆಗೆ ಪ್ರೋತ್ಸಾಹ ನೀಡಿದರು.[೩೫] ಎರಡನೇ ಮಹಾ ಯುದ್ಧದಲ್ಲಿ ಗೋಡಂಬಿ ರಫ್ತು ವ್ಯಾಪಾರ ಸ್ವಲ್ಪ ಮಟ್ಟಿಗೆ ಹಿನ್ನಡೆ ಅನುಭವಿಸಿದರೂ ನಂತರದ ದಿನಗಳಲ್ಲಿ ಚೇತರಿಸಿಕೊಂಡಿತು. ಅಮೇರಿಕಾದ ಜನರಲ್ ಫುಡ್ ಕಾರ್ಪೋರೇಷನ್ ಎಂಬ ಸಂಸ್ಥೆ ಭಾರತದ ಗೋಡಂಬಿ ವ್ಯಾಪಾರದಲ್ಲಿ ವಿಶೇಷ ಆಸಕ್ತಿ ವಹಿಸಿತ್ತು. ೧೯೫೦ ರ ಮಧ್ಯ ಭಾಗದಲ್ಲಿ ಗಾಳಿಯಾಡದ ಡಬ್ಬಗಳಲ್ಲಿ ಕಾರ್ಬನ್ ಡೈಆಕ್ಸೈಡ್ ತುಂಬಿಸಿ ಗೋಡಂಬಿ ಕೆಡದಂತೆ ಪ್ಯಾಕ್ ಮಾಡುವ ವಿಧಾನ ಪ್ರಾರಂಭ ಮಾಡಲಾಯಿತು. ಇದರೊಂದಿಗೆ ಭಾರತದ ಗೋಡಂಬಿ ಉದ್ಯಮ ಜಾಗತಿಕ ಮಾರುಕಟ್ಟೆಯಲ್ಲಿ ತನ್ನ ಸ್ವಾಮ್ಯತೆಯನ್ನು ಮೆರೆಯುವಂತಾಯಿತು. ಈ ಮಧ್ಯೆ ೧೯೩೨ ರಲ್ಲಿ ಪಿಯರ್ಸ್ ಲೆಸ್ಲೆ ಕಂಪೆನಿಯ ತಾಂತ್ರಿಕ ಸಲಹೆಗಾರರಾಗಿದ್ದ ಬಿ. ಜೆಫ್ರಿನ್ ಎಂಬುವವರು ಮೊದಲ ಬಾರಿಗೆ ಡ್ರಮ್ ರೋಸ್ಟರ್ ಪದ್ಧತಿಯನ್ನು ಕಂಡು ಹಿಡಿದರು. ಇದು ಇಂದಿಗೂ ಭಾರತದ ಬಹುತೇಕ ಕಾರ್ಖಾನೆಗಳಲ್ಲಿ ಸಣ್ಣ ಪುಟ್ಟ ಬದಲಾವಣೆಯೊಂದಿಗೆ ಅಳವಡಿಸಿರುವುದನ್ನು ಕಾಣಬಹುದು. ಶ್ರೀ ಜೆಫ್ರಿನ್ ನವರು ಮುಂದುವರೆದು ೧೯೩೫ ರಲ್ಲಿ ಬಿಸಿ ಎಣ್ಣೆ ಸ್ಥಾವರ (ಹೋಟ್ ಆಯಿಲ್ ಪ್ಲಾಂಟ್) ಕಂಡು ಹಿಡಿದರು. ಇದರಿಂದಾಗಿ ಗೇರು ಬೀಜದ ಎಣ್ಣೆಯನ್ನು ವ್ಯವಸ್ಥಿತವಾಗಿ ಸಂಗ್ರಹಿಸಿ ಒಂದು ಪ್ರಮುಖ ಕೈಗಾರಿಕಾ ಕಚ್ಚಾವಸ್ತುವಾಗಿ ರಫ್ತು ಮಾಡಲು ಸಾಧ್ಯವಾಯಿತು.[೩೬] ಸಂಸ್ಕರಣೆಗಾರ ನಿರ್ಯಾತಾಗಾರ ದಲ್ಲಾಳಿ, ಆಯಾತಗಾರ, ಗ್ರಾಹಕ ಹಾಗೂ ಕಟ್ಟ ಕಡೆಯ ಬಳಕೆದಾರ ಹೀಗೆ ಒಂದು ನೂತನ ಮಾದರಿಯ ವ್ಯವಹಾರ ಬಳಕೆಗೆ ಬಂತು. ಸಂಸ್ಕರಣಾ ಘಟಕದ ಹೆಚ್ಚಳದಿಂದಾಗಿ ರಫ್ತು ವ್ಯಾಪಾರದಲ್ಲಿ ಸ್ಪರ್ಧೆ ಆರಂಭವಾಯಿತು. ಪರಿಣಾಮವಾಗಿ ರಫ್ತುದಾರರ ಹಿತಾಸಕ್ತಿಯ ರಕ್ಷಣೆಗಾಗಿ ಕ್ಯಾಶ್ಯೂ ಸಿಂಡಿಕೇಟ್ (Cashew Syndicate) ಎಂಬ ಗೇರು ಆಡಳಿತ ಮಂಡಳಿ ೧೯೫೪ ರಲ್ಲಿ ಅಸ್ತಿತ್ವಕ್ಕೆ ಬಂತು. ಗೋಡಂಬಿ ಬೆಲೆ ನಿಗದಿ ಹಾಗೂ ರಫ್ತು ಉತ್ತೇಜನ ಇದರ ಪ್ರಮುಖ ಕಾರ್ಯವಾಗಿತ್ತು. ಆದರೆ ಇದೊಂದು ಕಾನೂನು ಬದ್ಧ ಸಂಸ್ಥೆಯಾಗಿರದೇ ಒಂದು ಸ್ವಯಂ ಸೇವಾ ಸಂಘವಾಗಿದ್ದು, ದೀರ್ಘ ಕಾಲ ಮುಂದುವರಿಯಲು ಸಾಧ್ಯವಾಗಲಿಲ್ಲ. ಆದ್ದರಿಂದ ೧೯೫೫ ರಲ್ಲಿ ಸರಕಾರದ ವಾಣಿಜ್ಯ ಸಚಿವಾಲಯದ ಆಶ್ರಯದಲ್ಲಿ ಭಾರತೀಯ ಗೇರು ರಫ್ತು ಉತ್ತೇಜಕ ಸಮಿತಿ (Cashew Export Promotin Council of India) ಸ್ಥಾಪನೆಗೊಂಡಿತು. [೩೭]

ಗೇರು ಬೀಜದ ಒಳಗೆ ಇರುವ ತಿರುಳನ್ನು ಯಾಂತ್ರಿಕವಾಗಿ ಅಥವಾ ದೈಹಿಕ ಶ್ರಮದ ಮೂಲಕ ಹೊರ ತೆಗೆಯುವ ಪ್ರಕ್ರಿಯೆಯನ್ನು ಸಂಸ್ಕರಣೆ ಎನ್ನುತ್ತಾರೆ. ಗೋಡಂಬಿ ಉದ್ಯಮದಲ್ಲಿ ಗೇರು ಬೀಜದ ಪಾತ್ರ ಅತ್ಯಂತ ಪ್ರಮುಖವಾದುದು. ಗೇರು ಬೀಜ ಗೇರು ಹಣ್ಣಿಗೆ ಅಂಟಿಕೊಂಡಿರುತ್ತದೆ. ಗೇರು ಬೀಜವನ್ನು ತಿನ್ನುವ ಮೊದಲು ಸಂಸ್ಕರಿಸಬೇಕಾಗುತ್ತದೆ. ಮೊದಲು ಬಿಟ್ಟ ಹೂಗಳಿಂದ ಸಾಧಾರಣ ೬೦ ದಿವಸಗಳಲ್ಲಿ ಮತ್ತು ನಂತರದ ಹೂಗಳಿಂದ ಸಾಧಾರಣ ೪೫ ದಿವಸಗಳ ಅವಧಿಯಲ್ಲಿ ಬೀಜವು ಕೊಯ್ಯಲು ತಯಾರಾಗುವುದು. ಹಣ್ಣುಗಳು ೬೦ ದಿವಸಗಳಲ್ಲಿ ಬಲಿಯುತ್ತವೆ.[೩೮] ಹಣ್ಣುಗಳು ಚೆನ್ನಾಗಿ ಬಲಿತಾಗ ಬೀಜಗಳನ್ನು ಆರಿಸಬೇಕು. ಸಾಮಾನ್ಯವಾಗಿ ಕಳವಿನ ಕಾರಣಕ್ಕಾಗಿ ಬಲಿಯುವುದಕ್ಕಿಂತ ಮೊದಲೇ ಮರದಿಂದ ಕೀಳುವ ಪರಿಪಾಠ ಇದೆ.

[illegible]

ಆದರೆ ಹಾಗೆ ಮಾಡಿದಲ್ಲಿ ಗೇರು ತಿರುಳಿನ ಗುಣಮಟ್ಟ ಕಡಿಮೆಯಾಗುತ್ತದೆ. ಹಾಗಾಗಿ ಚೆನ್ನಾಗಿ ಬಲಿತ ಬೀಜವನ್ನು ಮತ್ತು ಬೂದು ಬಣ್ಣಕ್ಕೆ ತಿರುಗಿದ ಬೀಜವನ್ನು ಕೀಳಬೇಕಾಗುತ್ತದೆ. ಗೇರು ಬೀಜ ಬೂದಿ ಬಣ್ಣದ ಮೂತ್ರ ಕೋಶಾಕಾರದ ಎರಡರಿಂದ ಮೂರು ಸೆ. ಮೀಟರ್‌ಗಳಷ್ಟು ಉದ್ದವಾಗಿರುವ ಒಂದು ಬೀಜ. ಇದು ಗೇರು ಹಣ್ಣಿನ ತಳಭಾಗಕ್ಕೆ ತಗುಲಿಕೊಂಡಿದ್ದು ಗೇರು ಬೀಜದ ತೊಗಟೆ ಸುಮಾರು ಮೂರು ಮಿಲಿ ಮೀಟರ್‌ನಷ್ಟು ದಪ್ಪವಾಗಿರುತ್ತದೆ. ಇದು ಒಂದು ರೀತಿ ಜೇನುಗೂಡಿನ ರಚನೆಯಂತಿದ್ದು ಒಂದು ಬಗೆಯ ಜಿಡ್ಡಿನಂತಹ ದ್ರವ ಇರುತ್ತದೆ.[೩೯] ಇದೇ ಆಮ್ಲವು ಗೇರು ಬೀಜದ ತಿರುಳಿಗೆ ಸ್ವಾಭಾವಿಕ ರಕ್ಷಣೆಯನ್ನು ನೀಡುತ್ತದೆ. ಇತರೆ ಸಸ್ಯ ಜನ್ಯ ಬೀಜಗಳಾದ ಬಾದಾಮಿ, ಪಿಸ್ತಾ, ಅಕ್ರೋಟ್ ಇವುಗಳನ್ನು ಸುಲಭವಾಗಿ ಸಂಸ್ಕರಿಸಲು ಸಾಧ್ಯ. ಕಾರಣ ಇವುಗಳ ಹೊರ ಕವಚ ತುಂಬಾ ತೆಳುವಾಗಿದ್ದು, ಬರಿಗೈಯಲ್ಲಿ ಅದನ್ನು ತೆಗೆಯಬಹುದಾಗಿದೆ. ಹಾಗಾಗಿ ಕೆಲವೊಮ್ಮೆ ಮಂಗಗಳು, ಅಳಿಲುಗಳೂ ಕೂಡಾ ಈ ಬೀಜಗಳನ್ನು ಸುಲಭವಾಗಿ ಕಿತ್ತು ತಿನ್ನುತ್ತವೆ. ಆದರೆ ಗೇರು ಬೀಜ ಮಾತ್ರ ತುಂಬಾ ಗಡುಸಾದ ತೊಗಟೆಯನ್ನು ಹೊಂದಿರುವುದರಿಂದ ಅದಕ್ಕೆ ವಿಶೇಷ ಶ್ರಮದ ಅಗತ್ಯ ಇದೆ. ಇದಲ್ಲದೆ ಗೇರು ತಿರುಳಿನ ಹೊರ ಕವಚ ಕೂಡಾ ತೆಳುವಾದ ಪದರದಿಂದ ಕೂಡಿರುತ್ತದೆ. ಇದನ್ನು ಹಸ್ಕ ಎಂದೆನ್ನುತ್ತಾರೆ. ಈ ಹೊರ ಕವಚ ಒಂದು ರೀತಿಯ ಒಗರಿನಿಂದ ಕೂಡಿದ್ದು ಅದನ್ನು ತಿನ್ನಲು ಸಾಧ್ಯವಿಲ್ಲ. ಹಾಗಾಗಿ ಅದನ್ನು ಕೆರೆದು ತೆಗೆಯಬೇಕಾಗುತ್ತದೆ. ಬೇರೆ ಸಸ್ಯ ಜನ್ಯ ಬೀಜಗಳಿಗಿಂತ ಗೇರು ಬೀಜದ ಸಂಸ್ಕರಣೆ ತುಂಬಾ ಸಂಕೀರ್ಣವಾದುದಾಗಿದೆ.[೪೦] ಅತ್ಯಂತ ರುಚಿಕರವಾದ ಸುವಾಸನೆಯಿಂದ ಕೂಡಿದ ಗೋಡಂಬಿಯನ್ನು ತಿನ್ನಲು ಯೋಗ್ಯವಾಗುವಂತೆ ಮಾಡಬೇಕಾದರೆ ಸಂಸ್ಕರಣೆಯ ಅನೇಕ ಪ್ರಕ್ರಿಯೆಗಳು ಅಂದರೆ ಹುರಿಯುವುದು, ಚಿಪ್ಪು ತೆಗೆಯುವುದು, ಒಣಗಿಸುವುದು, ಸಿಪ್ಪೆ ತೆಗೆಯುವುದು, ವರ್ಗಗಳಾಗಿ ವಿಂಗಡಿಸುವುದು, ಪ್ಯಾಕಿಂಗ್ ಇತ್ಯಾದಿ ಹಂತಗಳನ್ನು ಹಾದು ಹೋಗಬೇಕಾಗುವುದು ಅನಿವಾರ್ಯ. ಒಂದು ಟನ್ ಗೇರು ಬೀಜದಿಂದ ಸುಮಾರು ೨೦೦ ರಿಂದ ೨೩೦ ಕೆ.ಜಿ. ಗೋಡಂಬಿ (ಕೇವಲ ೨೦ ರಿಂದ ೨೩ ಶೇಕಡಾ)ಯನ್ನು ಹಾಗೂ ೭೭೦ ರಿಂದ ೮೦೦ ಕೆ. ಜಿ. ಗಳಷ್ಟು ಗೇರು ಬೀಜದ ಸಿಪ್ಪೆ ಹಾಗೂ ಅದರಿಂದ ೧೫೦ ರಿಂದ ೧೮೦ ಕೆ. ಜಿ. ಗೇರು ಬೀಜದ ಎಣ್ಣೆಯನ್ನು ಪಡೆಯಬಹುದಾಗಿದೆ.[೪೧]

ಮರದಿಂದ ಕಿತ್ತ ಅಥವಾ ಹೆಕ್ಕಿದ ಗೇರು ಬೀಜವನ್ನು ಹಣ್ಣಿನಿಂದ ಬೇರ್ಪಡಿಸಿ ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಬೇಕು. ಇದರಿಂದ ಮುಂದೆ ದಾಸ್ತಾನಿನ ಸಮಯದಲ್ಲಿ ಗೇರು ಬೀಜ ಹಾಳಾಗುವುದಿಲ್ಲ. ಒಣಗಿಸಿದ ಬೀಜದಲ್ಲಿ ಶೇಕಡಾ ೯ ರಷ್ಟು ತೇವಾಂಶ ಇದ್ದರೆ ಒಳ್ಳೆಯದು. ಇದಕ್ಕಿಂತ ಹೆಚ್ಚಿಗೆ ಇದ್ದಲ್ಲಿ ಶೇಖರಣೆಯ ಸಮಯದಲ್ಲಿ ಗೇರು ಬೀಜ ಹಾಳಾಗುವ ಸಂಭವ ಹೆಚ್ಚು.

ಸಣ್ಣ ಪ್ರಮಾಣದಲ್ಲಿ ಗೇರು ಬೀಜವನ್ನು ಸಂಸ್ಕರಿಸಬೇಕಾದಲ್ಲಿ, ಅದನ್ನು ರಂಧ್ರಗಳಿರುವ ಬಾಣಲೆಯಲ್ಲಿ ಹಾಕಿ ಹುರಿದು ಅದರ ಸಿಪ್ಪೆಯನ್ನು ಚಚ್ಚಿ ತೆಗೆಯಬೇಕು. ಹೀಗೆ ಹುರಿಯುವಾಗ ಗೇರು ಸಿಪ್ಪೆಯಲ್ಲಿರುವಂತಹ ದ್ರವ (CNSL) ಹೊರ ಬಂದು ರಂಧ್ರದ ಮೂಲಕ ಬೆಂಕಿಯ ಮೇಲೆ ಬಿದ್ದು ಉರಿಯ ತೊಡಗುತ್ತದೆ. ಇದರಿಂದ ಬಹುಪಯೋಗಿಯಾದ ಗೇರು ಸಿಪ್ಪೆಯ ದ್ರವ ವ್ಯರ್ಥವಾಗಿ ಹೋಗುತ್ತದೆ. ಮಾತ್ರವಲ್ಲದೆ ಗೇರು ಬೀಜವನ್ನು ಸಂಸ್ಕರಿಸುವಾಗ ಗೇರು ತಿರುಳಿಗೆ ಈ ದ್ರವ ತಗಲುವ ಸಾಧ್ಯತೆ ಜಾಸ್ತಿ. ಇದರಿಂದ ಗೇರು ತಿರುಳಿನ ಅಂದರೆ ಗೋಡಂಬಿಯ ಗುಣ ಮಟ್ಟ ಕಡಿಮೆಯಾಗುತ್ತದೆ.

ಆರ್ಥಿಕ ಪ್ರಮಾಣದಲ್ಲಿ ಗೇರು ಬೀಜವನ್ನು ಸಂಸ್ಕರಿಸಬೇಕಾದಲ್ಲಿ ಅದನ್ನು ಕಾರ್ಖಾನೆಗಳಿಗೆ ಕೊಂಡೊಯ್ಯಬೇಕು. ಗೇರು ಕಾರ್ಖಾನೆಗಳನ್ನು ಕಾರ್ಖಾನೆಯ ಕೆಲಸದ ದಿನಗಳ ಆಧಾರದಲ್ಲಿ ಹಾಗೂ ಸಾಮರ್ಥ್ಯದ ಆಧಾರದಲ್ಲಿ ವರ್ಗೀಕರಿಸಲಾಗುತ್ತದೆ. ಗೇರು ಕಾರ್ಖಾನೆಯ ಕೆಲಸದ ಅವಧಿಯ ಆಧಾರದಲ್ಲಿ ಸಣ್ಣ ಘಟಕಗಳು, ಮಧ್ಯಮ ಘಟಕಗಳು ಮತ್ತು ದೊಡ್ಡ ಘಟಕಗಳು ಎಂದು ವರ್ಗೀಕರಿಸಲಾಗುವುದು. ಗೇರು ಘಟಕದ ಕೆಲಸದ ಅವಧಿನ ವರ್ಷದಲ್ಲಿ ೨೨೫ ದಿನಗಳ ತನಕ

[illegible]

ಇದ್ದುದೇ ಆದರೆ ಅದನ್ನು ಸಣ್ಣ ಘಟಕಗಳೆಂದು, ೨೨೫ ರಿಂದ ೨೭೫ ದಿನಗಳು ಇದ್ದುದೇ ಆದರೆ ಮಧ್ಯಮ ಘಟಕಗಳೆಂದು, ೨೭೫ ದಿನಗಳಿಗಿಂತ ಹೆಚ್ಚಿದ್ದರೆ ಬೃಹತ್ ಘಟಕಗಳೆಂದು ಗುರುತಿಸಲಾಗುತ್ತದೆ.[೪೨] ಕಾರ್ಖಾನೆಯ ಉತ್ಪಾದನಾ ಸಾಮರ್ಥ್ಯದ ಆಧಾರದಲ್ಲಿ ಹೇಳುವುದಾದರೆ ದಿನದಲ್ಲಿ ೩.೩ ಮಿಲಿಯ ಟನ್‌ಗಳಿಗಿಂತ ಕಡಿಮೆ ಸಂಸ್ಕರಣೆ ಮಾಡುವ ಘಟಕಗಳನ್ನು ಸಣ್ಣ ಘಟಕಗಳೆಂದು ೩.೩ ರಿಂದ ೪.೯ ಮಿಲಿಯ ಟನ್‌ಗಳಷ್ಟು ಸಂಸ್ಕರಣೆ ಮಾಡಿದ್ದಲ್ಲಿ ಮಧ್ಯಮ ಘಟಕಗಳೆಂದು ೪.೯ ಮಿಲಿಯ ಟನ್‌ಗಳಿಗಿಂತ ಅಧಿಕ ಸಂಸ್ಕರಣೆ ಮಾಡಿದ್ದಲ್ಲಿ ಬೃಹತ್ ಘಟಕಗಳೆಂದು ಕರೆಯಲ್ಪಡುತ್ತವೆ.[೪೩] ಕಾರ್ಖಾನೆಯಲ್ಲಿ ಗೇರು ಬೀಜದ ಸಂಸ್ಕರಣೆಯನ್ನು ಏಳು ಹಂತಗಳಲ್ಲಿ ಮಾಡಲಾಗುತ್ತದೆ.


- ಶುಚಿ ಮಾಡುವಿಕೆ ಒಂದನೇ ಹಂತವಾಗಿದೆ. ಚೆನ್ನಾಗಿ ಒಣಗಿಸಿದ ಬೀಜಗಳನ್ನು ಮೊದಲು ಜರಡಿಯ ಮೂಲಕ ಹಾಯಿಸಿ ಅನಾವಶ್ಯಕವಾದ ವಸ್ತುಗಳೇನಾದರೂ ಇದ್ದಲ್ಲಿ ಬೇರ್ಪಡಿಸಲಾಗುತ್ತದೆ.
- ತೇವಾಂಶ ಕಾಯ್ದಿರಿಸುವಿಕೆ ಎರಡನೇ ಹಂತವಾಗಿದೆ. ಶುಚಿ ಮಾಡಿದ ಗೇರು ಬೀಜದ ತೇವಾಂಶವನ್ನು ಸುಮಾರು ಶೇಕಡಾ ೧೬ ಕ್ಕೆ ಸರಿಪಡಿಸುತ್ತಾರೆ. ಇದನ್ನು ಮೂರು ವಿಧಾನಗಳಲ್ಲಿ ಮಾಡಲಾಗುತ್ತದೆ. ಗೇರು ಬೀಜದ ರಾಶಿಯ ಮೇಲೆ ನೀರು ಸಿಂಪಡಿಸುವುದು. ಸಿಂಪಡಣೆಯ ಮಧ್ಯೆ ಗೇರು ಬೀಜವನ್ನು ಒದ್ದೆ ಮಾಡಿದ ಗೋಣಿ ಚೀಲದಲ್ಲಿ ಮುಚ್ಚುವುದು. ಈ ರೀತಿ ಎರಡು ದಿನ ಇಟ್ಟಿರಬೇಕು. ಬೀಜಗಳನ್ನು ರಂಧ್ರವಿರುವ ಕುಕ್ಕೆಯಲ್ಲಿ ಹಾಕಿ ನೀರಿನಲ್ಲಿ ಅದ್ದಿ ತೆಗೆಯುವುದು.ಸುಮಾರು ೮–೧೦ ನಿಮಿಷಗಳವರೆಗೆ ನೀರಿನ ಆವಿಗೆ ಒಳ ಪಡಿಸುವುದು. ನೀರಿನ ಅಂಶವನ್ನು ಮೇಲೆ ಹೇಳಿದ ಹಾಗೆ ಕಾಯ್ದುಕೊಳ್ಳುವುದು ಬಹು ಮುಖ್ಯ. ಅತಿಯಾಗಿ ಒಣಗಿಸಿದ ಬೀಜವನ್ನು ಸಂಸ್ಕರಿಸಿದಾಗ ಗೇರು ತಿರುಳು ಒಡೆದು ತುಂಡಾಗುವ ಸಾಧ್ಯತೆ ಹೆಚ್ಚು. ಇದರಿಂದ ವಿದೇಶಿ ಮಾರುಕಟ್ಟೆಯಲ್ಲಿ ಗೋಡಂಬಿಯ ದರ ಕುಸಿಯುವ ಸಂಭವ ಜಾಸ್ತಿ. ನೀರಿನ ಅಂಶ ಕಾಯ್ದುಕೊಂಡಲ್ಲಿ, ಸಿಪ್ಪೆಯಲ್ಲಿರುವ ದ್ರವ (CNSL) ಅದರ ಕೋಶದಿಂದ ಹೊರ ಬರಲು ಅನುಕೂಲವಾಗುತ್ತದೆ.
- ಮುಂದಿನ ಹಂತ ಗೇರು ಬೀಜಗಳನ್ನು ಹುರಿಯುವುದು. ಪ್ರಾರಂಭದಲ್ಲಿ ಗೇರು ಬೀಜಗಳನ್ನು ರಂಧ್ರವಿರುವ ಸಿಲಿಂಡರಿನಾಕಾರದಲ್ಲಿರುವ ಡ್ರಂಗಳಲ್ಲಿ ಹುರಿಯುತ್ತಿದ್ದರು. ಆದರಿಂದಾಗಿ ಬಹುಪಯೋಗಿಯಾದ ಗೇರು ಸಿಪ್ಪೆಯ ದ್ರವ ವ್ಯರ್ಥವಾಗಿ ಹೋಗುತ್ತಿತ್ತು. ಆದ್ದರಿಂದ ಇತ್ತೀಚಿನ ದಿನಗಳಲ್ಲಿ ಈ ವಿಧಾನಗಳನ್ನು ಅಳವಡಿಸುತ್ತಿಲ್ಲ. ಈಗ ಗೇರು ಬೀಜವನ್ನು ಹಬೆಯಲ್ಲಿ (100 Ibs) ಸುಮಾರು ೨೦ ನಿಮಿಷ ಬೇಯಿಸಿ ಅನಂತರ ಅದನ್ನು ೨೪ ಗಂಟೆ ಆರಲು ಬಿಟ್ಟು, ಅನಂತರ ತಿರುಳನ್ನು ಸಿಪ್ಪೆಯಿಂದ ಬೇರ್ಪಡಿಸುತ್ತಾರೆ.
- ಹುರಿದ ಗೇರು ಬೀಜದ ಸಿಪ್ಪೆಯನ್ನು ತೆಗೆಯುವುದು ಬಹಳ ಮುಖ್ಯವಾದ ಹಂತ. ಸಿಪ್ಪೆಯನ್ನು ತೆಗೆಯುವಾಗ ಕೈಗಳನ್ನು ರಕ್ಷಿಸಿಕೊಳ್ಳಬೇಕು. ಇಲ್ಲದೇ ಹೋದಲ್ಲಿ ಕೈಗೆ ಗೇರು ಸಿಪ್ಪೆಯ ದ್ರವ (CNSL) ತಾಗಿ ಕೈ ಸುಡುತ್ತದೆ. ಕಾರ್ಖಾನೆಗಳಲ್ಲಿ ಸಿಪ್ಪೆ ತೆಗೆಯಲು ಕಾಲಿನಿಂದ ನಡೆಸುವಂತಹ ಯಂತ್ರಗಳನ್ನು ಬಳಸುತ್ತಾರೆ. ಅನಂತರ ಗೇರು ತಿರುಳು (ಗೋಡಂಬಿ) ಮತ್ತು ಸಿಪ್ಪೆಯನ್ನು ಬೇರ್ಪಡಿಸಲಾಗುತ್ತದೆ. (ಅನುಬಂಧ ಚಿತ್ರ ಸಂಖ್ಯೆ ೩).
- ಒಣಗಿಸುವುದು ಮುಂದಿನ ಹಂತವಾಗಿದೆ. ಮೇಲೆ ಹೇಳಿದ ಹಾಗೆ ಸಿಪ್ಪೆ ತೆಗೆದ ಗೇರು ತಿರುಳಿನ ತೇವಾಂಶ ಶೇಕಡಾ ೬ ರಷ್ಟಿರುತ್ತದೆ. ಇದರ ತೇವಾಂಶ ಶೇಕಡಾ ೩ ರಷ್ಟು ಬರುವ ತನಕ ಒಣಗಿಸಬೇಕು. ಇದನ್ನು ರಂಧ್ರವಿರುವ ದೊಡ್ಡ ದೊಡ್ಡ ತಟ್ಟೆಗಳಲ್ಲಿಟ್ಟು ೭೦° ಸೆ. ನಲ್ಲಿ ಆರು ಗಂಟೆಗಳ ಕಾಲ ಒಣಗಿಸುತ್ತಾರೆ. ಹೆಚ್ಚು ಒಣಗಿಸುವುದರಿಂದ ಗೇರು ತಿರುಳು

ತುಂಡಾಗುವ ಸಾಧ್ಯತೆ ಜಾಸ್ತಿ. ಗೇರು ತಿರುಳಿನ ತೇವಾಂಶದಲ್ಲಿ ಶೇಕಡಾ ೩ ರಷ್ಟನ್ನು ಕಾಯ್ದುಕೊಳ್ಳುವುದು ಬಹು ಮುಖ್ಯ.

- ಗೇರು ತಿರುಳಿನ ಸಿಪ್ಪೆ ತೆಗೆಯುವುದು ಇನ್ನೊಂದು ಹಂತವಾಗಿದೆ. ಇದನ್ನು ಸಣ್ಣ ಚಾಕುವಿನಿಂದ ಕೆರೆದು ತೆಗೆಯುತ್ತಾರೆ. ಹೀಗೆ ಕೆರೆಯುವಾಗ ತಿರುಳಿನ ಹೊರ ಮೈ ಮೇಲೆ ಯಾವ ತೆರನಾದಂತ ಗೆರೆಗಳು ಬಾರದಂತೆ ನೋಡಿಕೊಳ್ಳಬೇಕು. ಅನಂತರ ಬೇರ್ಪಡಿಸಿದ ಗೇರು ತಿರುಳನ್ನು ಅದರ ಗಾತ್ರಕ್ಕೆ ಅನುಗುಣವಾಗಿ ವಿಂಗಡಿಸುತ್ತಾರೆ. (ಅನುಬಂಧ ಚಿತ್ರ ಸಂಖ್ಯೆ ೪).
- ಪ್ಯಾಕಿಂಗ್ ಕೊನೆಯ ಹಂತವಾಗಿರುತ್ತದೆ. ಗಾತ್ರಾನುಸಾರಕ್ಕೆ ವಿಂಗಡಿಸಿದ ಗೇರು ತಿರುಳಿನ ತೇವಾಂಶವನ್ನು ಶೇಕಡಾ ೫ ಕ್ಕೆ ಸರಿಪಡಿಸಿ, ಟಿನ್‌ಗಳಲ್ಲಿ ತುಂಬಿ ಅದರಲ್ಲಿರುವ ಗಾಳಿಯನ್ನು ಹೊರ ತೆಗೆದು, ಇಂಗಾಲದ ಡೈ ಆಕ್ಸೈಡ್‌ನ್ನು ತುಂಬಿ ಸೀಲ್ ಮಾಡಿ ಶೇಖರಿಸುತ್ತಾರೆ. ಹೀಗೆ ಶೇಖರಿಸುವುದರಿಂದ ಗೇರು ತಿರುಳು ಬಹು ಕಾಲದ ತನಕ ಹಾಳಾಗುವುದಿಲ್ಲ.[೪೪] (ಅನುಬಂಧ ಚಿತ್ರ ಸಂಖ್ಯೆ ೫).

ಸಂಸ್ಕರಣಾ ಪ್ರಕ್ರಿಯೆಯ ಪ್ರವಾಹ ನಕ್ಷೆ ಹೀಗಿದೆ.

ನಕ್ಷೆ ೨.೧: ಸಂಸ್ಕರಣಾ ಪ್ರಕ್ರಿಯೆಯ ಪ್ರವಾಹ ನಕ್ಷೆ



ಪ್ರಸ್ತುತ ಭಾರತದಲ್ಲಿ ೩೭೯೭ ಗೇರು ಕಾರ್ಖಾನೆಗಳಿದ್ದು ಹೆಚ್ಚಿನವು ಖಾಸಗಿ ಒಡೆತನಕ್ಕೆ ಒಳಪಟ್ಟಿವೆ. ಅವುಗಳ ಒಟ್ಟು ಉತ್ಪಾದನಾ ಸಾಮರ್ಥ್ಯ ೧೬.೨೩ ಲಕ್ಷ ಮಿಲಿಯ ಟನ್‌ಗಳು ಎಂದು ಅಂದಾಜಿಸಲಾಗಿದೆ. ಭಾರತದಲ್ಲಿರುವ ಒಟ್ಟು ರಾಜ್ಯವಾರು ಗೇರು ಕಾರ್ಖಾನೆಗಳ ಸಂಖ್ಯೆ ಮತ್ತು ಅವುಗಳ ಸಂಸ್ಕರಣಾ ಸಾಮರ್ಥ್ಯವನ್ನು ಕೋಷ್ಟಕ೨.೧೧ ರಲ್ಲಿ ನಮೂದಿಸಲಾಗಿದೆ.

ಕೋಷ್ಟಕ ೨.೧೧ ಭಾರತದ ಗೇರು ಕಾರ್ಖಾನೆಗಳು ೨೦೧೦-೧೧

ರಾಜ್ಯಗಳು	ಕಾರ್ಖಾನೆಗಳು	ಶೇಕಡಾ	ಸಂಸ್ಕರಣಾ ಸಾಮರ್ಥ್ಯ (೦೦೦ ಮಿಲಿಯನ್ ಟನ್‌ಗಳಲ್ಲಿ	ಶೇಕಡಾ
ಕೇರಳ	೪೩೨	೧೧.೩೭%	೬೦೦	೩೬.೯%
ಕರ್ನಾಟಕ	೨೬೬	೭.೦೦%	೩೦೦	೧೮.೪%
ಗೋವಾ	೪೫	೧.೧೦%	೫೦	೩.೦%
ಮಹಾರಾಷ್ಟ್ರ	೨೨೨೦*	೫೮.೪೬%	೫೦	೩.೦%
ತಮಿಳುನಾಡು	೪೧೭	೧೦.೯೮%	೪೦೦	೨೪.೬%
ಆಂಧ್ರ ಪ್ರದೇಶ	೧೭೫	೪.೬೦%	೧೦೦	೬.೧೬%
ಒರಿಸ್ಸಾ	೨೦೭	೫.೪೫%	೧೦೦	೬.೧೬%
ಪಶ್ಚಿಮ ಬಂಗಾಳ	೩೦	೦.೭೯%	೦೮	೦.೪೯%
ಛತ್ತೀಸ್ ಘಡ್	೦೩	೦.೦೭%	೦೫	೦.೩%
ಉತ್ತರಾಂಚಲ ರಾಜ್ಯಗಳು	೨೨	೦.೫೭%	೧೦	೦.೬%
ಒಟ್ಟು	೩೭೯೭	೧೦೦%	೧೬೨೩	೧೦೦%

*೧೮೫೦ ಸಣ್ಣ ಹಾಗೂ ಗೃಹ ಕೈಗಾರಿಕೆಗಳನ್ನೊಳಗೊಂಡಿದೆ.

Source: Venkatesh N. Hubli, R.Jnanadeva 2012, Cashew Development in India: Strategies for sustainable Production In Souvenier International Conference on Sustainable Cashew Production "Challenges and Opportunities" October 2012, Goa.

ಭಾರತದ ಒಟ್ಟು ಗೇರು ಕಾರ್ಖಾನೆಗಳಲ್ಲಿ ಶೇ. ೫೮ ರಷ್ಟು ಮಹಾರಾಷ್ಟ್ರದಲ್ಲಿದ್ದರೂ ಅವುಗಳ ಉತ್ಪಾದನಾ ಸಾಮರ್ಥ್ಯ ಕೇವಲ ೫೦,೦೦೦ ಮಿಲಿಯನ್ ಟನ್‌ಗಳು ಮಾತ್ರ. ಕಾರಣ ಒಟ್ಟು ೨೨೨೦ ಕಾರ್ಖಾನೆಗಳಲ್ಲಿ ಸುಮಾರು ೧೮೫೦ ಘಟಕಗಳು ಸಣ್ಣ ಹಾಗೂ ಗೃಹ ಕೈಗಾರಿಕೆಗಳಾಗಿದ್ದು ಕಡಿಮೆ ಉತ್ಪಾದನಾ ಸಾಮರ್ಥ್ಯ ಹೊಂದಿರುವುದು. ಮಹಾರಾಷ್ಟ್ರದ ನಂತರದ ಸ್ಥಾನ ಕ್ರಮವಾಗಿ ಕೇರಳ (೧೧.೩೭%), ತಮಿಳುನಾಡು (೧೦%) ಹಾಗೂ ಕರ್ನಾಟಕ (೭%) ಪಡೆದುಕೊಂಡಿವೆ. ಪ್ರಸ್ತುತ ೧೬.೨೩ ಲಕ್ಷ ಮಿಲಿಯ ಟನ್‌ಗಳಷ್ಟು ಸಂಸ್ಕರಣಾ ಸಾಮಾರ್ಥ್ಯ ಹೊಂದಿರುವ ಗೇರು ಕಾರ್ಖಾನೆಗಳಿಗೆ ಸಿಗುತ್ತಿರುವ ದೇಶೀಯ ಗೇರು ಉತ್ಪಾದನೆ ಕೇವಲ ೬.೯೨ ಲಕ್ಷ ಮಿಲಿಯ ಟನ್‌ಗಳು. ಬೇಡಿಕೆ ಮತ್ತು ಪೂರೈಕೆಯಲ್ಲಿ ಅಗಾಧವಾದ ವ್ಯತ್ಯಾಸವಿರುವುದರಿಂದ ಆಮದು ಗೇರು ಬೀಜದ ಅನಿವಾರ್ಯತೆ ಇದೆ.[೪೫]

೨.೬ ಗೋಡಂಬಿ ನಿರ್ಯಾತ

ಜಾಗತಿಕ ಗೋಡಂಬಿ ಮಾರುಕಟ್ಟೆಯಲ್ಲಿ ಭಾರತ ಒಂದು ಪ್ರಮುಖ ಹಾಗೂ ಸಾಂಪ್ರದಾಯಿಕ ಪೂರೈಕೆದಾರ ರಾಷ್ಟ್ರ ಎಂಬ ಹೆಗ್ಗಳಿಕೆಯನ್ನು ಪಡೆದುಕೊಂಡಿದೆ. ಸುಮಾರು ೬೦ ರಾಷ್ಟ್ರಗಳಿಗೆ ಗೋಡಂಬಿಯನ್ನು ಭಾರತ ನಿರ್ಯಾತ ಮಾಡುತ್ತಿದ್ದು ಪ್ರಮುಖವಾಗಿ ಅಮೇರಿಕಾ, ನೆದರ್‌ಲ್ಯಾಂಡ್, ಇಂಗ್ಲೆಂಡ್, ಜರ್ಮನಿ, ಜಪಾನ್, ಆಸ್ಟ್ರೇಲಿಯಾ ಮತ್ತು ಯು.ಎ.ಇ. ರಾಷ್ಟ್ರಗಳು ಮುಂಚೂಣಿಯಲ್ಲಿವೆ. ಗೇರು ಬೀಜವನ್ನು ಪರಿಷ್ಕರಿಸುವ ಹಾಗೂ ಮಾರಾಟ ಮಾಡುವ ಪ್ರಕ್ರಿಯೆ ೧೯೨೦ ರ ದಶಕದಲ್ಲಿ ಕೇರಳದ ಕೊಲ್ಲಂನಲ್ಲಿ, ಕರ್ನಾಟಕದ ಮಂಗಳೂರಿನಲ್ಲಿ ಹಾಗೂ ಆಂಧ್ರ ಪ್ರದೇಶದ ವೆಟ್ಟು ಪಾಲಮ್ ನಲ್ಲಿ ಏಕ ಕಾಲದಲ್ಲಿ ಪ್ರಾರಂಭವಾಯಿತು. ಗೇರು ಬೀಜಗಳನ್ನು ತೆರೆದ ಬಾಣಲೆಗಳಲ್ಲಿ ಹುರಿದು ಬೀಜವನ್ನು ಹೊರ ತೆಗೆದು ಅದನ್ನು ಪರಿಷ್ಕರಿಸಿ ಮರದ ಡಬ್ಬಿಗಳಲ್ಲಿ ತುಂಬಿ ದಿನ ಪತ್ರಿಕೆಗಳಲ್ಲಿ ಸುತ್ತಿ ಅಮೇರಿಕಾದ ಹಡಗುಗಳಿಗೆ ರವಾನೆ ಮಾಡಲಾಗುತ್ತಿತ್ತು. ಸ್ಥಳೀಯ ಮಹಿಳೆಯರೇ ಹೆಚ್ಚಾಗಿ ಈ ಎಲ್ಲಾ ಕೆಲಸಗಳನ್ನು ನಿಭಾಯಿಸುತ್ತಿದ್ದು, ಸ್ಥಳೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದನ್ನೂ ಮಹಿಳೆಯರೇ ನಿಭಾಯಿಸುತ್ತಿದ್ದರು. ೧೯೨೦ ರ ದಶಕದ ಕೊನೆಯಲ್ಲಿ ಗೋಡಂಬಿಗೆ ನುಸಿ ಹಾಗೂ ಹುಳುಗಳು ಬಾಧಿಸುವುದನ್ನು ತಡೆಗಟ್ಟಲು, ಗೋಡಂಬಿಯನ್ನು ಸಂರಕ್ಷಿಸುವ ಪ್ರಯತ್ನ ಪ್ರಾರಂಭವಾಯಿತು. ತಗಡಿನ ಡಬ್ಬಿಗಳನ್ನು ತೆಗೆದುಕೊಂಡು ಅದರ ಒಳಗಿನ ಗಾಳಿಯನ್ನು ಪಂಪುಗಳ ಮೂಲಕ ಹೊರ ತೆಗೆದು ಇಂಗಾಲದ ಆಮ್ಲವನ್ನು ತುಂಬಿಸಿ ಗೋಡಂಬಿಯನ್ನು ಹಾಕಿ, ಸೀಲ್ ಮಾಡಿ ಟಿನ್‌ಗಳನ್ನು ಮರದ ಪೆಟ್ಟಿಗೆಯಲ್ಲಿಟ್ಟು ರಫ್ತು ಮಾಡಲು ಪ್ರಾರಂಭಿಸಲಾಯಿತು. ೧೯೫೪ ರಿಂದ ವ್ಯವಸ್ಥಿತವಾಗಿ ಗೋಡಂಬಿ ರಫ್ತು ವ್ಯಾಪಾರ ಪ್ರಾರಂಭಿಸಲ್ಪಟ್ಟಿತು. ಕೇರಳದ ಕೊಲ್ಲಂನಿಂದಲೇ ಆ ದಿನಗಳಲ್ಲಿ ದೇಶದ ಶೇ. ೭೦ ರಷ್ಟು ಗೋಡಂಬಿ ರಫ್ತಾಗುತ್ತಿತ್ತು. ಧನಲಕ್ಷ್ಮಿ ಕೃಷ್ಣ ಪಿಳ್ಳೈ, ಪಿ. ಪರಮೇಶ್ವರನ್ ಪಿಳ್ಳೈ ಹಾಗೂ ಶ್ರೀ ತಂಗಲ್ ಕುಂಞ ಮುಸಲಿಯಾರ್ ಇವರುಗಳೇ ಗೋಡಂಬಿ ಉದ್ಯಮದ ನೇತೃತ್ವ ವಹಿಸಿದವರು. ಇವರುಗಳೊಂದಿಗೆ ಎನ್. ನಾರಾಯಣ ರೆಡ್ಡಿಯಾರ್, ಇ. ಸಿ. ಗೋವಿಂದ ದಾಸನ್, ಕಿಡಂಗಿಲ್ ಕುಂಞರಾಮನ್, ಕೆ. ಮೊೖದಿನ್ ಕುಂಞ, ಗೋವಿಂದನ್ ಮತ್ತು ಕೆ.ಪಿ. ಕೇಶವನ್ ಮತ್ತಿತರರು ಜಾಗತಿಕ ಮಟ್ಟದಲ್ಲಿ ಗೋಡಂಬಿಯನ್ನು ಪರಿಚಯಿಸಿದರು. ಆ ದಿನಗಳಲ್ಲಿ ಗೋಡಂಬಿ ನಿರ್ಯಾತದಲ್ಲಿ ಮಂಗಳೂರಿನ ಪಿಯರ್ಸ್ ಲೆಸ್ಲೆ ಕಂಪೆನಿ ಮುಂಚೂಣಿಯಲ್ಲಿತ್ತು. ಕಂಪೆನಿಯು ಮುಂದೆ ಗೇರು ಬೀಜದ ಎಣ್ಣೆಯನ್ನು ತೆಗೆಯುವ ಪ್ರಕ್ರಿಯೆಯನ್ನು ಪ್ರಾರಂಭಿಸಿ ಅದನ್ನು ರಫ್ತು ಮಾಡಲಾರಂಭಿಸಿತು. ೧೯೬೦ ರ ತನಕವೂ ಗೋಡಂಬಿ ಹಾಗೂ ಗೇರು ಬೀಜದ ಎಣ್ಣೆಯ ರಫ್ತು ವ್ಯಾಪಾರದಲ್ಲಿ ಪಿಯರ್ಸ್ ಲೆಸ್ಲೆ ಕಂಪೆನಿ ಏಕಾಧಿಪತ್ಯವನ್ನು ಸಾಧಿಸಿತ್ತು.

೧೯೬೨ ರ ತನಕ ಭಾರತ ಜಾಗತಿಕ ಮಾರುಕಟ್ಟೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದುಕೊಂಡಿತ್ತು (೯೪.೬%). ಸ್ವಾತಂತ್ರ್ಯದ ಹೊಸ್ತಿಲಿನಲ್ಲಿ ಭಾರತದ ಗೋಡಂಬಿ ವ್ಯಾಪಾರ ೧೬,೯೦೬ ಮಿಲಿಯ ಟನ್‌ಗಳಾಗಿದ್ದು ೧೯೬೨ ರಲ್ಲಿ ಅದು ೪೬,೪೩೬ ಮಿಲಿಯ ಟನ್‌ಗಳಿಗೆ ಅಂದರೆ ಸರಿ ಸುಮಾರು ೩ ಪಟ್ಟು ಹೆಚ್ಚಳ ಕಂಡಿತ್ತು. ಆದರೆ ಅ ನಂತರದ ದಿನಗಳಲ್ಲಿ ಮೊಜಾಂಬಿಕ್‌ನಿಂದ ಬಂದ ತೀವ್ರ ಪೈಪೋಟಿ ಭಾರತದ ಏಕಸ್ವಾಮ್ಯತೆಗೆ ದೊಡ್ಡ ಹೊಡೆತವನ್ನು ನೀಡಿತು. ಆದಾಗ್ಯೂ ಜಾಗತಿಕ ಮಾರುಕಟ್ಟೆಯಲ್ಲಿ ಭಾರತದ ಪಾಲು ಶೇಕಡಾ ೪೯ ರಷ್ಟು ಇತ್ತು ಎಂಬುದು ಸಮಾಧಾನಕರ ವಿಷಯ.[೪೬] ಅ ನಂತರದ ವರ್ಷಗಳಲ್ಲಿ ಭಾರತದ ಗೋಡಂಬಿ ರಫ್ತು ವ್ಯಾಪಾರದಲ್ಲಿ ಚೇತರಿಕೆ ಕಂಡು ಬಂದಿದ್ದು ೧೯೯೦ ರಲ್ಲಿ ೪೮೭೬೪ ಮಿಲಿಯ ಟನ್‌ಗಳಿಗೆ ಅಂದರೆ ಸರಿಸುಮಾರು ಶೇಕಡಾ ೬೦ ರಿಂದ ೭೦ ಕ್ಕೆ ತಲುಪಿತು. ೧೯೯೧ ಜಾಗತಿಕ ಗೋಡಂಬಿ ರಫ್ತು ವ್ಯಾಪಾರ ೭೯೨೭೩ ಮಿಲಿಯ ಟನ್‌ಗಳಾಗಿದ್ದು ಪ್ರಸ್ತುತ ಅದು ೨,೮೦,೦೦೦ ಮಿಲಿಯ ಟನ್‌ಗಳಾಗಿದ್ದು ೩೫೦%

ಹೆಚ್ಚಳವನ್ನು ಕಳೆದ ಒಂದು ದಶಕದಲ್ಲಿ ಸಾಧಿಸಿರುವುದು ಗಮನಾರ್ಹ. ಒಂದು ದಶಕದ ಹಿಂದೆ ಭಾರತ ಮತ್ತು ಬ್ರೆಜಿಲ್ ದೇಶಗಳು ಜಾಗತಿಕ ಗೋಡಂಬಿ ಮಾರುಕಟ್ಟೆಯಲ್ಲಿ ಪ್ರಧಾನ ಪಾತ್ರ ವಹಿಸಿದ್ದವು. ಆದರೀಗ ವಿಯೆಟ್ನಾಂ ಆ ಸ್ಥಾನಕ್ಕೆ ಲಗ್ಗೆ ಇಟ್ಟು ಒಂದು ಲಕ್ಷ ಮಿಲಿಯ ಟನ್‌ಗಳಿಗೂ ಅಧಿಕ ರಫ್ತು ಮಾಡುತ್ತಿದೆ.

ಭಾರತವು ಗೋಡಂಬಿ ನಿರ್ಯಾತದ ಆರಂಭದೊಂದಿಗೆ ಒಂದು ನವೀನ ಮಾದರಿಯ ಗೋಡಂಬಿ ವ್ಯವಹಾರ ವ್ಯವಸ್ಥೆ ಅಸ್ತಿತ್ವಕ್ಕೆ ಬಂತು. ನಿರ್ಯಾತಗಾರ/ ದಲ್ಲಾಳಿ/ ನಿಯೋಗಿ ಅಥವಾ ಏಜೆಂಟ್/ಆಮದುಗಾರ ಕೊಳ್ಳುವವ ಅಥವಾ ನಿಯೋಗಿ ಮತ್ತು ಅಂತಿಮ ಬಳಕೆದಾರ ಹೀಗೆ ಒಂದು ವ್ಯವಸ್ಥಿತ ವ್ಯಾಪಾರದ ಸರಣಿ ಪ್ರಕ್ರಿಯೆ ಪ್ರಾರಂಭವಾಯಿತು. ದಲ್ಲಾಳಿ ಯಾನೆ ನಿಯೋಗಿಯ ಕೆಲಸ ಒಂದು ವಿಶಿಷ್ಟವಾದ ಕಾರ್ಯ ಚಟುವಟಿಕೆಯ ಕ್ಷೇತ್ರವಾಗಿ ಪರಿವರ್ತನೆಗೊಂಡಿತು. ಹೀಗಾಗಿ ಗೋಡಂಬಿ ಉದ್ಯಮದಲ್ಲಿ ಸ್ಪರ್ಧೆ, ಲಾಭ ನಷ್ಟಗಳ ಲೆಕ್ಕಾಚಾರ ಶುರುವಾಯಿತು. ಅತ್ಯಂತ ಸರಳವಾಗಿ ಪ್ರಾರಂಭವಾದ ಗೇರು ನಿರ್ಯಾತದ ವ್ಯವಹಾರ ದಿನದಿಂದ ದಿನಕ್ಕೆ ಸಂಕೀರ್ಣವಾಗುತ್ತಾ ಉದ್ದಿಮೆಯು ಒಂದು ಪ್ರಭಾವಿ ವಲಯವನ್ನು ಸೃಷ್ಟಿಸಿದ್ದು ಇತಿಹಾಸವಾಗಿ ಬಿಟ್ಟಿತು.

ರಫ್ತು ವ್ಯಾಪಾರದ ಹೆಚ್ಚಳದೊಂದಿಗೆ ಸರಿ ಸಮಾನವಾಗಿ ಕಚ್ಚಾಗೇರು ಉತ್ಪಾದನೆ ಹೆಚ್ಚಾಗದ ಕಾರಣ ಪೂರ್ವ ಆಫ್ರಿಕಾ ದೇಶಗಳಿಂದ ಕಚ್ಚಾಗೇರಿನ ಆಮದು ಅನಿವಾರ್ಯವಾಯಿತು. ಹಾಗಾಗಿ ೧೯೬೦ ರ ದಶಕದಲ್ಲಿ ಕಚ್ಚಾಗೇರು ಬೀಜದ ಆಮದು ಪ್ರಾರಂಭವಾಯಿತು. ಅದರೊಂದಿಗೆ ಸ್ಥಳೀಯ ಉತ್ಪಾದನೆ ಹಾಗೂ ಸಂಸ್ಕರಣಾ ಘಟಕಗಳ ಉತ್ಪಾದನಾ ಸಾಮರ್ಥ್ಯ ಕೂಡಾ ಹೆಚ್ಚಾಯಿತು. ೧೯೪೦-೪೧ ರಲ್ಲಿ ಆಫ್ರಿಕಾದಿಂದ ೨೮,೦೦೦ ಮಿ. ಟನ್‌ಗಳಷ್ಟು ಕಚ್ಚಾಗೇರು ಆಮದು ಮಾಡಿಕೊಳ್ಳಲಾಗಿತ್ತು. ಪ್ರಸ್ತುತ ಅದು ೮೦೯೬೭೧ ಮಿ. ಟನ್‌ಗಳಿಗೆ ಏರಿದ್ದನ್ನು ಗಮನಿಸಬಹುದಾಗಿದೆ.

ಸಂಸ್ಕರಣಾ ಘಟಕಗಳ ಸಂಖ್ಯೆ ಹಾಗೂ ಸಾಮರ್ಥ್ಯ ಹೆಚ್ಚಾದಂತೆಲ್ಲಾ ಅದು ಗೇರು ಆಮದುದಾರರು ಮತ್ತು ಏಜೆಂಟರುಗಳ ಲಾಭದ ನಿರೀಕ್ಷೆಯನ್ನು ಹೆಚ್ಚಿಸುತ್ತಾ ಹೋಯಿತು. ಹಾಗಾಗಿ ನಿರ್ಯಾತದಾರರು ಸಂಕಷ್ಟಕ್ಕೆ ಸಿಲುಕಿದರು. ಗೇರು ವ್ಯಾಪಾರದಲ್ಲಿ ಸೂಕ್ತ ನೀತಿ ನಿಯಮಗಳ ಅನುಷ್ಠಾನಕ್ಕಾಗಿ ೧೯೫೪ ರಲ್ಲಿ ಖಾಸಗಿ ವ್ಯವಸ್ಥೆಯಾಗಿ "ಗೋಡಂಬಿ ಒಕ್ಕೂಟ" (Cashew Syndicate) ರಚನೆಗೊಂಡು ಬೆಲೆ ನಿಗದಿ ಹಾಗೂ ರಫ್ತು ವ್ಯಾಪಾರವನ್ನು ನಿಯಂತ್ರಣ ಮಾಡಲು ಪ್ರಾರಂಭಿಸಿತು. ಆದರೆ ಗೋಡಂಬಿ ಒಕ್ಕೂಟ ಒಂದು ಶಾಸನ ಬದ್ಧ ಸಂಸ್ಥೆಯಾಗಿರದ ಕಾರಣ ೧೭ ಆಗಸ್ಟ್ ೧೯೫೫ ರಲ್ಲಿ ಕೇಂದ್ರ ಸರ್ಕಾರದ ಕೃಷಿ ಸಚಿವಾಲಯದ ಆಶ್ರಯದಲ್ಲಿ ಗೋಡಂಬಿ ರಫ್ತು ಉತ್ತೇಜಕ ಮಂಡಳಿ ಸ್ಥಾಪನೆಗೊಂಡಿತು.

ಸಂಸ್ಕರಣಾ ಉದ್ಯಮಿಗಳು ಹಾಗೂ ನಿರ್ಯಾತಗಾರರು ಇದರ ಸದಸ್ಯರುಗಳಾಗಿದ್ದು, ಗೋಡಂಬಿ ಹಾಗೂ ಗೇರು ದ್ರವ ಎಣ್ಣೆಯ ರಫ್ತು ವ್ಯಾಪಾರವನ್ನು ಉತ್ತೇಜಿಸುವುದು ಇದರ ಪ್ರಮುಖ ಉದ್ದೇಶವಾಗಿತ್ತು. ಗೇರು ರಫ್ತು ವ್ಯಾಪಾರಕ್ಕೆ ಮಹತ್ತರವಾದ ಸಾಂಸ್ಥಿಕ ಚೌಕಟ್ಟನ್ನು ಗೇರು ರಫ್ತು ಉತ್ತೇಜಕ ಮಂಡಳಿಯು ದೊರಕಿಸಿಕೊಟ್ಟಿತು. ಉತ್ತಮ ಗುಣ ಮಟ್ಟದ ಗೋಡಂಬಿಯು ವಿದೇಶೀ ಮಾರುಕಟ್ಟೆಯ ಪ್ರಮುಖ ನಿರೀಕ್ಷೆಯಾಗಿದ್ದರಿಂದ ಈ ನಿಟ್ಟಿನಲ್ಲಿ ಮಂಡಳಿಯು ಗೋಡಂಬಿಯ ಗುಣ ಮಟ್ಟವನ್ನು ಕಾಯ್ದುಕೊಳ್ಳಲು ವಿಶೇಷ ಆದ್ಯತೆಯನ್ನು ನೀಡಿತು. ಭಾರತದ ಗೋಡಂಬಿಯ ಕುರಿತಂತೆ ದೇಶ ವಿದೇಶಗಳಲ್ಲಿ ವ್ಯಾಪಕ ಪ್ರಚಾರವನ್ನು ನೀಡುವುದರೊಂದಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ಆಹಾರ ಮೇಳಗಳಲ್ಲಿ, ಪ್ರದರ್ಶನಗಳಲ್ಲಿ ಪಾಲ್ಗೊಂಡು ಭಾರತದ ಗೋಡಂಬಿ ರಫ್ತು ವ್ಯಾಪಾರಕ್ಕೆ ಪ್ರೋತ್ಸಾಹ ನೀಡುತ್ತಿದೆ. ಕಾಲ ಕಾಲಕ್ಕೆ ತಜ್ಞರನ್ನೊಳಗೊಂಡ ನಿಯೋಗಗಳನ್ನು ಬೇರೆ ಬೇರೆ ದೇಶಗಳಿಗೆ ಕಳುಹಿಸಿ ಅವರಿಂದ ಸಂಗ್ರಹಿಸಿದ ವರದಿಗಳನ್ನು ಸದಸ್ಯರುಗಳಿಗೆ ರವಾನೆ

[illegible]

ಮಾಡುವುದು ಮಂಡಳಿಯ ಕಾರ್ಯಕ್ರಮಗಳಲ್ಲಿ ಒಂದು. ನಿರ್ಯಾತಗಾರರ ಹಾಗೂ ಆಮದುದಾರರ ನಡುವಿನ ಭಿನ್ನಾಭಿಪ್ರಾಯಗಳನ್ನು ಸೌಹಾರ್ದಯುತವಾಗಿ ಬಗೆ ಹರಿಸುವ ಕ್ರಮವನ್ನು ಮಂಡಳಿಯು ನಿರ್ವಹಿಸುತ್ತದೆ. ಸಂಸ್ಕರಣೆಯ ಪ್ರಕ್ರಿಯೆಯನ್ನು ಉನ್ನತೀಕರಿಸುವುದು, ಮೌಲ್ಯವರ್ಧಿತ ಗೋಡಂಬಿ ರಫ್ತು ವ್ಯಾಪಾರಕ್ಕೆ ಪ್ರೋತ್ಸಾಹಿಸುವುದು, ಹೊಸ ಪ್ಯಾಕಿಂಗ್ ಪದ್ಧತಿಯ ಅಳವಡಿಕೆಯೊಂದಿಗೆ ಗ್ರಾಹಕರನ್ನು ಆಕರ್ಷಿಸುವುದು, ಅಂತಾರಾಷ್ಟ್ರೀಯ ಮಟ್ಟದ ಗುಣ ಮಟ್ಟವನ್ನು ಅನುಷ್ಠಾನಗೊಳಿಸುವುದು ಇವೇ ಮೊದಲಾದ ಯೋಜನೆಗಳನ್ನು ೧೧ನೇ ಪಂಚವಾರ್ಷಿಕ ಯೋಜನೆಯಲ್ಲಿ ಅಳವಡಿಸಿಕೊಳ್ಳಲಾಯಿತು. ಗರಿಷ್ಠ ರೂ. ೫೦ ಲಕ್ಷ ಗಳವರೆಗಿನ ಹಣಕಾಸು ನೆರವನ್ನು ನಿರ್ಯಾತದಾರರಿಗೆ ನೀಡುವ ಯೋಜನೆಯನ್ನು ಮಂಡಳಿ ಹಮ್ಮಿಕೊಂಡಿದೆ. ಗೇರು ಉದ್ಯಮದ ಅಭಿವೃದ್ಧಿ, ಸಂಶೋಧನೆ ತರಬೇತಿ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಕೇಂದ್ರ ಆಹಾರ ಸಂಶೋಧನಾ ಸಂಸ್ಥೆ, ರಾಷ್ಟ್ರೀಯ ಪೌಷ್ಟಿಕ ಮತ್ತು ಕೇಂದ್ರ ವಿಜ್ಞಾನ ಮತ್ತು ಕೈಗಾರಿಕಾ ಸಂಶೋಧನಾ ಸಂಸ್ಥೆಗಳ ಸಹಯೋಗದಲ್ಲಿ ಮಂಡಳಿಯು ಕಾರ್ಯ ಪ್ರವೃತ್ತವಾಗಿದೆ.

ಭಾರತ ಸರ್ಕಾರ ೧೯೬೩ ರಲ್ಲಿ ರಫ್ತು ನಿಯಂತ್ರಣ ಹಾಗೂ ತಪಾಸಣಾ ಕಾಯಿದೆಯನ್ನು ಜಾರಿ ಮಾಡಿತು. ಆ ಪ್ರಕಾರವಾಗಿ ಗೋಡಂಬಿಯಲ್ಲಿ ಒಟ್ಟು ೩೩ ವಿಧದ ಶ್ರೇಣಿಗಳನ್ನು ಗುರುತಿಸಿದ್ದು ವ್ಯವಹಾರಿಕವಾಗಿ ಪ್ರಸ್ತುತ ೨೬ ಶ್ರೇಣಿ ಗೋಡಂಬಿಗಳ ರಫ್ತು ವ್ಯಾಪಾರಕ್ಕೆ ಲಭ್ಯವಾಗಿವೆ. ಅವುಗಳಲ್ಲಿ ಬಿಳಿ ಅಥವಾ ದಂತದ ಬಣ್ಣದ ಇಡಿ ಗೋಡಂಬಿಗಳು ಅತ್ಯಂತ ಉನ್ನತ ಗುಣ ಮಟ್ಟದ್ದಾಗಿದ್ದು ಉಳಿದಂತೆ ಗೋಡಂಬಿಯ ತುಂಡುಗಳು ಮತ್ತು ಚೂರುಗಳ ರೂಪದಲ್ಲೂ ಗೋಡಂಬಿಗಳು ಲಭ್ಯವಿವೆ. ಆದರೆ ಇವುಗಳ ಸ್ವಾದದಲ್ಲಿ ಯಾವುದೇ ವ್ಯತ್ಯಾಸ ಇರುವುದಿಲ್ಲ. ರಫ್ತಿಗಾಗಿ ಹಡಗಿಗೆ ಏರಿಸುವ ಮೊದಲು ಗುಣ ಮಟ್ಟದ ತಪಾಸಣೆ ಕಡ್ಡಾಯವಾಗಿ ಆಗುತ್ತದೆ. ಗುಣಮಟ್ಟದ ದೃಢೀಕರಣ ಪತ್ರವನ್ನು ರಫ್ತು ಉತ್ತೇಜಕ ಮಂಡಳಿಯು ಮಂಜೂರು ಮಾಡುತ್ತದೆ.

೧೯೫೫ ರ ತನಕ ಅಮೇರಿಕಾ ಭಾರತದ ಗೋಡಂಬಿಯ ಪ್ರಧಾನ ಗ್ರಾಹಕ ದೇಶವಾಗಿದ್ದು ಆ ನಂತರದ ಸ್ಥಾನಗಳಲ್ಲಿ ಕ್ರಮವಾಗಿ ಕೆನಡಾ ಹಾಗೂ ಯುರೋಪಿಯನ್ ರಾಷ್ಟ್ರಗಳು ಇದ್ದವು. ೧೯೫೬ ರಲ್ಲಿ ಸೋವಿಯತ್ ಯೂನಿಯನ್ ಈ ಪಟ್ಟಿಯಲ್ಲಿ ಸೇರ್ಪಡೆಗೊಂಡಿತು. ಇವುಗಳಲ್ಲದೆ ಭಾರತ ಹೊಸ ಮಾರುಕಟ್ಟೆಗಾಗಿ ಸಿಂಗಾಪುರ, ಜಪಾನ್, ಹಾಂಕಾಂಗ್ ಮುಂತಾದ ರಾಷ್ಟ್ರಗಳಿಗೆ ಲಗ್ಗೆ ಇಟ್ಟಿತು. ೧೯೬೯ ರ ವೇಳೆಗೆ ಸೋವಿಯತ್ ರಷ್ಯಾ ಭಾರತದ ಬಹು ದೊಡ್ಡ ಗ್ರಾಹಕ ರಾಷ್ಟ್ರವಾಗಿ ಮೂಡಿ ಬಂತು. ಭಾರತದಿಂದ ಅಮೇರಿಕಾ ದೇಶಕ್ಕೆ ಕಳಿಸುವ ಗೋಡಂಬಿಯ ಪ್ರಮಾಣ ಕುಸಿಯುತ್ತಾ ಬಂದ ಪರಿಣಾಮ ಅಮೇರಿಕಾ ಬೇರೆ ಮೂಲಗಳಿಂದ ಗೋಡಂಬಿಯನ್ನು ಆಮದು ಮಾಡಿಕೊಳ್ಳಲು ಪ್ರಾರಂಭಿಸಿತು.ಇದೇ ಸಮಯದಲ್ಲಿ ಪೂರ್ವ ಆಫ್ರಿಕಾದ ದೇಶಗಳಾದ ಮೊಜಾಂಬಿಕ್, ತಾಂಜೇನಿಯಾ ಮತ್ತು ಕೀನ್ಯಾಗಳು ಇಟಲಿ ಮಾದರಿಯ ತಂತ್ರಜ್ಞಾನವನ್ನು ಬಳಸಿ ಹೊಸ ಸಂಸ್ಕರಣಾ ಘಟಕಗಳನ್ನು ಪ್ರಾರಂಭಿಸಿದವು ಮತ್ತು ಅಮೇರಿಕಾಕ್ಕೆ ರಫ್ತು ಮಾಡ ತೊಡಗಿದವು. ಹಾಗಾಗಿ ಭಾರತ ದೇಶದಿಂದ ಅಮೇರಿಕಾ ದೇಶಕ್ಕೆ ರಫ್ತು ಮಾಡುತ್ತಿದ್ದ ಗೋಡಂಬಿಯ ಪ್ರಮಾಣ ೨೦೦೦ ಮಿ. ಟನ್‌ಗಳಿಗೆ ಕುಸಿಯಿತು. ಸೋವಿಯತ್ ಒಕ್ಕೂಟಗಳು ಭಾರತದ ಪ್ರಮುಖ ಗ್ರಾಹಕ ರಾಷ್ಟ್ರವಾಗಿ ಸುಮಾರು ೩೦,೦೦೦ ಮಿ.ಟನ್ ಗಳಷ್ಟು ಗೋಡಂಬಿಯನ್ನು ಭಾರತದಿಂದ ಆಮದು ಮಾಡಿಕೊಳ್ಳಲು ಪ್ರಾರಂಭಿಸಿತು. ಇದೇ ಸಂದರ್ಭದಲ್ಲಿ ಅಮೇರಿಕಾ ತನ್ನ ಪ್ರಮುಖ ಪೂರೈಕೆದಾರ ರಾಷ್ಟ್ರವಾದ ಬ್ರೆಜಿಲ್ ದೇಶಕ್ಕೆ ನೇರವಾಗಿ ಸಹಾಯ ಹಸ್ತವನ್ನು ನೀಡಿತು. ಅಮೇರಿಕಾ ದೇಶ ಭೌಗೋಳಿಕವಾಗಿ ಬ್ರೆಜಿಲ್‌ಗೆ ಸಮೀಪವಿರುವುದರೊಂದಿಗೆ ಅಮೇರಿಕಾದ ಆರ್ಥಿಕ ನೆರವು ಬ್ರೆಜಿಲ್ ದೇಶದ ಗೇರು ಉತ್ಪಾದನೆ ಹಾಗೂ ರಫ್ತು

ವ್ಯಾಪಾರಕ್ಕೆ ವಿಶೇಷ ಪ್ರೋತ್ಸಾಹ ನೀಡಿತು. ಆ ಕಾರಣದಿಂದ ಕೇವಲ ೭೦೦೦ ಮಿ. ಟನ್ ಕಚ್ಚಾಗೇರಿನ ಉತ್ಪಾದನೆ ಮಾಡುತ್ತಿದ್ದ ಬ್ರೆಜಿಲ್ ೧೯೭೦ ರ ದಶಕದ ಕೊನೆಯಲ್ಲಿ ೭೦,೦೦೦ ಮಿ. ಟನ್ ಗಳಷ್ಟು ಉತ್ಪಾದನೆ ಮಾಡಲು ಪ್ರಾರಂಭಿಸಿತು. ಇವತ್ತಿಗೂ ಪ್ರಪಂಚದ ಪ್ರಮುಖ ಗೇರು ಬೆಳೆಯುವ ರಾಷ್ಟ್ರಗಳಲ್ಲಿ ಬ್ರೆಜಿಲ್ ಕೂಡಾ ಒಂದು ಎಂಬುದು ಗಮನಾರ್ಹವಾಗಿದೆ.

೧೯೬೦ ರ ದಶಕದ ಪ್ರಾರಂಭದಲ್ಲಿ ಸುಮಾರು ಶೇ. ೭೫ ರಷ್ಟು ಕಚ್ಚಾಗೇರನ್ನು ಆಫ್ರಿಕಾ ದೇಶಗಳಿಂದ ಆಮದು ಮಾಡಿಕೊಳ್ಳುತ್ತಿದ್ದುದರಿಂದ ರಫ್ತು ವ್ಯಾಪಾರದ ಗಳಿಕೆಯ ಪ್ರಮಾಣ ಕುಸಿಯುತ್ತಾ ಬಂತು. ಆ ಕಾರಣಕ್ಕಾಗಿ ಕೇಂದ್ರ ಸರ್ಕಾರ ಭಾರತೀಯ ಗೇರು ನಿಗಮ (Cashew Corporation of India) ವನ್ನು ಪ್ರಾರಂಭಿಸಿತು. ಇದರಿಂದಾಗಿ ಆಮದು ಕಚ್ಚಾಗೇರಿನ ಪ್ರಮಾಣ ಹಾಗೂ ಬೆಲೆಯನ್ನು ನಿಯಂತ್ರಣ ಮಾಡುವಂತಾಯಿತು. ಆಫ್ರಿಕಾ ದೇಶಗಳ ಕಚ್ಚಾಗೇರು ರಫ್ತು ವ್ಯಾಪಾರದ ಮೇಲೆ ಇದು ಪ್ರತಿಕೂಲ ಪರಿಣಾಮ ಬೀರಿತು. ಇದರಿಂದಾಗಿ ಆಫ್ರಿಕಾದ ದೇಶಗಳು ಕಚ್ಚಾಗೇರು ಬೀಜವನ್ನು ರಫ್ತು ಮಾಡುವುದನ್ನು ಕಡಿಮೆ ಮಾಡಿ ಸ್ಥಳೀಯವಾಗಿ ಗೋಡಂಬಿ ಸಂಸ್ಕರಿಸುವ ಘಟಕಗಳನ್ನು ಪ್ರಾರಂಭಿಸುವಂತಾಯಿತು. ಇದೇ ಸಂದರ್ಭದಲ್ಲಿ ಭಾರತೀಯ ಗೇರು ನಿಗಮದ ಆಡಳಿತ ಶಾಹಿ ಧೋರಣೆಯಿಂದಾಗಿ ನಿಗಮದ ಮೂಲಕ ಆಮದು ಮಾಡಿಕೊಳ್ಳುವ ಕಚ್ಚಾಗೇರಿನ ಪ್ರಮಾಣ ೧೯೭೦ ರಲ್ಲಿ ೧,೬೩,೦೦೦ ಮಿ. ಟನ್ ಇದ್ದದ್ದು ೧೫೦೦ ಮಿ. ಟನ್‌ಗೆ ಕುಸಿಯಿತು. ಹಾಗಾಗಿ ೧೯೮೧ ರಲ್ಲಿ ಸರ್ಕಾರ ತನ್ನ ನೀತಿಯನ್ನು ಸಡಿಲಿಸಬೇಕಾಗಿ ಬಂತು. ಪರಿಣಾಮವಾಗಿ ೧೯೮೯ ರಲ್ಲಿ ಕಚ್ಚಾಗೇರಿನ ಆಮದು ೫೩,೦೦೦ ಮಿ. ಟನ್‌ಗೆ ಏರಿತು.

೧೯೮೩ ರಲ್ಲಿ ಸೋವಿಯತ್ ರಷ್ಯಾಕ್ಕೆ ಭಾರತದಿಂದ ನಿರ್ಯಾತವಾಗುತ್ತಿದ್ದ ಗೋಡಂಬಿಯ ಪ್ರಮಾಣ ಕಡಿಮೆಯಾದ ಕಾರಣ ಭಾರತದ ರಫ್ತು ವ್ಯಾಪಾರಕ್ಕೆ ಕೊಂಚ ಹಿನ್ನಡೆಯಾಯಿತು. ಆದರೆ ೧೯೯೦ ರಲ್ಲಿ ಮತ್ತೆ ಅಮೇರಿಕಾ ನಮ್ಮ ದೇಶದ ಪ್ರಮುಖ ಗ್ರಾಹಕ ರಾಷ್ಟ್ರವಾಗಿ ಪುನರ್ ಪ್ರವೇಶ ಮಾಡಿದ್ದು ಭಾರತದ ಪಾಲಿಗೆ ವರದಾನವಾಗಿ ಪರಿಣಮಿಸಿತು. ಇದರೊಂದಿಗೆ ಭಾರತ ಯುರೋಪಿಯನ್ ಮಾರುಕಟ್ಟೆಯನ್ನು ವಿಸ್ತರಿಸಿಕೊಂಡಿತು. ೧೯೯೦ ರ ದಶಕದಲ್ಲಿ ವಿಯೆಟ್ನಾಂ ಜಗತ್ತಿನ ಪ್ರಮುಖ ಗೇರು ಉತ್ಪಾದಕ ಹಾಗೂ ನಿರ್ಯಾತಗಾರ ರಾಷ್ಟ್ರವಾಗಿ ಮೂಡಿ ಬಂದುದರ ಪರಿಣಾಮ ಭಾರತದ ಸಾರ್ವಭೌಮತ್ವಕ್ಕೆ ಧಕ್ಕೆ ಬಂದಂತಾಯಿತು.


ಇತ್ತೀಚೆಗಿನ ವರ್ಷಗಳವರೆಗೂ ಭಾರತದಲ್ಲಿ ಗೋಡಂಬಿಯನ್ನು ಒಂದು ಶ್ರೀಮಂತ ರಫ್ತು ವಸ್ತುವನ್ನಾಗಿ ಪರಿಗಣಿಸಲ್ಪಟ್ಟಿದ್ದು, ಉತ್ಪಾದನೆಯ ಸರಿ ಸುಮಾರು ಅರ್ಧದಷ್ಟನ್ನು ರಫ್ತು ಮಾಡಲಾಗುತ್ತಿತ್ತು. ಇದು ಈಗ ೩೪ ಶೇಕಡಾಕ್ಕೆ ಕುಸಿದಿದೆ. ಕಳೆದೊಂದು ದಶಕದಲ್ಲಿ ಭಾರತದ ಗೋಡಂಬಿ ಉತ್ಪಾದನೆ ಹಾಗೂ ನಿರ್ಯಾತವನ್ನು ಕೋಷ್ಟಕ೨.೧೨ ತೋರಿಸುತ್ತದೆ.

ಕೋಷ್ಟಕ :೨.೧೨ ಭಾರತದ ಗೋಡಂಬಿ ಉತ್ಪಾದನೆ ಹಾಗೂ ನಿರ್ಯಾತ

ವರ್ಷ	ಉತ್ಪಾದನೆ (ಮಿಲಿಯನ್ ಟನ್)	ನಿರ್ಯಾತ (ಮಿಲಿಯನ್ ಟನ್)	ಉತ್ಪಾದನೆಯಲ್ಲಿ ನಿರ್ಯಾತದ ಪಾಲು
೨೦೦೧-೦೨	೨೦೪೬೫೬.೩	೯೮೨೦೩	೪೮%
೨೦೦೨-೦೩	೨೨೧೬೩೬.೮	೧೦೪೧೩೭	೪೭%
೨೦೦೩-೦೪	೨೪೬೮೪೯.೮	೧೦೦೮೨೮	೪೧%
೨೦೦೪-೦೫	೨೮೦೭೨೧.೦	೧೨೬೬೬೭	೪೫%
೨೦೦೫-೦೬	೨೮೪೬೦೦.೦	೧೧೪೧೪೩	೪೦%
೨೦೦೬-೦೭	೩೦೧೫೧೧.೦	೧೧೮೫೪೦	೩೯%
೨೦೦೭-೦೮	೩೧೭೭೪೨.೫	೧೧೪೩೪೫	೩೬%
೨೦೦೮-೦೯	೩೨೫೨೧೨.೫	೧೦೯೫೨೨	೩೪%
೨೦೦೯-೧೦	೩೪೧೪೬೩.೫	೧೧೭೯೯೧	೩೪%

Source: Director General of Commercial Inteligence and Statistcis, Kolkata & custom figures.

ಗೋಡಂಬಿಯ ನಿರ್ಯಾತದ ಪ್ರಮಾಣವು ಸರಾಸರಿ ವಾರ್ಷಿಕ ೧.೨% (೨೦೦೧-೦೨ ಅಂದ ೨೦೦೯-೧೦) ರಷ್ಟು ಏರಿಕೆಯಾಗಿದ್ದರೂ ೨೦೦೫-೦೬ ಅಂದ ೨೦೦೯-೧೦ ರ ಅವಧಿಯಲ್ಲಿ ೧.೮೫% ರಷ್ಟು ಕುಸಿದಿರುವುದನ್ನು ಗಮನಿಸಬಹುದು. ಇದಕ್ಕೆ ಪ್ರಮುಖವಾಗಿ ಬ್ರೆಜಿಲ್ ಹಾಗೂ ವಿಯೆಟ್ನಾಂ ದೇಶಗಳ ತೀವ್ರ ಪೈಪೋಟಿಯೊಂದಿಗೆ ದೇಶೀ ಮಾರುಕಟ್ಟೆಯಲ್ಲಿ ಹೆಚ್ಚುತ್ತಿರುವ ಬೇಡಿಕೆ ಹಾಗೂ ಅದರ ಪರಿಣಾಮವಾಗಿ ದೇಶೀ ಮಾರುಕಟ್ಟೆಯ ದರ ಸರಿ ಸುಮಾರು ವಿದೇಶಿ ಮಾರು ಕಟ್ಟೆಯ ದರಕ್ಕೆ ಸಮನಾಗಿರುವುದೇ ಕಾರಣವಾಗಿದೆ. ಇಷ್ಟಿದ್ದರೂ ಕೂಡಾ ಭಾರತ ಒಂದು ಪ್ರಮುಖ ಗೋಡಂಬಿ ರಾಷ್ಟ್ರವಾಗಿ ಮುಂಚೂಣಿಯಲ್ಲಿದ್ದು ಸಾಕಷ್ಟು ವಿದೇಶಿ ವಿನಿಮಯವನ್ನು ಗಳಿಸುತ್ತಿದೆ. ಇಂದು ಭಾರತದ ಗೇರು ಕಾರ್ಖಾನೆಗಳು ಬಹುತೇಕ ರಫ್ತು ಕೇಂದ್ರಿತ ಉದ್ಯಮವಾಗಿ ಬೆಳೆದು ಬಂದಿದೆ. ೨೦೧೦-೧೧ ರ ವರದಿಯಂತೆ ಸುಮಾರು ೯೧೫೫೯ ಮಿಲಿಯನ್ ಟನ್‌ಗಳಷ್ಟು ಗೋಡಂಬಿ ರಫ್ತಾಗಿದ್ದು ರೂ. ೨೫೯೮.೨೦ ಕೋಟಿಗಳಷ್ಟು ಆದಾಯ ಗಳಿಸಿಕೊಂಡಿದೆ. ಸುಮಾರು ೩೧.೮೫ ಕೋಟಿ ರೂ. ಗಳ ಮೌಲ್ಯದ ೧೧,೩೬೪ ಮಿಲಿಯ ಟನ್‌ಗಳಷ್ಟು ಗೇರು ಸಿಪ್ಪೆ ದ್ರವವನ್ನು ರಫ್ತು ಮಾಡಿದೆ.[೪೫] ೨೦೧೧-೧೨ರಲ್ಲಿ ರೂ. ೪೩೯೦ ಕೋಟಿ ಮೌಲ್ಯದ ಗೋಡಂಬಿ ರಫ್ತು ಮಾಡುವುದರೊಂದಿಗೆ ದಾಖಲೆಯ ಪ್ರಮಾಣವನ್ನು ತಲುಪಿದೆ.



Source: DCCD, Cochin

ಚಿತ್ರ ೨.೭ ಭಾರತದ ಗೋಡಂಬಿ ಉತ್ಪಾದನೆ ಹಾಗೂ ನಿರ್ಯಾತ



೨೧ ನೇ ಶತಮಾನದ ಆದಿಯಲ್ಲಿ ಗೋಡಂಬಿಯ ದೇಶೀಯ ಬಳಕೆಯಷ್ಟೇ ಸರಿಸುಮಾರು ನಿರ್ಯಾತವಾಗುತ್ತಿತ್ತು. ಆ ಬಳಿಕ ಅವ್ಯಾಹತವಾಗಿ ದೇಶೀಯ ಬಳಕೆ ಅಧಿಕವಾಗುತ್ತಾ ಹೋದರೆ ನಿರ್ಯಾತ ದರ ಕಡಿಮೆಯಾಗುತ್ತಾ ಹೋಗಿದೆ. ದೇಶೀಯ ಬಳಕೆ ಅಧಿಕವಾಗುತ್ತಿರುವುದು ಜನರ ಹೆಚ್ಚುತ್ತಿರುವ ಜೀವನ ಮಟ್ಟ ಹಾಗೂ ಆದಾಯ ಮತ್ತು ಗೋಡಂಬಿಯ ಪೌಷ್ಟಿಕತೆಯ ಕುರಿತಾದ ಅರಿವು ಕಾರಣವಾಗಿವೆ. ಆದರೆ ನಿರ್ಯಾತ ದರ ಕಡಿಮೆಯಾದರೆ ವಿದೇಶಿ ವಿನಿಮಯ ಗಳಿಕೆ ಕಡಿಮೆಯಾಗುತ್ತದೆ. ಆದುದರಿಂದ ದೇಶೀಯ ಬಳಕೆಯೊಡನೆ ಗೋಡಂಬಿಯ ನಿರ್ಯಾತವು ಹೆಚ್ಚುವಂತಹ ಪ್ರಯತ್ನ ಮಾಡಬೇಕಾಗಿದೆ.

ಭಾರತ ಪ್ರಪಂಚದಲ್ಲೇ ಗೋಡಂಬಿ ನಿರ್ಯಾತದಲ್ಲಿ ಮೊದಲ ರಾಷ್ಟ್ರವಾಗಿತ್ತು. ಭಾರತದ ಗೋಡಂಬಿಗೆ ಜಾಗತಿಕ ಮಟ್ಟದಲ್ಲಿ ಉತ್ತಮ ಬೇಡಿಕೆ ಇದೆ. ಕಾರಣ ಭಾರತದ ಗೋಡಂಬಿಯ ಗಾತ್ರ, ಸ್ವಾದಿಷ್ಟತೆ ಹಾಗೂ ಗುಣಮಟ್ಟ ಜಗತ್ತಿನಲ್ಲಿ ಪ್ರಸಿದ್ಧಿಯನ್ನು ಪಡೆದಿದೆ. ಭಾರತ ಸುಮಾರು ೬೦ ರಾಷ್ಟ್ರಗಳಿಗೆ ಗೋಡಂಬಿಯನ್ನು ರಫ್ತು ಮಾಡುತ್ತಿದೆ, ಪ್ರಮುಖವಾಗಿ ಅಮೇರಿಕಾ, ನೆದರ್‌ಲ್ಯಾಂಡ್ಸ್, ಯು.ಎ.ಇ, ಇಂಗ್ಲೆಂಡ್, ಸೌದಿ ಅರೇಬಿಯಾ ಜರ್ಮನ್, ಜಪಾನ್, ಆಸ್ಟ್ರೇಲಿಯಾ ಇತ್ಯಾದಿ ಭಾರತದ ಪ್ರಮುಖ ಗ್ರಾಹಕ ರಾಷ್ಟ್ರಗಳು ಎನಿಸಿಕೊಂಡಿವೆ. ಭಾರತದ ಗೋಡಂಬಿ ನಿರ್ಯಾತದ ದಿಕ್ಕನ್ನು ಕೋಷ್ಟಕ ೨.೧೩ ತೋರಿಸುತ್ತದೆ.

ಕೋಷ್ಟಕ: ೨.೧೩. ಭಾರತದ ನಿರ್ಯಾತದ ದಿಕ್ಕು (ಮಿಲಿಯ ಟನ್ ಗಳಲ್ಲಿ)


ವರ್ಷ	ಅಮೇರಿಕಾ	ಯು.ಎ.ಇ	ನೆದರ್ ಲ್ಯಾಂಡ್	ಜಪಾನ್	ಇಂಗ್ಲೆಂಡ್	ಸೌದಿ ಅರೇಬಿಯಾ	ಫ್ರಾನ್ಸ್	ಇತರೆ
೨೦೦೦-೦೧	೪೦೩೯೨	೩೬೮೮	೧೬೦೬೯	೫೩೭೦	೬೪೧೬	೧೬೩೦	೨೩೪೩	೧೩೨೪೭
೨೦೦೧-೦೨	೪೮೧೬೧	೩೨೭೩	೧೩೯೧೫	೪೧೬೬	೬೮೪೯	೧೬೯೦	೨೮೧೦	೧೭೪೨೦
೨೦೦೨-೦೩	೫೩೭೨೫	೫೭೬೫.೧೪	೧೩೩೧೫	೪೧೨೩	೫೧೯೨	೨೫೦೧.೩೩	೨೨೩೬	೧೭೨೭೯.೫೩
೨೦೦೩-೦೪	೪೮೫೦೪	೬೨೩೯	೧೨೨೩೭	೫೫೨೨	೫೩೯೨	೨೦೧೧	೨೪೪೪	೧೮೪೭೯
೨೦೦೪-೦೫	೬೧೫೪೬	೬೬೯೦	೧೫೬೯೩	೫೦೪೭	೭೧೦೮	೨೯೯೮	೩೩೨೯	೨೪೨೫೬
೨೦೦೫-೦೬	೪೩೧೪೯	೮೨೭೪	೧೮೭೩೬	೪೬೮೫	೬೨೩೮	೨೮೨೭	೩೪೭೦	೨೬೭೬೪
೨೦೦೬-೦೭	೪೬೨೪೫	೯೫೨೩	೧೯೩೬೦	೪೨೭೯	೪೭೧೫	೩೩೫೭	೩೫೫೮	೨೭೫೦೩
೨೦೦೭-೦೮	೪೨೬೯೩	೧೨೬೯೧	೧೩೬೨೭	೫೧೧೪	೩೭೫೭	೩೪೨೨	೪೦೩೩	೨೯೦೦೮
೨೦೦೮-೦೯	೩೬೫೬೫	೧೪೧೦೦	೧೩೬೦೮	೪೯೦೮	೩೪೯೫	೩೨೭೮	೩೮೪೩	೨೯೭೨೫
೨೦೦೯-೧೦	೩೦೮೦೪	೧೮೧೬೧	೧೦೩೧೪	೫೬೩೩	೪೪೭೭	೩೮೨೭	೩೮೧೪	೩೧೦೯೦

Source: Cashew Export Promotion Council (CEPC) & www.cashewinfo.com

ಭಾರತದ ನಿರ್ಯಾತದಲ್ಲಿ ಸಿಂಹಪಾಲು ಅಮೇರಿಕಾಗೆ ಹೋಗುತ್ತಿದೆ. ಆದರೆ ಅಮೇರಿಕಾಕ್ಕೆ ನಿರ್ಯಾತವಾಗುವ ಗೇರು ಬೀಜ ಪ್ರಮಾಣದಲ್ಲಿ ಏರಿಳಿತವಿದೆ. ೨೦೦೭-೦೮ ರಿಂದ ಅಮೇರಿಕಾಕ್ಕೆ ಆಗುವ ನಿರ್ಯಾತದಲ್ಲಿ ಇಳಿಕೆಯನ್ನು ದಾಖಲಿಸಲಾಗಿದೆ. ಕಳೆದ ಹತ್ತು ವರ್ಷಗಳಲ್ಲಿ ಯು.ಎ.ಇ. ಮತ್ತು ಸೌದಿ ಅರೇಬಿಯಾ ದೇಶಗಳಿಗೆ ಆಗುತ್ತಿರುವ ನಿರ್ಯಾತದಲ್ಲಿ ಏರಿಕೆ ದಾಖಲಾಗಿದೆ. ನೆದರ್‌ಲ್ಯಾಂಡ್ಸ್ ಮತ್ತು ಇಂಗ್ಲೆಂಡಿಗೆ ಆಗುತ್ತಿರುವ ನಿರ್ಯಾತದಲ್ಲಿ ಇಳಿಕೆ ಕಂಡು ಬರುತ್ತಿದೆ. ಜಪಾನಿಗೆ

ಆಗುತ್ತಿರುವ ನಿರ್ಯಾತದಲ್ಲಿ ಸಾಧಾರಣ ಸ್ಥಿರತೆಯನ್ನು ಕಾಣಬಹುದು. ಫ್ರಾನ್ಸಿಗೆ ಆಗುತ್ತಿರುವ ನಿರ್ಯಾತದಲ್ಲಿ ಏರಿಳಿತಗಳು ದಾಖಲಾಗಿವೆ. ಒಟ್ಟಿನಲ್ಲಿ ಭಾರತದ ಗೋಡಂಬಿ ನಿರ್ಯಾತದಲ್ಲಿ ಸ್ಥಿರತೆಗಿಂತ ಅಸ್ಥಿರತೆ ಹೆಚ್ಚು. ಉತ್ಪಾದನೆಯಲ್ಲಾಗುವ ಏರಿಳಿತ ಇದಕ್ಕೆ ಕಾರಣವಾಗಿರುತ್ತದೆ.

ಅಮೇರಿಕಾ ದೇಶವು ಭಾರತದ ಗೋಡಂಬಿಯ ಅತಿ ದೊಡ್ಡ ಗ್ರಾಹಕ ಎಂಬುದು ಮೇಲಿನ ಕೋಷ್ಠಕದಿಂದ ಸಾಬೀತಾಗುತ್ತದೆ. ೨೦೧೧-೧೨ ರಲ್ಲಿ ಭಾರತದಿಂದ ಗೋಡಂಬಿಯನ್ನು ಆಮದು ಮಾಡಿಕೊಂಡ ರಾಷ್ಟ್ರಗಳ ದಿಕ್ಕನ್ನು ಚಿತ್ರ ೨.೮ ತೋರಿಸುತ್ತದೆ.



ಚಿತ್ರ: ೨.೮ ಭಾರತದ ಗೋಡಂಬಿ ನಿರ್ಯಾತ (೨೦೧೧-೧೨)

೨೦೧೧-೧೨ ರಲ್ಲಿ ಭಾರತದಿಂದ ನಿರ್ಯಾತವಾದ ಗೋಡಂಬಿಯ ಸುಮಾರು ೩೬.೧೩ ಶೇಕಡಾದಷ್ಟು ಅಮೇರಿಕಾ ಪಡೆದುಕೊಂಡಿದೆ. ಇದು ಅಮೇರಿಕಾದ ಮೇಲಿನ ಅತಿ ಅವಲಂಬನೆಯ ದ್ಯೋತಕವಾಗಿದೆ. ಈ ರೀತಿಯ ಅವಲಂಬನೆ ರಫ್ತು ವ್ಯಾಪಾರದ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆ ಅಲ್ಲ. ಕಾರಣ ಭಾರತದ ಮಾರಾಟ ಬೆಲೆಯ ಮೇಲೆ ಇದು ಪ್ರತಿಕೂಲ ಪರಿಣಾಮ ಬೀರುತ್ತದೆ. ಮಾತ್ರವಲ್ಲ ಮುಂದೊಮ್ಮೆ ಅಮೇರಿಕಾದ ಮಾರುಕಟ್ಟೆಯ ಮೇಲೆ ಬೇರೆ ರಾಷ್ಟ್ರಗಳು ಲಗ್ಗೆಯಿಟ್ಟಲ್ಲಿ ಭಾರತ ತನ್ನ ನೆಲೆ ಕಳೆದುಕೊಳ್ಳಬಹುದಾದ ಸಂಭವವೂ ಇದೆ. ಭಾರತದಲ್ಲಿ ಗೋಡಂಬಿಯ ಬೆಲೆ ಅಧಿಕವಾಗಿದ್ದು ದೇಶೀ ಅನುಭೋಗ ತೀರಾ ನಿರಾಶದಾಯವಾಗಿರುವುದರಿಂದ ಉತ್ಪಾದನೆ ಮಾಡಲ್ಪಟ್ಟ ಹೆಚ್ಚಿನ ಗೋಡಂಬಿ ರಫ್ತಾಗುತ್ತಿದ್ದು, ಸ್ಥಳೀಯವಾಗಿ ಗೋಡಂಬಿ ಒಂದು ಶ್ರೀಮಂತರ ಆಹಾರ ವಸ್ತುವಾಗಿಯೇ ಉಳಿದಿದೆ.

ಗೇರು ಉದ್ಯಮದ ಒಂದು ಪ್ರಮುಖ ಉಪ ಉತ್ಪನ್ನ ಗೇರು ಬೀಜದ ದ್ರವ. ಪ್ರತಿಯೊಂದು ಗೇರು ಬೀಜದ ಸಿಪ್ಪೆಯ ತೂಕ ಮೂವತ್ತೈದು ಶೇಕಡಾದಷ್ಟು ಗೇರು ಬೀಜದ ದ್ರವ ಇರುತ್ತದೆ. ಇದರ ಬಳಕೆಯ ಆಧುನಿಕ ರೂಪ ತಿಳಿಯದೇ ಇದ್ದ ದಿನಗಳಲ್ಲೂ ಜನ ಸಾಮಾನ್ಯರು ಇದನ್ನು ಮರದ ಪೀಠೋಪಕರಣಗಳಿಗೆ, ದೋಣಿಗಳಿಗೆ, ಕಿಟಕಿ, ಬಾಗಿಲುಗಳಿಗೆ ಕೀಟ ಬಾಧೆಯಿಂದ ರಕ್ಷಿಸಲು ಉಪಯೋಗಿಸುತ್ತಿದ್ದರು. ಇತ್ತೀಚೆಗೆ ಇದರ ಬಳಕೆ ಅನೇಕ ರೂಪಗಳನ್ನು ಪಡೆದಿದ್ದು ಇದೊಂದು ಪ್ರಮುಖ ಕೈಗಾರಿಕಾ ಕಚ್ಚಾ ವಸ್ತುವಾಗಿ ಬಳಸಲ್ಪಡುತ್ತದೆ. ಗೇರು ಬೀಜದ ದ್ರವವನ್ನು ಪೈಂಟ್ ಕೈಗಾರಿಕೆಗಳಲ್ಲಿ ಪ್ಲಾಸ್ಟಿಕ್ ಕೈಗಾರಿಕೆಗಳಲ್ಲಿ, ಮರದ ಉದ್ಯಮಗಳಲ್ಲಿ, ವಾಹನಗಳಲ್ಲಿ ಬ್ರೇಕ್ ಲೈನರ್ ಆಗಿ ಬಳಸುತ್ತಾರೆ. ವೈದ್ಯಕೀಯವಾಗಿ ಕುಷ್ಠ ರೋಗ,



ಹುಳ ಕಜ್ಜಿ ರೋಗಗಳಿಗೂ ಇದನ್ನು ಬಳಸುತ್ತಾರೆ.[೪೭] ಸುಮಾರು ೨೫೦ಕ್ಕೂ ಹೆಚ್ಚು ಪೇಟೆಂಟ್‌ಗಳನ್ನು ಈಗಾಗಲೇ ಗೇರು ಬೀಜ ದ್ರವದ ಕೈಗಾರಿಕಾ ಬಳಕೆ ಬಗ್ಗೆ ಪಡೆಯಲಾಗಿದೆ.

ಗೇರು ಉದ್ಯಮದ ರಫ್ತು ವ್ಯಾಪಾರಕ್ಕೆ ಸಂಬಂಧಿಸಿದಂತೆ ಗೇರು ಬೀಜ ಎಣ್ಣೆಯ ರಫ್ತು ಕೂಡಾ ಗಣನೀಯ ಪಾತ್ರವನ್ನು ವಹಿಸುತ್ತದೆ. ಕೋಷ್ಟಕ ೨.೧೪ ರಲ್ಲಿ ಗೋಡಂಬಿಯ ರಫ್ತು ಮೌಲ್ಯ ಹಾಗೂ ಗೇರು ಬೀಜ ಎಣ್ಣೆಯ ರಫ್ತು ಮೌಲ್ಯವನ್ನು ನಮೂದಿಸಲಾಗಿದೆ.

ಕೋಷ್ಟಕ ೨. ೧೪ ಗೋಡಂಬಿ ಮತ್ತು ಗೇರು ಬೀಜ ದ್ರವ ನಿರ್ಯಾತದ ಪ್ರಮಾಣ ಮತ್ತು ಮೌಲ್ಯ

ವರ್ಷ	ಗೋಡಂಬಿ		ಗೇರು ಬೀಜದ ದ್ರವ		ಒಟ್ಟು ಮೌಲ್ಯ
	ಮಿಲಿಯ ಟನ್	ರೂ. ಕೋಟಿಗಳಲ್ಲಿ	ಮಿಲಿಯ ಟನ್	ರೂ. ಕೋಟಿಗಳಲ್ಲಿ	ರೂ. ಕೋಟಿಗಳಲ್ಲಿ
೨೦೦೦-೦೧	೮೯೧೫೫	೨೦೪೯.೬	೨೨೪೬	೩.೮೯	೨೦೫೩.೪೯
೨೦೦೧-೦೨	೯೮೨೦೩	೧೭೮೮.೭	೪೧೭೮	೫.೯೦	೧೭೯೪.೬೦
೨೦೦೨-೦೩	೧೦೪೧೩೭	೧೯೩೩.೦೨	೭೨೧೫	೯.೨೬	೧೯೪೨.೨೮
೨೦೦೩-೦೪	೧೦೦೮೨೮	೧೮೦೪.೪೨	೬೯೨೬	೭.೦೩	೧೮೧೧.೪೫
೨೦೦೪-೦೫	೧೨೪೬೪೭	೨೭೦೯.೨೪	೭೪೭೪	೭.೯೧	೨೭೧೭.೧೫
೨೦೦೫-೦೬	೧೧೪೧೪೩	೨೫೧೪.೮೬	೬೪೦೫	೭.೦೯	೨೫೨೧.೯೫
೨೦೦೬-೦೭	೧೧೮೫೪೦	೨೪೫೫.೧೫	೬೧೩೯	೧೦.೨೯	೨೪೬೫.೪೪
೨೦೦೭-೦೮	೧೧೪೩೪೦	೨೨೮೮.೯೦	೭೮೧೩	೧೧.೯೭	೨೩೦೦.೮೭
೨೦೦೮-೦೯	೧೦೯೫೨೩	೨೯೮೮.೪೦	೯೦೯೯	೨೬.೦೬	೩೦೧೪.೪೬
೨೦೦೯-೧೦	೧೧೭೯೯೧	೨೮೦೧.೬೦	೧೧೨೨೭	೨೭.೬೨	೨೮೨೯.೨೨
೨೦೧೦-೧೧	೧೦೫೭೫೫	೨೮೧೯.೩೯	೧೨೦೫೧	೩೩.೭೭	೨೮೫೩.೧೬
೨೦೧೧-೧೨	೧೩೧೭೬೦	೪೩೯೦.೬೮	೧೩೫೭೫	೫೯.೪೬	೪೪೫೦.೧೪

Source: Directorate General of Commercial Intelligence and Statistics (DGCI & S.) Kolkata 2011.

ಗೋಡಂಬಿ ನಿರ್ಯಾತ ಪ್ರಮಾಣ ೨೦೦೦-೨೦೦೧ ರಲ್ಲಿ ೮೯೧೫೫ ದಶಲಕ್ಷ ಟನ್ನುಗಳಷ್ಟಿದ್ದು ೨೦೧೧-೧೨ರಲ್ಲಿ ೧೩೧೭೬೦ ದಶಲಕ್ಷ ಟನ್ನುಗಳಿಗೇರಿದೆ. ಇದು ಶೇ. ೪೭.೭೮ ಏರಿಕೆಯನ್ನು ದಾಖಲಿಸಿದೆ. ಹಣದ ರೂಪದಲ್ಲಿ ೨೦೦೦-೦೧ ರಲ್ಲಿ ಗೋಡಂಬಿ ನಿರ್ಯಾತದಿಂದ ರೂ. ೨೦೫೦ ಕೋಟಿ ಗಳಿಕೆಯಾದರೆ ೨೦೧೧-೧೨ ರಲ್ಲಿ ಈ ಗಳಿಕೆ ರೂ. ೪೩೯೧ ಕೋಟಿಗಳಿಗೇರಿತು. ಇದು ಶೇ. ೧೧೪.೨೦ ಏರಿಕೆಯಾಗಿರುತ್ತದೆ. ಗೋಡಂಬಿ ನಿರ್ಯಾತದ ಏರಿಕೆಯೊಡನೆ ಗೇರು ಬೀಜದ ದ್ರವದ ನಿರ್ಯಾತದಲ್ಲೂ ದಾಖಲೆಯಾಗಿರುವುದನ್ನು ಗಮನಿಸಬಹುದಾಗಿದೆ. ೨೦೦೦-೦೧ ರಲ್ಲಿ ಗೇರು ಬೀಜದ ದ್ರವದ ಪ್ರಮಾಣ ೨೨೪೬ ದಶಲಕ್ಷ ಟನ್ನುಗಳಷ್ಟಿದ್ದು ೨೦೧೧-೧೨ ರಲ್ಲಿ ಅದು ೧೩೫೭೫ ದಶಲಕ್ಷ ಟನ್ನುಗಳಿಗೇರಿತು. ಇದು ಶೇ. ೫೦೪ ಏರಿಕೆಯನ್ನು ದಾಖಲಿಸಿದೆ. ಹಣದ ರೂಪದಲ್ಲಿ ೨೦೦೦-೦೧ ರಲ್ಲಿ ರೂ. ೩.೮೯ ಕೋಟಿ ಗಳಿಕೆಯಾದರೆ ೨೦೧೧-೧೨ ರಲ್ಲಿ ಇದು ರೂ. ೫೯.೪೬ ಕೋಟಿಗಳಿಗೆ ಅಂದರೆ ಶೇ. ೧೪೨೮.೫ ರಷ್ಟು ಏರಿಕೆ ಕಂಡು ಬರುತ್ತದೆ. ಗೇರು ಉದ್ಯಮದ ರಫ್ತು ಮೌಲ್ಯದಲ್ಲಿ ೨೦೦೦-೦೧ ರಲ್ಲಿ ಕೇವಲ ೦.೧೯ ಶೇಕಡಾ ಇದ್ದ ಗೇರು ಬೀಜದ ಎಣ್ಣೆ ಮೌಲ್ಯ ೨೦೧೧-೧೨ ರಲ್ಲಿ ೧.೩೪ ಶೇಕಡಾದಷ್ಟು ಹೆಚ್ಚಳವನ್ನು ಕಂಡಿದೆ. ಇದು ಗೋಡಂಬಿ ಉದ್ಯಮಕ್ಕೆ ಒಂದು ಹೆಚ್ಚುವರಿ ಆದಾಯವಾಗಿದ್ದು ಉದ್ಯಮದ ಬೆಳವಣಿಗೆಯ ದೃಷ್ಟಿಯಿಂದ ಧನಾತ್ಮಕ ಅಂಶವಾಗಿದೆ. ಇದರೊಂದಿಗೆ ಗೇರು ಬೀಜದ ದ್ರವವನ್ನು ತೆಗೆದು ಉಳಿಯುವ ಗೇರು ಬೀಜದ ತೊಗಟೆಯನ್ನು ಅಚ್ಚುಗಳಾಗಿ ಪರಿವರ್ತಿಸಿ, ಕೈಗಾರಿಕೆಗಳಲ್ಲಿ, ಹೋಟೆಲು ಉದ್ಯಮಗಳಲ್ಲಿ ಉರುವಲಾಗಿ ಬಳಸಲಾಗುತ್ತಿದೆ.

೨.೭. ಗೇರುಬೀಜ ಆಯಾತ

೨೦ ನೇ ಶತಮಾನದ ಪ್ರಾರಂಭದಲ್ಲಿ ಬಹುತೇಕ ಎಲ್ಲಾ ಗೇರು ಬೆಳೆಯುವ ರಾಷ್ಟ್ರಗಳು ವಸಾಹತು ರಾಷ್ಟ್ರಗಳಾಗಿದ್ದು ಗೇರು ಬೀಜದ ವ್ಯಾಪಾರ ಆ ದೇಶಗಳ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳನ್ನು ಅವಲಂಬಿಸಿಕೊಂಡಿತ್ತು. ದಕ್ಷಿಣ ಆಫ್ರಿಕಾದ ಮೊಜಾಂಬಿಕ್, ತಾಂಜೇನಿಯಾ ಹಾಗೂ ಕೇನ್ಯಾ ದೇಶಗಳು ಪ್ರಮುಖ ಗೇರು ಉತ್ಪಾದಕ ದೇಶಗಳೆನಿಸಿಕೊಂಡಿದ್ದು, ತೀವ್ರ ರಾಜಕೀಯ ಸಮಸ್ಯೆಗಳಿಂದ ಕೂಡಿದ್ದು ಅವುಗಳ ಆರ್ಥಿಕ ಸ್ಥಿತಿಯು ಗೊಂದಲಮಯವಾಗಿತ್ತು. ಆಹಾರ ಉತ್ಪಾದನೆ ಹಾಗೂ ಪೂರೈಕೆಗೆ ಮೊದಲ ಆದ್ಯತೆ ನೀಡಬೇಕಾದುದರಿಂದ ಈ ದೇಶಗಳು ತಮ್ಮ ಗೇರು ಬೀಜವನ್ನು ರಫ್ತು ಮಾಡುವುದರಲ್ಲೇ ಹೆಚ್ಚಿನ ಆಸಕ್ತಿ ವಹಿಸಿದ್ದವು. ಹಾಗಾಗಿ ಗೇರು ಸಂಸ್ಕರಣೆಗೆ ಪ್ರಾಮುಖ್ಯತೆ ಕೊಡಲಿಲ್ಲ ಮತ್ತು ಈಗಾಗಲೇ ಇರುವ ಗೇರು ಸಂಸ್ಕರಣಾ ಘಟಕಗಳನ್ನು ಮುಂದುವರಿಸಲೂ ಸಹಾ ಅವುಗಳಿಗೆ ಸಾಧ್ಯವಾಗಲಿಲ್ಲ. ಆದರೆ ಇದಕ್ಕೆ ಭಿನ್ನವಾಗಿ ಭಾರತ ಒಂದು ವಸಾಹತು ದೇಶವಾಗಿದ್ದುಕೊಂಡು ಗೇರು ಸಂಸ್ಕರಣೆಯಲ್ಲಿ ತೊಡಗಿಸಿಕೊಂಡಿತು. ಭಾರತದ ಉದ್ಯಮಿಗಳಿಗೆ ಕಚ್ಚಾಗೇರು ಪೂರೈಕೆಯ ಕೊರತೆ ಇದ್ದುದರಿಂದ ಆಮದು ಗೇರು ಬೀಜವನ್ನು ಅವಲಂಬಿಸಬೇಕಾಯಿತು. ಹಾಗಾಗಿ ಪ್ರಪಂಚದ ಶೇ. ೯೫ ರಷ್ಟು ಕಚ್ಚಾಗೇರು ರಫ್ತು ವ್ಯಾಪಾರ ಭಾರತಕ್ಕೆ ಬರುತ್ತಿತ್ತು. ಆದ್ದರಿಂದ ಜಾಗತಿಕ ಗೇರು ಬೀಜದ ವ್ಯವಹಾರ ಭಾರತವನ್ನೇ ನೆಚ್ಚಿಕೊಂಡಿತ್ತು ಎಂದರೆ ತಪ್ಪಾಗಲಾರದು. ಇದೇ ಸ್ಥಿತಿ ೨೦ ನೇ ಶತಮಾನದ ಕೊನೆಯವರೆಗೆ ಅಂದರೆ ವಿಯೆಟ್ನಾಂ ಗೇರು ಬೀಜದ ಆಮದು ಪ್ರಾರಂಭಿಸುವವರೆಗೆ ಮುಂದುವರಿಯಿತು. ೧೯೫೭ ರಲ್ಲಿ ಭಾರತ ೯೭೨೧೭ ಮಿ. ಟನ್ ಕಚ್ಚಾಗೇರನ್ನು ಆಮದು ಮಾಡಿಕೊಳ್ಳುತ್ತಿದ್ದು ೧೯೭೨ ರಲ್ಲಿ ಅದು ೧೯೨೮೭೯ ಮಿ. ಟನ್‌ಗಳಿಗೆ ಏರಿತು. ಆದರೆ ೧೯೮೨ ರಲ್ಲಿ ಇದು ೪೮೬೪ ಮಿ. ಟನ್ ಗಳಿಗೆ ಕುಸಿಯಿತು. ಕಾರಣ ಆಮದು ವ್ಯಾಪಾರದ ಪ್ರಮಾಣ ಹಾಗೂ ಬೆಲೆ ನಿಯಂತ್ರಿಸಲು ಭಾರತ ಸರ್ಕಾರ ಗೇರು ನಿಗಮವನ್ನು ೧೯೭೦ ರಲ್ಲಿ ಪ್ರಾರಂಭಿಸಿದ್ದು. ಗೇರು ನಿಗಮದ ಆಡಳಿತ ಶಾಹಿ ಧೋರಣೆಯಿಂದಾಗಿ ಗೇರು ಬೀಜ ರಫ್ತು ಮಾಡುತ್ತಿದ್ದ ರಾಷ್ಟ್ರಗಳು ಸ್ವತಃ ತಾವೇ ಗೇರು ಸಂಸ್ಕರಣಾ ಘಟಕಗಳನ್ನು ಪ್ರಾರಂಭಿಸಿದವು. ಇದರಿಂದಾಗಿ ಭಾರತದ ಗೇರು ಉದ್ಯಮ ತೀವ್ರ ಹಿನ್ನಡೆ ಅನುಭವಿಸುವಂತಾಯಿತು. ನಂತರದ ದಿನಗಳಲ್ಲಿ ಗೇರು ನಿಗಮ ತನ್ನ ನಿಯಮಗಳನ್ನು ಸಡಿಲಿಸಬೇಕಾಗಿ ಬಂತು. ಪರಿಣಾಮ ಕಚ್ಚಾಗೇರಿನ ಆಮದು ವ್ಯಾಪಾರ ಚೇತರಿಸಿಕೊಳ್ಳಲು ಪ್ರಾರಂಭವಾಯಿತು. ೨೦೧೧-೧೨ ರ ಅಂಕಿ ಅಂಶಗಳ ಪ್ರಕಾರ ಭಾರತ ಒಟ್ಟು ೫೩೩೮ ಕೋಟಿ ರೂಪಾಯಿ ಮೌಲ್ಯದ ೮೦೯೩೭೧ ಮಿ. ಟನ್ ಕಚ್ಚಾಗೇರನ್ನು ಆಮದು ಮಾಡಿಕೊಳ್ಳುತ್ತಿದೆ.

೧೯೬೫ ರಿಂದ ೧೯೭೨ ರವರೆಗೆ ಮೊಜಾಂಬಿಕ್ ಭಾರತಕ್ಕೆ ಪ್ರಮುಖ ಕಚ್ಚಾಗೇರು ಪೂರೈಸುವ ರಾಷ್ಟ್ರವಾಗಿತ್ತು. ನಂತರ ಗೇರು ಉತ್ಪಾದನೆ ಕುಸಿತ ಹಾಗೂ ಸ್ವತಃ ಮೊಜಾಂಬಿಕ್ ಗೇರು ಸಂಸ್ಕರಣೆ ಪ್ರಾರಂಭಿಸಿದ್ದರಿಂದ ಭಾರತಕ್ಕೆ ಬರುತ್ತಿದ್ದ ಕಚ್ಚಾಗೇರಿನ ಪೂರೈಕೆ ಸಂಪೂರ್ಣವಾಗಿ ಸ್ಥಗಿತಗೊಂಡಿತು. ಅನಂತರ ತಾಂಜೇನಿಯಾ ಭಾರತಕ್ಕೆ ಕಚ್ಚಾಗೇರನ್ನು ಪೂರೈಸಲು ಪ್ರಾರಂಭಿಸಿತು. ಅದರೊಂದಿಗೆ ಬೆನಿನ್, ಗುನಿಯಾ ಬಿಸು, ಐವರಿ ಕೋಸ್ಟ್ ಇತ್ಯಾದಿ ರಾಷ್ಟ್ರಗಳು ಸೇರಿಕೊಂಡವು. ಆದರೆ ಮತ್ತೆ ೧೯೮೫-೯೦ರಲ್ಲಿ ಮತ್ತೆ ಈ ರಾಷ್ಟ್ರಗಳಿಂದ ಬರುವ ಕಚ್ಚಾಗೇರು ಪೂರೈಕೆ ನಿಂತ ಕಾರಣ ಭಾರತ ಹೊಸ ಮೂಲಗಳನ್ನು ಕಂಡುಕೊಳ್ಳಬೇಕಾಗಿ ಬಂತು. ಫಿಲಿಫೈನ್ಸ್, ಇಂಡೋನೇಶಿಯಾ, ವಿಯೆಟ್ನಾಂ ಇತ್ಯಾದಿ ರಾಷ್ಟ್ರಗಳು ಹೊಸ ಮೂಲಗಳಾಗಿ ಮೂಡಿ ಬಂದವು. ಅದರಲ್ಲೂ ವಿಯಟ್ನಾಂ ಒಂದು ಪ್ರಮುಖ ಪೂರೈಕೆದಾರ ರಾಷ್ಟ್ರವಾಗಿ ಹೊರ ಹೊಮ್ಮಿತು. ಆದರೆ ಆಫ್ರಿಕಾದ ದೇಶಗಳ ಕಚ್ಚಾಗೇರು ರಫ್ತು ವ್ಯಾಪಾರ ೧೯೯೧ ರಿಂದ ಕುಸಿಯಲು ಪ್ರಾರಂಭವಾಯಿತು. ಅದಕ್ಕೆ ಕಾರಣ ಮೊಜಾಂಬಿಕ್

ದೇಶದ ಅಂತರ್ ಯುದ್ಧ, ಪರಿಷ್ಕರಿಸಿದ ಗೇರು ಮಾರಾಟಕ್ಕಿಂತ ಕಚ್ಚಾಗೇರು ಬೀಜವನ್ನೇ ರಫ್ತು ಮಾಡುವುದು ಉತ್ತಮ ಎಂಬ ತೀರ್ಮಾನ ಹಾಗೂ ಕೀನ್ಯಾ ಸಂಸ್ಕರಣಾ ಘಟಕಗಳ ಹಣಕಾಸಿನ ಮುಗ್ಗಟ್ಟು. ಒಟ್ಟಿನಲ್ಲಿ ಭಾರತಕ್ಕೆ ಆಮದಾಗುತ್ತಿರುವ ಕಚ್ಚಾಗೇರಿನ ಪ್ರಮಾಣ ಆಫ್ರಿಕಾ ದೇಶಗಳ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ವಿದ್ಯಾಮಾನಗಳನ್ನು ಅವಲಂಬಿಸಿದ್ದು ಮುಂದಿನ ದಶಕಗಳಲ್ಲೂ ಇದು ಭಾರತದ ಮೇಲೆ ಪರಿಣಾಮ ಬೀರುವ ಸಾಧ್ಯತೆಗಳಿವೆ. ದೇಶೀ ಸಂಸ್ಕರಣಾ ಘಟಕಗಳ ಉತ್ಪಾದನಾ ಸಾಮಾರ್ಥ್ಯ ಗೇರು ಬೀಜದ ಉತ್ಪಾದನೆಗಿಂದ ಎರಡು ಪಟ್ಟು ಹೆಚ್ಚಾಗಿರುವುದರಿಂದ ಭಾರತ ಅನಿವಾರ್ಯವಾಗಿ ಕಚ್ಚಾಗೇರನ್ನು ತಾಂಜೇನಿಯಾ, ಗುನಿಯಾ ಬಿಸು, ಕೋಟೆ ಡಿ ಐವರಿ, ಇಂಡೋನೇಷಿಯಾ ಮೊಜಾಂಬಿಕ್, ಕೇನ್ಯಾ, ನೈಜೀರಿಯಾ, ಸೆನಿಗಲ್, ಘಾನಾ ಮಡಗಾಸ್ಕರ್ ಇತ್ಯಾದಿ ದೇಶಗಳಿಂದ ಆಮದು ಮಾಡಿಕೊಳ್ಳುತ್ತಿದೆ. ಬೇರೆ ಬೇರೆ ದೇಶಗಳಿಂದ ಭಾರತಕ್ಕೆ ಆಮದಾಗುತ್ತಿರುವ ಕಚ್ಚಾಗೇರಿನ ಪ್ರಮಾಣವನ್ನು ಕೋಷ್ಟಕ ೨.೧೫ ರಲ್ಲಿ ತೋರಿಸಲಾಗಿದೆ.


ಕೋಷ್ಟಕ : ೨.೧೫ ಪ್ರಪಂಚದ ಬೇರೆ ಬೇರೆ ದೇಶಗಳಿಂದ ಭಾರತಕ್ಕೆ ಆಮದಾಗುತ್ತಿರುವ ಕಚ್ಚಾಗೇರಿನ ಪ್ರಮಾಣ ೨೦೦೧-೧೦ (ಟನ್‌ಗಳಲ್ಲಿ)

ದೇಶಗಳು	೨೦೦೧-೦೨	೨೦೦೨-೦೩	೨೦೦೩-೦೪	೨೦೦೪-೦೫	೨೦೦೫-೦೬	೨೦೦೬-೦೭	೨೦೦೭-೦೮	೨೦೦೮-೦೯	೨೦೦೯-೧೦
ಬೆನಿನ್	೩೨೨೩೯	೩೬೯೦೫	೪೫೧೬೬೮	೫೫೯೫೮	೫೯೬೯೫	೬೫೪೨೦	೫೭೯೮೨	೮೪೦೩೩	೧೧೪೯೫೫
ಘಾನಾ	೩೭೪೫	೬೦೩೯	೩೩೦೭೦	೩೯೩೭೬	೩೨೪೬೯	೩೯೮೦೪	೩೦೫೯೫	೪೧೫೬೮	೫೦೦೬೧
ಗುನಿಯಾ ಬಿಸು	೭೦೬೮೫	೬೫೭೫೦	೭೩೨೯	೮೭೪೮೩	೯೮೧೭೬	೭೬೧೨೬	೩೮೦೫೬	೮೯೬೯೧	೧೩೩೯೯೪
ಇಂಡೋನೇಶಿಯಾ	೩೯೦೯೨	೩೮೭೫೭	೪೪೮೧೯೮	೬೭೬೦೩	೬೭೨೨೫	೬೦೯೫೯	೪೦೬೫೯	೪೫೪೫೦	೪೭೨೮೧
ಕೋಟೆ ಡಿ ಐವರಿ	೬೮೮೭೫	೮೪೦೦೬	೮೩೪೪೮	೧೩೩೩೩೫	೧೪೬೦೪೫	೧೮೭೬೧೨	೨೦೫೪೦೫	೨೧೧೭೨೪	೨೩೮೧೭೯
ಕೇನ್ಯಾ	೮೧೯೩	೨೮೯೧	೮೩೮೯	೬೫೩೩	೫೫೮೧	೧೭೧೯	೬೦೭೧	೬೬೪೫	೧೨೨೪
ಮೊಜಾಂಬಿಕ್	೨೫೪೨೪	೩೩೫೫೩	೩೪೬೮೨	೬೦೨೦೧	೩೬೮೬೫	೨೬೩೬೭	೨೬೪೮೯	೧೦೪೮೧	೨೫೭೮೭
ನೈಜೀರಿಯಾ	೯೫೧೧	೧೭೬೧೯	೨೨೭೨೫	೨೨೫೩೪	೧೭೩೯೭	೨೧೧೫೪	೧೮೯೯೧	೧೩೨೦೬	೧೫೮೪೬
ಸೆನಿಗಲ್	೫೪೪೮	೭೭೫೯	೭೮೮೧	೯೩೬೦	೬೬೮೨	೧೦೦೮೪	೧೦೦೬೪	೪೫೬೨	೧೫೭೫೧
ತಾಂಜೇನಿಯಾ	೮೧೪೫೦	೮೨೧೪೦	೮೦೭೩೦	೭೨೯೭೧	೬೯೦೩೪	೬೬೬೦೦	೭೯೧೦೯	೬೧೧೨೭	೫೧೮೨೫
ಇತರೆ	೩೯೬೩	೧೧೧೨೮	೧೮೮೮೦	೨೩೫೨೧	೨೬೨೩೧	೩೦೧೯೯	೩೨೫೪೯	೩೭೩೬೪	೫೭೯೫೪
ಒಟ್ಟು	೩೪೮೬೨೫	೩೮೬೫೪೭	೪೫೨೩೯೯	೫೭೮೮೮೪	೫೬೫೪೦೦	೩೮೬೦೪೪	೬೦೫೯೭೦	೬೦೫೮೫೦	೭೫೨೮೫೪

Source: CEPC , 'Trends in World Raw Cahsew Nut (RCN) Area and Production" Cashew Hand book 2011,Global Perspective.

೨೦೦೦ ನೇ ಇಸವಿಯ ಮೊದಲ ದಶಕದಲ್ಲಿ ಭಾರತಕ್ಕೆ ಆಮದಾದ ಗೇರು ಬೀಜ ಪ್ರಮಾಣದಲ್ಲಿ ವ್ಯಾಪಕ ಏರಿಕೆ ಕಾಣಬರುತ್ತಿದೆ. ೨೦೦೧-೦೨ ರಲ್ಲಿ ಒಟ್ಟು ಆಮದು ೩.೪೯ ಲಕ್ಷ ಟನ್ನುಗಳಿದ್ದು ೨೦೦೯-೧೦ ರಲ್ಲಿ ೭.೫೩ ಲಕ್ಷ ಟನ್ನುಗಳಿಗೇರಿತು. ಇದು ಶೇ. ೧೧೫.೭೬ ರಷ್ಟು ಏರಿಕೆಯನ್ನು ದಾಖಲಿಸಿದೆ. ಪ್ರತಿ ವರ್ಷ ಆಮದು ಹೆಚ್ಚಾಗುತ್ತಾ ಹೋಗುತ್ತಿರುವುದು ವಿಷಾದಕರವಾದ ವಿಷಯವಾಗಿದೆ. ದೇಶದಲ್ಲಿ ಗೇರು ಬೀಜದ ಬೇಡಿಕೆ ಮತ್ತು ಪೂರೈಕೆಗಳ ನಡುವೆ ಅಗಾಧ

ಅಂತರವಿರುವುದನ್ನು ಇದು ತಿಳಿಯಪಡಿಸುತ್ತದೆ. ಗೇರು ಬೀಜದ ಉತ್ಪಾದನೆ ಹೆಚ್ಚಿಸಬೇಕಾದ ಅನಿವಾರ್ಯತೆ ಇರುವುದು ಇದರಿಂದ ವಿದಿತವಾಗುತ್ತದೆ. ಚಿತ್ರ ೨.೧೦ ಭಾರತದ ಗೇರು ಬೀಜ ಆಮದಿನ ಮೂಲಗಳನ್ನು ತೋರಿಸುತ್ತದೆ.



ಚಿತ್ರ: ೨.೯ ಪ್ರಪಂಚದ ಬೇರೆ ಬೇರೆ ದೇಶಗಳಿಂದ ಭಾರತಕ್ಕೆ ಆಮದಾಗುತ್ತಿರುವ ಕಚ್ಚಾಗೇರಿನ ಪ್ರಮಾಣ ೨೦೦೯-೧೦

ಭಾರತಕ್ಕೆ ಆಮದಾಗುತ್ತಿರುವ ಒಟ್ಟು ಕಚ್ಚಾಗೇರಿನ ಪ್ರಮಾಣದಲ್ಲಿ ಶೇ. ೩೧.೬೨ ರಷ್ಟು ಕೋಟೆ ಡಿ ಐವರಿಯಿಂದ ಬರುತ್ತಿದ್ದು, ಗುನಿಯಾ ಬಿಸು (೧೭.೭೯) ಹಾಗೂ ಬೆನಿನ್ (೧೫.೨೬) ಕ್ರಮೇಣ ಎರಡು ಹಾಗೂ ಮೂರನೇ ಸ್ಥಾನದಲ್ಲಿವೆ. ತಾಂಜೇನಿಯಾ ಮತ್ತು ಘಾನಾ (ಶೇ. ೭), ಇಂಡೋನೇಶಿಯಾ (ಶೇ. ೬), ಮೊಜಾಂಬಿಕ್ (ಶೇ. ೩), ನೈಜೀರಿಯಾ ಮತ್ತು ಸೆನಿಗಲ್ (ಶೇ. ೨) ಆ ಬಳಿಕದ ಸ್ಥಾನದಲ್ಲಿವೆ. ಕಳೆದೊಂದು ದಶಕದಲ್ಲಿ ಆಮದಾಗುತ್ತಿರುವ ಗೇರು ಬೀಜದ ಪ್ರಮಾಣ ಮತ್ತು ಮೌಲ್ಯವನ್ನು ಕೋಷ್ಟಕ೨.೧೪ರಲ್ಲಿ ದಾಖಲಿಸಲಾಗಿದೆ.

ಕೋಷ್ಟಕ :೨.೧೬ ಭಾರತಕ್ಕೆ ಆಮದಾಗುತ್ತಿರುವ ಕಚ್ಚಾಗೇರಿನ ಪ್ರಮಾಣ ಮತ್ತು ಮೌಲ್ಯ

ವರ್ಷ	ಮೊತ್ತ (ಮಿಲಿಯ ಟನ್‌ಗಳಲ್ಲಿ)	ಮೌಲ್ಯ (ಕೋಟಿ ರೂ.ಗಳಲ್ಲಿ)
೨೦೦೦-೦೧	೨೪೯೩೧೮	೯೬೦.೮೪
೨೦೦೧-೦೨	೩೫೫೫೫೬	೯೫೦.೦೧
೨೦೦೨-೦೩	೪೦೦೬೫೯	೧೨೩೬.೫೭
೨೦೦೩-೦೪	೪೫೨೩೯೮	೧೪೦೦.೯೩
೨೦೦೪-೦೫	೫೭೮೮೮೪	೨೧೮೩.೨೪
೨೦೦೫-೦೬	೫೬೫೪೦೦	೨೧೬೨.೯೫
೨೦೦೬-೦೭	೫೮೬೦೪೪	೧೮೧೧.೬೨
೨೦೦೭-೦೮	೬೦೫೯೮೫	೧೭೪೬.೮೦
೨೦೦೮-೦೯	೬೦೫೮೫೦	೨೬೩೨.೪೧
೨೦೦೯-೧೦	೭೫೨೮೫೪	೩೦೪೭.೫೦
೨೦೧೦-೧೧	೫೨೯೩೭೦	೨೬೪೯.೫೬
೨೦೧೧-೧೨	೮೦೯೩೭೧	೫೩೩೭.೭೬

Source: Directorate General of Commercial Intelligence and Statistics (DGCI & S.) Kolkata 2011.



ಭಾರತದ ಗೇರು ಆಮದು ಪ್ರಮಾಣ ೨೦೦೦-೦೧ ರಲ್ಲಿ ೨.೪೯ ಲಕ್ಷ ಟನ್ನುಗಳಿದ್ದುದು ೨೦೧೧-೧೨ ರಲ್ಲಿ ೮.೦೯ ದಶಲಕ್ಷ ಟನ್ನುಗಳಿಗೇರಿದೆ. ಇದು ಶೇ. ೨೨೪.೬೩ ರಷ್ಟು ಏರಿಕೆಯಾಗಿದೆ. ಪರಿಣಾಮವಾಗಿ ೨೦೦೦-೦೧ ರಲ್ಲಿ ರೂ. ೯೬೦.೮೪ ಕೋಟಿ ವಿದೇಶಿ ವಿನಿಮಯ ಪಾವತಿಸಬೇಕಾಯಿತು. ೨೦೧೧-೧೨ರಲ್ಲಿ ಈ ಮೊತ್ತ ರೂ. ೫೩೩೭.೭೬ ಕ್ಕೆ ಏರಿತು. ಏರಿಕೆಯ ಪ್ರಮಾಣ ಶೇ. ೪೫೫.೫೩ ರಷ್ಟಾಗಿದೆ. ನಮ್ಮ ಅಮೂಲ್ಯವಾದ ವಿದೇಶೀ ವಿನಿಮಯ ಹೀಗೆ ಗೇರು ಆಮದಿಗೆ ವ್ಯಯವಾಗುತ್ತಿದೆ.

ಜಾಗತಿಕ ಮಟ್ಟದಲ್ಲಿ ಗೇರು ಬೀಜದ ಉತ್ಪಾದನೆ ಕಳೆದ ಒಂದು ದಶಕದಲ್ಲಿ ೧.೭ ಮಿಲಿಯ ಟನ್‌ಗಳು (೧೯೯೯-೨೦೦೦)ದಿಂದ ೩.೩೫ ಮಿಲಿಯ ಟನ್ (೨೦೦೯-೧೦)ಗಳಷ್ಟು ಆದರೆ ಸುಮಾರು ೯೭.೦೦ ಶೇಕಡಾ ಹೆಚ್ಚಾಗಿರುತ್ತದೆ. ಭಾರತವು ಎರಡನೇ ದೊಡ್ಡ ಗೇರು ಉತ್ಪಾದಕ ರಾಷ್ಟ್ರವಾಗಿದ್ದು (೦.೬೧೩ ಮಿಲಿಯ ಟನ್) ವಿಯೆಟ್ನಾಂ ೦.೯೫೮ ಮಿಲಿಯ ಟನ್‌ಗಳಷ್ಟು ಗೇರು ಉತ್ಪಾದಿಸುತ್ತಿದ್ದು ಮೊದಲ ಸ್ಥಾನಿಯಾಗಿದೆ. ಕಳೆದ ಒಂದು ದಶಕದಲ್ಲಿ ವಿಯೆಟ್ನಾಂ ಶೇಕಡಾ ೪೮೧ ರಷ್ಟು ಹೆಚ್ಚಳವನ್ನು ಸಾಧಿಸಿದ್ದು ಭಾರತ ಕೇವಲ ೩೩.೨ ಶೇಕಡಾದಷ್ಟು ಹೆಚ್ಚಳವನ್ನು ಕಂಡುಕೊಂಡಿದೆ. ೨೦೦೯-೧೦ ರಲ್ಲಿ ಜಗತ್ತಿನ ಒಟ್ಟು ಗೋಡಂಬಿ ರಫ್ತು ವ್ಯಾಪಾರದಲ್ಲಿ ಭಾರತ ೨೬.೮% ಪಾಲನ್ನು ಹೊಂದಿದ್ದು ರೂ. ೨೮೦೧.೬೦ ಕೋಟಿ ಮೌಲ್ಯದ ಗೋಡಂಬಿಯನ್ನು ರಫ್ತು ಮಾಡಿತ್ತು. ೨೦೧೧-೧೨ ರ ವರದಿಯಂತೆ ಇದು ೪೩೯೦.೬೮ ಕೋಟಿ ರೂಪಾಯಿಗಳಾಗಿದೆ.[೪೮] ಭಾರತದ ಗೇರು ಸಂಸ್ಕರಣಾ ಘಟಕಗಳಿಗೆ ವಾರ್ಷಿಕ ೧೬.೨೩ ಲಕ್ಷ ಟನ್ ಗಳಷ್ಟು ಕಚ್ಚಾಗೇರಿನ ಅವಶ್ಯಕತೆ ಇದ್ದು ಸದ್ಯದ ಉತ್ಪಾದನೆ ಕೇವಲ ೬.೯೨ ಲಕ್ಷ ಟನ್‌ಗಳಾಗಿರುವುದರಿಂದ ಸುಮಾರು ೯ ಲಕ್ಷ ಟನ್ ಕಚ್ಚಾಗೇರನ್ನು ಭಾರತ ಆಮದು ಮಾಡಿಕೊಳ್ಳ ಬೇಕಾಗಿದೆ. ಜೊತೆಗೆ ಭಾರತಕ್ಕೆ ಕಚ್ಚಾಗೇರನ್ನು ರಫ್ತು ಮಾಡುತ್ತಿದ್ದ ಆಫ್ರಿಕಾದ ರಾಷ್ಟ್ರಗಳು ತಮ್ಮದೇ ಆದ ಸಂಸ್ಕರಣಾ ಘಟಕಗಳನ್ನು ಹೆಚ್ಚು ಹೆಚ್ಚಾಗಿ ಹೊಂದುತ್ತಿರುವುದರಿಂದ ಭಾರತಕ್ಕೆ ಬರುತ್ತಿದ್ದ ಕಚ್ಚಾಗೇರಿನ ಪೂರೈಕೆ ಮತ್ತಷ್ಟು ಕುಸಿಯುತ್ತಿದೆ. ೨೦೨೦ ರ ವೇಳೆಗೆ ಆಫ್ರಿಕಾ ದೇಶಗಳು ತಮ್ಮ ಉತ್ಪಾದನೆಯ ಶೇ. ೩೫ ರಷ್ಟನ್ನು ತಾವೇ ಸಂಸ್ಕರಿಸುವ ಯೋಜನೆ ಹೊಂದಿವೆ. ಆಫ್ರಿಕಾ ದೇಶಗಳ ಗೇರು ಸಂಸ್ಕರಣಾ ಕೇಂದ್ರಗಳನ್ನು ಆಧುನೀಕರಿಸುವಲ್ಲಿ ಮತ್ತು ಅವುಗಳ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಅಮೇರಿಕಾದ ಬಿಲ್ ಗೇಟ್ಸ್‌ರಂತಹ ಉದ್ಯಮಿಗಳು ಹಣಕಾಸಿನ ನೆರವನ್ನು ನೀಡುವುದರೊಂದಿಗೆ ಅನೇಕ ರೀತಿಯ ಸಹಯೋಗವನ್ನು ನೀಡುತ್ತಿದ್ದಾರೆ.[೪೯] ಆಫ್ರಿಕಾದ ಬಡತನ ನಿರ್ಮೂಲನ ಕಾರ್ಯಕ್ರಮದನ್ವಯ ಇದೊಂದು ಮಹತ್ತರ ಬೆಳವಣಿಗೆ ಎನ್ನಬಹುದು. ಆದ್ದರಿಂದ ಮುಂದಿನ ದಿನಗಳಲ್ಲಿ ಅಂತರ್‌ರಾಷ್ಟ್ರೀಯ ಮಾರುಕಟ್ಟೆಯಲ್ಲಿ ತನ್ನ ಸ್ಥಾನವನ್ನು ಉಳಿಸಲು ಭಾರತವು ಕಚ್ಚಾಗೇರು ಉತ್ಪಾದನಾ ಹೆಚ್ಚಳಕ್ಕೆ ತೀವ್ರ ತರವಾಗಿ ಪ್ರಯತ್ನಿಸಬೇಕಾಗಿದೆ.

ಹೆಚ್ಚುತ್ತಿರುವ ಆಮದು ಕಚ್ಚಾಗೇರಿನ ಮೌಲ್ಯದಿಂದಾಗಿ ಭಾರತದ ಗೋಡಂಬಿ ನಿರ್ಯಾತ ಹಾಗೂ ಆಮದು ಕಚ್ಚಾಗೇರಿನ ವ್ಯತ್ಯಾಸ ಮೌಲ್ಯ ಕುಸಿಯುತ್ತಿರುವುದು ಕಂಡು ಬರುತ್ತದೆ. ಕೋಷ್ಟಕ ೨.೧೭ರಲ್ಲಿ ಗೋಡಂಬಿ ಹಾಗೂ ಗೇರು ಬೀಜದ ಎಣ್ಣೆಯ ನಿರ್ಯಾತ ಮೌಲ್ಯ ಮತ್ತು ಆಮದು ಕಚ್ಚಾಗೇರಿನ ಮೌಲ್ಯದ ಅಂತರ ನಮೂದಿಸಲಾಗಿದೆ.

ಕೋಷ್ಟಕ: ೨.೧೭ ಗೋಡಂಬಿ ಹಾಗೂ ಗೇರು ಬೀಜದ ದ್ರವ ನಿರ್ಯಾತ ಮೌಲ್ಯ ಮತ್ತು ಆಮದು ಗೇರಿನ ಮೌಲ್ಯ

ವರ್ಷ	ಗೋಡಂಬಿ/ಗೇರು ಬೀಜ ದ್ರವ ನಿರ್ಯಾತ ಮೌಲ್ಯ (ಕೋಟಿ ರೂ.ಗಳಲ್ಲಿ)	ಆಮದು ಕಚ್ಚಾಗೇರಿನ ಮೌಲ್ಯ (ಕೋಟಿ ರೂ.ಗಳಲ್ಲಿ)	ವ್ಯತ್ಯಾಸ ಮೌಲ್ಯ (ಕೋಟಿ ರೂ.ಗಳಲ್ಲಿ)
೨೦೦೦-೦೧	೨೦೫೩.೪೯	೯೬೦.೮೪	೧೦೯೨.೬೫
೨೦೦೧-೦೨	೧೭೯೪.೬೦	೯೫೦.೦೧	೮೪೪.೫೯
೨೦೦೨-೦೩	೧೯೪೨.೨೮	೧೨೩೬.೫೭	೭೦೫.೭೧
೨೦೦೩-೦೪	೧೮೧೧.೪೫	೧೪೦೦.೯೩	೪೧೦.೫೨
೨೦೦೪-೦೫	೨೭೧೭.೧೫	೨೧೮೩.೨೪	೫೩೩.೯೧
೨೦೦೫-೦೬	೨೫೨೧.೯೫	೨೧೬೨.೯೫	೩೫೯.೦೦
೨೦೦೬-೦೭	೨೪೬೫.೪೪	೧೮೧೧.೬೨	೬೫೩.೮೨
೨೦೦೭-೦೮	೨೩೦೦.೮೭	೧೭೪೬.೮೦	೫೫೪.೦೭
೨೦೦೮-೦೯	೩೦೧೪.೪೬	೨೬೩೨.೪೧	೩೮೨.೦೫
೨೦೦೯-೧೦	೨೮೨೯.೨೨	೩೦೪೭.೫೦	-೨೧೮.೨೮
೨೦೧೦-೧೧	೨೮೫೩.೧೬	೨೬೪೯.೫೬	೨೦೩.೬೦
೨೦೧೧-೧೨	೪೪೫೦.೧೪	೫೩೩೭.೭೬	-೮೮೭.೬೨
೨೦೧೨-೧೩	೩೬೭೭.೧	೫೦೮೪.೯೮	-೧೪೦೭.೮೮

Source: D. Balasubramanian, PL Saroj, R K Meena and K Vanitha, 2013, “Research status of Technological Development of Cashew in India In Souveniur National Conference on Cashew Strategies for cashew development- non Traditioonal states” Nov.20-21, Ranchi, Zarkand

೨೦೦೧ ನೇ ಇಸವಿಯಿಂದ ೨೦೧೨ ರವರೆಗೆ ಗೋಡಂಬಿ ಹಾಗೂ ಗೇರು ಎಣ್ಣೆಯ ಒಟ್ಟು ಮೌಲ್ಯದಲ್ಲಿ ೧೧೬.೭೧% ಹೆಚ್ಚಳ ಕಂಡು ಬಂದಿದ್ದರೂ ಆಮದು ಕಚ್ಚಾಗೇರಿನ ಮೌಲ್ಯದಲ್ಲಿ ಶೇಕಡಾ ೪೫೫.೩ ಹೆಚ್ಚಳವಿರುವುದರಿಂದ ವ್ಯತ್ಯಾಸ ಮೌಲ್ಯ ಕಡಿಮೆಯಾಗುತ್ತಾ ಬಂದಿದ್ದು ೨೦೦೯-೧೦ರಲ್ಲಿ ಇದು ಋಣಾತ್ಮಕತೆಯನ್ನು ತಲುಪಿರುತ್ತದೆ. ೨೦೧೦-೧೧ ರಲ್ಲಿ ಸ್ವಲ್ಪ ಪ್ರಮಾಣದ ಮಿಗುತೆ ಕಂಡು ಬಂದರೂ ಪುನಃ ೨೦೧೧-೧೨ ರಲ್ಲಿ ಹಾಗೂ ೨೦೧೨-೧೩ ರಲ್ಲಿ ಋಣಾತ್ಮಕತೆಯನ್ನು ಬಿಂಬಿಸಿದೆ. ಮತ್ತೊಮ್ಮೆ -೧೪೦೭.೮೮ ಕೋಟಿ ರೂ.ಗಳ ಕೊರತೆಯಿರುವುದರಿಂದ ಇಲ್ಲಿ ಗೋಡಂಬಿ ಉದ್ಯಮದಿಂದ ವಿದೇಶಿ ವಿನಿಮಯ ಗಳಿಕೆಯ ಭಾಗ ಇಲ್ಲವೆಂದಾಗಿದೆ. ಇದಕ್ಕೆ ಪ್ರಮುಖ ಕಾರಣ ಭಾರತದ ಗೇರು ಸಂಸ್ಕರಣಾ ಘಟಕದ ಉತ್ಪಾದನಾ ಸಾಮರ್ಥ್ಯ ವರ್ಷದಿಂದ ವರ್ಷಕ್ಕೆ ಏರುತ್ತಿದ್ದು ದೇಶೀಯ ಉತ್ಪಾದನೆಯ ಕೊರತೆ ತೀವ್ರವಾಗಿ ಕಾಡುತ್ತಿದೆ. ೧೯೯೪-೯೫ ರಲ್ಲಿ ೫.೫೩ ಲಕ್ಷ ಟನ್‌ಗಳಷ್ಟು ಗೇರು ಬೀಜದ ಸಂಸ್ಕರಣೆಯಾಗಿದ್ದು ಅದರಲ್ಲಿ ೩.೨೨ ಲಕ್ಷ ಟನ್‌ಗಳಷ್ಟು ಮಾತ್ರ ದೇಶೀ ಉತ್ಪಾದನೆಯಾಗಿತ್ತು. ಉಳಿದ ೨.೩೧ ಲಕ್ಷ ಟನ್‌ಗಳಷ್ಟನ್ನು ಆಮದು ಮಾಡಿಕೊಳ್ಳಬೇಕಾಯಿತು. ೨೦೦೫-೦೬ ರಲ್ಲಿ ಗೇರು ಸಂಸ್ಕರಣೆಯ ಪ್ರಮಾಣ ೧೨ ಲಕ್ಷ ಟನ್‌ಗಳಿಗೆ ಏರಿದ್ದು ಅದರಲ್ಲಿ ೬.೬೫ ಲಕ್ಷ ಟನ್‌ಗಳು ಮಾತ್ರ ದೇಶೀ ಗೇರು ಬೀಜವಾಗಿದ್ದು ಉಳಿದ ಗೇರು ಬೀಜವನ್ನು ಆಮದು ಮಾಡಿಕೊಳ್ಳಲಾಗಿತ್ತು.[೫೦]

ಈ ಅವಧಿಯಲ್ಲಿ ಗೇರು ಸಂಸ್ಕರಣೆಯ ಪ್ರಮಾಣ ೨ ಪಟ್ಟು ಏರಿದ್ದರೂ ಕಚ್ಚಾಗೇರು ಬೀಜದ ಕೊರತೆ ಮುಂದುವರಿಯುತ್ತಲೇ ಇತ್ತು. ೨೦೧೧-೧೨ ರಲ್ಲಿ ಗೇರು ಬೀಜದ ಸಂಸ್ಕರಣೆಯ ಪ್ರಮಾಣ ೧೫ ಲಕ್ಷ ಟನ್‌ಗಳಾಗಿದ್ದು ಅದರಲ್ಲಿ ದೇಶೀ ಗೇರು ಬೀಜದ ಪ್ರಮಾಣ ಕೇವಲ ೮ ಲಕ್ಷ ಟನ್‌ಗಳು ಮಾತ್ರ. ಇದೇ ಸ್ಥಿತಿ ಮುಂದುವರಿದಲ್ಲಿ ಮುಂದಿನ ೧೦

ವರ್ಷಗಳಲ್ಲಿ ಅಂದರೆ ೨೦೨೧ರ ಸುಮಾರಿಗೆ ಗೇರು ಬೀಜದ ಸಂಸ್ಕರಣೆ ಕನಿಷ್ಠ ೨೨ ಲಕ್ಷ ಟನ್‌ಗೆ ತಲುಪಬಹುದೆಂದು ಅಂದಾಜಿಸಲಾಗಿದೆ. ಸಾಂಪ್ರದಾಯಿಕವಲ್ಲದ ರಾಜ್ಯಗಳಲ್ಲಿ ಗೇರು ಬೆಳೆಯುವ ಪ್ರಯತ್ನ ತೀವ್ರವಾಗಿ ಹೆಚ್ಚುತ್ತಿದ್ದು, ಜೊತೆಗೆ ಗೇರು ಬೆಳೆಯಲ್ಲಿ ಸುಧಾರಿತ ತಂತ್ರಜ್ಞಾನ ಹಾಗೂ ಸರ್ಕಾರದ ಪ್ರೋತ್ಸಾಹದಿಂದಾಗಿ ಕಚ್ಚಾಗೇರು ಉತ್ಪಾದನೆಯೂ ಹೆಚ್ಚಾಗುವ ಸಂಭವವಿದೆ. ಹಾಗಾಗಿ ಹೆಚ್ಚುತ್ತಿರುವ ಕಚ್ಚಾಗೇರು ಬೀಜದ ಕೊರತೆಯನ್ನು ಸರಿದೂಗಿಸುವ ನಿರೀಕ್ಷೆ ಇದೆ. ೨೦೨೦ರ ವೇಳೆಗೆ ಭಾರತ ಕಚ್ಚಾಗೇರು ಉತ್ಪಾದನೆಯಲ್ಲಿ ಸ್ವಾವಲಂಬಿಯಾಗುವ ಭರವಸೆ ಇದೆ. ಕೋಷ್ಟಕ ೨.೧೮ರಲ್ಲಿ ನಿರೀಕ್ಷಿತ ಬೇಡಿಕೆ ಹಾಗೂ ಉತ್ಪಾದನೆಯಾಗುವ ಪ್ರಮಾಣವನ್ನು ತೋರಿಸಲಾಗಿದೆ.

ಕೋಷ್ಟಕ ೨.೧೮ ಅಂದಾಜಿತ ಬೇಡಿಕೆ ಮತ್ತು ನಿರೀಕ್ಷಿತ ಗೇರು ಬೀಜ ಉತ್ಪಾದನೆ (೨೦೧೨ರಿಂದ ೨೦೨೧ರ ತನಕ) (ಲಕ್ಷ ಟನ್‌ಗಳಲ್ಲಿ)

ವರ್ಷ	ಅಂದಾಜಿತ ಬೇಡಿಕೆ	ನಿರೀಕ್ಷಿತ ಉತ್ಪಾದನೆ	ಕೊರತೆ
೨೦೧೨	೧೫.೦೦	೮.೦೦	೭.೦೦
೨೦೧೩	೧೫.೫೦	೧೦.೫೦	೫.೦೦
೨೦೧೪	೧೬.೦೦	೧೨.೦೦	೪.೦೦
೨೦೧೫	೧೬.೫೦	೧೩.೫೦	೩.೦೦
೨೦೧೬	೧೭.೦೦	೧೫.೦೦	೨.೦೦
೨೦೧೭	೧೮.೦೦	೧೬.೫೦	೧.೫೦
೨೦೧೮	೧೯.೦೦	೧೮.೦೦	೧.೦೦
೨೦೧೯	೨೦.೦೦	೧೯.೫೦	೦.೫೦
೨೦೨೦	೨೧.೦೦	೨೧.೦೦	೦.೦೦
೨೦೨೧	೨೨.೦೦	೨೨.೦೦	೦.೦೦

Source: Venkatesh N. Hubli and R. Jnanadevan 2012 Cashew Development in India: Strategies for Sustainable Production. In souvenir "International Conference on Sustainable Cashew Production- Challenges- Opportunities.

೨೦೧೧–೧೨ ರಲ್ಲಿ ಕಚ್ಚಾಗೇರಿನ ಉತ್ಪಾದನೆ ೧೫ ಲಕ್ಷ ಟನ್‌ಗಳಾಗಿದ್ದು, ಏಳು ಲಕ್ಷ ಟನ್ ಗಳಷ್ಟು ಆಮದು ಮಾಡಿಕೊಳ್ಳಲಾಗುತ್ತಿದೆ. ಕಳೆದ ಹತ್ತು ವರ್ಷಗಳಲ್ಲಿ ದೇಶೀ ಉತ್ಪಾದನೆ ಮೂರು ಪಟ್ಟು ಏರಿಕೆ ಕಂಡು ಬಂದಿದ್ದು ಮುಂದಿನ ಹತ್ತು ವರ್ಷಗಳಲ್ಲಿ ಇದೇ ರೀತಿಯ ಬೆಳವಣಿಗೆ ಸಾಧಿಸಿದರೆ ೨೦೨೧ ನೇ ಇಸವಿಗೆ ಭಾರತ ಕಚ್ಚಾಗೇರು ಉತ್ಪಾದನೆಯಲ್ಲಿ ಸ್ವಾವಲಂಬಿ ಎನಿಸಿಕೊಳ್ಳಬಹುದು.

೨೦೧೧–೧೨ ರಲ್ಲಿ ಕಚ್ಚಾಗೇರಿನ ಆಮದು ಪ್ರಮಾಣ ಹಾಗೂ ಅದರ ಮೌಲ್ಯ ಗಣನೀಯವಾಗಿ ಹೆಚ್ಚುತ್ತಿದೆ. ಕಚ್ಚಾಗೇರು ಆಮದು ಮೌಲ್ಯದಲ್ಲಿ ಶೇಕಡಾ ೪೫೫ ಹೆಚ್ಚಳ ಕಂಡು ಬಂದಿದೆ. ಮುಂದಿನ ಹತ್ತು ವರ್ಷಗಳಲ್ಲಿ ನಮ್ಮ ಕಚ್ಚಾಗೇರಿನ ಅವಶ್ಯಕತೆ ೨೨ ಲಕ್ಷ ಟನ್ ಗಳು ಎಂದು ಅಂದಾಜಿಸಲಾಗಿರುವುದರಿಂದ ದೇಶೀಯ ಉತ್ಪಾದನೆಯನ್ನು ಸಮಾರೋಪಾದಿಯಲ್ಲಿ ಹೆಚ್ಚಿಸಬೇಕಾದ ಅನಿವಾರ್ಯತೆ ಇದೆ. ಇದರೊಂದಿಗೆ ಆಫ್ರಿಕಾ ಹಾಗೂ ಏಷಿಯಾ ದೇಶಗಳು ತಮ್ಮದೇ ಆದ ಸಂಸ್ಕರಣಾ ಘಟಕಗಳನ್ನು ಹೊಂದಿಕೊಂಡಿದ್ದು, ಅವುಗಳ ಉತ್ಪಾದನಾ ಸಾಮಾರ್ಥ್ಯವನ್ನು ಹೆಚ್ಚಿಸುವುದಕ್ಕೆ ಆದ್ಯತೆ ನೀಡಿರುವುದರಿಂದ ಆಮದು ಕಚ್ಚಾಗೇರಿನ ಪ್ರಮಾಣ ಕುಸಿಯುವ ಭೀತಿ ಎದುರಾಗಿದೆ. ಈ ನಿಟ್ಟಿನಲ್ಲಿ ಸರಕಾರ ದೇಶೀ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಶ್ರಮಿಸಬೇಕಾಗಿದೆ.

ಉಲ್ಲೇಖಗಳು ಮತ್ತು ಟಿಪ್ಪಣಿಗಳು

೧. **P.K Basu,** "Food Security: can agricultural reforms bail it out? 2011" fact for you November 2011, vol 32, No.2 P. 27.

೨. **ಡಾ। ಪಿ. ಶಿವರಾಮ ರೈ,** ೧೯೮೨ 'ಗೋಡಂಬಿ', ಪ್ರಕಾಶಕರು, ನಿರ್ದೇಶಕರು, ಪ್ರಸಾರಾಂಗ ಮೈಸೂರು ವಿಶ್ವ ವಿದ್ಯಾಲಯ ಮಾನಸ ಗಂಗೋತ್ರಿ ಮೈಸೂರು. ಪುಟ ಸಂಖ್ಯೆ ೧.

೩. **ಎಂ.ಎ ನಾರಾಯಣ ರೆಡ್ಡಿ,** ೧೯೯೬, 'ಗೋಡಂಬಿ' ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರು. ಪುಟ ಸಂಖ್ಯೆ-೨.

೪. ಅದೇ. ಪು. ೪.

೫. **S.S.Wadkar, S.R. Bagade, Jalgankar V.N.,** 2007, Indian Cashew Processing and Export published by pointer Publishers Jaipur.P.3

೬. **M. Abdul Salam, K.V.Peter** Cashew- A Monograph 2009, Published by Slaudian Press (India) Private Ltd. P.52.

೭. Ibid P. 52

೮. Ibid P.53

೯. Ibid P. 55

೧೦. Ibid P. 74

೧೧. Ibid P. 75

೧೨. **Rajmohan Pillai, Dr. P. Shantha** 2008, "World Cashew Industry- An Indian Perspective" published by pointer publication Jaipur P.4.

೧೩. **Jose Mathew, Sobhana A.** and **Mini C,** 2009- "Multiple user of Cashew Apple and opportunities for commercial Exploitation". The cashew and cocoa Journal 11 (2)P. 6.

೧೪. Ibid P.7.

೧೫. **ಡಾ। ಪಿ. ಶಿವರಾಮ ರೈ,** ಪೂರ್ವೋಕ್ತ ೬೨.

೧೬. **ವೆಂಕಟೇಶ್ ಎನ್.** ಹುಬ್ಬಳ್ಳಿ, ೨೦೦೯ Cashew Development in India Enhancement of Production and Productivity. In 7th National Seminar Bhuvaneshwar Orissa P. 7.

೧೭. Cashew Hand Book 2011, Chapter 2, trends in world cashew nut area and production. Global perspective. www.cashewinfo.com

೧೮. **Rajmohan Pillai, Dr. P. Shantha** op cit. P. 5

೧೯. **M.G. Bhat, M.Gangadhara Nayak, Nagaraja K.V,** 2006, "Prospects of Cashew in Next Decade with special reference to North Eastern State" The Cashew 20(2); P. 27.

೨೦. Ibid P.27

೨೧. Ibid P.27

೨೨. Ibid P. 28

೨೩. Ibid P.28

೨೪. Ibid P. 28

೨೫. Ibid P. 29

೨೬. ಸುಧಾರಿತ ಗೇರು ಬೇಸಾಯ ಲಘು ಗ್ರಂಥ ಮಾಲಿಕೆ- ೧, ಗೇರು ಸಂಶೋಧನಾಲಯ ಪುತ್ತೂರು.

೨೭. ಗೇರು ಗಿಡಗಳ ಸವರುವಿಕೆ ಮತ್ತು ಆಕಾರ ಕೊಡುವಿಕೆ. ಲಘು ಗ್ರಂಥ ಮಾಲಿಕೆ-೯, ಗೇರು ಸಂಶೋಧನಾಲಯ ಪುತ್ತೂರು.

೨೮. ಗೇರು ಮರಗಳ ಪುನಶ್ಚೇತನ, ಲಘು ಗ್ರಂಥ ಮಾಲಿಕೆ – ೧೦, ಗೇರು ಸಂಶೋಧನಾಲಯ ಪುತ್ತೂರು.

೨೯. ಗೇರು ಬೆಳೆಯಲ್ಲಿ ಘನ ಸಾಂದ್ರ ಬೇಸಾಯ ಲಘು ಗ್ರಂಥ ಮಾಲಿಕೆ II, ಗೇರು ಸಂಶೋಧನಾಲಯ ಪುತ್ತೂರು.

೩೦. **ವೆಂಕಟೇಶ್ ಎನ್. ಹುಬ್ಬಳ್ಳಿ**, ೨೦೦೬, "Indian Cashew. Cashew Development Strategies in Next Decade" The Cashew- 20(2) Pp. 20-26.

೩೧. **Venkatesh N. Hubballi** and **R. Jnadevan** 2012, Cashew Development in India. 'Strategies for sustainable Production. In souvenir International Conference on "Sustainable Cashew roduction- Challenges and Opportunities. P. 22.

೩೨. Ibid P. 23

೩೩. Ibid P.23

೩೪. **K. Harish Kumar. B Chinnappa** 2010 "Economic Analysis of Cashew Processing in Karnataka." The Cashew and Coca Journal October – December 2010, Vol II, No.4, Page No. 18.

೩೫. **Walter D Souza 2005**, "The Golden Legacy Vision 2020". In Golden Jubilee souvenir. The Karnataka Cashew manufacturer Association P. 10.

೩೬. **T.K. Shahal Hasan Musaliar**, 2010. "Challenges and opportunities for Indian Cashew in Global Market" The Cashew and coca journal vol IINo. 1, P. 13.

೩೭. **Walter D Souza 2005**, op cit P.11.

೩೮. **S.A. Chavan** and **M.S. Gawkar** 2010, "Prospects of on Farm processingin Cashew". The cashew and cocoa Journal 11(2) p. 6.

೩೯. **ಡಾ। ಪಿ. ಶಿವರಾಮ ರೈ**, ೧೯೮೨, ಪೂರ್ವೋಕ್ತ ಪು. ೬೩.

೪೦. **S.S.Wadkar**, **S.R. Bagade**, **Jalgankar V.N.**, 2007, op cit. P.5.

೪೧. **Giridhar Prabhu** 2007, "Modernisation of cashew processing and packaging in India" Souvenier 16th National Cashew Seminar 2007. P.26.

೪೨. **Shankar M. Hanumanthappa M, Vidyashree S.M. Dhananjaya** and **Nagesha L.** 2012. Prospects of Cashew processing Industry in coastal Karnataka. In souvenier. International conference Goa. P.131.

೪೩. **S.S.Wadkar, S.R. Bagade, Jalgankar V.N.,** 2007, op cit P.7.

೪೪. **K. Harish Kumar. B Chinnappa** 2010 op cit P.18

೪೫. **Venkatesh N. Hubli, R.Jnanadeva** 2012, Cashew Development in India: Strategies for sustainable Production In Souvenier International Conference on Sustainable Cashew Production "Challenges and Opportunities" October 2012, Goa.

೪೬. **Venkatesh N. Hubballi** 2012, Cashew Development in India Strategies for Sustainable production. In souvenier Internation Conference on cashew 2012 Goa, P. 32.

೪೭. Ibid P. 32

೪೮. **P.K. Sudarshanan, B. Vijayachandra Pillai** 2001, Towards "The better prospects of Indian Cashew", The cashew 15 (2) P. 21.

೪೯. **Venkatesh N. Hubballi**, 2012, op cit P. 32.

೫೦. **T.K. Shahal Hassan Musaliar,** 2010, "Challenges and opportunities for Indian Cashews in Global Market" The Cashew and Cocoa journal 2(1) P.13.

ಅಧ್ಯಾಯ ೩

ಕರ್ನಾಟಕ ರಾಜ್ಯದಲ್ಲಿ ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೇರು ಉದ್ಯಮದ ಬೆಳವಣಿಗೆ

ಅಧ್ಯಾಯ ೩

ಕರ್ನಾಟಕ ರಾಜ್ಯದಲ್ಲಿ ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೇರು ಉದ್ಯಮದ ಬೆಳವಣಿಗೆ

ದೇಶದ ಗೇರು ಉದ್ದಿಮೆಯ ಕುರಿತಂತೆ ಈ ಹಿಂದಿನ ಅಧ್ಯಾಯದಲ್ಲಿ ಅವಲೋಕಿಸಲಾಗಿದೆ. ಅಂತೆಯೇ ದೇಶದ ಗೇರು ರಾಜ್ಯವೆಂಬ ಹೆಗ್ಗಳಿಕೆಗೆ ಪಾತ್ರವಾದ ಕರ್ನಾಟಕದಲ್ಲಿ ಗೇರು ಉದ್ದಿಮೆಯ ಕುರಿತಾದ ಚರ್ಚೆ ಮಹತ್ವವನ್ನು ಪಡೆದುಕೊಳ್ಳುತ್ತದೆ. ರಾಜ್ಯದ ದ. ಕ. ಜಿಲ್ಲೆ ಗೇರು ಉದ್ದಿಮೆಯ ತವರು ಎಂದೆನಿಸಿಕೊಂಡಿರುವುದರಿಂದ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ, ಸಾಮಾಜಿಕ ವಿವರಗಳು, ಆರ್ಥಿಕತೆಯ ಪರಿಚಯದೊಂದಿಗೆ ಗೇರು ಉದ್ದಿಮೆಯ ಬೆಳವಣಿಗೆಯನ್ನು ಪ್ರಸ್ತುತ ಅಧ್ಯಾಯದಲ್ಲಿ ಬಿಂಬಿಸಲಾಗಿದ್ದು ಈ ಸಂಶೋಧನಾ ಪ್ರಬಂಧಕ್ಕೆ ಪೂರಕವಾದ ಮಾಹಿತಿಯನ್ನು ನೀಡುತ್ತದೆ.


ಕರ್ನಾಟಕವು ಭಾರತದ ದಕ್ಷಿಣದ ನಾಲ್ಕು ಪ್ರಮುಖ ರಾಜ್ಯಗಳಲ್ಲಿ ಒಂದು. ೧೯೭೩ ಕ್ಕೆ ಮೊದಲು ಕರ್ನಾಟಕದ ಹೆಸರು "ಮೈಸೂರು ರಾಜ್ಯ" ಎಂದಿದ್ದಿತು. ಇದಕ್ಕೆ ಕಾರಣ ಕರ್ನಾಟಕದ ಮೊದಲ ಸೃಷ್ಟಿ ಮೈಸೂರು ಸಂಸ್ಥಾನವನ್ನು ಆಧರಿಸಿದ್ದು ೧೯೫೬ ರಲ್ಲಿ ಸುತ್ತ ಮುತ್ತಲ ರಾಜ್ಯಗಳ ಕನ್ನಡ ಪ್ರಧಾನ ಪ್ರದೇಶಗಳನ್ನು ಸೇರಿಸಲಾಯಿತು. ಏಕೀಕರಣ ಚಳುವಳಿಯ ಬಹುಕಾಲದ ಬೇಡಿಕೆಯ ಮೇರೆಗೆ ನವಂಬರ್ ೧, ೧೯೫೬ರಂದು ರಾಜ್ಯ ಪುನಸಂಘಟನಾ ಕಾಯಿದೆಗೆ ಅನುಸಾರವಾಗಿ ಮೈಸೂರು ರಾಜ್ಯಕ್ಕೆ ಕೊಡಗು ರಾಜ್ಯ ಹಾಗೂ ಸುತ್ತ ಮುತ್ತಲಿನ ಮದರಾಸು, ಹೈದರಾಬಾದ್ ಮತ್ತು ಮುಂಬೈ ರಾಜ್ಯಗಳ ಕನ್ನಡ ಪ್ರಧಾನ ಪ್ರದೇಶಗಳು ಸೇರಿ ಏಕೀಕೃತ "ವಿಶಾಲ ಮೈಸೂರು" ಅಸ್ತಿತ್ವಕ್ಕೆ ಬಂತು. ನವೆಂಬರ್ ೧, ೧೯೭೩ ರಲ್ಲಿ ರಾಜ್ಯದ ಹೆಸರನ್ನು ಕರ್ನಾಟಕ ಎಂದು ಬದಲಾಯಿಸಲಾಯಿತು.[೧]

೩.೧ ಕರ್ನಾಟಕ: ಭೌಗೋಳಿಕತೆ ಮತ್ತು ಆರ್ಥಿಕತೆ

ಕರ್ನಾಟಕ ಎಂಬ ಹೆಸರಿಗೆ ಅನೇಕ ವ್ಯುತ್ಪತ್ತಿಗಳು ಪ್ರತಿಪಾದಿಸಲ್ಪಟ್ಟಿವೆ. ಎಲ್ಲಕ್ಕಿಂತ ಹೆಚ್ಚಾಗಿ ಒಪ್ಪಲ್ಪಟ್ಟಿರುವ ವ್ಯುತ್ಪತ್ತಿ ಎಂದರೆ ಕರ್ನಾಟಕ ಎಂಬುದು ಕರು+ನಾಡು ಎಂಬುದರಿಂದ ವ್ಯುತ್ಪತ್ತಿ ಪಡೆದಿದೆ. ಕರುನಾಡು ಎಂದರೆ "ಎತ್ತರದ ಪ್ರದೇಶ" ಎಂದು ಅರ್ಥ[೨]. ಕರ್ನಾಟಕ ರಾಜ್ಯ ಸಮುದ್ರ ಮಟ್ಟದಿಂದ ಸರಾಸರಿ ೧೫೦೦ ಅಡಿ ಎತ್ತರ ಇದ್ದು ಇದು ಭಾರತದಲ್ಲಿ ಅತಿ ಹೆಚ್ಚಿನ ಸರಾಸರಿ ಎತ್ತರವುಳ್ಳ ರಾಜ್ಯಗಳಲ್ಲಿ ಒಂದು.

ಕರ್ನಾಟಕವು ಪಶ್ಚಿಮದಲ್ಲಿ ಅರಬ್ಬೀ ಸಮುದ್ರದಿಂದ, ವಾಯುವ್ಯದಲ್ಲಿ ಗೋವಾದಿಂದ, ಉತ್ತರದಲ್ಲಿ ಮಹಾರಾಷ್ಟ್ರದಿಂದ, ಪೂರ್ವದಲ್ಲಿ ಆಂಧ್ರ ಪ್ರದೇಶದಿಂದ, ಆಗ್ನೇಯದಲ್ಲಿ ತಮಿಳುನಾಡುವಿನಿಂದ ನೈಋತ್ಯದಲ್ಲಿ ಕೇರಳದಿಂದ ಸುತ್ತುವರಿಯಲ್ಪಟ್ಟಿದೆ. (ಭೂಪಟ ೩.೧)

ಭೂಪಟ ೩.೧ ಕರ್ನಾಟಕ ರಾಜ್ಯ



ಕರ್ನಾಟಕ ರಾಜ್ಯದ ಒಟ್ಟು ವಿಸ್ತೀರ್ಣ ೧,೯೧,೭೯೧ ಚ. ಕಿ.ಮಿಗಳಾಗಿದ್ದು, ೬,೧೧,೩೦,೭೦೪ ಜನಸಂಖ್ಯೆಯನ್ನು ಹೊಂದಿದೆ. ಒಟ್ಟು ೩೦ ಜಿಲ್ಲೆಗಳು ೧೭೬ ತಾಲೂಕುಗಳನ್ನು ೭೪೫ ಹೋಬಳಿಗಳು, ೨೭೦ ನಗರಗಳು



ಹಾಗೂ ೨೭,೪೮೧ ಗ್ರಾಮಗಳನ್ನು ಹೊಂದಿದ್ದು ವಿಸ್ತೀರ್ಣದಲ್ಲಿ ದೇಶದ ೮ನೇ ದೊಡ್ಡ ರಾಜ್ಯವಾಗಿ ಗುರುತಿಸಿಕೊಂಡಿದೆ.[೩] ಇದು ದಕ್ಷಿಣ ಪ್ರಸ್ಥ ಭೂಮಿಯ ಪಶ್ಚಿಮ ಭಾಗದಲ್ಲಿದ್ದು ೧೧.೫° ಮತ್ತು ೧೮.೫° ಉತ್ತರ ಅಕ್ಷಾಂಶ ಹಾಗೂ ೭೪.೧೨° ಮತ್ತು ೭೮.೫° ಪೂರ್ವ ರೇಖಾಂಶಗಳ ನಡುವೆ ನೆಲೆಗೊಂಡಿದೆ. ಪೂರ್ವದಿಂದ ಪಶ್ಚಿಮಕ್ಕೆ ೪೦೦ ಕಿ.ಮೀ ಹಾಗೂ ಉತ್ತರದಿಂದ ದಕ್ಷಿಣಕ್ಕೆ ೭೦೦ ಕಿ. ಮೀ.ವರೆಗೆ ವ್ಯಾಪಿಸಿದೆ.[೪]

ಕರ್ನಾಟಕ ರಾಜ್ಯದಲ್ಲಿ ಮೂರು ಮುಖ್ಯ ಭೌಗೋಳಿಕ ಪ್ರದೇಶಗಳಿವೆ.

- ಕರಾವಳಿ ಪ್ರದೇಶ - ಪಶ್ಚಿಮ ಘಟ್ಟಗಳು ಮತ್ತು ಅರಬ್ಬೀ ಸಮುದ್ರದ ನಡುವೆ ಇರುವ ತಗ್ಗಿನ ಪ್ರದೇಶ. ಇದು ಸಾಕಷ್ಟು ಮಳೆ ಪಡೆಯುತ್ತದೆ.
- ಮಲೆನಾಡು- ಪಶ್ಚಿಮ ಘಟ್ಟಗಳು ಅರಬ್ಬೀ ಸಮುದ್ರದ ತೀರದೊಂದಿಗೆ ಸಾಗುವ ಪರ್ವತ ಸರಣಿ ಸರಾಸರಿ ಸಮುದ್ರ ಮಟ್ಟದಿಂದ ೯೦೦ ಮೀಟರ್ ಎತ್ತರದಲ್ಲಿದೆ. ಇಲ್ಲೂ ಸಾಕಷ್ಟು ಮಳೆಯಾಗುತ್ತಿದೆ.
- ಬಯಲು ಸೀಮೆ- ದಕ್ಷಿಣ ಪ್ರಸ್ಥಭೂಮಿ; ರಾಜ್ಯದ ಒಳನಾಡು; ಮಳೆ ಕಡಿಮೆ ಇರುವ ಪ್ರದೇಶ.

ಕೃಷಿ ಸಾಮರ್ಥ್ಯದ ಆಧಾರದ ಮೇಲೆ ಕರ್ನಾಟಕದಲ್ಲಿರುವ ಮಣ್ಣನ್ನು ಆರು ಪ್ರಕಾರಗಳಾಗಿ ವಿಂಗಡಿಸಲಾಗಿದೆ. ಕೆಂಪು ಮಣ್ಣು, ಜೇಡಿ ಮಣ್ಣು, ಕಪ್ಪು ಮಣ್ಣು, ಮೆಕ್ಕಲು ಮಣ್ಣು, ಅರಣ್ಯ ಮಣ್ಣು ಮತ್ತು ಕರಾವಳಿ ಮಣ್ಣು. ಹವಾಮಾನದ ಆಧಾರದ ಮೇಲೆ ಕರ್ನಾಟಕವನ್ನು ಮೂರು ವಲಯಗಳಾಗಿ ವಿಂಗಡಿಸಲಾಗಿದೆ. ಕರಾವಳಿ, ಉತ್ತರ ಒಳನಾಡು ಹಾಗೂ ದಕ್ಷಿಣ ಒಳನಾಡು. ಇದರಲ್ಲಿ ಕರಾವಳಿ ವಲಯವು ಅತೀ ಹೆಚ್ಚು ಮಳೆ (ವಾರ್ಷಿಕ ಸರಾಸರಿ ಮಳೆ ೩೬೩೮.೫ ಮಿಲಿ ಮೀಟರ್) ಪಡೆಯುತ್ತದೆ. ಕರ್ನಾಟಕದ ಸುಮಾರು ೩೮೭೨೪ ಚದರ ಕಿಲೋಮೀಟರ್ ಪ್ರದೇಶವು ಅರಣ್ಯದಿಂದ ಆವೃತ್ತವಾಗಿದೆ.ಕರ್ನಾಟಕ ರಾಜ್ಯದ ಭೌಗೋಳಿಕ ಪರಿಚಯವನ್ನು ಕೋಷ್ಟಕ ೩.೧ ರಲ್ಲಿ ನೀಡಲಾಗಿದೆ.

ಕೋಷ್ಟಕ : ೩.೧ ಕರ್ನಾಟಕ ರಾಜ್ಯದ ಭೂ ಬಳಕೆ (೨೦೦೯–೧೦)

ಕ್ರಮ ಸಂಖ್ಯೆ	ವರ್ಗೀಕರಣ	ಪ್ರದೇಶ (೦೦೦ ಹೆಕ್ಟೇರು)	ಸರಾಸರಿ
೧.	ಒಟ್ಟು ಭೌಗೋಳಿಕ ಪ್ರದೇಶ	೧೯,೧೭೯	–
೨.	ಸಮೀಕ್ಷೆಗೆ ಒಳಪಡಿಸಿ ವರ್ಗೀಕರಿಸಿದ ಭೂಮಿ	೧೯೦.೫೧	೧೦೦
೩.	ಅರಣ್ಯಗಳು	೩೦೭೨	೧೬.೧೩
೪.	ಬೇಸಾಯಕ್ಕೆ ಲಭ್ಯವಿಲ್ಲದ ಭೂಮಿ	೨೧೬೩	೧೧.೩೫
೫.	ಖಾಯಂ ಹುಲ್ಲುಗಾವಲು ಹಾಗೂ ಮೇವಿನ ಭೂಮಿ	೯೨೩	೪.೮೫
೬.	ಮರಮಟ್ಟುಗಳು ಮತ್ತು ತೋಪುಗಳಿಂದ ಕೂಡಿದ ಭೂಮಿ	೨೯೦	೧.೫೨
೭.	ವ್ಯವಸಾಯ ಯೋಗ್ಯ ಪಾಳು ಭೂಮಿ	೪೧೩	೧೨.೧೭
೮.	ಬೀಳು ಬಿಟ್ಟ ಭೂಮಿ, ಚಾಲ್ತಿ ಉಪಯೋಗದಲ್ಲಿರುವ ಬೀಳುಬಿಟ್ಟ ಭೂಮಿಯನ್ನು ಹೊರತು ಪಡಿಸಿ	೫೧೬	೨.೭೧
೯.	ಚಾಲ್ತಿ ಬೀಳುಬಿಟ್ಟ ಭೂಮಿ	೧೫೦	೭.೮೭
೧೦.	ಬಿತ್ತಲಾದ ನಿವ್ವಳ ಪ್ರದೇಶ	೧೦೧೭೪	೫೩.೪

Source: Land use statistics, Ministry of Agriculture. GOI 2009-10.

ಭಾರತದ ಒಟ್ಟು ಭೂಭಾಗದ ಶೇ. ೫.೮೩ ರಷ್ಟು ಹೊಂದಿದ ಕರ್ನಾಟಕ ದೇಶದ ೮ ನೇ ಅತೀ ದೊಡ್ಡ ರಾಜ್ಯವೆಂದೆನಿಸಿಕೊಂಡಿದ್ದು ಜನಸಂಖ್ಯೆಯಲ್ಲಿ ಒಂಭತ್ತನೆಯ ಸ್ಥಾನದಲ್ಲಿದೆ. ಒಂದು ಪ್ರದೇಶದ ಭೂಬಳಕೆಯ ಮಾದರಿಯು ಅಲ್ಲಿನ ಆರ್ಥಿಕ ಮತ್ತು ಸಾಮಾಜಿಕ ರೂಪು ರೇಷೆಯನ್ನು ಅಳೆಯಲು ಸಹಕಾರಿಯಾಗಿದೆ. ಅದು ಭೂ ಸಂಪನ್ಮೂಲಗಳ ಗರಿಷ್ಠವಾದ ಬಳಕೆಯನ್ನು ಪಡೆಯುವ ಸಾಧ್ಯತೆಗಳನ್ನು ತಿಳಿಯುವುದು ಮತ್ತು ವ್ಯವಸಾಯ ಯೋಗ್ಯ ಪ್ರದೇಶವನ್ನು ಹೆಚ್ಚಿಸುವ ಸಾಧ್ಯತೆಗಳನ್ನು ತಿಳಿಯುವುದಕ್ಕೆ ಸಹಕಾರಿಯಾಗಿದೆ. ವೈವಿಧ್ಯಮಯ ಭೌಗೋಳಿಕ ನೆಲೆಯನ್ನು ಹೊಂದಿರುವ ಕರ್ನಾಟಕವು ಶೇ. ೧೬.೧೩ ರಷ್ಟು ಅರಣ್ಯ ಭಾಗವನ್ನು ಹೊಂದಿದ್ದು ಇದು ರಾಷ್ಟ್ರೀಯ ಸರಾಸರಿ ಅರಣ್ಯ ಪ್ರದೇಶದ ಕನಿಷ್ಠ ಮಿತಿ (೨೩%)ಗಿಂತ ಕಡಿಮೆ ಇರುವುದು ಕಂಡು ಬರುತ್ತದೆ. ಶೇ. ೫೩ ಕ್ಕಿಂತ ಹೆಚ್ಚಿನ ಭೂಭಾಗ ಕೃಷಿಗೆ ಬಳಸಿರುವುದು ಕರ್ನಾಟಕದ ವೈಶಿಷ್ಟ್ಯತೆಯಾಗಿದ್ದು ದೇಶದ ಇತರೆ ಯಾವುದೇ ರಾಜ್ಯಕ್ಕಿಂತ ಹೆಚ್ಚು ಎಂಬುದು ಉಲ್ಲೇಖಾರ್ಹ. ಶೇ. ೧೧.೩೫ ರಷ್ಟು ಭೂಮಿ ಬೇಸಾಯಕ್ಕೆ ಲಭ್ಯವಿಲ್ಲದ ಭೂಮಿ ಏಕೆಂದರೆ ಈ ಭೂಮಿಯು ಜನ ನಿವಾಸ, ಪಟ್ಟಣಗಳ ಹಾಗೂ ಸಾರಿಗೆ ಅಭಿವೃದ್ಧಿಗಾಗಿ ಬಳಸಲ್ಪಡುತ್ತಿದೆ. ಮಾತ್ರವಲ್ಲ ಇಂತಹ ಭೂಮಿಗೆ ಬೇಡಿಕೆಯು ಹೆಚ್ಚಾಗುತ್ತಾ ಸಾಗಿದೆ. ಶೇ. ೪.೮ ರಷ್ಟು ಭೂ ಪ್ರದೇಶ ಖಾಯಂ ಹುಲ್ಲುಗಾವಲು ಹಾಗೂ ಮೇವಿನ ಭೂಮಿಗಳಾಗಿವೆ. ಶೇ. ೧.೫ ರಷ್ಟು ಭೂಮಿ ಸಣ್ಣ ತೋಪುಗಳು ಹಾಗೂ ಮರ ಮಟ್ಟುಗಳಿಂದ ಕೂಡಿದ್ದರೆ, ಶೇ. ೧೨.೧೭ ರಷ್ಟು ಭೂಮಿ ವ್ಯವಸಾಯ ಯೋಗ್ಯ ಪಾಳು ಭೂಮಿಯಾಗಿದೆ. ಬೀಳು ಬಿಟ್ಟ ಭೂಮಿ ಹಾಗೂ ಚಾಲ್ತಿ ಬೀಳುಬಿಟ್ಟ ಭೂಮಿ ಕ್ರಮವಾಗಿ ಶೇ. ೨.೭೧ ಹಾಗೂ ಶೇ. ೭.೮೭ ರಷ್ಟಿದ್ದು ಇಂತಹ ಭೂಮಿಯನ್ನು ಸಾಧ್ಯವಿದ್ದಷ್ಟು ಕೃಷಿ ಯೋಗ್ಯ ಭೂಮಿಯನ್ನಾಗಿಸುವ ಅಗತ್ಯವಿದೆ. ಭೂಮಿಯ ಒಟ್ಟು ಪೂರೈಕೆಯು ಸ್ಥಿರವಾಗಿರುವುದರಿಂದ ಹಾಗೂ ವಿವಿಧ ಉದ್ದೇಶಗಳಿಗಾಗಿ ಭೂಮಿಯ ಬೇಡಿಕೆ ಹೆಚ್ಚುತ್ತಿರುವುದರಿಂದ ಲಭ್ಯವಿರುವ ಭೂಮಿಯನ್ನು ವಿವಿಧ ಉದ್ದೇಶಗಳಿಗೆ ಪರಿಣಾಮಕಾರಿಯಾಗಿ ಹಂಚಬೇಕಾಗುತ್ತದೆ. ಸಾಧ್ಯವಾದಷ್ಟು ವ್ಯವಸಾಯ ಯೋಗ್ಯ ಭೂಮಿಗಳಲ್ಲಿ ಅನ್ಯ ಉದ್ದೇಶಗಳಿಗೆ ಇನ್ನು ಹೆಚ್ಚಿನ ಕಬಳಿಕೆಗೆ ಅವಕಾಶ ನೀಡಬಾರದು.


೨೦೧೧ ರ ಜನಗಣತಿ ಪ್ರಕಾರ ಕರ್ನಾಟಕದ ಜನಸಂಖ್ಯೆ ೬,೧೧,೩೦,೭೦೪ ಆಗಿದೆ. ಇದರಲ್ಲಿ ಪುರುಷರ ಪಾಲು ಶೇಕಡಾ ೫೦.೮೧ ಹಾಗೂ ಸ್ತ್ರೀಯರ ಪಾಲು ಶೇಕಡಾ ೪೯.೧೯%. ಅಂದರೆ ಪ್ರತಿ ಸಾವಿರ ಪುರುಷರಿಗೆ ೯೬೮ ಸ್ತ್ರೀಯರಿದ್ದಾರೆ. ಇದು ರಾಷ್ಟ್ರೀಯ ಸರಾಸರಿಗಿಂತ (ಪ್ರತಿ ೧೦೦೦ಕ್ಕೆ ೯೪೦ ರಂತೆ) ಹೆಚ್ಚು ಎಂಬುದು ಗಮನಾರ್ಹ. ಮಾತ್ರವಲ್ಲದೆ ಕಳೆದ ಒಂದು ದಶಕದಲ್ಲಿ ಲಿಂಗಾನುಪಾತದಲ್ಲಿ ಸುಧಾರಣೆಯು ಕಂಡು ಬಂದಿದೆ. (೨೦೦೧ ರಲ್ಲಿ ಪ್ರತಿ ಸಾವಿರಕ್ಕೆ ೯೬೫ ಆಗಿತ್ತು) ಇದು ಕರ್ನಾಟಕ ರಾಜ್ಯದ ಬದಲಾಗುತ್ತಿರುವ ಆರ್ಥಿಕ ಹಾಗೂ ಸಾಮಾಜಿಕ ಪ್ರಗತಿಯ ದ್ಯೋತಕ ಎನಿಸಿಕೊಂಡಿದೆ.

ಕನಾಟಕದ ಜನಸಾಂದ್ರತೆಯು ಪ್ರತೀ ಚ.ಕಿ.ಮೀ.ಗೆ ೩೧೮.೮ ಆಗಿದೆ. ಶೇಕಡಾ ೭೫.೬ ರಷ್ಟು ಸಾಕ್ಷರತೆಯಿದ್ದು ಇದರಲ್ಲಿ ಪುರುಷರ ಸಾಕ್ಷರತೆಯು ೮೨.೮೫% ಹಾಗೂ ಸ್ತ್ರೀಯರ ಸಾಕ್ಷರತೆಯು ೬೮.೧೩%ರಷ್ಟಿದೆ. ಜನಸಂಖ್ಯೆಯ ೮೩% ಹಿಂದುಗಳು ೧೧% ಮುಸಲ್ಮಾನರು ೪% ಕ್ರೈಸ್ತರು ೦.೭೮% ಜೈನರು, ೦.೭೩% ಬೌದ್ಧರು ಮತ್ತು ಉಳಿದವರು ಅನ್ಯ ಧರ್ಮದವರು. ಕರ್ನಾಟಕದ ಜನನ ದರವು ೧೯.೯ (ಪ್ರತಿ ಸಾವಿರ ಜನರಿಗೆ) ಮೃತ್ಯು ದರವು ೭.೩ (ಪ್ರತಿ ಸಾವಿರ ಜನರಿಗೆ) ಆಗಿರುತ್ತದೆ. ಕನ್ನಡವು ಕರ್ನಾಟಕದ ಆಡಳಿತ ಭಾಷೆಯಾಗಿದ್ದು ೬೪.೭೫ ಶೇಕಡಾ ಜನರ ಮಾತೃ ಭಾಷೆಯಾಗಿರುತ್ತದೆ.

ಕರ್ನಾಟಕವು ಭಾರತದ ಅತ್ಯಂತ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ರಾಜ್ಯವಾಗಿದ್ದು, ೨೦೦೮-೦೯ ರ ಆರ್ಥಿಕ ಬೆಳವಣಿಗೆ ದರದ ಪ್ರಕಾರವಾಗಿ ರಾಜ್ಯದ ಆರ್ಥಿಕ ದರವು ಡಾಲರ್ ಶೇ. ೫೮.೨೩ ರಷ್ಟಿದೆ ಎಂದು ಅಂದಾಜಿಸಲಾಗಿದೆ. ತಲಾ

ಆದಾಯದ ಜಿ.ಡಿ.ಪಿ. ಅಂಕಿ ಅಂಶದ ಪ್ರಕಾರ ರಾಜ್ಯವು ದೇಶದ ೬ ನೇ ಸ್ಥಾನದಲ್ಲಿ ಇದೆ. ಕರ್ನಾಟಕದ ಬಡತನದ ಅಂದಾಜು ೧೭% ಆಗಿದ್ದು ದೇಶದಲ್ಲಿನ ಬಡತನದ ಅಂದಾಜು ಶೇ. ೨೭ ಆಗಿರುತ್ತದೆ.

ಕೃಷಿ ರಂಗವು ಕೈಗಾರಿಕೆ ಮತ್ತು ಸೇವಾ ರಂಗಗಳನ್ನು ಬಲ ಪಡಿಸುವ ಹಾಗೂ ಸುಸ್ಥಿರ ಅಭಿವೃದ್ಧಿಯನ್ನುಂಟು ಮಾಡುವ ಪ್ರಾಥಮಿಕ ರಂಗವಾಗಿದೆ. ಆದುದರಿಂದಲೇ ದೇಶದ ಆರ್ಥಿಕತೆಯಲ್ಲಿ ಕೃಷಿ ರಂಗಕ್ಕೆ ಅತ್ಯಂತ ಮಹತ್ವವಿದೆ. ೨೦೧೧-೧೨ ರ ವರದಿಯನ್ವಯ ಕರ್ನಾಟಕ ರಾಜ್ಯದ ಒಟ್ಟು ದೇಶೀ ಉತ್ಪನ್ನವು ರೂ. ೨೯೭೯೬೪ ಕೋಟಿಗಳಾಗಿದೆ. ಕನಾಟಕ ರಾಜ್ಯದ ನಿವ್ವಳ ತಲಾ ಆದಾಯ ಸ್ಥಿರ ಬೆಲೆಯಲ್ಲಿ ರೂ. ೪೧೫೪೫ ಎಂದು ಅಂದಾಜಿಸಲಾಗಿದೆ. ಒಟ್ಟು ದೇಶೀ ಉತ್ಪನ್ನದಲ್ಲಿ ಶೇ. ೧೫.೯ ರಷ್ಟು ಪ್ರಾಥಮಿಕ ವಲಯದಿಂದಲೂ, ಶೇ. ೨೭.೭ ರಷ್ಟು ಆನುಷಂಗಿಕ ವಲಯದಿಂದಲೂ, ಶೇ. ೫೬.೩ ರಷ್ಟು ಸೇವಾ ವಲಯದಿಂದಲೂ ಬರುತ್ತಿದೆ. (ಚಿತ್ರ ೩.೧)



ಚಿತ್ರ ೩.೧ ಕರ್ನಾಟಕದ ದೇಶೀ ಉತ್ಪನ್ನದ ಹಂಚಿಕೆ

ಕರ್ನಾಟಕ ರಾಜ್ಯದಲ್ಲಿ ಒಟ್ಟು ೫೬% ಮಂದಿ ಕೃಷಿ ಆಧಾರಿತ ಉದ್ಯೋಗಸ್ಥರಾಗಿದ್ದು ಒಟ್ಟು ೧೨.೩೧ ಮಿಲಿಯನ್ ಹೆಕ್ಟೇರುಗಳಷ್ಟು ಭೂಮಿಯನ್ನು ಕೃಷಿಗಾಗಿ ಬಳಸಲಾಗುತ್ತಿದೆ. ಅಂದರೆ ರಾಜ್ಯದ ಒಟ್ಟು ಭೂ ಪ್ರದೇಶದ ೬೪% ಶೇಕಡಾದಷ್ಟು ಕೃಷಿಗಾಗಿ ಬಳಕೆಯಾಗುತ್ತಿದೆ. ಬಹುತೇಕ ಮಳೆ ಆಧಾರಿತ ಕೃಷಿಯಾಗಿದ್ದು ೨೬.೫೫% ಕೃಷಿ ಭೂಮಿ ಮಾತ್ರ ನೀರಾವರಿ ಸೌಲಭ್ಯವನ್ನು ಹೊಂದಿದೆ. ಕರಾವಳಿ ಪ್ರದೇಶದಲ್ಲಿ ಭತ್ತ, ತೆಂಗು,ಅಡಿಕೆ, ಕಬ್ಬು, ರಬ್ಬರ್, ಗೇರು ಇನ್ನಿತರ ಬೆಳೆಗಳನ್ನು ಬೆಳೆಸುತ್ತಿದ್ದಾರೆ. ಇತರೇ ಬೆಳೆಗಳ ಸಾಲಿನಲ್ಲಿ ಜೋಳ, ರಾಗಿ, ಕಾಫಿ, ಚಹಾ, ಏಲಕ್ಕಿ, ದ್ರಾಕ್ಷಿ ಇತ್ಯಾದಿಗಳು ಸೇರುತ್ತವೆ. ಸುಮಾರು ೨೦.೩೮ ಲಕ್ಷ ಹೆಕ್ಟೇರು ಪ್ರದೇಶದಲ್ಲಿ ತೋಟಗಾರಿಕಾ ಬೆಳೆಯನ್ನು ಬೆಳೆಯುತ್ತಿದ್ದು, ೧೬೨.೩೬ ಲಕ್ಷ ಮಿಲಿಯನ್ ಟನ್‌ಗಳು ಉತ್ಪಾದನೆಯಾಗುತ್ತಿದೆ. ಒಟ್ಟು ಕೃಷಿ ಆದಾಯದಲ್ಲಿ ಶೇ.೪೦ ರಷ್ಟು ಆದಾಯ ತೋಟಗಾರಿಕಾ ಬೆಳೆಯಿಂದ ಬರುತ್ತಿದ್ದು ಇದು ರಾಜ್ಯದ ಒಟ್ಟು ದೇಶೀ ಉತ್ಪಾದನೆಯಲ್ಲಿ ಶೇ. ೧೭ ರಷ್ಟಾಗುತ್ತದೆ. ಪುಷ್ಪೋದ್ಯಮದಲ್ಲಿ ಕರ್ನಾಟಕ ಭಾರತದಲ್ಲಿ ಎರಡನೇ ಸ್ಥಾನದಲ್ಲಿದ್ದು ಸುಮಾರು ರೂ. ೫೦೦ ಮಿಲಿಯ ಮೌಲ್ಯದ ೭೦೦ ಟನ್‌ಗಳಷ್ಟು ಪುಷ್ಪಗಳನ್ನು ಉತ್ಪಾದಿಸುತ್ತಿದೆ.

ಭಾರತದ ಕೈಗಾರಿಕಾ ರಂಗದಲ್ಲಿ ಅದರಲ್ಲೂ ಉನ್ನತ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ವಿದ್ಯುನ್ಮಾನ ಉತ್ಪಾದನಾ ರಂಗ, ಇತ್ತೀಚೆಗಿನ ವರ್ಷಗಳಲ್ಲಿ ನ್ಯಾನೋ ತಂತ್ರಜ್ಞಾನಗಳಲ್ಲಿ ಕರ್ನಾಟಕ ವಿಶೇಷ ಸಾಧನೆಯನ್ನು ಮಾಡುತ್ತಿದ್ದು, ೨೦೧೦-೧೧ ರಲ್ಲಿ



ಸಂಘಟಿತ ಕೈಗಾರಿಕೆಗಳು ಶೇ. ೭.೯೬ ರ ದರದಲ್ಲಿ ಪ್ರಗತಿಯನ್ನು ದಾಖಲಿಸಿವೆ. ೨೦೦೯–೧೦ ರ ವಾರ್ಷಿಕ ಸಮೀಕ್ಷೆಯ ಅಂಕಿ ಅಂಶಗಳ ಪ್ರಕಾರ ದೇಶದ ಒಟ್ಟು ನೋಂದಾಯಿಸಲ್ಪಟ್ಟ ಕೈಗಾರಿಕೆಗಳಲ್ಲಿ ಕರ್ನಾಟಕದ ಪಾಲು ಶೇ. ೫.೩೮ ಆಗಿದ್ದು ಒಟ್ಟು ಉತ್ಪಾದನೆಯಲ್ಲಿ ಶೇ. ೬.೨೯ ರಷ್ಟು ಭಾಗವನ್ನು ಹೊಂದಿದೆ. ಸಣ್ಣ ಹಾಗೂ ಮಧ್ಯಮ ಮಟ್ಟದ ಉದ್ಯಮಗಳು ಕರ್ನಾಟಕದ ಕೈಗಾರಿಕಾ ವಲಯದಲ್ಲಿ ಕ್ಷಿಪ್ರಗತಿಯಲ್ಲಿ ಬೆಳೆಯುತ್ತಿರುವ ಭಾಗವಾಗಿದ್ದು ೨೦೧೦–೧೧ ರಲ್ಲಿ ೧೮೪೩೪ ಘಟಕಗಳು ನೋಂದಾಯಿಸಲ್ಪಟ್ಟಿದ್ದು ಒಟ್ಟು ರೂ. ೧೨೦೬೨೩ ಲಕ್ಷ ಹೂಡಿಕೆಯನ್ನು ಮಾಡುವುದರೊಂದಿಗೆ ೧೧೧೨೨೬ ಮಂದಿಗೆ ಉದ್ಯೋಗವನ್ನು ಕಲ್ಪಿಸಿದೆ.

ಬ್ಯಾಂಕಿಂಗ್ ಕ್ಷೇತ್ರದಲ್ಲಿಯೂ ಸಹಾ ರಾಜ್ಯವು ಮುಂಚೂಣಿಯಲ್ಲಿದ್ದು ದೇಶದ ಒಟ್ಟು ೧೯ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ೭ ಬ್ಯಾಂಕುಗಳ ಮೂಲ ನೆಲೆಯಿರುವುದು ಕರ್ನಾಟಕದ ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ. ೨೦೦೨ ರ ಅಂಕಿ ಅಂಶಗಳ ಅಂದಾಜಿನಂತೆ ರಾಜ್ಯದಲ್ಲಿ ಒಟ್ಟು ೪೭೬೭ ವಿವಿಧ ಬ್ಯಾಂಕುಗಳ ಶಾಖೆಗಳಿದ್ದು, ಪ್ರತಿ ಶಾಖೆಯು ತಲಾ ಹನ್ನೊಂದು ಸಾವಿರ ಜನರಿಗೆ ತಮ್ಮ ಸೇವೆಯನ್ನು ನೀಡುತ್ತಿದೆ.

ಕರ್ನಾಟಕವು ರೇಷ್ಮೆ ಉದ್ಯಮಕ್ಕೂ ಹೆಸರಾಗಿದ್ದು ಕನಾಟಕದ ಮೈಸೂರು ಸಿಲ್ಕ್ ವಿಶ್ವ ವ್ಯಾಪಿ ಮನ್ನಣೆ ಪಡೆದಿದೆ. ಪ್ರವಾಸೋದ್ಯಮದಲ್ಲೂ ಕರ್ನಾಟಕ ತನ್ನದೇ ಆದ ವೈಶಿಷ್ಟ್ಯತೆಗಳನ್ನು ಗಳಿಸಿಕೊಂಡಿದ್ದು, ಅನೇಕ ಅಭಯಾರಣ್ಯಗಳು, ವನ್ಯಧಾಮಗಳು, ಐತಿಹಾಸಿಕ ಸ್ಥಳಗಳು, ಸಮುದ್ರ ತೀರ ಪ್ರದೇಶಗಳನ್ನು ಮತ್ತು ಧಾರ್ಮಿಕ ಕ್ಷೇತ್ರಗಳನ್ನು ಹೊಂದಿದ್ದು ದೇಶ ವಿದೇಶಗಳಿಂದ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಕಲೆ ಸಾಹಿತ್ಯ ಸಂಗೀತ ನೃತ್ಯ ಮೊದಲಾದ ಕಲಾ ಪ್ರಕಾರಗಳಲ್ಲಿಯೂ ಕರ್ನಾಟಕ ಹೆಸರುವಾಸಿಯಾಗಿದೆ.

೩.೨ ಕರ್ನಾಟಕದಲ್ಲಿ ಗೇರು ಕೃಷಿ

ಗೇರು ಬೀಜದ ಉತ್ಪಾದನೆ ಸಂಸ್ಕರಣೆ ಹಾಗೂ ನಿರ್ಯಾತದಲ್ಲಿ ಕರ್ನಾಟಕ ರಾಜ್ಯಕ್ಕೆ ಒಂದು ಮಹತ್ವದ ಸ್ಥಾನವಿದ್ದು, ಇದು ಭಾರತದ ಗೇರು ರಾಜ್ಯವೆಂದೇ ಪ್ರಸಿದ್ಧಿಯಾಗಿದೆ. ಪ್ರಸ್ತುತ ದೇಶದಲ್ಲಿ ಕನಾಟಕ ಗೇರು ಉತ್ಪಾದನೆಯ ಪ್ರದೇಶದ ವಿಸ್ತೀರ್ಣದಲ್ಲಿ ೫ ನೇ ಸ್ಥಾನದಲ್ಲಿದ್ದು, (೧೨.೫೯%), ಉಳಿದಂತೆ ಅನುಕ್ರಮವಾಗಿ ಆಂಧ್ರ ಪ್ರದೇಶ (೧೯.೩೬%) ಮಹಾರಾಷ್ಟ್ರ (೧೯.೧೫%), ಒರಿಸ್ಸಾ (೧೫.೭೬%) ಹಾಗೂ ತಮಿಳುನಾಡು (೧೪.೨೮%) ಪಡೆದುಕೊಂಡಿದೆ. ಕಳೆದ ಒಂದು ದಶಕದಲ್ಲಿ ಗೇರು ಬೆಳೆಯುವ ಪ್ರದೇಶ ಕರ್ನಾಟಕದಲ್ಲಿ ೭೧,೦೦೦ ಹೆಕ್ಟೇರುಗಳಿಂದ ೧,೧೯,೦೦೦ ಹೆಕ್ಟೇರುಗಳಿಗೆ ಅಂದರೆ ೬೭.೬% ದಷ್ಟು ಏರಿಕೆಯಾಗಿದ್ದು, ಪ್ರಸ್ತುತ ಕರ್ನಾಟಕದಲ್ಲಿ ೫೭,೦೦೦ ಮಿಲಿಯನ್ ಟನ್‌ಗಳಷ್ಟು ಕಚ್ಚಾಗೇರಿನ ಉತ್ಪಾದನೆಯಾಗುತ್ತಿದೆ.[೫] ಕೇರಳವನ್ನು ಹೊರತು ಪಡಿಸಿ ಬೇರೆ ಎಲ್ಲಾ ರಾಜ್ಯಗಳಲ್ಲೂ ಗೇರು ಉತ್ಪಾದನಾ ಪ್ರದೇಶ ಹೆಚ್ಚಾಗಿದೆ. ಆದರೆ ಕೇರಳದಲ್ಲಿ ಇದು ೨೦೦೧–೦೨ ರಲ್ಲಿ ೧ ಲಕ್ಷ ಹೆಕ್ಟೇರುಗಳಷ್ಟಿದ್ದು, ೨೦೧೦–೧೨ ರಲ್ಲಿ ಇದು ೭೮,೦೦೦ ಹೆಕ್ಟೇರಿಗೆ ಕುಸಿದಿದೆ. ಕಾರಣ ೧೯೬೦ ರ ದಶಕದಲ್ಲಿ ಕೇರಳ ಸರಕಾರ ಅನುಷ್ಠಾನಗೊಳಿಸಿದ ಭೂ ಮಸೂದೆ ಕಾಯಿದೆಯಿಂದಾಗಿ ಗೇರು ತೋಪುಗಳು ರಬ್ಬರ್ ಪ್ಲಾಂಟೇಶನ್‌ಗಳಾಗಿ ಪರಿವರ್ತನೆ ಹೊಂದಿದವು.

ಕರ್ನಾಟಕದಲ್ಲಿ ಪಶ್ಚಿಮ ಕರಾವಳಿಯ ಭಾಗ ಪ್ರಮುಖ ಗೇರು ಬೆಳೆಯುವ ಹಾಗೂ ಸಂಸ್ಕರಿಸುವ ಕೇಂದ್ರವೆಂದು ಗುರುತಿಸಿಕೊಂಡಿದೆ. ಕಳೆದ ಒಂದು ದಶಕಗಳಲ್ಲಿ ಕರ್ನಾಟಕದ ಗೇರು ಬೆಳೆಯ ಉತ್ಪದನಾ ಪ್ರದೇಶ ಹಾಗೂ ಉತ್ಪಾದನೆಯನ್ನು ಕೋಷ್ಟಕ ೩.೨ ರಲ್ಲಿ ಸೂಚಿಸಲಾಗಿದೆ.

ಕೋಷ್ಟಕ: ೩.೨. ಭಾರತದಲ್ಲಿ ಕರ್ನಾಟಕದ ಸ್ಥಾನ

ವರ್ಷ	ವಿಸ್ತೀರ್ಣ (ಹೆಕ್ಟೇರುಗಳಲ್ಲಿ)		ಉತ್ಪಾದನೆ ಟನ್‌ಗಳಲ್ಲಿ)	
	ಭಾರತ	ಕರ್ನಾಟಕ	ಭಾರತ	ಕರ್ನಾಟಕ
೨೦೦೦-೦೧	೭೦೦೦೦೦	೯೧೦೦೦	೪೫೦೦೦೦	೪೨೦೦೦
೨೦೦೧-೦೨	೭೫೦೦೦೦	೯೦೦೦೦	೪೭೦೦೦೦	೪೦೦೦೦
೨೦೦೨-೦೩	೭೭೦೦೦೦	೯೨೦೦೦	೫೦೦೦೦೦	೪೦೦೦೦
೨೦೦೩-೦೪	೭೮೦೦೦೦	೯೪೦೦೦	೫೩೫೦೦೦	೪೬೦೦೦
೨೦೦೪-೦೫	೮೨೦೦೦೦	೯೫೦೦೦	೫೪೪೦೦೦	೪೩೦೦೦
೨೦೦೫-೦೬	೮೩೭೦೦೦	೧೦೦೦೦೦	೫೭೩೦೦೦	೪೫೦೦೦
೨೦೦೬-೦೭	೮೫೪೦೦೦	೧೦೨೦೦೦	೬೨೦೦೦೦	೫೨೦೦೦
೨೦೦೭-೦೮	೮೬೮೦೦೦	೧೦೩೦೦೦	೬೬೫೦೦೦	೫೬೦೦೦
೨೦೦೮-೦೯	೮೯೩೦೦೦	೧೦೭೦೦೦	೬೯೫೦೦೦	೬೦೦೦೦
೨೦೦೯-೧೦	೯೨೩೦೦೦	೧೧೮೦೦೦	೬೧೩೦೦೦	೫೩೦೦೦
೨೦೧೦-೧೧	೯೪೫೦೦೦	೧೧೯೦೦೦	೬೫೩೦೦೦	೫೭೦೦೦

Source: Cashew and Coca Journal, 2011. Vol VII, No. 2 P.33

ಕರ್ನಾಟಕವು ದೇಶದ ಗೇರು ಉತ್ಪಾದನೆಯಲ್ಲಿ ನಿರ್ಣಾಯಕ ಪಾತ್ರ ವಹಿಸಿರುವುದು ಮೇಲಿನ ಕೋಷ್ಠಕದಿಂದ ತಿಳಿದುಬರುತ್ತದೆ. ಕಳೆದ ಒಂದು ದಶಕದಲ್ಲಿ ಕರ್ನಾಟಕದ ಸ್ಥಾನದಲ್ಲಿ ಗಮನಾರ್ಹವಾದಂತಹ ಬದಲಾವಣೆ ಆಗಿಲ್ಲ ಎಂಬುದು ವಿದಿತವಾಗುತ್ತದೆ. ೨೦೦೦-೦೧ ರಲ್ಲಿ ಭಾರತದ ಗೇರು ಬೆಳೆಯುವ ಪ್ರದೇಶದ ವಿಸ್ತೀರ್ಣದಲ್ಲಿ ಕರ್ನಾಟಕ ಶೇ. ೧೩ ರಷ್ಟು ಹಾಗೂ ಉತ್ಪಾದನೆಯಲ್ಲಿ ಶೇ. ೯.೩ ರಷ್ಟು ಹೊಂದಿದ್ದರೆ, ೨೦೧೦-೧೧ ರಲ್ಲಿ ಅದು ಕ್ರಮವಾಗಿ ಶೇ. ೧೨.೬ ಹಾಗೂ ಶೇ. ೮.೭ ರಷ್ಟು ಆಗಿದೆ. ಅಂದರೆ ವಿಶೇಷವಾದಂತಹ ಬದಲಾವಣೆ ಇಲ್ಲಿ ಕಂಡು ಬರುತ್ತಿಲ್ಲ. ೨೦೦೦-೦೧ ರಿಂದ ೨೦೧೦-೧೧ರ ನಡುವೆ ಕರ್ನಾಟಕದಲ್ಲಿ ಗೇರು ಬೆಳೆಯುವ ಪ್ರದೇಶದಲ್ಲಿ ಶೇ. ೩೦.೮ ರಷ್ಟು ಏರಿಕೆ ಕಂಡು ಬಂದಿದ್ದು ಉತ್ಪಾದನೆಯಲ್ಲಿ ಶೇ. ೩೫.೭ ರಷ್ಟು ಹೆಚ್ಚಳ ಕಂಡು ಬಂದಿದೆ. ಗೇರು ಬೆಳೆ ಪ್ರದೇಶದ ವಿಸ್ತೀರ್ಣದೊಂದಿಗೆ ಉತ್ಪಾದನೆಯು ಹೆಚ್ಚುತ್ತಿದ್ದು ಕರ್ನಾಟಕದಲ್ಲಿ ಗೇರು ಕೃಷಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ ಎಂಬುದು ವೇದ್ಯವಾಗುತ್ತದೆ. ಗೇರು ಪ್ರದೇಶದ ವಿಸ್ತೀರ್ಣ ಹಾಗೂ ಉತ್ಪಾದನೆಯಲ್ಲಿ ಕರ್ನಾಟಕದ ಪಾಲನ್ನು ಚಿತ್ರ ೩.೨ ರಲ್ಲಿ ವಿವರಿಸಲಾಗಿದೆ.



ಚಿತ್ರ ೩.೨ ಕರ್ನಾಟಕದಲ್ಲಿ ಗೇರು ಪ್ರದೇಶದ ವಿಸ್ತೀರ್ಣ ಹಾಗೂ ಉತ್ಪಾದನೆ

ದೇಶದ ಗೇರು ರಾಜ್ಯವೆಂಬ ಪ್ರತೀತಿ ಪಡೆದ ಕರ್ನಾಟಕ ೨೦೦೦-೨೦೦೧ ರಲ್ಲಿ ದೇಶದ ಒಟ್ಟು ಗೇರು ಉತ್ಪಾದನಾ ಪ್ರದೇಶದಲ್ಲಿ ಶೇ. ೧೨ ರಷ್ಟು ಹಾಗೂ ಉತ್ಪಾದನೆಯಲ್ಲಿ ಶೇ. ೯.೩ ರಷ್ಟು ಹೊಂದಿತ್ತು. ನಂತರದ ವರ್ಷಗಳ್ಲ ಇದೇ ಪರಿಸ್ಥಿತಿ ಮುಂದುವರಿದಿದ್ದು ಹೆಚ್ಚಿನ ಏರಿಳಿತಗಳು ಕಂಡು ಬರಲಿಲ್ಲ. ೨೦೧೦-೧೧ ರಲ್ಲಿ ಗೇರು ಬೆಳೆಯುವ ಪ್ರದೇಶದ ವಿಸ್ತೀರ್ಣ ಶೇ. ೧೨ ರಷ್ಟು ಹಾಗೂ ಉತ್ಪಾದನೆ ಶೇ. ೮.೭ ರಷ್ಟು ಆಗಿರುವುದು ಕಂಡುಬರುತ್ತದೆ. ಕಳೆದ ದಶಕದಲ್ಲಿ ಕರ್ನಾಟಕದ ಗೇರು ಬೆಳೆಯ ವಿಸ್ತೀರ್ಣ ಹಾಗೂ ಉತ್ಪಾದನೆಯಲ್ಲಿ ವಿಶೇಷ ವ್ಯತ್ಯಾಸಗಳು ಇಲ್ಲದೇ ಇರುವುದನ್ನು ಅಂಕಿ ಅಂಶಗಳು ಸ್ಪಷ್ಟಪಡಿಸುತ್ತವೆ.

ಭಾರತದಲ್ಲಿ ಪ್ರಥಮ ಬಾರಿಗೆ ಪೋರ್ಚುಗೀಸರು ಗೇರು ಬೆಳೆಯನ್ನು ಪರಿಚಯಿಸಿದ ಸಂದರ್ಭದಲ್ಲಿ ಮೊದಲಿಗೆ ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಇದನ್ನು ಬೆಳೆದರು. ಅನಂತರದ ದಿನಗಳಲ್ಲಿ ಗೇರು ಬೆಳೆಯ ವೈಶಿಷ್ಟ್ಯತೆಯಿಂದಾಗಿ ಹೆಚ್ಚಿನ ಪ್ರಚಾರ ದೊರೆತು ಒಳನಾಡಿನ ಗುಡ್ಡಗಾಡು ಹಾಗೂ ಮೈದಾನ ಪ್ರದೇಶದಲ್ಲಿ ಇದನ್ನು ಬೆಳೆಯಲಾರಂಭಿಸಿದರು.[೭] ಉಳಿದಂತೆ ರಾಜ್ಯದಲ್ಲಿ ಗೇರು ಬೆಳೆಯುವ ಪ್ರದೇಶ ಉಡುಪಿ, ಉತ್ತರ ಕನ್ನಡ, ಕೋಲಾರ, ಚಿಕ್ಕ ಮಗಳೂರು, ಚಿಕ್ಕ ಬಳ್ಳಾಪುರ, ಬೆಳಗಾಂ ಮತ್ತು ಶಿವಮೊಗ್ಗ. ಕ್ರಮೇಣ ಗೇರು ಕೃಷಿ ಸಾಂಪ್ರದಾಯಿಕವಲ್ಲದ ಭಾಗಗಳಿಗೂ ಅಂದರೆ ಮೈದಾನ ಪ್ರದೇಶಗಳಾದ ದಾವಣಗೆರೆ, ತುಮಕೂರು, ಹಾಸನ, ಚಾಮರಾಜ ನಗರ ಹಾಗೂ ಮೈಸೂರಿಗೂ ಹರಡಿಕೊಂಡಿತು.



೨೦೧೧-೧೨ರ ವರದಿಯನ್ವಯ ಕರ್ನಾಟಕದಲ್ಲಿ ೧.೧೯ ಲಕ್ಷ ಹೆಕ್ಟೇರುಗಳಲ್ಲಿ ೫೭,೦೦೦ ಮಿಲಿಯ ಟನ್‌ಗಳಷ್ಟು ಗೇರು ಉತ್ಪಾದನೆಯಾಗುತ್ತಿದ್ದು ಹೆಕ್ಟೇರಿಗೆ ೪೯೧ ಕೆ.ಜಿ. ಯಷ್ಟು ಉತ್ಪಾದನಾ ಸಾಮರ್ಥ್ಯವನ್ನು ಹೊಂದಿದೆ.[೮] ಪಶ್ಚಿಮ ಕರಾವಳಿ ಪ್ರದೇಶ ಒಂದು ಪ್ರಮುಖ ಗೇರು ಉತ್ಪಾದನಾ ಹಾಗೂ ಸಂಸ್ಕರಣೆಯ ಕೇಂದ್ರವಾಗಿದ್ದು ಕರಾವಳಿ ಕರ್ನಾಟಕ ರಾಜ್ಯದ ಸುಮಾರು ೭೦% ಗೇರು ಉತ್ಪಾದನೆಯನ್ನು ನೀಡುತ್ತಿದೆ. ಇಲ್ಲಿನ ಹವಾಮಾನ ಭೌಗೋಳಿಕ ಪರಿಸ್ಥಿತಿ ಗೇರು ಬೆಳೆಗೆ ಅತ್ಯಂತ ಅನುಕೂಲಕರವಾಗಿದೆ. ಅದರಲ್ಲೂ ದಕ್ಷಿಣ ಕನ್ನಡದ ಕರಾವಳಿ ಭಾಗ ಗೇರು ಕೃಷಿಯ ಸಾಂಪ್ರದಾಯಿಕ ನೆಲೆ ಎಂದೇ ಹೇಳಬಹುದು.[೯]

ಕನಾಟಕ ರಾಜ್ಯ ಗೇರು ಬೆಳೆಯ ಅಭಿವೃದ್ಧಿಯಲ್ಲಿ ಅನೇಕ ಕೊರತೆಗಳನ್ನು ಎದುರಿಸುತ್ತಿದೆ. ಪ್ರಮುಖವಾಗಿ ಗೇರು ಬೆಳೆಯುವ ಭೂಮಿ ತೀರಾ ಕಡಿಮೆ ಗುಣ ಮಟ್ಟದ್ದಾಗಿದೆ. ಬಹುತೇಕ ಬೀಜಾಂಕುರ ಗಿಡಗಳನ್ನೇ ಹೊಂದಿರುವುದರಿಂದ ಇಳುವರಿ ಕೂಡಾ ತೀರಾ ಕಡಿಮೆ. ಕರ್ನಾಟಕದ ಗೇರು ಇಳುವರಿ ಸರಾಸರಿ ಹೆಕ್ಟೇರಿಗೆ ೪೯೧ ಕೆ.ಜಿ.ಗಳು ಮಾತ್ರವಾಗಿದ್ದು ಪಕ್ಕದ ಕೇರಳ ರಾಜ್ಯದಲ್ಲಿ ಇದು ಸರಾಸರಿ ೯೪೮ ಕೆ. ಜಿ. ಹಾಗೂ ಮಹಾರಾಷ್ಟ್ರದಲ್ಲಿ ೧೨೮೨ ಕೆ. ಜಿ. ಗಳು ಎಂದು ಅಂದಾಜಿಸಲಾಗಿದೆ. ರಾಷ್ಟ್ರೀಯ ಸರಾಸರಿ ಪ್ರತಿ ಹೆಕ್ಟೇರಿಗೆ ೭೪೯ ಕೆ. ಜಿ. ಗಳು ಆದ್ದರಿಂದ ಕರ್ನಾಟಕದ ಗೇರು ಇಳುವರಿ ರಾಷ್ಟ್ರೀಯ ಸರಾಸರಿಗಿಂತ ಅರ್ಧದಷ್ಟು ಮಾತ್ರ ಇದೆ.[೧೦]

ಗೇರು ಬೆಳೆಯುವ ಪ್ರದೇಶದಲ್ಲಿ ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆ ಪ್ರಥಮ ಸ್ಥಾನಿಯಾಗಿದ್ದು ರಾಜ್ಯದ ಒಟ್ಟು ಗೇರು ಬೆಳೆಯುವ ಪ್ರದೇಶದ ವಿಸ್ತೀರ್ಣದಲ್ಲಿ ಶೇ. ೪೨.೯೪ರಷ್ಟು ಹಾಗೂ ಉತ್ಪಾದನೆಯಲ್ಲಿ ಶೇ.೪೯.೬೬ ರಷ್ಟು ಭಾಗವನ್ನು ಹೊಂದಿದೆ. ನಂತರದ ಸ್ಥಾನ ಕರ್ನಾಟಕದ ಉಡುಪಿ ಜಿಲ್ಲೆಯದ್ದಾಗಿದ್ದು ಕ್ರಮವಾಗಿ ಶೇ. ೩೫.೯೧ ಹಾಗೂ ಶೇ. ೨೬.೫೧ ರಷ್ಟು ಭಾಗವನ್ನು ಹೊಂದಿಧೆ. ಇತರ ಜಿಲ್ಲೆಗಳಲ್ಲೂ ಗೇರು ಬೆಳೆಗೆ ಸಾಕಷ್ಟು ಪ್ರಾಶಸ್ತ್ಯ ಇರುವುದು ಗಮನಾರ್ಹ. ಕರ್ನಾಟಕದಲ್ಲಿ ಗೇರು ಬೆಳೆಯುವ ಬೇರೆ ಬೇರೆ ಜಿಲ್ಲೆಗಳು ಮತ್ತು ಭೌಗೋಳಿಕ ಪರಿಸರದ ಕುರಿತಂತೆ ವಿವರವನ್ನು ಪ್ರತ್ಯೇಕವಾಗಿ ನೀಡಲಾಗಿದೆ.

ಕೋಷ್ಟಕ:೩.೪ ಕರ್ನಾಟಕದಲ್ಲಿ ಗೇರು ಬೆಳೆಯುವ ವಿವಿಧ ಸೂಕ್ತವಾದ ಪ್ರದೇಶ ಹಾಗೂ ಹವಾಮಾನ

ಕ್ರಮ. ಸಂಖ್ಯೆ	ವಲಯ	ಮಣ್ಣಿನ ವಿಧ	ಸರಾಸರಿ ಮಳೆ ವಾರ್ಷಿಕ ಮಿ. ಮಿ	ಸರಾಸರಿ ಉಷ್ಣತೆ		ಜಿಲ್ಲೆ ಮತ್ತು ತಾಲೂಕು
				ಕನಿಷ್ಠ ° ಸೆ.	ಗರಿಷ್ಠ ° ಸೆ.	
1.	ಕರಾವಳಿ ವಲಯ	ಮುರ/ಕೆಂಪು ಜೇಡಿ ಮಣ್ಣು	೩೫೦೦.೦೦	೨೧–೨೬	೨೮–೩೩	• ದಕ್ಷಿಣ ಕನ್ನಡ- ಮಂಗಳೂರು, ಸುಳ್ಯ, ಬೆಳ್ತಂಗಡಿ, ಬಂಟ್ವಾಳ, ಮತ್ತು ಪುತ್ತೂರು. • ಉಡುಪಿ- ಉಡುಪಿ, ಕುಂದಾಪುರ, ಕಾರ್ಕಳ ಮತ್ತು ಬೈಂದೂರು. • ಉತ್ತರ ಕನ್ನಡ – ಕುಮಟಾ, ಹೊನ್ನಾವರ, ಭಟ್ಕಳ, ಅಂಕೋಲಾ ಮತ್ತು ಕಾರವಾರ.
2.	ದಕ್ಷಿಣದ ಒಣ ಪ್ರದೇಶ					
	a. ಮಧ್ಯದ ಒಣ ಪ್ರದೇಶ	ಕೆಂಪು ಮರಳು ಮಿಶ್ರಿತ ಜೇಡಿ ಮಣ್ಣು	೬೦೬.೮೧	೧೪–೧೬	೩೬	ಚಿತ್ರದುರ್ಗ, ದಾವಣಗೆರೆ ಚಳ್ಳಕೆರೆ, ಹೊಳಲ್ಕೆರೆ, ಹೊಸದುರ್ಗ, ತಿಪಟೂರು, ಕಡೂರು ಮತ್ತು ಅರಸಿಕೆರೆ
	b. ಪೂರ್ವದ ಒಣ ಪ್ರದೇಶ	ಕೆಂಪು ಜೇಡಿ ಮಣ್ಣು, ಮುರ ಮಣ್ಣು	೭೬೮.೧೬	೧೪–೧೬	೩೬	ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಗುಬ್ಬಿ, ತುಮಕೂರು, ಕೋಲಾರ, ಚಿಂತಾಮಣಿ, ಗೌರಿ ಬಿದನೂರು, ಮುಳ ಬಾಗಿಲು
	c. ದಕ್ಷಿಣದ ಒಣ ಭಾಗ	ಕೆಂಪು ಮರಳು ಮಿಶ್ರಿತ ಜೇಡಿ ಮಣ್ಣು	೭೩೦.೬೦	೧೪–೧೬	೩೬	ಮೈಸೂರು, ಚಾಮರಾಜ ನಗರ, ತುರುವೇಕೆರೆ, ಕುಣಿಗಲ್, ಕೆ.ಆರ್. ಪೇಟೆ, ಹಾಸನ, ಚನ್ನರಾಯ ಪಟ್ಟಣ
3.	ಬೆಟ್ಟಗುಡ್ಡ ಪ್ರದೇಶ	ಮುರ ಮಣ್ಣು	೨೫೦೦.೦೦	೧೧–೧೩	೩೦	ಉತ್ತರ ಕರ್ನಾಟಕ- ಸಿರಸಿ, ಸಿದ್ದಾಪುರ, ಸುಪ, ಯಲ್ಲಾಪುರ ಮುಂಡಗೋಡು ಶಿವಮೊಗ್ಗ- ಸಾಗರ್, ಹೊಸ ನಗರ, ತೀರ್ಥಹಳ್ಳಿ, ಹಾವೇರಿ, ಹನಗಲ್, ಕಲಘಟಗಿ ಚಿಕ್ಕಮಗಳೂರು- ಎನ್. ಆರ್. ಪುರ, ಚಿಕ್ಕ ಮಗಳೂರು, ಕೊಪ್ಪ ಶೃಂಗೇರಿ, ಮೂಡಿಗೆರೆ ಹಾಸನ- ಸಕಲೇಶಪುರ
4.	ಸ್ಥಿತ್ಯಂತರ ಪ್ರದೇಶ	ಕೆಂಪು ಮರಳು ಮಿಶ್ರಿತ , ಕೆಂಪು ಜೇಡಿ ಹಾಗೂ ಮುರ ಮಣ್ಣು	೮೩೯.೭೫	೧೪–೨೦	೨೪–೩೨	ಶಿವಮೊಗ್ಗ- ಚನ್ನಗಿರಿ, ಶಿಕಾರಿಪುರ, ಹೊನ್ನಾಳಿ ಚಿಕ್ಕ ಮಗಳೂರು- ತರಿಕೆರೆ ಹಾಸನ- ಹೊಳೆ ನರಸೀಪುರ, ಹಾಸನ ಮೈಸೂರು- ಹುಣಸೂರು, ಪಿರಿಯಾ ಪಟ್ಟಣ ಬೆಳಗಾಂ- ಹುಕ್ಕೇರಿ, ಚಿಕ್ಕೋಡಿ ಬೈಲಹೊಂಗಲ, ಬೆಳಗಾಂ

Source: Kumar D.P. and Mahabaleshwara Hegde -1998, Technologies for Cashew Cultivation in Different Agro Climatic Tracts of Karnataka. The Cashew 9(1):Pp85-86.

ಹಿಂದಿನ ಅಧ್ಯಾಯದಲ್ಲಿ ಉಲ್ಲೇಖಿಸಿದಂತೆ ಗೇರು ಬೆಳೆಯುವ ಪ್ರದೇಶದಲ್ಲಿ ಉಷ್ಣತೆ ೧೫° ಸೆ. ಯಿಂದ ೨೫° ಸೆ ತನಕ ಕನಿಷ್ಠ ಉಷ್ಣತೆ ಹಾಗೂ ಗರಿಷ್ಠ ೨೫° ಸೆ.ದಿಂದ ೩೫° ಸೆ.ವರೆಗೆ ಇರುವುದು ಉತ್ತಮ. ಅದೇ ರೀತಿ ಗೇರು ಬೆಳೆಗೆ ಬೇಕಾದ ಮಳೆಯ ಪ್ರಮಾಣ ೧೩೦೦ ಮಿ.ಮಿ.,ನಿಂದ ೨೫೦೦ ಮಿ. ಮೀ. ಮಳೆಯಾಗುವುದು ಗೇರು ಬೆಳೆಗೆ ಅತ್ಯಂತ ಸೂಕ್ತ ಎಂದಿದೆ. ಹಾಗೆಯೇ ಗೇರು ಎಲ್ಲಾ ಬಗೆಯ ಮಣ್ಣಿಗೂ ಹೊಂದಿಕೊಳ್ಳಬಲ್ಲ ಸಾಮರ್ಥ್ಯವುಳ್ಳದ್ದು. ಜೇಡಿಮಣ್ಣು ಮತ್ತು ಮುರ ಮಣ್ಣು ಗೇರು ಬೆಳೆಯ ಉತ್ತಮ ಇಳುವರಿ ತಂದುಕೊಡಬಲ್ಲದು ಎಂದು ದಾಖಲಿಸಲಾಗಿದೆ. ಈ ಎಲ್ಲಾ ನಿಟ್ಟಿನಲ್ಲಿ ಕರಾವಳಿಯ ಒಟ್ಟು ಹವಾಮಾನ ಗೇರು ಬೆಳೆಗೆ ಅತ್ಯಂತ ಸಮರ್ಪಕ ಎಂಬುದು ಸ್ಪಷ್ಟವಾಗುತ್ತದೆ. ಕರ್ನಾಟಕದಲ್ಲಿ ಗೇರು ಬೆಳೆಯುವ ವಿವಿಧ ಪ್ರದೇಶಗಳನ್ನು ನಾಲ್ಕು ವಲಯಗಳಾಗಿ ವಿಂಗಡಿಸಲಾಗಿದೆ.

- ಕರಾವಳಿ ವಲಯ
- ದಕ್ಷಿಣದ ಒಣ ಪ್ರದೇಶ
- ಬೆಟ್ಟಗುಡ್ಡ ಪ್ರದೇಶ
- ಸ್ಥಿತ್ಯಂತರ ಪ್ರದೇಶ

ಕರಾವಳಿ ಪ್ರದೇಶದಲ್ಲಿ ಸರಾಸರಿ ೩೫೦೦ ಮಿ.ಮೀಟರ್ ಮಳೆಯಾಗುತ್ತಿದ್ದು, ಕನಿಷ್ಠ ಉಷ್ಣತೆ ೨೧° -೨೬° ಸೆ. ಹಾಗೂ ಗರಿಷ್ಠ ೨೮° - ೩೩° ಇರುತ್ತದೆ. ಇಲ್ಲಿನ ಮುರ ಹಾಗೂ ಕೆಂಪು ಜೇಡಿ ಮಣ್ಣು ಗೇರು ಬೆಳೆಗೆ ಅತ್ಯಂತ ಫಲವತ್ತಾದ ಮಣ್ಣು. ಕರಾವಳಿ ವಲಯ ದ.ಕ. ಜಿಲ್ಲೆ, ಉಡುಪಿ ಹಾಗೂ ಉತ್ತರ ಕರ್ನಾಟಕ ಜಿಲ್ಲೆಯನ್ನೊಳಗೊಂಡಿದ್ದು ಕರ್ನಾಟಕದಲ್ಲೇ ಅತ್ಯಂತ ಹೆಚ್ಚಿನ ಗೇರು ಉತ್ಪಾದನೆ ಮಾಡುವ ಜಿಲ್ಲೆಗಳಾಗಿರುತ್ತವೆ. ಈ ಕಾರಣದಿಂದ ಕರಾವಳಿಯನ್ನು ಗೇರು ಬೆಳೆಯುವ ಸಾಂಪ್ರದಾಯಿಕ ನೆಲೆ ಎಂದು ಉಲ್ಲೇಖಿಸಲಾಗಿದೆ.

ಎರಡನೆಯದಾಗಿ ದಕ್ಷಿಣದ ಒಣ ಪ್ರದೇಶ. ಇದನ್ನು ಪುನಃ ಮಧ್ಯದ ಒಣ ಪ್ರದೇಶ, ಪೂರ್ವದ ಒಣ ಪ್ರದೇಶ ಹಾಗೂ ದಕ್ಷಿಣದ ಒಣ ಭಾಗ ಎಂದು ವಿಂಗಡಿಸಲಾಗಿದೆ. ಗರಿಷ್ಠ ಉಷ್ಣತೆ ೩೬° ಸೆ. ಆಗಿದ್ದು, ಕ್ರಮವಾಗಿ ಸರಾಸರಿ ೬೦೬.೮೧ ಮಿಲಿ ಮೀಟರ್, ೭೬೮.೧೬ ಮಿ.ಮೀ. ಹಾಗೂ ೭೩೦.೯೦ ಮಿ.ಮೀ ಮಳೆ ಬೀಳುತ್ತಿದೆ. ಫಲವತ್ತಾದ ಕೆಂಪು ಮರಳು ಮಿಶ್ರಿತ ಜೇಡಿ ಮಣ್ಣು ಹೊಂದಿರುವ ಈ ವಲಯ ಚಿತ್ರದುರ್ಗ, ದಾವಣಗೆರೆ, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ತುಮಕೂರು, ಮೈಸೂರು, ಹಾಸನ, ಚಾಮರಾಜ ನಗರ, ಚನ್ನರಾಯ ಪಟ್ಟಣ ಇವೇ ಮೊದಲಾದ ಬಯಲು ಸೀಮೆಯ ಜಿಲ್ಲೆಯನ್ನೊಳಗೊಂಡಿದೆ.

ಮೂರನೆಯ ವಲಯ ಬೆಟ್ಟಗುಡ್ಡ ಪ್ರದೇಶ. ಸಾಮಾನ್ಯವಾಗಿ ಕರ್ನಾಟಕದ ಮಲೆನಾಡು ಪ್ರದೇಶ ಉತ್ತರ ಕರ್ನಾಟಕದ ಕೆಲವು ತಾಲೂಕುಗಳನ್ನೊಳಗೊಂಡಂತೆ ಶಿವಮೊಗ್ಗ, ಸಾಗರ, ತೀರ್ಥಹಳ್ಳಿ, ಚಿಕ್ಕಮಗಳೂರು, ಕೊಪ್ಪ, ಶೃಂಗೇರಿ ಹೀಗೆ ಬಹುತೇಕ ಮಲೆನಾಡು ಭಾಗವನ್ನು ಆವರಿಸಿಕೊಂಡಿದೆ. ಸರಾಸರಿ ಮಳೆ ೨೫೦೦ ಮಿ.ಮೀ. ಗಳಾಗಿದ್ದು ಕನಿಷ್ಠ ೧೦° ಹಾಗೂ ಗರಿಷ್ಠ ೩೦°ಸೆ. ಉಷ್ಣತೆಯನ್ನು ಹೊಂದಿದೆ. ಬೆಟ್ಟಗುಡ್ಡಗಳಿಂದ ಕೂಡಿದ ಪ್ರದೇಶವಾಗಿದ್ದು, ಈ ಭಾಗದ ಮುರ ಮಣ್ಣು ಗೇರು ಬೆಳೆಗೆ ಅತ್ಯಂತ ಸೂಕ್ತವೆನಿಸಿದೆ.

ಕೊನೆಯದಾಗಿ ಇತ್ತೀಚಿನ ವರ್ಷಗಳಲ್ಲಿ ಗೇರು ಬೆಳೆಗೆ ಪರಿವರ್ತನೆ ಆಗುತ್ತಿರುವ ಸ್ಥಿತ್ಯಂತರ ಪ್ರದೇಶ. ಸರಾಸರಿ ೮೩೯.೭೫ಮಿ.ಮೀ. ಮಳೆ ಆಗುತ್ತಿರುವ ಈ ಭಾಗದಲ್ಲಿ ಕನಿಷ್ಠ ಉಷ್ಣತೆ ೧೪° ಸೆ. ಹಾಗೂ ಗರಿಷ್ಠ ಉಷ್ಣತೆ ೩೨° ಸೆ. ಕೆಂಪು ಮರಳು ಮಿಶ್ರಿತ ಜೇಡಿ ಹಾಗೂ ಮುರ ಮಣ್ಣಿನಿಂದ ಕೂಡಿದ ಈ ಭಾಗದಲ್ಲಿ ಗೇರು ಬೆಳೆಸುವ ಯೋಜನೆ ಪ್ರಾರಂಭವಾಗಿದ್ದು ಸೂಕ್ತವಾದ ಗೇರು ತಳಿಗಳನ್ನು ಹಾಗೂ ವೈಜ್ಞಾನಿಕ ಗೇರು ಕೃಷಿಯನ್ನು ಅಳವಡಿಸಿಕೊಳ್ಳಲಾಗುತ್ತಿದೆ. ಶಿವಮೊಗ್ಗ ಜಿಲ್ಲೆಯ ಕೆಲವು ತಾಲೂಕುಗಳು ಹಾಸನ, ಮೈಸೂರು ಹಾಗೂ ಬೆಳಗಾಂ ಜಿಲ್ಲೆಯ ಕೆಲವು ತಾಲೂಕುಗಳು ಈ ಭಾಗದಲ್ಲಿ ಬರುತ್ತವೆ.

ಕರ್ನಾಟಕದ ವಿವಿಧ ಭಾಗಗಳ ಹವಾಮಾನಕ್ಕೆ ಅನುಗುಣವಾಗಿ ವಿವಿಧ ಮಾದರಿಯ ತಳಿಗಳನ್ನು ಬೆಳೆಸಲಾಗುತ್ತಿದೆ. ಕರ್ನಾಟಕದ ಬೇರೆ ಬೇರೆ ಜಿಲ್ಲೆಗಳಲ್ಲಿ ಬೆಳೆಯುವ ವಿವಿಧ ಮಾದರಿ ತಳಿಗಳ ಕುರಿತಂತೆ ಕೋಷ್ಟಕ ೩.೫ರಲ್ಲಿ ನೀಡಲಾಗಿದೆ.

ಕೋಷ್ಟಕ ೩.೫ ಕರ್ನಾಟಕದ ಮಾದರಿ ಗೇರು ತಳಿಗಳು

ಪ್ರದೇಶ	ಜಿಲ್ಲೆಗಳು	ವಿವಿಧ ತಳಿಗಳ ಮಾದರಿ
ಕರಾವಳಿ ಭಾಗ	ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ	ಉಳ್ಳಾಲ- 1,2,3,4 ಮತ್ತು V-4
ಗುಡ್ಡಗಾಡು ಪ್ರದೇಶ	ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ	ಉಳ್ಳಾಲ-2,3,4
ಒಣ ಭೂಮಿ	ಚಿತ್ರದುರ್ಗ, ಬೆಂಗಳೂರು(ಗ್ರಾ), ತುಮಕೂರು, ಕೋಲಾರ, ಚಿಕ್ಕ ಬಳ್ಳಾಪುರ, ಮೈಸೂರು, ಬೆಳಗಾಂ, ದಾವಣಗೆರೆ	ಚಿಂತಾಮಣಿ- 1 ಮತ್ತು 2 VRL-3, ವೆಂಗುರ್ಲಾ-4 ಇವುಗಳು ಉತ್ತಮ. ಇತರೆ- ಉಳ್ಳಾಲ 2,3,4 ಮತ್ತು NRCC-2, ಧನ.
ಸ್ಥಿತ್ಯಂತರ ಪ್ರದೇಶ	ಶಿವಮೊಗ್ಗ, ಚೆನ್ನಗಿರಿ, ಚಿಕ್ಕಮಗಳೂರು, ಹಾಸನ, ಮೈಸೂರು, ಬೆಳಗಾಂ	ವೆಂಗುರ್ಲಾ

Source: Kumar D.P. and Mahabaleshwara Hegde -1998, Technologies for cashew Cultivation in Different Agro Climatic Tracts of Karnataka. The Cashew 9(1)P 87.

೩.೩. ಕರ್ನಾಟಕದಲ್ಲಿ ಗೇರು ಅಭಿವೃದ್ಧಿಗೆ ಸಾಂಸ್ಥಿಕ ನೆರವು

ಕರ್ನಾಟಕದ ಗೇರು ಅಭಿವೃದ್ಧಿಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿರುವ ಸಂಸ್ಥೆ ಕರ್ನಾಟಕ ಗೇರು ಅಭಿವೃದ್ಧಿ ಪ್ರಾಧಿಕಾರ. ಫೆಬ್ರವರಿ ೧೪, ೧೯೭೮ ರಲ್ಲಿ ಕರ್ನಾಟಕ ಅರಣ್ಯ ಇಲಾಖೆಯಿಂದ ಹಸ್ತಾಂತರಿಸಲ್ಪಟ್ಟು, ಗೇರು ತೋಟಗಳ ನಿರ್ವಹಣೆಯ ಉದ್ದೇಶದಿಂದ ಕರ್ನಾಟಕ ಗೇರು ಅಭಿವೃದ್ಧಿ ಪ್ರಾಧಿಕಾರ ಸ್ಥಾಪಿಸಲ್ಪಟ್ಟಿತು. ಹೆಚ್ಚುತ್ತಿರುವ ಕಚ್ಚಾಗೇರು ಬೀಜದ ಬೇಡಿಕೆಯ ಅನಿವಾರ್ಯತೆಯನ್ನೇ ಪ್ರಮುಖ ಆದ್ಯತೆಯಾಗಿರಿಸಿಕೊಂಡು ಕಾರ್ಯಾರಂಭ ಮಾಡಿತು. ೧೯೭೯ ರಲ್ಲಿ ೮೦೦೦ ಹೆಕ್ಟೇರುಗಳಷ್ಟು ರಕ್ಷಿತಾರಣ್ಯ ಪ್ರದೇಶವನ್ನು ಕರ್ನಾಟಕ ಸರಕಾರ ಪ್ರಾಧಿಕಾರಕ್ಕೆ ವರ್ಗಾಯಿಸಿತು. ಇದರೊಂದಿಗೆ ೧೯೯೩ರಲ್ಲಿ ೫೦೦೦ ಹೆಕ್ಟೇರುಗಳಷ್ಟು ಗೇರು ತೋಟಗಳಿರುವ ರಕ್ಷಿತಾರಣ್ಯವನ್ನು ಕೂಡಾ ಕರ್ನಾಟಕ ಸರಕಾರ ಪ್ರಾಧಿಕಾರಕ್ಕೆ ಷೇರು ರೂಪದಲ್ಲಿ ಬಿಟ್ಟು ಕೊಟ್ಟಿತು. ೧೯೯೩ ರಿಂದ ೧೧೧೭೪.೯೫ ಹೆಕ್ಟೇರುಗಳಷ್ಟು ಗೇರು ತೋಟವನ್ನು ಗೇಣಿ ಆಧಾರದಲ್ಲಿ ಪ್ರಾಧಿಕಾರಕ್ಕೆ ಹಸ್ತಾಂತರಿಸಲಾಗಿದೆ. ೨೦೦೫-೦೬ರಲ್ಲಿ ಗೇರು ಅಭಿವೃದ್ಧಿ ಪ್ರಾಧಿಕಾರ ಒಟ್ಟು ೨೫೬೫೮.೧೧ ಹೆಕ್ಟೇರುಗಳಷ್ಟು ಗೇರು ತೋಟವನ್ನು ಹೊಂದಿದ್ದು ಅದರಲ್ಲಿ ೧೨೭೩೮.೫೧ ಹೆಕ್ಟೇರುಗಳು ಷೇರು ರೂಪದಲ್ಲೂ ಉಳಿದ ೧೨೯೧೯.೬೦ ಹೆಕ್ಟೇರುಗಳಷ್ಟು ಗೇಣಿ ಆಧಾರದಲ್ಲೂ ಹೊಂದಿದೆ. ಒಟ್ಟು ೨೫೬೫೮.೧೧ ಹೆಕ್ಟೇರುಗಳಲ್ಲಿ ೧೯೮೨-೮೭ ರಲ್ಲಿ ೩೭೧೪ ಹೆಕ್ಟೇರುಗಳಷ್ಟು ಗೇರು ಭೂಮಿ ಬೀಜಾಂಕುರ ಗೇರು ಗಿಡಗಳನ್ನು ಹೊಂದಿತ್ತು. ೧೯೯೨-೯೩ ರಿಂದ

೨೦೦೮-೦೯ರ ನಡುವೆ ಸುಮಾರು ೯೦೩೦.೮೦ ಹೆಕ್ಟೇರುಗಳಷ್ಟು ಭೂಮಿಯಲ್ಲಿ ಕಸಿ ಕಟ್ಟಿದ ಗಿಡಗಳನ್ನು ನೆಟ್ಟು ಬೆಳೆಸಲಾಯಿತು.[೧೧]

ಪ್ರಾಧಿಕಾರದ ಮುಖ್ಯ ಉದ್ದೇಶ ಗೇರು ಉತ್ಪಾದನೆಯನ್ನು ಹೆಚ್ಚಿಸುವುದು. ಈ ನಿಟ್ಟಿನಲ್ಲಿ ಅದು ಹಲವು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಯಶಸ್ವಿಯಾಯಿತು. ಮುಖ್ಯವಾಗಿ,

- ಸುಧಾರಿತ ತಳಿಗಳೊಂದಿಗೆ ಮೀಸಲು ಅರಣ್ಯ ಪ್ರದೇಶದಲ್ಲಿ ಗೇರು ತೋಟಗಳನ್ನು ಬೆಳೆಸುವುದು.
- ಸುಧಾರಿತ ಹಾಗೂ ಉತ್ತಮ ಗುಣ ಮಟ್ಟದ ಗೇರು ಗಿಡಗಳನ್ನು ರೈತರಿಗೆ ಹಂಚುವುದರೊಂದಿಗೆ ಗೇರು ಕೃಷಿ ಬಗ್ಗೆ ಹೆಚ್ಚಿನ ಮಾಹಿತಿ, ಸಮಾಲೋಚನಾ ಸೇವೆ ಮತ್ತು ಗೇರು ತೋಟಗಳ ವೈಜ್ಞಾನಿಕ ನಿರ್ವಹಣೆಯ ಕುರಿತಂತೆ ಜಾಗೃತಿ ಮೂಡಿಸುವುದು.
- ರಾಜ್ಯ ಹಾಗೂ ಕೇಂದ್ರ ಸರಕಾರ ಜಾರಿಗೊಳಿಸಿದ ಗೇರು ಅಭಿವೃದ್ಧಿ ಕಾರ್ಯಗಳ ಅನುಷ್ಠಾನ.
- ಸುಧಾರಿತ ಗೇರು ಸಸಿಗಳನ್ನು ನೆಟ್ಟು ಬೆಳೆಸಲು ಮತ್ತು ಕಸಿ ಮಾಡಲು ಬೇಕಾದ ಸಾಮಗ್ರಿಗಳ ಪೂರೈಕೆ.
- ಪ್ರಾತ್ಯಕ್ಷಿಕೆ ತೋಟಗಳನ್ನು ಅಭಿವೃದ್ಧಿಗೊಳಿಸುವುದು.
- ಮಾರುಕಟ್ಟೆ ಹಾಗೂ ನಿರ್ಯಾತದ ಕುರಿತಂತೆ ಸಂಶೋಧನಾತ್ಮಕ ಚಟುವಟಿಕೆಗಳನ್ನು ನಡೆಸುವುದು.

ಕರ್ನಾಟಕ ಗೇರು ಅಭಿವೃದ್ಧಿ ಪ್ರಾಧಿಕಾರವನ್ನು ಒಂದು ಆಧುನಿಕ ಗೇರು ಕೃಷಿ ಕೇಂದ್ರವನ್ನಾಗಿ ರೂಪಿಸುವುದು ಪ್ರಾಧಿಕಾರದ ಪ್ರಮುಖ ಉದ್ದೇಶವಾಗಿದೆ.

ರಾಜ್ಯದಲ್ಲಿ ಗೇರು ಕೃಷಿಯ ಅಭಿವೃದ್ಧಿಗಾಗಿ ೨೦೦೧ ರಲ್ಲಿ ಸಮಗ್ರ ಮಾದರಿ ನಿರ್ವಹಣಾ ಯೋಜನೆ (೨೦೦೧ ರಿಂದ ೨೦೦೫-೦೬)ಯನ್ನು ಹತ್ತನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಪ್ರಾರಂಭಿಸಲಾಯಿತು. ಭಾರತ ಸರಕಾರ ೫೧೦.೨೭೫ ಲಕ್ಷ ರೂ.ಗಳನ್ನು ಗೇರು ಅಭಿವೃದ್ಧಿಗಾಗಿ ಕರ್ನಾಟಕ ಸರಕಾರಕ್ಕೆ ನೀಡಿತು. ಗೇರು ಪ್ರದೇಶ ವಿಸ್ತರಣೆ ಹಾಗೂ ಅಭಿವೃದ್ಧಿ, ಸಾಂಪ್ರದಾಯಿಕವಲ್ಲದ ಬಯಲು ಪ್ರದೇಶದಲ್ಲಿ ಗೇರು ಕೃಷಿಯನ್ನು ಅಭಿವೃದ್ಧಿ ಪಡಿಸುವುದು, ಸುಧಾರಿತ ತಳಿಗಳನ್ನು ಪರಿಚಯಿಸುವುದು ಮತ್ತು ಆಧುನಿಕ ಗೇರು ತಂತ್ರಜ್ಞಾನವನ್ನು ರೈತರಿಗೆ ತಲುಪಿಸುವುದು ಈ ಯೋಜನೆಯ ಪ್ರಮುಖ ಉದ್ದೇಶಗಳಾಗಿತ್ತು.[೧೨]

ಈ ಯೋಜನೆಯ ಫಲಶ್ರುತಿಯಾಗಿ ಸಾಂಪ್ರದಾಯಿಕವಲ್ಲದ ಪ್ರದೇಶಗಳಲ್ಲಿ ಗೇರು ಬೆಳೆಸಲು ವ್ಯಾಪಕ ಕ್ರಮ ಕೈಗೊಳ್ಳಲಾಯಿತು. ಪರಿಣಾಮವಾಗಿ ಗೇರು ಬೆಳೆಯುವ ಪ್ರದೇಶ ವಿಸ್ತರಿಸಲಾಯಿತು. ಇದನ್ನು ಕೆಳಗಿನ ಕೋಷ್ಟಕ ೩.೭ರಲ್ಲಿ ನಮೂದಿಸಲಾಗಿದೆ.

ಕೋಷ್ಟಕ ೩.೬ ಸಾಂಪ್ರಾದಾಯಿಕವಲ್ಲದ ಪ್ರದೇಶಗಳಲ್ಲಿ ಗೇರು ಕೃಷಿ

ಕ್ರಮ ಸಂಖ್ಯೆ	ಸಾಂಪ್ರಾದಾಯಿಕವಲ್ಲದ ಪ್ರದೇಶಗಳು	೨೦೦೧-೦೨ ರಲ್ಲಿ ಗೇರು ಬೆಳೆಯ ಪ್ರದೇಶದ ವಿಸ್ತೀರ್ಣ(ಹೆಕ್ಟೇರುಗಳು)	೨೦೦೬-೦೭ ರಲ್ಲಿ ಗೇರು ಬೆಳೆಯ ಪ್ರದೇಶದ ವಿಸ್ತೀರ್ಣ
೧.	ಬೆಂಗಳೂರು (ಗ್ರಾಮಾಂತರ)	೬೭	೪೬೪
೨.	ಕೋಲಾರ	೨೭೯೪	೫೧೧೧
೩.	ತುಮಕೂರು	೪೫	೧೧೮
೪.	ಮಂಡ್ಯ	೫೬	೯೨
೫.	ಧಾರವಾಡ	೧೧	೧೧೫
೬.	ಹಾವೇರಿ	೧೦	೧೫೫
೭.	ಬೀದರ್	೨೩	೧೮೨

Source: S.S. Guledagudda 2005, Production and Export performance of Cashew. An Economic Analysis. Thesis subsuitted to the university of Agriculture science Dharwad.

ಸಾಂಪ್ರಾದಾಯಿಕವಲ್ಲದ ಪ್ರದೇಶದಲ್ಲಿ ಗೇರು ಬೆಳೆಸಲು ಉತ್ತೇಜನ ನೀಡಿದ್ದರ ಪರಿಣಾಮವಾಗಿ ಆ ಭಾಗಗಳಲ್ಲಿ ಉತ್ಪಾದನೆ ಶೇಕಡಾ ೧೦೭.೪೮ ರಷ್ಟು ಹೆಚ್ಚಾಗಿರುವುದು ಕಂಡು ಬಂದಿದೆ.

೨೦೦೫ ರಲ್ಲಿ ಭಾರತ ಸರಕಾರ ಪ್ರಾರಂಭಿಸಿದ ರಾಷ್ಟ್ರೀಯ ತೋಟಗಾರಿಕಾ ಮಿಷನ್ ಯೋಜನೆ ಕರ್ನಾಟಕದ ಗೇರು ಅಭಿವೃದ್ಧಿಯಲ್ಲಿ ಅಭೂತ ಪೂರ್ವ ಬದಲಾವಣೆಯನ್ನು ತಂದಿತು. ಗೇರು ಕೃಷಿ ಅಭಿವೃದ್ಧಿಗೆ ಈ ಯೋಜನೆಯಡಿ ರಾಜ್ಯ ಸರಕಾರ ಅನೇಕ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡಿತು. ೨೦೦೫-೦೬ರಿಂದ ೨೦೦೮-೦೯ ರವರೆಗಿನ ಅವಧಿಯಲ್ಲಿ ೬೯೧೫ ಹೆಕ್ಟೇರುಗಳಷ್ಟು ಕೃಷಿ ಭೂಮಿಯ ವಿಸ್ತರಣೆಯಾಯಿತು. ಇದಕ್ಕಾಗಿ ಸುಮಾರು ೩೪೩.೭೪ ಲಕ್ಷ ರೂ.ಗಳನ್ನು ವಿನಿಯೋಗಿಸಲಾಯಿತು. ಇದೇ ಅವಧಿಯಲ್ಲಿ ಏಳು ಹೊಸ ಗೇರು ಸಂಸ್ಕರಣಾ ಕೇಂದ್ರಗಳಿಗೆ ೨೩.೨೦೪ ಲಕ್ಷರೂ.ಗಳ ಅನುದಾನ ನೀಡಲಾಯಿತು. ೨೦೦೯-೧೦ ರಲ್ಲಿ ೬೬.೭೭ ಲಕ್ಷ ರೂಗಳನ್ನು ರಾಷ್ಟ್ರೀಯ ತೋಟಗಾರಿಕಾ ಮಿಷನ್ ಯೋಜನೆಯಲ್ಲಿ ರಾಜ್ಯದ ಗೇರು ಪ್ರದೇಶದ ವಿಸ್ತರಣೆಗೆ ಮೀಸಲಿಡಲಾಯಿತು. ಹಳೆಯ ಗೇರು ಗಿಡಗಳ ಪುನಶ್ಚೇತನಕ್ಕಾಗಿ ಹೆಕ್ಟೇರಿಗೆ ೧೫,೦೦೦ ರೂ.ಗಳ ಹಾಗೆ ನೆರವು ನೀಡಲಾಯಿತು. ಗರಿಷ್ಠ ರೂ. ಒಂದು ಸಾವಿರಗಳಿಗೆ ಮೀರದಂತೆ ೫೦ ಶೇಕಡಾ ಸಹಾಯ ಧನವನ್ನು ಗೇರು ಕೃಷಿ ತೋಟಗಳಿಗೆ ರಾಸಾಯನಿಕಗಳನ್ನು ಸಿಂಪಡಿಸಿ ರೋಗ ತಡೆಗಟ್ಟುವುದಕ್ಕಾಗಿ ನೀಡಲಾಯಿತು. ೨೦೦೬-೦೭ ರಲ್ಲಿ ಸುಮಾರು ೬೦ ಹೆಕ್ಟೇರು ಭೂಮಿಗಳನ್ನು ಪ್ರಾತ್ಯಕ್ಷಿಕ ತೋಟಗಳಾಗಿ ೧೦ ಲಕ್ಷ ರೂ. ಗಳ ವೆಚ್ಚದಲ್ಲಿ ಪ್ರಾರಂಭಿಸಲಾಯಿತು. ಇದಲ್ಲದೆ ಪ್ರತಿ ಹೆಕ್ಟೇರಿಗೆ ೨೨೪೦೬ ರೂ.ಗಳಂತೆ ರೈತರಿಗೆ ಗೇರು ತೋಟಗಳ ಪುನಶ್ಚೇತನಕ್ಕಾಗಿ ನೆರವು ನೀಡಲಾಯಿತು. ಗೇರು ಸಂಸ್ಕರಣಾ ಘಟಕಗಳಿಗೂ ರಾಷ್ಟ್ರೀಯ ತೋಟಗಾರಿಕಾ ಮಿಷನ್ ಹಾಗೂ ರಾಜ್ಯ ಸರಕಾರದ ನೆರವಿನಿಂದ ೧೨ ಲಕ್ಷ ರೂ.ಗಳಿಗೆ ಮೀರದಂತೆ ೫೦ ಶೇಕಡಾದಂತೆ ಸಹಾಯಧನ ನೀಡಲಾಯಿತು.[೧೩] ಗೇರು ತೋಟಗಳಲ್ಲಿ ಮಣ್ಣು ಹಾಗೂ ನೀರಿನ ಸಂಗ್ರಹಣೆಗೆ ಮಳೆ ಕೊಯ್ಲಿನ ಪದ್ಧತಿಯನ್ನು ಪ್ರೋತ್ಸಾಹಿಸಲಾಯಿತು. ಈ ನಿಟ್ಟಿನಲ್ಲಿ ಸೂಕ್ತ ಮಾಹಿತಿ ಹಾಗೂ ತರಬೇತಿಗಳನ್ನು ನೀಡಿ ಪ್ರೋತ್ಸಾಹಿಸಲಾಯಿತು.

೧೯೫೦ ರ ದಶಕದಲ್ಲಿ ಭಾರತದಲ್ಲಿ ಗೇರು ಸಂಶೋಧನಾ ಪ್ರಕ್ರಿಯೆ ಪ್ರಾರಂಭವಾಯಿತು. ಅದರ ಫಲಶ್ರುತಿಯಾಗಿ ಕರ್ನಾಟಕ ರಾಜ್ಯದಲ್ಲೂ ಗೇರು ಸಂಶೋಧನಾ ಕಾರ್ಯ ಪ್ರಗತಿಯನ್ನು ಕಂಡುಕೊಳ್ಳುವಂತಾಯಿತು. ೧೯೫೩ ರಲ್ಲಿ ಕರ್ನಾಟಕದ ಉಳ್ಳಾಲದಲ್ಲಿ ಗೇರು ಸಂಶೋಧನಾ ಕೇಂದ್ರ ಪ್ರಾರಂಭವಾಯಿತು. ೧೯೭೦ ರಲ್ಲಿ ರಾಜ್ಯದ ಗಡಿ ಭಾಗವಾದ ಕೇರಳದ ಕಾಸರಗೋಡಿನಲ್ಲಿ ತೋಟಗಾರಿಕಾ ಬೆಳೆಗಳ ಸಂಶೋಧನಾ ಕೇಂದ್ರ ಪ್ರಾರಂಭವಾಯಿತು. ಇದರ ಪ್ರಾದೇಶಿಕ ಕೇಂದ್ರವಾದ ಕರ್ನಾಟಕದ ವಿಟ್ಲದಲ್ಲಿ ಗೇರು ಬೆಳೆಯನ್ನು ಒಂದು ಕಡ್ಡಾಯ ಬೆಳೆಯಾಗಿ ಮಾನ್ಯ ಮಾಡಿ ಉತ್ತಮ ಬೀಜಗಳ ತಳಿಯನ್ನು ಆವಿಷ್ಕಾರ ಮಾಡಲಾಯಿತು. ಭಾರತೀಯ ಸಂಶೋಧನಾ ಪರಿಷತ್‌ನ ತಜ್ಞರ ಸಲಹೆಯಂತೆ ಏಳನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ ದ. ಕ. ಜಿಲ್ಲೆಯ ಪುತ್ತೂರು ತಾಲೂಕಿನಲ್ಲಿ ಜೂನ್ ೧೮, ೧೯೮೬ ರಂದು ರಾಷ್ಟ್ರೀಯ ಗೇರು ಸಂಶೋಧನಾ ಕೇಂದ್ರ ಪ್ರಾರಂಭವಾಯಿತು. ಹನ್ನೊಂದನೇ ಪಂಚವಾರ್ಷಿಕ ಯೋಜನೆಯ ಅಡಿಯಲ್ಲಿ ೨೦೦೯ ರಲ್ಲಿ ಈ ಕೇಂದ್ರವನ್ನು ಮೇಲ್ದರ್ಜೆಗೆ ಏರಿಸಿ ಗೇರು ಸಂಶೋಧನಾ ನಿರ್ದೇಶನಾಲಯ ಎಂಬುದಾಗಿ ಮರು ನಾಮಕರಣ ಮಾಡಲಾಯಿತು. ದೇಶದ ಗೇರು ಬೆಳೆಯುವ ರಾಜ್ಯಗಳಲ್ಲಿ ಹತ್ತು ಕೇಂದ್ರಗಳನ್ನು ಹಾಗೂ ಒಂದು ಉಪಕೇಂದ್ರವನ್ನು ಹೊಂದಿರುವ ಗೇರು ಸಂಶೋಧನಾ ನಿರ್ದೇಶನಾಲಯ ಗೇರು ಉತ್ಪಾದನೆ ಹಾಗೂ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸುವಲ್ಲಿ ನಿರಂತರವಾಗಿ ಸಂಶೋಧನೆಯಲ್ಲಿ ತೊಡಗಿಸಿಕೊಂಡಿದೆ. ದ.ಕ. ಜಿಲ್ಲೆಯ ಪುತ್ತೂರು ತಾಲೂಕಿನ ಕೇಂದ್ರ ಭಾಗದಿಂದ ೫ ಕಿ. ಮೀ. ದೂರದಲ್ಲಿರುವ ಕೆಮ್ಮಿಂಜೆ ಎಂಬಲ್ಲಿ ಈ ಕೇಂದ್ರ ಕಾರ್ಯಾಚರಣೆ ಮಾಡುತ್ತಿದ್ದು, ೬೮ ಹೆಕ್ಟೇರು ಪ್ರಾಯೋಗಿಕ ಭೂಮಿಯನ್ನು ಹೊಂದಿದೆ. ಆಡಳಿತ ವಿಭಾಗ, ಪ್ರಯೋಗಾಲಯ, ವಾಚನಾಲಯ, ತಾಂತ್ರಿಕ ವಿಭಾಗಗಳನ್ನೊಳಗೊಂಡಂತೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಅಳವಡಿಸಿಕೊಂಡಿದ್ದು, ಕೇಂದ್ರದಿಂದ ೧೩ ಕಿ. ಮೀ. ದೂರದ ಶಾಂತಿಗೋಡು ಎಂಬಲ್ಲಿ ೮೦ ಹೆಕ್ಟೇರು ಪ್ರಾತ್ಯಕ್ಷಿಕ ತೋಟವನ್ನು ಕೂಡಾ ಹೊಂದಿದೆ. (ಅನುಬಂಧ ಚಿತ್ರ ಸಂಖ್ಯೆ ೬) ಗೇರು ಸಂಶೋಧನಾ ಕೇಂದ್ರವನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರತಿಷ್ಠಿತ ಕೇಂದ್ರವನ್ನಾಗಿಸುವುದು, ಗೇರು ಉತ್ಪಾದನೆಯಲ್ಲಿ ದೇಶವನ್ನು ಸ್ವಾವಲಂಬಿಯಾಗಿಸುವ ಮೂಲಕ ಭಾರತವನ್ನು ಪ್ರಪಂಚದ ಅತಿ ದೊಡ್ಡ ಗೇರು ಉತ್ಪಾದಕ, ಸಂಸ್ಕರಣಾ ಹಾಗೂ ರಫ್ತು ರಾಷ್ಟ್ರವೆಂಬ ಹೆಗ್ಗಳಿಕೆಯನ್ನು ಕಾಯ್ದುಕೊಳ್ಳುವುದು, ಗೇರು ಉದ್ಯಮದ ಉಪ ಉತ್ಪನ್ನಗಳನ್ನು ಪರಿಣಾಮಕಾರಿಯಾಗಿ ಬಳಸುವುದರೊಂದಿಗೆ ರೈತರಿಗೆ ಹೆಚ್ಚಿನ ಆದಾಯವನ್ನು ಗಳಿಸಿಕೊಡುವುದು ಈ ಕೇಂದ್ರದ ಪ್ರಮುಖ ಉದ್ದೇಶವಾಗಿದೆ. ಗೇರು ಕೃಷಿಯ ಆಧುನಿಕ ತಂತ್ರಜ್ಞಾನದ ಬಳಕೆಯ ಕುರಿತಂತೆ ವಿಚಾರ ಸಂಕಿರಣಗಳನ್ನು, ಸಮಾಲೋಚನಾ ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ಗೇರು ಸಂಶೋಧನಾ ಕೇಂದ್ರದ ಫಲಿತಗಳನ್ನು ರೈತರಿಗೆ ತಲುಪಿಸುವ ಮಹತ್ತರ ಜವಾಬ್ದಾರಿಯನ್ನು ಕೇಂದ್ರ ನಿರ್ವಹಿಸುತ್ತಿದೆ. ಈ ಎಲ್ಲಾ ಪ್ರಯತ್ನಗಳ ಪರಿಣಾಮವಾಗಿ ಪ್ರಸ್ತುತ ಕರ್ನಾಟಕ ರಾಜ್ಯ ದೇಶದ ಗೇರು ರಾಜ್ಯವೆಂದು ಗುರುತಿಸಲ್ಪಟ್ಟಿದೆ.

೩.೪ ಕರ್ನಾಟಕದಲ್ಲಿ ಗೇರು ಸಂಸ್ಕರಣೆ

ರಾಜ್ಯದ ಹಲವು ಸಮಸ್ಯೆಗಳಾದ ನಿರುದ್ಯೋಗ ನಿವಾರಣೆಗೆ, ವಿದೇಶಿ ವಿನಮಯ ಗಳಿಕೆಗೆ ಹಾಗೂ ಗ್ರಾಮೀಣ ಅಭಿವೃದ್ಧಿಗೆ ಗೇರು ಉದ್ದಿಮೆ ಒಂದು ರಾಮಬಾಣವಾಗಿದೆ.[೧೪] ೨೬೬ಕ್ಕೂ ಮಿಕ್ಕಿದ ಗೇರು ಕಾರ್ಖಾನೆಗಳನ್ನು ಹೊಂದಿರುವ ಕರ್ನಾಟಕ ೩ ಲಕ್ಷ ಮಿಲಿಯನ್ ಗೇರು ಸಂಸ್ಕರಿಸುವ ಸಾಮರ್ಥ್ಯವನ್ನು ಹೊಂದಿದೆ. ೪೦,೦೦೦ ಮಹಿಳಾ ಕಾರ್ಮಿಕರನ್ನು ನೇರವಾಗಿ ಉದ್ಯೋಗದಲ್ಲಿ ತೊಡಗಿಸಿಕೊಂಡಿರುವ ಗೇರು ಉದ್ಯಮ ಪರೋಕ್ಷವಾಗಿ ಸುಮಾರು ೩೦,೦೦೦ ಗೇರು ಕೃಷಿಕರಿಗೆ ಜೀವನಾಧಾರವಾಗಿದೆ. ಕರ್ನಾಟಕದ ಉಡುಪಿ ಜಿಲ್ಲೆಯೊಂದರಲ್ಲೇ ೧೬೭ ಕ್ಕೂ ಹೆಚ್ಚು ಗೇರು ಸಂಸ್ಕರಣಾ ಘಟಕಳಿದ್ದು ೧೩,೮೬೦ ಕಾರ್ಮಿಕರಿಗೆ ಉದ್ಯೋಗ ನೀಡುವುದರೊಂದಿಗೆ ಮೊದಲನೇ ಸ್ಥಾನವನ್ನು ಪಡೆದುಕೊಂಡಿದೆ. ಎರಡನೆಯದಾಗಿ

ಉತ್ತರ ಕನ್ನಡ ೩೫ ಕಾರ್ಖಾನೆಗಳನ್ನು ದಕ್ಷಿಣ ಕನ್ನಡ ಸುಮಾರು ೩೦ ಕಾರ್ಖಾನೆಗಳನ್ನು ಒಳಗೊಂಡಿದೆ.[೧೫] ಗೇರು ಸಂಸ್ಕರಣೆಯಲ್ಲಿ ಕರ್ನಾಟಕದ ನೆರೆಯ ರಾಜ್ಯವಾದ ಕೇರಳ ಕಳೆದ ೬೦ ವರ್ಷಗಳಿಂದಲೂ ಅಗ್ರಮಾನ್ಯ ರಾಜ್ಯ ಎಂದೇ ಗುರುತಿಸಿಕೊಂಡಿತ್ತು. ಆದರೆ ಕಳೆದೊಂದು ದಶಕದಲ್ಲಿ ಅದರ ಮಹತ್ವ ಕಳೆದುಕೊಳ್ಳುತ್ತಿರುವುದನ್ನು ಕಾಣಬಹುದು. ಹೆಚ್ಚುತ್ತಿರುವ ಶ್ರಮ ವೆಚ್ಚ ಹಾಗೂ ಗೇರು ಕೃಷಿ ಭೂಮಿಯ ಕೊರತೆ ಇದಕ್ಕೆ ಮುಖ್ಯ ಕಾರಣಗಳಾಗಿದ್ದು ಗೇರು ಸಂಸ್ಕರಣೆ ನೆರೆಯ ತಮಿಳುನಾಡು, ಮಹಾರಾಷ್ಟ್ರ ಕರ್ನಾಟಕ, ಆಂಧ್ರಪ್ರದೇಶ ಹಾಗೂ ಒರಿಸ್ಸಾ ರಾಜ್ಯಗಳಿಗೆ ಹರಡಿಕೊಂಡಿತು. ಆ ದಿನಗಳಲ್ಲಿ ಕೇರಳ ರಾಜ್ಯದಲ್ಲಿದ್ದ ಕಮ್ಯುನಿಸ್ಟ್ ಸರ್ಕಾರ ಕಾರ್ಮಿಕರ ಸ್ಥಿತಿಗತಿಗಳ ಸುಧಾರಣೆಯ ದೃಷ್ಟಿಕೋನ ಹೊಂದಿದ್ದು ಕೇರಳ ರಾಜ್ಯ ಗೇರು ಅಭಿವೃದ್ಧಿ ನಿಗಮವನ್ನು (Kerala State Cashew Development Corporation) ೧೯೬೯ ರಲ್ಲಿ ಪ್ರಾರಂಭಿಸಿತು. ಸುಮಾರು ೩೦ ಕಾರ್ಖಾನೆಗಳನ್ನು ಹೊಂದಿದ ನಿಗಮ ಕೇರಳ ರಾಜ್ಯ ಗೋಡಂಬಿ ಕಾರ್ಮಿಕರ ಉಚ್ಚ ಕೈಗಾರಿಕಾ ಸಹಕಾರಿ ಸಂಘ (Cashew Workers Apex Industrial Co-operative Society) ದ ಆಶ್ರಯದಲ್ಲಿ ಕಾರ್ಮಿಕರ ಮಾಲಕತ್ವದಲ್ಲಿ ಹತ್ತು ಕಾರ್ಖಾನೆಗಳನ್ನು ಹೊಂದಿತ್ತು. ಈ ಎರಡೂ ಸಂಸ್ಥೆಗಳ ಒಟ್ಟು ಉದ್ದೇಶಗಳು ಕಾರ್ಮಿಕರಿಗೆ ಹೆಚ್ಚಿನ ಉದ್ಯೋಗಾವಕಾಶಗಳು, ಆರೋಗ್ಯ ಸೌಲಭ್ಯ, ಪಿಂಚಣಿ ಹಾಗೂ ಕನಿಷ್ಠ ವೇತನ ನೀಡುವುದು. ಆ ದಿನಗಳಲ್ಲಿ ಕನಿಷ್ಠ ವೇತನ ಸರಾಸರಿ ರೂ. ೧೦೦ ಗಳಾಗಿತ್ತು. ನೆರೆಯ ರಾಜ್ಯಗಳಲ್ಲಿ ಅದು ದಿನಕ್ಕೆ ಕೇವಲ ರೂ. ೩೦ ಮಾತ್ರ ಆಗಿತ್ತು. ಇದೇ ಕಾರಣಕ್ಕಾಗಿ ಖಾಸಗಿ ಉದ್ದಿಮೆದಾರರು ಕ್ರಮೇಣ ಆಸು ಪಾಸಿನ ರಾಜ್ಯಗಳಲ್ಲಿ ಗೇರು ಉದ್ದಿಮೆಗಳನ್ನು ಪ್ರಾರಂಭಿಸಿದರು. ತಮಿಳುನಾಡಿನ ಪನ್ರೊಟಿಯಲ್ಲಿ ಸಣ್ಣ ಸಣ್ಣ ಗುಂಪುಗಳಲ್ಲಿ ರೈತರು ಸಂಸ್ಕರಣಾ ಘಟಕಗಳನ್ನು ಪ್ರಾರಂಭಿಸಿದರು. ಇದರಿಂದಾಗಿ ಸಂಸ್ಕರಣೆಯಲ್ಲಿ ರೈತರ ಸಹಭಾಗಿತ್ವಕ್ಕೆ ಅವಕಾಶ ತೆರೆದುಕೊಂಡಿತು.[೧೬]

೩.೫ ಕನಾಟಕದಿಂದ ಗೋಡಂಬಿ ರಫ್ತು

ಗೋಡಂಬಿ ಉತ್ಪಾದನೆಯಲ್ಲಿ ಕೇರಳ ಮತ್ತು ಗೋವಾ ರಾಜ್ಯಗಳನ್ನು ಹೊರತುಪಡಿಸಿದರೆ ಕರ್ನಾಟಕ ರಾಜ್ಯವೆ ಅತ್ಯಂತ ಹೆಚ್ಚು ಗೋಡಂಬಿ ಉತ್ಪಾದನೆ ಮಾಡುವ ರಾಜ್ಯ ಎಂದೆನಿಸಿಕೊಂಡಿದೆ. ಅಷ್ಟು ಮಾತ್ರವಲ್ಲ ದೇಶದ ಒಟ್ಟು ಗೋಡಂಬಿ ರಫ್ತು ವ್ಯಾಪಾರದಲ್ಲಿ ಕರ್ನಾಟಕದ ಪಾಲು ಶೇ. ೧೪ ರಷ್ಟು ಎಂಬುದು ಗಮನಾರ್ಹ.[೧೭] ಕನಾಟಕದಲ್ಲಿ ಒಟ್ಟು ೨೬೬ ಗೇರು ಕಾರ್ಖಾನೆಗಳಿದ್ದು ಅದರಲ್ಲಿ ಸುಮಾರು ೧೪೦ ಘಟಕಗಳು ಗೋಡಂಬಿ ನಿರ್ಯಾತದಲ್ಲಿ ತೊಡಗಿಸಿಕೊಂಡಿವೆ. ಜಾಗತೀಕರಣದ ಅವಧಿಯಲ್ಲಿ ವಿದೇಶಿ ವ್ಯಾಪಾರ ನೀತಿಯ ಅನ್ವಯ ಕೃಷಿ ಉತ್ಪನ್ನಗಳ ನಿರ್ಯಾತಕ್ಕೆ ವಿಶೇಷ ಆದ್ಯತೆ ನೀಡಲಾಗಿತ್ತು. ಪರಿಣಾಮವಾಗಿ ಪ್ರಪಂಚದ ಎಲ್ಲಾ ರಾಷ್ಟ್ರಗಳ ನಡುವೆ ತೀವ್ರ ಸ್ಪರ್ಧೆ ಉಂಟಾಗಿತ್ತು ಇಂತಹ ಸಂದರ್ಭದಲ್ಲಿ ಉತ್ಪನ್ನಗಳ ಗುಣಮಟ್ಟ ಹಾಗೂ ಸ್ಪರ್ಧಾತ್ಮಕ ಬೆಲೆ ನಿರ್ಣಾಯಕ ಅಂಶ ಎಂದೆನಿಸಿಕೊಂಡಿತ್ತು. ವಿಶ್ವ ವ್ಯಾಪಾರ ಸಂಘಟನೆಯ ಆಶ್ರಯದಲ್ಲಿ ಅನೇಕ ದ್ವಿಪಕ್ಷೀಯ ಒಪ್ಪಂದಗಳು ಏರ್ಪಟ್ಟು ಭಾರತಕ್ಕೆ ತೋಟಗಾರಿಕಾ ಉತ್ಪನ್ನಗಳ ವ್ಯಾಪಾರಕ್ಕೆ ಜಾಗತಿಕ ಮಾರುಕಟ್ಟೆಯಲ್ಲಿ ವಿಶೇಷ ಅವಕಾಶಗಳು ಪ್ರಾಪ್ತವಾದವು. ಸುಮಾರು ರೂ. ೬೦೦ ಕೋಟಿ ಮೌಲ್ಯದ ತೋಟಗಾರಿಕಾ ಉತ್ಪನ್ನಗಳನ್ನು ಕರ್ನಾಟಕದಿಂದ ರಫ್ತು ಮಾಡಲಾಗಿದ್ದು ಅದರಲ್ಲಿ ಗೋಡಂಬಿಯ ಮೌಲ್ಯ ರೂ. ೧೬೩.೫೪ ಕೋಟಿಗಳೆಂದು ಅಂದಾಜಿಸಲಾಗಿದೆ.

ಕರ್ನಾಟಕದ ಒಟ್ಟು ರಫ್ತು ವ್ಯಾಪಾರದಲ್ಲಿ ಗೋಡಂಬಿಯ ಪಾಲು ಶೇಕಡಾ ೧.೯೬ (೧೯೯೯-೨೦೦೦) ಆಗಿತ್ತು. ಆದರೆ ಇದು ೨೦೦೨-೦೩ರಲ್ಲಿ ೨೭೯.೮೩ ಕೋಟಿ ರೂ.ಗಳಿಗೆ ಅಂದರೆ ೧೧.೦೮ ಶೇಕಡಾಕ್ಕೆ ಏರಿತು. ಆದರೆ ಈ

ಅವಧಿಯಲ್ಲಿ ಕನಾಟಕದ ಒಟ್ಟು ರಫ್ತು ವ್ಯಾಪಾರದ ಪಾಲು ಸ್ಥಿರವಾಗಿದ್ದನ್ನು ಗಮನಿಸಬಹುದು. ೧೯೯೮-೯೯ರಲ್ಲಿ ಇದು ೧೪.೬೦ ಶೇಕಡಾ ಇದ್ದು ೨೦೦೨-೦೩ರಲ್ಲಿ ೧೪.೪೭% ಮಾತ್ರವಾಗಿತ್ತು. ಕನಾಟಕ ರಾಜ್ಯದ ಮಂಗಳೂರು ಬಂದರಿನಿಂದ ೧೧,೧೩೯ ಟನ್ ಗೋಡಂಬಿಯನ್ನು ೨೦೦೭-೦೮ರಲ್ಲಿ ರಾಜ್ಯವು ರಫ್ತು ಮಾಡಿತ್ತು ಮತ್ತು ಅದರ ಮೌಲ್ಯ ರೂ. ೩೨೫ ಕೋಟಿಗಳೆಂದು ಅಂದಾಜಿಸಲಾಗಿತ್ತು. ದೇಶದ ಒಟ್ಟು ಗೋಡಂಬಿಯ ರಫ್ತು ೧.೧೪ ಲಕ್ಷ ಟನ್‌ಗಳು ಆಗಿದ್ದು ಅದರ ಮೌಲ್ಯ ರೂ. ೨೨೮೮.೯೦ ಕೋಟಿಗಳಾಗಿತ್ತು. ಮಂಗಳೂರು ಬಂದರು ಮಾತ್ರವಲ್ಲದೆ ಕೇರಳದ ಕೊಚ್ಚಿನ್ ಬಂದರಿನಿಂದ ೧೮೦೦ ಟನ್‌ಗಳಷ್ಟು ಗೋಡಂಬಿಯನ್ನು ಕರ್ನಾಟಕವು ಇದೇ ಅವಧಿಯಲ್ಲಿ ರಫ್ತು ಮಾಡಿತ್ತು. ೨೦೦೯-೧೦ರಲ್ಲಿ ಮಂಗಳೂರು ಬಂದರಿನಿಂದ ರಫ್ತಾದ ಗೋಡಂಬಿಯ ಮೌಲ್ಯ ೨೩೯.೬೧ಕೋಟಿ ರೂ.ಗಳಗಿದ್ದು ಇದು ದೇಶದ ಒಟ್ಟು ರಫ್ತು ವ್ಯಾಪಾರದ ೮.೧೫ ಶೇಕಡಾ ಆಗಿತ್ತು. ಇದೇ ಅವಧಿಯಲ್ಲಿ ಕರ್ನಾಟಕ ೧,೧೨,೬೧೦ ಟನ್‌ಗಳಷ್ಟು ಕಚ್ಚಾ ಗೋಡಂಬಿಯನ್ನು ಆಮದು ಮಾಡಿಕೊಂಡಿತು.[೧೮] ಕರ್ನಾಟಕದ ಗೋಡಂಬಿ ನಿರ್ಯಾತದ ಹೆಚ್ಚಳಕ್ಕೆ ಮಂಗಳೂರಿನ ಕೆನರಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ (Kanara Chamber of Commerce & Industry) ಹಾಗೂ ಕರ್ನಾಟಕ ಗೋಡಂಬಿ ಉತ್ಪಾದಕರ ಸಂಘ ಮಂಗಳೂರು (Karnataka Cashew Manufacturers' Association) ಇವುಗಳ ಪಾತ್ರ ಪ್ರಮುಖ ಕಾರಣವಾಗಿವೆ.

ಕೆನರಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯನ್ನು ೧೯೪೦ ರಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ವಾಣಿಜ್ಯೋದ್ಯಮದ ಅಭಿವೃದ್ಧಿಗಾಗಿ ದಿವಂಗತ ಮಣೇಲ್ ಅಪ್ಪಣ್ಣ ದಿವಂಗತ ಎಂ. ರಾಘವೇಂದ್ರ ಪೈ ಎಂಬುವವರು ಸ್ಥಾಪಿಸಿದರು. ಗೋಡಂಬಿಯನ್ನು ಒಳಗೊಂಡಂತೆ ಇತರೆ ವಾಣಿಜ್ಯ ವಸ್ತುಗಳ ವ್ಯಾಪಾರಕ್ಕೆ ಸಂಬಂಧಿಸಿದಂತೆ ಈ ಸಂಸ್ಥೆ ಶ್ರಮಿಸುತ್ತಿದೆ. ಮಂಗಳೂರು ಗೋಡಂಬಿ ಉದ್ಯಮದ ತವರು ಎನಿಸಿಕೊಂಡಿರುವುದರಿಂದ ಗೋಡಂಬಿ ಉತ್ಪಾದನೆ ಹಾಗೂ ರಫ್ತು ವ್ಯಾಪಾರಕ್ಕೆ ವಿಶೇಷ ಪ್ರೋತ್ಸಾಹ ನೀಡುತ್ತಿದೆ. ಗೇರು ಸಂಸ್ಕರಣಾ ಕೇಂದ್ರಗಳ ಸ್ಥಾಪನೆಗೆ ಸರಕಾರದಿಂದ ಸಿಗುವ ಸವಲತ್ತುಗಳ ಬಗ್ಗೆ ಮಾಹಿತಿ ನೀಡುವುದು, ಕಾರ್ಮಿಕರಿಗೆ ಸೂಕ್ತ ತರಬೇತಿಯ ವ್ಯವಸ್ಥೆ, ಗೋಡಂಬಿ ವ್ಯಾಪಾರಕ್ಕೆ ಸಂಬಂಧಿಸಿದ ಮಾಹಿತಿಗಳು ಮತ್ತು ಗೋಡಂಬಿ ರಫ್ತು ವ್ಯಾಪಾರಕ್ಕೆ ಬೇಕಾದ ದಾಖಲೆಗಳನ್ನು ಒದಗಿಸಿಕೊಡುತ್ತದೆ. ಅತೀ ಹೆಚ್ಚು ರಫ್ತು ಮಾಡಿದ ಉತ್ತಮ ಗುಣಮಟ್ಟದ ಗೋಡಂಬಿ ಉತ್ಪಾದಕರನ್ನು ಗುರುತಿಸಿ ಪ್ರಶಸ್ತಿ ನೀಡುವುದು ಈ ಸಂಸ್ಥೆಯ ಮತ್ತೊಂದು ವೈಶಿಷ್ಟ್ಯ. ಸರಕಾರದ ನೀತಿ ನಿರೂಪಕರಿಗೆ ಸೂಕ್ತ ಮಾರ್ಗದರ್ಶನವನ್ನು ನೀಡುವುದಲ್ಲದೆ, ಒಟ್ಟು ಉದ್ಯಮದ ಬೆಳವಣಿಗೆಗೆ ಬೇಕಾದ ಮಾಹಿತಿಯನ್ನೊಳಗೊಂಡ ಮಾಸಪತ್ರಿಕೆಯನ್ನು ಪ್ರಕಟಿಸುತ್ತಿದೆ.

೧೯೫೫ ರಲ್ಲಿ ಕೇವಲ ೫ ಮಂದಿ ಗೋಡಂಬಿ ಉತ್ಪಾದಕರಿಂದ ಮಂಗಳೂರಿನ ಕಾಪಿಕಾಡಿನಲ್ಲಿ ಸ್ಥಾಪಿಸಲ್ಪಟ್ಟ ಈ ಸಂಸ್ಥೆ ಇಂದು ೧೫೦ ಹೆಚ್ಚಿನ ಸದಸ್ಯರುಗಳನ್ನು ಹೊಂದಿದ್ದು ಇಂದು ಸಾಕಷ್ಟು ಪ್ರಭಾವಿಯಾಗಿ ಬೆಳೆದಿದೆ. ಮೆ|| ಫಿಯರ್ಸ್ ಲೆಸ್ಲೆ ಕಂಪೆನಿಯ ಶ್ರೀ ಜೆ.ಎನ್.ಎ. ಹಾಬ್ಸ್ ಎಂಬುವವರು ಸ್ಥಾಪಕ ಅಧ್ಯಕ್ಷರಾಗಿದ್ದು, ಶ್ರೀ ಮಿಜಾರು ಗೋವಿಂದ ಪೈ ಉಪಾಧ್ಯಕ್ಷರಾಗಿ, ಶ್ರೀ ಸುಜೀರ್ ದಾಮೋದರ ನಾಯಕ್ ಕಾರ್ಯದರ್ಶಿಗಳಾಗಿ ಮತ್ತು ಶ್ರೀ ಬಾಲ್ತರ್ಝುರ್ ಫೆರ್ನಾಂಡಿಸ್ ಖಜಾಂಜಿಗಳಾಗಿ ಕಾರ್ಯಾರಂಭ ಮಾಡಿದ್ದರು.


ಮಂಗಳೂರು ಗೋಡಂಬಿ ಉತ್ಪಾದನೆಯ ಪ್ರಮುಖ ಕೇಂದ್ರ ಎಂದೆನಿಸಿಕೊಂಡಿದ್ದ ಆ ದಿನಗಳಲ್ಲಿ ಜಾಗತಿಕ ಗೋಡಂಬಿ ವ್ಯಾಪಾರದಲ್ಲಿ ೯೯ ಶೇಕಡಾ ಭಾಗವನ್ನು ಹೊಂದಿದ್ದ ಭಾರತ ನಿಜ ಅರ್ಥದಲ್ಲಿ ಏಕ ಸ್ವಾಮ್ಯತೆಯನ್ನು ಪಡೆದಿತ್ತು. ಇದರಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಪಾಲು ಗಣನೀಯವಾಗಿತ್ತು ಎಂಬುದು ಉಲ್ಲೇಖಾರ್ಹ. ಆದರೆ ೧೯೫೦ ಮತ್ತು

೧೯೬೦ರ ಅವಧಿಯಲ್ಲಿ ಗೇರು ಉದ್ಯಮ ಕಠಿಣ ದಿನಗಳನ್ನು ಎದುರಿಸಬೇಕಾಯಿತು. ಬೆಲೆಗಳ ಅನಿಶ್ಚಿತತೆ, ಕಚ್ಚಾಗೇರಿನ ಪೂರೈಕೆಯ ಅಭಾವ, ಗೋಡಂಬಿ ಉತ್ಪಾದಕರ ನಡುವಿನ ತೀವ್ರ ಪೈಪೋಟಿ, ಕಾರ್ಮಿಕರ ಸಮಸ್ಯೆಗಳು ಇತ್ಯಾದಿಯಾಗಿ ಉದ್ಯಮದ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರಿದವು. ಈ ಕಾರಣದಿಂದ ಗೋಡಂಬಿ ಉತ್ಪಾದಕರ ಹಾಗೂ ರಫ್ತುದಾರರ ಹಿತಾಸಕ್ತಿಗಳ ರಕ್ಷಣೆಗಾಗಿ ಮತ್ತು ಒಟ್ಟು ಉದ್ಯಮದ ಬೆಳವಣಿಗೆಯ ದೃಷ್ಟಿಯಿಂದ ಕರ್ನಾಟಕ ಗೋಡಂಬಿ ಉತ್ಪಾದಕರ ಸಂಘ ಜುಲೈ ೧೧, ೧೯೫೫ ರಲ್ಲಿ ಸ್ಥಾಪನೆಗೊಂಡಿತು. ಪ್ರಾರಂಭದ ವರ್ಷಗಳಲ್ಲಿ ಕೇವಲ ಮಂಗಳೂರಿಗಷ್ಟೇ ಇದರ ಕಾರ್ಯವ್ಯಾಪ್ತಿ ಸೀಮಿತವಾಗಿದ್ದು ಮಂಗಳೂರು ಗೋಡಂಬಿ ಉತ್ಪಾದಕರ ಸಂಘ (MCMA) ಎಂದು ಕರೆಯಲ್ಪಡುತ್ತಿದ್ದು, ನಂತರದ ವರ್ಷಗಳಲ್ಲಿ ಸಂಪೂರ್ಣ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ಕರ್ನಾಟಕ ಗೋಡಂಬಿ ಉತ್ಪಾದಕರ ಸಂಘ ಎಂದು ಪುನರ್ ನಾಮಕರಣ ಮಾಡಲಾಯಿತು.

ಕರ್ನಾಟಕ ಗೋಡಂಬಿ ಉತ್ಪಾದಕರ ಸಂಘ ಎರಡು ಪ್ರಮುಖ ಕಾರ್ಯ ಚಟುವಟಿಕೆಗಳನ್ನು ಕೇಂದ್ರವಾಗಿಟ್ಟುಕೊಂಡಿದೆ. ಮೊದಲನೆಯದು ಸದಸ್ಯರ ಸಮಸ್ಯೆಗಳನ್ನು ಬಗೆಹರಿಸಿ ಅವರ ಹಿತಾಸಕ್ತಿಗಳನ್ನು ರಕ್ಷಿಸಿವುದು. ಎರಡನೆಯದು, ಉದ್ಯಮದ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಿ ಉತ್ಪಾದನೆಯನ್ನು ಹೆಚ್ಚು ಮಾಡುವುದು. ತನ್ಮೂಲಕ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಾರುಕಟ್ಟೆಯನ್ನು ವಿಸ್ತರಿಸುವುದು. ೨೦೦೫ ನೇ ಇಸವಿಯಲ್ಲಿ ಸಂಸ್ಥೆಯು ತನ್ನ ಸುವರ್ಣ ಜಯಂತಿ ಸಂದರ್ಭದಲ್ಲಿ ಕರ್ನಾಟಕ ಸರಕಾರದ ತೋಟಗಾರಿಕಾ ಅಭಿವೃದ್ಧಿ ಯೋಜನೆಯನ್ವಯ "ಕರ್ನಾಟಕ ಗೇರು ಸಮೃದ್ಧಿ ಯೋಜನೆ"ಯಲ್ಲಿ ಗೇರು ಉತ್ಪಾದನೆಯನ್ನು ಹೆಚ್ಚಿಸುವ ಕಾರ್ಯಕ್ರಮ ಹಾಕಿಕೊಂಡಿತು. ದಕ್ಷಿಣ ಕನ್ನಡ ಹಾಗೂ ಉತ್ತರ ಕರ್ನಾಟಕದ ೯ ತಾಲೂಕುಗಲ್ಲಿ (ಸುಳ್ಯ, ಪುತ್ತೂರು, ವಿಟ್ಲ, ಮಂಗಳೂರು, ಉಡುಪಿ, ಕಾರ್ಕಳ, ಕುಂದಾಪುರ, ಕುಮಟ ಮತ್ತು ಹೊನ್ನಾವರ) ಒಂದು ಲಕ್ಷಕ್ಕೂ ಹೆಚ್ಚು ಸುಧಾರಿತ ಗೇರು ತಳಿಗಳನ್ನು ಹಂಚಲಾಗಿತ್ತು. ಇದು ಗೇರು ಉತ್ಪಾದಕರಿಗೆ ಮತ್ತು ಉದ್ಯಮದ ಅಭಿವೃದ್ಧಿಗೆ ಸಂಪೂರ್ಣ ಪ್ರೋತ್ಸಾಹ ನೀಡುತ್ತಿದ್ದು 2015 ರ ಹೊತ್ತಿಗೆ ಕರ್ನಾಟಕವನ್ನು ಸಂಪೂರ್ಣ ಗೇರು ರಾಜ್ಯವನ್ನಾಗಿಸುವ ಮಹತ್ವಕಾಂಕ್ಷೆಯನ್ನು ಈ ಸಂಸ್ಥೆ ಹೊಂದಿದೆ.

೩.೬ ಅಧ್ಯಯನದ ಕ್ಷೇತ್ರ ಪರಿಚಯ

"ಪರಶುರಾಮ ಸೃಷ್ಟಿ" ಎಂಬ ಪೌರಾಣಿಕ ಹೆಸರು ಹೊಂದಿರುವ ದಕ್ಷಿಣ ಕನ್ನಡ ಜಿಲ್ಲೆ ಸುಮಾರು ೬೦ ಕಿ. ಮೀ. ಕರಾವಳಿ ಪ್ರದೇಶವನ್ನು ಒಳಗೊಂಡಿದೆ. ಅತಿ ಸಣ್ಣ ಜಿಲ್ಲೆಯಾಗಿ ವೈವಿಧ್ಯತೆಯನ್ನು ಹೊಂದಿರುವ ದಕ್ಷಿಣ ಕನ್ನಡ ಜಿಲ್ಲೆಯು ವಿವಿಧ ಹೆಸರುಗಳಿಂದ ಕರೆಯಲ್ಪಡುತ್ತಿದ್ದು, ತುಳುನಾಡು ಎಂಬ ಹೆಸರು ಇಲ್ಲಿನ ಸಾಂಸ್ಕೃತಿಕ ನೆಲೆಗಟ್ಟನ್ನು ಪ್ರತಿಬಿಂಬಿಸುತ್ತದೆ. ದ.ಕ. ಜಿಲ್ಲೆಯು ಕರ್ನಾಟಕ ರಾಜ್ಯದ ಉತ್ತರ ೧೨.೨೭° ಯಿಂದ ೧೩.೫೮° ಅಕ್ಷಾಂಶದ ನಡುವೆಯೂ ಮತ್ತು ರೇಖಾಂಶ ಪೂರ್ವ ೭೪.೩೫°ಯಿಂದ ೭೪.೪° ನಡುವೆ ಪಸರಿಸಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರು, ಬೆಳ್ತಂಗಡಿ, ಪುತ್ತೂರು, ಬಂಟ್ವಾಳ, ಸುಳ್ಯ ಎಂಬ ಹೆಸರಿನ ೫ ತಾಲೂಕುಗಳಿದ್ದು, ೧೭೭ ಕಿ.ಮೀ. ಉದ್ದ ಮತ್ತು ಕಿರಿದಾದ ಪ್ರದೇಶದಲ್ಲಿ ೪೦ ಕಿ.ಮೀ. ಅಗಲ ಮತ್ತು ವಿಶಾಲವಾದ ಪ್ರದೇಶದಲ್ಲಿ ೮೦ ಕಿ.ಮೀ. ಅಗಲವಿದೆ.[೧೯]



ಭೂಪಟ ೩. ೨ ದ.ಕ. ಜಿಲ್ಲೆಯ ನಕ್ಷೆ

ದ. ಕ. ಜಿಲ್ಲೆಯು ಕರ್ನಾಟಕದ ಕಡಲ ಕಿನಾರೆಯನ್ನು ಹೊಂದಿದ ಜಿಲ್ಲೆಗಳ ಪೈಕಿ ಒಂದಾಗಿದೆ. ಸುಮಾರು ೬೦ ಕಿ. ಮೀ. ಅರಬ್ಬಿ ಸಮುದ್ರದ ಕಡಲ ತೀರವನ್ನು ಹೊಂದಿದ ಈ ಜಿಲ್ಲೆ ಪರಶುರಾಮ ಸೃಷ್ಟಿ ಎಂದೇ ಪ್ರಖ್ಯಾತಿಯನ್ನು ಪಡೆದಿದೆ. ಪ್ರಾಚೀನರ ಪ್ರಕಾರ ಕೊಂಕಣದಿಂದ ಕನ್ಯಾಕುಮಾರಿಯವರೆಗೆ ಈ ಪರಶುರಾಮ ಸೃಷ್ಟಿ ವ್ಯಾಪಿಸಿದೆ[೨೦] ಇದರೊಳಗೆ ವ್ಯಾಪಿಸಿದ ತುಳುನಾಡಿನ ವ್ಯಾಪ್ತಿ ಆಗಿಂದಾಗ್ಗೆ ಹೆಚ್ಚು ಕಡಿಮೆಯಾದಂತೆ ತೋರುತ್ತದೆ. ಒಂದು ಹೇಳಿಕೆ ಪ್ರಕಾರ ಗೋಕರ್ಣದಿಂದ ಪಯಸ್ವಿನಿ ನದಿಯವರೆಗೆ[೨೧] ಇನ್ನೊಂದರ ಪ್ರಕಾರ ಕಲ್ಯಾಣಪುರ ಹೊಳೆಯಿಂದ ತ್ರಿಕರಿ ಪುರ ಹೊಳೆವರೆಗೆ[೨೨] ತುಳುನಾಡು ಹಬ್ಬಿಕೊಂಡಿತ್ತು. ಕ್ರಿ.ಶ. ೬೦೨ ರ, ಚಾಲುಕ್ಯ ಮಂಗಳೇಶನ ಮಹಾಕೂಟದ ಸ್ತಂಭ ಶಾಸನದಲ್ಲಿ ಹೇಳಿದ ಆಲುವ ತುಳುನಾಡು[೨೩] ಇದೇ ಆಲುವ ಖೇಡ ಅಥವಾ ಆಳ್ವ ಖೇಡ. ದಕ್ಷಿಣ ಕನ್ನಡ ಜಿಲ್ಲೆಯನ್ನು ಪರಶುರಾಮ ಕ್ಷೇತ್ರವೆಂಬ ನಾಮದಿಂದಲ್ಲದೆ ಶೂರ್ಪಾರಕ ಕ್ಷೇತ್ರ, ಅಪರಾಂತಕ ದೇಶ ಎಂಬ ಹೆಸರುಗಳಿಂದಲೂ ಕರೆಯುತ್ತಾ ಬಂದಿದ್ದಾರೆ.[೨೪] ದಕ್ಷಿಣ ಕನ್ನಡ ಮಾತ್ರವೇ ಅಲ್ಲ ಆ ಜಿಲ್ಲೆಯನ್ನು ಒಳಗೊಂಡಂತೆ ಮಹಾರಾಷ್ಟ್ರದ ರಾಣಾ ಜಿಲ್ಲೆಯ ವೈತರಣಿ ನದಿಯಿಂದ ಕೇರಳದ



ಕನ್ಯಾಕುಮಾರಿ ಭೂಶಿರದವರೆಗೆ ಚಾಚಿಕೊಂಡಿರುವ ಪಶ್ಚಿಮದ ಸಮುದ್ರದ ಭೂಭಾಗವೆಲ್ಲಾ ಅದೇ ಹೆಸರುಗಳಿಂದ ಕರೆಯಲ್ಪಡುತ್ತದೆ. ಪ್ರಾಚೀನ ಕಾಲದಲ್ಲಿ ದಕ್ಷಿಣ ಕನ್ನಡವು ನಾಗರ ಖಂಡದ ಒಂದು ಭಾಗವಾಗಿತ್ತೆಂದೂ, ನಾಗಾರಾಧನೆಯ ನಾಡು ಆಗಿತ್ತೆಂದೂ ಉಲ್ಲೇಖಿಸಲಾಗಿದೆ.

ಐತಿಹಾಸಿಕವಾಗಿ ದಕ್ಷಿಣ ಕನ್ನಡ ನೆಲವನ್ನು ತುಳುನಾಡು ಎಂದು ಸಂಬೋಧಿಸಲಾಗುತ್ತದೆ. ಇದೊಂದು ದೇಶವಾಚಕ ಪದ. ಇತಿಹಾಸದ ಒಂದು ಕಾಲಘಟ್ಟದಲ್ಲಿ ಅದು ಕನ್ನಡ ಭಾಷೆಯನ್ನಾಡುವ ಇಂದಿನ ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳ ಕೆಲವು ಭಾಗಗಳನ್ನು ಒಳಗೊಂಡಿತ್ತು. ಕ್ರಮೇಣ ಈ ನಾಡಿನಲ್ಲಿ ವಾಸ ಮಾಡುವವರನ್ನು ತುಳುವ ಎಂದೂ ಅವರಾಡುವ ದ್ರಾವಿಡ ಭಾಷೆಯನ್ನು ತುಳು ಭಾಷೆ ಎಂದೂ ನಿರ್ದೇಶಿಸಲಾಯಿತು.[೨೫] ತುಳು ಭಾಷೆಯನ್ನಾಡುವ ಪ್ರದೇಶವನ್ನು ಮಾತ್ರ ಹೇಳುವುದಿದ್ದರೆ ಉಡುಪಿ ಹತ್ತಿರದ ಕಲ್ಯಾಣಪುರ ಹೊಳೆಯಿಂದ ಕಾಸರಗೋಡಿನ ಹತ್ತಿರದ ಚಂದ್ರಗಿರಿ ಅಥವಾ ಪಯಸ್ವಿನಿ ಹೊಳೆಯವರೆಗೆ ಈ ಪ್ರದೇಶ ವ್ಯಾಪಿಸಿದೆ. ಪೂರ್ವದಲ್ಲಿ ಪಶ್ಚಿಮ ಘಟ್ಟ, ಪಶ್ಚಿಮದಲ್ಲಿ ಅರಬ್ಬೀ ಸಮುದ್ರ ಇದರ ಮೇರೆಗಳು. 'ತುಳುನಾಡು' ಅಥವಾ ತುಳುವ ಹೆಸರು ಹತ್ತನೆಯ ಶತಮಾನದ ನಂತರ ಬಂದಿರಬೇಕು ಎಂಬ ಅಭಿಪ್ರಾಯವನ್ನು ದಿ| ಗೋವಿಂದ ಪೈಗಳು ವ್ಯಕ್ತಪಡಿಸಿದ್ದಾರೆ.[೨೬] ಒಟ್ಟಿನಲ್ಲಿ ತುಳುನಾಡು ಎಂಬ ಹೆಸರು ಇಲ್ಲಿನ ಸಾಂಸ್ಕೃತಿಕ ನೆಲೆಗಟ್ಟನ್ನು ಪ್ರತಿಬಿಂಬಿಸುತ್ತದೆ.

ತುಳುನಾಡಿನಲ್ಲಿ ಮಾನವನ ಇತಿಹಾಸವು ಸುಮಾರು ೩೦೦೦ ವರ್ಷಗಳ ಹಿಂದೆ ಪ್ರಾರಂಭವಾಯಿತು ಎಂದು ತುಳುನಾಡಿನ ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ. ಕ್ರಿ. ಶ.೧೮ ನೆಯ ಶತಮಾನದ ಕೊನೆಯವರೆಗಿನ ೧೧ ಶತಮಾನಗಳಿಗೂ ಹೆಚ್ಚಿನ ದೀರ್ಘ ಅವಧಿಯ ತುಳುನಾಡಿನ ಇತಿಹಾಸವನ್ನು ಪುನರಚಿಸುವಲ್ಲಿ ಶಾಸನಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಈವರೆಗೆ ತುಳುನಾಡಿನಲ್ಲಿ ದೊರೆತಿರುವ ಶಾಸನಗಳ ಪೈಕಿ ಕ್ರಿ.ಶ. ೭ ನೇ ಶತಮಾನದ ವಡ್ಡರ್ಸೆಯ ಶಾಸನವು ಅತ್ಯಂತ ಪ್ರಾಚೀನವಾದುದು. ತುಳುನಾಡಿನ ಇತಿಹಾಸವನ್ನು ಈಗ ಈ ರೀತಿಯಲ್ಲಿ ಸ್ಥೂಲವಾಗಿ ಗುರುತಿಸುತ್ತಾರೆ.

೧. ಪ್ರಾಚೀನ ತುಳುನಾಡು
೨. ಪ್ರಾಚೀನ ಆಳುಪರು
೩. ಮಧ್ಯಯುಗೀನ ಆಳುಪರು
೪. ವಿಜಯ ನಗರ ಕಾಲದ ತುಳುನಾಡು
೫. ಕೆಳದಿಯ ನಾಯಕರ ತುಳುನಾಡು
೬. ಹೈದರಾಲಿ-ಟಿಪ್ಪು ಸುಲ್ತಾನರ ಕಾಲದ ತುಳುನಾಡು
೭. ಐರೋಪ್ಯರ ಆಳ್ವಿಕೆಯ ತುಳುನಾಡು

ಪ್ರಾಚೀನ ತುಳುನಾಡು ಶಾಸನಗಳು ದೊರೆಯುವುದಕ್ಕಿಂತ ಹಿಂದಿನ ತುಳುನಾಡನ್ನು ಪ್ರಾಚೀನ ತುಳುನಾಡು ಎಂದು ಇತಿಹಾಸಕಾರರು ಕರೆದಿದ್ದಾರೆ. ಕ್ರಿ. ಪೂ. ೩ ನೇ ಶತಮಾನದ ಅಶೋಕನ ಶಿಲಾ ಲಿಪಿಗಳಲ್ಲಿ ಕಾಣಿಸುವ ' ಸತಿಯ ಪುತ್ರ' ಎಂಬ ಪದವು ತುಳುನಾಡನ್ನು ಕುರಿತು ಹೇಳಿರಬೇಕು ಎಂಬುದು ವಿದ್ವಾಂಸರ ಅಭಿಪ್ರಾಯ. ಮೊದಲ ಮೂರು ಶತಮಾನಗಳಲ್ಲಿ ರಚಿತವಾಗಿದೆ ಎಂದು ಭಾವಿಸಲಾಗಿರುವ ತಮಿಳಿನ ಸಂಘಂ ಕಾಲದ ಪದ್ಯಗಳಲ್ಲಿ ತುಳುನಾಡಿನಲ್ಲಿ ಪ್ರಬಲರಾಗಿದ್ದ 'ಕೋಶರ' ಎಂಬ ಜನಾಂಗವನ್ನು ಪ್ರಸ್ತಾಪಿಸಲಾಗಿದೆ. ಇವರು ಕ್ರಿಸ್ತ ಶಕದ ಆರಂಭದ ಶತಮಾನಗಳಲ್ಲಿ ತಮಿಳುನಾಡಿನಲ್ಲಿ ಪ್ರಬಲರಾಗಿದ್ದ ಜನಾಂಗ ಎಂದು ಡಾ. ಕೆ.ವಿ. ರಮೇಶ್ ಹೇಳುತ್ತಾರೆ. ಕನ್ನಡದ ಮೊತ್ತ ಮೊದಲನೆಯ ಉಪಲಬ್ಧ ಶಾಸನವಾದ ಹಲ್ಮಿಡಿ ಶಾಸನದಲ್ಲಿ (ಕ್ರಿ. ಶ. ೫ನೇ ಶತಮಾನ) ಕಾಣಿಸುವ 'ಅಳಪಗಣ ನಾಯಕ' ಎಂಬ ಪದವು ಆಳುಪ ಎಂಬ

ಕುಲನಾಮವಾಗಿರಬೇಕು. ಆದ್ದರಿಂದ ಕ್ರಿ.ಶ. ೫ನೇ ಶತಮಾನದ ಹೊತ್ತಿಗೆ ಆಳುಪರು ತುಳುನಾಡನ್ನು ಆಳುತ್ತಿದ್ದಿರಬೇಕು ಎಂದು ಭಾವಿಸಲಾಗಿದೆ.[೨೫]

ಶಾಸನಗಳ ಪೂರ್ವದ ಪ್ರಾಚೀನ ತುಳುನಾಡಿನ ಇತಿಹಾಸವು ಸ್ಪಷ್ಟ ಆಧಾರಗಳು ಇಲ್ಲದೆ ರೂಪಿತವಾಗಿದ್ದರೂ ಸುಮಾರು ಕ್ರಿಸ್ತ ಶಕದ ಆರಂಭದ ಕಾಲದಿಂದ ತುಳುನಾಡು ಅಸ್ತಿತ್ವದಲ್ಲಿ ಇತ್ತು ಎನ್ನುವುದಕ್ಕೆ ಕೆಲವಾದರೂ ಆಧಾರಗಳು ದೊರೆಯುತ್ತವೆ.

ಪ್ರಾಚೀನ ಆಳುಪರು

ತುಳುನಾಡನ್ನು ಆಳಿದ ಮೊದಲನೆಯ ಜನಾಂಗ ಆಳುಪರು ಎಂಬುದು ಶಾಸನಗಳ ಆಧಾರದಿಂದ ಸ್ಪಷ್ಟವಾಗುವ ವಿಚಾರ. ಕ್ರಿ. ಶ. ೬೫೦ ಕಾಲದ ಒಂದನೆಯ ಆಳ್ವರಸನಿಂದ ಈ ಆಳ್ವಿಕೆ ಸ್ಪಷ್ಟವಾಗಿ ಕಾಣಿಸುತ್ತದೆ. ಈ ಆಳುಪರ ಆಳ್ವಿಕೆ ತುಳುನಾಡಿನಲ್ಲಿ ಕ್ರಿ. ಶ. ೧೪ನೇ ಶತಮಾನದ ಕೊನೆಯವರೆಗೆ ಅಂದರೆ ೧೨೦೦ ವರ್ಷಗಳ ಕಾಲ ಸುದೀರ್ಘವಾಗಿ ನಡೆಯುತ್ತದೆ.

ಪ್ರಾಚೀನ ಆಳುಪರ ಪೈಕಿ ಮೊದಲ ಎರಡು ರಾಜರ ಕಾಲದಲ್ಲಿ ಈಗಿನ ದಕ್ಷಿಣ ಕನ್ನಡ ಜಿಲ್ಲೆ (ಅದನ್ನೇ ತುಳುನಾಡು ಎಂದು ಕರೆಯುತ್ತಿದ್ದರು.) ಮಾತ್ರವಲ್ಲದೆ ಪೊಂಬುಚ್ಚ ಪ್ರದೇಶ ಮತ್ತು ಕದಂಬ ಮಂಡಲ ಇವು ತುಳುನಾಡಿನ ವ್ಯಾಪ್ತಿಗೆ ಸೇರಿದ್ದುವು. ಇವರ ಆಳ್ವಿಕೆಯಲ್ಲಿ ತುಳುನಾಡಿನ ಮಂಗಳಪುರ (ಈಗಿನ ಮಂಗಳೂರು) ಪೊಯಿಬ್ಚ ಪ್ರದೇಶದ ಪೊಂಬಚ್ಚ ಪುರ ಮತ್ತು ಕದಂಬ ಮಂಡಲದ ಬನವಾಸಿ ಇವು ಆಳುಪರ ಮೂರು ಪ್ರಧಾನ ರಾಜಧಾನಿಗಳಾಗಿದ್ದವು. ಎರಡನೇಯ ಆಳುವರಸನ ಕಾಲದಲ್ಲಿ ಆಳುಪರು ಕದಂಬ ಮಂಡಲವನ್ನು ಕಳೆದುಕೊಂಡರು. ಆ ಬಳಿಕ ಉದಯಪುರವು (ಈಗಿನ ಉದ್ಯಾವರ) ಆಳುಪರ ಪ್ರಧಾನ ರಾಜಧಾನಿಯಾಗಿತ್ತು. ಮಧ್ಯಯುಗೀನ ಆಳುಪರು ಪೊಂಬಚ್ಚ ಪ್ರದೇಶವನ್ನು ಕಳೆದುಕೊಂಡರು. ಇವರ ಕಾಲದಲ್ಲಿ ಮಂಗಳಾಪುರ (ಮಂಗಳೂರು) ಮತ್ತು ಬಾರಹ ಕನ್ಯಾಪುರ (ಈಗಿನ ಬಾರಕೂರು) ಆಳುಪರ ರಾಜಧಾನಿಯಾಗಿತ್ತು. ಕ್ರಿ.ಶ. ೧೪ನೇ ಶತಮಾನದ ಪೂರ್ವಾರ್ಧದಲ್ಲಿ ತುಳುನಾಡನ್ನು ವಶಪಡಿಸಿಕೊಂಡ ಹೊಯ್ಸಳರು ಮತ್ತು ವಿಜಯನಗರದವರು ಬಾರಕೂರನ್ನೇ ತುಳುನಾಡಿನ ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡರು. ಆಳುಪರ ಕೊನೆಯ ದಿನಗಳಲ್ಲಿ ಮೂಡಬಿದಿರೆಯು ಆಳುಪರ ರಾಜಧಾನಿಯಾಗಿತ್ತು.[೨೬]

ವಿಜಯನಗರ ಕಾಲದ ತುಳುನಾಡು

ಕ್ರಿ.ಶ. ೧೩೪೫ ರಲ್ಲಿ ತುಳುನಾಡು ಪ್ರಬಲವಾಗುತ್ತಿದ್ದ ವಿಜಯ ನಗರ ಸಾಮ್ರಾಜ್ಯದೊಂದಿಗೆ ವಿಲೀನವಾಯಿತು. ೧೪ನೇ ಶತಮಾನದ ಕೊನೆಯ ವೇಳೆಗೆ ಆಳುಪರ ಆಳ್ವಿಕೆ ಮುಕ್ತಾಯವಾದಾಗ ವಿಜಯನಗರ ಸಾಮ್ರಾಟರು ತುಳುನಾಡಿನ ಪರಮಾಧಿಕಾರಿಗಳಾದರು. ವಿಜಯನಗರದ ಅರಸರು ಆಡಳಿತ ಸೌಕರ್ಯಕ್ಕಾಗಿ ತುಳುನಾಡನ್ನು ಬಾರ್ಕೂರು ರಾಜ್ಯ ಮತ್ತು ಮಂಗಳೂರು ರಾಜ್ಯ ಎಂದು ಎರಡು ವಿಭಾಗ ಮಾಡಿಕೊಂಡರು ಮತ್ತು ಅಲ್ಲಿನ ಆಡಳಿತವನ್ನು ನೋಡಿಕೊಳ್ಳಲು ತಮ್ಮ ಪರವಾಗಿ ರಾಜ್ಯಪಾಲರುಗಳನ್ನು ನೇಮಿಸಿದರು.

ಕೆಳದಿಯ ನಾಯಕರ ಆಳ್ವಿಕೆಯಲ್ಲಿ ತುಳುನಾಡು

ಕ್ರಿ. ಶ. ೧೫೬೫ ರಲ್ಲಿ ರಕ್ಕಸ ತಂಗಡಿಯ ಯುದ್ಧದಲ್ಲಿ ವಿಜಯ ನಗರ ಸಾಮ್ರಾಜ್ಯವು ನಾಶವಾದ ಮೇಲೆ ತುಳುನಾಡು ಕೆಳದಿಯ ನಾಯಕರ ನೇರ ಆಳ್ವಿಕೆಗೆ ಒಳಗಾಯಿತು. ಇಕ್ಕೇರಿಯ ಅರಸರ ಕಾಲದಲ್ಲಿ ಅನೇಕ ಕೋಟೆಗಳನ್ನು ಕಟ್ಟಿಸಿದರು. ರಾಮ ರಾಜ ಕ್ಷತ್ರಿಯ ಎಂಬ (ಕೋಟೆಯವರು) ಜನಾಂಗವನ್ನು ತುಳುನಾಡಿಗೆ ತಂದರು. ಶಿವಪ್ಪ ನಾಯಕನ ಕಾಲದಲ್ಲಿ ಕಂದಾಯ ವ್ಯವಸ್ಥೆಯು ಬಹಳ ಕ್ರಮಬದ್ಧವಾಗಿತ್ತು. ಇಕ್ಕೇರಿ ಅರಸರ ಕಾಲದಲ್ಲಿ ಗೋವೆಯಿಂದ ವೈಷ್ಣವ ಸಾರಸ್ವತರು

ತುಳುನಾಡಿಗೆ ಬಂದು ವ್ಯಾಪಾರದಲ್ಲಿ ತೊಡಗಿದರು. ಇವರೊಂದಿಗೆ ಬಂದ ಸ್ಮಾರ್ತ ಸಾರಸ್ವತರು ತುಳುನಾಡಿನ ಉತ್ತರ ಭಾಗದಲ್ಲಿ ವಾಸಿಸುತ್ತಿದ್ದರು. ೧೭೦೮ ರಲ್ಲಿ ಚಿತ್ರಾಪುರ ಮಠ ಸ್ಥಾಪಿಸಿದರು.

ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಕಾಲದ ತುಳುನಾಡು

ಇಕ್ಕೇರಿ ಸಂಸ್ಥಾನವನ್ನೇ ನಾಶ ಮಾಡಿದ ಹೈದರಾಲಿ ತುಳುನಾಡನ್ನು ತನ್ನ ವಶಕ್ಕೆ ತೆಗೆದುಕೊಂಡ. ತುಳುನಾಡಿನ ಅರಸರಾದ ಬಂಗಿ, ಚಾಲಿ, ಅಜಿಲ ಮುಂತಾದವರು ಅವರ ಪ್ರಭುತ್ವವನ್ನು ಒಪ್ಪಿಕೊಳ್ಳುತ್ತಾರೆ. ಈ ಕಾಲಕ್ಕಾಗಲೇ ತುಳುನಾಡಿನಲ್ಲಿ ಇಂಗ್ಲೀಷರ ಪ್ರಭಾವ ಕಾಣಿಸುತ್ತದೆ. ತುಳು ನಾಡಿನ ಕೆಲವು ಕೋಟೆಗಳನ್ನು ಹೈದರಾಲಿ ಕಟ್ಟಿಸಿದನೆಂಬ ಉಲ್ಲೇಖವಿದೆ. ೧೭೮೧ ರ ಬಳಿಕ ಟಿಪ್ಪು ತುಳುನಾಡಿನ ಪಟ್ಟಣಕ್ಕೆ ಬರುತ್ತಾನೆ. ಇಂಗ್ಲೀಷರು ಮತ್ತು ಟಿಪ್ಪುವಿನ ನಡುವಿನ ಕಲಹಗಳು ತುಳುನಾಡಿನಲ್ಲಿ ರಾಜಕೀಯ ಅವ್ಯವಸ್ಥೆಯನ್ನು ತರುತ್ತವೆ. ೧೭೯೯ ರಲ್ಲಿ ಟಿಪ್ಪು ಮಡಿದಾಗ ಇಂಗ್ಲೀಷರು ಕನ್ನಡ ಜಿಲ್ಲೆಯನ್ನು ತಮ್ಮ ಅಧೀನದಲ್ಲಿ ಇಟ್ಟುಕೊಂಡಿದ್ದರು. ಸುಮಾರು ೩೧ ವರ್ಷಗಳ ಕಾಲ ತುಳುನಾಡು ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಅಧೀನದಲ್ಲಿತ್ತು. ಇವರ ಕಾಲದಲ್ಲಿ ತುಳುನಾಡಿನ ಸ್ಥಳೀಯ ರಾಜರು ತಮ್ಮ ಸ್ವಂತಿಕೆಯನ್ನು ಕಳೆದುಕೊಂಡಿದ್ದರು. ಇಂಗ್ಲೀಷರ ಕಾಲಕ್ಕಾಗುವಾಗ ತುಳುನಾಡು ಸ್ಥಳೀಯ ತುಂಡರಸರಿಂದ ಸಂಪೂರ್ಣ ವಿಮೋಚನೆ ಹೊಂದಿ ಒಂದೇ ಆಡಳಿತಕ್ಕೆ ಒಳಪಟ್ಟಿತ್ತು. ಈ ರೀತಿ ತುಳುನಾಡು ಒಂದಾಗುವದಕ್ಕೆ ಹೈದರಾಲಿ ಟಿಪ್ಪು ಸುಲ್ತಾನರ ನಾಶವು ಒಂದು ಕಾರಣವಾಯಿತು. ಕ್ರಿ. ಶ. ೧೮೦೦ರಿಂದ ತುಳುನಾಡು ಮದ್ರಾಸ್ ಅಧಿಪತ್ಯಕ್ಕೆ ಸೇರಿತ್ತು. ಇಂಗ್ಲೀಷರ ಆಳ್ವಿಕೆಯಲ್ಲಿ ಕಾರವಾರದಿಂದ ಮಲಬಾರಿನ ಗಡಿಯವರೆಗೆ ಇದ್ದ ಪ್ರದೇಶವು ಕನ್ನಡ ಜಿಲ್ಲೆ ಎಂದು ಕರೆಯಲ್ಪಡುತ್ತಿತ್ತು. ನಂತರ ಆಡಳಿತ ಸೌಕರ್ಯಕ್ಕಾಗಿ ಉತ್ತರ ಕನ್ನಡ ಜಿಲ್ಲೆಯನ್ನು ಮುಂಬಯಿ ಪ್ರಾಂತ್ಯಕ್ಕೂ ದಕ್ಷಿಣ ಕನ್ನಡ ಜಿಲ್ಲೆಯನ್ನು ಮದ್ರಾಸು ಪ್ರಾಂತ್ಯಕ್ಕೂ ಸೇರಿಸಲಾಯಿತು. ೧೯೪೭ ರಲ್ಲಿ ಭಾರತ ಸ್ವಾತಂತ್ರ್ಯ ಬರುವ ತನಕ ೧೪೭ವರ್ಷಗಳ ಕಾಲ ದಕ್ಷಿಣ ಕನ್ನಡ ಜಿಲ್ಲೆಯು ಬ್ರಿಟಿಷರ ಕೈಕೆಳಗೆ ಸಾಕಷ್ಟು ಆಧುನಿಕ ಜೀವನವನ್ನು ರೂಢಿಸಿಕೊಂಡಿತು.

೩.೬.೧ ದ.ಕ. ಜಿಲ್ಲೆಯ ಸಮಾಜ- ಸಂಸ್ಕೃತಿ

ದ.ಕ. ಜಿಲ್ಲೆ ಭಾರತದ ವೈಶಿಷ್ಟ್ಯ ಪೂರ್ಣವಾದ ಜಿಲ್ಲೆಗಳಲ್ಲೊಂದು. ಭಾಷೆ ಮತ್ತು ಸಂಸ್ಕೃತಿಗಳ ವಿವಿಧತೆ, ಪ್ರಕೃತಿಯ ರಮ್ಯತೆ, ಆರಾಧನೆಯ ಸಂಪ್ರದಾಯಗಳು ಜನಪದ ವೈವಿಧ್ಯತೆಗಳು ಮೊದಲಾದ ಹತ್ತಾರು ದೃಷ್ಟಿಗಳಿಂದ ಅದು ಎಲ್ಲರ ಗಮನ ಸೆಳೆಯುತ್ತದೆ. ಕೆನರಾ ಜಿಲ್ಲೆಯು ಕಳೆದ ಇನ್ನೂರು ವರ್ಷಗಳಲ್ಲಿ ವಿಭಜನೆಗೊಂಡು ವಿವಿಧ ಆಕೃತಿಗಳನ್ನು ತಾಳಿಕೊಂಡು ಬಂದರೂ ಕರಾವಳಿಯ ಉದ್ದಕ್ಕೂ ಚಾಚಿಕೊಂಡಿರುವುದರಿಂದ ಅದು ಅನೇಕತೆಗಳಲ್ಲಿ ಏಕತೆಗಳನ್ನೊಳಗೊಂಡ ಸಂಸ್ಕೃತಿಯನ್ನು ಹೊಂದಿದೆ. ಅತ್ತ ಕಾರವಾರ ಇತ್ತ ಕಾಸರಗೋಡು ಜಿಲ್ಲೆಯನ್ನು ಕಳೆದುಕೊಂಡ ಬಳಿಕ ದಕ್ಷಿಣ ಕನ್ನಡ ಜಿಲ್ಲೆ ಉಳಿಯಿತು. ೧೯೯೭ ರಲ್ಲಿ ಅದೂ ವಿಭಜನೆಗೊಂಡು ಉಡುಪಿ ಜಿಲ್ಲೆ ರಚನೆಯಾಯಿತು. ಸೌತ್ ಕೆನರಾ ಎಂಬ ಆಂಗ್ಲ ಪದ ಕ್ರಮೇಣ ಮರೆಯಾಗಿ ದಕ್ಷಿಣ ಕನ್ನಡ ಎಂಬ ಪದ ಗಟ್ಟಿಯಾಗಿ ನೆಲೆಯೂರಿತು.

ದಕ್ಷಿಣ ಕನ್ನಡ ಗುಡಿ ಗೋಪುರಗಳ ನಾಡು. ಕರ್ನಾಟಕದ ಅಥವಾ ದೇಶದ ಇತರೆಡೆಗಳಲ್ಲಿ ಇಷ್ಟೊಂದು ಸಂಖ್ಯೆಯ ವೈದಿಕ ಮತ್ತು ಅವೈದಿಕ ಪರಂಪರೆಯ ಆರಾಧನಾಲಯಗಳ ನಿಬಿಡತೆ ಇಲ್ಲವೆಂದೇ ಹೇಳಬೇಕು. ಪ್ರಾಚೀನ ಕಾಲದ ದೇವಸ್ಥಾನಗಳು, ಶಿಲಾ ವಿಗ್ರಹಗಳು, ಕೋಟಿ ಚೆನ್ನಯರಂತಹ ಸಾಂಸ್ಕೃತಿಕ ವೀರರ ನೆನಪಿನ ಗರಡಿಗಳು, ನೂರಾರು ದೈವಗಳ ದೈವಸ್ಥಾನಗಳು ಇವೆಲ್ಲವನ್ನು ಹೊಂದಿರುವ ದಕ್ಷಿಣ ಕನ್ನಡ ತನ್ನ ಸಾಂಸ್ಕೃತಿಕ ವೈಭವಕ್ಕೆ ಸಾಕ್ಷಿಯಾಗಿದೆ. ನಾಗಾರಾಧನೆ ತುಳುನಾಡಿನ ವಿಶಿಷ್ಟ ಸಂಪ್ರದಾಯ. ದೇಶದ ಹಾಗೂ ಪ್ರಪಂಚದ ಹಲವೆಡೆ ನಾಗಾರಾದನೆ ಇದ್ದರೂ ತುಳುನಾಡಿನಷ್ಟು ವೈವಿಧ್ಯ

ಆರಾಧನಾ ಪದ್ಧತಿ ಬೇರೆಡೆ ಇಲ್ಲವೆನ್ನಬಹುದು. ಮಾತೃ ಪ್ರಧಾನವಾದ ಸಮಾಜ ಪದ್ಧತಿ ಹೊಂದಿರುವ ತುಳುನಾಡು ಬಹು ಸಂಖ್ಯೆಯ ಭಾಷೆ, ಉಪಭಾಷೆ, ಅಪಾರವಾದ ಜನಪದ ಸಂಸ್ಕೃತಿಯನ್ನು ಹಿಡಿದಿಟ್ಟುಕೊಂಡಿರುವ ಪ್ರದೇಶ.

೩.೬.೨ ದ.ಕ. ಜಿಲ್ಲೆಯ ಭೌಗೋಳಿಕತೆ

ಸ್ವಾತಂತ್ರ್ಯ ನಂತರ ೧೯೫೬ ರಲ್ಲಿ ಭಾಷಾವಾರು ಪ್ರಾಂತ್ಯದ ರಚನೆಯಾದ ಬಳಿಕ ಇದು ಕರ್ನಾಟಕದ ೨೦ ಜಿಲ್ಲೆಗಳಲ್ಲಿ ಒಂದಾಗಿ ಅಸ್ತಿತ್ವಕ್ಕೆ ಬಂತು. ೧೯೯೭ ರಲ್ಲಿ ಜಿಲ್ಲೆಯು ವಿಭಜಿಸಲ್ಪಟ್ಟು ಪ್ರತ್ಯೇಕ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಾಗಿ ರೂಪುಗೊಂಡಿತು. ಜಿಲ್ಲೆಯ ಒಟ್ಟು ವಿಸ್ತೀರ್ಣ ೪೭೭೦ ಚ.ಕೀ.ಮೀಗಳು ಆಗಿದ್ದು, ಜಿಲ್ಲೆಯ ಪೂರ್ವ ದಿಕ್ಕಿನಲ್ಲಿ ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆ, ದಕ್ಷಿಣದಲ್ಲಿ ಕೊಡಗು ಜಿಲ್ಲೆ ಹಾಗೂ ಕೇರಳ ರಾಜ್ಯದ ಕಾಸರಗೋಡು ಜಿಲ್ಲೆ, ಉತ್ತರದಲ್ಲಿ ಉಡುಪಿ ಜಿಲ್ಲೆಗಳಿದ್ದು, ಪಶ್ಚಿಮದಲ್ಲಿ ಅರಬ್ಬೀ ಸಮುದ್ರವಿದೆ. ಜಿಲ್ಲೆಯನ್ನು ಆಡಳಿತಾತ್ಮಕವಾಗಿ ಎರಡು ಉಪ ವಿಭಾಗಗಳನ್ನಾಗಿಯೂ ಮತ್ತು ೫ ತಾಲೂಕುಗಳಾಗಿಯೂ ಮತ್ತು ೧೭ ಹೋಬಳಿಗಳನ್ನಾಗಿಯೂ ವಿಂಗಡಿಸಲಾಗಿದೆ. ಒಟ್ಟು ಜಿಲ್ಲೆಯಲ್ಲಿ ೩೫೪ ಜನವಸತಿ ಗ್ರಾಮಗಳು ಒಂದು ಮಹಾನಗರ ಪಾಲಿಕೆ, ೪ ಪುರ ಸಭೆ, ಹಾಗೂ ೩ ನಗರ ಪಂಚಾಯತ್‌ಗಳು, ಹಾಗೂ ೮ ವಿಧಾನ ಸಭಾ ಕ್ಷೇತ್ರಗಳಿವೆ.[೨೭]

ದ. ಕ. ಜಿಲ್ಲೆಯನ್ನು ಪ್ರಾಕೃತಿಕವಾಗಿ ಕರಾವಳಿ ಪ್ರದೇಶ, ಒಳನಾಡು ಪ್ರದೇಶ ಮತ್ತು ಪಶ್ಚಿಮ ಘಟ್ಟಗಳ ಪ್ರದೇಶ ಎಂದು ವಿಭಾಗಗಳಾಗಿ ವಿಂಗಡಿಸಬಹುದು. ಕರಾವಳಿ ಪ್ರದೇಶದಲ್ಲಿ ಸಾರಿಗೆ ಸೌಲಭ್ಯ, ಉದ್ಯೋಗವಕಾಶ ಇತ್ಯಾದಿ ಮೂಲಭೂತ ಸೌಕರ್ಯಗಳು ಹೆಚ್ಚಾಗಿರುವುದರಿಂದ ಜನಸಾಂದ್ರತೆ ಹೆಚ್ಚಾಗಿದೆ. ಇಲ್ಲಿ ಭತ್ತ, ದ್ವಿದಳ ಧಾನ್ಯಗಳು ಕಬ್ಬು ತೆಂಗು ಇತ್ಯಾದಿ ಬೆಳೆಗಳನ್ನು ಬೆಳೆಯಲಾಗುತ್ತದೆ. ಮಂಗಳೂರು ತಾಲೂಕು ಕರಾವಳಿ ಪ್ರದೇಶದಲ್ಲಿದೆ. ಒಳನಾಡು ಪ್ರದೇಶವು ಬೆಟ್ಟ ಗುಡ್ಡಗಳಿಂದ ತುಂಬಿದ ಪ್ರದೇಶವಾಗಿದ್ದು, ಬಂಟ್ವಾಳ, ಪುತ್ತೂರು ಹಾಗೂ ಬೆಳ್ತಂಗಡಿ ತಾಲೂಕಿನ ಕೆಲಭಾಗಗಳು ಈ ಪ್ರದೇಶದಲ್ಲಿರುತ್ತವೆ. ಇಲ್ಲಿ ತೆಂಗು, ಅಡಿಕೆ, ರಬ್ಬರ್ ಇತ್ಯಾದಿ ಬೆಳೆಗಳನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ. ಪಶ್ಚಿಮ ಘಟ್ಟ ಪ್ರದೇಶವು ಕಾಡುಗಳಿಂದ ಆವರಿಸಲ್ಪಟ್ಟ ಸದಾ ಕಾಲವೂ ಹಚ್ಚ ಹಸುರಾಗಿ ಕಂಗೊಳಿಸುತ್ತಿರುತ್ತವೆ. ಸುಳ್ಯ ಹಾಗೂ ಬೆಳ್ತಂಗಡಿ ತಾಲೂಕಿನ ಹೆಚ್ಚಿನ ಪ್ರದೇಶಗಳು ಈ ಪ್ರದೇಶದಲ್ಲಿವೆ. ಜಿಲ್ಲೆಯಲ್ಲಿನ ಹೆಚ್ಚಿನ ನದಿಗಳು ಪಶ್ಚಿಮ ಘಟ್ಟಗಳ ತಪ್ಪಲಲ್ಲಿ ಹುಟ್ಟಿ ಪಶ್ಚಿಮಾಭಿಮುಖವಾಗಿ ಹರಿದು ಅರಬ್ಬೀ ಸಮುದ್ರವನ್ನು ಸೇರುತ್ತವೆ. ಇವುಗಳಲ್ಲಿ ನೇತ್ರಾವತಿ, ಕುಮಾರಧಾರ, ಪಯಸ್ವಿನಿ, ಗುರುಪುರ, ಶಾಂಭವಿ ನದಿಗಳು ಪ್ರಮುಖವಾಗಿವೆ.[೨೮]

೩.೬.೩ ದ. ಕ. ಜಿಲ್ಲೆಯ ಜನಸಂಖ್ಯೆ

ದಕ್ಷಿಣ ಕನ್ನಡದ ಒಟ್ಟು ಜನಸಂಖ್ಯೆ ೨೦೧೧ ರ ಜನ ಗಣತಿಯ ಪ್ರಕಾರ ೨೦೮೩೬೭೫ ಅದರಲ್ಲಿ ೪೯.೬ ಪುರುಷರು ಹಾಗೂ ೫೦.೪ ಶೇಕಡಾ ಮಹಿಳೆಯರು ಎಂದು ತಿಳಿದು ಬರುತ್ತದೆ. ಈ ಕೆಳಗಿನ ತಖ್ತೆಯಲ್ಲಿ ದ. ಕ. ಜಿಲ್ಲೆಯ ಜನಸಂಖ್ಯೆಯ ಬಗ್ಗೆ ವಿವರವಾದ ಅಂಕಿ ಅಂಶಗಳನ್ನು ನೀಡಲಾಗಿದೆ.

ಕೋಷ್ಟಕ ೩.೭ : ದಕ್ಷಿಣ ಕನ್ನಡ ಜಿಲ್ಲೆಯ ಜನಸಂಖ್ಯೆ ವಿವರ

ವಿಷಯ	ಪ್ರಮಾಣ	ಶೇಕಡಾವಾರು
1. ಒಟ್ಟು ಜನಸಂಖ್ಯೆ	೨೦೮೩೬೨೫	೧೦೦.೦೦
ಅ) ಗಂಡಸರು	೧೦೩೪೫೭೭	೪೯.೬
ಆ) ಹೆಂಗಸರು	೧೦೫೧೦೪೮	೫೦.೪
2. ಗ್ರಾಮೀಣ ಪ್ರದೇಶದ ಒಟ್ಟು ಜನಸಂಖ್ಯೆ	೧೦೯೧೮೮೮	೧೦೦.೦೦
ಅ) ಗ್ರಾಮೀಣ ಪ್ರದೇಶದ ಗಂಡಸರು	೫೭೪೬೫೭	೫೨.೬
ಆ) ಗ್ರಾಮೀಣ ಪ್ರದೇಶದ ಹೆಂಗಸರು	೫೧೭೨೩೧	೪೭.೪
3. ನಗರ ಪ್ರದೇಶದ ಒಟ್ಟು ಜನಸಂಖ್ಯೆ	೯೯೧೭೩೭	೧೦೦
ಅ) ನಗರ ಪ್ರದೇಶದ ಗಂಡಸರು	೪೯೧೫೧೨	೪೯.೫
ಆ) ನಗರ ಪ್ರದೇಶದ ಹೆಂಗಸರು	೫೦೦೨೨೫	೫೦.೫

Source: ದ. ಕ. ಜಿಲ್ಲಾ ಅಂಕಿ ಅಂಶಗಳ ನೋಟ ೨೦೧೧-೧೨.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗ್ರಾಮಾಂತರ ವಾಸಿಗಳ ಸಂಖ್ಯೆ ಶೇಕಡಾ ೫೨.೪೦ ಆಗಿದ್ದರೆ, ನಗರ ವಾಸಿಗಳ ಪ್ರಮಾಣ ಶೇಕಡಾ ೪೭.೬ ಮಾತ್ರ. ಒಟ್ಟು ಸಂಖ್ಯೆಯಲ್ಲಿ ಪುರುಷರ ಪ್ರಮಾಣ ೪೯.೬ ಶೇ. ಆದರೆ ಹೆಂಗಸರ ಪ್ರಮಾಣ ೫೦.೪ ಆಗಿರುತ್ತದೆ. ಇದರಿಂದ ವ್ಯಕ್ತವಾಗುವುದೇನೆಂದರೆ ದಕ್ಷಿಣ ಕನ್ನಡ ಕೃಷಿ ಪ್ರಧಾನವಾದ ಜಿಲ್ಲೆಯಾಗಿರುವುದರೊಂದಿಗೆ ಸಂತುಲಿತ ಲಿಂಗ ಪ್ರಾಧಾನ್ಯತೆಯನ್ನು ಹೊಂದಿರುವ ಜಿಲ್ಲೆಯಾಗಿದೆ. ಜಿಲ್ಲೆಯ ಜನಸಾಂದ್ರತೆ ಸರಾಸರಿ ೪೧೬ ಆಗಿದ್ದು, ಅತಿ ಹೆಚ್ಚು ಜನಸಾಂದ್ರತೆ ಇರುವ ತಾಲೂಕು ಮಂಗಳೂರು (೧೦೪೮) ಹಾಗೂ ಅತಿ ಕಡಿಮೆ ಜನಸಾಂದ್ರತೆ ಇರುವ ತಾಲೂಕು ಸುಳ್ಯ(೧೭೦) ಒಟ್ಟು ಸಾಕ್ಷರತೆಯ ಪ್ರಮಾಣ ಶೇ. ೮೮.೬೬ ಆಗಿದ್ದು ಇದರಲ್ಲಿ ಗಂಡಸರು ೯೩.೩೧ ಹಾಗೂ ಹೆಂಗಸರು ಶೇ. ೮೪.೦೧ ಆಗಿದ್ದು, ಅತಿ ಹೆಚ್ಚು ಸಾಕ್ಷರರಿರುವ ಬುದ್ಧಿವಂತರ ಜಿಲ್ಲೆ ಎಂಬ ಹೆಗ್ಗಳಿಕೆ ಕೂಡಾ ದಕ್ಷಿಣ ಕನ್ನಡ ಜಿಲ್ಲೆಗೆ ಇದೆ.

೩.೬.೪ ದಕ್ಷಿಣ ಕನ್ನಡ ಜಿಲ್ಲೆಯ ಭೂಬಳಕೆ


ದಕ್ಷಿಣ ಕನ್ನಡ ಜಿಲ್ಲೆಯ ಭೂ ಬಳಕೆಯನ್ನು ಕೋಷ್ಟಕ ೩.೮ ರಲ್ಲಿ ಉಲ್ಲೇಖಿಸಲಾಗಿದೆ.

ಕೋಷ್ಟಕ ೩.೮: ದಕ್ಷಿಣ ಕನ್ನಡ ಜಿಲ್ಲೆಯ ಭೂ ಬಳಕೆ

ಕ್ರ. ಸಂ.	ವಿವರಗಳು	ವಿಸ್ತೀರ್ಣ(ಹೆಕ್ಟೇರುಗಳಲ್ಲಿ)	ಶೇಖಡಾ
೧.	ಅರಣ್ಯ ಪ್ರದೇಶ	೧,೨೮,೪೭೬	೨೬.೯೨%
೨.	ವ್ಯವಸಾಯೇತರ	೬೫೪೪೦	೧೩.೭೧%
೩.	ಬಂಜರು ಭೂಮಿ	೫೮೭೮೦	೧೨.೩೧%
೪.	ಸಾಗುವಳಿಗೆ ಯೋಗ್ಯವಾದ ಬಂಜರು ಭೂಮಿ	೩೦೫೫೪	೬.೪೦%
೫.	ಖಾಯಂ ಗೋಮಾಳ	೧೯೦೨೭	೩.೯೮%
೬.	ವೃಕ್ಷ ಮತ್ತು ತೋಪುಗಳು	೩೧೬೫೨	೬.೬೩%
೭.	ಪ್ರಸ್ತುತ ಬೀಳು ಭೂಮಿ	೬೩೫೭	೧.೩೩%
೮.	ಇತರೆ ಬೀಳು ಭೂಮಿ	೫೪೧೭	೧.೧೩%
೯.	ನಿವ್ವಳ ಬಿತ್ತನೆಯ ಪ್ರದೇಶ	೧೩೧೪೪೬	೨೭.೫೪%
	ಒಟ್ಟು	೪೭೭೧೪೯	೧೦೦%

Source: ದ. ಕ. ಜಿಲ್ಲಾ ಅಂಕಿ ಅಂಶಗಳ ನೋಟ ೨೦೧೧-೧೨.

ದ. ಕ. ಜಿಲ್ಲೆಯ ಒಟ್ಟು ಭೂ ಭಾಗದಲ್ಲಿ ಕೃಷಿ ಮಾಡಲ್ಪಡುತ್ತಿರುವ ಭೂಭಾಗ ಕೇವಲ ಶೇಕಡಾ ೨೭.೫೪. ಇದರಲ್ಲಿ ಶೇಕಡಾ ೧೬.೮ ಭೂಮಿಯನ್ನು ಒಂದಕ್ಕಿಂತ ಹೆಚ್ಚು ಸಲ ಬಿತ್ತನೆ ಮಾಡಲಾಗುತ್ತಿದೆ. ಉಳಿದಂತೆ ಎಲ್ಲಾ ಭೂಮಿಯು ಕೃಷಿಯೇತರ ಉದ್ದೇಶಗಳಿಗಾಗಿ ಹಾಗೂ ಬಂಜರು ಭೂಮಿಯಾಗಿ ಬಳಕೆಯಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯ ಭೂ ಬಳಕೆಯನ್ನು ಕೆಳಗಿನ ಚಿತ್ರದಲ್ಲಿ ವಿವರಿಸಲಾಗಿದೆ.



ಚಿತ್ರ ೩.೩ ದಕ್ಷಿಣ ಕನ್ನಡ ಜಿಲ್ಲೆಯ ಭೂಬಳಕೆ

ಜಿಲ್ಲೆಯಲ್ಲಿ ಅರಣ್ಯ ಪ್ರದೇಶ ಶೇ. ೨೭ ಇದೆ. ಆದರೂ ಜೀವ ವೈವಿಧ್ಯ ನಾಶವಾಗುತ್ತಿರುವ ವೈರುಧ್ಯವನ್ನೂ ಕಾಣಬಹುದು. ಏಕವೃಕ್ಷ (ತೇಗ ಸುಬಾ ಬುಲ್, ಅಕೇಶಿಯಾ, ಗಾಳಿ ಮರ ಇತ್ಯಾದಿ) ಬೆಳೆಸುವುದು ಇದಕ್ಕೊಂದು ಮುಖ್ಯ ಕಾರಣವಾಗಿದೆ. ಅರಣ್ಯ ಭೂಮಿ ಒತ್ತುವರಿ ಒಂದು ಪ್ರಧಾನ ಸಮಸ್ಯೆಯಾಗಿದೆ ಇದರಿಂದಾಗಿ ವನ್ಯ ಜೀವಿಗಳ ಮತ್ತು ಮಾನವರ ನಡುವೆ ಸಂಘರ್ಷ ಆರಂಭವಾಗಿದೆ. ನಗರೀಕರಣ ಪ್ರಕ್ರಿಯೆಯಿಂದಾಗಿ ಕೃಷಿ ಭೂಮಿಯ ಗಾತ್ರ ಕಡಿಮೆಯಾಗುತ್ತಿರುವುದು ಬಹು ದೊಡ್ಡ ಸಮಸ್ಯೆಯಾಗಿದೆ.

೩.೬.೫ ದ.ಕ. ಜಿಲ್ಲೆಯ ವೃತ್ತಿ ಸ್ವರೂಪ

ದ. ಕ. ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಶೇ. ೫೦ ರಷ್ಟು ಮಾತ್ರ ಕೆಲಸಗಾರರು ಉಳಿದ ಶೇ. ೫೦ ರಷ್ಟು ಕೆಲಸಗಾರರಲ್ಲದವರಾಗಿದ್ದು, ಈ ಸಂಖ್ಯೆಯಲ್ಲಿ ದುಡಿಯಲು ಸಾಮರ್ಥ್ಯವಿಲ್ಲದ ವಯಸ್ಕರು, ಮಕ್ಕಳು ಮಾತ್ರವಲ್ಲದೆ ದುಡಿಯಲು ಮನಸ್ಸಿದ್ದು ಕೆಲಸ ಸಿಗದ ನಿರುದ್ಯೋಗಿಗಳು ಹಾಗೂ ದುಡಿಯಲು ಮನಸ್ಸಿಲ್ಲದ ನಿರುದ್ಯೋಗಿಗಳು ಸೇರಿದ್ದಾರೆ. ಕೊನೆ ವರ್ಗಕ್ಕೆ ಸೇರಿದವರು ಸಮಾಜದ ಮೇಲೆ ಒಂದು ಹೊರೆ ಎನಿಸಿಕೊಳ್ಳುವುದು ಮಾತ್ರವಲ್ಲ ಸಮಾಜ ಘಾತುಕ ಚಟುವಟಿಕೆಗಳಿಗೆ ಬಹುಬೇಗ ಬಲಿಯಾಗುತ್ತಾರೆ. ಇವರನ್ನು ಸಮಾಜದ ಮುಖ್ಯ ವಾಹಿನಿಯಲ್ಲಿ ತರುವುದು ಅಗತ್ಯವಾಗಿದ್ದು ಯುವಶಕ್ತಿಯ ದುರ್ಬಳಕೆಯನ್ನು ತಡೆಗಟ್ಟಬೇಕಾಗಿದೆ. ಕೆಳಗಿನ ಕೋಷ್ಟಕ ೩.೯ ರಲ್ಲಿ ದ. ಕ. ಜಿಲ್ಲೆಯ ವೃತ್ತಿ ವಿವರಣೆಯನ್ನು ತೋರಿಸುತ್ತದೆ.



ಕೋಷ್ಟಕ ೩.೯ ದ.ಕ. ಜಿಲ್ಲೆಯ ವೃತ್ತಿ ಸ್ವರೂಪ ೨೦೧೦-೧೧

ವೃತ್ತಿಗಳು	ಗಂಡು	ಹೆಣ್ಣು	ಒಟ್ಟು	ಶೇ.
ಮುಖ್ಯ ಕೆಲಸಗಾರರು	೫೦೫೯೬೨	೩೩೫೫೪೭	೮೪೧೫೦೯	೮೯
ಅರೆಕಾಲಿಕ ಕೆಲಸಗಾರರು	೪೦೪೪೨	೬೪೪೩೯	೧೦೪೮೮೧	೧೧
ಒಟ್ಟು	**೫೪೬೪೦೪**	**೩೯೯೯೮೬**	**೯೪೬೩೯೦**	೧೦೦
ಕೃಷಿ ಸಾಗುವಳಿಗಾರರು	೩೫೩೧೦	೧೪೩೭೪	೪೯೬೮೪	೫.೫
ಕೃಷಿ ಕಾರ್ಮಿಕರು	೨೮೦೪೬	೧೪೫೨೦	೪೨೫೬೬	೪.೫
ಗೃಹ ಕೈಗಾರಿಕೆ ಕೆಲಸಗಾರರು	೧೫೯೮೫	೧೮೪೨೬೨	೨೦೦೨೪೭	೨೧.೦
ಇತರ ಕೆಲಸಗಾರರು	೪೬೭೦೬೩	೧೮೬೮೩೦	೬೫೩೮೯೩	೬೯.೦
ಒಟ್ಟು	**೫೪೬೪೦೪**	**೩೯೯೯೮೬**	**೯೪೬೩೯೦**	೧೦೦
ಒಟ್ಟು ಜನಸಂಖ್ಯೆ	**೯೩೮೪೩೪**	**೯೫೯೨೯೬**	**೧೮೯೭೭೩೦**	೧೦೦

ಮೂಲ:ದ.ಕ. ಜಿಲ್ಲೆಯ ಅಂಕಿ ಅಂಶಗಳ ನೋಟ ೨೦೧೦-೧೧


ದ. ಕ. ಜಿಲ್ಲೆಯ ಒಟ್ಟು ಕೆಲಸಗಾರರಲ್ಲಿ ಶೇ. ೮೯ರಷ್ಟು ಮುಖ್ಯ ಕೆಲಸಗಾರರಾಗಿದ್ದು ಅರೆ ಕೆಲಸಗಾರರ ಪ್ರಮಾಣ ಶೇ. ೧೧ ರಷ್ಟು ಇದೆ. ಕೃಷಿ ಪ್ರಧಾನ ವ್ಯವಸ್ಥೆ ಇದ್ದ ದ.ಕ. ಜಿಲ್ಲೆಯಲ್ಲಿ ಪ್ರಸ್ತುತ ಕೃಷಿ ಸಾಗುವಳಿಯಲ್ಲಿ ತೊಡಗಿರುವವರ ಪ್ರಮಾಣ ಶೇ. ೫.೫ ರಷ್ಟು ಮಾತ್ರ. ಎಂಬುದು ಅಘಾತಕಾರಿ ವಿಷಯ. ಇನ್ನು ಕೃಷಿ ಕಾರ್ಮಿಕರ ಸಂಖ್ಯೆ ಮತ್ತಷ್ಟು ಕಡಿಮೆಯಾಗಿದ್ದುಇದು ಕೇವಲ ಶೇ. ೪.೫ ರಷ್ಟು ಮಾತ್ರವಾಗಿದೆ. ಕೂಲಿ-ಕಾರ್ಮಿಕರ ಕೊರತೆ ದ.ಕ. ಜಿಲ್ಲೆಯ ಕೃಷಿಕರು ಕೃಷಿಯಿಂದ ವಿಮುಖರಾಗುತ್ತಿರುವುದಕ್ಕೆ ಬಹು ಮುಖ್ಯ ಕಾರಣವಾಗಿದೆ. ಗೃಹ ಕೈಗಾರಿಕೆಗಳಲ್ಲಿ ತೊಡಗಿಸಿ ಕೊಂಡವರ ಪ್ರಮಾಣ ಶೇ.೨೧ ರಷ್ಟಿದ್ದು ಅದರಲ್ಲಿ ಶೇ. ೯೨ ರಷ್ಟು ಮಂದಿ ಮಹಿಳೆಯರು ಎಂಬುದು ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ.

ದ. ಕ. ಜಿಲ್ಲೆಯಲ್ಲಿ ಸೇವಾ ವಲಯ ಕ್ಷಿಪ್ರ ಗತಿಯಿಂದ ಬೆಳೆಯುತ್ತಿದ್ದು ಹೋಟೆಲ್ ಉದ್ದಿಮೆ, ಸಾರಿಗೆ ಸಂಪರ್ಕ, ಮೂಲ ಸವಲತ್ತು ಪೂರೈಕೆ, ಕಟ್ಟಡ ನಿರ್ಮಾಣ, ಬ್ಯಾಂಕಿಂಗ್ ಹಾಗೂ ವಿಮಾ ಕ್ಷೇತ್ರ ಇತ್ಯಾದಿ ರಂಗಗಳಲ್ಲಿ ಶೇ. ೬೯ ರಷ್ಟು ಜನರು ನಿರತರಾಗಿದ್ದಾರೆ. ಒಟ್ಟಿನಲ್ಲಿ ದ.ಕ. ಜಿಲ್ಲೆಯ ಜನರು ಜಾಗತೀಕರಣ ಪ್ರಭಾವಕ್ಕೆ ಒಳಗಾಗಿ ತಮ್ಮ ಪಾರಂಪರಿಕ ವೃತ್ತಿಯಿಂದ ನಿಧಾನವಾಗಿ ದೂರ ಸರಿಯುತ್ತಿರುವುದು ಕಂಡು ಬರುತ್ತದೆ.

೩.೬.೬ ದ.ಕ. ಜಿಲ್ಲೆಯ ಆದಾಯದ ಮೂಲಗಳು

ದ. ಕ. ಜಿಲ್ಲೆಯ ಸಮಗ್ರ ಆರ್ಥಿಕ ಚಿತ್ರಣವು ಜಿಲ್ಲೆಯ ವಿವಿಧ ಆದಾಯ ಮೂಲಗಳ ವಿಶ್ಲೇಷಣೆಯಿಂದ ಸ್ಪಷ್ಟವಾಗುತ್ತದೆ. ಸ್ಥಿರ ಬೆಲೆಯಲ್ಲಿ ಆದಾಯದ ವಿವಿಧ ಮೂಲಗಳನ್ನು ಅವಲೋಕಿಸಿದಾಗ ಕೆಲವು ಆಸಕ್ತಿದಾಯಕ ಮಾಹಿತಿಗಳು ಲಭ್ಯವಾಗುತ್ತವೆ. ಜಿಲ್ಲೆಯ ಆದಾಯದ ಮೂಲಗಳನ್ನು ಚಿತ್ರ ೩.೪ ರಲ್ಲಿ ಸ್ಪಷ್ಟ ಪಡಿಸುತ್ತದೆ.

ಚಿತ್ರ ೩.೪ ದಕ್ಷಿಣ ಕನ್ನಡ ಜಿಲ್ಲೆಯ ಆದಾಯದ ಮೂಲಗಳು (೨೦೧೧-೧೨)



ಮೂಲ: ದ. ಕ. ಜಿಲ್ಲೆಯ ಅಂಕಿ ಅಂಶಗಳ ನೋಟ ೨೦೧೧-೧೨

ಕೃಷಿ ಈ ದೇಶದ ಬೆನ್ನೆಲುಬು ಎಂಬ ಉಕ್ತಿ ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಅಪ್ರಸ್ತುತವಾಗಿದೆ. ಕಾರಣ ಜಿಲ್ಲೆಯ ಒಟ್ಟು ಆದಾಯದಲ್ಲಿ ಪ್ರಾಥಮಿಕ ವಲಯದ ಪಾಲು ಕೇವಲ ಶೇ. ೧೨ ಮಾತ್ರ. ೨೦೦೧-೦೨ ರಲ್ಲಿ ಇದು ಶೇ. ೧೭ರಷ್ಟಿದ್ದು ಕಳೆದ ಒಂದು ದಶಕದಲ್ಲಿ ಶೇ. ೫ರಷ್ಟು ಕುಸಿದಿದೆ. ದಕ್ಷಿಣ ಕನ್ನಡ ಜಿಲ್ಲೆಯಿಂದ ಕೃಷಿ ಮರೆಯಾಗುತ್ತಿರುವುದಕ್ಕೆ ಇದೊಂದು ಸ್ಪಷ್ಟ ನಿದರ್ಶನ. ಇದೇ ಅವಧಿಯಲ್ಲಿ ದ್ವಿತೀಯ ವಲಯದ ಭಾಗ ಶೇ. ೨೩ ರಿಂದ ೩೧ ಕ್ಕೆ ಏರಿದ್ದು ತೃತೀಯ ವಲಯದ ಭಾಗ ಶೇ. ೬೦ ರಿಂದ ಶೇ. ೫೭ ಕ್ಕೆ ಇಳಿದಿದೆ. ಅದಾಗ್ಯೂ ಒಟ್ಟು ಆದಾಯದ ಶೇ. ೫೭ರಷ್ಟು ಭಾಗವನ್ನು ತೃತೀಯ ವಲಯ ಆಕ್ರಮಿಸಿರುವುದು ಸೇವಾ ಕ್ಷೇತ್ರದ ಪಾರಮ್ಯವನ್ನು ಸೂಚಿಸುತ್ತದೆ. ತೃತೀಯ ವಲಯದಲ್ಲಿ ಬ್ಯಾಂಕ್‌ಗಳು ಮತ್ತು ವಿಮೆ ಶೇ. ೧೭.೬ರಷ್ಟು ಹಾಗೂ ಹೋಟೆಲ್, ವ್ಯಾಪಾರ ಮತ್ತು ವಸತಿ ಉದ್ದಿಮೆ ಶೇ. ೧೨.೩೧ ರಷ್ಟು, ಸ್ಥಿರಾಸ್ತಿ, ವಾಸ ಗೃಹಗಳ ಒಡೆತನ ಮತ್ತು ವ್ಯಾಪಾರ ಸೇವೆಗಳು ಶೇ. ೭.೫ರಷ್ಟು ಹಾಗೂ ಸಾರಿಗೆ ಶೇ. ೭ರಷ್ಟು ದೇಣಿಗೆ ನೀಡುತ್ತಿರುವುದು ದ.ಕ. ಜಿಲ್ಲೆಯ ಆರ್ಥಿಕತೆಯಲ್ಲಿ ಅವುಗಳ ಮಹತ್ವವನ್ನು ಸೂಚಿಸುತ್ತದೆ. ದ್ವಿತೀಯ ವಲಯದಲ್ಲಿ ನಿರ್ಮಾಣ ಕಾರ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪಾಲು ೨೦೦೧-೦೨ರಲ್ಲಿ ಕೇವಲ ೬ ರಷ್ಟಿದ್ದು ಅದು ೨೦೧೧-೧೨ರಲ್ಲಿ ಶೇ. ೧೨ರಷ್ಟು ಏರಿಕೆ ಕಂಡು ಬಂದಿರುವುದು ಜಿಲ್ಲೆಯಲ್ಲಿ ತ್ವರಿತ ಗತಿಯಿಂದ ಅಭಿವೃದ್ಧಿ ಹೊಂದುತ್ತಿರುವ ನಿರ್ಮಾಣ ಕಾರ್ಯವನ್ನು ಸೂಚಿಸುತ್ತದೆ.

೩.೬.೭ ದ.ಕ. ಜಿಲ್ಲೆಯ ಪ್ರಮುಖ ಬೆಳೆಗಳು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭತ್ತ, ಅಡಿಕೆ, ತೆಂಗು ಪ್ರಮುಖ ಬೆಳೆಗಳಾಗಿದ್ದು ಗೇರು, ಕೋಕ್ಕೋ, ರಬ್ಬರ್, ಕಬ್ಬು, ಹುರುಳಿ, ಉದ್ದು, ಹೆಸರು, ಅಲಸಂಡೆ, ಎಳ್ಳು ಇತ್ಯಾದಿಯಾಗಿ ಹಲವು ಬೆಳೆಗಳನ್ನು ಬೆಳೆಯಲಾಗುತ್ತಿದೆ. ಜಿಲ್ಲೆಯ ಪ್ರಮುಖ ಬೆಳೆಗಳ ವಿಸ್ತೀರ್ಣವನ್ನು ಕೋಷ್ಟಕ ೩.೧೦ ರಲ್ಲಿ ವಿವರಿಸಲಾಗಿದೆ.



ಕೋಷ್ಟಕ ೩.೧೦ ದ.ಕ. ಜಿಲ್ಲೆಯ ಪ್ರಮುಖ ಬೆಳೆಗಳು

ಕ್ರಮ ಸಂಖ್ಯೆ	ಬೆಳೆಗಳು	ಬೆಳೆಯುವ ಪ್ರದೇಶ (ಹೆಕ್ಟೇರುಗಳಲ್ಲಿ)
೧	ಭತ್ತ	೫೫೩೭೨
೨	ದ್ವಿದಳ ಧಾನ್ಯಗಳು	೩೩೯೦
೩	ಅಡಿಕೆ	೨೭೬೪೫
೪.	ಗೇರು	೩೦೯೫೭
೫	ತೆಂಗು	೧೬೧೦೬
೬.	ಬಾಳೆ	೩೧೩೫
೭.	ಹಣ್ಣುಗಳು	೩೭೨೦೭
೮.	ತರಕಾರಿ	೧೬೯೭
೯	ಕೊಕ್ಕೋ	೯೨೯
೧೦.	ಕಬ್ಬು	೧೬
೧೧.	ರಬ್ಬರ್	೧೦೩೯೨
	ಎಲ್ಲಾ ಬೆಳೆಗಳ ನಿವ್ವಳ ವಿಸ್ತೀರ್ಣ	೧೩೦೮೩೩

ಮೂಲ: ದ.ಕ. ಜಿಲ್ಲೆಯ ಅಂಕಿ ಅಂಶಗಳ ನೋಟ ೨೦೦೯–೧೦

ಅಂಕಿ ಅಂಶಗಳ ಲಭ್ಯತೆಯ ಆಧಾರದಲ್ಲಿ ವಿಶ್ಲೇಷಿಸಿದರೆ ಇಂದಿಗೂ ದಕ್ಷಿಣ ಕನ್ನಡ ಜಿಲ್ಲೆ ಭತ್ತ ಪ್ರಧಾನ ಬೆಳೆಯಾಗಿ ಉಳಿದುಕೊಂಡಿದೆ. ಆದರೆ ಇತ್ತೀಚೆಗಿನ ವರ್ಷಗಳಲ್ಲಿ ಭತ್ತ ಕೃಷಿಯ ಸ್ಥಾನವನ್ನು ಅಡಿಕೆ, ರಬ್ಬರ್ ಇತ್ಯಾದಿ ವಾಣಿಜ್ಯ ಬೆಳೆಗಳು ಆಕ್ರಮಿಸಿಕೊಳ್ಳುತ್ತಿರುವುದು ವಾಸ್ತವದ ಸಂಗತಿ.

ದ. ಕ. ಜಿಲ್ಲೆಯ ಮಳೆಯ ಪ್ರಮಾಣ

ಕರಾವಳಿ ಕರ್ನಾಟಕದಲ್ಲಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರತಿ ವರ್ಷ ಸಾಮಾನ್ಯವಾಗಿ ಜೂನ್ ತಿಂಗಳಿನಿಂದ ಸಪ್ಟಂಬರ್ ತಿಂಗಳುಗಳ ಮಧ್ಯೆ ಮಳೆಯನ್ನು ಪಡೆಯುತ್ತಿದೆ. ವಾರ್ಷಿಕ ಸುಮಾರು ೧೨೩ ದಿನಗಳು ಮಳೆಯಾಗುತ್ತದೆ. ಸರಾಸರಿ ೩೯೧೨ ಮಿ.ಮಿ. ಮಳೆಯಾಗುವುದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ವೆ ಸಾಮಾನ್ಯ. ೨೦೧೧ ರಲ್ಲಿ ಮಳೆಯ ಪ್ರಮಾಣ ೪೦೩೧ ಮಿ. ಮಿ. ಗಳೆಂದು ಅಂದಾಜಿಸಲಾಗಿದೆ.

ದ. ಕ. ಜಿಲ್ಲೆಯ ನೀರಾವರಿ ಸೌಲಭ್ಯಗಳು

ವರ್ಷದ ನಾಲ್ಕು ತಿಂಗಳು ಸಾಕಷ್ಟು ಮಳೆ ಸುರಿದರೂ ದ. ಕ. ಜಿಲ್ಲೆಯಲ್ಲಿ ಉಳಿದ ಎಂಟು ತಿಂಗಳು ಬಿರು ಬೇಸಿಗೆಯ ಕಾಲ. ಕೃಷಿಗೆ ಬೇಕಾದ ನಿರಂತರ ನೀರು ಪೂರೈಕೆಗಾಗಿ ನೀರಾವರಿ ಸೌಕರ್ಯಗಳು ಅನಿವಾರ್ಯವೆನಿಸಿವೆ. ದ.ಕ. ಜಿಲ್ಲೆಯಲ್ಲಿ ಸುಮಾರು ಶೇ. ೫೫ ಕೃಷಿ ಭೂಮಿಗೆ ನೀರಾವರಿ ಸೌಲಭ್ಯವಿದೆ. ಕೋಷ್ಟಕ ೩.೧೧ ರಲ್ಲಿ ನೀರಾವರಿಯ ವಿವರಣೆಯನ್ನು ನೀಡಲಾಗಿದೆ.

ಕೋಷ್ಟಕ ೩.೧೧ ದ. ಕ. ಜಿಲ್ಲೆಯ ನೀರಾವರಿ ಮೂಲಗಳು

ನೀರಾವರಿ ಮೂಲಗಳು	ಸಂಖ್ಯೆಗಳು	ಒಟ್ಟು ನೀರಾವರಿಯಾದ ವಿಸ್ತೀರ್ಣ	ಶೇಕಡಾ
ಬಾವಿ	೪೦೭೯೦	೪೧೧೦೪	೫೬.೮೦
ಕೊಳವೆ ಬಾವಿ	೬೭೩೨	೯೯೧೬	೧೩.೭೦
ಏತ ನೀರಾವರಿ	೧೫೨೪	೨೧೪೭	೩.೦೦
ಇತರ ಮೂಲಗಳು	–	೧೯೨೧೧	೨೬.೫೦
ಒಟ್ಟು	–	೭೨೩೭೮	೧೦೦

ಮೂಲ: ದ.ಕ. ಜಿಲ್ಲೆಯ ಅಂಕಿ ಅಂಶಗಳ ನೋಟ ೨೦೧೧–೧೨

ದಕ್ಷಿಣ ಕನ್ನಡ ಜಿಲ್ಲೆಯುಲ್ಲಿ ನೀರಾವರಿ ಮೂಲಗಳಲ್ಲಿ ಶೇ. ೫೬.೮೦ರಷ್ಟು ಭೂಮಿಗೆ ಬಾವಿಗಳಿಂದ ನೀರಾವರಿ ಸೌಲಭ್ಯವು ಒದಗಿರುತ್ತದೆ. ಕೊಳವೆ ಬಾವಿಗಳು ಶೇ. ೧೩.೭ರಷ್ಟು ಭೂಮಿಗೆ ಮಾತ್ರ ನೀರಾವರಿಯನ್ನು ಒದಗಿಸುತ್ತಿದ್ದು ಏತ ನೀರಾವರಿಯ ಪಾತ್ರ ತೀರಾ ನಗಣ್ಯವಾಗಿದೆ. ಉಳಿದಂತೆ ಇತರ ಮೂಲಗಳಾದ ಕೆರೆ, ತೋಡು, ಝರಿ ಇತ್ಯಾದಿಗಳು ಶೇ. ೨೬.೫೦ ರಷ್ಟು ಭೂಮಿಗೆ ನೀರಾವರಿಯನ್ನು ಒದಗಿಸುತ್ತಿದೆ.

ಜಿಲ್ಲೆಯ ಇತರೆ ಆರ್ಥಿಕ ಚಟುವಟಿಕೆಗಳು

ಮೂಲತಃ ಕೃಷಿ ಪ್ರಾಧಾನ್ಯತೆಯನ್ನು ಹೊಂದಿರುವ ಜಿಲ್ಲೆ ಎಂದೆನಿಸಿಕೊಂಡರೂ ದ.ಕ. ಜಿಲ್ಲೆಯಲ್ಲಿ ಕೈಗಾರಿಕೆ, ಮೀನುಗಾರಿಕೆ, ಹೋಟೆಲ್, ಸಾರಿಗೆ ಮತ್ತಿತರ ಚಟುವಟಿಕೆಗಳು ಸಮಾನವಾಗಿ ಬೆಳೆದುಕೊಂಡು ಬಂದಿವೆ. ಸಿದ್ಧ ಉಡುಪುಗಳು, ರಸಾಯನಿಕ, ಇಂಜಿನಿಯರಿಂಗ್ ಹೀಗೆ ಸುಮಾರು ೪೪೫ ಕೈಗಾರಿಕೆಗಳು ಜಿಲ್ಲೆಯಾದ್ಯಂತ ಸ್ಥಾಪನೆಗೊಂಡಿವೆ. ಒಟ್ಟು ೩೪೧೫೬ ಜನರಿಗೆ ಉದ್ಯೋಗ ಅವಕಾಶಗಳನ್ನು ನೀಡಿದ್ದು ಇದರಲ್ಲಿ ಶೇ. ೭೧ ರಷ್ಟು ಗಂಡಸರು ಹಾಗೂ ಉಳಿದ ಶೇ. ೨೯ರಷ್ಟು ಹೆಂಗಸರು ಇದ್ದಾರೆ. ಇದಲ್ಲದೆ ಸುಮಾರು ೨೦೬೫೨ ಸಣ್ಣ ಕೈಗಾರಿಕಾ ಘಟಕಗಳು ಹಾಗೂ ೧೯೧೭೫ ವ್ಯಾಪಾರ, ಹೋಟೆಲ್ ಮತ್ತು ಸಾರಿಗೆ ಚಟುವಟಿಕೆಗಳ ಉದ್ಯಮಗಳು ದ.ಕ. ಜಿಲ್ಲೆಯಲ್ಲಿ ವ್ಯವಹರಿಸುತ್ತಿವೆ. ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ನೋಂದಾಯಿಸಲ್ಪಟ್ಟ ಸಣ್ಣ ಪ್ರಮಾಣದ ಕೈಗಾರಿಕೆಗಳು ಸುಮಾರು ೨೦೪೩೪ ಎಂಬುದು ಅಂಕಿ ಅಂಶಗಳಿಂದ ತಿಳಿದು ಬರುತ್ತದೆ.

ದ. ಕ. ಜಿಲ್ಲೆಯ ಕರಾವಳಿ ಪ್ರದೇಶ ಮತ್ಸ್ಯೋದ್ಯಮದಲ್ಲೂ ಮುಂಚೂಣಿಯಲ್ಲಿದೆ. ಮೀನುಗಾರಿಕೆಯಲ್ಲಿ ಪೂರ್ಣ ಪ್ರಮಾಣದಲ್ಲಿ ತೊಡಗಿರುವವರ ಕುಟುಂಬದ ಸಂಖ್ಯೆ ೨೪೭೪ ಹಾಗೂ ಅರೆಕಾಲಿಕ ಅವಧಿಯಲ್ಲಿ ದುಡಿಯುತ್ತಿರುವ ಕುಟುಂಬದ ಸಂಖ್ಯೆ ೧೪೪೨. ಜಿಲ್ಲೆಯಾದ್ಯಂತ ಸುಮಾರು ೮೦ ಮೀನು ಮಾರುಕಟ್ಟೆಗಳನ್ನು ಹೊಂದಿರುವ ಮೀನುಗಾರಿಕೆಯು ದ.ಕ. ಜಿಲ್ಲೆಯ ಆರ್ಥಿಕತೆಯಲ್ಲಿ ಪ್ರಭಾವಿಯಾಗಿರುವುದು ತಿಳಿದು ಬರುತ್ತದೆ. ಪಶು ಪಾಲನೆಯಲ್ಲೂ ದ.ಕ. ಸಾಕಷ್ಟು ಮುಂಚೂಣಿಯಲ್ಲಿದ್ದು ೨೦೧೧–೧೨ರ ಅಂಕಿ ಅಂಶಗಳ ಪ್ರಕಾರ ಒಟ್ಟು ದನಕರುಗಳ ಸಂಖ್ಯೆ ೩೯೬೭೦೯ ಆಗಿರುತ್ತದೆ.

ಬ್ಯಾಂಕಿಂಗ್ ಹಾಗೂ ಸಹಕಾರಿ ಕ್ಷೇತ್ರದಲ್ಲೂ ದಕ್ಷಿಣ ಕನ್ನಡ ತನ್ನದೇ ಆದ ವೈಶಿಷ್ಟ್ಯತೆಯನ್ನು ಪಡೆದಿದೆ. ಒಟ್ಟು ೪೮೫ ಬ್ಯಾಂಕ್ ಶಾಖೆಗಳಿದ್ದು ಅವುಗಳಲ್ಲಿ ೪೨೫ ರಾಷ್ಟ್ರೀಕೃತ ಬ್ಯಾಂಕುಗಳಾಗಿವೆ. ಬ್ಯಾಂಕ್‌ಗಳಲ್ಲದೆ ೨೧೧ ಪತ್ತಿನ ಸಹಕಾರಿ ಸಂಘಗಳು, ೨೩ ಇತರ ಸಹಕಾರಿ ಸಂಘಗಳು ಹಾಗೂ ೧೩ ನಿಯಂತ್ರಿತ ಮಾರುಕಟ್ಟೆಗಳನ್ನು ಹೊಂದಿರುವ ದ. ಕ. ಜಿಲ್ಲೆ ಸಹಕಾರಿ ಕ್ಷೇತ್ರದ ತವರು ಜಿಲ್ಲೆ ಎಂಬ ಹೆಸರಿಗೆ ಸಾರ್ಥಕ್ಯವನ್ನು ಒದಗಿಸಿದೆ.

೩.೭ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೇರು ಕೃಷಿ ಮತ್ತು ಉದ್ಯಮ

ಗೇರು ಕರಾವಳಿಯ ದ.ಕ. ಜಿಲ್ಲೆಯ ಸಾಂಪ್ರದಾಯಿಕ ಬೆಳೆ ಎಂದು ಗುರುತಿಸಿಕೊಂಡಿದೆ. ಗೇರು ಬೆಳೆಯುವುದಕ್ಕೆ ಬೇಕಾದ ಸೂಕ್ತ ಹವಾಮಾನ, ಮಣ್ಣಿನ ಸಾರ, ಮತ್ತು ಭೌಗೋಳಿಕತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವುದು ಇದಕ್ಕೆ ಕಾರಣ. ಗೇರು ಉಷ್ಣ ವಲಯದ ಬೆಳೆ. ಹೆಚ್ಚು ಆರ್ದ್ರತೆಯಿಂದ ಕೂಡಿದ, ವರ್ಷದಲ್ಲಿ ಉಷ್ಣತೆ ೧೮° ಸೆ. ನಿಂದ ೩೭° ಸೆ. ವ್ಯತ್ಯಾಸವಿರುವ ಪಶ್ಚಿಮ ಕರಾವಳಿ ಪ್ರದೇಶದ ಹವಾಗುಣ ಗೇರು ಬೆಳೆಯ ಬೇಸಾಯಕ್ಕೆ ಅತ್ಯುತ್ತಮ. ಗಿಡಗಳು ಸ್ವಲ್ಪ ಕಾಲದವರೆಗೆ ಚಳಿಯನ್ನು ತಡೆಯಬಲ್ಲವು. ಉಷ್ಣತೆ ೨೪° ಸೆ. ನಿಂದ ೨೮° ಸೆ. ಗೇರು ಬೆಳೆಗೆ ಅತೀ ಉತ್ತಮ.[೨೯] ಹೂ ಬಿಟ್ಟು ಕಾಯಿ ಕಚ್ಚುವ ಸಮಯದಲ್ಲಿ ಒಣ ಹವೆಯಿಂದ ಕೂಡಿದ ವಾರ್ಷಿಕ ೩೦೦೦ ಮಿ. ಮೀ. ನಿಂದ ೪೦೦೦ ಮಿ. ಮೀ. ವರೆಗೆ ಮಳೆ ಬೀಳುವ ಹಾಗೂ ಸಮುದ್ರ ಮಟ್ಟದಿಂದ ಸರಾಸರಿ ೧೦೦ ಮಿ. ಎತ್ತರದವರೆಗೆ ಇದನ್ನು ಯಶಸ್ವಿಯಾಗಿ ಬೆಳೆಯಬಹುದು. ಗೇರು ಬೆಳೆಯನ್ನು ಚೆನ್ನಾಗಿ ನೀರು ಬಸಿದುಹೋಗುವ, ಮಣ್ಣಿನ ಆಳ ೧ ಮೀ. ನಿಂದ ೧.೫ಮೀ., ರಸಸಾರ ೫.೪ರಿಂದ ೭.೦ ಇರುವ ಜಂಬಿಟ್ಟಿಗೆ, ಕೆಂಪು ಗೂಡು ಮಣ್ಣುಗಳಲ್ಲಿ ಉತ್ತಮವಾಗಿ ಬೆಳೆಯಬಹುದು. ನೀರು ನಿಲ್ಲುವ ಪ್ರದೇಶ ಈ ಬೆಳೆಗೆ ಯೋಗ್ಯವಲ್ಲ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿದಾಗ ಕರಾವಳಿ ಪ್ರದೇಶ ಗೇರು ಬೆಳೆಗೆ ಹೆಚ್ಚು ಪ್ರಶಸ್ತವಾಗಿದೆ. ವಾರ್ಷಿಕ ೪೦೦೦ ಮಿ.ಮೀ ಮಳೆ ಬೀಳುವ ಈ ಬಾಗ ಕನಿಷ್ಠ ೨೧° ಸೆ. ಯಿಂದ ೨೬° ಸೆ. ಹಾಗೂ ಗರಿಷ್ಠ ೨೮° ಸೆ. ಯಿಂದ ೩೪° ಸೆ. ತಾಪಮಾನ ಹೊಂದಿದ ಕರಾವಳಿ ಭಾಗ ವರ್ಷವೆಲ್ಲಾ ಹೆಚ್ಚು ವ್ಯತ್ಯಾಸವಿಲ್ಲದಿರುವ ಹವಾಮಾನ ಹೊಂದಿದೆ. ಜೇಡಿಮಣ್ಣು, ಮುರ ಮಣ್ಣು ಹೊಂದಿರುವ ಈ ಭಾಗದಲ್ಲಿ ಗೇರು ಬೆಳೆಯುವುದು ಹೆಚ್ಚು ಸೂಕ್ತ. ಪಶ್ಚಿಮ ಘಟ್ಟಗಳಿಂದ ಕೂಡಿದ ದ. ಕ. ಜಿಲ್ಲೆಯ ಭೂಭಾಗದಲ್ಲಿ ನೀರು ಬಸಿದು ಹೋಗುವುದರಿಂದ ಗೇರು ಬೆಳೆಗೆ ಅತ್ಯುತ್ತಮ ಭೌಗೋಳಿಕತೆಯನ್ನು ಹೊಂದಿದೆ.[೩೦] ಈ ಎಲ್ಲಾ ದೃಷ್ಟಿಯಿಂದ ಗೇರು ದ. ಕ. ಜಿಲ್ಲೆಯ ವಿಶಿಷ್ಟ ಪಾರಂಪರಿಕ ಬೆಳೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಕಳೆದ ಹತ್ತು ವರ್ಷಗಳಲ್ಲಿ ದ. ಕ. ಜಿಲ್ಲೆಯ ಗೇರು ಬೆಳೆಯುವ ಪ್ರದೇಶದ ಬೆಳವಣಿಗೆ ಸರಾಸರಿ ೨೦ ಶೇಕಡಾವಾಗಿದ್ದು ಹೆಚ್ಚಿನ ಪ್ರಮಾಣದ ಬದಲಾವಣೆ ಕಂಡು ಬಂದಿಲ್ಲ. ಅದಾಗ್ಯೂ ಕಳೆದ ಮೂರು ವರ್ಷಗಳಲ್ಲಿ ಇದು ಸರಾಸರಿ ೩ ಶೇಕಡಾ ಏರಿಕೆಯಾಗಿರುವುದು ಕಂಡು ಬರುತ್ತದೆ. ದ. ಕ. ಜಿಲ್ಲೆಯಲ್ಲಿ ಎಲ್ಲಾ ಬೆಳೆಗಳ ವಿಸ್ತೀರ್ಣ ಹಾಗೂ ಗೇರು ಬೆಳೆಯ ಪಾಲನ್ನು ಕೋಷ್ಟಕ ೩.೧೨ ರಲ್ಲಿ ತೋರಿಸಲಾಗಿದೆ.


ಕೋಷ್ಟಕ ೩.೧೨ ದ. ಕ. ಜಿಲ್ಲೆಯಲ್ಲಿ ಎಲ್ಲಾ ಬೆಳೆಗಳ ನಿವ್ವಳ ವಿಸ್ತೀರ್ಣ ಹಾಗೂ ಗೇರು ಬೆಳೆಯ ಪಾಲು

೨೦೦೦-೨೦೧೦

ಕ್ರಮ ಸಂಖ್ಯೆ	ವರ್ಷ	ಎಲ್ಲಾ ಬೆಳೆಗಳ ನಿವ್ವಳ ವಿಸ್ತೀರ್ಣ (ಹೆಕ್ಟೇರುಗಳಲ್ಲಿ)	ಗೇರು ಬೆಳೆ (ಹೆಕ್ಟೇರುಗಳಲ್ಲಿ)	ಗೇರು ಬೆಳೆಯ ಪಾಲು (%)
೧.	೨೦೦೦-೦೧	೧೩೩೦೦೨	೨೭೪೫೯	೨೦.೬
೨.	೨೦೦೧-೦೨	೧೩೩೬೮೪	೨೭೬೬೨	೨೦.೬
೩.	೨೦೦೨-೦೩	೧೩೩೬೯೮	೨೮೦೨೩	೨೦.೯
೪.	೨೦೦೩-೦೪	೧೩೪೨೪೬	೨೯೩೮೨	೨೧.೮
೫.	೨೦೦೪-೦೫	೧೩೩೩೫೦	೨೯೩೮೨	೨೨.೦
೬.	೨೦೦೫-೦೬	೧೩೧೪೩೮	೨೯೫೮೫	೨೨.೫
೭.	೨೦೦೬-೦೭	೧೩೧೯೮೭	೨೯೮೬೨	೨೨.೬
೮.	೨೦೦೭-೦೮	೧೩೦೩೯೯	೩೦೫೯೧	೨೩.೪
೯.	೨೦೦೮-೦೯	೧೩೦೩೯೯	೩೦೫೯೧	೨೩.೪
೧೦.	೨೦೦೯-೧೦	೧೩೦೮೩೩	೩೦೯೫೭	೨೩.೬

ಮೂಲ: ದಕ್ಷಿಣ ಕನ್ನಡ ಅಂಕಿ ಅಂಶಗಳ ನೋಟ.

ಕಳೆದ ಒಂದು ದಶಕದಲ್ಲಿ ದ. ಕ. ಜಿಲ್ಲೆಯ ಒಟ್ಟು ಬೆಳೆಗಳ ವಿಸ್ತೀರ್ಣದಲ್ಲಿ ಶೇ. ೧.೬೩ ರಷ್ಟು ಕುಸಿತ ಕಂಡು ಬಂದಿದ್ದರೂ, ಗೇರು ಬೆಳೆಯ ವಿಸ್ತೀರ್ಣದಲ್ಲಿ ಶೇ. ೧೨.೭ರಷ್ಟು ಹೆಚ್ಚಾಗಿರುವುದನ್ನು ಗಮನಿಸಬಹುದು. ನಗರೀಕರಣ, ಕೈಗಾರಿಕೀಕರಣದ ಭರಾಟೆಯಲ್ಲಿ ಒಟ್ಟು ಕೃಷಿ ಭೂಮಿಯ ವಿಸ್ತೀರ್ಣ ಕುಸಿಯುತ್ತಿದ್ದಾಗ್ಯೂ, ಗೇರು ಬೆಳೆ ಪ್ರದೇಶ ಹೆಚ್ಚಾಗಿರುವುದು ದ. ಕ. ಜಿಲ್ಲೆಯಲ್ಲಿ ಗೇರು ಕೃಷಿಗೆ ಭರವಸೆ ಮೂಡಿಸುತ್ತದೆ.



ಚಿತ್ರ ೩.೫ ದ.ಕ. ಜಿಲ್ಲೆಯಲ್ಲಿ ಎಲ್ಲಾ ಬೆಳೆಗಳ ನಿವ್ವಳ ವಿಸ್ತೀರ್ಣ ಹಾಗೂ ಗೇರು ಬೆಳೆಯ ಪಾಲು ೨೦೦೦-೨೦೧೦



೨೦೦೦-೦೧ ರಿಂದ ೨೦೧೦ರ ಒಂದು ದಶಕದ ಅವಧಿಯ ಪ್ರಗತಿಯನ್ನು ವಿಶ್ಲೇಷಿಸಿದರೆ ಹೆಚ್ಚಿನ ಬದಲಾವಣೆ ಆಗದೆ ಇರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಒಟ್ಟು ಎಲ್ಲಾ ಬೆಳೆಗಳ ವಿಸ್ತೀರ್ಣದಲ್ಲಿ ಗೇರು ಬೆಳೆಯುವ ಪ್ರದೇಶದ ವಿಸ್ತೀರ್ಣ ಸೇ. ೨೦.೬ ರಷ್ಟು ಇದ್ದು ೨೦೦೯-೧೦ರಲ್ಲಿ ಅದು ಶೇ. ೨೩.೬ ರಷ್ಟು ಆಗಿದೆ. ಇಲ್ಲಿ ವಿಸ್ತೀರ್ಣದ ವ್ಯಾಪ್ತಿ ಕೇವಲ ಶೇ. ೩ ಮಾತ್ರ ಹೆಚ್ಚಳವಾಗಿದ್ದರೂ ಪ್ರಸ್ತುತ ಗೇರು ಬೆಳೆಯ ಪ್ರದೇಶದ ವಿಸ್ತೀರ್ಣ ಕುಸಿಯುತ್ತಿದೆ ಎಂಬ ಮಾತಿಗೆ ಇದು ಅಪವಾದ ಎಂದೆನಿಸಿಕೊಂಡಿದೆ. ದ. ಕ. ಜಿಲ್ಲೆಯ ತಾಲೂಕುವಾರು ಗೇರು ಬೆಳೆಯುವ ಪ್ರದೇಶದ ವಿವರವನ್ನು ಗಮನಿಸಿದಲ್ಲಿ ಈ ಅಂಶ ಮತ್ತಷ್ಟು ಸ್ಪಷ್ಟವಾಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯ ತಾಲೂಕುವಾರು ಗೇರು ಬೆಳೆಯ ಪ್ರದೇಶದ ವಿಸ್ತೀರ್ಣವನ್ನು ಕೋಷ್ಟಕ ೩.೧೩ ರಲ್ಲಿ ವಿವರಿಸಲಾಗಿದೆ.


ಕೋಷ್ಟಕ ೩. ೧೩. ದಕ್ಷಿಣ ಕನ್ನಡ ಜಿಲ್ಲೆಯ ತಾಲೂಕುವಾರು ಗೇರು ಬೆಳೆ ಪ್ರದೇಶ (ಹೆಕ್ಟೇರುಗಳಲ್ಲಿ)

ವರ್ಷ	ಬಂಟ್ವಾಳ	ಬೆಳ್ತಂಗಡಿ	ಮಂಗಳೂರು	ಪುತ್ತೂರು	ಸುಳ್ಯ	ಒಟ್ಟು
೨೦೦೦-೦೧	೫೨೫೭	೮೮೯೨	೩೫೨೩	೫೫೮೭	೪೨೦೬	೨೭೪೫೯
೨೦೦೧-೦೨	೫೨೬೬	೮೮೯೮	೩೫೨೩	೫೭೪೬	೪೨೨೯	೨೭೬೬೨
೨೦೦೨-೦೩	೫೨೯೯	೯೧೫೬	೩೫೨೪	೫೮೦೩	೪೨೪೧	೨೮೦೨೩
೨೦೦೩-೦೪	೫೫೮೪	೯೨೫೨	೩೫೨೩	೬೧೧೧	೪೯೧೨	೨೯೩೮೨
೨೦೦೪-೦೫	೫೫೮೪	೯೨೫೨	೩೫೨೩	೬೧೧೧	೪೯೧೨	೨೯೩೮೨
೨೦೦೫-೦೬	೫೫೮೫	೯೨೬೧	೩೫೨೩	೬೨೦೪	೪೯೧೨	೨೯೫೮೫
೨೦೦೬-೦೭	೬೫೮೪	೯೨೨೪	೩೫೨೪	೬೨೧೦	೪೯೨೦	೨೯೮೬೨
೨೦೦೭-೦೮	೬೫೯೪	೯೩೪೪	೩೫೩೭	೬೨೧೭	೪೮೯೯	೩೦೫೯೧
೨೦೦೮-೦೯	೬೫೯೪	೯೩೪೪	೩೫೩೭	೬೨೧೭	೪೮೯೯	೩೦೫೯೧
೨೦೦೯-೧೦	೬೫೯೬	೯೩೪೭	೩೫೧೧	೬೬೦೧	೪೯೦೨	೩೦೯೫೭

ಮೂಲ: ದಕ್ಷಿಣ ಕನ್ನಡ ಅಂಕಿ ಅಂಶಗಳ ನೋಟ.

೨೦೦೦-೦೧ ಹಾಗೂ ೨೦೦೯-೧೦ ರ ನಡುವಿನ ಹತ್ತು ವರ್ಷಗಳ ಅವಧಿಯಲ್ಲಿ ಗೇರು ಬೆಳೆಯುವ ಪ್ರದೇಶದ ವಿಸ್ತೀರ್ಣ ಶೇ. ೧೨.೭ ರಷ್ಟು ಹೆಚ್ಚಳವಾಗಿರುವುದು ಕಂಡುಬರುತ್ತದೆ. ದಶಕದ ಅವಧಿಯಲ್ಲಿ ಈ ಬೆಳವಣಿಗೆ ತೀರಾ ನಗಣ್ಯವೆನಿಸಿದರೂ ಗೇರು ಬೆಳೆಯುವ ಪ್ರದೇಶದ ವಿಸ್ತೀರ್ಣ ಕುಸಿಯದೆ ಇರುವುದು ಇಲ್ಲಿ ಮುಖ್ಯವಾಗುತ್ತದೆ. ಬೆಳ್ತಂಗಡಿ ತಾಲೂಕು ಒಟ್ಟು ಗೇರು ಕೃಷಿ ಭೂಮಿಯ ಶೇ. ೩೦ ರಷ್ಟು ಹೊಂದಿ ಮೊದಲ ಸ್ಥಾನಿ ಎನಿಸಿಕೊಂಡರೆ ಮಂಗಳೂರು ತಾಲೂಕು ಶೇ. ೧೧ ರಷ್ಟು ಹೊಂದಿ ಕೊನೆಯ ಸ್ಥಾನವನ್ನು ಪಡೆದುಕೊಂಡಿದೆ. ಬಂಟ್ವಾಳ ಪುತ್ತೂರು ಹಾಗೂ ಸುಳ್ಯ ಕ್ರಮವಾಗಿ ಎರಡನೆಯ, ಮೂರನೆಯ ಹಾಗೂ ನಾಲ್ಕನೆಯ ಸ್ಥಾನವನ್ನು ಆಕ್ರಮಿಸಿಕೊಂಡಿವೆ. ಇದೇ ಅವಧಿಯಲ್ಲಿ ಬಂಟ್ವಾಳದ ಗೇರು ಪ್ರದೇಶದ ವಿಸ್ತೀರ್ಣ ಶೇ. ೨೫.೫ರಷ್ಟು, ಬೆಳ್ತಂಗಡಿ ತಾಲೂಕು ಶೇ. ೫ ರಷ್ಟು ಪುತ್ತೂರು ತಾಲೂಕು ಶೇ. ೧೮ ರಷ್ಟು ಹಾಗೂ ಸುಳ್ಯ ತಾಲೂಕು ಶೇ.೧೬.೫ರಷ್ಟು ಹೆಚ್ಚಳ ಕಂಡಿದ್ದರೆ, ಮಂಗಳೂರು ತಾಲೂಕು ಶೇ. ೦.೩ರಷ್ಟು ಕುಸಿತವನ್ನು ಕಂಡಿದೆ. ಗೇರು ಕೃಷಿಯು ಕಣ್ಮರೆಯಾಗುತ್ತಿದೆ ಎಂಬ ಸಾರ್ವತ್ರಿಕ ಅಭಿಪ್ರಾಯಕ್ಕೆ ಅಪವಾದ ಎಂಬಂತೆ ಗೇರು ಕೃಷಿ ಪ್ರದೇಶದ ವಿಸ್ತೀರ್ಣ ಸ್ಥಾಯಿಯಾಗಿರುವುದು ಇಲ್ಲಿ ಕಂಡುಬರುತ್ತದೆ.

೨೦೦೯-೧೦ ರ ದಕ್ಷಿಣ ಕನ್ನಡ ಜಿಲ್ಲೆಯ ಒಟ್ಟು ಗೇರು ಪ್ರದೇಶದಲ್ಲಿ ತಾಲೂಕುವಾರು ಭಾಗವನ್ನು ಕೆಳಗಿನ ಚಿತ್ರ ೩.೬ ರಲ್ಲಿ ತೋರಿಸಲಾಗಿದೆ.



ಚಿತ್ರ ೩. ೬: ೨೦೦೯-೧೦ ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ತಾಲೂಕುವಾರು ಒಟ್ಟು ಗೇರು ಬೆಳೆಯುವ ಪ್ರದೇಶ

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕನ್ನು ಹೊರತು ಪಡಿಸಿದರೆ ಉಳಿದೆಲ್ಲಾ ತಾಲೂಕುಗಳಲ್ಲಿ ಗೇರು ಪ್ರದೇಶದ ವಿಸ್ತೀರ್ಣ ಅಲ್ಪ ಸ್ವಲ್ಪ ಹೆಚ್ಚಳದೊಂದಿಗೆ ಮುಂದುವರಿದಿರುವುದು ಉದ್ಯಮದ ದೃಷ್ಟಿಯಿಂದ ಧನಾತ್ಮಕ ಅಂಶ. ಬೆಳ್ತಂಗಡಿ ತಾಲೂಕಿನ ಗೇರು ಪ್ರದೇಶದ ವಿಸ್ತೀರ್ಣದ ಹೆಚ್ಚಳ ಕೇವಲ ಶೇ. ೫ ರಷ್ಟು ಮಾತ್ರ. ಆದಾಗ್ಯೂ ಒಟ್ಟು ಪ್ರದೇಶದ ಶೇ. ೩೦ ರಷ್ಟು ಭಾಗ ಹೊಂದಿರುವ ಬೆಳ್ತಂಗಡಿ ತಾಲೂಕು ಗೇರು ಉತ್ಪಾದನೆಯಲ್ಲಿ ತನ್ನ ಪ್ರಾಬಲ್ಯವನ್ನು ಉಳಿಸಿಕೊಳ್ಳುವುದರಲ್ಲಿ ಸಫಲವಾಗಿದೆ ಎನ್ನಬಹುದು.

ವಾಣಿಜ್ಯ ಚಟುವಟಿಕೆಗಳನ್ನೊಳಗೊಂಡಂತೆ ಬ್ಯಾಂಕಿಂಗ್, ಕೈಗಾರಿಕೆ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ಅಭೂತ ಪೂರ್ವ ಮುನ್ನಡೆ ಸಾಧಿಸಿದ ದಕ್ಷಿಣ ಕನ್ನಡ ಜಿಲ್ಲೆ ತನ್ನ ಮೂಲ ಕಸುಬಾದ ಕೃಷಿಯನ್ನು ಇನ್ನೂ ಸಂರಕ್ಷಿಸಿಕೊಂಡು ಬಂದಿದೆ. ಅದರಲ್ಲೂ ಗೇರು ಉದ್ಯಮದಲ್ಲಿ ದ. ಕ. ಜಿಲ್ಲೆ ಕರ್ನಾಟಕದಲ್ಲೇ ಮೊದಲ ಸ್ಥಾನಿಯಾಗಿದೆ. ಬೀಡಿ ಹಾಗೂ ಹೆಂಚು ಉದ್ಯಮವನ್ನು ಹೊರತು ಪಡಿಸಿದರೆ ಗೇರು ಉದ್ಯಮ ಜಿಲ್ಲೆಯ ಸಾಮಾಜಿಕ ಹಾಗೂ ಆರ್ಥಿಕ ಜೀವನದಲ್ಲಿ ನಿರ್ಣಾಯಕ ಪಾತ್ರವನ್ನು ನಿರ್ವಹಿಸುತ್ತಿದೆ. ಬೀಡಿ ಹಾಗೂ ಹೆಂಚು ಉದ್ಯಮಗಳು ಇತ್ತೀಚೆಗಿನ ವರ್ಷಗಳಲ್ಲಿ ಅವನತಿಯ ಹಾದಿಯಲ್ಲಿ ಸಾಗುತ್ತಿರುವುದರಿಂದ ಗೇರು ಉದ್ಯಮ ದ. ಕ. ಜಿಲ್ಲೆಯನ್ನೊಳಗೊಂಡಂತೆ ರಾಜ್ಯದಲ್ಲೇ ಭರವಸೆಯ ಬೆಳಕನ್ನು ಚೆಲ್ಲುತ್ತಿದೆ.[೩೧]

ದ. ಕ. ಜಿಲ್ಲೆಯಲ್ಲಿ ಗೇರು ಉದ್ಯಮದ ಇತಿಹಾಸದ ಪುಟಗಳನ್ನು ತಿರುವಿ ಹಾಕಿದರೆ ಅನೇಕ ಅಂಶಗಳು ಬೆಳಕಿಗೆ ಬರುತ್ತವೆ. ೧೯೩೦ ರ ದಶಕದ ಪ್ರಾರಂಭದಲ್ಲಿ ಮಂಗಳೂರಿನ ಕುಲಶೇಖರ ಸಮೀಪದ ಓರ್ವ ಮಹಿಳೆ ಪುಲ್ಕಾ ಭಾಯಿ (ಶ್ರೀಮತಿ ಫಿಲೋಮಿನ) ಎಂಬುವವರು ಮೊಟ್ಟ ಮೊದಲ ಬಾರಿಗೆ ಗೇರು ಬೀಜದ ತಯಾರಿಕೆಯನ್ನು ತಮ್ಮದೇ ಆದ ಸಾಂಪ್ರದಾಯಿಕ ವಿಧಾನ ಬಳಸಿ ಪ್ರಾರಂಭಿಸಿದರು. ತೆರೆದ ಕಬ್ಬಿಣದ ಬಾಣಲೆಯಲ್ಲಿ ಗೇರು ಬೀಜವನ್ನು ಹುರಿದು, ಕುಟ್ಟಿ ಗೋಡಂಬಿಯ ತಿರುಳನ್ನು ಹೊರ ತೆಗೆದು ವಾರದ ಸಂತೆಗಳಿಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಿದ್ದರು. ಅವರಿಗೆ ಅವರದ್ದೇ ಆದ ಸೀಮಿತ ಗ್ರಾಹಕರಿದ್ದು ಹಬ್ಬ ಹರಿದಿನಗಳ ಸಂದರ್ಭದಲ್ಲಿ ವಿಶೇಷ ಬೇಡಿಕೆ ಇರುತ್ತಿತ್ತು.[೩೨] ಮಹಿಳಾ ಪ್ರಾಧಾನ್ಯತೆ



ಇರುವ ಗೇರು ಉದ್ದಿಮೆಯ ಪ್ರಾರಂಭವೂ ಕೂಡಾ ಓರ್ವ ಮಹಿಳೆಯಿಂದಲೇ ಆಯಿತು ಎಂಬುದು ಇಲ್ಲಿ ಉಲ್ಲೇಖಾರ್ಹ. ೧೯೩೦ ರ ದಶಕದ ಕೊನೆ ಭಾಗದಲ್ಲಿ ಪುಲ್ಕಾಬಾಯಿಯವರು ನಡೆಸುತ್ತಿದ್ದ ಗೇರು ಉದ್ದಿಮೆಯನ್ನು ಮೆ॥ ಪಿಯರ್ಸ್ ಲೆಸ್ಲೆ ಇಂಡಿಯಾ ಲಿಮಿಟೆಡ್ ಎಂಬ ಸಂಸ್ಥೆ ಸ್ವಾಧೀನಪಡಿಸಿಕೊಂಡು ವ್ಯವಸ್ಥಿತ ರೀತಿಯಲ್ಲಿ ಗೇರು ಸಂಸ್ಕರಣೆಯನ್ನು ಪ್ರಾರಂಭಿಸಿತು. ತೆರೆದ ಬಾಣಲೆಯಲ್ಲಿ ಗೇರು ಬೀಜವನ್ನು ಹುರಿದು ಅದನ್ನು ಸುಲಿಯಲು ಮನೆ ಮನೆಗಳಿಗೆ ಹಂಚಲಾಗುತ್ತಿತ್ತು. ವಿಶೇಷವಾಗಿ ಹೆಂಗಸರು ಗೋಣಿ ಚೀಲಗಳಲ್ಲಿ ಹುರಿದ ಗೇರು ಬೀಜಗಳನ್ನು ತುಂಬಿಸಿ ಮನೆಗೆ ತೆಗೆದುಕೊಂಡು ಹೋಗಿ ಅದನ್ನು ಒಡೆದು ಗೋಡಂಬಿಯ ತಿರುಳನ್ನು ಹೊರ ತೆಗೆದು ಮರು ದಿನ ಕಾರ್ಖಾನೆಗೆ ತಂದು ಕೊಡುತ್ತಿದ್ದರು. ಒಂದು ಚೀಲಕ್ಕೆ ಇಂತಿಷ್ಟು ಎಂದು ಕೂಲಿ ನೀಡಲಾಗುತ್ತಿತ್ತು. ಆ ದಿನಗಳಲ್ಲಿ ಗೇರು ಬೀಜವನ್ನು ಕೊಡುವಾಗ ಆಗಲೀ ಅಥವಾ ಅದನ್ನು ಮರಳಿ ಪಡೆಯುವಾಗ ಆಗಲೀ ತೂಕ ಮಾಡುತ್ತಿರಲಿಲ್ಲ. ವ್ಯವಹಾರ ಶುದ್ಧ ನಂಬಿಕೆಯ ಆಧಾರದಲ್ಲೇ ನಡೆಯುತ್ತಿತ್ತು. ಆ ದಿನಗಳಲ್ಲಿ ಮಾಲಿಕರ ಹಾಗೂ ಕಾರ್ಮಿಕರ ನಡುವೆ ಇದ್ದ ವಿಶ್ವಾಸಾರ್ಹತೆಯನ್ನು ಅದು ಸೂಚಿಸುತ್ತಿತ್ತು.[೩೩] ಮೊಟ್ಟ ಮೊದಲನೆಯ ಮಾರಾಟ ಒಪ್ಪಂದದ ಪ್ರಕಾರ ಮುಂಬೈ ಹಾಗೂ ನಂತರ ಕಾನ್ಪುರ, ಡೆಲ್ಲಿ, ಅಹಮದಾಬಾದಿಗೆ ಗೋಣಿ ಚೀಲಗಳಲ್ಲಿ ಗೋಡಂಬಿಯನ್ನು ತುಂಬಿಸಿ ಕಳುಹಿಸಿ ಕೊಡಲಾಯಿತು. ಮೊಟ್ಟ ಮೊದಲ ರಫ್ತು ವ್ಯಾಪಾರವನ್ನು ಪಿಯರ್ಸ್ ಲೆಸ್ಲೆ ಕಂಪೆನಿ ಹಾಗೂ ಮಿಜಾರ್ ಗೋವಿಂದ ಅಣ್ಣಪ್ಪ ಪೈ ಕಂಪೆನಿಗಳು ಪ್ರಾರಂಭಿಸಿದವು.[34] ೧೮೬೨ ರಲ್ಲಿ ಪ್ರಾರಂಭವಾದ ಪಿಯರ್ ಲೆಸ್ಲೆ ಕಂಪೆನಿಯು ಗೋಡಂಬಿ ಸಂಸ್ಕರಣೆ ಹಾಗೂ ನಿರ್ಯಾತದಲ್ಲಿ ತನ್ನದೇ ಆದ ಛಾಪು ಮೂಡಿಸಿದೆ. ಬ್ರಿಟಿಷ್ ಸ್ನೇಹಿತರಾದ ರಾಬರ್ಟ್ ಪಿಯರ್ ಹಾಗೂ ಪ್ಯಾಟ್ರಿಕ್ ಲೆಸ್ಲೆ ಎಂಬುವವರು ಜಂಟಿಯಾಗಿ ಸ್ಥಾಪಿಸಿದ ಈ ಸಂಸ್ಥೆ ಪ್ರಾರಂಭದಲ್ಲಿ ಕಾಫಿ ಬೀಜ ಸಂಸ್ಕರಣೆಯನ್ನು ಕೈಗೆತ್ತಿಕೊಂಡಿತ್ತು. ೧೯೨೪ ರಿಂದ ಗೋಡಂಬಿ ಸಂಸ್ಕರಣೆ ಹಾಗೂ ನಿರ್ಯಾತದ ವಹಿವಾಟನ್ನು ಪ್ರಾರಂಭಿಸಿದ ಪಿಯರ್‌ಲೆಸ್ಲೆ ಕಂಪೆನಿಯು ೬೦ ರ ದಶಕದ ಹೊತ್ತಿಗೆ ಭಾರತದಲ್ಲಿ ಸಾಮಾಜಿಕ ಹಾಗೂ ಆರ್ಥಿಕ ಮಹತ್ವನ್ನು ಪಡೆದುಕೊಂಡು ಒಂದು ಪ್ರತಿಷ್ಠಿತ ಸಂಸ್ಥೆಯಾಗಿ ಮಾರ್ಪಾಡಾಯಿತು.[೩೫]

೧೯೨೨ ರಲ್ಲಿ ಈ ಕಂಪೆನಿಯ ತಾಂತ್ರಿಕ ಸಲಹೆಗಾರರಾಗಿದ್ದ ಶ್ರೀ ಜೆಫ್ರಿನ್ ಎಂಬುವವರು ಮೊಟ್ಟ ಮೊದಲ ಬಾರಿಗೆ ಡ್ರಮ್ ರೋಸ್ಟಿಂಗ್ ಪದ್ಧತಿಯನ್ನು ಪರಿಚಯಿಸಿದರು. ೧೯೩೫ ರಲ್ಲಿ ಗೋಡಂಬಿ ಸಂಸ್ಕರಣೆಯಲ್ಲಿ ಬಿಸಿ ಎಣ್ಣೆ ಸ್ಥಾವರವನ್ನು ಅನುಷ್ಠಾನಗೊಳಿಸುವುದರ ಮೂಲಕ ಗೋಡಂಬಿ ಸಂಸ್ಕರಣೆಯಲ್ಲಿ ಹೊಸ ಅಧ್ಯಾಯವನ್ನೇ ಪ್ರಾರಂಭಿಸಿದರು. ಹಡಗುಗಳಲ್ಲಿ ಗೋಡಂಬಿ ಚೀಲಗಳನ್ನು ತುಂಬಿಸಿ ಮೊಟ್ಟ ಮೊದಲ ಬಾರಿಗೆ ಇಟಲಿಗೆ ರಫ್ತು ಮಾಡಲಾಯಿತು. ಆ ನಂತರ ಇಂಗ್ಲೆಂಡ್, ಅಮೇರಿಕಾ ಇತರೆ ಯುರೋಪ್ ರಾಷ್ಟ್ರಗಳು ಭಾರತದ ಪ್ರಮುಖ ಗ್ರಾಹಕರಾಗಿ ಹೊರ ಹೊಮ್ಮಿದವು. ಕ್ರಮೇಣ ಗೋಡಂಬಿ ಸಂಸ್ಕರಣೆಯಲ್ಲಿ ಹೊಸ ಹೊಸ ವಿಧಾನಗಳು ಆವಿಷ್ಕಾರಗೊಂಡವು. ಮೆ॥ ಫೆರ್ನಾಂಡಿಸ್ ಸಹೋದರರು, ಮೆ। ಯು. ನಾರಾಯಣ ಮಲ್ಯ ಮತ್ತು ಮಕ್ಕಳು, ಕಾಸರಗೋಡಿನ ಕಾಮತ್ ಮನೆತನದವರು, ಮೆ। ಬೋಳ ರಾಘವೇಂದ್ರ ಕಾಮತ್ ಮತ್ತು ಮಕ್ಕಳು ಇವರುಗಳೆಲ್ಲಾ ಗೋಡಂಬಿ ಉತ್ಪಾದನೆಯ ಹಾಗೂ ನಿರ್ಯಾತದ ಹರಿಕಾರರೆನಿಸಿಕೊಂಡವರು.[೩೬] ದ.ಕ. ಜಿಲ್ಲೆಯ ಕೆಲವು ಗೋಡಂಬಿ ಉತ್ಪಾದಕರು ಈಗ ಕರ್ನಾಟಕದಲ್ಲೇ ಪ್ರಮುಖ ಗೋಡಂಬಿ ನಿರ್ಯಾತದಾರರು ಎಂಬ ಮಾನ್ಯತೆ ಪಡೆದಿದ್ದಾರೆ. ಅವರಲ್ಲಿ ಪ್ರಮುಖವಾಗಿ ಅಚಲ್ ಇಂಡಸ್ಟ್ರೀಸ್ ಮಂಗಳೂರು, ಫೆರ್ನಾಂಡಿಸ್ ಬ್ರದರ್ಸ್ ಮಂಗಳೂರು ಕೆ. ಸುಬ್ರಾಯ ಅನಂತ ಕಾಮತ್ ಅಂಡ್ ಸನ್ಸ್, ಜಾಲ್ಸೂರು ಸುಳ್ಯ ತಾಲೂಕು, ಕೆ. ವಿಶ್ವನಾಥ ಸುಬ್ರಾಯ ಕಾಮತ್ ಅಂಡ್ ಸನ್ಸ್ ಪದವು

ಮಂಗಳೂರು, ಮಂಗಳೂರು ಕ್ಯಾಶ್ಯೂ ಇಂಡಸ್ಟ್ರೀಸ್ ಪದವಿನಂಗಡಿ ಮಂಗಳೂರು, ಮತ್ತಿತರ ಸಂಸ್ಥೆಗಳು ಗೋಡಂಬಿ ನಿರ್ಯಾತದಲ್ಲಿ ಸಾಕಷ್ಟು ಪ್ರಸಿದ್ಧವಾಗಿವೆ.

ಉಲ್ಲೇಖಗಳು ಮತ್ತು ಟಿಪ್ಪಣಿಗಳು

೧. ವಿಕಿಪಿಡಿಯಾ

೨. ವಿಕಿಪಿಡಿಯಾ

೩. ಮಿಲೇನಿಯಂ ಸಾಮಾನ್ಯ ಅಧ್ಯಯನ, ೨೦೧೧, ಸಂಗ್ರಹಣೆ ಮತ್ತು ಸಂಪಾದನೆ ಹೆಚ್. ಆರ್. ಕೆ. ಸ್ವಪ್ನ ಬುಕ್ ಹೌಸ್, ಬೆಂಗಳೂರು ಪುಟ ಸಂಖ್ಯೆ ೬೭೧.

೪. **S.S.Guledagudda**, 2005, Production Export Performance of Cashew.An Economic Analysis. Thesis Submitted to the University of Agricultue Science Dharwad P.22.

೫. **Shankar N., Hanumanthappa H, Vidyashree S.H, Dhananjaya B.** and **Nagesh L** 2012, prospects of Cashew processing Industry in Coastal Karnataka. In souvenir International conference on "Sustainalbe Cashew Production Challenges and opportunities"- Goa P 133.

೬. **Rajmohan Pillai, Dr. P. Shantha,** 2008, "World Cashew Industry- An India perspective" published by pointer publication Jaipur P.4.

೭. **Mahesha V.S., Hanuma Shetty S.I.,** and **Heggade N.K.,** 2005, performance of cashew varieties under hill zone of Karnataka. The Cashew 2005, Vol 19, No.3, P. 5-7.

೮. **Shankar N., Hanumanthappa H, Vidyashree S.H, Dhananjaya B.** and **Nagesh L.,** 2012, op cit.P. 133.

೯. **S.S.Guledagudda, B.L.Patil, A.A. Patil and H.Basavaraja,** 2007, Marketing Cost and Margin of Raw Cashew Nut in Karnataka P. 24.

೧೦. **P. Maheshwar,** 2009, "Status of Cashew Development in Karnataka" In Souvenir 7th National Seminar Cashew Development In India- Enhancement of production and productivity Bhuvaneshwar P: 85.

೧೧. **Shankar N., Hanumanthappa H, Vidyashree S.H, Dhananjaya B.** and **Nagesh L,** 2012, op cit. P. 134.

೧೨. **P. Maheshwar**, 2009, op cit P: 87.

೧೩. Ibid P. 88.

೧೪. **Kalbavi Prakash Rao** 2005, Importance of Cashew to the Development of Coastal Economy. (ಪ್ರಕಟಣೆ: "ಗೇರು ವೈಜ್ಞಾನಿಕ ಕೃಷಿ ತೋಟಗಾರಿಕಾ ಇಲಾಖೆ, ದ.ಕ. ಜಿಲ್ಲಾ ಪಂಚಾಯತ್ ಮಂಗಳೂರು.) ಪು. 1.

೧೫. **Shankar N., Hanumanthappa H, Vidyashree S.H, Dhananjaya B. and Nagesh L**, 2012, op cit P.134.

೧೬. **Dr. Rajmohan Pillai, Dr. P.Shantha** op cit P.7.

೧೭. **Shankar N., Hanumanthappa H, Vidyashree S.H, Dhananjaya B. and Nagesh L,** 2012, op cit P.139.

೧೮. Ibid P. 139.

೧೯. **ಲೋಬೋ ನೋಬರ್ಟ್** 'Patients of Rural Urban Migration A case study of Dakshina Kannada District. ಪಿಹೆಚ್‌ಡಿ ಗ್ರಂಥ, ಫೆಬ್ರವರಿ ೨೦೦೧ ಪು. ೭೯.

೨೦. **ಕೇಶವ ಕೃಷ್ಣ ಕುಡ್ವ** ೧೯೪೮, ದಕ್ಷಿಣ ಕನ್ನಡ ಇತಿಹಾಸ, ಪು. ೭.

೨೧. **ಉದಯವರ್ಮ ರಾಜ** ೧೯೯೮, ತುಳುನಾಡಿನ ಗತ ವೈಭವ, ಪು. ೪.

೨೨. ಅದೇ ಪು. ೭.

೨೩. ಅದೇ ಪು. ೨.

೨೪. ತುಳು ಕರ್ನಾಟಕ ಅರಸು ಮನೆತನಗಳಲ್ಲಿ ಕರ್ನಾಟಕ ರಾಜ್ಯ ಸಂಸ್ಥಾನಗಳು, ಸಂಪಾದಕರು **ಪೆರಾಜೆ ಕೃಷ್ಣ ಭಟ್ಟ, ಡಾ। ಎಸ್. ಡಿ. ಶೆಟ್ಟಿ ಕುಂಬಳೆ ಅರಸು ಮನೆತನ ಡಾ. ಉಪ್ಪಂಗಳ ರಾಮ ಭಟ್ಟ** ಪು. ೯೬.

೨೫. **ಕೆ. ಅನಂತರಾಮ** ೧೯೯೭, ದಕ್ಷಿಣದ ಸಿರಿನಾಡು ಪುಟ ಸಂಖ್ಯೆ ೭.

೨೬. **ಮಂಜೇಶ್ವರ ಗೋವಿಂದ ಪೈ.** ತುಳುನಾಡ ಪೂರ್ವ ಸ್ಮೃತಿ- ತೆಂಕ ನಾಡು ೧೯೪೭, ಪುಟ ೧೬.

೨೭. **ಡಾ. ಬಿ. ಎ. ವಿವೇಕ ರೈ,** ತುಳು ಜಾನಪದ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು. ಪಿಹೆಚ್‌ಡಿ. ಗಾಗಿ ಬರೆದ ಪ್ರಬಂಧ. ಪು. ෂ.

೨೮. ಅದೇ ಪು. ෂ.

೨೯. **S.S.Guledagudda**, 2005, op cit 20.

೩೦. **Kumar D P** and **Hegde,** M.1997 “Ullal-4” and “Un-50” Promising Cashew Varieties for coastal Karnataka. The cashew 11(3): P. 75.

೩೧. **Kalbavi Prakash Rao,** 2005, op cit P. 2.

೩೨. **Walter D’ Souza**, 2005, The Golden Legacy- vision 2020. In Golden Jubilee Souvnir. The Karnataka Cashew Manufactures Association. P.10.

೩೩. Ibid P. 10

೩೪. Ibid P. 12.

೩೫. Ibid P. 12.

೩೬. Ibid P. 13.

ಅಧ್ಯಾಯ ೪

ಗೇರು ಬೆಳೆಗಾರರ ಸಮಸ್ಯೆಗಳು

೪.೧ ವಕ್ತೃಗಳ ಭೌಗೋಳಿಕತೆ ಮತ್ತು ಸಾಮಾಜಿಕ ವಿವರಗಳು

೪.೨ ಗೇರು ಬೆಳೆಗಾರರ ವೃತ್ತಿ ಸ್ವರೂಪ

೪.೩ ಭೂ ಹಿಡುವಳಿ ವಿವರ ಮತ್ತು ಸಸಿಗಳ ಮೂಲ

೪.೪ ಗೇರು ಕೃಷಿಯ ಕೂಡುವಳಿಗಳು

೪.೫ ಗೇರು ಬೆಳೆಯ ವೆಚ್ಚ ಮತ್ತು ಆದಾಯ

೪.೬ ಗೇರು ಬೆಳೆಗಾರರ ಸಮಸ್ಯೆಗಳು

೪.೭ ರಬ್ಬರ್ ಬೆಳೆ ಸಮಸ್ಯೆ

೪.೮ ಎಂಡೋ ಸಲ್ಫಾನ್ ಸಮಸ್ಯೆ.

೪.೯ ಸಾಂಸ್ಥಿಕ ನೆರವು ಮತ್ತು ಸಮಸ್ಯೆಗಳು

ಅಧ್ಯಾಯ ೪

ಗೇರು ಬೆಳೆಗಾರರ ಸಮಸ್ಯೆಗಳು

ಕರ್ನಾಟಕ ರಾಜ್ಯದಲ್ಲೇ ಅತಿ ಹೆಚ್ಚು ಗೇರು ಬೆಳೆಯುವ ಪ್ರದೇಶವನ್ನು ಹೊಂದಿರುವ ದ. ಕ. ಜಿಲ್ಲೆ ಗೇರು ಉದ್ಯಮದ ಪಾರಂಪರಿಕ ನೆಲೆ ಎಂಬುದಾಗಿ ಗುರುತಿಸಿಕೊಂಡಿದೆ. ಹಿಂದಿನ ಅಧ್ಯಾಯದಲ್ಲಿ ದ.ಕ. ಜಿಲ್ಲೆಯ ಸಂಕ್ಷಿಪ್ತ ಪರಿಚಯವನ್ನು ನೀಡಲಾಗಿದ್ದು ಜಿಲ್ಲೆಯಲ್ಲಿ ಗೇರು ಉದ್ಯಮದ ಸಾಧ್ಯತೆಗಳ ಕುರಿತು ಚರ್ಚಿಸಲಾಗಿತ್ತು. ಪ್ರಸಕ್ತ ಅಧ್ಯಾಯವು ಕ್ಷೇತ್ರಾಧ್ಯಯನದ ಸಂದರ್ಭದಲ್ಲಿ ಕಂಡುಕೊಂಡ ಗೇರು ಬೆಳೆಗಾರರ ಭೌಗೋಳಿಕ ಹಾಗೂ ಸಾಮಾಜಿಕ ವಿವರಗಳು, ಶೈಕ್ಷಣಿಕ ಮಟ್ಟ, ಕೌಟುಂಬಿಕ ಹಾಗೂ ಆರ್ಥಿಕ ವಿವರಗಳು ಮತ್ತು ಅವರ ಸಮಸ್ಯೆಗಳ ಕುರಿತಂತೆ ವಿಶ್ಲೇಷಣೆಯನ್ನು ಹೊಂದಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಗೇರು ಬೆಳೆಯಲಾಗುತ್ತಿದ್ದು ಸಹಜವಾಗಿ ಎಲ್ಲಾ ತಾಲೂಕುಗಳಲ್ಲಿ ಗೇರು ಬೆಳೆಗಾರರಿದ್ದಾರೆ. ಅವರ ಸಮಸ್ಯೆಗಳ ಸಮಗ್ರ ಅಧ್ಯಯನ ಈ ನಿಬಂಧದ ಪ್ರಧಾನ ಉದ್ದೇಶಗಳಲ್ಲಿ ಒಂದು. ಈ ಉದ್ದೇಶ ಸಾಧನೆಗಾಗಿ ಒಂದು ವಿಸ್ತೃತ ಪ್ರಶ್ನಾವಳಿಯನ್ನು ಸಿದ್ಧಪಡಿಸಿ ಈ ಅಧ್ಯಯನ ನಡೆಸಲಾಯಿತು. ದ. ಕ. ಜಿಲ್ಲೆಯ ತೋಟಗಾರಿಕಾ ಇಲಾಖೆ ಮತ್ತು ಪುತ್ತೂರಿನ ಗೇರು ಸಂಶೋಧನಾ ನಿರ್ದೇಶನಾಲಯದಿಂದ ಪಡೆದ ಮಾಹಿತಿಯನ್ನು ಆಧಾರವಾಗಿರಿಸಿಕೊಂಡು ಜಿಲ್ಲೆಯ ಎಲ್ಲಾ ತಾಲೂಕುಗಳಿಗೂ ಎಲ್ಲಾ ಸಮುದಾಯಗಳಿಗೂ ಪ್ರಾತಿನಿಧ್ಯವಿರುವಂತೆ ವಕ್ತೃಗಳನ್ನು ಆರಿಸಿಕೊಂಡು ಉದ್ದೇಶಿತ ಪ್ರಶ್ನೆಗಳಿಗೆ ಅವರಿಂದ ಉತ್ತರಗಳನ್ನು ಪಡೆದು, ಮೂಲ ದತ್ತಾಂಶಗಳನ್ನು ಕೋಷ್ಟಕ ರೂಪಕ್ಕೆ ಹಾಗೂ ಚಿತ್ರಗಳ ರೂಪಕ್ಕೆ ಪರಿವರ್ತಿಸಿ ಬೆಳೆಗಾರರ ಸಮಸ್ಯೆಗಳನ್ನು ವಿಶ್ಲೇಷಿಸಲಾಗಿದೆ.

೪.೧ ವಕ್ತೃಗಳ ಭೌಗೋಳಿಕತೆ ಮತ್ತು ಸಾಮಾಜಿಕ ವಿವರಗಳು


ದ. ಕ. ಜಿಲ್ಲೆಯಲ್ಲಿ ಸುಮಾರು ೧೫೮೦ ಗೇರು ಬೆಳೆಗಾರರಿದ್ದು ಅವರಲ್ಲಿ ೧೦೪ ಮಂದಿ ವಕ್ತೃಗಳನ್ನು ಅಂದರೆ ಶೇ.೬.೫ ರಷ್ಟು ಅಧ್ಯಯನಕ್ಕೆ ಆರಿಸಲಾಗಿದೆ. ತಾಲೂಕುವಾರು ವಕ್ತೃಗಳ ವಿವರವನ್ನು ಕೋಷ್ಟಕ ೪.೧ ರಲ್ಲಿ ತೋರಿಸಲಾಗಿದೆ.

ಕೋಷ್ಟಕ ೪.೧ ಬೆಳೆಗಾರ ವಕ್ತೃಗಳ ಭೌಗೋಳಿಕ ನೆಲೆ

ಕ್ರ.ಸಂ.	ತಾಲೂಕು	ವಕ್ತೃಗಳ ಸಂಖ್ಯೆ	ಶೇಕಡಾ
೧.	ಬಂಟ್ವಾಳ	೨೨	೨೧.೨
೨.	ಬೆಳ್ತಂಗಡಿ	೩೧	೨೯.೮
೩.	ಮಂಗಳೂರು	೧೧	೧೦.೬
೪.	ಪುತ್ತೂರು	೨೪	೨೩.೦
೫.	ಸುಳ್ಯ	೧೬	೧೫.೪
	ಒಟ್ಟು	೧೦೪	೧೦೦


ಜಿಲ್ಲೆಯಲ್ಲಿ ಅತ್ಯಂತ ಅಧಿಕ ಗೇರು ಬೆಳೆಯುವ ಪ್ರದೇಶವಾದ ಬೆಳ್ತಂಗಡಿಯಿಂದ ಶೇ. ೨೯.೮ ವಕ್ತೃಗಳನ್ನು ಆರಿಸಿಕೊಳ್ಳಲಾಗಿದೆ. ಗೇರು ಬೆಳೆಯುವ ಪ್ರದೇಶದಲ್ಲಿ ಎರಡನೇ ಸ್ಥಾನದಲ್ಲಿರುವ ಪುತ್ತೂರಿಗೆ ಶೇ. ೨೩ರಷ್ಟು ಪ್ರಾತಿನಿಧ್ಯ ನೀಡಲಾಗಿದೆ. ಬಂಟ್ವಾಳಕ್ಕೆ ಶೇ. ೨೧.೨ ಸುಳ್ಯಕ್ಕೆ ಶೇ. ೧೫.೪ ಮತ್ತು ಮಂಗಳೂರು ತಾಲೂಕಿಗೆ ಶೇ. ೧೦.೮ರಷ್ಟು ಪ್ರಾತಿನಿಧ್ಯ ದೊರೆತಿದೆ. ಗೇರು ಬೆಳೆಯುವ ಪ್ರದೇಶದ ಆಧಾರದ ಮೇಲೆ ಈ ಪ್ರಾತಿನಿಧ್ಯ ನೀಡಲಾಗಿದೆ. ಬೆಳೆಗಾರ ಸಮಾಜದ

ಎಲ್ಲಾ ಸಮುದಾಯಗಳಿಂದ ವಕ್ತೃಗಳನ್ನು ಆಯ್ಕೆ ಮಾಡಲಾಗಿದ್ದು ಸಾಮುದಾಯಿಕ ವಿತರಣೆಯನ್ನು ಚಿತ್ರ ೪.೧ ರಲ್ಲಿ ತೋರಿಸಲಾಗಿದೆ.



ಚಿತ್ರ ೪.೧ ಬೆಳೆಗಾರ ವಕ್ತೃಗಳ ಸಮುದಾಯ

ದ. ಕ. ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಹಿಂದೂಗಳು ಬಹುಸಂಖ್ಯಾತರೆನಿಸಿಕೊಂಡಿದ್ದು ಸಹಜವಾಗಿ ಗೇರು ಕೃಷಿಯಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದಾರೆ. ಆದ ಕಾರಣ ಶೇಕಡಾ ೭೫ರಷ್ಟು ಪ್ರಾತಿನಿಧ್ಯವನ್ನು ಹಿಂದೂಗಳಿಗೆ ನೀಡಲಾಗಿದ್ದು ಮುಸ್ಲಿಂ ಹಾಗೂ ಕ್ರೈಸ್ತರು ಅನುಕ್ರಮವಾಗಿ ತಲಾ ಶೇಕಡಾ ೧೩.೫ ಹಾಗೂ ೧೧.೫ ರಂತೆ ಪ್ರಾತಿನಿಧ್ಯವನ್ನು ಪಡೆದುಕೊಂಡಿದ್ದಾರೆ. ದ. ಕ. ಜಿಲ್ಲೆಯಲ್ಲಿ ಮುಸ್ಲಿಂ ಜನಾಂಗದವರು ಕೃಷಿಗಿಂತಲೂ ಹೆಚ್ಚಾಗಿ ಕೃಷಿ ಉತ್ಪನ್ನ ಮಾರಾಟ ವ್ಯವಸ್ಥೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಕರಾವಳಿಯ ಕ್ರಿಶ್ಚಿಯನ್ನರು ಸೇವಾ ವಲಯದಲ್ಲಿ ಗುರುತಿಸಿಕೊಂಡಿದ್ದಾರೆ. ಆದುದರಿಂದ ಅವರಲ್ಲಿ ಗೇರು ಬೆಳೆಯುವವರು ತೀರಾ ಕಡಿಮೆ. ಹಾಗಾಗಿ ಅವರ ಪ್ರಾತಿನಿಧ್ಯವೂ ಕಡಿಮೆ ಇದೆ. ಬೆಳೆಗಾರರ ವಯೋಮಾನವನ್ನು ಚಿತ್ರ ೪.೨ ರಲ್ಲಿ ವಿಶ್ಲೇಷಿಸಲಾಗಿದೆ.



ಚಿತ್ರ ೪.೨ ಬೆಳೆಗಾರ ವಕ್ತೃಗಳ ವಯೋಮಟ್ಟ





೨೫ ವರ್ಷಕ್ಕಿಂತ ಕಡಿಮೆ ವಯೋಮಾನದ ಬೆಳೆಗಾರರು ಯಾರೂ ಇರುವುದಿಲ್ಲ. ೬೦ ವರ್ಷಕ್ಕಿಂತ ಮೇಲ್ಪಟ್ಟ ವಕ್ತೃಗಳ ಪ್ರಮಾಣ ಕೇವಲ ಶೇಕಡಾ ೧೯.೨ ರಷ್ಟು ಮಾತ್ರವಾಗಿದೆ. ೨೫ ರಿಂದ ೪೦ ವಯೋಮಾನದ ವಕ್ತೃಗಳ ಪ್ರಮಾಣ ಶೇಕಡಾ ೩೦.೮ ರಷ್ಟಾದರೆ ೪೦ ರಿಂದ ೬೦ ವಯಸ್ಸಿನ ವಕ್ತೃಗಳ ಪ್ರಮಾಣ ಅತ್ಯಂತ ಗರಿಷ್ಠವಾಗಿದ್ದು ಶೇಕಡಾ ೫೦ ರಷ್ಟಿದೆ. ಒಟ್ಟು ಕೃಷಿ ಕ್ಷೇತ್ರದಿಂದ ವಿಮುಖರಾಗುತ್ತಿರುವ ಯುವಕರು ಗೇರು ಬೆಳಯುವುದರಲ್ಲೂ ಅನಾಸಕ್ತರಾಗುತ್ತಿರುವುದನ್ನು ಗಮನಿಸಬೇಕು. ಅತಿ ಹೆಚ್ಚು ಗೇರು ಬೆಳೆಗಾರರು ಮಧ್ಯಮ ಪ್ರಾಯದವರು ಎಂಬುದು ಗಮನಾರ್ಹ. ಎಳೆ ತಲೆಮಾರು ಗೇರು ಕೃಷಿಯಿಂದ ದೂರವಾಗುತ್ತಿದೆ. ಹಳೆ ತಲೆಮಾರಿಗೆ ಕೃಷಿಯಲ್ಲಿ ತೊಡಗಿಸಿಕೊಳ್ಳಲು ವಯೋಮಾನ ಅಡ್ಡಿಯಾಗಿದೆ.

ಕೃಷಿಕರ ಶೈಕ್ಷಣಿಕ ಮಟ್ಟ ಹಾಗೂ ಕೃಷಿ ಅಭಿವೃದ್ಧಿಗೆ ನೇರವಾದ ಸಂಬಂಧವಿರುವುದನ್ನು ಅಧ್ಯಯನ ಕಾಲದಲ್ಲಿ ಗುರುತಿಸಲಾಗಿದೆ. ಶಿಕ್ಷಣ ಹಾಗೂ ತರಬೇತಿ ಆಧುನಿಕ ಕೃಷಿ ಪದ್ಧತಿಗೆ ಭದ್ರ ಬುನಾದಿಯನ್ನು ಹಾಕುತ್ತದೆ. ಗೇರು ಉತ್ಪಾದಕತೆಯನ್ನು ಹೆಚ್ಚಿಸುವಲ್ಲಿ ಆಧುನಿಕ ಗೇರು ಕೃಷಿ ಪದ್ಧತಿ ಅನಿವಾರ್ಯ ಎಂದೆನಿಸಿಕೊಂಡಿದ್ದು ಇದನ್ನು ಸಾಕಾರಗೊಳಿಸುವಲ್ಲಿ ಕೃಷಿಕರ ಶಿಕ್ಷಣ ಮಟ್ಟ ನಿರ್ಣಾಯಕವೆಂದೆನಿಸಿಕೊಂಡಿದೆ. ಕೋಷ್ಟಕ ೪.೨ ರಲ್ಲಿ ಬೆಳೆಗಾರರ ಶೈಕ್ಷಣಿಕ ಮಟ್ಟವನ್ನು ದಾಖಲಿಸಲಾಗಿದೆ.

ಕೋಷ್ಟಕ ೪.೨ ಬೆಳೆಗಾರರ ಶೈಕ್ಷಣಿಕ ಮಟ್ಟ

ಕ್ರಮ ಸಂಖ್ಯೆ	ಶಿಕ್ಷಣ	ಸಂಖ್ಯೆ	ಶೇಕಡಾ
೧.	ಅನಕ್ಷರಸ್ಥರು	೪	೩.೮
೨.	೧ ರಿಂದ ೭	೧೨	೧೧.೫
೩.	೭ ರಿಂದ ೧೦	೨೭	೨೬.೦
೪.	ಪಿಯುಸಿ	೩೦	೨೮.೮
೫.	ಪದವಿ	೨೪	೨೩.೧
೬.	ಸ್ನಾತಕೋತ್ತರ	೫	೪.೮
೭.	ಇತರೆ	೨	೧.೯
	ಒಟ್ಟು	೧೦೪	೧೦೦

ಬೆಳೆಗಾರರಲ್ಲಿ ಬೇರೆ ಬೇರೆ ಮಟ್ಟದ ಶೈಕ್ಷಣಿಕ ಹಿನ್ನೆಲೆ ಉಳ್ಳವರಿದ್ದು ಅನಕ್ಷರಸ್ಥರು ಶೇಕಡಾ ೩.೮ ರಷ್ಟು ಮಾತ್ರವೇ ಇದ್ದಾರೆ. ಇದೊಂದು ಧನಾತ್ಮಕವಾದ ಅಂಶವಾಗಿದೆ. ಉಳಿದ ಶೇ. ೯೬.೨ ಮಂದಿ ಅಕ್ಷರಸ್ಥರಾಗಿದ್ದಾರೆ. ಪ್ರಾಥಮಿಕ ಶಿಕ್ಷಣ ಪಡೆದವರು ಶೇಕಡಾ ೧೧.೫ ರಷ್ಟು ಹಾಗೂ ಹೈಸ್ಕೂಲ್ ಶಿಕ್ಷಣ ಪಡೆದವರು ಶೇಕಡಾ ೨೬ ರಷ್ಟಿದ್ದಾರೆ. ಪಿಯುಸಿ ಶಿಕ್ಷಣ ಪಡೆದವರು ಶೇಕಡಾ ೨೮.೮ರಷ್ಟು ಇದ್ದಾರೆ. ಆದರೆ ಪದವಿ ಶಿಕ್ಷಣ ಹಾಗೂ ಸ್ನಾತಕೋತ್ತರ ಶಿಕ್ಷಣ ಪಡೆದವರು ಅನುಕ್ರಮವಾಗಿ ಶೇಕಡಾ ೨೩.೧ ಮತ್ತು ೪.೮ರಷ್ಟಿದ್ದಾರೆ. ವೃತ್ತಿ ಶಿಕ್ಷಣ ಪಡೆದವರ ಪ್ರಮಾಣ ಶೇ. ೧.೯ ರಷ್ಟಿದೆ.

ಹೆಚ್ಚಿನ ಶಿಕ್ಷಣ ಪಡೆದ ವಕ್ತೃಗಳು ಕೃಷಿ ಸಾಕ್ಷರರು ಎಂದೆನಿಸಿಕೊಂಡಿದ್ದು ಸುಧಾರಿತ ಗೇರು ಕೃಷಿ ಪದ್ಧತಿಯನ್ನು ಮುಕ್ತವಾಗಿ ಸ್ವೀಕರಿಸಬಲ್ಲವರಾಗಿದ್ದಾರೆ. ಜಿಲ್ಲೆಯ ಗೇರು ಬೆಳೆಗಾರರ ಕೌಟುಂಬಿಕ ವಿವರವನ್ನು ಕೋಷ್ಟಕ ೪.೩ ರಲ್ಲಿ ತೋರಿಸಲಾಗಿದೆ.


ಕೋಷ್ಟಕ ೪.೩ ಬೆಳೆಗಾರ ಕುಟುಂಬದ ವಿವರ

ತಾಲೂಕು	ವಕ್ತೃಗಳ ಸಂಖ್ಯೆ	ವಕ್ತೃಗಳ ಕುಟುಂಬದ ಒಟ್ಟು ಸದಸ್ಯರ ಸಂಖ್ಯೆ	ದುಡಿಯುವವರ ಸಂಖ್ಯೆ	ಶೇಕಡಾ	ಕುಟುಂಬದ ಸರಾಸರಿ
ಬಂಟ್ವಾಳ	೨೨	೧೦೯	೬೩	೫೭.೮	೪.೯
ಬೆಳ್ತಂಗಡಿವ	೩೧	೧೦೭	೭೯	೭೩.೮	೩.೫
ಮಂಗಳೂರು	೧೧	೬೬	೨೮	೪೨.೪	೬.೦
ಪುತ್ತೂರು	೨೪	೮೬	೪೬	೫೩.೪	೩.೬
ಸುಳ್ಯ	೧೬	೮೦	೪೮	೬೦.೦	೫.೦
ಒಟ್ಟು	೧೦೪	೪೪೮	೨೬೪	೫೮.೯	೪.೩

ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯನ್ನು ಹೊಂದಿರುವ ದಕ್ಷಿಣ ಕನ್ನಡದಲ್ಲಿ ಲಿಂಗಾನುಪಾತ ಮಹಿಳೆಯರ ಪರ ಇರುವುದನ್ನು ಹಿಂದಿನ ಅಧ್ಯಾಯದಲ್ಲಿ ಉಲ್ಲೇಖಿಸಲಾಗಿದೆ. ಆದರೆ ದ. ಕ. ಜಿಲ್ಲೆಯ ಗೇರು ಬೆಳೆಗಾರರ ವಕ್ತೃಗಳ ಕುಟುಂಬದ ಸಮೀಕ್ಷೆ ನಡೆಸಿದಾಗ ಲಿಂಗಾನುಪಾತ ಪುರುಷರ ಪರವಾಗಿರುವುದು ಕಂಡುಬಂದಿದೆ. ಬೆಳೆಗಾರ ವಕ್ತೃಗಳಲ್ಲಿ ಒಟ್ಟು ೧೦೪ ಕುಟುಂಬಗಳಲ್ಲಿ ಒಟ್ಟು ಸದಸ್ಯರ ಸಂಖ್ಯೆ ೪೪೮ ಆಗಿದ್ದು ಅದರಲ್ಲಿ ೫೯ ಶೇಕಡಾ ಗಂಡಸರು ಮತ್ತು ೪೧ ಶೇಕಡಾ ಹೆಂಗಸರು. ವಕ್ತೃಗಳ ಕುಟುಂಬದ ಒಟ್ಟು ಸಂಖ್ಯೆಯ ಶೇ. ೫೮.೯ ರಷ್ಟು ಮಂದಿ ದುಡಿಯುವವರಾಗಿದ್ದು ಕುಟುಂಬದ ಸರಾಸರಿ ಸಂಖ್ಯೆ ಶೇ. ೪.೩ ಆಗಿರುತ್ತದೆ. ಇದರಿಂದ ಕುಟುಂಬದ ಆರ್ಥಿಕತೆ ಕುಸಿದಿದ್ದು ಗೇರು ಬೆಳೆಗಾರ ವಕ್ತೃಗಳು ಸಾಮಾನ್ಯವಾಗಿ ಮಧ್ಯಮ ಹಾಗೂ ಕೆಳ ವರ್ಗದ ಆರ್ಥಿಕ ಸ್ಥಿತಿ ಹೊಂದಿರುವುದಾಗಿ ತಿಳಿದು ಬರುತ್ತದೆ. ಮಂಗಳೂರಿನಲ್ಲಿ ಪ್ರತಿ ಕುಟುಂಬದ ಸರಾಸರಿ ಸಂಖ್ಯೆ ೬ ಇದ್ದರೆ ಸುಳ್ಯ, ಬಂಟ್ವಾಳದಲ್ಲಿ ತಲಾ ೫ರಷ್ಟಿದೆ. ಉಳಿದ ಎರಡು ತಾಲೂಕುಗಳಲ್ಲಿ ಕುಟುಂಬದ ಸರಾಸರಿ ಗಾತ್ರ ೪ ರಷ್ಟಿದೆ. ಕೃಷಿ ಕುಟುಂಬದ ಸರಾಸರಿ ಗಾತ್ರ ದೊಡ್ಡದಿರುವಲ್ಲಿ ಗೇರು ಕೃಷಿಯಲ್ಲಿ ತೊಡಗಿರುವವರ ಪ್ರಮಾಣ ಹೆಚ್ಚಿಲ್ಲ. ಕೇವಲ ಮಧ್ಯ ವಯಸ್ಸಿನವರನ್ನು ಬಿಟ್ಟರೆ ಹೊಸ ತಲೆಮಾರು ಬೇರೆ ಕ್ಷೇತ್ರಗಳಲ್ಲಿ ಬದುಕನ್ನು ಅರಸುತ್ತಿದೆ.

೪. ೨ ಗೇರು ಬೆಳೆಗಾರರ ವೃತ್ತಿ ಸ್ವರೂಪ


ಬೆಳೆಗಾರರ ವೃತ್ತಿ ರಚನೆಯ ಬಗ್ಗೆ ವಿಶ್ಲೇಷಿಸಿದಾಗ ಹೆಚ್ಚಿನ ಸಂಖ್ಯೆಯ ವಕ್ತೃಗಳು ಕೃಷಿಯನ್ನೇ ಪ್ರಧಾನ ಉದ್ಯೋಗವನ್ನಾಗಿರಿಸಿಕೊಂಡಿದ್ದುದು ಕಂಡು ಬರುತ್ತದೆ. ಉಳಿದಂತೆ ಕೂಲಿ ಕಾರ್ಮಿಕರು ವ್ಯಾಪಾರಸ್ಥರು, ಅಧ್ಯಾಪಕರು, ಬ್ಯಾಂಕ್ ಉದ್ಯೋಗಿಗಳು ಹಾಗೂ ನಿವೃತ್ತ ಅಧಿಕಾರಿಗಳು ಕೂಡಾ ಗೇರು ಬೆಳೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದನ್ನು ಗಮನಿಸಬಹುದು. (ಚಿತ್ರ ೪.೩)



ಚಿತ್ರ ೪.೩ ಬೆಳೆಗಾರ ವಕ್ತೃಗಳ ವೃತ್ತಿ ರಚನೆ

ಗೇರು ಬೆಳೆಗಾರ ವಕ್ತೃಗಳಲ್ಲಿ ಕೃಷಿಯನ್ನು ಪ್ರಮುಖ ವೃತ್ತಿಯನ್ನಾಗಿಸಿಕೊಂಡವರು ಶೇಕಡಾ ೫೩.೮ರಷ್ಟಿದ್ದು ಬಹುತೇಕವಾಗಿ ಸಣ್ಣ ಹಾಗೂ ಅಂಚಿನ ರೈತರು ಗೇರು ಕೃಷಿಯೊಂದಿಗೆ ಕೂಲಿ ಕೆಲಸ, ವ್ಯಾಪಾರ ಇತ್ಯಾದಿ ಉದ್ಯೋಗದಲ್ಲಿ ನಿರತರಾಗಿದ್ದಾರೆ. ಗೇರು ಕೃಷಿಯನ್ನೇ ಮಾಡುವ ಕೂಲಿ ಕಾರ್ಮಿಕರ ಪ್ರಮಾಣ ಶೇಕಡಾ ೨೮.೮ ರಷ್ಟಿದೆ. ಕೆಲವು ಬೆಳೆಗಾರರು ಗೇರು ವ್ಯಾಪಾರವನ್ನು ಸಹ ಮಾಡುತ್ತಿದ್ದು ಅವರ ಪ್ರಮಾಣ ಶೇ. ೧೧.೫ರಷ್ಟಿದೆ. ಇದಲ್ಲದೆ ಶೇ. ೫.೮ ರಷ್ಟು ಇತರ ಉದ್ಯೋಗಿಗಳು ಗೇರು ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ದ. ಕ. ಜಿಲ್ಲೆಯಲ್ಲಿ ಗೇರು ಒಂದು ಪಾರಂಪರಿಕ ಬೆಳೆಯಾಗಿ ಮುಂದುವರಿಯುತ್ತಿದ್ದು ವಿವಿಧ ಕಾರಣಗಳಿಗಾಗಿ ರೈತರು ಗೇರು ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಬೆಳೆಗಾರರು ಗೇರು ಬೆಳೆಯಲು ಕಾರಣಗಳೇನು ಎಂಬುದನ್ನು ಚಿತ್ರ ೪.೪ ರಲ್ಲಿ ಅಭಿವ್ಯಕ್ತಿಸಲಾಗಿದೆ.



ಚಿತ್ರ ೪.೪ ಬೆಳೆಗಾರ ವಕ್ತೃಗಳು ಗೇರು ಬೆಳೆಯಲು ಕಾರಣ






ದ. ಕ. ಜಿಲ್ಲೆಯ ಬಹುತೇಕ ಕೃಷಿಕರು ಗೇರು ಬೆಳೆಯನ್ನು ಒಂದು ಜೀವನೋಪಾಯವಾಗಿ ಆರಿಸಿಕೊಂಡಿದ್ದಾರೆ. ಶೇಕಡಾ ೨೦.೨ ರಷ್ಟು ವಕ್ತೃಗಳು ಇದೇ ಕಾರಣಕ್ಕಾಗಿ ಗೇರು ಬೆಳೆಯ ಆಯ್ಕೆ ಮಾಡಿದ್ದಾರೆ. ಅಧಿಕ ಬಂಡವಾಳ ಹೂಡಿಕೆಯ ಅಗತ್ಯ ಇಲ್ಲದಿರುವುದು ಇದಕ್ಕೆ ಕಾರಣವಾಗಿದೆ. ಶೇಕಡಾ ೪೬.೨ ರಷ್ಟು ವಕ್ತೃಗಳು ಇದನ್ನು ಉಪ ವೃತ್ತಿಯನ್ನಾಗಿಸಲಿಕೊಂಡು ತಮ್ಮ ಆದಾಯವನ್ನು ಹೆಚ್ಚಿಸಿಕೊಂಡಿದ್ದಾರೆ. ಶೇಕಡಾ ೧೧.೫ ರಷ್ಟು ವಕ್ತೃಗಳು ಸರಕಾರ ಹಾಗೂ ಇತರೆ ಸಂಘಟನೆಗಳ ಪ್ರೇರಣೆಯಿಂದ ಗೇರು ಬೆಳೆಸುತ್ತಿದ್ದಾರೆ. ಪುತ್ತೂರು, ಬಂಟ್ವಾಳ, ಸುಳ್ಯ ತಾಲೂಕುಗಳಲ್ಲಿ ಹೆಚ್ಚಾಗಿ ಪುತ್ತೂರಿನ ಗೇರು ಸಂಶೋಧನಾ ನಿರ್ದೇಶನಾಲಯದ ಪ್ರೇರಣೆ ಹಾಗೂ ಮಾರ್ಗದರ್ಶನ ಪ್ರಭಾವ ಬೀರಿದೆ. ಇನ್ನು ಶೇಕಡಾ ೨೨.೧ ರಷ್ಟು ವಕ್ತೃಗಳು ತಮ್ಮ ಭೂಮಿ ಬೇರೆ ಯಾವುದೇ ಬೆಳೆಗೆ ಯೋಗ್ಯವಲ್ಲದ್ದು ಎಂದು ನಿರೂಪಿಸಲ್ಪಟ್ಟಾಗ ಅನಿವಾರ್ಯವಾಗಿ ಗೇರು ಬೆಳೆಯನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ಸಿಕ್ಕಷ್ಟು ಆದಾಯ ಸಿಗಲಿ ಎಂಬ ಧೋರಣೆ ಈ ವಕ್ತೃಗಳದ್ದು.

೪.೩. ಭೂ ಹಿಡುವಳಿ ವಿವರ ಮತ್ತು ಸಸಿಗಳ ಮೂಲ

ದ. ಕ. ಜಿಲ್ಲೆಯ ಕೃಷಿ ಭೂಮಿಯಲ್ಲಿ ಒಟ್ಟು ಗೇರು ಬೆಳೆಯುವ ಪ್ರದೇಶವನ್ನು ಹಿಂದಿನ ಅಧ್ಯಾಯದಲ್ಲಿ ಉಲ್ಲೇಖಿಸಲಾಗಿದೆ. ವಕ್ತೃಗಳ ಭೂಬಳಕೆಯ ವಿವರಗಳನ್ನು ಚಿತ್ರ ೪.೫ ವಿವರಿಸುತ್ತದೆ.



ಚಿತ್ರ ೪.೫ ಬೆಳೆಗಾರ ವಕ್ತೃಗಳ ಒಟ್ಟು ಭೂ ಹಿಡುವಳಿಯ ಪ್ರಮಾಣ

ಒಂದು ಎಕರೆಗಿಂತಲೂ ಕಡಿಮೆ ಭೂಮಿ ಹೊಂದಿದ ವಕ್ತೃಗಳು ಶೇಕಡಾ ೨೨ ರಷ್ಟಿದ್ದು ಒಂದರಿಂದ ೫ ಎಕರೆ ಭೂ ವಿಸ್ತೀರ್ಣ ಹೊಂದಿರುವವರು ಶೇಕಡಾ ೩೬.೫ ರಷ್ಟಿದ್ದಾರೆ. ೫ ಎಕರೆಯಿಂದ ೧೦ ಎಕರೆ ಭೂಮಿ ಹೊಂದಿರುವವರು ಶೇಕಡಾ ೩೦.೮ ರಷ್ಟಿದ್ದರೆ ೧೦ ಎಕರೆಗಿಂತಲೂ ಹೆಚ್ಚಿನ ಭೂಮಿಯನ್ನು ಹೊಂದಿರುವವರು ಶೇಕಡಾ ೧೦ರಷ್ಟಿದ್ದಾರೆ. ವಕ್ತೃಗಳಲ್ಲಿ ಸಣ್ಣ ಮತ್ತು ಅಂಚಿನ ರೈತರದ್ದೇ ಬಹುಮತ. ಗೇರು ಕೃಷಿ ಭೂಮಿಯ ಮೂಲದ ವಿಶ್ಲೇಷಣೆ ಉತ್ಪಾದನೆಯ ದೃಷ್ಟಿಯಿಂದ ಬಹಳ ಮಹತ್ವದ್ದು. ವಕ್ತೃಗಳ ಭೂಮಿಯ ಮೂಲದ ವಿವರಗಳನ್ನು ಕೋಷ್ಟಕ ೪.೪ ರಲ್ಲಿ ತೋರಿಸಲಾಗಿದೆ.




ಕೋಷ್ಟಕ ೪.೪ ಬೆಳೆಗಾರ ವಕ್ಕಗಳ ಒಡೆತನದ ಸ್ವರೂಪ

ಕ್ರ. ಸಂಖ್ಯೆ	ಒಡೆಯತನದ ಸ್ವರೂಪ	ಸಂಖ್ಯೆ	ಶೇಕಡಾ
೧.	ಪಿತ್ರಾರ್ಜಿತ	೮೮	೮೫
೨.	ಸ್ವಯಾರ್ಜಿತ	೩೨	೩೧
೩.	ಅಕ್ರಮ ಸಕ್ರಮ/ ಸರಕಾರಿ	೩೨	೩೧

ದ. ಕ. ಜಿಲ್ಲೆಯಲ್ಲಿ ಪಿತ್ರಾರ್ಜಿತ ಆಸ್ತಿ ಹೊಂದಿದ ವಕ್ಕಗಳ ಪ್ರಮಾಣ ಶೇಕಡಾ ೮೫ ರಷ್ಟಿದ್ದು ಇದೇ ವಕ್ಕಗಳು ಸ್ವಯಾರ್ಜಿತ ಹಾಗೂ ಅಕ್ರಮ ಸಕ್ರಮ ಭೂಮಿಯನ್ನು ಕೂಡಾ ಪಡೆದುಕೊಂಡಿರುವುದು ಕಂಡುಬರುತ್ತದೆ. ಶೇ. ೩೧ ರಷ್ಟು ಕೃಷಿಕರು ಸರಕಾರಿ ಭೂಮಿಯಲ್ಲಿ ಗೇರು ಗಿಡಗಳನ್ನು ನೆಟ್ಟು ಕ್ರಮೇಣ ಅಕ್ರಮ ಸಕ್ರಮ ಕಾನೂನಿನ ಅನ್ವಯ ಆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ. ಇವರುಗಳ ಉದ್ದೇಶ ಗೇರು ಕೃಷಿ ಅಥವಾ ಅದರ ಅಭಿವೃದ್ಧಿ ಆಗಿರದೇ ಕೇವಲ ಭೂ ಸ್ವಾಧೀನ ಮಾಡಿಕೊಳ್ಳುವುದಕ್ಕೆ ಮಾತ್ರ ಸೀಮಿತವಾಗಿದ್ದು ಕ್ರಮೇಣ ಅದೇ ಭೂಮಿಯಲ್ಲಿ ಗೇರು ಗಿಡಗಳನ್ನು ಕಡಿದು ಲಾಭದಾಯಕ ಎನಿಸಿಕೊಂಡಿದ್ದ ರಬ್ಬರ್ ಬೆಳೆಯನ್ನು ಬೆಳೆಯುವವರು ಕೂಡಾ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ.

ಚಿತ್ರ ೪.೬ ವಕ್ಕಗಳು ಹೊಂದಿರುವ ಗೇರು ಕೃಷಿ ಭೂಮಿಯ ವಿವರವನ್ನು ನೀಡುತ್ತದೆ.




ಚಿತ್ರ ೪.೬ ಬೆಳೆಗಾರ ವಕ್ಕಗಳ ಒಟ್ಟು ಭೂಮಿಯಲ್ಲಿ ಗೇರು ಬೆಳೆಯುವ ಪ್ರದೇಶದ ಪ್ರಮಾಣ

ಒಂದು ಎಕರೆಗಿಂತ ಕಡಿಮೆ ಭೂಮಿ ಹೊಂದಿರುವ ಸಣ್ಣ ಹಾಗೂ ಅಂಚಿನ ಬೆಳೆಗಾರರು ಗೇರು ಬೆಳೆಯನ್ನು ಅನಿವಾರ್ಯವಾಗಿ ಬೆಳೆಯುತ್ತಿದ್ದು ಇವರ ಪ್ರಮಾಣ ಶೇ. ೪೭ ರಷ್ಟಿದೆ. ಒಂದರಿಂದ ೫ ಎಕರೆ ಭೂಮಿಯಲ್ಲಿ ಗೇರು ಬೆಳೆಯುವವರು ಶೇ. ೩೩.೭ರಷ್ಟು ಹಾಗೂ ಐದರಿಂದ ಹತ್ತು ಎಕರೆ ಭೂಮಿಯಲ್ಲಿ ಶೇ. ೧೬.೩ ರಷ್ಟು ರೈತರು ಗೇರು ಬೆಳೆಯುತ್ತಿದ್ದಾರೆ. ಇವರು ಗೇರು ಕೃಷಿಯನ್ನು ಆರ್ಥಿಕವಾಗಿ ಲಾಭದಾಯಕವನ್ನಾಗಿಸುವ ನಿಟ್ಟಿನಲ್ಲಿ ಸುಧಾರಿತ ಗೇರು ಕೃಷಿಗೆ ಆದ್ಯತೆ ನೀಡುತ್ತಿರುವುದು ಕಂಡು ಬಂತು. ಹತ್ತು ಎಕರೆಗಿಂತ ಜಾಸ್ತಿ ಭೂಮಿಯಲ್ಲಿ ಗೇರು ಬೆಳೆಯುವವರ ಪ್ರಮಾಣ ಶೇ. ೩ ರಷ್ಟು ಮಾತ್ರ. ಭೂ ವಿಸ್ತೀರ್ಣ ಹೆಚ್ಚಾದಂತೆಲ್ಲಾ ಗೇರು ಕೃಷಿಯತ್ತ ಒಲವು ಕಡಿಮೆಯಾಗುತ್ತಿರುವುದು ಒಂದು ವೈಶಿಷ್ಟ್ಯವಾಗಿದೆ.



ಒಂದು ಎಕರೆಗಿಂತ ಕಡಿಮೆ ಇರುವಲ್ಲಿ ಗೇರು ಕೃಷಿ ಅನಿವಾರ್ಯವೆನಿಸಿಕೊಂಡರೆ ಭೂ ವಿಸ್ತೀರ್ಣ ಹೆಚ್ಚಿದಂತೆ ರಬ್ಬರ್‌ನಂತಹ ಬೆಳೆ ಆಕರ್ಷಣೀಯವಾಗುತ್ತಾ ಹೋಗುತ್ತದೆ. ಗೇರು ಕೃಷಿ ದ. ಕ. ಜಿಲ್ಲೆಯಲ್ಲಿ ಅನಿವಾರ್ಯವಾಗಿ ಉಳಿದಿದಿಯೇ ಹೊರತು ಅಗತ್ಯ ಎಂದೆನಿಸಿಕೊಂಡಿಲ್ಲದಿರುವುದು ಒಂದು ವಿಷಾದನೀಯ ಅಂಶವಾಗಿದೆ.

ಗೇರು ಕೃಷಿಯಲ್ಲಿ ಗಿಡ ನೆಡುವುದು ಗೊಬ್ಬರ ಹಾಕುವುದು ಬೇಲಿ ಹಾಕುವುದು ಇತ್ಯಾದಿ ಕೆಲಸಗಳಿಗೆ ಪುರುಷ ಕಾರ್ಮಿಕರನ್ನು ಬಳಸಿದರೆ ಕಾಡು ಕಡಿಯುವುದು, ಬೀಜ ಹೆಕ್ಕುವುದು ಇವೇ ಮುಂತಾದ ಕೆಲಸಗಳಿಗೆ ಮಹಿಳೆಯರನ್ನು ಬಳಸಲಾಗುತ್ತದೆ. ಗೇರು ಕೃಷಿಯಲ್ಲಿ ತೊಡಗಿರುವ ಪುರುಷ ಕಾರ್ಮಿಕರ ಸಂಖ್ಯೆ ಶೇಕಡಾ ೫೫ ರಷ್ಟಿದ್ದರೆ ಮಹಿಳಾ ಕಾರ್ಮಿಕರ ಸಂಖ್ಯೆ ಶೇಕಡಾ ೪೫ರಷ್ಟಿದೆ. ಗೇರು ಬೀಜ ಸಂಗ್ರಹಿಸುವ ಜವಾಬ್ದಾರಿ ಮನೆಯ ಮಹಿಳೆಯರದ್ದು ಹಾಗೂ ಶಾಲಾ ರಜಾ ದಿನಗಳಲ್ಲಿ ಮನೆಯ ಮಕ್ಕಳು ಇದರಲ್ಲಿ ಭಾಗಿಯಾಗುತ್ತಾರೆ. ಗೇರು ಕೃಷಿಯನ್ನು ಪ್ರಮುಖ ಬೆಳೆಯಾಗಿ, ದೊಡ್ಡ ಪ್ರಮಾಣದಲ್ಲಿ ಕೈಗೊಂಡ ಕೃಷಿ ಕುಟುಂಬಗಳು ಮಾತ್ರ ಕೂಲಿ ಕಾರ್ಮಿಕರನ್ನು ನೇಮಿಸಿಕೊಂಡರೆ ಸಣ್ಣ ಬೆಳೆಗಾರರು ಕುಟುಂಬ ಸದಸ್ಯರ ಸಹಾಯದಿಂದಲೇ ಗೇರು ಬೆಳೆಯುತ್ತಿದ್ದಾರೆ. ಅಧಿಕ ಕೂಲಿ ಮತ್ತು ಕೂಲಿ ಕಾರ್ಮಿಕರ ಕೊರತೆಯು ಇದಕ್ಕೆ ಕಾರಣವಾಗಿದೆ. ಇದರೊಂದಿಗೆ ಗೇರು ಬೀಜ ಸಂಗ್ರಹಿಸುವ ಕೆಲಸ ವರ್ಷದಲ್ಲಿ ಮೂರು ತಿಂಗಳು ಮಾತ್ರವೇ ಆಗಿದ್ದು, ಕೂಲಿ ಕಾರ್ಮಿಕರ ನೆರವು ಇಲ್ಲದೇ ನಿಭಾಯಿಸಬಹುದು ಎಂಬ ಬೆಳೆಗಾರ ವಕ್ತೃಗಳ ಅನುಭವವೂ ಕೂಡಾ ಇದಕ್ಕೆ ಕಾರಣವಾಗಿದೆ. ಗೇರು ಕೃಷಿಯಲ್ಲಿ ತೊಡಗಿರುವ ಕೂಲಿ ಕಾರ್ಮಿಕರ ಪ್ರಮಾಣವನ್ನು ಚಿತ್ರ ೪.೭ ರಲ್ಲಿ ತೋರಿಸಲಾಗಿದೆ.



ಚಿತ್ರ ೪.೭ ಗೇರು ಕೃಷಿಯಲ್ಲಿ ಕೂಲಿ ಕಾರ್ಮಿಕರ ಪ್ರಮಾಣ


ಗೇರು ಕೃಷಿ ಸಂಬಂಧಿ ಕೆಲಸಗಳು ಬಹುತೇಕ ಹಗುರ ಕೆಲಸಗಳೆಂಬ ಅಭಿಪ್ರಾಯದ ಹಿನ್ನೆಲೆಯಲ್ಲಿ ಶೇ.೪೫ ರಷ್ಟು ಕಾರ್ಮಿಕರು ಮಹಿಳೆಯರೇ ಆಗಿರುವುದು ಕಂಡು ಬರುತ್ತದೆ.

ಸಣ್ಣ ಹಿಡುವಳಿದಾರರೇ ಹೆಚ್ಚಾಗಿ ಗೇರು ಕೃಷಿಯನ್ನು ಕೈಗೊಂಡಿದ್ದು ಒಂದು ಎಕರೆ ಭೂಮಿಯಲ್ಲಿ ೬೫ ಅಂದ ೭೫ ಗಿಡಗಳನ್ನು ನೆಟ್ಟು ಬೆಳೆಸುತ್ತಿದ್ದಾರೆ. ಆಧುನಿಕ ರೀತಿಯ ಘನ ಸಾಂದ್ರ ಬೇಸಾಯ ಕ್ರಮ ಕೈಗೊಂಡಿದ್ದೇ ಆದಲ್ಲಿ ಒಂದು ಎಕರೆಯಲ್ಲಿ ೧೬೫ ಅಂದ ೧೭೦ ಗಿಡ ನೆಡಲು ಸಾಧ್ಯವಿದೆ. ಒಂದು ಗಿಡದ ಸರಾಸರಿ ಇಳುವರಿ ಎಂಟು ಕೆ.ಜಿಗಳಷ್ಟು. ದ.ಕ. ಜಿಲ್ಲೆಯ ಗೇರು ಬೆಳೆಗಾರರಲ್ಲಿ ೧೦೦ ಕ್ಕಿಂತ ಕಡಿಮೆ ಗಿಡಗಳನ್ನು ನೆಟ್ಟು ಕೃಷಿ ಮಾಡುವವರ ಸಂಖ್ಯೆ ಹೆಚ್ಚು. ಬಂಟ್ವಾಳದಲ್ಲಿ ಶೇ.




೪೫, ಬೆಳ್ತಂಗಡಿಯಲ್ಲಿ ಶೇ. ೩೯, ಮಂಗಳೂರಿನಲ್ಲಿ ಶೇ. ೪೫, ಪುತ್ತೂರಿನಲ್ಲಿ ಶೇ. ೪೧ ಹಾಗೂ ಸುಳ್ಯದಲ್ಲಿ ಶೇ. ೩೭ರಷ್ಟು ವಕ್ತೃಗಳು ೧೦೦ ಕ್ಕಿಂತ ಕಡಿಮೆ ಗೇರು ಗಿಡಗಳನ್ನು ಹೊಂದಿದ್ದಾರೆ. ಬಹುತೇಕ ವಕ್ತೃಗಳು ಗೇರು ಕೃಷಿಗೆ ಹೆಚ್ಚಿನ ಮಹತ್ವ ನೀಡುತ್ತಿಲ್ಲ ಎಂಬ ಅಂಶ ಇದರಿಂದ ಸ್ಪಷ್ಟವಾಗುತ್ತದೆ. ೪೦೦ಕ್ಕಿಂತ ಹೆಚ್ಚು ಗೇರು ಗಿಡಗಳನ್ನು ಹೊಂದಿರುವ ವಕ್ತೃಗಳ ಸಂಖ್ಯೆ ಬಂಟ್ವಾಳದಲ್ಲಿ ಶೇ. ೨೦, ಬೆಳ್ತಂಗಡಿಯಲ್ಲಿ ಶೇ. ೪೦, ಪುತ್ತೂರಿನಲ್ಲಿ ಶೇ. ೩೦, ಹಾಗೂ ಸುಳ್ಯದಲ್ಲಿ ಶೇ. ೧೦ ಆಗಿರುತ್ತದೆ. ಮಂಗಳೂರು ತಾಲೂಕಿನಲ್ಲಿ ೪೦೦ಕ್ಕಿಂತ ಹೆಚ್ಚು ಗೇರು ಬೆಳೆಯುವ ವಕ್ತೃಗಳು ಕಂಡು ಬಂದಿಲ್ಲ. ಬೆಳ್ತಂಗಡಿ, ಪುತ್ತೂರು ಹಾಗೂ ಬಂಟ್ವಾಳ ತಾಲೂಕುಗಳಲ್ಲಿ ಗೇರು ಕೃಷಿ ಪೂರ್ಣ ಪ್ರಮಾಣದಲ್ಲಿ ಉಳಿದುಕೊಂಡಿರುವುದು ಕಂಡು ಬಂದರೂ ಸುಳ್ಯ ತಾಲೂಕು ಮಾತ್ರ ಇದಕ್ಕೆ ಅಪವಾದ ಎನಿಸಿಕೊಂಡಿದೆ. ನೆರೆ ರಾಜ್ಯವಾದ ಕೇರಳದ ಪ್ರಮುಖ ಬೆಳೆಯಾದ ರಬ್ಬರ್ ಆಕರ್ಷಣೆಯಿಂದ ಸುಳ್ಯ ತಾಲೂಕು ಮುಕ್ತವಾಗಿಲ್ಲ. ನಗರೀಕರಣದ ಭರಾಟೆಯಲ್ಲಿ ಮಂಗಳೂರು ತಾಲೂಕು ಸಂಪೂರ್ಣವಾಗಿ ಗೇರು ಕೃಷಿಯಿಂದ ವಿಮುಖವಾಗುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಸಮಗ್ರ ಚಿತ್ರಣ ತೆಗೆದುಕೊಂಡಾಗ ಶೇ. ೪೧.೩ ರಷ್ಟು ವಕ್ತೃಗಳು ೧೦೦ ಕ್ಕಿಂತ ಕಡಿಮೆ ಗೇರು ಗಿಡಗಳನ್ನು ಹೊಂದಿದ್ದಾರೆ. ೧೦೦ ರಿಂದ ೨೦೦ ಗಿಡಗಳನ್ನು ಹೊಂದಿ ಗೇರು ಕೃಷಿ ಮಾಡುವವರ ಪ್ರಮಾಣ ದ.ಕ. ಜಿಲ್ಲೆಯಲ್ಲಿ ಶೇ. ೧೭.೩ ರಷ್ಟು ಮಾತ್ರ. ೨೦೦ ರಿಂದ ೩೦೦ ಗಿಡಗಳನ್ನು ಹೊಂದಿರುವವರು ಶೇ. ೧೪.೪ರಷ್ಟಾದರೆ, ೩೦೦ರಿಂದ ೪೦೦ ಗಿಡಗಳನ್ನು ಹೊಂದಿರುವವರು ಶೇ. ೧೭.೩ ರಷ್ಟು. ೪೦೦ ಕ್ಕಿಂತ ಹೆಚ್ಚು ಗೇರು ಗಿಡಗಳನ್ನು ಹೊಂದಿರುವವರು ಶೇ.೧೦ ರಷ್ಟು ಮಾತ್ರ. ಚಿತ್ರ ೪.೮ ರಲ್ಲಿ ವಕ್ತೃಗಳು ಬೆಳೆಯುವ ಗೇರು ಗಿಡಗಳ ಪ್ರಮಾಣವನ್ನು ತೋರಿಸಲಾಗಿದೆ.




ಚಿತ್ರ ೪.೮. ವಕ್ತೃಗಳು ಬೆಳೆಯುವ ಗೇರು ಗಿಡಗಳ ಪ್ರಮಾಣ

ದ. ಕ. ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದ ರೈತರು ೧೦೦ ಕ್ಕಿಂತ ಕಡಿಮೆ ಗಿಡಗಳನ್ನು ಹೊಂದಿದ್ದಾರೆ. ಸಣ್ಣ ಪ್ರಮಾಣದ ಭೂಮಿ ಹೊಂದಿರುವ ಹೆಚ್ಚಿನ ರೈತರು ಹಾಗೂ ಕೂಲಿ ಕಾರ್ಮಿಕರು ತಮಗಿರುವ ಭೂಮಿಯಲ್ಲಿ ಪರ್ಯಾಯ ಬೆಳೆ ಸಾಧ್ಯವಿಲ್ಲ ಎಂಬ ಕಾರಣಕ್ಕಾಗಿ ಎಷ್ಟು ಸಾಧ್ಯವೋ ಅಷ್ಟು ಗೇರು ಗಿಡಗಳನ್ನು ನೆಟ್ಟು ಬೆಳೆಸುವ ಅನಿವಾರ್ಯತೆಗೆ ಒಳಗಾಗಿದ್ದಾರೆ. ೪೦೦



ಕ್ಕಿಂತ ಹೆಚ್ಚು ಗೇರು ಗಿಡಗಳನ್ನು ಹೊಂದಿರುವ ಪೂರ್ಣ ಪ್ರಮಾಣದ ಗೇರು ಕೃಷಿಕರ ಸಂಖ್ಯೆ ಶೇ. ೧೦ ಮಾತ್ರವಾಗಿರುವುದು ಇದನ್ನು ಸ್ಪಷ್ಟ ಪಡಿಸುತ್ತದೆ.

ವಕ್ಕಗಳಲ್ಲಿ ಯಾರೂ ಗೇರನ್ನು ಮಾತ್ರ ಬೆಳೆಯುತ್ತಿಲ್ಲ ಜೊತೆಗೆ ಇತರ ಬೆಳೆಗಳನ್ನೂ ಬೆಳೆಯುತ್ತಿದ್ದಾರೆ.ಚಿತ್ರ ೪.೯ ಬೆಳೆಗಾರ ವಕ್ಕಗಳು ಬೆಳೆಯುವ ಇತರ ಬೆಳೆಗಳನ್ನು ತೋರಿಸುತ್ತದೆ.



ಚಿತ್ರ ೪.೯ ಬೆಳೆಗಾರ ವಕ್ಕಗಳ ಇತರೆ ಬೆಳೆಗಳು

ಶೇಕಡಾ ೧೭.೩ರಷ್ಟು ವಕ್ಕಗಳು ಸಾಂಪ್ರಾದಾಯಿಕ ಬೆಳೆಯಾದ ಭತ್ತವನ್ನು ಬೆಳೆಯುತ್ತಿದ್ದಾರೆ. ವಿಶೇಷವಾಗಿ ಬೆಳ್ತಂಗಡಿ, ಬಂಟ್ವಾಳ ಹಾಗೂ ಪುತ್ತೂರು ತಾಲೂಕುಗಳಲ್ಲಿ ಭತ್ತದ ಕೃಷಿ ತನ್ನ ನೆಲೆಯನ್ನು ಉಳಿಸಿಕೊಂಡಿದೆ. ಶೇಕಡಾ ೩೦.೭ ರಷ್ಟು ವಕ್ಕಗಳು ದ.ಕ. ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆಯಾದ ಅಡಿಕೆಯನ್ನು ಬೆಳೆಸುತ್ತಿದ್ದು ಶೇಕಡಾ ೧೩.೫ ರಷ್ಟು ರೈತರು ತೆಂಗನ್ನು ಬೆಳೆಯುತ್ತಿದ್ದಾರೆ. ಕಳೆದೊಂದು ದಶಕದಲ್ಲಿ ಶೇಕಡಾ ೨೧.೨ರಷ್ಟು ರೈತರು ರಬ್ಬರ್ ಬೆಳೆಯುವಲ್ಲಿ ಆಸಕ್ತರಾಗಿದ್ದಾರೆ. ಶೇಕಡಾ ೭.೭ ರಷ್ಟು ವಕ್ಕಗಳು ಕೋಕೋ ಹಾಗೂ ೯.೬ ರಷ್ಟು ವಕ್ಕಗಳು ಕರಿಮೆಣಸನ್ನು ಬೆಳೆಸುತ್ತಿದ್ದಾರೆ. ಇದರಿಂದಾಗಿ ವಕ್ಕಗಳ ಆದಾಯ ಮಟ್ಟದೊಡನೆ ಜೀವನ ಮಟ್ಟವು ಸುಧಾರಿಸಿದೆ.

ಗೇರು ಕೃಷಿ ಅಭಿವೃದ್ಧಿಗೆ ವೈಜ್ಞಾನಿಕ ಕೃಷಿ ಪದ್ಧತಿ ಅನಿವಾರ್ಯ ಎಂಬುದು ಸ್ಪಷ್ಟ. ಈ ನಿಟ್ಟಿನಲ್ಲಿ ಪುತ್ತೂರು ತಾಲೂಕಿನಲ್ಲಿರುವ ಕೇಂದ್ರ ಗೇರು ಸಂಶೋಧನ ನಿರ್ದೇಶನಾಲಯ ೪೦ ಸುಧಾರಿತ ತಳಿಗಳನ್ನು ಬಿಡುಗಡೆ ಮಾಡಿದ್ದು, ದ.ಕ. ಜಿಲ್ಲೆಯ ರೈತರಿಗೆ ಅದು ಸುಲಭ ದರದಲ್ಲಿ ಸಿಗುವಂತಾಗಿದೆ. ಸೂಕ್ತ ಮಾರ್ಗದರ್ಶನದೊಂದಿಗೆ ರೈತರು ಸುಧಾರಿತ ತಳಿಗಳನ್ನು ಬಳಸುತ್ತಿದ್ದು ಚಿತ್ರ ೪.೧೦ ರಲ್ಲಿ ಅವರು ಬಳಸುವ ವಿವಿಧ ಸಸಿ ಪ್ರಭೇದಗಳನ್ನು ಚಿತ್ರಿಸಲಾಗಿದೆ.






ಚಿತ್ರ ೪.೧೦ ಬೆಳೆಗಾರ ವಕ್ಕಗಳ ಸಸಿ ಪ್ರಭೇದಗಳು

ದ. ಕ. ಜಿಲ್ಲೆಯ ಹವಾಮಾನ ಹಾಗೂ ಮಣ್ಣಿನ ಫಲವತ್ತತೆಯ ದೃಷ್ಟಿಯಿಂದ ವಿವಿಧ ಸಸಿ ಪ್ರಭೇದಗಳು ಸೂಕ್ತ ಎನಿಸಿಕೊಂಡಿದ್ದು, ಶೇಕಡಾ ೪೬.೨ ರಷ್ಟು ವಕ್ಕಗಳು ಉಳ್ಳಾಲ-೧ ಹಾಗೂ ಶೇಕಡಾ ೬೧.೫ ಉಳ್ಳಾಲ ೩ ಹಾಗೂ ಶೇಕಡಾ ೨೩.೧ ವಕ್ಕಗಳು ಉಳ್ಳಾಲ ೪ ತಳಿಗಳನ್ನು ಬೆಳೆಸಿರುತ್ತಾರೆ. ಎನ್.ಆರ್. ಸಿ.ಸಿ ಸೆಲೆಕ್ಷನ್ ೨ ಹಾಗೂ ಭಾಸ್ಕರ ತಳಿಗಳನ್ನು ತಲಾ ಶೇಕಡಾ ೪೬.೨ರಷ್ಟು ವಕ್ಕಗಳು ಬಳಸುತ್ತಿದ್ದಾರೆ. ಸುಧಾರಿತ ತಳಿಗಳ ಜೊತೆಗೆ ಸಣ್ಣ ರೈತರು ಬೀಜಾಂಕುರ ಸಸಿಗಳನ್ನು ಬೆಳೆಸುತ್ತಿರುವುದು ಕಂಡು ಬಂತಾದರೂ ಅವುಗಳ ಪ್ರಮಾಣ ತೀರಾ ಕಡಿಮೆ. ಶೇಕಡಾ ೩೦.೮ ರಷ್ಟು ವಕ್ಕಗಳು ವೆಂಗುರ್ಲಾ ೪ ಹಾಗೂ ಶೇಕಡಾ ೭.೭ರಷ್ಟು ವಕ್ಕಗಳು ವೆಂಗುರ್ಲಾ ೫ ತಳಿಗಳನ್ನು ಬಳಸಿಕೊಂಡಿದ್ದಾರೆ. ೩೦.೮ ಶೇಕಡಾ ವಕ್ಕಗಳು ಇತರೆ ತಳಿಗಳನ್ನು ಬಳಸುತ್ತಿದ್ದಾರೆ.

ಬೆಳೆಗಾರ ವಕ್ಕಗಳು ವಿವಿಧ ಮೂಲಗಳಿಂದ ಪಡೆದುಕೊಂಡಿರುವ ಸಸಿ ಪ್ರಬೇಧಗಳನ್ನು ಚಿತ್ರ ೪.೧೧ರಲ್ಲಿ ತೋರಿಸಲಾಗಿದೆ.




ಚಿತ್ರ ೪.೧೧ ಬೆಳೆಗಾರ ವಕ್ಕಗಳ ಗೇರು ಗಿಡಗಳ ಮೂಲ



ಇತ್ತೀಚೆಗಿನ ವರ್ಷಗಳಲ್ಲಿ ಬೀಜಾಂಕುರ ತಳಿಗಳ ಪ್ರಮಾಣ ಇಳಿಯುತ್ತಿದ್ದು, ಸಮೀಕ್ಷೆಯಲ್ಲಿ ತಿಳಿದುಬಂದಂತೆ ಪ್ರಾಯಸ್ಥ ಗೇರು ತೋಟಗಳಲ್ಲಿ ಮಾತ್ರ ಶೇಕಡಾ ೧೧.೫ ರಷ್ಟು ವಕ್ತೃಗಳು ಇದನ್ನು ಬಳಸಿರುತ್ತಾರೆ. ಖಾಸಗಿ ನರ್ಸರಿ ಮೂಲದಿಂದ ಶೇಕಡಾ ೨೩.೭ರಷ್ಟು ವಕ್ತೃಗಳು, ಗೇರು ಸಂಶೋಧನಾ ನಿರ್ದೇಶನಾಲಯದಿಂದ ಶೇಕಡಾ ೩೫.೬ ರಷ್ಟು ವಕ್ತೃಗಳು ಹಾಗೂ ತೋಟಗಾರಿಕಾ ಇಲಾಖೆಯಿಂದ ಶೇಕಡಾ ೧೯.೨ರಷ್ಟು ವಕ್ತೃಗಳು ಸಸಿಗಳನ್ನು ಪಡೆದುಕೊಂಡಿರುತ್ತಾರೆ. ಪುತ್ತೂರಿನ ಗೇರು ಸಂಶೋಧನಾ ನಿರ್ದೇಶನಾಲಯ ಹೆಚ್ಚು ರೈತರನ್ನು ತಲುಪುವಲ್ಲಿ ಯಶಸ್ವಿಯಾಗಿದೆ.

ಗೇರು ಕೃಷಿ ಹೆಚ್ಚು ಆಸಕ್ತಿದಾಯಕ ಎನಿಸಿಕೊಳ್ಳಲು ಇರುವ ಮತ್ತೊಂದು ಕಾರಣವೇನೆಂದರೆ ಗೇರು ಬೆಳೆಯೊಂದಿಗೆ ಒಳ ಬೆಳೆಗಳನ್ನು ಕೂಡಾ ಬೆಳೆದು ಲಾಭ ಗಳಿಸಬಹುದು ಎಂಬುದು. ಗೇರು ನಿರ್ವಹಣಾ ವೆಚ್ಚವನ್ನು ಈ ರೀತಿಯ ಒಳ ಬೆಳೆಗಳ ಆದಾಯದಿಂದ ಸರಿದೂಗಿಸಬಹುದು ಎಂಬುದು ವಕ್ತೃಗಳ ಲೆಕ್ಕಾಚಾರ. ಬೆಳೆಗಾರ ವಕ್ತೃಗಳು ಬೆಳೆಯುವ ಒಳ ಬೆಳೆಗಳನ್ನು ಚಿತ್ರ ೪.೧೨ ರಲ್ಲಿ ದಾಖಲಿಸಲಾಗಿದೆ.



ಚಿತ್ರ ೪.೧೨ ಬೆಳೆಗಾರ ವಕ್ತೃಗಳು ಬೆಳೆಯುವ ಒಳ ಬೆಳೆಗಳು


ಗೇರು ಕೃಷಿಯಲ್ಲಿ ಒಳ ಬೆಳೆಗಳ ಆದಾಯವು ಮಹತ್ವದ್ದು. ಪುತ್ತೂರು ಹಾಗೂ ಬಂಟ್ವಾಳ ತಾಲೂಕಿನಲ್ಲಿ ಕರಿ ಮೆಣಸು, ಪಪ್ಪಾಯ, ಅನಾನಸು ಬೆಳೆದರೆ ಬೆಳ್ತಂಗಡಿ ತಾಲೂಕಿನಲ್ಲಿ ಹೆಚ್ಚಾಗಿ ಮರಗೆಣಸು ಪಪ್ಪಾಯ ಒಳ ಬೆಳೆಯಾಗಿ ಬೆಳೆಯುತ್ತಾರೆ. ಸುಳ್ಯ ತಾಲೂಕಿನಲ್ಲಿ ಒಳ ಬೆಳೆಯನ್ನು ಬೆಳೆಯುವ ರೈತರ ಸಂಖ್ಯೆ ತೀರಾ ಕಡಿಮೆ. ಒಟ್ಟು ೧೦೪ ವಕ್ತೃಗಳಲ್ಲಿ ಶೇ. ೭.೭ ರಷ್ಟು ವಕ್ತೃಗಳು ಪಪ್ಪಾಯ ಬೆಳೆದರೆ, ಸುವರ್ಣ ಗೆಡ್ಡೆ ಬೆಳೆಯುವವರ ಪ್ರಮಾಣ ಶೇ. ೪.೮ ರಷ್ಟು ಮಾತ್ರ ಆದರೆ ಶೇಕಡಾ ೪೪.೨ ರಷ್ಟು ವಕ್ತೃಗಳು ಕರಿಮೆಣಸು ಬೆಳೆಸುತ್ತಿದ್ದಾರೆ. ಶೇಕಡಾ ೧೭.೩ ರಷ್ಟು ವಕ್ತೃಗಳು ಮರಗೆಣಸನ್ನು ಬೆಳೆದರೆ ಪೈನಾಪಲ್ ಬೆಳೆಯುವವರ ಪ್ರಮಾಣ ಶೇಕಡಾ ೧೯.೨ ರಷ್ಟು. ಅಲಸಂಡೆ, ತೊಂಡೆ, ಬಾಳೆ ಇತ್ಯಾದಿಗಳನ್ನು ಬೆಳೆಯುವವರ ಪ್ರಮಾಣ ಶೇಕಡಾ ೬.೮ ರಷ್ಟು.

೪.೪. ಗೇರು ಕೃಷಿಯ ಕೂಡುವಳಿಗಳು

ಸಾಂಪ್ರದಾಯಿಕ ವಿಧಾನದಲ್ಲಿ ಗೇರು ಕೃಷಿ ಮಾಡುವವರು ವಿಶೇಷವಾಗಿ ನೀರಾವರಿ, ಗೊಬ್ಬರ ಇತ್ಯಾದಿಗಳ ಬಗ್ಗೆ ಚಿಂತಿಸುವುದಿಲ್ಲ. ಆದರೆ ಸುಧಾರಿತ ತಳಿಗಳನ್ನು ಬಳಸಿ ಗೇರು ತೋಟವನ್ನು ವ್ಯವಸ್ಥಿತವಾಗಿ ಮಾಡುತ್ತಿರುವ ವಕ್ತೃಗಳು




ಮೂಲಭೂತ ಸೌಕರ್ಯಗಳು ಅಗತ್ಯ ಎಂಬುದಾಗಿ ಭಾವಿಸಿದ್ದಾರೆ. ವಕ್ತೃಗಳ ಅಭಿಪ್ರಾಯವನ್ನು ಚಿತ್ರ ೪.೧೩ ರಲ್ಲಿ ದಾಖಲಿಸಲಾಗಿದೆ.



ಚಿತ್ರ ೪.೧೩ ನೀರಾವರಿ ಬಗ್ಗೆ ಬೆಳೆಗಾರ ವಕ್ತೃಗಳ ಅಭಿಪ್ರಾಯ

ಗೇರು ಗಿಡಗಳನ್ನು ಸಾಮಾನ್ಯವಾಗಿ ಗುಡ್ಡೆಗಳಲ್ಲಿ ಬೆಳೆಯುವುದರಿಂದ ಮಳೆಗಾಲದಲ್ಲಿ ನೀರಿಂಗಿಸುವ ಕ್ರಮ ಹೆಚ್ಚು ಪ್ರಯೋಜಕಾರಿ. ಆದರೂ ಬಿರು ಬೇಸಿಗೆಯಲ್ಲಿ ಗಿಡಗಳಿಗೆ ಅಲ್ಪ ಪ್ರಮಾಣದಲ್ಲಿಯಾದರೂ ನೀರು ಹಾಕುವುದರಿಂದ ಉತ್ತಮ ಫಸಲು ಸಿಗುವುದು ಎಂಬ ಅಭಿಪ್ರಾಯ ಶೇಕಡಾ ೩೪.೬ ವಕ್ತೃಗಳು ವ್ಯಕ್ತ ಪಡಿಸಿದರು. ಇನ್ನು ಉಳಿದ ಶೇಕಡಾ ೬೫.೪ ವಕ್ತೃಗಳು ನೀರಾವರಿ ಅನಗತ್ಯ ಎಂಬ ಅಭಿಪ್ರಾಯ ವ್ಯಕ್ತ ಪಡಿಸಿದರು. ಪುತ್ತೂರಿನ ಗೇರು ಸಂಶೋಧನಾ ನಿರ್ದೇಶನಾಲಯದ ಕೃಷಿ ತಜ್ಞರ ಸಲಹೆ ಪ್ರಕಾರ ಹದಿನೈದು ದಿನಗಳಿಗೊಮ್ಮೆ ಒಂದು ಗಿಡಕ್ಕೆ ೨೦೦ ಲೀ. ನಷ್ಟು ನೀರು ಹಾಕುವುದರಿಂದ ಮತ್ತು ಹೂಬಿಡುವ ಹಾಗೂ ಕಾಯಿ ಕಚ್ಚುವ ಸಮಯದಲ್ಲಿ ನಾಲ್ಕು ದಿನಗಳಿಗೊಮ್ಮೆ ೬೦ ಲೀ. ನಷ್ಟು ನೀರು ಹಾಕುವುದರಿಂದ ಖಂಡಿತಾ ಒಳ್ಳೆಯ ಇಳುವರಿ ಸಾಧ್ಯ ಎಂದು ಹೇಳುತ್ತಾರೆ. ನೀರಾವರಿಯ ವಿವಿಧ ಮೂಲಗಳ ಬಗ್ಗೆ ವಕ್ತೃಗಳು ನೀಡಿದ ಮಾಹಿತಿಯನ್ನು ಚಿತ್ರ ೪.೧೪ರಲ್ಲಿ ದಾಖಲಿಸಲಾಗಿದೆ.




ಚಿತ್ರ ೪.೧೪ ಬೆಳೆಗಾರ ವಕ್ತೃಗಳ ನೀರಾವರಿ ಮೂಲಗಳು






ಬೆಳೆಗಾರ ವಕ್ತೃಗಳನ್ನು ಸಂಪರ್ಕಿಸಿದಾಗ ಗೇರು ಗಿಡಗಳಿಗೆ ನೀರಿನ ಸಮಸ್ಯೆ ಅಷ್ಟಾಗಿ ಕಾಡುವುದಿಲ್ಲ. ನೀರಿಗಾಗಿ ಕೆಲವರು ತಮ್ಮ ಮನೆ ಬಳಕೆಗೆ ಇರುವ ಬಾವಿಯನ್ನೇ ಅವಲಂಬಿಸಿಕೊಂಡಿದ್ದಾರೆ. ಶೇಕಡಾ ೨೧.೨ ರಷ್ಟು ವಕ್ತೃಗಳು ಬಾವಿಯನ್ನು, ಶೇಕಡಾ ೩೪.೬ ರಷ್ಟು ವಕ್ತೃಗಳು ಕೊಳವೆ ಬಾವಿಯನ್ನು ಶೇಕಡಾ ೧೭.೩ ರಷ್ಟು ವಕ್ತೃಗಳು ಹತ್ತಿರದ ನದಿ ಅಥವಾ ತೋಡುಗಳನ್ನು ಬಳಸುತ್ತಿದ್ದಾರೆ. ಇನ್ನು ಶೇಕಡಾ ೨೬.೯ ವಕ್ತೃಗಳು ಬಾವಿ ಹಾಗೂ ಕೊಳವೆ ಬಾವಿ ಎರಡನ್ನೂ ಬಳಕೆ ಮಾಡುತ್ತಿದ್ದಾರೆ. ಸಮೀಕ್ಷೆಯಲ್ಲಿ ತಿಳಿದು ಬಂದಂತೆ ಶೇಕಡಾ ೮೨ ವಕ್ತೃಗಳು ಬಾವಿ ಹಾಗೂ ಕೊಳವೆ ಬಾವಿಯನ್ನು ಬಳಸುತ್ತಿರುವುದಾಗಿ ಮಾಹಿತಿ ನೀಡಿದರು. ಗೇರು ಕೃಷಿಗೆ ಗೊಬ್ಬರದ ಬಳಕೆ ಕುರಿತಂತೆ ಬೆಳೆಗಾರ ವಕ್ತೃಗಳನ್ನು ಸಂದರ್ಶಿಸಿದಾಗ ದೊರೆತ ಅಭಿಪ್ರಾಯವನ್ನು ಚಿತ್ರ ೪.೧೫ ರಲ್ಲಿ ಅಭಿವ್ಯಕ್ತಿಸಲಾಗಿದೆ.



ಚಿತ್ರ ೪.೧೫ ಗೇರು ಬೆಳೆಗೆ ಗೊಬ್ಬರದ ಅವಶ್ಯಕತೆ

ದ.ಕ. ಜಿಲ್ಲೆಯ ಗೇರು ಬೆಳೆಗಾರರು ಸುಧಾರಿತ ಬೇಸಾಯ ಕ್ರಮವನ್ನು ಅಳವಡಿಸಿಕೊಂಡಿರುವುದರಿಂದ ಶೇಕಡಾ ೮೮.೫ ರಷ್ಟು ವಕ್ತೃಗಳು ಗೊಬ್ಬರ ಬಳಸುತ್ತಿದ್ದಾರೆ. ಶೇಕಡಾ ೧೧.೫ ರಷ್ಟು ವಕ್ತೃಗಳು ಗೊಬ್ಬರ ಹಾಕುತ್ತಿಲ್ಲ.

ಗೇರು ಬೆಳೆಗೆ ಬಳಸುವ ಗೊಬ್ಬರದ ವಿಧಗಳ ಕುರಿತಂತೆ ವಕ್ತೃಗಳ ಅಭಿಪ್ರಾಯಗಳನ್ನು ಚಿತ್ರ ೪.೧೬ರಲ್ಲಿ ದಾಖಲಿಸಲಾಗಿದೆ.



ಚಿತ್ರ ೪.೧೬ ಬೆಳೆಗಾರ ವಕ್ತೃಗಳು ಬಳಸುವ ಗೊಬ್ಬರದ ವಿಧಗಳು






ಹಟ್ಟಿ ಗೊಬ್ಬರದ ಲಭ್ಯತೆ ಕುಸಿಯುತ್ತಿರುವುದರಿಂದ ಬೆಳೆಗಾರ ವಕ್ತೃಗಳಲ್ಲಿ ಶೇಕಡಾ ೪೭.೧ರಷ್ಟು ಮಂದಿ ಯೂರಿಯಾ ಮುಂತಾದ ರಾಸಾಯನಿಕ ಗೊಬ್ಬರವನ್ನು ಬಳಸುತ್ತಿದ್ದಾರೆ. ಶೇಕಡಾ ೨೫ ರಷ್ಟು ವಕ್ತೃಗಳು ಹಟ್ಟಿ ಗೊಬ್ಬರ ಬಳಸಿದರೆ ಶೇಕಡಾ ೭.೭ ರಷ್ಟು ವಕ್ತೃಗಳು ಕಹಿ ಬೇವಿನ ಹಿಂಡಿ ಅಥವಾ ನೆಲಗಡಲೆ ಹಿಂಡಿಯನ್ನು ಬಳಸುತ್ತಿದ್ದಾರೆ. ಕುರಿ/ಕೋಳಿ ಗೊಬ್ಬರವು ಮಾರುಕಟ್ಟೆಯಲ್ಲಿ ಲಭ್ಯವಿರುವುದರಿಂದ ಶೇಕಡಾ ೨೦ ರಷ್ಟು ವಕ್ತೃಗಳು ಇದನ್ನು ಬಳಸುತ್ತಿದ್ದಾರೆ.

ಗೇರಿಗೆ ಹಾನಿಯುಂಟುಮಾಡುವ ಹಲವಾರು ಕೀಟಗಳ ಪೈಕಿ ಗೇರು ಕಾಂಡ ಹಾಗೂ ಬೇರು ಕೊರೆಯುವ ಹುಳು ಹಾಗೂ ಚಹಾ ಸೊಳ್ಳೆ ಪ್ರಮುಖವಾದವುಗಳು. ಈ ಕೀಟಗಳ ಬಾಧೆಯಿಂದಾಗಿ ಶೇ. ೪೦ರಷ್ಟು ಇಳುವರಿ ಕಡಿಮೆಯಾಗುತ್ತದೆ. ಕಾಂಡ ಹಾಗೂ ಬೇರು ಕೊರೆಯುವ ಕೀಟಗಳ ನಾಶಕ್ಕಾಗಿ ಬಾಧೆ ತಗಲಿದ ಮರಗಳನ್ನು ಗುರುತಿಸಿ, ಕಾಂಡದ ಭಾಗವನ್ನು ಕೆತ್ತಿ, ಕೀಟವನ್ನು ಹೊರತೆಗೆದು ಸಾಯಿಸಿ ನಂತರ ಆ ಭಾಗಕ್ಕೆ ಶೇ. ೦.೨ ಕ್ಲೋರೋಪೈರಿಫಾಸ್ ಅಥವಾ ಶೇ. ೧.೦ ರ ಕಾರ್ಬರಿಲ್ ದ್ರಾವಣವನ್ನು ಲೇಪಿಸಬೇಕು. ಆದರೆ ಬೆಳೆಗಾರ ವಕ್ತೃಗಳಲ್ಲಿ ಶೇ. ೧೦ರಷ್ಟು ಮಾತ್ರ ಈ ರೀತಿಯ ಕ್ರಮ ಕೈಗೊಳ್ಳುತ್ತಿದ್ದಾರೆ. ಬಹುತೇಕ ರೈತರು ಸಸ್ಯ ಸಂರಕ್ಷಣೆ ಬಗ್ಗೆ ನಿರ್ಲಕ್ಷ್ಯ ಧೋರಣೆ ತಳೆದಿದ್ದಾರೆ.

ಗೇರು ಬೆಳೆಗೆ ತಗಲುವ ಕೀಟಬಾಧೆ ಹಾಗೂ ಅವುಗಳ ನಿವಾರಣೆಗಾಗಿ ಬಳಸುವ ಕೀಟ ನಾಶಕಗಳ ಕುರಿತಂತೆ ಕ್ಷೇತ್ರಾಧ್ಯಯನದಲ್ಲಿ ಸಮೀಕ್ಷೆ ಮಾಡಲಾಯಿತು. ಶೇ. ೭೮ ರಷ್ಟು ವಕ್ತೃಗಳು ಗೇರು ಬೆಳೆಗೆ ಚಹಾ ಸೊಳ್ಳೆ ರೋಗ ತಗಲುವ ಬಗ್ಗೆ ಉಲ್ಲೇಖ ಮಾಡಿದರೆ ೨೨ ಶೇಕಡಾ ವಕ್ತೃಗಳು ಗೇರು ಕಾಂಡ ಹಾಗೂ ಬೇರು ಕೊರೆಯುವ ಹುಳುವಿನ ಹಾವಳಿಯನ್ನು ಉಲ್ಲೇಖಿಸಿದ್ದಾರೆ. ರೋಗ ನಿವಾರಣೆಗಾಗಿ ಬಳಸುವ ಕ್ರಿಮಿನಾಶಕಗಳು ಪ್ರಮುಖವಾಗಿ ಕರಾಟೆ, ಮೋನೋಕ್ರೋಟೋಪಾಸ್, ಲಾಮ್ಡಾ ಸಯಲೋತ್ರಿನ್ ಕಾರ್ಬಾರಿಲ್, ಸೆವಿನ್, ಕ್ಲೋರೋಪೆರಿಪಾಸ್ ಇತ್ಯಾದಿ. ಗೇರು ಗಿಡಗಳಿಗೆ ಬಳಸುವ ಕ್ರಿಮಿನಾಶಕಗಳ ವಿವರವನ್ನು ಚಿತ್ರ ೪.೧೭ ರಲ್ಲಿ ಅಭಿವ್ಯಕ್ತಿಸಲಾಗಿದೆ.




ಚಿತ್ರ ೪.೧೭ ಗೇರು ಕೃಷಿಯಲ್ಲಿ ಬಳಸುವ ಕೀಟನಾಶಕಗಳು

ಶೇಕಡಾ ೫೮ ರಷ್ಟು ವಕ್ತೃಗಳು ಕರಾಟೆ ಮತ್ತು ಮೋನೋಕ್ರೋಟೊಪಾಸ್ ಬಳಸಿದರೆ ಶೇ. ೨೮ ರಷ್ಟು ವಕ್ತೃಗಳು ಕಾರ್ಬರಿಲ್, ಸೆವಿನ್, ಲಾಮ್ಡಾ ಸಯಲೋತ್ರಿನ್ ಬಳಸುತ್ತಿದ್ದಾರೆ. ಶೇ. ೧೪ರಷ್ಟು ವಕ್ತೃಗಳು ಕ್ಲೋರೋಪೆರಿಪಾಸ್ ಬಳಕೆ ಮಾಡುತ್ತಿದ್ದಾರೆ. ಎಂಡೋಸಲ್ಫಾನ್ ಸಿಂಪಡಿಕೆಯನ್ನು ಸರಕಾರ ನಿಷೇಧಿಸಿರುವುದರಿಂದ ಅದರ ಬಳಕೆ ಇಲ್ಲ. ಆದಾಗ್ಯೂ ದ.ಕ.



ಜಿಲ್ಲೆಯಾದ್ಯಂತ ಇರುವ ಎಂಡೋಸಲ್ಫಾನ್ ಪೀಡಿತರ ಸಮಸ್ಯೆಯ ಹಿನ್ನೆಲೆಯಲ್ಲಿ ವಕ್ತೃಗಳ ಅಭಿಪ್ರಾಯ ಸಂಗ್ರಹಿಸಲಾಗಿದೆ. ಶೇ. ೯೪ ವಕ್ತೃಗಳು ಎಂಡೋ ಸಲ್ಫಾನ್ ಹಾನಿಕಾರಕ ಎಂದು ಅಭಿಪ್ರಾಯ ಪಟ್ಟರೆ ಶೇಕಡಾ ೬ ರಷ್ಟು ವಕ್ತೃಗಳಿಗೆ ಏನೇನೂ ತಿಳುವಳಿಕೆ ಇಲ್ಲ.

ಗೇರು ಕೃಷಿಗೆ ವಿಶೇಷ ಹಣಕಾಸಿನ ಅಗತ್ಯ ಇಲ್ಲದಿದ್ದರೂ ಸಮಯೋಚಿತ ಹಣಕಾಸಿನ ನೆರವಿನಿಂದ ವ್ಯವಸ್ಥಿತವಾಗಿ, ಲಾಭದಾಯಕವಾಗಿ ಗೇರು ಬೆಳೆಯಬಹುದು ಎಂಬುದು ವಕ್ತೃಗಳ ಅಭಿಪ್ರಾಯ. ಗೇರು ಬೆಳೆಗಾರರ ಹಣಕಾಸಿನ ಮೂಲವನ್ನು ಚಿತ್ರ ೪.೧೮ ರಲ್ಲಿ ತೋರಿಸಲಾಗಿದೆ.



ಚಿತ್ರ ೪.೧೮ ಬೆಳೆಗಾರ ವಕ್ತೃಗಳ ಹಣಕಾಸಿನ ಮೂಲಗಳು


ಶೇ. ೪೧.೩ರಷ್ಟು ವಕ್ತೃಗಳು ತಮ್ಮ ಸ್ವಂತ ಹಣವನ್ನೇ ಬಳಸಿರುವುದು ಕಂಡು ಬಂತು. ಶೇ. ೧೨ ರಷ್ಟು ವಕ್ತೃಗಳು ಬ್ಯಾಂಕಿನಿಂದಲೂ ಶೇ. ೨೩.೧ ರಷ್ಟು ವಕ್ತೃಗಳು ಸಹಕಾರಿ ಸಂಘದಿಂದ ಹಣಕಾಸಿನ ನೆರವು ಪಡೆದುಕೊಂಡಿದ್ದು ಖಾಸಗಿ ಮೂಲಗಳಿಂದ ಯಾವುದೇ ನೆರವು ಯಾರು ಪಡೆದಿಲ್ಲ. ಶೇ. ೨೩.೧ ರಷ್ಟು ವಕ್ತೃಗಳು ಸರಕಾರದಿಂದ ಸಿಗುವ ಧನ ಸಹಾಯ ಹಾಗೂ ಪ್ರೋತ್ಸಾಹ ಧನವನ್ನು ಪಡೆದುಕೊಂಡಿದ್ದಾರೆ. ಗೇರು ಕೃಷಿಯನ್ನು ದೊಡ್ಡ ಪ್ರಮಾಣದಲ್ಲಿ ಮಾಡುವವರಿಗೆ ಸಾಂಸ್ಥಿಕ ಹಣಕಾಸಿನ ನೆರವು ಅಗತ್ಯ ಎನ್ನುವುದು ಸಾಮಾನ್ಯವಾದ ಅಭಿಪ್ರಾಯವಾಗಿದೆ.

೪.೫ ಗೇರು ಬೆಳೆಯ ವೆಚ್ಚ ಮತ್ತು ಆದಾಯ

ಗೇರು ಬೆಳೆಗೆ ತಗಲುವ ವೆಚ್ಚ ಇತರೆ ಬೆಳೆಗಳಿಗೆ ಹೋಲಿಸಿದರೆ ಬಹಳ ಕಡಿಮೆ. ಯಾವುದೇ ಪ್ರತಿಕೂಲ ಪರಿಸ್ಥಿತಿಯಲ್ಲೂ ಬೆಳೆಯಬಲ್ಲ ಗೇರು ಗಿಡಗಳ ನಿರ್ವಹಣಾ ವೆಚ್ಚವು ನಗಣ್ಯವಾದುದು. ಇದೇ ಕಾರಣಕ್ಕೆ ಗೇರು ಬಡವರ ಬೆಳೆ ಶ್ರೀಮಂತರ ಆಹಾರ ಎಂದು ಕರೆಯಲ್ಪಟ್ಟಿರುವುದು. ಪ್ರಾರಂಭದಲ್ಲಿ ಕೃಷಿಕರು ತಾವೇ ತಯಾರಿಸಿದ ಬೀಜಾಂಕುರ ಗಿಡಗಳನ್ನು ನೆಟ್ಟು ಬೆಳೆಸುತ್ತಿದ್ದರು. ನೀರಾವರಿ ಸೌಲಭ್ಯವಾಗಲೀ ಗೊಬ್ಬರವಾಗಲೀ ಬಳಸುವ ಕ್ರಮ ಇದ್ದಿರಲಿಲ್ಲ. ತಮ್ಮ ಕೃಷಿ ಭೂಮಿಯ ಅಂಚಿನಲ್ಲಿ ಖಾಲಿ ಇದ್ದ ಜಾಗದಲ್ಲಿ ಗೇರು ಬೆಳೆಸುತ್ತಿದ್ದರು. ಆ ಕಾರಣಕ್ಕಾಗಿ ಇದಕ್ಕೆ ತಗಲುವ ವೆಚ್ಚ ತುಂಬಾ ಕಡಿಮೆ. ಗೇರು ಬೀಜದ ಮಾರಾಟದಿಂದ ಬರುತ್ತಿದ್ದ ಮೊತ್ತ ನಿವ್ವಳ ಲಾಭ ಎಂದೆನಿಸಿಕೊಂಡಿತ್ತು. ಇತ್ತೀಚಿನ ವರ್ಷಗಳಲ್ಲಿ ತೋಟಗಾರಿಕಾ ಇಲಾಖೆ ಹಾಗೂ ಪುತ್ತೂರಿನ ಗೇರು ನಿರ್ದೇಶನಾಲಯಗಳು ಸುಧಾರಿತ ತಳಿಗಳನ್ನು ವಿತರಿಸುತ್ತಿರುವುದರಿಂದ ಹಾಗೂ ವೈಜ್ಞಾನಿಕ ಕೃಷಿ



ಪದ್ಧತಿ ಅನುಷ್ಠಾನಗೊಳ್ಳುತ್ತಿರುವುದರಿಂದ ಸ್ವಲ್ಪ ಬಂಡವಾಳ ಹೂಡಿಕೆ ಅಗತ್ಯ ಎಂದು ವಕ್ತೃಗಳು ಅಭಿಪ್ರಾಯಪಡುತ್ತಿದ್ದಾರೆ. ಸಮೀಕ್ಷೆಯ ಸಂದರ್ಭದಲ್ಲಿ ಭೇಟಿಯಾದ ಒಬ್ಬ ವಕ್ತೃವಿನ ಅಭಿಪ್ರಾಯದಂತೆ ಒಂದು ಹೆಕ್ಟೇರ್ ಭೂಮಿಯಲ್ಲಿ ಸುಮಾರು ೧೭೫ ರಿಂದ ೨೦೦ ಗಿಡ ನೆಡಬಹುದು. ಒಂದು ಹೆಕ್ಟೇರ್ ಕೃಷಿ ಭೂಮಿಗೆ ತಗಲುವ ವೆಚ್ಚ ರೂಪಾಯಿ ೫೦,೦೦೦, ಆದಾಯ ಸುಮಾರು ರೂಪಾಯಿ ೮೦,೦೦೦ ಹಾಗಾಗಿ ಉಳಿದ ರೂಪಾಯಿ ೩೦೦೦೦ ನಿವ್ವಳ ಲಾಭ. ಘನ ಸಾಂದ್ರ ಬೇಸಾಯದ ಪ್ರಕಾರ ಒಂದು ಹೆಕ್ಟೇರಿನಲ್ಲಿ ೪೦೦ ಗಿಡಗಳನ್ನು ನೆಡಬಹುದು. ಇಲ್ಲಿ ಖರ್ಚು ರೂಪಾಯಿ ೬೦,೦೦೦ ಬರುತ್ತದೆ. ಆದಾಯ ೧,೪೦,೦೦೦ ಹಾಗಾಗಿ ರೂಪಾಯಿ ೮೦,೦೦೦ ನಿವ್ವಳ ಲಾಭ ಸಿಗುತ್ತದೆ. ಇದರೊಂದಿಗೆ ಒಳ ಬೆಳೆಗಳಾದ ಕರಿಮೆಣಸು, ಅನನಾಸು ಇತ್ಯಾದಿಗಳಿಂದಲೂ ಹೆಚ್ಚುವರಿ ಆದಾಯವನ್ನು ಪಡೆಯಬಹುದು. ಗೇರು ಬೆಳೆಯ ಅಂದಾಜು ವೆಚ್ಚವನ್ನು ಚಿತ್ರ ೪.೧೯ ರಲ್ಲಿ ತೋರಿಸಲಾಗಿದೆ.



ಚಿತ್ರ ೪.೧೯ ಬೆಳೆಗಾರ ವಕ್ತೃಗಳ ಅಂದಾಜು ವೆಚ್ಚ

ಶೇ. ೬೭.೩ರಷ್ಟು ವಕ್ತೃಗಳು ರೂ. ೧೦,೦೦೦ ಕ್ಕಿಂತ ಕಡಿಮೆ ಬಂಡವಾಳ ಹೂಡಿದವರಾಗಿದ್ದು ರೂ. ೧೦,೦೦೦ ದಿಂದ ರೂ. ೨೦,೦೦೦ಗಳವರೆಗೆ ಬಂಡವಾಳ ಹೂಡಿದ ವಕ್ತೃಗಳ ಸಂಖ್ಯೆ ಶೇ. ೧೭.೩ ರಷ್ಟು ರೂ. ೨೦,೦೦೦ ದಿಂದ ೫೦,೦೦೦ ದವರೆಗೆ ಬಂಡವಾಳ ಹೂಡಿದ ವಕ್ತೃಗಳ ಸಂಖ್ಯೆ ೧೫.೪ ರಷ್ಟಿದ್ದರೆ ೫೦,೦೦೦ ದಿಂದ ಮೇಲ್ಪಟ್ಟು ಬಂಡವಾಳ ತೊಡಗಿಸಿದ ವಕ್ತೃಗಳ ಸಂಖ್ಯೆ ಶೂನ್ಯ. ಇದಕ್ಕಿಂತ ಹೆಚ್ಚಿನ ಬಂಡವಾಳ ಗೇರು ಕೃಷಿಗೆ ಅಗತ್ಯವಿಲ್ಲ ಎನ್ನುವುದು ಒಂದು ಅಂಶವಾದರೆ ಹೆಚ್ಚಿನ ಬಂಡವಾಳ ತೊಡಗಿಸಿ ಗೇರು ಕೃಷಿ ಮಾಡುವುವವರ ಸಂಖ್ಯೆಯೂ ತೀರಾ ವಿರಳ ಎಂಬುದು ಸ್ಪಷ್ಟವಾಗುತ್ತದೆ.

ದ.ಕ. ಜಿಲ್ಲೆಯಲ್ಲಿ ಮಿಶ್ರ ಬೇಸಾಯ ಪದ್ಧತಿ ಕಂಡು ಬಂದಿದ್ದು ರೈತರು ಯಾವುದೇ ಒಂದು ಬೆಳೆಗೆ ತಮ್ಮನ್ನು ಸೀಮಿತಗೊಳಿಸಿಕೊಳ್ಳುವುದಿಲ್ಲ. ಭತ್ತ, ತೆಂಗು, ಅಡಿಕೆ, ಗೇರು, ಕಾಳು ಮೆಣಸು, ಕೊಕ್ಕೊ, ರಬ್ಬರ್ ಎಲ್ಲವನ್ನೂ ಬೆಳೆಯುವ ಪದ್ಧತಿಯನ್ನು ದ. ಕ. ಜಿಲ್ಲೆಯ ರೈತರು ಹೊಂದಿದ್ದಾರೆ. ಸಣ್ಣ ಹಾಗೂ ಅಂಚಿನ ರೈತರಿಗೆ ಗೇರು ಒಂದು ಪ್ರಮುಖ ಆದಾಯದ ಮೂಲವಾಗಿದ್ದು, ಗೇರು ಇಳುವರಿ ಫೆಬ್ರವರಿಯಿಂದ ಪ್ರಾರಂಭವಾಗಿ ಏಪ್ರಿಲ್, ಮೇ ತನಕ ಆದಾಯವನ್ನು ತಂದು ಕೊಡುತ್ತದೆ. ಗೇರು ಬೆಳೆಗಾರ ವಕ್ತೃಗಳ ಗೇರು ಬೆಳೆಯಿಂದ ಬರುವ ವಾರ್ಷಿಕ ಆದಾಯವನ್ನು ಚಿತ್ರ ೪.೨೦ ರಲ್ಲಿ ತೋರಿಸಲಾಗಿದೆ.






ಚಿತ್ರ ೪.೨೦ ಬೆಳೆಗಾರ ವಕ್ತೃಗಳ ವಾರ್ಷಿಕ ಆದಾಯ

ಬೆಳೆಗಾರ ವಕ್ತೃಗಳಲ್ಲಿ ಶೇಕಡಾ ೨೩.೧ ರಷ್ಟು ಮಂದಿ ವಾರ್ಷಿಕ ರೂ. ೨೦,೦೦೦ ದಷ್ಟು ಆದಾಯ ಪಡೆಯುವವರಾಗಿದ್ದು ರೂಪಾಯಿ ೨೦,೦೦೦ ದಿಂದ ೫೦,೦೦,೦೦೦ ದ ತನಕ ಆದಾಯ ಪಡೆಯುವ ಪ್ರಮಾಣ ಶೇಕಡಾ ೨೯.೮ರಷ್ಟಿದೆ. ರೂ. ೫೦,೦೦೦ ದಿಂದ ೧,೦೦,೦೦೦ ದವರೆಗೆ ಆದಾಯ ಪಡೆಯುವವರು ಶೇಕಡಾ ೪೧.೩ರಷ್ಟಿದ್ದರೆ ೧,೦೦,೦೦೦ ಕ್ಕಿಂತಲೂ ಅಧಿಕ ಆದಾಯ ಪಡೆಯುವವರು ಶೇಕಡಾ ೫.೮ ರಷ್ಟು ಮಾತ್ರ ಇದ್ದಾರೆ. ಹೆಚ್ಚಿನ ಬಂಡವಾಳ ತೊಡಗಿಸಿ ವೈಜ್ಞಾನಿಕ ರೀತಿಯಿಂದ ಗೇರು ಕೃಷಿ ಮಾಡಿದ ವಕ್ತೃಗಳು ಹೆಚ್ಚಿನ ಆದಾಯ ಪಡೆಯುತ್ತಿರುವುದು ಕ್ಷೇತ್ರಾಧ್ಯಯನದಲ್ಲಿ ತಿಳಿದು ಬಂತು.

ಕಳೆದ ಒಂದು ದಶಕದಲ್ಲಿ ಗೇರು ಬೆಳೆಯುವ ಪ್ರದೇಶದ ವಿಸ್ತೀರ್ಣ ವ್ಯತ್ಯಯ ಕುರಿತಾಗಿ ವಿಶ್ಲೇಷಿಸಿದಾಗ ದೊರೆತ ಅಭಿಪ್ರಾಯವನ್ನು ಚಿತ್ರ ೪.೨೧ ರಲ್ಲಿ ದಾಖಲಿಸಲಾಗಿದೆ.




ಚಿತ್ರ ೪.೨೧ ಬೆಳೆಗಾರ ವಕ್ತೃಗಳ ಗೇರು ಬೆಳೆಯುವ ಪ್ರದೇಶದ ವಿಸ್ತೀರ್ಣದ ವ್ಯತ್ಯಯ





ಶೇ. ೪೬.೨ ರಷ್ಟು ವಕ್ತೃಗಳು ವಿಸ್ತೀರ್ಣವನ್ನು ಹೆಚ್ಚಿಸಿದ್ದೇವೆ ಎಂದರೆ ಶೇ. ೫೩.೮ ವಕ್ತೃಗಳು ವಿಸ್ತೀರ್ಣವನ್ನು ಹೆಚ್ಚಿಸಿಲ್ಲ ಎಂಬ ಅಭಿಪ್ರಾಯವನ್ನು ನೀಡಿರುತ್ತಾರೆ. ಗೇರು ಪ್ರದೇಶದ ವಿಸ್ತೀರ್ಣ ಹೆಚ್ಚಾಗಿಲ್ಲದಿದ್ದರೂ ಇಳುವರಿ ಖಂಡಿತಾ ಹೆಚ್ಚಿದೆ ಎಂಬುದು ಬಹುತೇಕ ವಕ್ತೃಗಳ ಅಭಿಪ್ರಾಯವಾಗಿತ್ತು. ಚಿತ್ರ ೪.೨೨ ರಲ್ಲಿ ಇದನ್ನು ಅಭಿವ್ಯಕ್ತಿಸಲಾಗಿದೆ.



ಚಿತ್ರ ೪.೨೨ ಬೆಳೆಗಾರ ವಕ್ತೃಗಳ ಗೇರು ಉತ್ಪಾದನೆಯ ವ್ಯತ್ಯಯ


ಒಟ್ಟು ಬೆಳೆಗಾರ ವಕ್ತೃಗಳಲ್ಲಿ ಶೇ. ೭೬.೯ ರಷ್ಟು ಮಂದಿ ಉತ್ಪಾದನೆ ಹೆಚ್ಚಾಗಿದೆ ಎಂದು ಅಭಿಪ್ರಾಯ ಪಟ್ಟರೆ ಶೇ ೨೩.೧ ರಷ್ಟು ವಕ್ತೃಗಳು ಉತ್ಪಾದನೆ ಹೆಚ್ಚಾಗಿಲ್ಲ ಎಂಬ ಅನಿಸಿಕೆ ವ್ಯಕ್ತಪಡಿಸಿದ್ದಾರೆ. ತಂತ್ರಜ್ಞಾನದ ಬಳಕೆಯಿಂದಾಗಿ ಗೇರು ಬೆಳೆಯ ಎಕರೆವಾರು ಇಳುವರಿ ಹೆಚ್ಚಾಗಿದೆ ಎಂಬುದು ಬಹುತೇಕ ವಕ್ತೃಗಳ ಅಭಿಪ್ರಾಯವಾಗಿದೆ. ಹಿಂದೆ ಸಾಂಪ್ರದಾಯಿಕ ರೀತಿಯಲ್ಲಿ ಕೃಷಿ ಮಾಡುತ್ತಿದ್ದ ರೈತರು ಈಗ ಸುಲಭ ಸಾಧ್ಯವಾದ ತಂತ್ರಜ್ಞಾನಗಳನ್ನು ಅಳವಡಿಸುತ್ತಿದ್ದಾರೆ. ಹಾಗಾಗಿ ಉತ್ಪಾದನೆ ಹೆಚ್ಚಾಗಿದೆ ಎಂಬುದಾಗಿ ವಕ್ತೃಗಳು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಗೇರು ಬೆಳೆಯಿಂದಾಗಿ ವಕ್ತೃಗಳ ಒಟ್ಟು ಆದಾಯದಲ್ಲಾದ ಹೆಚ್ಚಳದ ಬಗ್ಗೆ ವಕ್ತೃಗಳು ಪ್ರತಿಕ್ರಿಯಿಸಿದುದನ್ನು ಕೋಷ್ಟಕ ೪.೫ ರಲ್ಲಿ ದಾಖಲಿಸಲಾಗಿದೆ.

ಕೋಷ್ಟಕ ೪.೫ ಗೇರು ಬೆಳೆಗಾರ ವಕ್ತೃಗಳ ಆದಾಯದ ಹೆಚ್ಚಳ

ಕ್ರಮ ಸಂಖ್ಯೆ	ತಾಲೂಕು	ಅಭಿಪ್ರಾಯ	
		ಆಗಿದೆ (ಸಂಖ್ಯೆ)	ಆಗಿಲ್ಲ (ಸಂಖ್ಯೆ)
೧.	ಬಂಟ್ವಾಳ	೧೬	೪
೨.	ಬೆಳ್ತಂಗಡಿ	೨೫	೨
೩.	ಮಂಗಳೂರು	೦೮	೬
೪.	ಪುತ್ತೂರು	೨೬	೮
೫.	ಸುಳ್ಯ	೦೫	೪
	ಒಟ್ಟು	೮೦	೨೪
	ಶೇಕಡಾ	೭೬.೯	೨೩.೧




ಗೇರು ಕೃಷಿಯಿಂದಾಗಿ ಕುಟುಂಬದ ಆದಾಯ ಹೆಚ್ಚಿದೆ ಎಂದು ಅಭಿಪ್ರಾಯ ವ್ಯಕ್ತ ಪಡಿಸಿದ ಜಿಲ್ಲೆಯ ಒಟ್ಟು ೮೦ ಬೆಳೆಗಾರ ವಕ್ತೃಗಳಲ್ಲಿ ಶೇ. ೩೨ ರಷ್ಟು ಪುತ್ತೂರು ತಾಲೂಕಿನವರು ಶೇ. ೩೧ರಷ್ಟು ಬೆಳ್ತಂಗಡಿ ತಾಲೂಕಿನವರು. ಶೇ. ೨೦ರಷ್ಟು ಬಂಟ್ವಾಳ ತಾಲೂಕಿನವರು, ಶೇ.೧೦ರಷ್ಟು ಮಂಗಳೂರು ಹಾಗೂ ಶೇ. ೭ ರಷ್ಟು ಸುಳ್ಯ ತಾಲೂಕಿನವರಾಗಿದ್ದಾರೆ. ಒಟ್ಟು ದ.ಕ. ಜಿಲ್ಲೆಯ ಬೆಳೆಗಾರ ವಕ್ತೃಗಳಲ್ಲಿ ಬೆಳ್ತಂಗಡಿ, ಪುತ್ತೂರು ಹಾಗೂ ಬಂಟ್ವಾಳ ತಾಲೂಕಿನ ಗೇರು ಬೆಳೆಗಾರ ವಕ್ತೃಗಳು ಗೇರು ಕೃಷಿಯ ಬಗ್ಗೆ ಧನಾತ್ಮಕವಾಗಿ ಪ್ರತಿಕ್ರಿಯೆ ವ್ಯಕ್ತಪಡಿಸಿದರು. ಜಿಲ್ಲೆಯ ಒಟ್ಟು ಗೇರು ಬೆಳೆಗಾರರ ಅಭಿಪ್ರಾಯವನ್ನು ಚಿತ್ರ ೪.೨೩ ರಲ್ಲಿ ಅಭಿವ್ಯಕ್ತಿಗೊಳಿಸಲಾಗಿದೆ.



ಚಿತ್ರ ೪.೨೩ ಗೇರು ಬೆಳೆಗಾರ ವಕ್ತೃಗಳ ಆದಾಯ

ಜಿಲ್ಲೆಯ ಒಟ್ಟು ಗೇರು ಕೃಷಿಕರಲ್ಲಿ ಶೇ. ೭೭ ರಷ್ಟು ಮಂದಿ ಗೇರು ಕೃಷಿಯಿಂದಾಗಿ ಕುಟುಂಬದ ಆದಾಯ ಹೆಚ್ಚಾಗಿದೆ ಎಂದು ಅಭಿಪ್ರಾಯ ಪಟ್ಟರೆ ಶೇ. ೨೩ ರಷ್ಟು ವಕ್ತೃಗಳು ಆದಾಯದ ಹೆಚ್ಚಳವಿಲ್ಲ ಎಂದು ತಿಳಿಸಿರುತ್ತಾರೆ.

ಗೇರು ಉದ್ಯಮದಲ್ಲಿ ಬರುವ ಒಂದು ಪ್ರಮುಖ ಉಪ ಉತ್ಪನ್ನವೆಂದರೆ ಗೇರು ಹಣ್ಣು. ಗೇರು ಕೃಷಿಯ ಉತ್ಪಾದನಾ ವೆಚ್ಚವನ್ನು ಹಗುರಗೊಳಿಸುವ ದೃಷ್ಟಿಯಿಂದ ಗೇರು ಹಣ್ಣಿನ ಸಮರ್ಪಕ ಬಳಕೆಯು ಮಹತ್ವದ್ದು ಎನ್ನಲಾಗಿದೆ. ಈ ಕುರಿತಂತೆ ದ. ಕ. ಜಿಲ್ಲೆಯ ಬೆಳೆಗಾರರನ್ನು ಸಂದರ್ಶಿಸಿದಾಗ ಕಂಡುಕೊಂಡ ವಿಚಾರವನ್ನು ಚಿತ್ರ ೪.೨೪ ರಲ್ಲಿ ದಾಖಲಿಸಲಾಗಿದೆ.




ಚಿತ್ರ ೪.೨೪ ಗೇರು ಹಣ್ಣಿನ ಆರ್ಥಿಕ ಬಳಕೆ ಕುರಿತ ವಕ್ತೃಗಳ ಅಭಿಪ್ರಾಯ





ಶೇ. ೭೭ ರಷ್ಟು ವಕ್ತೃಗಳು ಗೇರು ಹಣ್ಣಿನ ಸಮರ್ಪಕ ಬಳಕೆ ಮಾಡುತ್ತಿಲ್ಲವೆಂದು ತಿಳಿಸಿದರು. ಶೇ. ೨೩ ವಕ್ತೃಗಳು ಗೇರು ಹಣ್ಣಿನ ಬಳಕೆಮಾಡುತ್ತಿದ್ದಾರೆ. ಗೇರು ಹಣ್ಣಿನ ಮದ್ಯಸಾರ ಫೆನಿ, ಗೇರು ಹಣ್ಣಿನ ಪಾನೀಯ, ಜಾಮ್, ಉಪ್ಪಿನಕಾಯಿ ಇತ್ಯಾದಿ ತಿನಿಸುಗಳ ತಯಾರಿಕೆಗೆ ಬಳಕೆಯಾಗುತ್ತಿದೆ. ಗೇರು ಹಣ್ಣಿನ ಮದ್ಯಸಾರವನ್ನು ಅಧಿಕೃತವಾಗಿ ಸರಕಾರವೇ ತಯಾರಿಸಿದಲ್ಲಿ ಗೇರುಹಣ್ಣಿಗೂ ಸೂಕ್ತ ಬೆಲೆ ಸಿಗುತ್ತದೆ ಮತ್ತು ಗೇರು ಹಣ್ಣಿನ ವಿಲೇವಾರಿ ಸಮಸ್ಯೆಯೂ ಬಗೆ ಹರಿಯುತ್ತದೆ ಈ ನಿಟ್ಟಿನಲ್ಲಿ ಪ್ರಯತ್ನಗಳಾಗಬೇಕಾಗಿದೆ.

ಗೇರು ಹಣ್ಣಿನ ಸಮರ್ಪಕ ಬಳಕೆ ಇಲ್ಲದಿರಲು ಕಾರಣಗಳನ್ನು ಚಿತ್ರ ೪.೨೫ ರಲ್ಲಿ ಅದನ್ನು ದಾಖಲಿಸಲಾಗಿದೆ.



ಚಿತ್ರ ೪.೨೫ ಗೇರು ಹಣ್ಣಿನ ಆರ್ಥಿಕ ಬಳಕೆ ಇಲ್ಲದಿರಲು ಕಾರಣ

ಗೇರು ಹಣ್ಣಿನ ಬಳಕೆ ಇಲ್ಲ ಎಂಬುದಾಗಿ ಪ್ರತಿಕ್ರಿಯಿಸಿದ ಒಟ್ಟು ೮೦ ವಕ್ತೃಗಳಲ್ಲಿ ಶೇಕಡಾ ೨೩.೭೫ ರಷ್ಟು ಮಂದಿ ಹಣ್ಣಿನ ಬಳಕೆಯ ಬಗ್ಗೆ ಸೂಕ್ತ ಮಾಹಿತಿ ಇಲ್ಲ ಎಂದರೆ ಶೇಕಡಾ ೫೩.೭೫ ರಷ್ಟು ಮಂದಿ ಆಸಕ್ತಿ ಇಲ್ಲ ಎಂಬ ಅಭಿಪ್ರಾಯ ವ್ಯಕ್ತ ಪಡಿಸಿದರು. ಶೇಕಡಾ ೨೨.೫ ರಷ್ಟು ವಕ್ತೃಗಳು ಪರಿಣಿತರ ಮತ್ತು ಕಾರ್ಮಿಕರ ಸಮಸ್ಯೆಯ ಕಾರಣ ನೀಡಿರುತ್ತಾರೆ.

೪.೬ ಗೇರು ಬೆಳೆಗಾರರ ಸಮಸ್ಯೆಗಳು

- ದ.ಕ. ಜಿಲ್ಲೆಯ ಗೇರು ಬೆಳೆಗಾರರಲ್ಲಿ ಶೇ. ೪೭ ರಷ್ಟು ಮಂದಿ ಒಂದು ಎಕರೆಗಿಂತ ಕಡಿಮೆ ಗೇರು ಭೂಮಿ ಹೊಂದಿದವರಾಗಿದ್ದಾರೆ. ಹಾಗಾಗಿ ಗೇರು ಬೆಳೆ ಹೊರತು ಪಡಿಸಿ ಬೇರೆ ಯಾವುದೇ ಕೃಷಿ ಮಾಡಲು ಸಾಧ್ಯವಿಲ್ಲದ್ದಾಗಿದ್ದು ಗೇರು ಕೃಷಿ ಅನಿವಾರ್ಯವಾಗಿದೆಯೇ ಹೊರತು ಆಕರ್ಷಣೀಯವಾಗಿ ಉಳಿದುಕೊಂಡಿಲ್ಲ.
- ಬೆಳೆಗಾರರಲ್ಲಿ ಶೇ. ૩૫ ರಷ್ಟು ವಕ್ತೃಗಳು ಪಿತ್ರಾರ್ಜಿತ ಭೂಮಿಯನ್ನು ಹೊಂದಿರುತ್ತಾರೆ. ದ. ಕ. ಜಿಲ್ಲೆಯಲ್ಲಿ ಭೂ ಒಡೆತನ ಒಂದು ಸಾಮಾಜಿಕ ಪ್ರತಿಷ್ಠೆಯ ಕುರುಹು ಎನಿಸಿಕೊಂಡಿದ್ದು ಪಿತ್ರಾರ್ಜಿತ ಆಸ್ತಿ ಕುರಿತಾದ ಭಾವನಾತ್ಮಕ ಸಂಬಂಧದಿಂದಾಗಿ ಭೂಮಿಯನ್ನು ಉಳಿಸಿಕೊಳ್ಳಲು ಬೇಕಾಗಿ ಯಾವುದೋ ಒಂದು ಬೆಳೆ ಬೆಳೆದರಾಯಿತು ಎಂಬ ಧೋರಣೆಯನ್ನು ರೈತರು ಹೊಂದಿರುತ್ತಾರೆ. ಹಾಗಾಗಿ ಕಡಿಮೆ ಹಣ, ಶ್ರಮ ಸಾಕು. ಎಂದೆನಿಸುವ ಗೇರು ಕೃಷಿ ಒಂದು ವರದಾನವಾಗಿ ಬಿಟ್ಟಿದೆ.



ಭೂಮಿಯನ್ನು ಸ್ವಾಧೀನದಲ್ಲಿಟ್ಟುಕೊಳ್ಳಲು ಬೇಕಾಗಿ ಗೇರು ಗಿಡಗಳನ್ನು ನೆಡುವ ಭೂ ಮಾಲಿಕರು ಅದನ್ನು ಆರ್ಥಿಕವಾಗಿ ಲಾಭಾದಾಯಕವನ್ನಾಗಿಸುವ ಗೋಜಿಗೆ ಹೋಗುತ್ತಿಲ್ಲ. ರೈತರ ಅನಾಸಕ್ತಿಯಿಂದಾಗಿ ಇಳುವರಿ ಕಡಿಮೆಯಾಗುತ್ತಿದೆ.

- ಕಳೆದ ಮೂರು ದಶಕಗಳಿಂದ ಭತ್ತದ ಕೃಷಿ ಕಡಿಮೆಯಾಗುತ್ತಿದ್ದು ವಾಣಿಜ್ಯ ಬೆಳೆಯಾದ ಅಡಿಕೆ ಆ ಸ್ಥಾನವನ್ನು ಆಕ್ರಮಿಸಿಕೊಳ್ಳುತ್ತಿದೆ. ಅದರೊಂದಿಗೆ ಗೇರು ಗಿಡಗಳಿರುವ ಪ್ರದೇಶ ಕ್ರಮೇಣವಾಗಿ ಅಡಿಕೆ ಕೃಷಿಯ ಪಾಲಾಗುತ್ತಿದ್ದು ಗೇರು ಕೃಷಿ ಕಣ್ಮರೆಯಾಗುತ್ತಿದೆ.
- ದ.ಕ. ಜಿಲ್ಲೆಯಲ್ಲಿ ಶೇ. ೪೫ ರಷ್ಟು ಗೇರು ಕೃಷಿ ಭೂಮಿ ಹಳೆಯ ಗೇರು ಗಿಡಗಳನ್ನು ಹಾಗೂ ಬೀಜಾಂಕುರ ಸಸಿಗಳನ್ನು ಹೊಂದಿದೆ. ಅದರಲ್ಲೂ ಸರ್ಕಾರಿ ಸ್ವಾಮ್ಯದ ಗೇರು ತೋಟಗಳು ಪ್ರಾಯಸ್ಥ ತೋಟಗಳಾಗಿದ್ದು ಇದರಿಂದಾಗಿ ಗೇರು ಬೀಜದ ಇಳುವರಿ ಕಡಿಮೆಯಾಗಿದೆ.
- ಪ್ರಾರಂಭದ ವರ್ಷಗಳಲ್ಲಿ ಗೇರು ಸಸಿಗಳನ್ನು ಕಾಡು ಪ್ರಾಣಿಗಳಾದ ಮಂಗ, ಹೆಗ್ಗಣ, ಮುಳ್ಳು ಹಂದಿ ಇತ್ಯಾದಿಗಳಿಂದ ರಕ್ಷಿಸಿಕೊಳ್ಳುವುದು ದೊಡ್ಡ ಸಮಸ್ಯೆಯಾಗಿದೆ.
- ಸಾಮಾನ್ಯವಾಗಿ ದ. ಕ. ಜಿಲ್ಲೆಯಲ್ಲಿ ಗೇರು ಗಿಡಗಳು ಹೂ ಬಿಡುವ ಸಮಯದಲ್ಲಿ ಅವಧಿಗೆ ಮುನ್ನ ಬರುವ ಮುಂಗಾರು ಮಳೆ, ಮೋಡ ಕಟ್ಟುವುದು ಇತ್ಯಾದಿಗಳಿಂದ ಹೂವು ಉದುರಿ ಫಸಲು ನಷ್ಟವಾಗುತ್ತದೆ. ಗೇರು ಬೆಳೆಯು ಹವಮಾನದಿಂದಾಗಿ ತುಂಬಾ ಅನಿಶ್ಚಿತತೆಗೆ ಸಿಲುಕಿದೆ.
- ಇತ್ತೀಚೆಗಿನ ವರ್ಷಗಳಲ್ಲಿ ಕೂಲಿ ಕಾರ್ಮಿಕರ ಕೊರತೆ ಹೆಚ್ಚುತ್ತಿದ್ದು ಗೇರು ಬೀಜದ ಸಂಗ್ರಹಣೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಹಣ್ಣು ಬಲಿಯುವ ಮೊದಲೇ ಉದ್ದನೆಯ ಮರದ ಕೋಲಿನ ಸಹಾಯದಿಂದ ಹಣ್ಣನ್ನು ಬೀಳಿಸಿ ಗೇರು ಬೀಜ ಸಂಗ್ರಹಿಸುವುದರಿಂದ ಫಸಲು ನಷ್ಟವಾಗುತ್ತದೆ. ಮಾತ್ರವಲ್ಲ ಎಳೆಯ ಗೇರು ಬೀಜಗಳ ಗುಣಮಟ್ಟವೂ ಕುಸಿಯುತ್ತದೆ ಇದರಿಂದಾಗಿ ಉತ್ತಮ ಬೆಲೆ ದೊರಕುವುದಿಲ್ಲ.
- ಬಹುತೇಕ ರೈತರು ಗೇರು ಕೃಷಿಯನ್ನು ನಿರ್ಲಕ್ಷಿತ ಪ್ರದೇಶದಲ್ಲಿ ಯಾವುದೇ ಮುತುವರ್ಜಿ ವಹಿಸದೆ ಮಾಡುತ್ತಿರುವುದರಿಂದ ಉತ್ಪಾದಕತೆ ಕುಸಿಯುತ್ತಿದೆ.
- ಪುತ್ತೂರು ಬಂಟ್ವಾಳ ಹಾಗೂ ಅಲ್ಪ ಪ್ರಮಾಣದಲ್ಲಿ ಬೆಳ್ತಂಗಡಿಯನ್ನು ಹೊರತು ಪಡಿಸಿದರೆ ಆಧುನಿಕ ಗೇರು ಕೃಷಿ ಪದ್ಧತಿಯ ಮಾಹಿತಿ ಹೆಚ್ಚಿನ ರೈತರಿಗೆ ತಿಳಿದಿಲ್ಲ. ಪುತ್ತೂರಿನ ಗೇರು ಸಂಶೋಧನಾ ನಿರ್ದೇಶನಾಲಯದ ಸಂಶೋಧನೆಗಳು, ಆವಿಷ್ಕಾರಗಳು ಜಿಲ್ಲೆಯ ಎಲ್ಲಾ ಗೇರು ಕೃಷಿಯನ್ನು ತಲುಪುವಲ್ಲಿ ವಿಫಲಗೊಂಡಿವೆ. ವಿದ್ಯಾವಂತ ರೈತರು ಮಾತ್ರ ಆಸಕ್ತಿ ವಹಿಸಿ ಆಧುನಿಕ ಗೇರು ಕೃಷಿ ಅಳವಡಿಸಿದರೆ ಅನಕ್ಷರಸ್ಥ ರೈತರು ಹಳೇ ತೋಟಗಳನ್ನೇ ನೆಚ್ಚಿಕೊಂಡಿರುವುದರಿಂದ ಒಟ್ಟು ಇಳುವರಿ ಕುಸಿದಿದೆ.
- ರೈತರು ಬೆಳೆದ ಗೇರು ಬೀಜದ ಗುಣಮಟ್ಟವನ್ನು ನಿರ್ಧರಿಸುವ ಸೂಕ್ತ ಮಾಪಕಗಳು ಇಲ್ಲ. ಕೇವಲ ಕಣ್ಣೋಟದಿಂದ ಗೇರು ಬೀಜದ ಬೆಲೆ ನಿರ್ಧಾರವಾಗುತ್ತದೆ. ಇದರಿಂದಾಗಿ ರೈತರಿಗೆ ಸೂಕ್ತ ಬೆಲೆ ಸಿಗುತ್ತಿಲ್ಲ.
- ಗೇರು ಬೀಜವನ್ನು ಸಂಗ್ರಹಿಸಿದ ಒಂದೆರಡು ದಿನಗಳಲ್ಲೇ ಅದನ್ನು ಮಾರುವ ರೂಢಿ ಸರ್ವೇ ಸಾಮಾನ್ಯ ಕಾರಣ ಹೆಚ್ಚು ದಿನಗಳ ಕಾಲ ಇಟ್ಟರೆ ಗೇರು ಬೀಜ ತೂಕ ಕಳೆದು ಕೊಳ್ಳುತ್ತವೆ. ಎರಡನೆಯದಾಗಿ ಗೇರು ಬೀಜವನ್ನು ಹೆಚ್ಚು ದಿನ

ಕಾಯ್ದಿರಿಸುವ ವೈಜ್ಞಾನಿಕ ಪದ್ಧತಿಯೂ ಇಲ್ಲ. ಅಡಿಕೆಯ ರೀತಿ ದಾಸ್ತಾನು ಇಡುವ ವ್ಯವಸ್ಥೆ ಬಹುತೇಕ ರೈತರಲ್ಲಿ ಇಲ್ಲದಿರುವುದರಿಂದ ಒತ್ತಡದ ಮಾರಾಟ ಅನಿವಾರ್ಯ.

- ದೇಶೀ ಉತ್ಪಾದನೆ ಹಾಗೂ ಬೇಡಿಕೆಯ ನಡುವೆ ಅಗಾಧ ವ್ಯತ್ಯಾಸವಿರುವುದರಿಂದ ಆಮದು ಗೇರು ಅನಿವಾರ್ಯವೆನಿಸಿದೆ. ಆಮದು ಗೇರು ದೇಶೀ ಗೇರು ಬೀಜದೊಂದಿಗೆ ಸ್ಪರ್ಧಿಸುವ ಪರಿಣಾಮ ದೇಶೀ ಗೇರು ಬೀಜದ ಬೆಲೆ ವ್ಯತ್ಯಯ ಉಂಟಾಗುತ್ತದೆ. ಆಮದು ಗೇರು ಬೀಜ ನೇರವಾಗಿ ಸಂಸ್ಕರಣೆಗೆ ಲಭ್ಯವಾದುದರಿಂದ ಕಾರ್ಖಾನೆ ಮಾಲಿಕರು ಆಮದು ಗೇರು ಬೀಜಕ್ಕೆ ಆದ್ಯತೆ ನೀಡುತ್ತಾರೆ. ಅದರ ಬೆಲೆಯೂ ಕಡಿಮೆ ಇರುವುದರಿಂದ ದೇಶೀ ಗೇರು ಬೀಜಕ್ಕೆ ಬೇಡಿಕೆ ಇಲ್ಲವಾಗುತ್ತದೆ. ಗೇರು ಬೆಳೆಗಾರರ ಆದಾಯ ಕುಸಿಯುತ್ತದೆ.
- ದ. ಕ. ಜಿಲ್ಲೆಯ ಪುತ್ತೂರು ತಾಲೂಕಿನಲ್ಲಿರುವ ಗೇರು ಸಂಶೋಧನಾ ನಿರ್ದೇಶನಾಲಯದ ಸಂಶೋಧನೆಗಳ ಫಲಿತಗಳನ್ನು ಜಿಲ್ಲೆಯ ಎಲ್ಲಾ ಗೇರು ಕೃಷಿಕರು ಪಡೆದುಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಬಹುತೇಕ ಕೃಷಿಕರು ಇಂದಿಗೂ ಗೇರು ಕೃಷಿಯನ್ನು ಸಂಪ್ರಾದಾಯಿಕ ವಿಧಾನದಲ್ಲೇ ಬೆಳೆಯುತ್ತಿರುವುದರಿಂದ ಗೇರು ನಿರ್ದೇಶನಾಲಯದ ಪ್ರಭಾವಕ್ಕೆ ಒಳಗಾಗಿಲ್ಲ.
- ಗೇರು ಕೃಷಿಗೆ ಸಾಂಸ್ಥಿಕ ಮೂಲಗಳಿಂದ ಸಿಗುವ ಸಾಲ ಸೌಲಭ್ಯ ತೀರಾ ನಗಣ್ಯ. ಶೇ. ೪೧ ರಷ್ಟು ರೈತರು ಸ್ವಂತ ಬಂಡವಾಳ ತೊಡಗಿಸುತ್ತಾರೆ. ಸರ್ಕಾರದಿಂದ ಯಾವುದೇ ರೀತಿಯ ಸುಲಭ ಸಾಲ ಸೌಲಭ್ಯಗಳು ಇಲ್ಲ. ಇದರಿಂದಾಗಿ ಗೇರು ಕೃಷಿ ಅಭಿವೃದ್ಧಿ ಆಗುತ್ತಿಲ್ಲ.
- ಗೇರು ಒಂದು ಋತು ಸಂಬಂಧೀ ಬೆಳೆ. ಹಾಗಾಗಿ ಹವಾಮಾನದ ವ್ಯತ್ಯಯ ಉತ್ಪಾದನೆಯ ಏರಿಳಿತಗಳು, ಆಮದು ಗೇರಿನ ಪೂರೈಕೆ ಇತ್ಯಾದಿ ಕಾರಣಗಳಿಂದಾಗಿ ಗೇರು ಬೀಜಕ್ಕೆ ನಿರ್ದಿಷ್ಟವಾದ ಬೆಲೆ ಸಿಗುತ್ತಿಲ್ಲ. ಬೆಲೆಗಳ ಅನಿಶ್ಚಿತತೆಯಿಂದಾಗಿ ರೈತರು ಗೇರು ಬೆಳೆಯಲ್ಲಿ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ.
- ಗೇರು ಕಾರ್ಖಾನೆ ಹಾಗೂ ಗೇರು ಬೆಳೆಗಾರರ ನಡುವೆ ಬಹು ಸಂಖ್ಯೆಯಲ್ಲಿ ಮಧ್ಯವರ್ತಿಗಳು ಇರುವುದರಿಂದ ಗೇರು ಬೀಜದ ನಿಜವಾದ ಬೆಲೆ ರೈತರಿಗೆ ಸಿಗುತ್ತಿಲ್ಲ. ರೈತರು ಮಧ್ಯವರ್ತಿಗಳಿಂದ ತೂಕ ಅಳತೆಯಲ್ಲೂ ಮೋಸಕ್ಕೆ ಒಳಗಾಗುತ್ತಾರೆ.
- ದ.ಕ. ಜಿಲ್ಲೆಯ ಬಹುತೇಕ ಪ್ರದೇಶಗಳು ಗುಡ್ಡ ಕಾಡುಗಳಿಂದ ಕೂಡಿದ್ದು ಸರಿಯಾದ ಸಾರಿಗೆ ವ್ಯವಸ್ಥೆ ಇಲ್ಲ. ಸಂಪರ್ಕ ಸಾಧನಗಳ ಕೊರತೆಯಿಂದಾಗಿ ಬಹುತೇಕ ರೈತರು ತಮ್ಮ ಉತ್ಪನ್ನವನ್ನು ಮಧ್ಯವರ್ತಿಗಳಿಗೆ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡುತ್ತಾರೆ.
- ಗೇರು ಬೀಜದ ಉತ್ಪಾದನೆಗಿಂತ ೧೦ ಪಟ್ಟು ಜಾಸ್ತಿ ಉತ್ಪಾದಿಸಲ್ಪಡುವ ಗೇರು ಹಣ್ಣು ವ್ಯರ್ಥವಾಗಿ ಪೋಲಾಗುತ್ತಿರುವುದು ಗಂಭೀರವಾದ ಸಮಸ್ಯೆ. ಹೆಚ್ಚಿನ ಪೌಷ್ಟಿಕಾಂಶದಿಂದ ಕೂಡಿದ ಗೇರು ಹಣ್ಣಿನ ಆರ್ಥಿಕ ಬಳಕೆಯ ಕುರಿತಂತೆ ಸಾಕಷ್ಟು ಸಂಶೋಧನೆಗಳಾಗಿದ್ದರೂ ಅದರ ಫಲಶ್ರುತಿ ರೈತರನ್ನು ತಲುಪುತ್ತಿಲ್ಲ. ಮಾಹಿತಿಯ ಕೊರತೆ ಮತ್ತು ಕಾರ್ಮಿಕರ ಕೊರತೆಯಿಂದಾಗಿ ಅಮೂಲ್ಯವಾದ ಗೇರು ಹಣ್ಣು ವ್ಯರ್ಥವಾಗಿ ಎಸೆಯಲ್ಪಡುತ್ತಿದೆ.

- ದ. ಕ. ಜಿಲ್ಲೆಯಲ್ಲಿ ಗೇರು ಕೃಷಿ ಭೂಮಿ ಬಹುತೇಕ ರಬ್ಬರ್ ಕೃಷಿ ಪಾಲಾಗಿದೆ. ಸುಲಭವೂ ಸರಳವೂ ಹಾಗೂ ಲಾಭದಾಯಕವೂ ಆದ ರಬ್ಬರ್ ಗೇರು ಕೃಷಿಕರನ್ನು ಆಕರ್ಷಿಸುತ್ತಿದ್ದು ಗೇರು ಕೃಷಿ ಮಾಯವಾಗತೊಡಗಿದೆ. ಇದಲಿಂದಾಗಿ ಗೇರು ಬೆಳೆಯುವ ಪ್ರದೇಶದ ವಿಸ್ತೀರ್ಣ ಕಡಿಮೆಯಾಗುತ್ತಿದೆ ಮತ್ತು ಗೇರು ಉದ್ಯಮ ಸಂಕಷ್ಟಕ್ಕೀಡಾಗಿದೆ.

೪.೭. ರಬ್ಬರ್ ಬೆಳೆಯಿಂದ ಗೇರು ಬೆಳೆಗಾಗುವ ಸಮಸ್ಯೆ

ದ. ಕ. ಜಿಲ್ಲೆಯಲ್ಲಿ ಗೇರು ಬೆಳೆಯುವವರಲ್ಲಿ ಅನೇಕರು ರಬ್ಬಲನತ್ತ ಒಲವು ತೋಲಿಸುತ್ತಿರುವುದು ಬಹುದೊಡ್ಡ ಸಮಸ್ಯೆಯಾಗಿದೆ. ಗೇರಿಗಿಂತ ರಬ್ಬರ್ ಲಾಭದಾಯಕ ಎನ್ನುವುದು ಅವರ ಅಭಿಪ್ರಾಯ. ವಾಸ್ತವ ಸ್ಥಿತಿ ಹಾಗಿಲ್ಲ ಎನ್ನುವುದನ್ನು ಕೆಳಗಿನ ವಿಶ್ಲೇಷಣೆ ಸಾಬೀತು ಪಡಿಸುತ್ತದೆ.

ರಬ್ಬರ್ ೧ ಹೆಕ್ಟೇರಿಗೆ ೪೫೦ ಗಿಡಗಳು ನೆಡಬಹುದು. ತಲಾ ೧೦ ರಬ್ಬರ್ ಗಿಡಗಳಿಗೆ ೧ ಕೆ.ಜಿ. ಯಂತೆ ರಬ್ಬರ್ ಸಿಗುತ್ತದೆ. ೪೫೦ ಗಿಡಗಳಿಗೆ ೪೫ ಕೆ. ಜಿ. ರಬ್ಬರ್ ಸಿಗುತ್ತದೆ. ವರ್ಷದ ಎಲ್ಲಾ ದಿನಗಳಲ್ಲೂ ಮೂರ್ತೆ (Tapping) ಇರುವುದಿಲ್ಲ. ದಿನ ಬಿಟ್ಟು ದಿನದಂತೆ ಅಂದರೆ ಪ್ರತಿ ಎರಡು ದಿನಗಳಿಗೊಮ್ಮೆ ಟ್ಯಾಪಿಂಗ್ ಮಾಡುವುದು ಕ್ರಮ. ಹಾಗಾಗಿ ತಿಂಗಳಲ್ಲಿ ೧೫ ದಿನಗಳು ಅಂದರೆ ಆರು ತಿಂಗಳು ಮಾತ್ರ ಮೂರ್ತೆ ನಡೆಯುತ್ತದೆ. ಅದರಲ್ಲೂ ಫೆಬ್ರವರಿ, ಮಾರ್ಚ್ ತಿಂಗಳಲ್ಲಿ ರಬ್ಬರ್ ಗಿಡದ ಎಲೆ ಉದುರುವುದರಿಂದ ಇಳುವರಿ ತೀರಾ ಕಡಿಮೆ ಇರುತ್ತದೆ. ಬಹುತೇಕ ರೈತರು ಆ ಅವಧಿಯಲ್ಲಿ ಟ್ಯಾಪಿಂಗ್ ನಿಲ್ಲಿಸುತ್ತಾರೆ. ಈ ನಡುವೆ ಮೂರ್ತೆ ಮಾಡುವ ಕಾರ್ಮಿಕರ ಕೊರತೆ, ರಜಾ ದಿನಗಳು ಇತ್ಯಾದಿಯಾಗಿ ಇನ್ನಷ್ಟು ದಿನಗಳು ನಷ್ಟವಾಗುವ ಸಂಭವವೂ ಇದೆ. ಅಂದರೆ ಸರಿಯಾಗಿ ಟ್ಯಾಪಿಂಗ್ ಆಗುವುದು ವರ್ಷದಲ್ಲಿ ೧೨೦ ದಿನಗಳು. ಅಂದರೆ ೪ ತಿಂಗಳು ಮಾತ್ರ. ದಿನಕ್ಕೆ ೪೫ ಕೆ.ಜಿ. ರಬ್ಬರ್‌ನಂತೆ ೧೨೦ ದಿನಗಳಿಗೆ ೫೪೦೦ ಕೆ. ಜಿ. ರಬ್ಬರ್ ದೊರೆಯುತ್ತದೆ. ೧ ಕೆ. ಜಿ. ರಬ್ಬರಿನ ಬೆಲೆ ಸರಾಸರಿ ೧೪೦ ರೂ. ಗಳು ಎಂದಾದರೆ ಒಟ್ಟು ೭,೫೬,೦೦೦ ರೂ. ಗಳ ಆದಾಯ ಸಿಗುತ್ತದೆ.

ಒಂದು ಹೆಕ್ಟೇರು ರಬ್ಬರ್ ಕೃಷಿಗೆ ತಗಲುವ ಖರ್ಚು ಹೀಗಿದೆ. ಒಂದು ಮರಕ್ಕೆ ನಿರ್ವಹಣಾ ವೆಚ್ಚ ಸರಾಸರಿ ಒಂದು ವರ್ಷಕ್ಕೆ ೩೫೦ ರೂ.ಗಳು. ೪೫೦ ಮರಗಳಿಗೆ ರೂ. ೧,೫೭,೫೦೦ ಬೇಕಾಗುತ್ತದೆ. ಟ್ಯಾಪಿಂಗ್ ವೆಚ್ಚ ಒಂದು ಮರಕ್ಕೆ ಸರಾಸರಿ ರೂ. ೧.೫೦ ಎಂದು ಪರಿಗಣಿಸಿದರೆ ದಿನಕ್ಕೆ ೪೫೦ ಮರಗಳಿಗೆ ಪ್ರತೀ ದಿನ ರೂ. ೬೭೫ ಖರ್ಚಾಗುತ್ತದೆ. ೧೨೦ ದಿನಗಳಿಗೆ ರೂ. ೮೧೦೦೦ ಕೇವಲ ಮೂರ್ತೆ ವೆಚ್ಚ ಎಂದು ಪರಿಗಣಿಸಬಹುದು. ಒಟ್ಟು ವೆಚ್ಚ ರೂ೨,೩೮,೫೦೦ (೧೫೭೫೦೦+೮೧೦೦೦=೨೩೮೫೦೦) ಆಗುತ್ತದೆ.

೧ ಹೆಕ್ಟೇರ್ ರಬ್ಬರ್‌ನಿಂದ ವಾರ್ಷಿಕ ನಿವ್ವಳ ಆದಾಯ ರೂ. ೫,೧೭,೫೦೦ ಆಗಿರುತ್ತದೆ. ಆದರೆ ರಬ್ಬರ್ ನೆಟ್ಟು ಏಳು ವರ್ಷಗಳ ಬಳಿಕ ಈ ಆದಾಯ ಬರಲು ಪ್ರಾರಂಭವಾಗುವುದು. ಅಲ್ಲಿಯವರೆಗೆ ಯಾವುದೇ ರೀತಿಯ ಆದಾಯ ಇಲ್ಲ. ರಬ್ಬರ್ ಸಸಿಗಳಿಗೆ ಕನಿಷ್ಠ ರೂ. ೭೫ರಂತೆ ರೂ. ೩೩,೭೫೦ ರಷ್ಟು ಪ್ರಥಮ ವರ್ಷದಲ್ಲಿ ವ್ಯಯಿಸಬೇಕಾಗುತ್ತದೆ. ಇದರೊಂದಿಗೆ ವರ್ಷಕ್ಕೆ ಒಂದು ಮರಕ್ಕೆ ರೂ. ೩೫೦ ರಂತೆ ರೂ. ೧,೫೭,೫೦೦ ರಷ್ಟು ಆರು ವರ್ಷಗಳ ತನಕ ನಿರ್ವಹಣಾ ವೆಚ್ಚ ಎಂದು ಭರಿಸಬೇಕಾಗುತ್ತದೆ. ಅಂದರೆ ಆರು ವರ್ಷಗಳ ತನಕ ರೂ. ೯,೪೫,೦೦೦ ಹಾಗೂ ಗಿಡದ ವೆಚ್ಚ ರೂ. ೩೩,೭೫೦ ಒಟ್ಟು ರೂ.೯,೭೮,೭೫೦ರಷ್ಟು ಹಣವನ್ನು ಇಳುವರಿ ಪ್ರಾರಂಭವಾಗುವುದಕ್ಕಿಂತ ಮೊದಲೇ ಖರ್ಚು ಮಾಡಬೇಕಾಗುತ್ತದೆ. ಪ್ರಾರಂಭಿಕ ಬಂಡವಾಳಕ್ಕೂ ಅಂತಿಮ ಆದಾಯಕ್ಕೂ ನಡುವೆ ಏಳು ವರ್ಷಗಳ ಅಂತರವಿದೆ. ಇಷ್ಟಿದ್ದರೂ

ಏಳನೇ ವರ್ಷದಿಂದ ಬರಲು ಪ್ರಾರಂಭಿಸುವ ಆದಾಯದ ಮೊತ್ತ ಜಾಸ್ತಿ ಇರುವುದರಿಂದ ರಬ್ಬರ್ ಕೃಷಿ ಆಕರ್ಷಣೀಯ ಎನಿಸುವುದು ಸಹಜ.

ಗೇರು ಕೃಷಿಯಲ್ಲಿ ಒಂದು ಹೆಕ್ಟೇರಿನಲ್ಲಿ ೨೦೦ ಗಿಡಗಳನ್ನು ನೆಡಬಹುದು. ಒಂದು ಗಿಡದ ಬೆಲೆ ಸರಾಸರಿ ೧೫ ರೂ.ಗಳು ಮಾತ್ರ. ಅಂದರೆ ರೂ. ೩೦೦೦ ಗಿಡದ ವೆಚ್ಚ. ಗೇರು ಕೃಷಿಗೆ ವರ್ಷ ಪೂರಾ ನಿರ್ವಹಣಾ ವೆಚ್ಚ ಇರುವುದಿಲ್ಲ. ಕೂಲಿ ಕಾರ್ಮಿಕರ ಬಳಕೆ ತೀರಾ ಕಡಿಮೆ. ಕೊಯಿಲು ಮಾಡುವ ಮೂರು ತಿಂಗಳಲ್ಲಿ ಕಾರ್ಮಿಕರ ಅವಶ್ಯಕತೆಯಿದ್ದರೂ ಬಹುತೇಕವಾಗಿ ಮನೆಯ ಸದಸ್ಯರು, ಮಕ್ಕಳು, ಗೇರು ಬೀಜ ಹೆಕ್ಕುವ ಕೆಲಸ ಮಾಡುತ್ತಾರೆ. ಗಿಡಗಳಿಗೆ ಗೊಬ್ಬರ ಹಾಕುವುದು, ನೀರು ಹಾಯಿಸುವುದು, ಗೇರು ಬೀಜ ಸಂಗ್ರಹಿಸುವುದು ಇತ್ಯಾದಿ ಕೆಲಸಗಳಿಗೆ ಒಂದು ಹೆಕ್ಟೇರಿಗೆ ಸುಮಾರು ವಾರ್ಷಿಕ ರೂ. ೨೫,೦೦೦ ಖರ್ಚಾಗುತ್ತದೆ. ಒಂದು ಗಿಡಕ್ಕೆ ಸರಾಸರಿ ೮ ಕೆ. ಜಿ. ಗಳಷ್ಟು ಬೀಜ ದೊರೆಯುತ್ತದೆ. ಕೆ. ಜಿ. ಗೆ ರೂ. ೮೦ ರ ಪ್ರಕಾರ ಒಂದು ಹೆಕ್ಟೇರಿಗೆ ರೂ. ೧,೨೮,೦೦೦ ಆದಾಯ ಬರುತ್ತದೆ. ನಿವ್ವಳ ಆದಾಯ ರೂ. ೧೦೩೦೦೦ ಆಗಿರುತ್ತದೆ. ಇದು ಗೇರು ಗಿಡ ನೆಟ್ಟು ನಾಲ್ಕನೇ ವರ್ಷದಿಂದ ಪ್ರಾರಂಭವಾಗುತ್ತದೆ. ಮೊದಲ ಮೂರು ವರ್ಷದಲ್ಲಿ ವಿಶೇಷವಾದ ವೆಚ್ಚಗಳು ಇರುವುದಿಲ್ಲ. ಆದರೆ ಗೇರು ಕೃಷಿಯೊಂದಿಗೆ ಒಳ ಬೆಳೆಗಳನ್ನು ಬೆಳೆಯುವುದರಿಂದ ಪ್ರಥಮ ವರ್ಷದಿಂದಲೇ ಪೂರಕ ಆದಾಯವನ್ನು ಪಡೆಯಲು ಸಾಧ್ಯ.

ಕಡಿಮೆ ವೆಚ್ಚದಲ್ಲಿ ಅತಿ ಶೀಘ್ರದಲ್ಲಿ ವಾರ್ಷಿಕ ರೂ. ೧,೦೩,೦೦೦ ಆದಾಯ ಪಡೆಯಲು ಗೇರು ಕೃಷಿಯಿಂದ ಸಾಧ್ಯ. ಹಾಗಾಗಿ ಗೇರು ಕೃಷಿ ಸುಲಭ ಹಾಗೂ ಸರಳ ಕೃಷಿ ಎನ್ನಬಹುದು. ರಬ್ಬರ್ ಹಾಗೂ ಗೇರು ಕೃಷಿಯ ತುಲನಾತ್ಮಕ ಆಯವ್ಯಯ ಪಟ್ಟಿ ಈ ರೀತಿ ಇದೆ. (ಕೋಷ್ಟಕ ೪.೬)

ಕೋಷ್ಟಕ ೪.೬ ರಬ್ಬರ್ Vs ಗೇರು ಬೆಳೆ

ಬೆಳೆ	ಗಿಡಗಳು	ಉತ್ಪಾದನೆ (ಕೆ.ಜಿ.ಗಳಲ್ಲಿ)	ದರ(ರೂ.) (ಕೆ.ಜಿ. 1ಕ್ಕೆ)	ಆದಾಯ (ರೂ.)	ಒಟ್ಟು ನಿರ್ವಹಣಾ ವೆಚ್ಚ (ರೂ.)	ಕಟಾವು ವೆಚ್ಚ (ರೂ.)	ಒಟ್ಟು ವೆಚ್ಚ (ರೂ.)	ಲಾಭ (ರೂ.)	ಶೇ.
ಗೇರು	೨೦೦	೧೬೦೦	೮೦	೧,೨೮,೦೦೦	೨೨,೦೦೦	೩೦೦೦	೨೫,೦೦೦	೧,೦೩,೦೦೦	೪೧೨
ರಬ್ಬರ್	೪೫೦	೫೪೦೦	೧೪೦	೭,೫೦,೦೦೦	೧,೫೭,೫೦೦	೮೧,೦೦೦	೨,೩೮,೦೦೦	೫,೧೭,೫೦೦	೨೧೭

(ಗೇರು/ರಬ್ಬರ್ ಸಸಿಗಳ ಬೆಲೆಯನ್ನು ಸೇರಿಸಿಲ್ಲ. ಭೂಮಿಯ ವಿಸ್ತೀರ್ಣ ತಲಾ ೧ ಹೆಕ್ಟೇರು)

ರಬ್ಬರ್ ಬೆಳೆಯ ವೆಚ್ಚ ಮತ್ತು ಆದಾಯದ ಅನುಪಾತ ೧:೨. ಗೇರು ಬೆಳೆಯ ವೆಚ್ಚ ಮತ್ತು ಆದಾಯದ ಅನುಪಾತ ೧:೪. ಹಾಗಾಗಿ ರಬ್ಬರ್‌ಗಿಂತ ಗೇರು ಲಾಭದಾಯಕ ಬೆಳೆ ಎಂದು ಸ್ವವಿದಿತವಾಗುತ್ತದೆ. ರಬ್ಬರ್ ಕೃಷಿಗೆ ಬೇಕಾದ ಅಧಿಕ ವೆಚ್ಚವನ್ನು ಸಣ್ಣ ರೈತರು ಭರಿಸುವುದು ಕಷ್ಟ ಸಾಧ್ಯವಾದುದರಿಂದ ಗೇರು ಅವರಿಗೆ ಕೈಗೆಟುಕುವ ಬೆಳೆ ಎಂದೆನಿಸಿಕೊಳ್ಳುತ್ತದೆ. ಅದಕ್ಕೆಂದೇ ಗೇರು ಬೆಳೆ ಬಡವರ ಬೆಳೆಯೆಂದು ಪ್ರತೀತಿ ಪಡೆದಿದೆ. ಆದಾಗ್ಯೂ ರೈತರು ರಬ್ಬರ್‌ನ ಬಗ್ಗೆ ಒಲವು ತೋರಿಸುವುದು ಕಂಡು ಬರುತ್ತದೆ.

ರಬ್ಬರಿಗೆ ಹೆಚ್ಚಿನ ಸಹಾಯ ಧನ, ಪ್ರೋತ್ಸಾಹಧನ ಸಿಗುವ ಕಾರಣ ರೈತರು ಹೆಚ್ಚು ರಬ್ಬರ್ ಬೆಳೆಯುತ್ತಾರೆ. ಮೊದಲು ವರ್ಗ ಜಾಗದಲ್ಲಿ ಬೆಳೆದಾಗ ಮಾತ್ರ ಸಹಾಯ ಧನ ಸಿಗುತ್ತಿತ್ತು. ಈಗ ಕುಮ್ಕಿ ಜಮೀನಿನಲ್ಲಿ ಬೆಳೆದರೂ ಕೂಡಾ ಸಹಾಯ ಧನ ಸಿಗುತ್ತದೆ. ಅದಕ್ಕಾಗಿ ರೈತರು ಮೊದಲು ಕುಮ್ಕಿ ಜಮೀನಿನಲ್ಲಿ ಮಾತ್ರ ಗೇರು ಬೆಳೆಯುತ್ತಿದ್ದರು. ವರ್ಗ ಜಾಗದಲ್ಲಿ ರಬ್ಬರ್ ಬೆಳೆ ಬೆಳೆಯುತ್ತಿದ್ದರು. ಆದರೆ ಈಗ ಕುಮ್ಕಿ ಜಾಗದಲ್ಲಿ ಕೂಡಾ ರಬ್ಬರ್ ಬೆಳೆದರೆ ಸಹಾಯಧನ ಲಭ್ಯವಿದೆ. ಹಾಗಾಗಿ ರೈತರು ಕುಮ್ಕಿ

ಜಮೀನಿನ ಗೇರು ತೆಗೆದು ರಬ್ಬರ್ ಬೆಳೆಯುತ್ತಿದ್ದಾರೆ. ೨೦೦೦-೦೧ ರಿಂದ ೨೦೦೯-೧೦ ರವರೆಗಿನ ವಿವಿಧ ವಾಣಿಜ್ಯ ಬೆಳೆಗಳ ವಿಸ್ತೀರ್ಣ ಗಮನಿಸಿದರೆ ಅಡಿಕೆ ಬೆಳೆ ವಿಸ್ತೀರ್ಣ ಶೇ. ೧೭ ರಷ್ಟು ಹೆಚ್ಚಾಗಿದೆ. ತೆಂಗು ಬೆಳೆ ವಿಸ್ತೀರ್ಣ ಶೇ. ೧೫ ರಷ್ಟು ಹೆಚ್ಚಾಗಿದೆ. ಗೇರು ಬೆಳೆ ವಿಸ್ತೀರ್ಣ ಶೇ. ೧೩ ರಷ್ಟು ಹೆಚ್ಚಾಗಿದೆ. ಆದರೆ ರಬ್ಬರ್ ಬೆಳೆ ವಿಸ್ತೀರ್ಣ ಶೇ. ೧ ರಷ್ಟು ಕಡಿಮೆಯಾಗಿದೆ. ಗೇರಿಗೆ ಸರಕಾರದಿಂದ ವಿಶೇಷ ಸವಲತ್ತುಗಳು ಸಿಗುತ್ತಿಲ್ಲ. ಕಾರಣ ಗೇರು ಬೆಳೆ ಒಂದು ತೋಟಗಾರಿಕಾ ಬೆಳೆ ಎಂದು ಪರಿಗಣಿಸಲ್ಪಟ್ಟಿದ್ದು ಕೃಷಿ ಸಚಿವಾಲಯದ ಆಶ್ರಯದಲ್ಲಿ (Ministry of Agriculture) ಕಾರ್ಯಾಚರಿಸುತ್ತದೆ. ಇಲ್ಲಿ ಲಭ್ಯವಿರುವ ಹಣಕಾಸು ತೀರಾ ಕಡಿಮೆ. ತೋಟಗಾರಿಕಾ ಮಿಷನ್‌ನ ಅಡಿಯಲ್ಲಿ ಕೇಂದ್ರ ಸರಕಾರದಿಂದ ಶೇ. ೭೫ ರಷ್ಟು ನೆರವು ಸಿಕ್ಕರೂ ರಾಜ್ಯ ಸರಕಾರ ಶೇ. ೨೫ ರಷ್ಟು ಅನುದಾನ ನೀಡದೆ ಇರುವುದರಿಂದ ಯಾವುದೇ ನೆರವು ಸಿಗುತ್ತಿಲ್ಲ. ಇನ್ನು ಗೇರು ಕೃಷಿಗೆ ಸಂಬಂಧಿಸಿದಂತೆ ಭಾರತೀಯ ಸಂಶೋಧನಾ ಪರಿಷತ್ತು ಕಾರ್ಯಾಚರಿಸುತ್ತಿದ್ದು ಇವು ಗೇರು ಅಭಿವೃದ್ಧಿಯ ಬಗ್ಗೆ ಗಮನ ನೀಡುತ್ತಿಲ್ಲ. ರೈತರಿಗೆ ಬೇಕಾದ ಮಾರ್ಗದರ್ಶನ ಸಲಹೆ ನೀಡುತ್ತಿದೆಯೇ ಹೊರತು ಅಭಿವೃದ್ಧಿಗಾಗಿ ಧನ ಸಹಾಯ ಮಾಡುತ್ತಿಲ್ಲ. ಆದರೆ ರಬ್ಬರ್ ಬೆಳೆ ವಾಣಿಜ್ಯ ಸಚಿವಾಲಯ (Ministry of Commerce) ದ ಆಶ್ರಯದಲ್ಲಿ ಬರುತ್ತಿದ್ದು ಇಲ್ಲಿ ಸಾಕಷ್ಟು ಹಣಕಾಸು ನಿಧಿ ಇರುವುದರಿಂದ ಸಂಶೋಧನೆಯೊಂದಿಗೆ ಅಭಿವೃದ್ಧಿ ಕಾರ್ಯ ನಡೆಯುತ್ತಿದೆ. ರಬ್ಬರ್ ಬೋರ್ಡ್ ಅಸ್ತಿತ್ವದಲ್ಲಿದ್ದು ಅಭಿವೃದ್ಧಿ ಕಾರ್ಯ ಸ್ವತಃ ಕೈಗೆತ್ತಿಕೊಂಡು ರಬ್ಬರ್ ಕೃಷಿ ವಿಸ್ತರಣೆ ಮಾಡುತ್ತಿದೆ. ಆದರೆ ಈ ರೀತಿ ಕ್ಯಾಶ್ಯೂ ಬೋರ್ಡ್ (Cashew Board) ಸ್ಥಾಪನೆಯಾಗಿಲ್ಲ. ಈ ಬಗ್ಗೆ ತೀವ್ರ ಪ್ರಯತ್ನಗಳ ಹೊರತಾಗಿಯೂ ಕ್ಯಾಶ್ಯೂ ಬೋರ್ಡ್ ಅಸ್ತಿತ್ವಕ್ಕೆ ಬಂದಿಲ್ಲ, ಕ್ಯಾಶ್ಯೂ ಬೋರ್ಡ್ ರಚನೆಗೊಂಡರೆ ಅದು ರಬ್ಬರ್ ಬೋರ್ಡ್, ಕಾಫಿ ಬೋರ್ಡ್‌ನಂತೆ ವಾಣಿಜ್ಯ ಸಚಿವಾಲಯದ ಆಶ್ರಯದಲ್ಲಿ ಕಾರ್ಯಾಚರಿಸಲು ಸಾಧ್ಯ ಹಾಗೂ ಹೆಚ್ಚಿನ ಹಣಕಾಸಿನ ನೆರವು ಹರಿದು ಬರಲು ಸಾಧ್ಯ.

೪.೮ ಎಂಡೋ ಸಲ್ಫಾನ್ ಸಮಸ್ಯೆ

ದ. ಕ. ಜಿಲ್ಲೆಯಲ್ಲಿ ಗೇರು ಕೃಷಿಯೊಂದಿಗೆ ಕೇಳಿಬರುತ್ತಿರುವ ಭಯಾನಕ ಸಮಸ್ಯೆ ಎಂಡೋ ಸಲ್ಫಾನಿನದು. ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಬೆಳ್ತಂಗಡಿ ತಾಲೂಕಿನಲ್ಲಿ ಎಂಡೋ ವಿರೋಧಿ ಹೋರಾಟ ಸಮಿತಿ ರಚನಗೊಂಡಿದೆ. ಅದು ಸಂತ್ರಸ್ತರಿಗೆ ಪರಿಹಾರ ವೈದ್ಯಕೀಯ ನೆರವು ಮತ್ತು ಇತರ ಸೌಲಭ್ಯ, ಪುನರ್ ವಸತಿ ಇತ್ಯಾದಿ ಸವಲತ್ತುಗಳಿಗಾಗಿ ವ್ಯಾಪಕವಾದ ಜನಾಂದೋಲನ ನಡೆಸುತ್ತಿದೆ. ಈ ಬಗೆಗಿನ ಮಾಹಿತಿಗಾಗಿ ಹೋರಾಟ ಸಮಿತಿಯ ಪದಾಧಿಕಾರಿಗಳನ್ನು ಭೇಟಿ ಮಾಡಲಾಯಿತು. ಹೋರಾಟ ಸಮಿತಿಯ ಅಧ್ಯಕ್ಷರಾದ ಶ್ರೀಧರ ಗೌಡ ಹಾಗೂ ಮತ್ತೋರ್ವ ಪ್ರಮುಖ ಹೋರಾಟಗಾರರಾದ ಕುಶಾಲಪ್ಪ ಗೌಡರನ್ನು ಭೇಟಿ ಮಾಡಿ ಈ ಬಗೆಗಿನ ಮಾಹಿತಿ ಸಂಗ್ರಹಿಸಲಾಗಿದೆ. (ಅನುಬಂಧ ಛಾಯಾಚಿತ್ರ ಸಂಖ್ಯೆ ೭)

ದ. ಕ. ಜಿಲ್ಲೆಯ ೩೩೧ ಗ್ರಾಮಗಳಲ್ಲಿ ಸುಮಾರು ೯೨ ಗ್ರಾಮಗಳಲ್ಲಿ ಎಂಡೋ ಸಲ್ಫಾನ್ ಪೀಡಿತರಿದ್ದಾರೆ. ಪುತ್ತೂರು ಹಾಗೂ ಬೆಳ್ತಂಗಡಿ ತಾಲ್ಲೂಕಿನ ಕೊಕ್ಕಡ, ಪಟ್ರಮೆ, ಬೆಳಾಲು, ಪದವು, ನಿಡ್ಲೆ, ಕೌಕ್ರಾಡಿ, ಕಡಬ, ಕುಂತೂರು ಗ್ರಾಮಗಳಲ್ಲಿ ಎಂಡೋ ಪೀಡಿತರಿದ್ದಾರೆ. ಅದರಲ್ಲೂ ಬೆಳ್ತಂಗಡಿ ತಾಲ್ಲೂಕಿನ ಕೊಕ್ಕಡ, ಪಟ್ರಮೆ ಮತ್ತು ನಿಡ್ಲೆ ಗ್ರಾಮಗಳಲ್ಲಿ ಅತಿ ಹೆಚ್ಚಿನ ಸಂತ್ರಸ್ತರನ್ನು ಕಾಣಬಹುದು. ೨೦೧೧ ರಲ್ಲಿ ಹೋರಾಟ ಸಮಿತಿಯ ಪ್ರಯತ್ನದ ಫಲವಾಗಿ ೨೧೧ ಕುಟುಂಬಗಳ ೩೩೨ ಜನ ಸಂತ್ರಸ್ತರಿಗೆ ಪರಿಹಾರ ದೊರೆತಿದ್ದು ಇನ್ನೂ ಸಾಕಷ್ಟು ಜನ ಸಂತ್ರಸ್ತರು ಪರಿಹಾರದ ಆಕಾಂಕ್ಷಿಗಳಾಗಿದ್ದಾರೆ.

ಸರಿಯಾದ ಶಿಕ್ಷಣ ಹಾಗೂ ಸೂಕ್ತ ಮಾಹಿತಿಯ ಕೊರತೆ ಎಂತಹ ದುರಂತಕ್ಕೆ ಎಡೆಮಾಡಿಕೊಡಬಲ್ಲುದು ಎಂಬುದಕ್ಕೆ ಈ ಎಂಡೋ ಸಲ್ಫಾನ್ ದುರಂತವೇ ಸಾಕ್ಷಿ. ಜನಗಳ ಅಜ್ಞಾನ ಮತ್ತು ಸರಕಾರದ ನಿರ್ಲಕ್ಷ್ಯವೇ ಈ ಸ್ಥಿತಿಗೆ ಕಾರಣ. ಎಂಡೋ

ಸಲ್ಫಾನ್ ಕ್ರಿಮಿ ನಾಶಕದ ಭೀಕರತೆ ಬಗ್ಗೆ ಜನರಿಗೆ ೧೯೮೨ ನೇ ಇಸವಿಯಲ್ಲೇ ಗೊತ್ತಿರುತ್ತಿದ್ದರೆ ಇಂದು ಇಷ್ಟೊಂದು ಜನ ಅದಕ್ಕೆ ಬಲಿಯಾಗುತ್ತಿರಲಿಲ್ಲ. ೧೯೮೨ ನೇ ಇಸವಿ ಡಿಸೆಂಬರ್ ೨೨ ರಲ್ಲೇ ಕರ್ನಾಟಕ ಗೇರು ಅಭಿವೃದ್ಧಿ ನಿಗಮ ತಾನು ಪ್ರಕಟಿಸಿದ ಪತ್ರಿಕಾ ಪ್ರಕಟಣೆಯಲ್ಲಿ ಈ ಕೀಟನಾಶಕ ಅತ್ಯಂತ ಅಪಾಯಕಾರಿ ವಿಷವಾಗಿದ್ದು ಜನರು ತಮ್ಮ ತೆರೆದ ಬಾವಿಯನ್ನು ಮುಚ್ಚಬೇಕು, ಮತ್ತು ತಮ್ಮ ಸಾಕು ಪ್ರಾಣಿಗಳನ್ನು ಸಿಂಪಡಣೆಯ ಹತ್ತು ದಿನಗಳವರೆಗೆ ಹೊರ ಬಿಡಬಾರದು ಎಂದು ಪ್ರಕಟಿಸಿತ್ತು. ೧೯೯೪ ರಲ್ಲಿ ಭಾರತ ಸರಕಾರ ಎಲ್ಲಾ ರೀತಿಯ ಕೀಟ ನಾಶಕಗಳ ವೈಮಾನಿಕ ಸಿಂಪಡಣೆಯನ್ನು ನಿಷೇಧಿಸಿತ್ತು. ಆದರೂ ನಿಗಮ ೧೯೯೪ ರಿಂದ ೨೦೦೦ದ ತನಕ ವೈಮಾನಿಕ ಸಿಂಪಡಣೆಯನ್ನು ನಡೆಸಿರುವುದು ಕಾನೂನು ಬಾಹಿರವಾಗಿದೆ. ೧೯೮೦ ರಿಂದ ೨೦೦೦ ಇಸವಿಯ ತನಕ ದ.ಕ. ಜಿಲ್ಲೆಯ ೯೨ ಗ್ರಾಮಗಳಲ್ಲಿ ೬೦,೦೦೦ ಲೀಟರ್ ಎಂಡೋ ಸಲ್ಫಾನ್ ಮಳೆ ಸುರಿಸಲಾಗಿದೆ. ಆಗ ಯಾವುದೇ ವಿರೋಧ ಇಲ್ಲದೇ ಇದ್ದುದರ ಪರಿಣಾಮ ಇಂದು ಈ ಭಾಗದ ಜನ ಶಾಶ್ವತ ಬಂಜೆತನ, ಅಂಗವಿಕಲತೆ, ಬುದ್ಧಿ ಮಾಂದ್ಯತೆ ಕುರುಡುತನ ಇತ್ಯಾದಿ ಹಲವು ವೈಕಲ್ಯಗಳಿಗೆ ತುತ್ತಾಗಿದ್ದಾರೆ. ಎಂಡೋ ವಿಷ ವಂಶ ವಾಹಿನಿಗಳ ಮೇಲೂ ಪರಿಣಾಮ ಬೀರಿದ ಕಾರಣ ಮುಂದೆ ಹುಟ್ಟಲಿರುವ ಮಕ್ಕಳು ಅಂಗವಿಕಲತೆಗೆ ಒಳಗಾಗುವ ಸಾಧ್ಯತೆ ಇದೆ ಎಂದು ವೈದ್ಯಕೀಯ ವರದಿಗಳು ತಿಳಿಸುತ್ತವೆ. ಹೀಗಾಗಿ ಆ ಭಾಗದ ಯುವಕ ಯುವತಿಯರು ವಿವಾಹದ ಪ್ರಸ್ತಾವವನ್ನೇ ಕೈ ಬಿಡಬೇಕಾಗಿದೆ.

೨೦೧೧ ನಂತರ ಸರಕಾರದ ಕಡೆಯಿಂದ ಒಂದಷ್ಟು ಪರಿಹಾರ ದೊರೆತಿದೆ. ಆದರೆ ಅದು ಇನ್ನಷ್ಟು ಹೆಚ್ಚು ದೊರೆಯಬೇಕಾಗಿದೆ. ಸರಕಾರ ಈಗಾಗಲೇ ಸಂತ್ರಸ್ತರಿಗಾಗಿ ಡೇ- ಕೇರ್ ಸೆಂಟರ್ ಗಳನ್ನು ಪ್ರಾರಂಭಿಸಿದೆ. ಬೆಳ್ತಂಗಡಿ ತಾಲೂಕಿನ ಕೊಕ್ಕಡ ಹಾಗೂ ಪುತ್ತೂರು ತಾಲೂಕಿನ ಆಲಂಗಾರು ಗ್ರಾಮಗಳಲ್ಲಿ ಮಾತ್ರ ಎರಡು ಕೇಂದ್ರ ಪ್ರಾರಂಭವಾಗಿದೆ. ಸಮಸ್ಯೆಯ ವ್ಯಾಪಕತೆಗೆ ಹೋಲಿಸಿದರೆ ಇದು ಎಲ್ಲಿಗೂ ಸಾಕಾಗುತ್ತಿಲ್ಲ. ಈ ಬಗ್ಗೆ ಹೋರಾಟ ಸಮಿತಿ ಪ್ರಯತ್ನ ಮುಂದುವರಿಸಿದೆ. ಆದರೆ ದೈಹಿಕ ಅಸಮರ್ಥತೆ, ಹಣಕಾಸಿನ ಮುಗ್ಗಟ್ಟು, ಅಧಿಕಾರಿ ವರ್ಗದ ಅಸಹಕಾರ, ಸರಕಾರದ ನಿಧಾನ ಧೋರಣೆ ಈ ಎಲ್ಲಾ ಕಾರಣದಿಂದಾಗಿ ಹೋರಾಟಕ್ಕೆ ಹಿನ್ನಡೆಯಾಗುತ್ತಿದೆ. ಹೋರಾಟ ಸಮಿತಿಯು "ಎಂಡೋ.... ನರಕದರ್ಶನ" ಎಂಬ ಸಿಡಿಯನ್ನು ನಿರ್ಮಿಸಿದೆ. ಇದು ಎಂಡೋ ಸಂತ್ರಸ್ತರ ದಯನೀಯ ಸ್ಥಿತಿಯ ಚಿತ್ರಣ ನೀಡುತ್ತದೆ. ಗೇರು ಉದ್ಯಮದ ಬೆಳವಣಿಗೆಯಲ್ಲಿ ಎಂಡೋ ಸಲ್ಫಾನ್ ಪೀಡಿತರ ಸಮಸ್ಯೆ ಒಂದು ಋಣಾತ್ಮಕ ಬೆಳವಣಿಗೆಯಾಗಿದ್ದು ಈ ಬಗ್ಗೆ ಹೆಚ್ಚು ಗಮನ ಹರಿಸಬೇಕಾದ ಅಗತ್ಯವಿದೆ. ಆರ್ಥಿಕ ಲಾಭಗಳೊಂದಿಗೆ ಸಾಮಾಜಿಕ ಸಮಸ್ಯೆಗಳನ್ನು ಹುಟ್ಟು ಹಾಕಿದ ಗೇರು ಉದ್ಯಮ ತನ್ನ ಮುಂದಿರುವ ಸವಾಲುಗಳಿಗೆ ಉತ್ತರಿಸಬೇಕಾದ ಅನಿವಾರ್ಯತೆ ಇದೆ.

ಎಂಡೋಸಲ್ಫಾನ್ ಬಳಕೆಯ ಕುರಿತಂತೆ ಗೇರು ಕೃಷಿ ನಿರ್ದೇಶನಾಲಯದ ಕೃಷಿ ತಜ್ಞರಿಂದ ಅಭಿಪ್ರಾಯವನ್ನು ಸಂಗ್ರಹಿಸಲಾಗಿದೆ. ಗೇರು ಬೆಳೆಗೆ ಬರುವ ಪ್ರಮುಖ ಸಮಸ್ಯೆ ಚಹಾ ಸೊಳ್ಳೆ ಹಾವಳಿ. ಇದರಿಂದ ಶೇಕಡಾ ನಲವತ್ತರಷ್ಟು ಉತ್ಪಾದನೆ ನಷ್ಟವಾಗುತ್ತದೆ. ಆದ್ದರಿಂದ ಕೃಷಿ ವಿಜ್ಞಾನಿಗಳು ಕೀಟ ನಾಶಕವನ್ನು ಸಿಂಪಡಿಸಲು ಸಲಹೆ ನೀಡಲೇ ಬೇಕು. ಎಂಡೋ ಸಲ್ಫಾನ್ ಸಿಂಪಡಿಸುವುದರಿಂದ ಸಮಸ್ಯೆ ಉಂಟಾಗುತ್ತದೆ ಎಂಬುದು ಇನ್ನೂ ಸಾಬೀತಾಗಿಲ್ಲ. ಕೇರಳದಲ್ಲಿ ಕಾರ್ಮಿಕ ಸಮಸ್ಯೆ ಇದ್ದುದರಿಂದ ಹೆಲಿಕಾಪ್ಟರ್‌ಗಳ ಮೂಲಕ ಗೇರು ಗಿಡಗಳ ಮೇಲೆ ಎಂಡೋ ಸಲ್ಫಾನ್ ಸಿಂಪಡಿಸುವ ಪದ್ಧತಿ ಪ್ರಾರಂಭವಾಯಿತು. ಕ್ರಮೇಣ ಅದು ಕರ್ನಾಟಕದಲ್ಲೂ ಪ್ರಾರಂಭವಾಯಿತು. ಈಗ ಜನರಿಗೆ ಏನು ಹಾನಿಯಾಗಿದೆ ಅದು ಎಂಡೋ ಸಲ್ಫಾನ್‌ನ ಬಳಕೆಯಿಂದ ಎನ್ನುವುದಕ್ಕಿಂತ ಅದನ್ನು ಸಿಂಪಡಿಸಿದ ತಪ್ಪು ವಿಧಾನದಿಂದ ಎನ್ನುವುದು ಹೆಚ್ಚು ಸಮಂಜಸ.

ವೈಮಾನಿಕ ಸಿಂಪಡಣೆಯಿಂದ ಜನರು ಕುಡಿಯುವ ನೀರಿನ ಮೂಲಗಳಾದ ಬಾವಿ, ಕೆರೆ, ನದಿಗಳು ನೇರವಾಗಿ ಕಲುಷಿತಗೊಂಡು ಕೀಟ ನಾಶಕ ಜನರ ದೇಹವನ್ನು ನೇರವಾಗಿ ಸೇರಿ ಹಾನಿ ಉಂಟಾಗಿದೆ. ಈಗ ರೈತರು ಬಳಸುವ ಯಾವುದೇ ಕೀಟನಾಶಕವನ್ನು ಆ ರೀತಿ ಹೆಲಿಕಾಪ್ಟರ್ ಮೂಲಕ ಸಿಂಪಡಿಸಿದ್ದೇ ಆದರೆ ಅದೇ ರೀತಿ ಪರಿಣಾಮ ಉಂಟಾಗುತ್ತದೆ. ಇಷ್ಟಕ್ಕೂ ಎಂಡೋ ಸಲ್ಫಾನ್‌ನ ಪರಿಣಾಮ ಗೇರು ಹಣ್ಣಿನ ಮೇಲೆ ೧೫ ದಿನಗಳಿಗಿಂತ ಹೆಚ್ಚು ಇರುವುದಿಲ್ಲ ಎನ್ನುವುದು ಗೇರು ಸಂಶೋಧನಾ ನಿರ್ದೇಶನಾಲಯದ ತಜ್ಞರ ಅಭಿಪ್ರಾಯ. ಈಗ ಎಂಡೋ ಸಲ್ಫಾನ್ ಬದಲಿಗೆ ಗೇರು ಬೆಳೆಗಾರರಿಗೆ ಸಲಹೆ ನೀಡಿರುವ ಮೋನೋಕ್ರೋಟೊಪಾಸ್ ಹಾಗೂ ಕರಾಟೆ ಎಂಬ ಕೀಟ ನಾಶಕಗಳು ಎಂಡೋ ಸಲ್ಫಾನ್‌ಗಿಂತ ಹತ್ತು ಪಟ್ಟು ಅಪಾಯಕಾರಿ ಹಾಗೂ ಐದು ಪಟ್ಟು ದುಬಾರಿ ವೆಚ್ಚದ್ದು. ಆದರೂ ಬದಲಿ ಕೀಟನಾಶಕವಾಗಿ ಅದನ್ನು ಬಳಸಲು ಸಲಹೆ ಮಾಡಬೇಕಾಗಿದೆ. ಎಂಡೋ ಸಲ್ಫಾನ್ ಸಮಸ್ಯೆಗಳ ಬಗ್ಗೆ ತಜ್ಞರೊಂದಿಗೆ ಸಂವಾದ ಏರ್ಪಡಿಸಿ ಸಮಸ್ಯೆಗಳ ನೈಜ ಕಾರಣವನ್ನು ಕಂಡು ಹಿಡಿಯುವ ಪ್ರಯತ್ನ ಆಗುತ್ತಿಲ್ಲ. ಕೃಷಿ ತಜ್ಞರು ಅಸಾಹಯಕರಾಗಿದ್ದಾರೆ. ಎಂಡೋ ಸಲ್ಫಾನ್ ಸಮಸ್ಯೆ ರಾಜಕೀಯ ತಿರುವು ಪಡೆಯುತ್ತಿದೆ. ಕಾರಣಗಳು ಏನೇ ಇರಲಿ, ಎಂಡೋ ಸಲ್ಫಾನ್ ಸಂತ್ರಸ್ತರು ಎನಿಸಿಕೊಂಡಿರುವವರಿಗೆ ಪರಿಹಾರ ದೊರೆಯುವುದು ಒಳ್ಳೆಯ ವಿಚಾರ ಎಂದು ತಜ್ಞರು ಅಭಿಪ್ರಾಯ ಕೊಡುತ್ತಿದ್ದಾರೆ.

೪.೯ ಸಾಂಸ್ಥಿಕ ನೆರವು ಮತ್ತು ಸಮಸ್ಯೆಗಳು

ದೇಶದ ಗೇರು ಕೃಷಿ ಅಭಿವೃದ್ಧಿಯಲ್ಲಿ ದ.ಕ. ಜಿಲ್ಲೆಯ ಪುತ್ತೂರು ತಾಲೂಕಿನಲ್ಲಿರುವ ಗೇರು ಸಂಶೋಧನಾ ನಿರ್ದೇಶನಾಲಯ ಅತ್ಯಂತ ಮಹತ್ತರ ಪಾತ್ರವನ್ನು ವಹಿಸುತ್ತಿದೆ. ಭಾರತೀಯ ಕೃಷಿ ಅನುಸಂಧಾನ ಪರಿಷತ್ (Indian Council of Agricultural Research) ೧೯೭೧ ರಲ್ಲಿ ಅಖಿಲ ಭಾರತೀಯ ಸಾಂಬಾರು ಸಮನ್ವಯ ಮತ್ತು ಗೇರು ಬೀಜ ಸುಧಾರಣಾ ಯೋಜನೆ ಎಂಬ ಎರಡು ಜಂಟಿ ಯೋಜನೆಗಳನ್ನು ಪ್ರಾರಂಭಿಸಿ ತದ ನಂತರ ತಜ್ಞರ ಸಲಹೆಯ ಮೇರೆಗೆ ಈ ಎರಡು ಯೋಜನೆಗಳನ್ನು ವಿಭಜಿಸಿ ಅಖಿಲ ಭಾರತೀಯ ಸಾಂಬಾರು ಸಮನ್ವಯ ಯೋಜನೆಯ ಕೇಂದ್ರವನ್ನು ಕೇರಳದ ಕಲ್ಲಿಕೋಟೆಯಲ್ಲೂ, ಗೇರು ಅಭಿವೃದ್ಧಿ ಯೋಜನೆಯನ್ನು ದ. ಕ. ಜಿಲ್ಲೆಯ ಪುತ್ತೂರು ತಾಲೂಕಿನಲ್ಲೂ ಪ್ರಾರಂಭಿಸಲಾಯಿತು. ಆ ಪ್ರಕಾರವಾಗಿ ಜೂನ್ ೧೮, ೧೯೮೬ ರಲ್ಲಿ ಪುತ್ತೂರಿನ ಸಮೀಪದ ಕೆಮ್ಮಿಂಜೆ ಎಂಬಲ್ಲಿ ರಾಷ್ಟ್ರೀಯ ಗೇರು ಸಂಶೋಧನಾ ಕೇಂದ್ರ ಪ್ರಾರಂಭವಾಯಿತು. ಇದು ಏಷ್ಯಾ ಖಂಡದ ಪ್ರಥಮ ಹಾಗೂ ಏಕೈಕ ಗೇರು ಸಂಶೋಧನಾ ಕೇಂದ್ರವಾಗಿ ಕಾರ್ಯ ನಿರ್ವಹಿಸುತ್ತಿದ್ದು, ದಕ್ಷಿಣ ಅಮೇರಿಕಾದ ಬ್ರೆಜಿಲ್‌ನಲ್ಲಿ ಇಂತಹುದೆ ಗೇರು ಸಂಶೋಧನಾ ಕೇಂದ್ರ ಸ್ಥಾಪನೆಗೊಂಡಿದೆ. ೨೦೦೯ ರಲ್ಲಿ ಪುತ್ತೂರಿನ ಕೇಂದ್ರವನ್ನು ಮೇಲ್ದರ್ಜೆಗೆ ಏರಿಸಿ ಗೇರು ಸಂಶೋಧನಾ ನಿರ್ದೇಶನಾಲಯ ಎಂದು ಮರು ನಾಮಕರಣ ಮಾಡಲಾಯಿತು. (ಅನುಬಂಧ ಛಾಯಾಚಿತ್ರ ಸಂಖ್ಯೆ ೮) ಈ ಗೇರು ಸಂಶೋಧನಾ ಕೇಂದ್ರಕ್ಕೆ ಸಮಾನ ದರ್ಜೆಯ ಸಂಶೋಧನಾ ಕೇಂದ್ರಗಳು ದೇಶಾದ್ಯಂತ ಗೇರು ಬೆಳೆಯುವ ವಿವಿಧ ರಾಜ್ಯಗಳಲ್ಲಿ ಒಟ್ಟು ೧೦ ಕೇಂದ್ರಗಳಲ್ಲಿ ಸ್ಥಾಪನೆಗೊಂಡು ಕಾರ್ಯ ನಿರ್ವಹಿಸುತ್ತಿವೆ. ಪುತ್ತೂರಿನಲ್ಲಿರುವ ಗೇರು ಸಂಶೋಧನಾ ನಿರ್ದೇಶನಾಲಯ ಸುಮಾರು ೬೮ ಹೆಕ್ಟೇರು ವಿಸ್ತೀರ್ಣದ ಭೂಮಿಯನ್ನು ಹೊಂದಿದೆ. ಆಡಳಿತ ವಿಭಾಗ, ಪ್ರಯೋಗಾಲಯ, ವಸ್ತು ಸಂಗ್ರಹಾಲಯ, ಸುಸಜ್ಜಿತ ಗ್ರಂಥಾಲಯ ಹಾಗೂ ಪ್ರಾಯೋಗಿಕ ಗೇರು ತೋಟವನ್ನು ಹೊಂದಿದೆ. ಮಾತ್ರವಲ್ಲ ಕೇಂದ್ರದಿಂದ ೧೩ ಕಿ. ಮೀ. ದೂರದ ಶಾಂತಿಗೋಡು ಎಂಬಲ್ಲಿ ೮೦ ಹೆಕ್ಟೇರು ವಿಸ್ತೀರ್ಣದ ಪ್ರಾತ್ಯಕ್ಷಿಕ ತೋಟವನ್ನು ಹೊಂದಿದೆ.

ಇದರ ಪ್ರಮುಖ ಕಾರ್ಯಗಳು ಇಂತಿವೆ.

- ಗೇರು ಉತ್ಪಾದಕತೆ ಹಾಗೂ ಗುಣ ಮಟ್ಟದ ಉನ್ನತೀಕರಣಕ್ಕೆ ಪೂರಕವಾಗಿ ಸಂಶೋಧನೆಗಳನ್ನು ಕೈಗೆತ್ತಿಕೊಳ್ಳುವುದು.
- ಉತ್ತಮ ಗೇರು ತಳಿಗಳ ಅಭಿವೃದ್ಧಿ.
- ಸುಧಾರಿತ ಗೇರು ತಂತ್ರಜ್ಞಾನದ ಅಭಿವೃದ್ಧಿ ಮತ್ತು ರಾಷ್ಟ್ರ ಮಟ್ಟದಲ್ಲಿ ಗೇರು ಸಂಶೋಧನಾ ಸಮನ್ವಯ ಯೋಜನೆ.
- ಗೇರು ಉತ್ಪಾದನಾ ತಂತ್ರಜ್ಞಾನದ ಕುರಿತಂತೆ ಸಮಾಲೋಚನೆ.
- ಗುಣಮಟ್ಟದ ಗೇರು ಸಸಿ ನೆಡುವ ಪರಿಕರಗಳನ್ನು ಅಭಿವೃದ್ಧಿ ಪಡಿಸುವುದು.
- ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸಂಸ್ಥೆಗಳೊಂದಿಗೆ ವ್ಯವಹರಿಸುವುದರ ಮೂಲಕ ಗೇರು ನಿರ್ದೇಶನಾಲಯದ ಉದ್ದೇಶಗಳನ್ನು ಅನುಷ್ಠಾನಗೊಳಿಸುವುದು.

ಈ ಮೇಲಿನ ಉದ್ದೇಶಗಳನ್ನಿಟ್ಟುಕೊಂಡ ಕೇಂದ್ರ ಕಳೆದ ೨೮ ವರ್ಷಗಳ ಸುದೀರ್ಘ ಅವಧಿಯಲ್ಲಿ ಸಾಕಷ್ಟು ಸಾಧನೆಗಳನ್ನು ಮಾಡಿದೆ. ಮೂರು ವಿಧದ ಸುಧಾರಿತ ತಳಿಗಳಾದ ಎನ್.ಆರ್.ಸಿ.ಸಿ. ಸೆಲೆಕ್ಷನ್-೧, ಎನ್.ಆರ್.ಸಿ.ಸಿ. ಸೆಲೆಕ್ಷನ್-೨ ಹಾಗೂ ಭಾಸ್ಕರ ಎಂಬ ಸುಧಾರಿತ ತಳಿಗಳನ್ನು ಪರಿಚಯಿಸಿ ಪ್ರಚಾರಗೊಳಿಸುವಲ್ಲಿ ಯಶಸ್ವಿಯಾಗಿದೆ. ಸುಧಾರಿತ ಗೇರು ಕೃಷಿ ತಂತ್ರಜ್ಞಾನವನ್ನು ಅಳವಡಿಸಲಾಗಿದ್ದು ಗೇರು ಸಸಿ ನಿರ್ವಹಣಾ ಕ್ರಮವನ್ನು, ರಾಸಾಯನಿಕ ಹಾಗೂ ಸಾವಯವ ಗೊಬ್ಬರದ ಬಳಕೆಯನ್ನು, ನೀರಾವರಿ ಹಾಗೂ ಕೀಟ ನಾಶಕಗಳ ಬಳಕೆಯನ್ನು, ಗೇರು ಮರಗಳ ಪುನಶ್ಚೇತನ ಕ್ರಮಗಳನ್ನು, ಗೇರು ಗಿಡಗಳ ಸವರಿಕೆ, ಘನ ಸಾಂದ್ರ ಬೇಸಾಯ ಇತ್ಯಾದಿ ವಿಷಯದ ಕುರಿತಂತೆ ಮಾಹಿತಿ ನೀಡುವುದರೊಂದಿಗೆ ಗೇರು ಕೃಷಿ ಉತ್ಪಾದಕತೆಯನ್ನು ಹೆಚ್ಚಿಸಿದೆ. ಕೊಯ್ಲು ಪೂರ್ವ ತಂತ್ರಜ್ಞಾನದೊಂದಿಗೆ ಕೊಯ್ಲು ನಂತರದ ತಂತ್ರಜ್ಞಾನದ ಅಭಿವೃದ್ಧಿಗೆ ಸಮಾನ ಆದ್ಯತೆ ನೀಡಲಾಗಿದ್ದು ಅದಕ್ಕೆಂದೇ ಪ್ರತ್ಯೇಕ ಕಟ್ಟಡ, ಸಿಬ್ಬಂದಿ ವರ್ಗ ಹಾಗೂ ಪರಿಕರಗಳನ್ನು ಹೊಂದಿದೆ. ಗೇರು ಹಣ್ಣಿನ ಸಮರ್ಪಕ ಬಳಕೆಯ ಕುರಿತಂತೆ ಕಾರ್ಯಾಗಾರಗಳನ್ನು ಏರ್ಪಡಿಸುವುದರ ಮೂಲಕ ಗೇರು ಹಣ್ಣಿನ ವಿವಿಧ ಬಳಕೆಯನ್ನು, ಅದರ ಪೌಷ್ಟಿಕತೆಯನ್ನು ಪ್ರಚಾರ ಮಾಡಲಾಗುತ್ತಿದೆ. ಈ ಎಲ್ಲಾ ಸುಧಾರಿತ ತಂತ್ರಜ್ಞಾನಗಳನ್ನು ಸಂಶೋಧನಾ ಕೇಂದ್ರಗಳಿಂದ ಗೇರು ತೋಟಗಳಿಗೆ ವರ್ಗಾವಣೆ ಮಾಡುವ ಸಲುವಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಬೇರೆ ಬೇರೆ ಸುಧಾರಿತ ಗೇರು ಬೇಸಾಯ ಕ್ರಮಗಳ ಮಾಹಿತಿ ನೀಡುವ ಪ್ರತ್ಯೇಕ ಪ್ರತ್ಯೇಕವಾಗಿರುವ ಲಘು ಗ್ರಂಥ ಮಾಲಿಕೆಗಳನ್ನು ಇಂಗ್ಲೀಷ್ ಹಾಗೂ ಕನ್ನಡ ಭಾಷೆಯಲ್ಲಿ ಪ್ರಕಾಶನ ಮಾಡಿ ಕೃಷಿಕರಿಗೆ ಹಂಚಿರುತ್ತದೆ. ವಿಚಾರ ಸಂಕಿರಣ, ಪ್ರದರ್ಶನಗಳನ್ನು ಕಾಲ ಕಾಲಕ್ಕೆ ಏರ್ಪಡಿಸಿ ರೈತರಿಗೆ ಮಾಹಿತಿ ನೀಡುತ್ತಿದೆ. ಸಂಶೋಧನಾ ಕೇಂದ್ರದ ಕೃಷಿ ವಿಜ್ಞಾನಿಗಳು ಸುತ್ತ ಮುತ್ತಲಿನ ಬೇರೆ ಬೇರೆ ಪ್ರದೇಶಗಳಿಗೆ ಭೇಟಿ ನೀಡಿ ಗೇರು ಕೃಷಿ ಬಗ್ಗೆ ಜಾಗೃತಿ ಮೂಡಿಸುತ್ತಿದ್ದಾರೆ. ಗೇರು ಕೃಷಿಯಲ್ಲಿ ತೊಡಗಿರುವ ತೋಟಗಾರಿಕಾ ಇಲಾಖೆ, ರಬ್ಬರ್ ಮಂಡಳಿ ಹಾಗೂ ಸರ್ಕಾರ ಇತ್ಯಾದಿ ಸಂಸ್ಥೆಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ನಡೆಸಿಕೊಡುತಿದ್ದು ವೈಜ್ಞಾನಿಕ ರೀತಿಯ ಗೇರು ಕೃಷಿ ಬಗ್ಗೆ ಅರಿವು ಮೂಡಿಸುವಲ್ಲಿ ಯಶಸ್ವಿಯಾಗಿದೆ. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಯೋಜನೆ, ದುರ್ಗಾ ಚಾರಿಟೇಬಲ್ ಸೊಸೈಟಿ ಕೆಯ್ಯೂರು ಮುಂತಾದ ಸಮಾಜ ಸೇವಾ ಸಂಸ್ಥೆಗಳ ಸಹಯೋಗದಿಂದ ಅನೇಕ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ ದ. ಕ. ಜಿಲ್ಲೆಯನ್ನೊಳಗೊಂಡಂತೆ ಕೇರಳ ರಾಜ್ಯದ ಕೊಲ್ಲಂ

ಹಾಗೂ ಕಾಸರಗೋಡು ಜಿಲ್ಲೆಯಲ್ಲೂ ವ್ಯಾಪಕವಾದ ಪ್ರಚಾರಾಂದೋಲನವನ್ನು ಕೈಗೊಂಡಿದೆ. ದ. ಕ. ಜಿಲ್ಲೆಯ ಗೇರು ಕೃಷಿ ಬೆಳವಣಿಗೆಯಲ್ಲಿ ಪುತ್ತೂರಿನ ಗೇರು ಸಂಶೋಧನಾ ನಿರ್ದೇಶನಾಲಯ ಪ್ರಭಾವಿಯಾಗಿ ಮೂಡಿ ಬರುತ್ತಿದ್ದು ಜಿಲ್ಲೆಯಲ್ಲಿ ಗೇರು ಕೃಷಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವಂತೆ ಮಾಡಿದೆ. ವಿವಿಧ ಹುದ್ದೆಗಳಲ್ಲಿ ಇದ್ದು ನಿವೃತ್ತರಾದವರೂ ಕೂಡಾ ಗೇರು ಕೃಷಿಯತ್ತ ಒಲವು ತೋರಿಸುತ್ತಿರುವುದು ಇದಕ್ಕೆ ನಿದರ್ಶನವಾಗಿದೆ.

ಅಧ್ಯಾಯ ೫

ದ.ಕ. ಜಿಲ್ಲೆಯ ಗೋಡಂಬಿ ಸಂಸ್ಕರಣಾ ಘಟಕಗಳ ಸಮಸ್ಯೆಗಳು ಮತ್ತು ಮಹಿಳಾ ಕಾರ್ಮಿಕರ ಸ್ಥಿತಿಗತಿ ಮತ್ತು ಸಮಸ್ಯೆಗಳು

೫.೧ ಸಂಸ್ಕರಣಾ ಘಟಕಗಳ ಭೌಗೋಳಿಕತೆ ಮತ್ತು ಮಾಲಕತ್ವ

೫.೨ ಗೇರು ಬೀಜ ಸಂಸ್ಕರಣಾ ಘಟಕಗಳ ಸ್ಥಿತಿಗತಿ

೫.೩ ಸಂಸ್ಕರಣಾ ಘಟಕಗಳ ಸಮಸ್ಯೆಗಳು

೫.೪ ಮಹಿಳಾ ಕಾರ್ಮಿಕರ ಸ್ಥಿತಿಗತಿ

೫.೫ ಮಹಿಳಾ ಕಾರ್ಮಿಕರ ಸಮಸ್ಯೆಗಳು

ಅಧ್ಯಾಯ ೫
ದ.ಕ. ಜಿಲ್ಲೆಯ ಗೋಡಂಬಿ ಸಂಸ್ಕರಣಾ ಘಟಕಗಳ ಸಮಸ್ಯೆಗಳು ಮತ್ತು ಮಹಿಳಾ ಕಾರ್ಮಿಕರ ಸ್ಥಿತಿಗತಿ ಮತ್ತು ಸಮಸ್ಯೆಗಳು

ಪ್ರಸ್ತುತ ಅಧ್ಯಾಯದಲ್ಲಿ ಗೇರು ಸಂಸ್ಕರಣಾ ಘಟಕಗಳ ಹಾಗೂ ಮಹಿಳಾ ಕಾರ್ಮಿಕರ ಸ್ಥಿತಿಗತಿಗಳು ಮತ್ತು ಸಮಸ್ಯೆಗಳ ಕುರಿತಾದ ವಿವರಣೆಯನ್ನು ನೀಡಲಾಗಿದೆ. ಗೇರು ಉದ್ಯಮದಲ್ಲಿ ಸಂಸ್ಕರಣಾ ಘಟಕಗಳು ಮಹತ್ವದ ಭೂಮಿಕೆಯನ್ನು ನಿರ್ವಹಿಸುತ್ತವೆ. ಗೇರು ಉತ್ಪಾದಕರ ಹಾಗೂ ಗೋಡಂಬಿ ಗ್ರಾಹಕರ ನಡುವಿನ ಪ್ರಮುಖ ಕೊಂಡಿ ಈ ಸಂಸ್ಕರಣಾ ಘಟಕಗಳು. ಮಹಿಳಾ ಪ್ರಾಧ್ಯಾನ್ಯತೆ ಹೊಂದಿರುವ ಗೇರು ಸಂಸ್ಕರಣಾ ಘಟಕಗಳು ಮಹಿಳಾ ಸಬಲೀಕರಣದತ್ತ ದೃಢ ಹೆಜ್ಜೆಯನ್ನಿಟ್ಟಿದೆ. ಶೇ. ೯೫ ರಷ್ಟು ಮಹಿಳಾ ಕಾರ್ಮಿಕರನ್ನು ಹೊಂದಿರುವ ಗೇರು ಸಂಸ್ಕರಣಾ ಘಟಕಗಳಲ್ಲಿನ ಮಹಿಳಾ ಕಾರ್ಮಿಕರ ಸಮಸ್ಯೆಗಳು ಅಷ್ಟೇ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತವೆ. ಇಲ್ಲಿ ದುಡಿಯುತ್ತಿರುವ ಕಾರ್ಮಿಕರಲ್ಲಿ ಬಹು ಸಂಖ್ಯಾತರು ಹಿಂದುಳಿದ ಜಾತಿ ಮತ್ತು ವರ್ಗಕ್ಕೆ ಸೇರಿದವರಾಗಿದ್ದು, ಅವರ ಸ್ಥಿತಿಗತಿಗಳು ಸಾಮಾಜಿಕವಾಗಿಯೂ ಮಹತ್ವ ಪಡೆದುಕೊಳ್ಳುತ್ತವೆ. ಆದ್ದರಿಂದ ಗೇರು ಉದ್ಯಮಕ್ಕೆ ಕೇವಲ ಆರ್ಥಿಕ ಮಹತ್ವ ಮಾತ್ರವಲ್ಲ ಅದಕ್ಕೊಂದು ಸಾಮಾಜಿಕ ದೃಷ್ಟಿಕೋನ ಇರುವುದು ಈ ಅಧ್ಯಾಯದಲ್ಲಿ ವಿದಿತವಾಗುತ್ತದೆ.

೫.೧ ಸಂಸ್ಕರಣಾ ಘಟಕಗಳ ಭೌಗೋಳಿಕತೆ ಮತ್ತು ಮಾಲಕತ್ವ

ಗೇರು ಉದ್ಯಮದಲ್ಲಿ ಸಂಸ್ಕರಣಾ ಘಟಕಗಳದ್ದು ವಿಶಿಷ್ಟ ಪಾತ್ರ. ಅವು ಕಚ್ಚಾಗೇರು ಬೀಜಕ್ಕೆ ಬೇಡಿಕೆಯನ್ನು ಸೃಷ್ಟಿಸುತ್ತವೆ. ತನ್ಮೂಲಕ ಗೇರು ಕೃಷಿಗೆ ಉತ್ತೇಜನ ನೀಡುತ್ತವೆ. ಸಂಸ್ಕರಿಸಿದ ಗೇರು ಬೀಜವನ್ನು ದೇಶೀಯ ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತವೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಉತ್ಪನ್ನದ ಗುಣಮಟ್ಟ ಬಹಳ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಆ ಕಾರಣದಿಂದ ಗೋಡಂಬಿಯ ಗುಣಮಟ್ಟವನ್ನು ಕಾಯ್ದುಕೊಳ್ಳುವಲ್ಲಿ ಸಂಸ್ಕರಣಾ ಘಟಕಗಳು ಶ್ರಮಿಸಬೇಕಾಗುತ್ತದೆ. ಅವುಗಳ ಕಾರ್ಯ ವೈಖರಿ, ಉತ್ಪಾದನಾ ಸಾಮರ್ಥ್ಯ, ಗುಣಮಟ್ಟದ ಬಗೆಗಿನ ಕಾಳಜಿ, ಉದ್ಯಮದ ಯಶಸ್ಸಿನ ಮಾನದಂಡವಾಗಿರುತ್ತದೆ. ಗೇರು ಸಂಸ್ಕರಣಾ ಘಟಕಗಳ ಮೂಲಭೂತ ಅವಶ್ಯಕತೆಗಳಲ್ಲಿ ಭೂಮಿ ಬಹಳ ಪ್ರಾಮುಖ್ಯವಾದುದು. ಉತ್ಪಾದನಾ ಸಾಮರ್ಥ್ಯಕ್ಕೆ ಅನುಗುಣವಾಗಿ ಭೂಮಿಯ ವಿಸ್ತೀರ್ಣ ಹೊಂದಿಕೊಂಡಿರುತ್ತದೆ. ಸಂಸ್ಕರಣಕ್ಕೆ ಕನಿಷ್ಠ ೨೫ ಅಡಿ ಎತ್ತರದ ಕಟ್ಟಡದ ಅವಶ್ಯಕತೆಯಿದ್ದು, ಕಟ್ಟಡದ ಒಳಗೆ ಸರಿಯಾದ ಗಾಳಿ ಬೆಳಕಿನ ವ್ಯವಸ್ಥೆ ಬೇಕಾಗುತ್ತದೆ. ಕಟ್ಟಡದೊಂದಿಗೆ ಗೇರು ಬೀಜ ಒಣಗಿಸಲು ವಿಶಾಲವಾದ ಅಂಗಣ, ದಾಸ್ತಾನು ಕೊಠಡಿ, ಕ್ಯಾಂಟೀನ್ ಸೌಲಭ್ಯ, ಕುಡಿಯುವ ನೀರಿನ ಸೌಲಭ್ಯ, ಶೌಚಾಲಯ, ವಿಶ್ರಾಂತಿ ಕೊಠಡಿ, ಪುಟ್ಟ ಸಭಾ ಭವನ ಇತ್ಯಾದಿ ಅಗತ್ಯತೆಗಳು ಇವೆ. ಗೇರು ಬೀಜ ಬೇಯಿಸುವ, ಒಣಗಿಸುವ ಕತ್ತರಿಸುವ, ಸಿಪ್ಪೆ ತೆಗೆಯುವ, ವರ್ಗೀಕರಿಸುವ, ಪ್ಯಾಕ್ ಮಾಡುವ, ತಲೆ ಹೊರೆಯಲ್ಲಿ ಸಾಗಿಸುವ ವಿವಿಧ ಸ್ತರಗಳ ಕಾರ್ಮಿಕರ ಅವಶ್ಯಕತೆಯಿದೆ. ಒಟ್ಟು ಕೆಲಸದ ಮೇಲ್ವಿಚಾರಣೆ ನೋಡಿಕೊಳ್ಳುವ ಮೇನೇಜರ್, ಸಹಾಯಕ ಮೇನೇಜರ್, ಕಛೇರಿ ಸಿಬ್ಬಂದಿಗಳು, ಕಂಪ್ಯೂಟರ್ ಕೆಲಸಗಾರರು, ಲೆಕ್ಕ ಪರಿಶೋಧಕರು, ಪರಿಚಾರಕರು, ಕಾವಲುಗಾರರು, ಯಂತ್ರ ದುರಸ್ತಿ ಮಾಡುವ ಮೆಕಾನಿಕ್‌ಗಳು, ವಾಹನ ಚಾಲಕರು, ಕ್ಯಾಂಟೀನ್‌ನಲ್ಲಿ ಅಡಿಗೆ ಸಿಬ್ಬಂದಿ ಹೀಗೆ ಅಪಾರ ಮಾನವ ಶಕ್ತಿಯ ಅಗತ್ಯ ಇದೆ.

ಭೂಮಿ ಮತ್ತು ಶ್ರಮದಷ್ಟೇ ಬಂಡವಾಳಕ್ಕೂ ಇಲ್ಲಿ ಮಹತ್ವವಿದೆ. ಯಂತ್ರೋಪಕರಣಗಳ ರೂಪದಲ್ಲಿ ರೋಸ್ಟಿಂಗ್ ಬಾಯ್ಲರ್‌ಗಳು, ಕತ್ತರಿಸುವ ಯಂತ್ರಗಳು, ಗೇರು ಬೀಜ ಒಣಗಿಸಲು ಬ್ರೋಮಾಗಳು, ಶೈತ್ಯ ಯಂತ್ರ, ಗೇರು ಬೀಜದ ಮೇಲಿನ ಸಿಪ್ಪೆ ತೆಗೆಯಲು ಬೇಕಾದ ಟೇಬಲ್ ಮತ್ತಿತರ ಸಾಮಗ್ರಿಗಳು, ವೀಟಾ ಪ್ಯಾಕಿಂಗ್ ಯಂತ್ರಗಳು, ತೂಕದ ಯಂತ್ರಗಳು, ಕಛೇರಿ ಕೆಲಸಕ್ಕೆ ಬೇಕಾಗುವ ಕಂಪ್ಯೂಟರ್ ಯಂತ್ರಗಳು, ಫ್ಯಾಕ್ಟರಿಗೆ ಬೇಕಾದ ಲಾರಿ, ಟೆಂಪೋ ಇತ್ಯಾದಿಗಳು, ಜನರೇಟರುಗಳು ಇತ್ಯಾದಿಯಾಗಿ ಅನೇಕ ಬಂಡವಾಳ ಸರಕುಗಳು ಬೇಕಾಗುತ್ತವೆ. ಇವೆಲ್ಲಾ ಸಾಧನ ಸಲಕರಣೆಗಳ ಕನಿಷ್ಠ ಮೌಲ್ಯ ೨೫ ರಿಂದ ೩೦ ಲಕ್ಷ ರೂ.ಗಳೆಂದು ಅಂದಾಜಿಸಲಾಗಿದೆ. ಇದರೊಂದಿಗೆ ಕಚ್ಚಾಗೇರು ಕೊಂಡುಕೊಳ್ಳಲು, ಕಾರ್ಮಿಕ ವೆಚ್ಚ ಭರಿಸಲು, ತಿಂಗಳೊಂದಕ್ಕೆ ಕನಿಷ್ಠ ಎರಡು ಲಕ್ಷ ರೂ.ಗಳ ಅವಶ್ಯಕತೆಯಿದೆ. ಘಟಕದ ಮಾಲಿಕರಿಗೆ ಬೇಕಾಗಿರುವುದು ಸ್ಥಿರ ಬಂಡವಾಳಕ್ಕಿಂತ ದುಡಿಯುವ ಬಂಡವಾಳದ ಮೊತ್ತವೇ ಜಾಸ್ತಿ. ಆದುದರಿಂದ ಗೇರು ಉದ್ದಿಮೆಯು ಶ್ರಮ ಬಾಹುಳ್ಯ ತಂತ್ರಜ್ಞಾನದೊಂದಿಗೆ ಬಂಡವಾಳ ಬಾಹುಳ್ಯ ತಂತ್ರಜ್ಞಾನಕ್ಕೂ ಮಹತ್ವ ನೀಡಬೇಕಾಗುತ್ತದೆ. ಇವುಗಳಲ್ಲದೆ ಮೂಲಭೂತ ಸೌಕರ್ಯಗಳಾದ ರಸ್ತೆ, ನೀರು, ವಿದ್ಯುತ್‌ನಂತಹ ಬಾಹ್ಯ ಸವಲತ್ತುಗಳು ಹೇಗೂ ಬೇಕು. ಇದಕ್ಕೆ ಸಂಬಂಧಿಸಿದಂತೆ ಮಾಹಿತಿಗಳನ್ನು ಕ್ಷೇತ್ರಾಧ್ಯಯನದ ಸಂದರ್ಭದಲ್ಲಿ ಸಂಗ್ರಹಿಸಲಾಯಿತು. (ಅನುಬಂಧ ಛಾಯಾಚಿತ್ರ ಸಂಖ್ಯೆ ೯) ವಾರ್ಷಿಕ ೨೦೦೦ ಟನ್ ಕಚ್ಚಾಗೇರನ್ನು ಸಂಸ್ಕರಿಸಲು ಬೇಕಾಗುವ ಕನಿಷ್ಠ ಮಾನವ ಶಕ್ತಿಯ ಅಂದಾಜು ವಿವರ ಹೀಗಿದೆ.

ಕೋಷ್ಟಕ ೫.೧ ಗೇರು ಸಂಸ್ಕರಣೆಯಲ್ಲಿ ಮಾನವ ಶಕ್ತಿಯ ಅಗತ್ಯತೆ

ಕ್ರ.ಸಂ.	ವಿವರ	ಕಾರ್ಮಿಕರ ಸಂಖ್ಯೆ
೧.	ಚಿಪ್ಪು ತೆಗೆಯುವವರು	೧೨೮
೨.	ಸಿಪ್ಪೆ ಸುಲಿಯುವವರು	೨೦೭
೩.	ವರ್ಗೀಕರಣ ಮಾಡುವವರು	೬೪
೪.	ಪ್ಯಾಕಿಂಗ್ ಮಾಡುವವರು	೦೨
೫.	ಮೇನೆಜರ್	೦೧
೬.	ಸಹಾಯಕ ಮೇನೇಜರ್	೦೨
೭.	ಬೆಂಬಲಿಗ ಸಿಬ್ಬಂದಿ	೧೬
೮.	ಮೇಲ್ವಿಚಾರಕರು	೧೫
೯.	ದುರಸ್ತಿಗಾರರು	೦೫
೧೦.	ಅಡಿಗೆಯವರು	೦೧
೧೧.	ಕಾವಲುಗಾರರು	೧೦
೧೨.	ಹೊರಗಿನ ಕೆಲಸಗಾರರು	೧೯
	ಒಟ್ಟು	೪೭೦

Source: M Abdul Salam, K.V Peter- "Cashew-A Monograph" (2009) published by slaudivm press (India) Private Ltd.P.174


ವಾರ್ಷಿಕ ಎರಡು ಸಾವಿರ ಟನ್ ಗೇರು ಬೀಜದ ಸಂಸ್ಕರಣೆಗೆ ಬೇಕಾಗುವ ಒಟ್ಟು ಕಾರ್ಮಿಕರ ಸಂಖ್ಯೆ ೪೭೦ ಮಂದಿ. ಗೇರು ಬೀಜದ ಚಿಪ್ಪು ಒಡೆಯುವುದು, ಸಿಪ್ಪೆ ಸುಲಿಯುವುದು, ವರ್ಗೀಕರಣ ಮಾಡುವುದು ಈ ಮೂರು ವಿಭಾಗಗಳು ಸಂಸ್ಕರಣೆಯ ಪ್ರಮುಖ ಭಾಗವಾಗಿದ್ದು ಒಟ್ಟು ೩೯೯ ಮಂದಿ ಕಾರ್ಮಿಕರು ಇದಕ್ಕೇ ಬೇಕಾಗುತ್ತಾರೆ. ಇವರೆಲ್ಲರೂ

ಮಹಿಳೆಯರೇ ಆಗಿರುವುದು ಕ್ಷೇತ್ರ ಅಧ್ಯಯನದಲ್ಲಿ ಕಂಡುಕೊಂಡ ಅಂಶ. ಒಟ್ಟಿನಲ್ಲಿ ಶೇ. ೯೫ ರಷ್ಟು ಮಹಿಳೆಯರೇ ಇರುವ ಗೇರು ಉದ್ದಿಮೆ ಶ್ರಮ ಶಕ್ತಿಗೆ ವಿಶೇಷ ಮಹತ್ವ ನೀಡುತ್ತದೆ. ಜತೆಗೆ ಇದು ಮಹಿಳಾ ಸಬಲೀಕರಣಕ್ಕೆ ಅವಕಾಶ ಕಲ್ಪಿಸುವ ಉದ್ದಿಮೆಯಾದುದರಿಂದ ಸಾಮಾಜಿಕ ಮಹತ್ವವನ್ನು ಪಡೆದುಕೊಂಡಿದೆ.

ದ.ಕ. ಜಿಲ್ಲೆಯ ಒಟ್ಟು ೫೦ ಗೇರು ಸಂಸ್ಕರಣಾ ಘಟಕಗಳಲ್ಲಿ ೧೫ ಘಟಕಗಳನ್ನು ಅಧ್ಯಯನಕ್ಕಾಗಿ ಆರಿಸಿಕೊಳ್ಳಲಾಗಿದೆ. ಸಣ್ಣ, ಮಧ್ಯಮ ಹಾಗೂ ದೊಡ್ಡ ಪ್ರಮಾಣದ ಗೇರು ಸಂಸ್ಕರಣಾ ಘಟಕಗಳನ್ನು ಆಯ್ದುಕೊಳ್ಳಲಾಗಿದ್ದು, ಎಲ್ಲಾ ತಾಲೂಕುಗಳಿಗೂ ಪ್ರಾತಿನಿಧ್ಯ ನೀಡಲಾಗಿದೆ.

ಭೂಪಟ ೫.೧ ಅಧ್ಯಯನಕ್ಕೆ ಆರಿಸಿಕೊಂಡ ದ.ಕ. ಜಿಲ್ಲೆಯ ಗೇರು ಘಟಕಗಳು ಭೌಗೋಳಿಕತೆಯನ್ನು ತೋರಿಸುತ್ತದೆ.

ಭೂಪಟ ೫.೧: ಅಧ್ಯಯನಕ್ಕೆ ಆರಿಸಿದ ಜಿಲ್ಲೆಯ ಗೇರು ಸಂಸ್ಕರಣಾ ಘಟಕಗಳ ಭೌಗೋಳಿಕ ನೆಲೆ



೧. ಶ್ರೀ ವೆಂಕಟೇಶ್ವರ ಪ್ರೊಸೆಸರ್ಸ್, ವಿಟ್ಲ, ಬಂಟ್ವಾಳ (ತಾ)

೨. ಶ್ರೀನಿವಾಸ ಕ್ಯಾಶ್ಯೂಸ್ ಇಂಡಸ್ಟ್ರೀಸ್, ವಾಮದಪದವು, ಬಂಟ್ವಾಳ

೩. ಪ್ರಭಾವ ಕ್ಯಾಶ್ಯೂ ಪ್ರೊಸೆಸರ್ಸ್, ಬಂಟ್ವಾಳ

[illegible]



[illegible]

೪. ವಿಜಯ ಕ್ಯಾಶ್ಯೂಸ್ ಆಂಡಿಂಜೆ, ಬೆಳ್ತಂಗಡಿ ತಾಲೂಕು

೫. ಅಜಲ್ ಇಂಡಸ್ಟ್ರೀಸ್, ಮಂಗಳೂರು

೬. ಕಲಬಾವಿ ಕ್ಯಾಶ್ಯೂಸ್, ಮಂಗಳೂರು

೭. ಕಾರ್ತಿಕೇಯ ಎಂಟರ್ ಪ್ರೈಸಸ್, ಕ್ಯಾಶ್ಯೂ ಪ್ರೊಸೆಸಿಂಗ್ ಯೂನಿಟ್, ಮೂಡಬಿದ್ರೆ ಮಂಗಳೂರು ತಾಲೂಕು.

೮. ಧನಲಕ್ಷ್ಮಿ ಕ್ಯಾಶ್ಯೂ ಎಕ್ಸ್‌ಪೋರ್ಟ್ ಪ್ರೈವೇಟ್ ಲಿಮಿಟೆಡ್, ಮೂಡಬಿದ್ರೆ – ಮಂಗಳೂರು ತಾಲೂಕು.

೯. ಕರ್ನಾಟಕ ಕ್ಯಾಶ್ಯೂಸ್ ಇಂಡಸ್ಟ್ರೀಸ್, ಪುತ್ತೂರು.

೧೦. ಓರಿಯಂಟಲ್ ಕ್ಯಾಶ್ಯೂ ಇಂಡಸ್ಟ್ರೀಸ್ ಬನ್ನೂರು, ಪುತ್ತೂರು.

೧೧. ಕೆ. ಸುಬ್ರಾಯ ಅನಂತ ಕಾಮತ್ ಆಂಡ್ ಸನ್ಸ್, ಮುಕ್ವೆ ಪುತ್ತೂರು.


೧೨. ಕೆ. ಸುಬ್ರಾಯ ಅನಂತ ಕಾಮತ್ ಆಂಡ್ ಸನ್ಸ್, ಜಾಲ್ಸೂರು, ಸುಳ್ಯ ತಾಲೂಕು

೧೩. ಮಲ್ನಾಡ್ ಕ್ಯಾಶ್ಯೂ ಇಂಡಸ್ಟ್ರಿ, ಗಾಂಧಿನಗರ ಸುಳ್ಯ

೧೪. ಗ್ರೀನ್ ಲ್ಯಾಂಡ್ ಕ್ಯಾಶ್ಯೂ ಇಂಡಸ್ಟ್ರಿ ಹಳೆಗೇಟು, ಸುಳ್ಯ

೧೫. ಹೇಮಾವತಿ ಕ್ಯಾಶ್ಯೂಸ್, ಎಲಿಮಲೆ, ಸುಳ್ಯ ತಾಲೂಕು.

ಅಧ್ಯಯನಕ್ಕೆ ಆರಿಸಿದ ಗೇರು ಸಂಸ್ಕರಣಾ ಘಟಕಗಳ ತಾಲೂಕುವಾರು ವಿಂಗಡಣೆಯನ್ನು ಚಿತ್ರ ೫.೧ ರಲ್ಲಿ ಬಿಂಬಿಸಲಾಗಿದೆ.



ಚಿತ್ರ ೫.೧ ಗೇರು ಸಂಸ್ಕರಣಾ ಘಟಕಗಳ ಭೌಗೋಳಿಕ ವಿವರ


ಭಾರತದ ಗೇರು ಉದ್ಯಮದಲ್ಲಿ ಮಂಗಳೂರಿಗೆ ಒಂದು ಮಹತ್ವದ ಸ್ಥಾನ ಇದೆ. ಗೇರು ಉದ್ಯಮದ ತವರು ಎನಿಸಿಕೊಂಡ ಮಂಗಳೂರು ಜಿಲ್ಲೆಯಲ್ಲಿ ಒಟ್ಟು ೫೦ ಸಂಸ್ಕರಣಾ ಘಟಕಗಳು ಇವೆ. ಅವುಗಳಲ್ಲಿ ೧೫ ಘಟಕಗಳನ್ನು ಅಧ್ಯಯನಕ್ಕಾಗಿ ಆಯ್ದುಕೊಳ್ಳಲಾಗಿದೆ. ಮಂಗಳೂರು ತಾಲೂಕಿನಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಬಹುತೇಕ ಗೇರು ಕಾರ್ಖಾನೆಗಳಿರುವುದರಿಂದ ಅವುಗಳಿಗೆ ಶೇಕಡಾ ೨೬.೭ ರಷ್ಟು ಪ್ರಾತಿನಿಧ್ಯ ನೀಡಲಾಗಿದೆ. ಸುಳ್ಯ ತಾಲೂಕು ನೆರೆಯ ಕೇರಳ ರಾಜ್ಯದ ಗಡಿ ಭಾಗವಾಗಿದ್ದು ಕೇರಳ ಗೇರು ಉದ್ಯಮದ ಪ್ರಭಾವ ಹೆಚ್ಚಾಗಿರುವುದರಿಂದ ಬಹು ಸಂಖ್ಯೆಯ ಗೇರು ಸಂಸ್ಕರಣಾ



ಘಟಕವನ್ನು ಹೊಂದಿರುವುದರಿಂದ ಸುಳ್ಯ ತಾಲೂಕಿಗೂ ಅಷ್ಟೇ ಪ್ರಾತಿನಿಧ್ಯವನ್ನು ನೀಡಲಾಗಿದೆ. ಇನ್ನು ಬಂಟ್ವಾಳ ಶೇಕಡಾ ೨೦, ಹಾಗೂ ಪುತ್ತೂರು ತಾಲೂಕು ಶೇಕಡಾ ೨೦ ರಷ್ಟು ಪ್ರಾತಿನಿಧ್ಯ ಪಡೆದುಕೊಂಡಿವೆ. ಬೆಳ್ತಂಗಡಿ ತಾಲೂಕಿನಲ್ಲಿ ಸಂಸ್ಕರಣಾ ಘಟಕಗಳು ತುಂಬಾ ಕಡಿಮೆ ಇರುವುದರಿಂದ ಶೇ. ೬.೬ ರಷ್ಟು ಪ್ರಾತಿನಿಧ್ಯ ನೀಡಲಾಗಿದೆ

೫.೨ ಗೇರು ಬೀಜ ಸಂಸ್ಕರಣಾ ಘಟಕಗಳ ಸ್ಥಿತಿಗತಿ

ಗೇರು ಸಂಸ್ಕರಣಾ ಘಟಕದ ಸ್ಥಾಪಕರಲ್ಲಿ ಹಿಂದು, ಇಸ್ಲಾಂ ಮತ್ತು ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದವರಿದ್ದಾರೆ. ಅಧ್ಯಯನಕ್ಕಾಗಿ ಮೂರೂ ಧರ್ಮದವರಿಗೆ ಪ್ರಾತಿನಿಧ್ಯ ನೀಡಿ ಘಟಕಗಳನ್ನು ಆಯ್ಕೆ ಮಾಡಲಾಗಿದೆ. (ಚಿತ್ರ ೫.೨)



ಚಿತ್ರ ೫.೨. ಘಟಕಗಳ ಯಜಮಾನರುಗಳ ಮತೀಯ ವಿವರ

ದ. ಕ. ಜಿಲ್ಲೆಯಲ್ಲಿ ಬಹುಸಂಖ್ಯಾತ್ಯರೆನಿಸಿಕೊಂಡಿರುವ ಹಿಂದೂಗಳಿಗೆ ಶೇಕಡಾ ೭೩.೪ ರಷ್ಟು ಪ್ರಾತಿನಿಧ್ಯ ನೀಡಲಾಗಿದೆ. ಅಧ್ಯಯನಕ್ಕೆ ಆಯ್ದುಕೊಂಡ ಹಿಂದೂಗಳಲ್ಲಿ ಗೌಡ ಸಾರಸ್ವತ ಬ್ರಾಹ್ಮಣರು ಗೇರು ಉದ್ಯಮದಲ್ಲಿ ಪ್ರಾಬಲ್ಯವನ್ನು ಮೆರೆದಿದ್ದಾರೆ. ಘಟಕಗಳ ಒಡೆಯರಾದ ಹಿಂದೂಗಳಲ್ಲಿ ಶೇಕಡಾ ೪೭ ರಷ್ಟು ಮಂದಿ ಈ ಸಮುದಾಯಕ್ಕೆ ಸೇರಿದವರು. ಉಳಿದಂತೆ ಮುಸ್ಲಿಮರು ೧೩.೩ ಶೇಕಡಾ ಹಾಗೂ ಕ್ರೈಸ್ತರು ಶೇ. ೧೩.೩ ಇದ್ದಾರೆ.

ದ. ಕ. ಜಿಲ್ಲೆಯ ಪ್ರಮುಖ ಬೆಳೆಗಳಲ್ಲಿ ಗೇರು ಬೆಳೆಯೂ ಕೂಡಾ ಒಂದು. ಆದರೆ ಜಿಲ್ಲೆಯ ಸಂಸ್ಕರಣಾ ಘಟಕಗಳಿಗೆ ಸಾಕಾಗುವಷ್ಟು ಗೇರು ಬೀಜದ ಉತ್ಪಾದನೆ ಇಲ್ಲಿ ಆಗುತ್ತಿಲ್ಲ. ಹಾಗಾಗಿ ನೆರೆಯ ರಾಜ್ಯಗಳಿಂದ ಮತ್ತು ಹೊರದೇಶಗಳಿಂದ ಗೇರು ಬೀಜವನ್ನು ಆಮದು ಮಾಡಿಕೊಳ್ಳ ಬೇಕಾಗಿದೆ. ಕಚ್ಚಾಗೇರು ಬೀಜದ ಮೂಲವನ್ನು ಕೋಷ್ಟಕ ೫.೨ ರಲ್ಲಿ ತೋರಿಸಲಾಗಿದೆ.



ಕೋಷ್ಟಕ ೫.೨ ಕಚ್ಚಾಗೇರು ಮೂಲ

ಕ್ರಮ ಸಂಖ್ಯೆ	ಮೂಲಗಳು	ಶೇಕಡಾ
೧.	ಸ್ವಂತ ಉತ್ಪಾದನೆ	-
೨.	ಅಂತರ್‍ರಾಜ್ಯ	೩೫.೩೬
೩.	ಸ್ಥಳೀಯ	೨೨.೬೭
೪.	ಆಮದು	೪೧.೯೬
	ಒಟ್ಟು	೧೦೦

ಶೇಕಡಾ ೩೫.೩೬ರಷ್ಟು ಘಟಕಗಳು ನೆರೆಯ ರಾಜ್ಯಗಳಿಂದ ಗೇರು ಬೀಜ ಕೊಂಡುಕೊಂಡರೆ ಶೇಕಡಾ ೨೨.೬೭ ರಷ್ಟು ಘಟಕಗಳು ಸ್ಥಳೀಯ ಮೂಲಗಳಿಂದ ಕೊಂಡುಕೊಳ್ಳುತ್ತವೆ. ಶೇಕಡಾ ೪೧.೯೬ ರಷ್ಟು ಘಟಕಗಳು ಆಮದು ಗೇರನ್ನು ನೆಚ್ಚಿಕೊಂಡಿವೆ. ಸ್ವಂತ ಗೇರು ಕೃಷಿ ಭೂಮಿ ಹೊಂದಿರುವ ಗೇರು ಕಾರ್ಖಾನೆಗಳು ಯಾವುದೂ ಇಲ್ಲ. ಕೃಷಿ ಭೂಮಿ ಇದ್ದರೂ ಗೇರು ಬೆಳೆಯುವುದಕ್ಕಿಂತ ಬಾಹ್ಯ ಮೂಲಗಳಿಂದಲೇ ಕಚ್ಚಾಗೇರನ್ನು ಪಡೆಯುವುದು ಹೆಚ್ಚು ಲಾಭದಾಯಕ ಎಂಬ ಅಭಿಪ್ರಾಯವಿದೆ. ಗೇರು ಬೀಜ ಸಂಸ್ಕರಣಾ ಘಟಕಗಳ ಸ್ಥಿತಿಗತಿಗಳ ಪಕ್ಷಿನೋಟವನ್ನು ಕೋಷ್ಟಕ ೫.೩ ನೀಡುತ್ತದೆ.

ಕೋಷ್ಟಕ ೫.೩ ಆಯ್ದ ಘಟಕಗಳ ಪಕ್ಷಿನೋಟ

ಕ್ರಮ ಸಂಖ್ಯೆ	ಉದ್ಯಮದ ಹೆಸರು	ವಹಿವಾಟು	ಖರ್ಚು	ಲಾಭ
೧.	ಶ್ರೀ ವೆಂಕಟೇಶ್ವರ ಪ್ರೊಸೆಸರ್ಸ್, ವಿಟ್ಲ, ಬಂಟ್ವಾಳ	೧೨.೫೨ ಕೋ. ರೂ.	೧೦.೨೨ ಕೋ. ರೂ.	೨.೩ ಕೋ. ರೂ.
೨.	ಶ್ರೀನಿವಾಸ ಕ್ಯಾಶ್ಯೂಸ್, ವಾಮದಪದವು, ಬಂಟ್ವಾಳ ತಾಲೂಕು	೫.೧೭ ಕೋ. ರೂ.	೨.೬ ಕೋ. ರೂ.	೨.೫೭ ಕೋ. ರೂ.
೩.	ಪ್ರಭಾವ ಕ್ಯಾಶ್ಯೂ ಇಂಡಸ್ಟ್ರಿ, ಬಂಟ್ವಾಳ	೧೪.೧೫ ಕೋ. ರೂ.	೧೦.೯೧ ಕೋ. ರೂ.	೩.೨೪ ಕೋ.ರೂ.
೪.	ವಿಜಯ ಕ್ಯಾಶ್ಯೂಸ್, ಆಂಡಿಂಜೆ, ಬೆಳ್ತಂಗಡಿ	೬.೧೭ ಕೋ. ರೂ.	೨.೫೪ ಕೋ. ರೂ.	೩.೬೩ ಕೋ. ರೂ.
೫.	ಅಚಲ ಇಂಡಸ್ಟ್ರೀಸ್, ಮಂಗಳೂರು	೧೪.೯೦ ಕೋ. ರೂ.	೬.೩೮ ಕೋ. ರೂ.	೮.೫೨ ಕೋ. ರೂ.
೬.	ಕಲಬಾವಿ ಕ್ಯಾಶ್ಯೂಸ್, ಮಂಗಳೂರು	೧೩.೩೮ಕೋ. ರೂ.	೯.೫೯ ಕೋ. ರೂ.	೩.೭೯ ಕೋ. ರೂ.
೭.	ಕಾರ್ತಿಕೇಯ ಎಂಟರ್ ಪ್ರೈಸಸ್, ಮೂಡಬಿದ್ರೆ	೩.೫೪ ಕೋ. ರೂ.	೩.೧೬ ಕೋ. ರೂ.	೦.೩೮ ಕೋ. ರೂ.
೮.	ಧನಲಕ್ಷ್ಮಿ ಕ್ಯಾಶ್ಯೂ ಎಕ್ಸ್‌ಪೋರ್ಟ್ ಲಿಮಿಟೆಡ್, ಮೂಡಬಿದ್ರೆ, ಮಂಗಳೂರು	೧೧.೧೨ ಕೋ. ರೂ.	೬.೪೧ ಕೋ. ರೂ.	೪.೭೧ಕೋ. ರೂ.
೯.	ಕರ್ನಾಟಕ ಕ್ಯಾಶ್ಯೂಸ್ ಪುತ್ತೂರು	೬.೧೩ ಕೋ. ರೂ.	೧.೫೧ ಕೋ. ರೂ.	೪.೬೨ ಕೋ. ರೂ.
೧೦.	ಓರಿಯಂಟಲ್ ಕ್ಯಾಶ್ಯೂ ಇಂಡಸ್ಟ್ರೀಸ್ ಪುತ್ತೂರು.	೨.೮೯ ಕೋ. ರೂ.	೨.೩೬ ಕೋ. ರೂ.	೦.೫೩ ಕೋ. ರೂ.
೧೧.	ಕೆ. ಸುಬ್ರಾಯ ಅನಂತ ಕಾಮತ್ ಆಂಡ್ ಸನ್ಸ್, ಮುಕ್ವೆ ಪುತ್ತೂರು.	೩.೬೭ ಕೋ. ರೂ.	೧.೨೪ ಕೋ. ರೂ.	೨.೪೩ ಕೋ. ರೂ.
೧೨.	ಕೆ. ಸುಬ್ರಾಯ ಅನಂತ ಕಾಮತ್ ಆಂಡ್ ಸನ್ಸ್, ಜಾಲ್ಸೂರು, ಸುಳ್ಯ	೩.೯೯ ಕೋ. ರೂ.	೨.೫೪ ಕೋ. ರೂ.	೧.೪೫ ಕೋ. ರೂ.
೧೩.	ಮಲ್ನಾಡ್ ಕ್ಯಾಶ್ಯೂ ಇಂಡಸ್ಟ್ರಿಸ್ ಗಾಂಧಿನಗರ ಸುಳ್ಯ	೨.೦ ಕೋ. ರೂ.	೦.೯೫ ಕೋ. ರೂ.	೧.೦೫ ಕೋ. ರೂ.
೧೪.	ಗ್ರೀನ್ ಲ್ಯಾಂಡ್ ಕ್ಯಾಶ್ಯೂ ಇಂಡಸ್ಟ್ರಿಸ್ ಸುಳ್ಯ	೩.೮೭ ಕೋ. ರೂ.	೧.೯೮ ಕೋ. ರೂ.	೧.೮೯ ಕೋ. ರೂ.
೧೫.	ಹೇಮಾವತಿ ಕ್ಯಾಶ್ಯೂಸ್, ಎಲಿಮಲೆ, ಸುಳ್ಯ	೪.೯೯ ಕೋ. ರೂ.	೪.೧೭ ಕೋ. ರೂ.	೦.೮೫ ಕೋ. ರೂ.

ಮೂಲ: ಕ್ಷೇತ್ರಾಧ್ಯಯನದ ದತ್ತಾಂಶಗಳು.

ಶ್ರೀ ವೆಂಕಟೇಶ್ವರ ಪ್ರೊಸೆಸರ್ಸ್ ವಿಟ್ಲ: ಬಂಟ್ವಾಳ ತಾಲೂಕಿನ ವಿಟ್ಲದಲ್ಲಿ ಕಾರ್ಯನಿರ್ವಹಿಸುತ್ತಿರುವ ಗೇರು ಕಾರ್ಖಾನೆ ಶ್ರೀ ವೆಂಕಟೇಶ್ವರ ಪ್ರೊಸೆಸರ್ಸ್. ೧೯೯೨ ರಲ್ಲಿ ರೂ. ೨೫ ಲಕ್ಷ ಆರಂಭಿಕ ಬಂಡವಾಳದೊಂದಿಗೆ ಪ್ರಾರಂಭವಾಯಿತು. ಪಿ. ಸುಬ್ರಾಯ ಪೈ ಎಂಬವರು ಇದರ ಸಂಸ್ಥಾಪಕರು. ಪ್ರಸ್ತುತ ಅವರದ್ದೇ ಏಕ ಯಜಮಾನ್ಯ ವ್ಯವಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಒಟ್ಟು ವಾರ್ಷಿಕ ೧೦.೨೨ ಕೋಟಿ ರೂ.ಗಳ ವೆಚ್ಚ ತಗಲುತ್ತಿದ್ದು, ಸುಮಾರು ರೂ. ೧೨.೫೨ ಕೋಟಿಗಳಷ್ಟು ಆದಾಯ ಪಡೆಯುತ್ತಿದೆ. ನಿವ್ವಳ ಲಾಭ ೨.೩ ಕೋಟಿ ರೂ.ಗಳು. ಒಬ್ಬ ಮೇನೇಜರ್, ಒಬ್ಬ ಗುಮಾಸ್ತ, ಎರಡು ಮಂದಿ ಮೇಲ್ವಿಚಾರಕರು, ಎರಡು ಮಂದಿ ಡ್ರೈವರ್, ಎರಡು ಮಂದಿ ಮೆಕಾನಿಕ್, ಒಬ್ಬ ಕಾವಲುಗಾರ ಹಾಗೂ ೨೦ ಮಂದಿ ಪುರುಷ ಕಾರ್ಮಿಕರು ೧೮೦ ಮಂದಿ ಮಹಿಳಾ ಕಾರ್ಮಿಕರು ಇಲ್ಲಿ ದುಡಿಯುತ್ತಿದ್ದಾರೆ. ಸರಕಾರದ ನಿಯಗಳಿಗನುಸಾರವಾಗಿ ವೇತನ, ಭತ್ಯೆ, ಪ್ರಾವಿಡೆಂಟ್ ಫಂಡ್, ಬೋನಸ್ ಇತ್ಯಾದಿ ಸೌಲಭ್ಯಗಳು ಇವೆ. ಇದನ್ನು ಹೊರತು ಪಡಿಸಿ ಕಾರ್ಮಿಕರಿಗೆ ಮಧ್ಯಾಹ್ನ ಉಚಿತ ಊಟ ನೀಡಲಾಗುತ್ತಿದೆ. ಕಾರ್ಮಿಕರ ಕೊರತೆ ಎದುರಿಸುತ್ತಿರುವ ಘಟಕ ಕಾರ್ಮಿಕರಲ್ಲಿ ದಕ್ಷತೆ ಕುಸಿಯುತ್ತಿರುವುದರ ಬಗ್ಗೆ ಆತಂಕ ವ್ಯಕ್ತಪಡಿಸುತ್ತಿದೆ. ಸರಕಾರದ ಕಡೆಯಿಂದ ಯಾವುದೇ ವಿಶೇಷ ನೆರವು ಇಲ್ಲ. ಆದರೆ ಘಟಕಕ್ಕೆ ಸಂಬಂಧಿಸಿದ ಬೇರೆ ಬೇರೆ ಇಲಾಖೆಗಳಿಂದ ತಪಾಸಣೆಯ ಹೆಸರಿನಲ್ಲಿ ಅನಗತ್ಯ ಕಿರುಕುಳ ಇರುತ್ತದೆ. ಉತ್ತರ ಭಾರತಕ್ಕೆ ಹೋಲಿಸಿದರೆ ದಕ್ಷಿಣ ಕನ್ನಡದಲ್ಲಿ ಕೂಲಿ ಹೆಚ್ಚಳ ಇರುವುದರಿಂದ ಉತ್ಪಾದನಾ ವೆಚ್ಚ ಹೆಚ್ಚುತ್ತಿದ್ದು ಘಟಕವು ತೀವ್ರ ಸ್ಪರ್ಧೆಯನ್ನು ಎದುರಿಸಬೇಕಾಗಿದೆ. ರಫ್ತು ವ್ಯಾಪಾರಕ್ಕಿಂತ ದೇಶೀ ಮಾರುಕಟ್ಟೆಯೇ ಹೆಚ್ಚು ಅನುಕೂಲಕರ ಎಂಬ ಅಭಿಪ್ರಾಯ ಕಾರ್ಖಾನೆ ಮಾಲಿಕರದ್ದಾಗಿದೆ. ಹಾಗಾಗಿ ರಫ್ತು ವ್ಯಾಪಾರದ ಬಗ್ಗೆ ಆಸಕ್ತಿಯಿಲ್ಲ. ಕಳೆದ ಒಂದು ದಶಕದ ವಹಿವಾಟಿನ ಚಿತ್ರಣವನ್ನು ಕೋಷ್ಟಕ ೫.೪ ರಲ್ಲಿ ನಮುದಿಸಲಾಗಿದೆ.

ಕೋಷ್ಟಕ ೫.೪ ಶ್ರೀ ವೆಂಕಟೇಶ್ವರ ಪ್ರೊಸೆಸರ್ಸ್ ವಿಟ್ಲ

ವರ್ಷ	ಪ್ರಮಾಣ (ಕೆ.ಜಿ.ಗಳಲ್ಲಿ)	ಒಟ್ಟು ಮೌಲ್ಯ ((ಲಕ್ಷ ರೂ.ಗಳಲ್ಲಿ)	ಒಟ್ಟು.ವೆಚ್ಚ (ಲಕ್ಷ ರೂ.ಗಳಲ್ಲಿ)	ಒಟ್ಟು ಲಾಭ (ಲಕ್ಷ ರೂ.ಗಳಲ್ಲಿ)
೨೦೦೧-೦೨	೬೬೭೪೬೬.೬೭	೧೦೦೧.೨೦	೮೧೭.೪೦	೧೮೩.೮೦
೨೦೦೨-೦೩	೬೫೪೦೦೯.೬೮	೧೦೧೩.೭೨	೮೨೭.೬೨	೧೮೬.೧೦
೨೦೦೩-೦೪	೬೫೭೪೩೩.೫೪	೧೦೩೮.೭೫	೮೪೮.೦೫	೧೯೦.೭೦
೨೦೦೪-೦೫	೬೪೪೭೧೨.೧೨	೧೦೬೩.೭೮	೮೬೮.೪೯	೧೯೫.೨೦
೨೦೦೫-೦೬	೬೩೬೪೭೭.೧೪	೧೧೧೩.೮೪	೯೦೯.೩೬	೨೦೪.೪೮
೨೦೦೬-೦೭	೫೬೮೨೪೮.೬೫	೧೦೫೧.೨೬	೮೫೮.೨೭	೧೯೨.೯೯
೨೦೦೭-೦೮	೫೬೬೪೬೮.೪೨	೧೦೭೬.೨೯	೮೭೮.೭೧	೧೯೭.೫೮
೨೦೦೮-೦೯	೫೫೮೩೬೧.೫೪	೧೦೮೮.೮೧	೮೮೮.೯೨	೧೯೯.೮೯
೨೦೦೯-೧೦	೫೩೬೩೫೭.೧೪	೧೧೨೬.೩೫	೯೧೯.೫೮	೨೦೬.೭೭
೨೦೧೦-೧೧	೫೩೯೬೩೭.೬೧	೧೧೭೬.೪೧	೯೬೦.೪೫	೨೧೫.೯೬
೨೦೧೧-೧೨	೫೨೧೪೫೮.೩೩	೧೧೫೧.೫೦	೧೦೦೧.೭೫	೨೪೯.೭೫

ಮೂಲ: ಕ್ಷೇತ್ರಾಧ್ಯಯನದ ದತ್ತಾಂಶಗಳು

ಕಳೆದ ಒಂದು ದಶಕದ ಬೆಳವಣಿಗೆ ಧನಾತ್ಮಕವಾಗಿದ್ದು ಲಾಭದ ಪ್ರಮಾಣ ಶೇ. ೩೬ರಷ್ಟಿದೆ.

ಶ್ರೀನಿವಾಸ ಕ್ಯಾಶ್ಯೂ ಇಂಡಸ್ಟ್ರೀಸ್ ಬಂಟ್ವಾಳ ತಾಲೂಕು: ೧೯೮೨ನೇ ಇಸವಿಯಲ್ಲಿ ಶ್ರೀ ಎಂ. ವೇದವ್ಯಾಸ ಹಾಗೂ ಎಂ. ವಿನಾಯಕ ಪ್ರಭು ಇವರ ಪಾಲುದಾರಿಕೆಯಲ್ಲಿ ಶ್ರೀನಿವಾಸ ಕ್ಯಾಶ್ಯೂ ಇಂಡಸ್ಟ್ರಿ ಬಂಟ್ವಾಳ ತಾಲೂಕಿನಲ್ಲಿ ಪ್ರಾರಂಭವಾಯಿತು. ಆರಂಭಿಕ ಬಂಡವಾಳ ರೂ. ೫೦.೦೦೦ ರೂ.ಗಳಾಗಿದ್ದು, ಪ್ರಸ್ತುತ ೫.೧೭ಕೋಟಿ ರೂ.ಗಳ ವ್ಯವಹಾರ ನಡೆಸುತ್ತಿದೆ. ಆಮದು ಹಾಗೂ ಅಂತರ್ ರಾಜ್ಯಗಳಿಂದ ಕಚ್ಚಾಗೇರನ್ನು ಪಡೆಯುತ್ತಿರುವ ಈ ಸಂಸ್ಥೆ ಸುಮಾರು ೨.೬ ಕೋಟಿಗೂ ಹೆಚ್ಚು ಖರ್ಚನ್ನು ಮಾಡುತ್ತಿದೆ. ನಿವ್ವಳ ಲಾಭ ೨.೫೭ ಕೋಟಿ ರೂ.ಗಳಾಗಿದ್ದು ೧೭೫ ಮಂದಿ ಕಾರ್ಮಿಕರು ದುಡಿಯುತ್ತಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ ಸ್ಥಾಪನೆಗೊಂಡಿರುವುದರಿಂದ ಸ್ಥಳೀಯವಾಗಿ ಕಾರ್ಮಿಕರು ದೊರಕುತ್ತಿದ್ದು ಪ್ರಸ್ತುತ ಕಾರ್ಮಿಕರ ಸಮಸ್ಯೆ ಇಲ್ಲ. ಉತ್ಪಾದಿಸಲ್ಪಟ್ಟ ಗೋಡಂಬಿಯನ್ನು ದೇಶೀ ಮಾರುಕಟ್ಟೆಯಲ್ಲಿಯೇ ವಿಲೇವಾರಿ ಮಾಡುತ್ತಿದ್ದು ಪ್ರಸ್ತುತ ರಫ್ತು ವ್ಯಾಪಾರವನ್ನು ಮಾಡುತ್ತಿಲ್ಲ. ಸರಕಾರಿ ರಜೆಯನ್ನೊಳಗೊಂಡಂತೆ ಕಾರ್ಮಿಕರಿಗೆ ಪ್ರಾವಿಡೆಂಟ್ ಫಂಡ್, ಬೋನಸ್, ಪೆನ್ಶನ್, ಆರೋಗ್ಯ ನೆರವು ಇತ್ಯಾದಿ ಸೌಲಭ್ಯಗಳು ಇವೆ. ಸ್ವಂತ ಗೇರು ಭೂಮಿಯನ್ನು ಹೊಂದಿರದ ಈ ಘಟಕ ಸಂಪೂರ್ಣವಾಗಿ ಬೇರೆ ಬೇರೆ ರಾಜ್ಯಗಳಿಂದ ಬರುವ ಕಚ್ಚಾಗೇರನ್ನು ನೆಚ್ಚಿಗೊಂಡಿದೆ. ದ. ಕ. ಜಿಲ್ಲೆಯ ಪ್ರಮುಖ ಗೇರು ಉದ್ಯಮಗಳಲ್ಲಿ ಒಂದು ಎಂಬ ಹೆಗ್ಗಳಿಕೆ ಪಡೆದ ಈ ಕಾರ್ಖಾನೆ ರಫ್ತು ವ್ಯಾಪಾರದಲ್ಲೂ ತೊಡಗಿಸಿಕೊಂಡಿದೆ. ಕಳೆದ ಒಂದು ದಶಕದಲ್ಲಿ ಉದ್ಯಮದ ಬೆಳವಣಿಗೆಯ ಚಿತ್ರಣವನ್ನು ಕೋಷ್ಟಕ ೫.೪ ರಲ್ಲಿ ಅಭಿವ್ಯಕ್ತಿಗೊಳಿಸಲಾಗಿದೆ.

ಕೋಷ್ಟಕ ೫.೫ ಶ್ರೀನಿವಾಸ ಕ್ಯಾಶ್ಯೂಸ್, ಬಂಟ್ವಾಳ

ವರ್ಷ	ಪ್ರಮಾಣ (ಕೆ.ಜಿ.ಗಳಲ್ಲಿ)	(ಲಕ್ಷ ರೂ.ಗಳಲ್ಲಿ)				
		ಒಟ್ಟು ಮೌಲ್ಯ	ಒಟ್ಟು ವೆಚ್ಚ)	ದೇಶೀ ಮಾರುಕಟ್ಟೆ ಮೌಲ್ಯ	ನಿರ್ಯಾತ ಮೌಲ್ಯ	ನಿವ್ವಳ ಲಾಭ
೨೦೦೧-೦೨	೨೭೬೦೦೦.೦೦	೪೧೪.೦೦	೨೦೮.೦೦	೨೦೬.೦೦	೧೬೫.೬೦	೨೦೬.೦೦
೨೦೦೨-೦೩	೨೭೦೪೩೫.೪೮	೪೧೯.೧೮	೨೧೦.೬೦	೨೦೮.೫೮	೧೬೭.೬೭	೨೦೮.೫೮
೨೦೦೩-೦೪	೨೭೧೮೫೧.೨೭	೪೨೯.೫೩	೨೧೫.೮೦	೨೧೩.೭೩	೧೭೧.೮೧	೨೧೩.೭೩
೨೦೦೪-೦೫	೨೬೬೫೯೦.೯೧	೪೩೯.೮೮	೨೨೧.೦೦	೨೧೮.೮೮	೧೭೫.೯೫	೨೧೮.೮೮
೨೦೦೫-೦೬	೨೬೩೧೮೫.೭೧	೪೬೦.೫೮	೨೩೧.೪೦	೨೨೯.೧೮	೧೮೪.೨೩	೨೨೯.೧೮
೨೦೦೬-೦೭	೨೩೪೯೭೨.೯೭	೪೩೪.೭೦	೨೧೮.೪೦	೨೧೬.೩೦	೧೭೩.೮೮	೨೧೬.೩೦
೨೦೦೭-೦೮	೨೩೪೨೩೬.೮೪	೪೪೫.೦೫	೨೨೩.೬೦	೨೨೧.೪೫	೧೭೮.೦೨	೨೨೧.೪೫
೨೦೦೮-೦೯	೨೩೦೮೮೪.೬೨	೪೫೦.೨೩	೨೨೬.೨೦	೨೨೪.೦೩	೧೮೦.೦೯	೨೨೪.೦೩
೨೦೦೯-೧೦	೨೨೧೭೮೫.೭೧	೪೬೫.೭೫	೨೩೪.೦೦	೨೩೧.೭೫	೧೮೬.೩೦	೨೩೧.೭೫
೨೦೧೦-೧೧	೨೨೩೧೪೨.೨೦	೪೮೬.೪೫	೨೪೪.೪೦	೨೪೨.೦೫	೧೯೪.೫೮	೨೪೨.೦೫
೨೦೧೧-೧೨	೨೧೫೬೨೫.೦೦	೫೧೭.೫೦	೨೬೦.೦೦	೨೫೭.೫೦	೨೦೭.೦೦	೨೫೭.೫೦

ಮೂಲ:ಕ್ಷೇತ್ರಾಧ್ಯಯನದ ದತ್ತಾಂಶಗಳು

ದೇಶೀ ಮಾರುಕಟ್ಟೆಯನ್ನೇ ಅವಲಂಬಿಸಿರುವ ಈ ಉದ್ಯಮದ ಪ್ರಗತಿ ತೃಪ್ತಿಕರವಾಗಿದ್ದು ಶೇ. ೨೫ ರ ಪ್ರಗತಿಯನ್ನು ಸಾಧಿಸಿದೆ.

ಪ್ರಭಾವ ಕ್ಯಾಶ್ಯೂ ಪ್ರೊಸಸರ್ಸ್ ಬಂಟ್ವಾಳ: ಬಂಟ್ವಾಳ ತಾಲೂಕಿನ ಒಂದು ಪ್ರಮುಖ ಗೇರು ಉದ್ಯಮ ಪ್ರಭಾವ ಕ್ಯಾಶ್ಯೂ ಪ್ರೊಸೆಸರ್ಸ್, ೧೯೮೫ ರಲ್ಲಿ ಸ್ಥಾಪಿಸಲ್ಪಟ್ಟಿದೆ. ಇದರ ಸ್ಥಾಪಕರು ಎಂ. ಸುಬ್ಬಣ್ಣ ಪ್ರಭು. ಆರಂಭಿಕ ರೂ. ೫೦ ಲಕ್ಷ ಬಂಡವಾಳದಿಂದ ಪ್ರಾರಂಭಿಸಲ್ಪಟ್ಟು ಈ ಉದ್ಯಮ ಪ್ರಸ್ತುತ ೧೫೦ ಕಾರ್ಮಿಕರನ್ನೊಳಗೊಂಡು ವ್ಯವಹರಿಸುತ್ತಿದೆ. ಕಳೆದ

ಆರೇಳು ವರ್ಷಗಳಲ್ಲಿ ವ್ಯವಹಾರದ ಮಟ್ಟ ಕಡಿಮೆಯಾಗಿದೆ. ಕಾರ್ಮಿಕರ ಸಮಸ್ಯೆಯೂ ಇದಕ್ಕೆ ಕಾರಣ. ರಫ್ತು ವ್ಯಾಪಾರವನ್ನು ಸಂಪೂರ್ಣವಾಗಿ ಕೈ ಬಿಡಬೇಕಾಗಿ ಬಂದಿದೆ. ವಾರ್ಷಿಕ ವ್ಯವಹಾರದ ಮೊತ್ತ ೧೪.೧೫ ಕೋಟಿ ರೂ.ಗಳಾಗಿದ್ದು ವಾರ್ಷಿಕ ವೆಚ್ಚ ೧೦.೯೧ ಕೋಟಿ ರೂ.ಗಳು. ನಿವ್ವಳ ಲಾಭ ೩.೨೪ ಕೋಟಿಗಳೆಂದು ಅಂದಾಜಿಸಲಾಗಿದೆ. ಕಾರ್ಮಿಕರ ಸಮಸ್ಯೆ ಪ್ರಮುಖವಾಗಿ ಕಾಡುತ್ತಿದ್ದು ವ್ಯವಹಾರದ ಅಭಿವೃದ್ಧಿಗಾಗಿ ವಿಶೇಷ ಪ್ರಯತ್ನ ಕಂಡು ಬರುತ್ತಿಲ್ಲ. ಪ್ರಭಾವ ಕ್ಯಾಶ್ಯೂ ಪ್ರೊಸೆಸರ್ಸ್ ಬಂಟ್ವಾಳ ಇದರ ಒಂದು ದಶಕದ ಬೆಳವಣಿಗೆಯ ಚಿತ್ರಣವನ್ನು ಕೋಷ್ಟಕ ೫.೬ ರಲ್ಲಿ ತೋರಿಸಲಾಗಿದೆ.

ಕೋಷ್ಟಕ ೫.೬ ಪ್ರಭಾವ ಕ್ಯಾಶ್ಯೂ ಪ್ರೊಸಸರ್ಸ್ ಬಂಟ್ವಾಳ

ವರ್ಷ	ಪ್ರಮಾಣ (ಕೆ.ಜಿ.ಗಳಲ್ಲಿ)	ಒಟ್ಟು ಮೌಲ್ಯ ((ಲಕ್ಷ ರೂ.ಗಳಲ್ಲಿ)	ಒಟ್ಟು ವೆಚ್ಚ (ಲಕ್ಷ ರೂ.ಗಳಲ್ಲಿ)	ನಿವ್ವಳ ಲಾಭ (ಲಕ್ಷ ರೂ.ಗಳಲ್ಲಿ)
೨೦೦೧-೦೨	೭೫೪೬೬೬.೬೭	೧೧೩೨.೦೦	೮೯೦.೮೦	೨೪೧.೨೦
೨೦೦೨-೦೩	೭೩೯೪೫೧.೬೧	೧೧೪೬.೧೫	೮೮೩.೭೧	೨೬೨.೪೪
೨೦೦೩-೦೪	೭೪೩೩೨೨.೭೮	೧೧೭೪.೪೫	೯೦೫.೫೩	೨೬೯.೯೨
೨೦೦೪-೦೫	೭೨೮೯೩೯.೩೯	೧೨೦೨.೭೫	೯೨೭.೩೫	೨೭೫.೪೦
೨೦೦೫-೦೬	೭೧೯೬೨೮.೫೭	೧೨೫೯.೩೫	೯೭೦.೯೯	೨೮೮.೩೬
೨೦೦೬-೦೭	೬೪೨೪೯೬.೪೯	೧೧೮೮.೬೦	೯೧೬.೪೪	೨೭೨.೧೬
೨೦೦೭-೦೮	೬೪೦೪೭೩.೬೮	೧೨೧೬.೯೦	೯೩೮.೨೬	೨೭೮.೬೪
೨೦೦೮-೦೯	೬೩೧೩೦೭.೬೯	೧೨೩೧.೦೫	೯೪೯.೧೭	೨೮೧.೮೮
೨೦೦೯-೧೦	೬೦೬೪೨೮.೫೭	೧೨೭೩.೭೦	೯೮೧.೯೦	೨೯೧.೬೦
೨೦೧೦-೧೧	೬೧೦೧೩೭.೬೧	೧೩೩೦.೧೦	೧೦೨೫.೫೪	೩೦೪.೫೬
೨೦೧೧-೧೨	೫೮೯೫೮೩.೩೩	೧೪೧೫.೦೦	೧೧೨೦.೦೦	೨೯೫.೦೦

ಮೂಲ: ಕ್ಷೇತ್ರಾಧ್ಯಯನದ ದತ್ತಾಂಶಗಳು

ಒಂದು ದಶಕದ ಬೆಳವಣಿಗೆಯನ್ನು ವಿಶ್ಲೇಷಿಸಿದಾಗ ಈ ಉದ್ಯಮ ಶೇ. ೨೨ ರ ದರದಲ್ಲಿ ಪ್ರಗತಿ ಹೊಂದುತ್ತಿದೆ ಎಂಬುದು ವೇದ್ಯವಾಗುತ್ತದೆ.

ವಿಜಯ ಕ್ಯಾಶ್ಯೂ ಆಂಡಿಂಜೆ, ಬೆಳ್ತಂಗಡಿ ತಾಲೂಕು: ೨೦೦೮ ರಲ್ಲಿ ಅನಿಲ್ ಪ್ರಭು ಎಂಬುವವರಿಂದ ಸ್ಥಾಪಿಸಲ್ಪಟ್ಟ ಈ ಗೇರು ಕಾರ್ಖಾನೆ ಮಲೆನಾಡ ಬೆಳ್ತಂಗಡಿ ತಾಲೂಕಿನ ಅಡಿಂಜೆ ಎಂಬುವಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಈ ಸಂಸ್ಥೆ ಏಕ ಯಜಮಾನ್ಯ ವ್ಯವಸ್ಥೆಯಲ್ಲಿದೆ. ೨೫ ಲಕ್ಷ ಆರಂಭಿಕ ಬಂಡವಾಳದಿಂದ ಪ್ರಾರಂಭಿಸಲ್ಪಟ್ಟ ಈ ಸಂಸ್ಥೆ ಪ್ರಸ್ತುತ ೮೨ ಜನರಿಗೆ ಉದ್ಯೋಗವನ್ನು ನೀಡುತ್ತಿದ್ದು ಅದರಲ್ಲಿ ೭೫ ಮಂದಿ ಮಹಿಳೆಯರಾಗಿದ್ದಾರೆ. ಒಬ್ಬ ಮೇನೇಜರ್ ಇದ್ದು ಮಾಸಿಕ ೮೦೦೦ ವೇತನ ಪಡೆಯುತ್ತಿದ್ದು ೨ ಮಂದಿ ಮೇಲ್ವಿಚಾರಕರು ತಲಾ ರೂ. ೫೦೦೦ ದಂತೆ ಸಂಬಳ ಪಡೆಯುತ್ತಿದ್ದಾರೆ. ಉಳಿದಂತೆ ೪ ಮಂದಿ ಗಂಡಸರು ಡ್ರೈವರ್ ಆಗಿ, ಸಹಾಯಕರಾಗಿ ಹಾಗೂ ಕಾವಲುಗಾರರಾಗಿ ದಿನಗೂಲಿ ಆಧಾರದಲ್ಲಿ ದುಡಿಯುತ್ತಿದ್ದು ಉಳಿದಂತೆ ೭೫ ಮಂದಿ ಮಹಿಳಾ ಕಾರ್ಮಿಕರು ಇದ್ದಾರೆ. ಸುಮಾರು ವಾರ್ಷಿಕ ರೂ. ೬.೧೭ ಕೋಟಿ ಮೌಲ್ಯದ ಗೋಡಂಬಿ ಉತ್ಪಾದಿಸುತ್ತಿರುವ ಈ

ಸಂಸ್ಥೆಯ ವಾರ್ಷಿಕ ವೆಚ್ಚ ರೂ. ೨.೫೪ ಕೋಟಿಗಳಿಗಿಂತ ಹೆಚ್ಚಾಗುತ್ತದೆ. ಆದರೂ ವರ್ಷದಲ್ಲಿ ೩.೬೩ ಕೋಟಿ ರೂ. ನಿವ್ವಳ ಲಾಭ ಇದೆ. ಸಂಸ್ಥೆಯ ಮಾಲಕರಾದ ಅನಿಲ್ ಪ್ರಭು ಸಂಪೂರ್ಣವಾಗಿ ಆಮದು ಗೇರನ್ನೇ ಅವಲಂಬಿಸಿದ್ದಾರೆ. ಈ ಸಂಸ್ಥೆಗೆ ಸ್ಥಳೀಯವಾಗಿ ಕಚ್ಚಾಗೇರು ಲಭ್ಯವಿಲ್ಲ. ಆದರೆ ಕಾರ್ಮಿಕರ ಲಭ್ಯತೆಯೊಂದೇ ಈ ಉದ್ಯಮದ ಪ್ರಾರಂಭಕ್ಕೆ ಕಾರಣ ಎನ್ನುತ್ತಾರೆ. ಆಸುಪಾಸಿನಲ್ಲಿ ಎಲ್ಲೂ ಬೇರೆ ಯಾವುದೇ ಕಾರ್ಖಾನೆಗಳಾಗಲೀ ಇತರೆ ಆಕರ್ಷಕ ಆರ್ಥಿಕ ಚಟುವಟಿಕೆಗಳಾಗಲೀ ಇಲ್ಲದಿರುವುದರಿಂದ ಕಾರ್ಮಿಕರು ಈ ಸಂಸ್ಥೆಗೆ ದೊರೆಯುತ್ತಾರೆ. ಉತ್ಪಾದಿಸಲ್ಪಟ್ಟ ಗೇರು ಬೀಜಕ್ಕೆ ದೇಶೀ ಮಾರುಕಟ್ಟೆ ಮಾತ್ರವಲ್ಲದೆ ವಿದೇಶೀ ಮಾರುಕಟ್ಟೆಯೂ ಇದೆ. ಸ್ವಂತ ಕೃಷಿ ಭೂಮಿ ಇಲ್ಲದಿರುವುದರಿಂದ ಗೇರು ಬೀಜದ ಉತ್ಪಾದನೆ ಮಾಡುತ್ತಿಲ್ಲ. ಸಂಸ್ಥೆಯ ಕಾರ್ಮಿಕರಿಗೆ ಭಾನುವಾರ ರಜಾ ದಿನವಾಗಿದ್ದು, ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ, ಬೋನಸ್, ಪ್ರಾವಿಡೆಂಟ್ ಫಂಡ್ ಇತ್ಯಾದಿ ಸೌಲಭ್ಯಗಳು ಇವೆ. ವಿದ್ಯುತ್ ನಿಲುಗಡೆಯ ಸಮಸ್ಯೆ ಇದ್ದು ಉಳಿದಂತೆ ಯಾವುದೇ ಸಮಸ್ಯೆ ಇಲ್ಲ. ಕಾರ್ಮಿಕರ ಗೈರು ಹಾಜರಿಯಿಂದಾಗಿ ಉತ್ಪಾದನೆಗೆ ಹಿನ್ನಡೆ ಆಗುವುದುಂಟು. ಸಂಸ್ಥೆಯು ಪ್ರಾರಂಭವಾಗುವಾಗ ಸರಕಾರದಿಂದ ಶೇ. ೧೫ ರಷ್ಟು ಸಹಾಯ ಧನ ದೊರೆತಿದ್ದು ಕಾಲ ಕಾಲಕ್ಕೆ ಸರ್ಕಾರದ ನೆರವು ಸಿಗುತ್ತಿದೆ. ಕರ್ನಾಟಕ ಗೋಡಂಬಿ ತಯಾರಕರ ಸಂಘದಿಂದ ಸೂಕ್ತ ಮಾಹಿತಿ, ಮಾರ್ಗದರ್ಶನ ದೊರೆಯುತ್ತಿದೆ. ಇತ್ತೀಚೆಗಿನ ವರ್ಷಗಳಲ್ಲಿ ಪ್ರಾರಂಭವಾದ ಈ ಉದ್ಯಮ ಉತ್ತಮ ಬೆಳವಣಿಗೆಯನ್ನು ಸಾಧಿಸುತ್ತಿರುವುದು ಕಂಡು ಬಂದಿದೆ. ಉದ್ಯಮದ ಬೆಳವಣಿಗೆಯ ಚಿತ್ರಣವನ್ನು ಕೋಷ್ಟಕ ೫.೭ ರಲ್ಲಿ ದಾಖಲಿಸಲಾಗಿದೆ.

ಕೋಷ್ಟಕ ೫.೭ ವಿಜಯ ಕ್ಯಾಶ್ಯೂ ಆಂಡಿಂಜೆ, ಬೆಳ್ತಂಗಡಿ

ವರ್ಷ	ಪ್ರಮಾಣ (ಕೆ.ಜಿ.ಗಳಲ್ಲಿ)	(ಲಕ್ಷ ರೂ.ಗಳಲ್ಲಿ)				
		ಒಟ್ಟು ಮೌಲ್ಯ	ಒಟ್ಟು ವೆಚ್ಚ	ದೇಶೀ ಮಾರುಕಟ್ಟೆ ಮೌಲ್ಯ	ನಿರ್ಯಾತ ಮೌಲ್ಯ	ನಿವ್ವಳ ಲಾಭ
೨೦೦೯-೧೦	೨೬೪೪೯೨.೮೬	೫೫೫.೪೪	೨೨೮.೧೫	೩೩೩.೨೬	೨೨೨.೧೭	೩೨೭.೨೯
೨೦೧೦-೧೧	೨೬೬೧೧೦.೫೫	೫೮೦.೧೨	೨೩೮.೨೯	೩೪೮.೦೭	೨೩೨.೦೫	೩೪೧.೮೩
೨೦೧೧-೧೨	೨೫೭೧೪೫.೮೩	೬೧೭.೧೫	೨೫೩.೫೦	೩೫೦.೨೯	೨೬೬.೮೬	೩೬೩.೬೫

ಮೂಲ:ಕ್ಷೇತ್ರಾಧ್ಯಯನದ ದತ್ತಾಂಶಗಳು

ಉದಯೋನ್ಮುಖ ಗೇರು ಉದ್ಯಮವಾದ ವಿಜಯ ಕ್ಯಾಶ್ಯೂಸ್ ಪ್ರಾರಂಭದ ವರ್ಷದಿಂದಲೇ ರಫ್ತು ವ್ಯಾಪಾರವನ್ನು ಹೊಂದಿದ್ದು ಒಟ್ಟು ಗಳಿಕೆಯ ಶೇಕಡಾ ೫೭ ರಷ್ಟನ್ನು ದೇಶೀ ಮಾರುಕಟ್ಟೆಯಿಂದಲೂ ಶೇ. ೪೩ ರಷ್ಟನ್ನು ನಿರ್ಯಾತದಿಂದಲೂ ಗಳಿಸಿಕೊಂಡಿದೆ. ಉದ್ಯಮದ ಬೆಳವಣಿಗೆಯ ದರ ಶೇ. ೧೧ ರಷ್ಟಿರುವುದು ಭವಿಷ್ಯದ ಬಗ್ಗೆ ಭರವಸೆಯನ್ನು ಮೂಡಿಸುತ್ತಿದೆ.

ಅಚಲ್ ಇಂಡಸ್ಟ್ರೀಸ್, ಮಂಗಳೂರು: ದ. ಕ. ಜಿಲ್ಲೆಯ ಗೇರು ಉದ್ಯಮದಲ್ಲಿ ಅತ್ಯಂತ ಪ್ರಮುಖ ಉದ್ಯಮಿ ಎನಿಸಿಕೊಂಡಿರುವ ಜಿ. ಗಿರಿಧರ ಪ್ರಭು ಅಚಲ ಇಂಡಸ್ಟ್ರಿಯ ಮಾಲಕರು. ಅವರ ತಂದೆ ಜಿ. ಸದಾನಂದ ಪ್ರಭು ೧೯೮೧ ರಲ್ಲಿ ಇದನ್ನು ಸ್ಥಾಪಿಸಿದರು. ಆರಂಭಿಕ ಬಂಡವಾಳ ಕೇವಲ ರೂ. ೫೦,೦೦೦ವಾಗಿದ್ದರೆ ಇಂದು ವಾರ್ಷಿಕ ಆದಾಯ ೧೪.೯೦ ಕೋಟಿ ಆದಾಯ ಪಡೆಯುತ್ತಿದೆ. ವಾರ್ಷಿಕ ವೆಚ್ಚ ೬.೩೮ ಕೋಟಿ ರೂ.ಗಳಾಗಿದ್ದು ನಿವ್ವಳ ಲಾಭ ೮.೫೨ ಕೋಟಿ ರೂ.ಗಳು. ಹೆಚ್ಚಿನ ವೆಚ್ಚ ಕಾರ್ಮಿಕರಿಗೆ ಹಾಗೂ ಕಚ್ಚಾಗೇರನ್ನು ಪಡೆದುಕೊಳ್ಳುವುದಕ್ಕೆ ವಿನಿಯೋಗವಾಗುತ್ತಿದೆ. ನೆರೆಯ ರಾಜ್ಯಗಳಿಂದ ಸ್ಥಳೀಯ ಮಾರಾಟಗಾರರಿಂದ ಹಾಗೂ ಆಮದು ಗೇರನ್ನು ಕೊಂಡುಕೊಂಡು ಸಂಸ್ಥೆ ಬಳಸುತ್ತಿದೆ. ಪ್ರಸ್ತುತ ಅಚಲ್ ಗೇರು

ಕಾರ್ಖಾನೆಯಲ್ಲಿ ೨ ಮೇನೇಜರ್‌ಗಳಿದ್ದು ಮಾಸಿಕ ತಲಾ ೩೫,೦೦೦ ರೂ. ವೇತನ ಪಡೆಯುತ್ತಿದ್ದಾರೆ. ೧೬ ಜನ ಗುಮಾಸ್ತರು ಕಾರ್ಯ ನಿರ್ವಹಿಸುತ್ತಿದ್ದು ತಲಾ ರೂ. ೧೫,೦೦೦ ದಂತೆ ಮಾಸಿಕ ವೇತನ ಪಡೆಯುತ್ತಿದ್ದಾರೆ. ೨೯ ಮಂದಿ ಗಂಡಸರು ಹಾಗೂ ೩೮೪ ಮಂದಿ ಮಹಿಳಾ ಕಾರ್ಮಿಕರು, ೪ ಮಂದಿ ವಾಹನ ಚಾಲಕರು, ೫ ಮಂದಿ ಮೆಕಾನಿಕ್ ಹಾಗೂ ೫ ಮಂದಿ ಕಾವಲುಗಾರರಿದ್ದು ಇತರೆ ೪೦ ಮಂದಿ ವಿವಿಧ ಸ್ತರಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕಾರ್ಮಿಕರಿಗೆ ಪ್ರಾವಿಡೆಂಟ್ ಫಂಡ್, ಬೋನಸ್, ಆರೋಗ್ಯ ಸವಲತ್ತುಗಳು ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ, ರಜೆ, ಇತ್ಯಾದಿಯಾಗಿ ಎಲ್ಲಾ ವಿಧದ ಸೌಲಭ್ಯಗಳು ದೊರೆಯುತ್ತಿದ್ದು ಅತ್ಯಂತ ಪ್ರತಿಷ್ಠಿತ ಉದ್ಯಮವಾಗಿ ಬೆಳೆದು ನಿಂತಿದೆ. ಮಂಗಳೂರಿನಲ್ಲಿ ಬೆಳೆಯುತ್ತಿರುವ ಮಾಲ್ ಸಂಸ್ಕೃತಿಯಿಂದಾಗಿ ವ್ಯಾಪಾರಿ ಮಳಿಗೆಗಳಲ್ಲಿ ಸುಲಭ ಕೆಲಸಗಳು ಸಾಕಷ್ಟು ಸಿಗುವುದರಿಂದ ಕಾರ್ಖಾನೆಗಳಲ್ಲಿ ದುಡಿಯಲು ಬರುವ ಹೆಣ್ಣು ಮಕ್ಕಳ ಸಂಖ್ಯೆ ಗಣನೀಯವಾಗಿ ಕುಸಿದಿದೆ. ಇದು ಉದ್ಯಮದ ಪ್ರಮುಖ ಸಮಸ್ಯೆಯಾಗಿದೆ. ದ. ಕ. ಜಿಲ್ಲೆಯ ಪ್ರಭಾವಿ ಉದ್ಯಮಗಳಲ್ಲೊಂದಾದ ಈ ಉದ್ಯಮದ ಪ್ರಗತಿಯ ಚಿತ್ರಣವನ್ನು ಕೋಷ್ಟಕ ೫.೮ ರಲ್ಲಿ ದಾಖಲಿಸಲಾಗಿದೆ.

ಕೋಷ್ಟಕ ೫.೮ ಅಚಲ್ ಇಂಡಸ್ಟ್ರೀಸ್, ಮಂಗಳೂರು

ವರ್ಷ	ಪ್ರಮಾಣ (ಕೆ.ಜಿ.ಗಳಲ್ಲಿ)	(ಲಕ್ಷ ರೂ.ಗಳಲ್ಲಿ)				
		ಒಟ್ಟು ಮೌಲ್ಯ	ಒಟ್ಟು ವೆಚ್ಚ	ದೇಶೀ ಮಾರುಕಟ್ಟೆ ಮೌಲ್ಯ	ನಿರ್ಯಾತ ಮೌಲ್ಯ	ನಿವ್ವಳ ಲಾಭ
೨೦೦೧-೦೨	೭೯೪೯೩೩.೩೩	೧೧೯೨.೪೦	೫೧೦.೪೦	೭೧೫.೪೪	೪೭೬.೯೬	೬೮೨.೦೦
೨೦೦೨-೦೩	೭೭೮೯೦೬.೪೫	೧೨೦೭.೩೧	೫೧೬.೭೮	೭೨೪.೩೮	೪೮೨.೯೨	೬೯೦.೫೩
೨೦೦೩-೦೪	೭೮೨೯೮೪.೧೮	೧೨೩೭.೧೨	೫೨೯.೫೪	೭೪೨.೨೭	೪೯೪.೮೫	೭೦೭.೫೮
೨೦೦೪-೦೫	೭೬೭೮೩೩.೩೩	೧೨೬೬.೯೩	೫೪೨.೩೦	೭೬೦.೧೬	೫೦೬.೭೭	೭೨೪.೬೩
೨೦೦೫-೦೬	೭೫೮೦೨೫.೭೧	೧೩೨೬.೫೫	೫೬೭.೮೨	೭೯೫.೯೩	೫೩೦.೬೨	೭೫೮.೭೩
೨೦೦೬-೦೭	೬೭೬೭೬೭.೫೭	೧೨೫೨.೦೨	೫೩೫.೯೨	೭೫೧.೨೧	೫೦೦.೮೧	೭೧೬.೧೦
೨೦೦೭-೦೮	೬೭೪೬೪೭.೩೭	೧೨೮೧.೮೩	೫೪೮.೬೮	೭೬೯.೧೦	೫೧೨.೭೩	೭೩೩.೧೫
೨೦೦೮-೦೯	೬೬೪೯೯೨.೩೧	೧೨೯೬.೭೪	೫೫೫.೦೬	೭೭೮.೦೪	೫೧೮.೬೯	೭೪೧.೬೮
೨೦೦೯-೧೦	೬೩೮೭೮೫.೭೧	೧೩೪೧.೪೫	೫೭೪.೨೦	೮೦೪.೮೭	೫೩೬.೫೮	೭೬೭.೨೫
೨೦೧೦-೧೧	೬೪೨೬೯೨.೬೬	೧೪೦೧.೦೭	೫೯೯.೭೨	೮೪೦.೬೪	೫೬೦.೪೩	೮೦೧.೩೫
೨೦೧೧-೧೨	೬೨೧೦೪೧.೬೭	೧೪೯೦.೫೦	೬೩೮.೦೦	೯೯೪.೩೦	೪೯೬.೨೦	೮೫೨.೫೦

ಮೂಲ: ಕ್ಷೇತ್ರಾಧ್ಯಯನದ ದತ್ತಾಂಶಗಳು

ಕಳೆದ ೧೨ ವರ್ಷಗಳ ಪ್ರಗತಿ ಪಥದಲ್ಲಿ ಶೇ. ೨೫ ರ ದರದಲ್ಲಿ ಬೆಳವಣಿಗೆಯನ್ನು ಸಾಧಿಸಿರುವ ಉದ್ಯಮ ೨೦೧೧-೧೨ ನೇ ಸಾಲಿನಲ್ಲಿ ಒಟ್ಟು ಆದಾಯದ ಶೇ.೬೭ರಷ್ಟನ್ನು ದೇಶೀ ಮಾರುಕಟ್ಟೆಯಿಂದ ಪಡೆಯುತ್ತಿದೆ. ಮೌಲ್ಯ ವರ್ಧಿತ ಗೋಡಂಬಿ ತಯಾರಿಕೆಯಲ್ಲಿ ವಿಶೇಷ ಆಸಕ್ತಿಯನ್ನು ಹೊಂದಿರುವ ಅಚಲ್ ಇಂಡಸ್ಟ್ರೀಸ್ ವಿದೇಶಿ ಮಾರುಕಟ್ಟೆಯಿಂದಲೂ ಶೇ. ೩೩ ರಷ್ಟು ಆದಾಯವನ್ನು ಗಳಿಸುತ್ತಿದೆ.

ಕಲಬಾವಿ ಕ್ಯಾಶ್ಯೂಸ್, ಮಂಗಳೂರು: ಮಂಗಳೂರಿನ ಮತ್ತೊಂದು ಪ್ರತಿಷ್ಠಿತ ಗೇರು ಕಾರ್ಖಾನೆ ಕಲಬಾವಿ ಕ್ಯಾಶ್ಯೂಸ್. ೧೯೮೭ ರಲ್ಲಿ ಸ್ಥಾಪನೆಗೊಂಡ ಈ ಸಂಸ್ಥೆ ಪಾಲುದಾರಿಕೆಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಕೆ. ರಾಮಚಂದ್ರ ರಾವ್ ಮತ್ತು ಕೆ.

ಪ್ರಕಾಶ್ ರಾವ್ ಎಂಬುವವರಿಂದ ಪ್ರಾರಂಭಿಸಲ್ಪಟ್ಟ ಈ ಸಂಸ್ಥೆ ಪ್ರಸ್ತುತ ಕೆ. ಪ್ರಕಾಶ್ ರಾವ್ ಹಾಗೂ ಗೌರಿ ಪಿ. ರಾವ್ ಅವರ ಪಾಲುದಾರಿಕೆಯಲ್ಲಿ ನಡೆಯುತ್ತಿದೆ. ಇದರ ಆರಂಭಿಕ ಬಂಡವಾಳ ೮ ಲಕ್ಷ ರೂ.ಗಳಾಗಿದ್ದು ವಾರ್ಷಿಕ ಒಟ್ಟು ಆದಾಯ ೧೩.೩೮ ಕೋಟಿ ರೂ., ವಾರ್ಷಿಕ ಖರ್ಚು ೯.೫೯ ಕೋಟಿ ರೂ. ಆಗಿದ್ದು ವಾರ್ಷಿಕ ಲಾಭ ೩.೭೯ ಕೋಟಿ ರೂ.ಗಳು ಎಂದು ಅಂದಾಜಿಸಲಾಗಿದೆ. ಸುಮಾರು ೨೨೦ ಮಹಿಳಾ ಕಾರ್ಮಿಕರನ್ನೊಳಗೊಂಡಂತೆ ೨ ಮೇನೇಜರ್‌ಗಳು, ೪ ಗುಮಾಸ್ತರು, ೩ ವಾಹನ ಚಾಲಕರು, ೩ ಮೇಲ್ವಿಚಾರಕರು, ೨ ಕಾವಲುಗಾರರು ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕಾರ್ಮಿಕರ ಸಮಸ್ಯೆ ಈ ಸಂಸ್ಥೆಯಲ್ಲೂ ಇದೆ. ಪ್ರಕಾಶ್ ಕಲಬಾವಿಯವರು ಹೇಳುವಂತೆ ಹೆಚ್ಚು ಹೆಚ್ಚಾಗಿ ಯಾಂತ್ರೀಕರಣ ಮಾಡಿದರೆ ಕಾರ್ಮಿಕ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದಾದರೂ ಯಾಂತ್ರೀಕರಣದಿಂದಾಗಿ ದೊಡ್ಡ ಉದ್ಯಮಿಗಳು ಗೇರು ಉದ್ಯಮವನ್ನು ಪ್ರವೇಶಿಸಬಹುದು. ಆಗ ಗೇರು ಉದ್ಯಮ ಸಣ್ಣ ಉದ್ಯಮವಾಗಿ ಉಳಿಯಲು ಸಾಧ್ಯವಿಲ್ಲ. ಆಗ ಅದು ದೊಡ್ಡ ಕೈಗಾರಿಕೋದ್ಯಮಿಗಳ ಪಾಲಾಗಬಹುದು ಎಂಬ ಆತಂಕ ಮಾಲಿಕರಲ್ಲಿದೆ. ದಕ್ಷಿಣ ಕನ್ನಡ ಜಿಲ್ಲೆಯ ಮತ್ತೊಂದು ಪ್ರಮುಖ ಉದ್ಯಮವಾಗಿರುವ ಈ ಉದ್ಯಮದ ಪ್ರಗತಿಯನ್ನು ಕೋಷ್ಟಕ ೫.೯ ರಲ್ಲಿ ದಾಖಲಿಸಲಾಗಿದೆ.

ಕೋಷ್ಟಕ ೫.೯ ಕಲಬಾವಿ ಕ್ಯಾಶ್ಯೂಸ್, ಮಂಗಳೂರು

ವರ್ಷ	ಪ್ರಮಾಣ (ಕೆ.ಜಿ.ಗಳಲ್ಲಿ)	(ಲಕ್ಷ ರೂ.ಗಳಲ್ಲಿ)				
		ಒಟ್ಟು ಮೌಲ್ಯ	ಒಟ್ಟು ವೆಚ್ಚ	ದೇಶೀ ಮಾರುಕಟ್ಟೆ ಮೌಲ್ಯ	ನಿರ್ಯಾತ ಮೌಲ್ಯ	ನಿವ್ವಳ ಲಾಭ
೨೦೦೧-೦೨	೬೬೦೨೬೬.೬೭	೯೯೦.೪೦	೭೬೭.೨೦	೫೯೪.೨೪	೩೯೬.೧೬	೨೨೩.೨೦
೨೦೦೨-೦೩	೬೪೬೯೫೪.೮೪	೧೦೦೨.೭೮	೭೭೬.೭೯	೬೦೧.೬೭	೬೦೧.೧೧	೨೨೫.೯೯
೨೦೦೩-೦೪	೬೫೦೩೪೧.೭೭	೧೦೨೭.೫೪	೭೯೫.೯೭	೬೧೬.೫೨	೪೧೧.೦೨	೨೩೧.೫೭
೨೦೦೪-೦೫	೬೩೭೭೫೭.೫೮	೧೦೫೨.೩೦	೮೧೫.೧೫	೬೩೧.೩೮	೪೨೦.೯೨	೨೩೭.೧೫
೨೦೦೫-೦೬	೬೨೯೬೧೧.೪೩	೧೧೦೧.೮೨	೮೫೩.೫೧	೬೬೧.೦೯	೪೪೦.೭೩	೨೪೮.೩೧
೨೦೦೬-೦೭	೫೬೨೧೧೮.೯೨	೧೦೩೯.೯೨	೮೦೫.೫೬	೬೨೩.೯೫	೪೧೫.೯೭	೨೩೪.೩೬
೨೦೦೭-೦೮	೫೬೦೩೫೭.೮೯	೧೦೬೪.೬೮	೮೨೪.೭೪	೬೩೮.೮೧	೪೨೫.೮೭	೨೩೯.೯೪
೨೦೦೮-೦೯	೫೫೨೩೩೮.೪೬	೧೦೭೭.೦೬	೮೩೪.೩೩	೬೪೬.೨೪	೪೩೦.೮೨	೨೪೨.೭೩
೨೦೦೯-೧೦	೫೩೦೫೭೧.೪೩	೧೧೧೪.೨೦	೮೬೩.೧೦	೬೬೮.೫೨	೪೪೫.೬೮	೨೫೧.೧೦
೨೦೧೦-೧೧	೫೩೩೮೧೬.೫೧	೧೧೬೩.೭೨	೯೦೧.೪೬	೬೯೮.೨೩	೪೬೫.೪೯	೨೬೨.೨೬
೨೦೧೧-೧೨	೫೧೫೮೩೩.೩೩	೧೩೩೮.೦೦	೯೫೯.೦೦	೮೮೦.೮೦	೪೫೭.೨೦	೩೭೯.೦೦

ಮೂಲ: ಕ್ಷೇತ್ರಾಧ್ಯಯನದ ದತ್ತಾಂಶಗಳು

ಕಳೆದ ೧೨ ವರ್ಷಗಳಲ್ಲಿ ಉದ್ಯಮವು ಶೇ. ೩೫ ರ ದರದಲ್ಲಿ ಪ್ರಗತಿ ಸಾಧಿಸಿದ್ದು ೨೦೧೧-೧೨ ರ ಆದಾಯದಲ್ಲಿ ಶೇ.೬೬ ರಷ್ಟು ಮೊತ್ತವನ್ನು ದೇಶೀ ಮಾರುಕಟ್ಟೆಯಿಂದಲೂ, ಶೇ. ೩೪ ರಷ್ಟು ಮೊತ್ತವನ್ನು ನಿರ್ಯಾತದಿಂದಲೂ ಗಳಿಸಿರುವುದು ಕಂಡು ಬರುತ್ತದೆ.

ಕಾರ್ತಿಕೇಯ ಎಂಟರ್ ಪ್ರೈಸಸ್ ಮೂಡಬಿದಿರೆ: ಮಂಗಳೂರು ತಾಲೂಕಿನ ಮೂಡಬಿದಿರೆ ಸಮೀಪ ಮಾವಿನಕಟ್ಟೆ ಎಂಬಲ್ಲಿ ಈ ಸಂಸ್ಥೆ ೨೦೧೦ ರಲ್ಲಿ ಪ್ರಾರಂಭಿಸಲ್ಪಟ್ಟಿತು. ಶ್ರೀಮತಿ ಸುಜಾತ ವಾಸುದೇವ ಎಂಬವರ ಮಾಲಕತ್ವದಲ್ಲಿ ರೂ. ೪೦ ಲಕ್ಷ ಆರಂಭಿಕ ಬಂಡವಾಳದಿಂದ ಈ ಉದ್ಯಮ ಪ್ರಾರಂಭಿಸಲ್ಪಟ್ಟಿದ್ದು ಪ್ರಸ್ತುತ ರೂ. ೩.೫೪ ಕೋಟಿಗಳಷ್ಟು ವ್ಯವಹಾರ ನಡೆಸುತ್ತಿದೆ. ವಾರ್ಷಿಕ ಖರ್ಚು ೩.೧೫ ಕೋಟಿ ರೂ.ಗಳಾಗಿದ್ದು ಲಾಭ ರೂ. ೩೮ ಲಕ್ಷ ರೂ.ಗಳು. ಕೇವಲ ೪ ವರ್ಷಗಳಲ್ಲಿ ಉದ್ಯಮದಲ್ಲಿ

ದೊಡ್ಡ ಮೊತ್ತದ ಲಾಭ ಪಡೆಯುತ್ತಿರುವುದು ಸಂಸ್ಥೆಯ ಹೆಗ್ಗಳಿಕೆ. ಕಚ್ಚಾಗೇರು ಬೀಜವನ್ನು ನೆರೆಯ ರಾಜ್ಯಗಳಿಂದ ಹಾಗೂ ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳುತ್ತಿದ್ದು ಬಹುತೇಕ ಉತ್ಪನ್ನವನ್ನು ರಫ್ತು ಮಾಡುತ್ತಿದೆ. ಸ್ವತಂತ್ರ ಗೇರು ಕೃಷಿ ಭೂಮಿಯನ್ನು ಹೊಂದುವ ಆಸಕ್ತಿ ಇವರಿಗೆ ಇಲ್ಲ. ಸುಸಜ್ಜಿತ ಕಟ್ಟಡ, ಕಾರ್ಮಿಕರಿಗೆ ಮೂಲಭೂತ ಸೌಲಭ್ಯಗಳೊಂದಿಗೆ ಪ್ರಾವಿಡೆಂಟ್ ಫಂಡ್, ಬೋನಸ್ ಇತ್ಯಾದಿ ಸೌಲಭ್ಯಗಳನ್ನು ನೀಡುತ್ತಿದ್ದು ಪ್ರಸ್ತುತ ೧೩೭ ಮಹಿಳಾ ಕಾರ್ಮಿಕರನ್ನೊಳಗೊಂಡಂತೆ ೧೫೫ ಕಾರ್ಮಿಕರು ಇಲ್ಲಿ ದುಡಿಯುತ್ತಿದ್ದಾರೆ. ಸರಕಾರದಿಂದ ಯಾವುದೇ ವಿಶೇಷ ಸೌಲಭ್ಯಗಳನ್ನು ಪಡೆದುಕೊಂಡಿಲ್ಲ. ಉದ್ಯಮದ ಪ್ರಗತಿಯನ್ನು ಕೋಷ್ಟಕ ೫.೧೦ ರಲ್ಲಿ ದಾಖಲಿಸಲಾಗಿದೆ

ಕೋಷ್ಟಕ ೫.೧೦ ಕಾರ್ತಿಕೇಯ ಎಂಟರ್ ಪ್ರೈಸಸ್ ಮೂಡಬಿದಿರೆ

ವರ್ಷ	ಪ್ರಮಾಣ (ಕೆ.ಜಿ.ಗಳಲ್ಲಿ)	(ಲಕ್ಷ ರೂ.ಗಳಲ್ಲಿ)				
		ಒಟ್ಟು ಮೌಲ್ಯ	ಒಟ್ಟು ವೆಚ್ಚ	ದೇಶೀ ಮಾರುಕಟ್ಟೆ ಮೌಲ್ಯ	ನಿರ್ಯಾತ ಮೌಲ್ಯ	ನಿವ್ವಳ ಲಾಭ
೨೦೧೦-೧೧	೧೫೨೭೫೬.೯೦	೩೩೩.೦೧	೨೯೬.೬೬	೧೯೯.೮೧	೧೩೩.೨೦	೩೬.೩೫
೨೦೧೧-೧೨	೧೪೭೬೧೦.೮೩	೩೫೪.೨೭	೩೧೫.೫೯	೨೧೨.೫೬	೧೪೧.೭೧	೩೮.೬೮

ಮೂಲ: ಕ್ಷೇತ್ರಾಧ್ಯಯನದ ದತ್ತಾಂಶಗಳು

೨೦೧೧-೧೨ ರ ಒಟ್ಟು ಗಳಿಕೆಯಲ್ಲಿ ಶೇ. ೬೦ ರಷ್ಟನ್ನು ದೇಶೀ ಮಾರುಕಟ್ಟೆಯಿಂದಲೂ ಶೇ. ೪೦ ರಷ್ಟನ್ನು ನಿರ್ಯಾತದಿಂದಲೂ ಗಳಿಸಿರುವ ಉದ್ಯಮವು ೨೦೧೧-೧೨ರ ಅವಧಿಯಲ್ಲಿ ರೂ. ೩೮ ಲಕ್ಷಗಳಷ್ಟು ನಿವ್ವಳ ಲಾಭ ಪಡೆದಿರುವುದು ಭವಿಷ್ಯದ ಬಗ್ಗೆ ಭರವಸೆಯನ್ನು ಮೂಡಿಸಿದೆ.

ಧನಲಕ್ಷ್ಮೀ ಕ್ಯಾಶ್ಯೂ ಎಕ್ಸ್‌ಪೋರ್ಟ್ ಪ್ರೈವೇಟ್ ಲಿಮಿಟೆಡ್, ಮೂಡಬಿದ್ರೆ ಮಂಗಳೂರು ತಾಲೂಕು: ಮಂಗಳೂರು ತಾಲೂಕಿನ ಮೂಡಬಿದ್ರೆಯಲ್ಲಿ ೧೯೮೫ ರಲ್ಲಿ ಸ್ಥಾಪನೆಗೊಂಡ ಈ ಗೇರು ಉದ್ಯಮದ ಸಂಸ್ಥಾಪಕರು ಕೆ. ಶ್ರೀಪತಿ ಭಟ್. ಗೇರು ಬೀಜ ಮಾರಾಟಗಾರರಾಗಿದ್ದ ಕೆ. ಶ್ರೀಪತಿ ಭಟ್ ರವರು ಕ್ರಮೇಣ ೪ ಲಕ್ಷ ಆರಂಭಿಕ ಬಂಡವಾಳ ಹೂಡಿ ಮೂಡಬಿದ್ರೆಯಲ್ಲಿ ಗೇರು ಉದ್ಯಮ ಪ್ರಾರಂಭಿಸಿದರು. ಸ್ವಂತ ಗೇರು ಬೀಜ ಬೆಳೆಯುವ ಭೂಮಿ ಇದ್ದರೂ ತಮ್ಮ ಉದ್ಯಮಕ್ಕೆ ಬೇಕಾದ ಕಚ್ಚಾಗೇರನ್ನು ಸ್ಥಳೀಯ ಮಾರಾಟಗಾರರಿಂದ, ಪಕ್ಕದ ರಾಜ್ಯಗಳಿಂದ ಹಾಗೂ ವಿದೇಶಗಳಿಂದ ಕೊಂಡುಕೊಳ್ಳುತ್ತಿದ್ದಾರೆ. ಹಾಗೆಯೇ ಸಂಸ್ಕರಿಸಲ್ಪಟ್ಟ ಗೋಡಂಬಿಯನ್ನು ದೇಶೀ ಮಾರುಕಟ್ಟೆಯಲ್ಲಿ ಮಾರುವುದಲ್ಲದೆ ವಿದೇಶಗಳಿಗೂ ರಫ್ತು ಮಾಡುತ್ತಿದ್ದು ವಾರ್ಷಿಕ ೧೧.೧೨ ಕೋಟಿ ರೂ.ಗಳಷ್ಟು ವ್ಯವಹಾರ ನಡೆಸುತ್ತಿದ್ದಾರೆ. ವಾರ್ಷಿಕ ಖರ್ಚು ೬.೪೧ ಕೋಟಿ ರೂ.ಗಳಾಗಿದ್ದು ೪.೭೧ ಕೋಟಿ ನಿವ್ವಳ ಲಾಭ ಗಳಿಸಲಾಗುತ್ತಿದೆ. ಒಬ್ಬ ಮೇನೇಜರ್, ೬ ಮಂದಿ ಮೇಲ್ವಿಚಾರಕರು, ೭ ಮಂದಿ ಪುರುಷ ಕಾರ್ಮಿಕರು ಹಾಗೂ ೧೩೦ ಮಂದಿ ಮಹಿಳಾ ಕಾರ್ಮಿಕರನ್ನು ಒಬ್ಬ ವಾಹನ ಚಾಲಕ ಹಾಗೂ ಒಬ್ಬ ಕಾವಲು ಸಿಬ್ಬಂದಿಯನ್ನು ಈ ಸಂಸ್ಥೆ ಹೊಂದಿದ್ದು, ಸರ್ಕಾರದ ನಿಯಮಗಳಿಗನುಸಾರವಾಗಿ ವೇತನ ನೀಡುತ್ತಿದೆ. ಕಾರ್ಮಿಕರಿಗೆ ಪ್ರಾವಿಡೆಂಟ್ ಫಂಡ್, ಬೋನಸ್, ರಜೆ, ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ, ಹೆರಿಗೆ ರಜೆ ಇತ್ಯಾದಿ ಸೌಲಭ್ಯಗಳನ್ನು ನೀಡುತ್ತಿದ್ದಾರೆ. ಕಳೆದ ಮೂವತ್ತು ವರ್ಷಗಳಿಂದ ಗೇರು ಉದ್ಯಮವನ್ನು ನಿರಂತರವಾಗಿ ಮುನ್ನಡೆಸಿಕೊಂಡು ಬರುತ್ತಿರುವ ಈ ಉದ್ಯಮದ ಮಾಲಿಕರು ಕಾರ್ಮಿಕರೊಂದಿಗೆ ಭಾವನಾತ್ಮಕ ಸಂಬಂಧವನ್ನಿರಿಸಿಕೊಂಡಿದ್ದು ಕಾರ್ಮಿಕರ ಮಕ್ಕಳ ಶಿಕ್ಷಣ ವೆಚ್ಚವನ್ನು ಭರಿಸುತ್ತಿದ್ದಾರೆ. ಮಕ್ಕಳಿಗೆ ಶಾಲೆಗೆ ಹೋಗಲು ಪುಸ್ತಕ, ಶುಲ್ಕ ಇತ್ಯಾದಿ ಸಹಾಯವಲ್ಲದೆ ಕಾರ್ಮಿಕರಿಗೆ ಸಾಲ ಸೌಲಭ್ಯವನ್ನು ನೀಡಿ

ಸಹಕರಿಸುತ್ತಿದ್ದಾರೆ. ಪ್ರಸ್ತುತ ಆಮದು ಗೇರು ಬೀಜವನ್ನೇ ಹೆಚ್ಚಾಗಿ ಅವಲಂಬಿಸಿಕೊಂಡಿರುವ ಗೇರು ಕಾರ್ಖಾನೆಗಳು ಮುಂದಿನ ವರ್ಷಗಳಲ್ಲಿ ಆಮದು ಗೇರಿನ ಪೂರೈಕೆ ನಿಂತು ಬಿಟ್ಟರೆ ಉದ್ಯಮ ತೀವ್ರ ಸಂಕಷ್ಟಕ್ಕೆ ಒಳಗಾಗುವ ಸಾಧ್ಯತೆಗಳಿವೆ ಎಂಬುದು ಉದ್ಯಮದ ಮಾಲಿಕರ ಅನಿಸಿಕೆ. ದ.ಕ. ಜಿಲ್ಲೆಯ ಪ್ರತಿಷ್ಠಿತ ಗೇರು ಉದ್ಯಮವಾದ ಇದರ ಬೆಳವಣಿಗೆಯನ್ನು ಕೋಷ್ಟಕ ೫.೧೧ ರಲ್ಲಿ ದಾಖಲಿಸಲಾಗಿದೆ.

ಕೋಷ್ಟಕ ೫.೧೧ ಧನಲಕ್ಷ್ಮೀ ಕ್ಯಾಶ್ಯೂ ಎಕ್ಸ್‌ಪೋರ್ಟ್ ಪ್ರೈವೇಟ್ ಲಿಮಿಟೆಡ್, ಮೂಡಬಿದ್ರೆ

ವರ್ಷ	ಪ್ರಮಾಣ (ಕೆ.ಜಿ.ಗಳಲ್ಲಿ)	(ಲಕ್ಷ ರೂ.ಗಳಲ್ಲಿ)				
		ಒಟ್ಟು ಮೌಲ್ಯ	ಒಟ್ಟು ವೆಚ್ಚ	ದೇಶೀ ಮಾರುಕಟ್ಟೆ ಮೌಲ್ಯ	ನಿರ್ಯಾತ ಮೌಲ್ಯ	ನಿವ್ವಳ ಲಾಭ
೨೦೦೧-೦೨	೬೧೨೨೬೬.೬೭	೯೧೮.೪೦	೫೧೨.೮೦	೫೫೧.೦೪	೩೬೭.೩೬	೪೦೫.೬೦
೨೦೦೨-೦೩	೫೯೯೯೨೨.೫೮	೯೨೯.೮೮	೫೧೯.೨೧	೫೫೭.೯೩	೩೭೧.೯೫	೪೧೦.೫೯
೨೦೦೩-೦೪	೬೦೩೦೬೩.೨೯	೯೫೨.೮೪	೫೩೨.೦೩	೫೭೧.೭೦	೩೮೧.೧೪	೪೨೦.೮೧
೨೦೦೪-೦೫	೫೯೧೩೯೩.೯೪	೯೭೫.೮೦	೫೫೪.೮೫	೫೮೫.೪೮	೩೯೦.೩೨	೪೩೦.೯೫
೨೦೦೫-೦೬	೫೮೩೮೪೦.೦೦	೧೦೨೧.೭೨	೫೭೦.೪೯	೬೧೩.೦೩	೪೦೮.೬೯	೪೫೧.೨೩
೨೦೦೬-೦೭	೫೨೧೨೫೪.೦೫	೯೬೪.೩೨	೫೩೮.೪೪	೫೭೮.೫೯	೩೮೫.೭೩	೪೨೫.೮೮
೨೦೦೭-೦೮	೫೧೯೬೨೧.೦೫	೯೮೭.೨೮	೫೫೧.೨೬	೫೯೨.೩೭	೩೯೪.೯೧	೪೩೬.೦೨
೨೦೦೮-೦೯	೫೧೨೧೮೪.೬೨	೯೯೮.೭೬	೫೫೭.೬೭	೫೯೯.೨೬	೩೯೯.೫೦	೪೪೧.೦೯
೨೦೦೯-೧೦	೪೯೨೦೦೦.೦೦	೧೦೩೩.೨೦	೫೭೬.೯೦	೬೧೯.೯೨	೪೧೩.೨೮	೪೫೬.೩೦
೨೦೧೦-೧೧	೪೯೫೦೦೯.೧೭	೧೦೭೯.೧೨	೬೦೨.೫೪	೬೪೭.೪೭	೪೩೧.೬೫	೪೭೬.೫೮
೨೦೧೧-೧೨	೪೭೮೩೩೩.೩೩	೧೧೧೨.೦೦	೬೪೧.೦೦	೬೮೮.೮೦	೪೨೩.೨೦	೪೭೧.೦೦

ಮೂಲ: ಕ್ಷೇತ್ರಾಧ್ಯಯನದ ದತ್ತಾಂಶಗಳು

೨೦೦೧-೦೨ ಹಾಗೂ ೨೦೧೧-೧೨ ರ ಅವಧಿಯಲ್ಲಿ ಶೇ. ೨೧ ರ ದರದಲ್ಲಿ ಅಭಿವೃದ್ಧಿ ಹೊಂದಿದ ಈ ಸಂಸ್ಥೆ ಪ್ರಸ್ತುತ ಒಟ್ಟು ಆದಾಯದಲ್ಲಿ ಶೇ. ೬೨ ರಷ್ಟು ಆದಾಯವನ್ನು ದೇಶೀ ಮಾರುಕಟ್ಟೆಯಿಂದಲೂ ಶೇ.೩೮ರಷ್ಟು ಆದಾಯವನ್ನು ನಿರ್ಯಾತದಿಂದಲೂ ಗಳಿಸಿಕೊಂಡಿದೆ.

ಕರ್ನಾಟಕ ಕ್ಯಾಶ್ಯೂ ಇಂಡಸ್ಟ್ರೀಸ್ ಪುತ್ತೂರು: ಇದು ಪುತ್ತೂರು ತಾಲೂಕಿನ ಒಂದು ಗೇರು ಕಾರ್ಖಾನೆ. ಕರ್ನಾಟಕ ಕ್ಯಾಶ್ಯೂ ಇಂಡಸ್ಟ್ರೀಸ್ ೧೯೯೨ ರಲ್ಲಿ ನಿವೃತ್ತ ಬ್ಯಾಂಕ್ ಅಧಿಕಾರಿಯಾಗಿದ್ದ ಎ.ಬಿ. ವೇಗಸ್ ಎಂಬುವವರು ಪುತ್ತೂರಿನ ಕೂರ್ನಡ್ಕ ಎಂಬಲ್ಲಿ ರೂ. ಹದಿನೈದು ಲಕ್ಷಗಳ ಆರಂಭಿಕ ಬಂಡವಾಳದೊಂದಿಗೆ ಗೇರು ಉದ್ಯಮ ಪ್ರಾರಂಭಿಸಿದರು. ಪ್ರಸ್ತುತ ೬.೧೩ ಕೋಟಿ ರೂ.ಗಳ ವಾರ್ಷಿಕ ವ್ಯವಹಾರ ನಡೆಸುತ್ತಿದ್ದು ವಾರ್ಷಿಕ ಖರ್ಚು ರೂ. ೧.೫೧ ಕೋಟಿ ಆಗಿರುತ್ತದೆ. ನಿವ್ವಳ ಲಾಭ ೪.೬೨ ಕೋಟಿ ರೂ.ಗಳು. ೧೩೫ ಕಾರ್ಮಿಕರನ್ನು ಹೊಂದಿದ ಈ ಕಾರ್ಖಾನೆ ಕಳೆದ ಎರಡು ವರ್ಷಗಳಿಂದ ರಫ್ತು ವ್ಯಾಪಾರವನ್ನು ನಿಲ್ಲಿಸಿದ್ದು ದೇಶೀ ಮಾರುಕಟ್ಟೆಗೆ ಮಾತ್ರ ಗೋಡಂಬಿಯನ್ನು ಪೂರೈಸುತ್ತಿದೆ. ೧೩೫ ಕಾರ್ಮಿಕರಲ್ಲಿ ೧೧೩ ಮಂದಿ ಮಹಿಳಾ ಕಾರ್ಮಿಕರು, ಉಳಿದಂತೆ ಗುಮಾಸ್ತೆ, ಮೆಕಾನಿಕ್, ಮೇಲ್ವಿಚಾರಕರು, ಕಾವಲು ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದು ಸರಕಾರದ ನಿಯಮಾನುಸಾರ ವೇತನ, ಭತ್ಯೆ, ಪ್ರೊವಿಡೆಂಟ್ ಫಂಡ್, ವೈದ್ಯಕೀಯ ಸೌಲಭ್ಯಗಳನ್ನು

ಪಡೆಯುತ್ತಿದ್ದಾರೆ. ಕಾರ್ಮಿಕರ ಕೊರತೆ ಹಾಗೂ ವಿದ್ಯುತ್ ನಿಲುಗಡೆ ಉದ್ಯಮದ ಪ್ರಮುಖ ಸಮಸ್ಯೆಯಾಗಿದೆ. ಸರಕಾರದಿಂದ ಯಾವುದೇ ವಿಶೇಷ ಸೌಲಭ್ಯಗಳು ಇಲ್ಲ. ೨೦೦೬ ರಲ್ಲಿ ಹೊಸತಾಗಿ ಸೇರಿದ ಉದ್ಯೋಗಿಗಳಿಗೆ ಮಾಸಿಕ ಸ್ಟೈಫಂಡರಿ ರೂ. ೭೫೦ನ್ನು ಸರಕಾರ ಕೊಡುತ್ತಿದ್ದು ಈಗ ಆ ಸೌಲಭ್ಯ ಕೂಡ ಇಲ್ಲವಾಗಿದೆ. ದಶಕಗಳ ವ್ಯವಹಾರವನ್ನು ಕೋಷ್ಟಕ ೫.೧೨ ರಲ್ಲಿ ದಾಖಲಿಸಲಾಗಿದೆ.

ಕೋಷ್ಟಕ ೫.೧೨ ಕರ್ನಾಟಕ ಕ್ಯಾಶ್ಯೂ ಇಂಡಸ್ಟ್ರೀಸ್ ಪುತ್ತೂರು

ವರ್ಷ	ಪ್ರಮಾಣ (ಕೆ.ಜಿ.ಗಳಲ್ಲಿ)	(ಲಕ್ಷ ರೂ.ಗಳಲ್ಲಿ)				
		ಒಟ್ಟು ಮೌಲ್ಯ	ಒಟ್ಟು ವೆಚ್ಚ	ದೇಶೀ ಮಾರುಕಟ್ಟೆ ಮೌಲ್ಯ	ನಿರ್ಯಾತ ಮೌಲ್ಯ	ನಿವ್ವಳ ಲಾಭ
೨೦೦೧-೦೨	೩೨೬೯೮೬.೬೭	೪೯೦.೪೮	೧೨೦.೮೦	೨೯೪.೨೯	೧೯೬.೧೯	೩೬೯.೬೮
೨೦೦೨-೦೩	೩೨೦೩೯೪.೧೯	೪೯೬.೬೧	೧೨೨.೩೧	೨೯೭.೯೭	೧೯೮.೬೪	೩೭೪.೩೦
೨೦೦೩-೦೪	೩೨೨೦೭೧.೫೨	೫೦೮.೮೭	೧೨೫.೩೩	೩೦೫.೩೨	೨೦೩.೫೫	೩೮೩.೫೪
೨೦೦೪-೦೫	೩೧೫೮೩೯.೩೯	೫೨೧.೧೪	೧೨೮.೩೫	೩೧೨.೬೮	೨೦೮.೪೫	೩೯೨.೭೯
೨೦೦೫-೦೬	೩೧೧೮೦೫.೧೪	೫೪೫.೬೬	೧೩೪.೩೯	೩೨೭.೪೦	೨೧೮.೨೬	೪೧೧.೨೭
೨೦೦೬-೦೭	೨೭೮೩೮೦.೫೪	೫೧೫.೦೦	೧೨೬.೮೪	೩೦೯.೦೦	೨೦೬.೦೦	೩೮೮.೮೨
೨೦೦೭-೦೮	೨೭೭೫೦೮.೪೨	೫೨೭.೨೭	೧೨೯.೮೬	೩೧೬.೩೬	೨೧೦.೯೧	೩೯೭.೪೧
೨೦೦೮-೦೯	೨೭೩೫೩೬.೯೨	೫೩೩.೪೦	೧೩೧.೩೭	೫೩೩.೪೦	–	೪೦೨.೦೩
೨೦೦೯-೧೦	೨೬೨೭೫೭.೧೪	೫೫೧.೭೯	೧೪೮.೯೦	೫೫೧.೭೯	–	೪೦೨.೮೯
೨೦೧೦-೧೧	೨೬೪೩೬೪.೨೨	೫೭೬.೩೧	೧೫೦.೯೪	೫೭೬.೩೧	–	೪೨೫.೩೭
೨೦೧೧-೧೨	೨೫೫೪೫೮.೩೩	೬೧೩.೧೦	೧೮೦.೦೦	೬೧೩.೧೦	–	೪೩೩.೧೦

ಮೂಲ: ಕ್ಷೇತ್ರಾಧ್ಯಯನದ ದತ್ತಾಂಶಗಳು

೨೦೦೯ ರ ನಂತರ ರಫ್ತು ವ್ಯಾಪಾರ ಸ್ಥಗಿತಗೊಂಡಿದ್ದರೂ ಇದರ ಒಟ್ಟು ಬೆಳವಣಿಗೆಯ ದರ ಶೇ. ೧೭ ಆಗಿರುತ್ತದೆ.

ಮೆ। ಓರಿಯಂಟಲ್ ಕ್ಯಾಶ್ಯೂ ಇಂಡಸ್ಟ್ರಿ ಪುತ್ತೂರು: ಪುತ್ತೂರು ತಾಲೂಕಿನ ಬನ್ನೂರು ಬಳಿ ೧೯೮೨ ರಲ್ಲಿ ಪ್ರಾರಂಭವಾದ ಮೆ। ಓರಿಯಂಟಲ್ ಕ್ಯಾಶ್ಯೂ ಇಂಡಸ್ಟ್ರಿ, ಪ್ರಾರಂಭದ ವರ್ಷಗಳಲ್ಲಿ ಸ್ವತಂತ್ರವಾಗಿ ಕಾರ್ಯವೆಸಗುತ್ತಿದ್ದು, ಕಳೆದ ಹತ್ತು ವರ್ಷಗಳಿಂದ ಮಂಗಳೂರಿನಿಂದ ಬೇಯಿಸಿದ ಗೇರು ಬೀಜವನ್ನು ತರಿಸಿಕೊಂಡು ಸಂಸ್ಕರಣೆಯ ಕೆಲಸವನ್ನು ಮಾತ್ರ ನಿರ್ವಹಿಸುತ್ತಿದೆ. ವಿಲ್ಪ್ರೆಡ್ ಡಿಸೋಜ ಎಂಬುವವರು ಪ್ರಾರಂಭಿಕ ರೂ. ಹದಿನೈದು ಲಕ್ಷ ಬಂಡವಾಳದಿಂದ ಉದ್ಯಮ ಪ್ರಾರಂಭಿಸಿದರು. ಪ್ರತಿ ದಿನ ನಲುವತ್ತೈದು ಚೀಲಗಳಷ್ಟು ಗೇರು ಸಂಸ್ಕರಣೆ ಮಾಡುತ್ತಿದ್ದು ಒಬ್ಬ ಮೇನೇಜರ್, ಒಬ್ಬ ಗುಮಾಸ್ತೆ, ಎರಡು ಮಂದಿ ಮೇಲ್ವಿಚಾರಕರು ಏಳು ಪುರುಷ ಕಾರ್ಮಿಕರು ಹಾಗೂ ೧೭೫ ಮಹಿಳಾ ಕಾರ್ಮಿಕರು, ಒಬ್ಬರು ಕಾವಲುಗಾರರು ಇಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ವಾರ್ಷಿಕ ವ್ಯವಹಾರದ ಮೊತ್ತ ೨.೮೯ ಕೋಟಿ ರೂ.ಗಳಾಗಿದ್ದು, ವಾರ್ಷಿಕ ಖರ್ಚು ೨.೩೬ ಕೋಟಿ. ರೂಗಳು. ನಿವ್ವಳ ಲಾಭ ರೂ. ೫೩ ಲಕ್ಷಗಳು. ಸರಕಾರದ ನಿಯಮಾವಳಿಯಂತೆ ವೇತನ ಪಡೆಯುತ್ತಿದ್ದಾರೆ. ಪುತ್ತೂರು ತಾಲೂಕು ಇ. ಎಸ್. ಐ ವ್ಯಾಪ್ತಿಗೆ ಬರುವುದರಿಂದ ವೈದ್ಯಕೀಯ ಸೌಲಭ್ಯ, ಪ್ರಾವಿಡೆಂಟ್ ಫಂಡ್ ಮತ್ತು ಪೆನ್ಶನ್‌ಗಳಿವೆ. ಮೂವತ್ತೆರಡು ವರ್ಷಗಳಿಂದ ಉದ್ಯಮ ನಡೆಯುತ್ತಿರುವುದರಿಂದ ಖಾಯಂ ಕೆಲಸಗಾರರು ದೊರೆಯುತ್ತಾರೆ. ಆದರೂ ಇತ್ತೀಚೆಗೆ ಹೊಸತಾಗಿ ಕೆಲಸಕ್ಕೆ ಸೇರ್ಪಡೆಯಾಗುತ್ತಿರುವವರ ಸಂಖ್ಯೆ ಕಡಿಮೆ. ಅಲ್ಲಿನ ಮೇನೇಜರ್‌ರ ಅಭಿಪ್ರಾಯದಂತೆ ಸಂಪೂರ್ಣ ಯಾಂತ್ರೀಕರಣಗೊಂಡರೆ ಮಾತ್ರ ಕಾರ್ಖಾನೆ ನಡೆಸಬಹುದು. ಇಲ್ಲವಾದಲ್ಲಿ ಭವಿಷ್ಯದಲ್ಲಿ ಕಾರ್ಖಾನೆ ಮುಚ್ಚ ಬೇಕಾಗಬಹುದು.

ಕೆ. ಸುಬ್ರಾಯ ಅನಂತ ಕಾಮತ್ ಎಂಡ್ ಸನ್ಸ್, ಮುಕ್ವೆ ಪುತ್ತೂರು: ಪುತ್ತೂರು ತಾಲೂಕಿನಲ್ಲಿರುವ ಮತ್ತೊಂದು ಗೇರು ಉದ್ಯಮ ಕೆ. ಸುಬ್ರಾಯ ಅನಂತ ಕಾಮತ್ ಎಂಡ್ ಸನ್ಸ್, ಇದು ಪುತ್ತೂರಿನ ಮುಕ್ವೆ ಎಂಬಲ್ಲಿ ಕಾರ್ಯ ನಿರ್ವಹಿಸುತ್ತಿದೆ ೨೦೦೫ ರಲ್ಲಿ ಪ್ರಾರಂಭವಾದ ಈ ಉದ್ಯಮ ಪಾಲುದಾರಿಕೆ ಯಜಮಾನ್ಯವನ್ನು ಹೊಂದಿದೆ. ಉದ್ಯಮವನ್ನು ಪ್ರಾರಂಭಿಸಿದವರು ಶ್ರೀ ಗಿರಿಧರ ಕಾಮತ್. ಪ್ರಸ್ತುತ ರಾಧಾ ಕಾಮತ್, ಪ್ರಮೋದ್ ಕಾಮತ್, ಪ್ರಸಾದ್ ಕಾಮತ್ ಎಂಬುವವರ ಮಾಲಕತ್ವದಲ್ಲಿ ಉದ್ಯಮ ನಡೆಯುತ್ತಿದೆ. ಈ ಸಂಸ್ಥೆ ಕಾಸರಗೋಡು ಜಿಲ್ಲೆಯಲ್ಲಿ ಇದೇ ಹೆಸರಿನಲ್ಲಿ ನಡೆಯುತ್ತಿರುವ ಗೇರು ಉದ್ಯಮದ ಅಂಗ ಸಂಸ್ಥೆಯಾಗಿದ್ದು ಯಾವುದೇ ರೀತಿಯ ಸ್ವತಂತ್ರ ಕಾರ್ಯಾಚರಣೆ ನಡೆಸುತ್ತಿಲ್ಲ. ಕಾಸರಗೋಡಿನಿಂದ ಕಚ್ಚಾಗೇರನ್ನು ತಂದು ಪುತ್ತೂರಿನಲ್ಲಿ ಸಂಸ್ಕರಿಸಿ ಮತ್ತೆ ಕಾಸರಗೋಡಿಗೆ ಕೊಂಡೊಯ್ಯುವ ವ್ಯವಸ್ಥೆ ಮಾತ್ರ ಇಲ್ಲಿ ನಡೆಯುತ್ತಿದೆ. ೯೯ ಮಹಿಳಾ ಕಾರ್ಮಿಕರು ಹಾಗು ೮ ಪುರುಷ ಕಾರ್ಮಿಕರು, ಒಬ್ಬರು ಮೇಲ್ವಿಚಾರಕರು, ಎರಡು ಮಂದಿ ಗುಮಾಸ್ತರು ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸರಕಾರೀ ನಿಯಮಗಳಗನುಸಾರವಾಗಿ ವೇತನ, ಭತ್ಯೆ ಹಾಗೂ ಇತರೆ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ವಾರ್ಷಿಕ ವ್ಯವಹಾರದ ಮೊತ್ತ ರೂ. ૩.೬೭ ಕೋಟಿಗಳಾಗಿದ್ದು ಅದರಲ್ಲಿ ೧.೨೪ ಕೋಟಿ ರೂ. ಗಳು ವಾರ್ಷಿಕ ವೆಚ್ಚ ಉಳಿದಂತೆ ೨.೪೩ ಕೋಟಿ ರೂ.ಗಳು ನಿವ್ವಳ ಲಾಭವಾಗಿರುತ್ತದೆ. ಕಾರ್ಮಿಕರ ಲಭ್ಯತೆ ಇದೆ ಎಂಬ ಕಾರಣಕ್ಕಾಗಿ ಇಲ್ಲಿ ಕಾರ್ಯ ನಿರ್ವಹಿಸುತ್ತಿರುವ ಈ ಸಂಸ್ಥೆ ಪುತ್ತೂರು ತಾಲೂಕಿನ ಗೇರು ಉದ್ಯಮದಲ್ಲಿ ಪ್ರಮುಖವೆಂದೆನಿಸಿಕೊಂಡಿದೆ.

ಕೆ. ಸುಬ್ರಾಯ ಅನಂತ ಕಾಮತ್ ಆಂಡ್ ಸನ್ಸ್, ಸುಳ್ಯ : ಇದು ಸುಳ್ಯ ತಾಲೂಕಿನ ಒಂದು ಪ್ರಮುಖ ಗೇರು ಉದ್ದಿಮೆ. ಕೆ. ಸುಬ್ರಾಯ ಅನಂತ ಕಾಮತ್ ಆಂಡ್ ಸನ್ಸ್ ಜಾಲ್ಸೂರು ವಿನೋಬಾ ನಗರ ಇದರ ಮಾಲಿಕರು. ಮೂಲತಃ ಕಾಸರಗೋಡಿನವರಾದ ಕೆ. ಉಪೇಂದ್ರ ಕಾಮತ್‌ರವರು ೧೯೭೩ ರಲ್ಲಿ ಇದನ್ನು ೧೦ ಲಕ್ಷ ಬಂಡವಾಳದೊಂದಿಗೆ ಪ್ರಾರಂಭಿಸಿದರು. ಪ್ರಸ್ತುತ ಪಾಲುದಾರಿಕೆಯಲ್ಲಿ ಇದು ಕಾರ್ಯನಿರ್ವಹಿಸುತ್ತಿದೆ. ಸುಳ್ಯ ತಾಲೂಕು ಕೇರಳ ರಾಜ್ಯದ ಗಡಿ ಭಾಗದಲ್ಲಿದ್ದು ಹಿಂದೆ ಕೇರಳ ರಾಜ್ಯ ಗೇರು ಸಂಸ್ಕರಣಾ ಉದ್ಯಮದಲ್ಲಿ ಪ್ರಭುತ್ವವನ್ನು ಪಡೆದಿತ್ತು. ಇದೇ ಅವಧಿಯಲ್ಲಿ ಕೇರಳದಲ್ಲಿ ಕಾರ್ಮಿಕ ಸಂಘಟನೆಗಳೂ ಪ್ರಬಲವಾಗಿದ್ದವು. ಆಗ ದ.ಕ. ಜಿಲ್ಲೆಯಲ್ಲಿ ಅಗ್ಗದ ಶ್ರಮ ದೊರೆಯುತ್ತಿದ್ದುದರಿಂದ ಕೇರಳದ ಉದ್ಯಮಿಗಳು ದ. ಕ. ಜಿಲ್ಲೆಗೆ ತಮ್ಮ ವ್ಯವಹಾರವನ್ನು ವಿಸ್ತರಿಸಿದರು. ಅದರಲ್ಲೂ ಬಂದರು ಪಟ್ಟಣವಾಗಿದ್ದ ಮಂಗಳೂರು ಉದ್ಯಮಿಗಳನ್ನು ಆಕರ್ಷಿಸುವಲ್ಲಿ ಯಶಸ್ವಿಯಾಯಿತು. ಈ ಎಲ್ಲಾ ಹಿನ್ನಲೆಯಲ್ಲಿ ಕಾಸರಗೋಡಿಗೆ ತಾಗಿಕೊಂಡಿರುವ ಸುಳ್ಯದಲ್ಲೂ ಗೇರು ಉದ್ದಿಮೆ ಪ್ರಾರಂಭವಾಯಿತು. ಪ್ರಸ್ತುತ ಈ ಗೇರು ಕಾರ್ಖಾನೆ ಸುಳ್ಯದಲ್ಲಿ ಮಾತ್ರವಲ್ಲ ಇಡೀ ದ. ಕ. ಜಿಲ್ಲೆಯಲ್ಲೇ ಹೆಸರು ಗಳಿಸಿಕೊಂಡಿದೆ. ಗೋಡಂಬಿ ಮಾತ್ರವಲ್ಲ ಗೇರು ಬೀಜದ ದ್ರವವನ್ನು ಸಹಾ ಉತ್ಪಾದನೆ ಮಾಡುತ್ತಿದೆ. ಪ್ರಸ್ತುತ ವಾರ್ಷಿಕ ಒಂದು ಕೋಟಿಗೂ ಹೆಚ್ಚಿನ ವ್ಯವಹಾರ ಹೊಂದಿರುವ ಈ ಕಾರ್ಖಾನೆಯಲ್ಲಿ ವಾರ್ಷಿಕ ವೆಚ್ಚ ೨.೮೦ ಕೋಟಿ ರೂ. ಗಳು ಹಾಗೂ ವಾರ್ಷಿಕ ಲಾಭ ೧.೨೫ ಕೋಟಿ ರೂ.ಗಳು. ೨೦೦ ಮಹಿಳಾ ಕಾರ್ಮಿಕರನ್ನೊಳಗೊಂಡಂತೆ ೨೨೯ ಕಾರ್ಮಿಕರಿದ್ದಾರೆ. ವಾರದ ರಜೆ, ಬೋನಸ್, ಪ್ರಾವಿಡೆಂಟ್ ಫಂಡ್, ಹೆರಿಗೆ ಭತ್ಯೆ, ಹೆರಿಗೆ ರಜೆ, ಪೆನ್ಶನ್ ಇತ್ಯಾದಿ ಸೌಲಭ್ಯಗಳು ಸರ್ಕಾರದ ನಿಯಾಮಾನುಸಾರ ಇದೆ. ಸ್ವಂತ ಗೇರು ಕೃಷಿ ಭೂಮಿ ಇಲ್ಲ. ಹೆಚ್ಚಾಗಿ ಸ್ಥಳೀಯ ಮಾರಾಟಗಾರರಿಂದ ಕೊಂಡುಕೊಳ್ಳುತ್ತಾರೆ. ಹೆಚ್ಚಿನ ಕಚ್ಚಾಗೇರು ಆಮದಾಗುತ್ತದೆ. ಗೇರು ಬೀಜದ ದ್ರವವೂ ಒಂದು ಪ್ರಮುಖ ಆದಾಯದ ಮೂಲವಾಗಿರುತ್ತದೆ. ಹೊಸ ಘಟಕದ ಸ್ಥಾಪನೆಗೆ ಅಥವಾ ಇರುವ ಘಟಕದ ವಿಸ್ತರಣೆಗೆ ಸರಕಾರಿಂದ

ಆರ್ಥಿಕ ನೆರವು ಇದೆ. ಇಲ್ಲಿನ ಉತ್ಪಾದನೆಯಲ್ಲಿ ಶೇ. ೫೯ ರಷ್ಟು ನಿರ್ಯಾತವಾಗುತ್ತಿದೆ. ಶೇ. ೪೧ ರಷ್ಟು ಸ್ಥಳೀಯವಾಗಿ ಮಾರಾಟವಾಗುತ್ತದೆ. ಉದ್ಯಮದ ಬೆಳವಣಿಗೆಯ ಕುರಿತಂತೆ ಕೋಷ್ಟಕ ೫.೧೩ರಲ್ಲಿ ನಮೂದಿಸಲಾಗಿದೆ.

ಕೋಷ್ಟಕ ೫.೧೩. ಕೆ. ಸುಬ್ರಾಯ ಅನಂತ ಕಾಮತ್ ಆಂಡ್ ಸನ್ಸ್, ಸುಳ್ಯ

ವರ್ಷ	ಪ್ರಮಾಣ (ಕೆ.ಜಿ.ಗಳಲ್ಲಿ)	(ಲಕ್ಷ ರೂ.ಗಳಲ್ಲಿ)				
		ಒಟ್ಟು ಮೌಲ್ಯ	ಒಟ್ಟು ವೆಚ್ಚ	ದೇಶೀ ಮಾರುಕಟ್ಟೆ ಮೌಲ್ಯ	ನಿರ್ಯಾತ ಮೌಲ್ಯ	ನಿವ್ವಳ ಲಾಭ
೨೦೦೧-೦೨	೨೧೩೩೦೧.೩೩	೩೧೯.೯೫	೨೦೩.೩೬	೧೯೧.೯೭	೧೨೭.೯೮	೧೧೬.೫೯
೨೦೦೨-೦೩	೨೯೦೦೦೦.೯೦	೩೨೨.೦೦	೨೦೫.೯೦	೧೯೪.೩೭	೧೨೭.೬೩	೧೧೭.೧೦
೨೦೦೩-೦೪	೨೧೦೦೯೫.೦೬	೩೩೧.೭೦	೨೧೦.೯೯	೧೯೯.೧೭	೧೩೨.೫೩	೧೨೦.೭೧
೨೦೦೪-೦೫	೨೦೬೦೨೯.೭೦	೩೩೯.೬೫	೨೧೬.೦೭	೨೦೩.೯೭	೧೩೫.೬೮	೧೨೩.೭೮
೨೦೦೫-೦೬	೨೦೩೩೯೮.೦೬	೩೫೫.೯೫	೨೨೬.೨೪	೨೧೩.೫೭	೧೪೨.೩೮	೧೨೯.೭೧
೨೦೦೬-೦೭	೧೮೧೫೯೪.೩೮	೩೩೫.೦೦	೨೧೩.೫೩	೨೦೧.೫೭	೧೩೩.೪೩	೧೨೧.೪೭
೨೦೦೭-೦೮	೧೮೧೦೨೫.೪೭	೩೪೩.೫೫	೨೧೮.೬೧	೨೦೬.೩೭	೧೩೭.೧೮	೧೩೦.೦೨
೨೦೦೮-೦೯	೧೭೮೪೩೪.೭೭	೩೪೭.೮೫	೨೨೧.೧೫	೨೦೮.೭೭	೧೩೯.೦೮	೧೨೬.೮೦
೨೦೦೯-೧೦	೧೭೧೪೦೨.೮೬	೩೫೯.೯೫	೨೨೮.೭೮	೨೧೫.೯೭	೧೪೩.೯೮	೧೩೧.೧೭
೨೦೧೦-೧೧	೧೭೨೪೫೧.೧೯	೩೭೫.೯೪	೨೩೮.೯೫	೨೨೫.೫೭	೧೫೦.೩೮	೧೩೬.೯೯
೨೦೧೧-೧೨	೧೬೬೬೪೧.೬೭	೪೦೫.೮೦	೨೮೦.೨೦	೨೩೯.೯೬	೧೬೫.೮೪	೧೨೫.೬೦

ಮೂಲ: ಕ್ಷೇತ್ರಾಧ್ಯಯನದ ದತ್ತಾಂಶಗಳು

ಕಳೆದ ೧೨ ವರ್ಷದಲ್ಲಿ ಉದ್ಯಮದ ಪ್ರಗತಿಯನ್ನು ಪರಿಶೀಲಿಸಿದಾಗ ಶೇ. ೨೭ರ ದರದಲ್ಲಿ ಉದ್ಯಮ ಬೆಳವಣಿಗೆಯನ್ನು ಕಂಡಿದೆ. ಪ್ರಸ್ತುತ ೨೦೧೧-೧೨ ನೇ ಸಾಲಿನಲ್ಲಿ ಶೇ. ೫೯ರಷ್ಟು ದೇಶೀ ಮಾರುಕಟ್ಟೆಯಿಂದಲೂ ಶೇ. ೪೧ರಷ್ಟು ನಿರ್ಯಾತದಿಂದಲೂ ಆದಾಯವನ್ನು ಗಳಿಸಿಕೊಂಡಿರುವುದು ಸ್ಪಷ್ಟವಾಗುತ್ತದೆ.

ಮಲ್ನಾಡ್ ಕ್ಯಾಶ್ಯೂ ಇಂಡಸ್ಟ್ರೀಸ್, ಗಾಂಧಿನಗರ ಸುಳ್ಯ: ಸುಳ್ಯ ತಾಲೂಕಿನ ಗಾಂಧಿನಗರ ಎಂಬಲ್ಲಿ ೧೯೮೩ ರಲ್ಲಿ ಎಸ್. ಅಬ್ದುಲ್ಲ ಎಂಬುವವರು ಒಂದು ಲಕ್ಷ ರೂ.ಗಳ ಮೂಲ ಬಂಡವಾಳದಿಂದ ಮಲ್ನಾಡ್ ಕ್ಯಾಶ್ಯೂ ಇಂಡಸ್ಟ್ರೀಸ್ ಪ್ರಾರಂಭಿಸಿದರು. ಪ್ರಸ್ತುತ ಇದು ಪಾಲುದಾರಿಕೆಯಲ್ಲಿ ನಡೆಯುತ್ತಿದ್ದು ವಾರ್ಷಿಕ ೨ ಕೋಟಿ ರೂ.ಗಳಿಗಿಂತ ಹೆಚ್ಚಿನ ವ್ಯವಹಾರ ನಡೆಸುತ್ತಿದೆ. ವಾರ್ಷಿಕ ವೆಚ್ಚ ೦.೯೫ ಲಕ್ಷ ರೂ., ನಿವ್ವಳ ಲಾಭ ೧.೦೫ ಕೋಟಿ ರೂ. ಗಳಾಗಿರುತ್ತದೆ. ೪೪ ಮಹಿಳಾ ಕಾರ್ಮಿಕರನ್ನೊಳಗೊಂಡಂತೆ ಒಟ್ಟು ೪೯ ಮಂದಿ ಕಾರ್ಮಿಕರಿದ್ದು ಅವರುಗಳಲ್ಲಿ ಒಬ್ಬ ಮೇನೆಜರ್ ಹಾಗೂ ಒಬ್ಬ ಕಾವಲು ಸಿಬ್ಬಂದಿ ಇರುತ್ತಾರೆ. ಕಾರ್ಮಿಕರಿಗೆ ಬೋನಸ್ಸು, ಪ್ರಾವಿಡೆಂಟ್ ಫಂಡ್, ವಾರದ ರಜೆಯಂತಹ ಸೌಲಭ್ಯಗಳಿದ್ದು ಮಹಿಳಾ ಕಾರ್ಮಿಕರಿಗೆ ಮೂರು ತಿಂಗಳ ವೇತನ ಸಹಿತ ಹೆರಿಗೆ ರಜೆ ಕೂಡಾ ಇರುತ್ತದೆ. ಕಾರ್ಮಿಕರ ಕೊರತೆ ಇರುವುದರಿಂದ ಗೇರು ಬೀಜದ ಸಿಪ್ಪೆ ತೆಗೆಯಲು ಮಹಿಳೆಯರಿಗೆ ಮನೆಗೆ ಕೊಂಡೊಯ್ಯುವ ವ್ಯವಸ್ಥೆಯೂ ಇದೆ. ಹಾಗಾಗಿ ಫ್ಯಾಕ್ಟರಿಗೆ ಬರುವ ಮಹಿಳೆಯರಿಗೆ ಮಾತ್ರವಲ್ಲ ಸುತ್ತಮುತ್ತಲಿನ ಮಹಿಳೆಯರಿಗೂ ತಮ್ಮ ತಮ್ಮ ಮನೆಗಳಲ್ಲಿಯೇ ಗೇರು ಬೀಜದ ಸಿಪ್ಪೆ ಸುಲಿಯುವ

ಕೆಲಸ ಮಾಡಬಹುದಾಗಿದೆ. ಕಚ್ಚಾಗೇರು ಬೀಜವನ್ನು ಸ್ಥಳೀಯ ಮಾರಾಟಗಾರರಿಂದ ಹಾಗೂ ಆಮದು ಮಾಡಿಕೊಳ್ಳುತ್ತಾರೆ. ದೇಶೀ ಮಾರುಕಟ್ಟೆಗೆ ಗೋಡಂಬಿ ಪೂರೈಕೆಯಾಗುತ್ತದೆ. ನಿರ್ಯಾತ ಮಾಡುವುದಿಲ್ಲ ಗೇರುಬೀಜ ಎಣ್ಣೆ ತೆಗೆಯುವ ಪ್ರಕ್ರಿಯೆ ಕೂಡಾ ಇಲ್ಲ. ಕಳೆದ ಒಂದು ದಶಕದ ಉದ್ಯಮದ ಪ್ರಗತಿಯನ್ನು ಕೋಷ್ಟಕ ೫.೧೪ ರಲ್ಲಿ ದಾಖಲಿಸಲಾಗಿದೆ.

ಕೋಷ್ಟಕ ೫.೧೪: ಮಲ್ನಾಡ್ ಕ್ಯಾಶ್ಯೂ ಇಂಡಸ್ಟ್ರೀಸ್, ಗಾಂಧಿನಗರ ಸುಳ್ಯ

ವರ್ಷ	ಪ್ರಮಾಣ (ಕೆ.ಜಿ.ಗಳಲ್ಲಿ)	(ಲಕ್ಷ ರೂ.ಗಳಲ್ಲಿ)		
		ಒಟ್ಟು ಮೌಲ್ಯ	ಒಟ್ಟು ವೆಚ್ಚ	ಒಟ್ಟು ಲಾಭ
೨೦೦೧-೦೨	೧೦೬೬೬೬.೬೭	೧೬೦.೦೦	೭೬.೮೦	೮೩.೨
೨೦೦೨-೦೩	೧೦೪೫೧೬.೧೩	೧೬೨.೦೦	೭೭.೩೧	೮೪.೬೯
೨೦೦೩-೦೪	೧೦೫೦೬೩.೨೯	೧೬೬.೦೦	೭೮.೩೩	೫೪.೬೭
೨೦೦೪-೦೫	೧೦೩೦೩೦.೩೦	೧೭೦.೦೦	೮೦.೮೧	೮೯.೧೯
೨೦೦೫-೦೬	೧೦೧೭೧೪.೨೯	೧೭೮.೦೦	೮೪.೮೨	೯೩.೧೮
೨೦೦೬-೦೭	೯೦೮೧೦.೮೧	೧೬೮.೦೦	೭೯.೮೧	೮೮.೧೯
೨೦೦೭-೦೮	೯೦೫೨೬.೩೨	೧೭೨.೦೦	೮೧.೭	೯೦.೩೦
೨೦೦೮-೦೯	೮೯೨೩೦.೭೭	೧೭೪.೦೦	೮೨.೭೩	೯೧.೨೭
೨೦೦೯-೧೦	೮೫೭೧೪.೨೯	೧೮೦.೦೦	೮೫.೫೯	೯೪.೪೧
೨೦೧೦-೧೧	೮೬೨೩೮.೫೩	೧೮೮.೦೦	೮೯.೪೦	೯೮.೬
೨೦೧೧-೧೨	೮೩೩೩೩.೩೩	೨೦೦.೦೦	೯೫.೧೦	೧೦೪.೯೦

ಮೂಲ: ಕ್ಷೇತ್ರಾಧ್ಯಯನದ ದತ್ತಾಂಶಗಳು

· ದಶಕಗಳ ಬೆಳವಣಿಗೆಯನ್ನು ಗಮನಿಸಿದಾಗ ಉದ್ಯಮ ಶೇ. ೨೬ ರ ದರದಲ್ಲಿ ಪ್ರಗತಿಯಾಗುತ್ತಿರುವುದು ಕಂಡುಬರುತ್ತದೆ.

ಗ್ರೀನ್ ಲ್ಯಾಂಡ್ ಕ್ಯಾಶ್ಯೂ ಇಂಡಸ್ಟ್ರೀಸ್ ಸುಳ್ಯ: ಸುಳ್ಯ ನಗರದಲ್ಲಿರುವ ಇನ್ನೊಂದು ಸಣ್ಣ ಘಟಕ ಗ್ರೀನ್ ಲ್ಯಾಂಡ್ ಕ್ಯಾಶ್ಯೂ ಇಂಡಸ್ಟ್ರೀಸ್. ಇದು ಸುಳ್ಯದ ಜಯನಗರದಲ್ಲಿ ಕಾರ್ಯವೆಸಗುತ್ತಿದ್ದು ಹಾಜಿ ಜಿ. ಮೂಸಾಕುಂಞ ಎಂಬುವವರಿಂದ ಸ್ಥಾಪಿಸಲ್ಪಟ್ಟಿದೆ. ಸುಳ್ಯ ಸಮೀಪದ ಎಲಿಮಲೆ ಎಂಬಲ್ಲಿ ಇದರ ಮಾತೃ ಸಂಸ್ಥೆ ಜೀರ್ಮುಕ್ಕಿ ಎಂಟರ್ ಪ್ರೈಸಸ್ ಕಾರ್ಯ ನಿರ್ವಹಿಸುತ್ತಿದ್ದು, ಗ್ರೀನ್ ಲ್ಯಾಂಡ್ ಕ್ಯಾಶ್ಯೂ ಇದರ ಅಂಗ ಸಂಸ್ಥೆ ಎನಿಸಿಕೊಂಡಿದೆ. ಕಚ್ಚಾಗೇರು ಬೀಜವನ್ನು ಬೇಯಿಸಿ ಅದನ್ನು ಸುಳ್ಯಕ್ಕೆ ತರಲಾಗುತ್ತದೆ. ಇಲ್ಲಿನ ಕಾರ್ಮಿಕರು ಅದನ್ನು ಸಂಸ್ಕರಿಸಿ ಪುನಃ ವಾಪಸ್ಸು ಮಾತೃ ಸಂಸ್ಥೆಗೆ ಕಳಿಸಲಾಗುತ್ತದೆ. ಯಾವುದೇ ಮಾರಾಟದ ವ್ಯವಸ್ಥೆ ಅಂಗ ಸಂಸ್ಥೆಯಿಂದ ನಡೆಯುತ್ತಿಲ್ಲ. ವಾರ್ಷಿಕ ೩.೮೭ ಕೋಟಿ ರೂ.ಗಳ ವ್ಯವಹಾರ ನಡೆಸುತ್ತಿದ್ದು ವಾರ್ಷಿಕ ವೆಚ್ಚ ೧.೯೮ ಕೋಟಿ ರೂ. ಹಾಗೂ ನಿವ್ವಳ ಲಾಭ ೧.೮೯ ಕೋಟಿ ರೂ.ಗಳಾಗಿರುತ್ತದೆ. ಇದೊಂದು ರೀತಿ ಜಾಬ್ ವರ್ಕಿಂಗ್ ಆಗಿದ್ದು ಕೇವಲ ೨೦ ಮಂದಿ ಮಹಿಳಾ ಕಾರ್ಮಿಕರು ಒಬ್ಬ ಮ್ಯಾನೇಜರ್ ಮಾತ್ರ ಕೆಲಸ ಮಾಡುತ್ತಿದ್ದಾರೆ. ದಿನದಲ್ಲಿ ೧೬೦೦ ಕೆ. ಜಿ. ಗೇರು ಬೀಜವನ್ನು ಸುಲಿಯುತ್ತಾರೆ. ೪೦೦ ಕೆ. ಜಿ. ಗೋಡಂಬಿ ಉತ್ಪಾದಿಸಲ್ಪಡುತ್ತದೆ.

ಹೇಮಾವತಿ ಕ್ಯಾಶ್ಯೂಸ್ ಎಲಿಮಲೆ, ಸುಳ್ಯ ತಾಲೂಕು: ಸುಳ್ಯ ತಾಲೂಕಿನ ಎಲಿಮಲೆ ಎಂಬಲ್ಲಿ ಹೇಮಾವತಿ ಕ್ಯಾಶ್ಯೂಸ್ ಎಂಬ ಕಾರ್ಖಾನೆ ಇದೆ. ೨೦೦೩ ರಲ್ಲಿ ರೂಪಾಯಿ ಒಂದು ಕೋಟಿ ಬಂಡವಾಳ ತೊಡಗಿಸಿ ಗೋಪಾಲಕೃಷ್ಣ ಕೆ. ಎಂಬುವವರಿಂದ

ಇದು ಪ್ರಾರಂಭವಾಯಿತು. ಪ್ರಸ್ತುತ ಗೋಪಾಲಕೃಷ್ಣ ಕೆ. ಹಾಗೂ ಅವರ ಪತ್ನಿ ವೀಣಾ ಗೋಪಾಲಕೃಷ್ಣ ಇವರ ಪಾಲುದಾರಿಕೆಯಲ್ಲಿ ಉದ್ಯಮ ನಡೆಯುತ್ತಿದೆ. ಗೇರು ಸಂಸ್ಕರಣೆಯ ಎಲ್ಲಾ ಪ್ರಕ್ರಿಯೆಗಳನ್ನು ಇಲ್ಲಿ ಮಾಡುತ್ತಾರೆ. ಅದಕ್ಕಾಗಿ ಸುಸಜ್ಜಿತ ಕಟ್ಟಡ, ಆಧುನಿಕ ಯಂತ್ರಗಳನ್ನು ಅಳವಡಿಸಿರುತ್ತಾರೆ. ವಾರ್ಷಿಕ ವ್ಯವಹಾರದ ಮೊತ್ತ ರೂ. ೪.೯೯ ಕೋಟಿಗಳಷ್ಟು. ಕಚ್ಚಾಗೇರನ್ನು ಸಂಪೂರ್ಣವಾಗಿ ಆಮದು ಮಾಡಿಕೊಳ್ಳುತ್ತಿದ್ದು ಗೇರು ಬೀಜದ ಸಮಸ್ಯೆ ಇಲ್ಲ. ವಾರ್ಷಿಕ ವೆಚ್ಚ ೪.೧೭ ಕೋಟಿ ರೂ.ಗಳಾಗಿದ್ದು ನಿವ್ವಳ ಲಾಭ ೦.೮೫ ಕೋಟಿ ರೂ.ಗಳಾಗಿರುತ್ತದೆ. ಉತ್ಪಾದನೆಯನ್ನು ದೇಶೀ ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗುವುದು. ಇದೇ ಘಟಕದ ಅಂಗ ಸಂಸ್ಥೆಗಳು ಸಮೀಪದ ಕುಕ್ಕುಜಡ್ಕ, ಬೆಳ್ಳಾರೆ, ಬಾಳಿಲ ಹಾಗೂ ಅಡ್ಕಾರ್ ನಲ್ಲಿ ಕೆಲಸ ಮಾಡುತ್ತಿದ್ದು ಒಟ್ಟು ೧೧೫ ಕಾರ್ಮಿಕರು ಇದ್ದಾರೆ. ಅದರಲ್ಲಿ ೧೦೦ ಮಂದಿ ಮಹಿಳಾ ಕಾರ್ಮಿಕರು. ಕಾರ್ಮಿಕರಿಗೆ ವೇತನ, ಭತ್ಯೆ, ಪ್ರಾವಿಡೆಂಟ್ ಫಂಡ್ ಇನ್ನಿತರ ಸೌಲಭ್ಯಗಳಿವೆ. ವರ್ಷಕ್ಕೆ ೪,೮೦,೦೦೦ ಕೆ. ಜಿ. ಗೋಡಂಬಿ ಉತ್ಪಾದನೆ ಮಾಡುತ್ತಿದ್ದು ಅದರ ಮೌಲ್ಯ ೩.೫ ಕೋಟಿಗಳಷ್ಟು. ಸ್ಥಳೀಯ ಮಾರುಕಟ್ಟೆಯಲ್ಲಿ ಗೋಡಂಬಿಯನ್ನು ಮಾರಾಟ ಮಾಡುವುದಲ್ಲದೆ ಹೆಚ್ಚಿನ ಗೋಡಂಬಿಯನ್ನು ಮಂಗಳೂರಿನ ಗೇರು ಉದ್ಯಮಿಗಳಿಗೆ ಮಾರಾಟ ಮಾಡುತ್ತಾರೆ. ಕಾರ್ಮಿಕರ ಸಮಸ್ಯೆ ಇದೆ ಎಂದ ಮಾಲಿಕರು ಪಕ್ಕದ ಗೇರು ಕಾರ್ಖಾನೆಯಿಂದ ಈ ವಿಷಯದಲ್ಲಿ ತೀವ್ರ ಪೈಪೋಟಿ ಎದುರಿಸಬೇಕಾಗುತ್ತದೆ. ಸರಕಾರದಿಂದ ಹಾಗೂ ತೋಟಗಾರಿಕಾ ಇಲಾಖೆಯಿಂದ ನೆರವು ಸಿಗುತ್ತದೆ. ಆದರೆ ಅದಕ್ಕಾಗಿ ತೀವ್ರ ಪ್ರಯತ್ನ ಮಾಡಬೇಕಾಗುತ್ತದೆ. ೨೦೦೫–೦೬ರ ನಂತರದ ಬೆಳವಣಿಗೆಯನ್ನು ಕೋಷ್ಟಕ ೫.೧೫ ರಲ್ಲಿ ದಾಖಲಿಸಲಾಗಿದೆ.

ಕೋಷ್ಟಕ ೫.೧೫ ಹೇಮಾವತಿ ಕ್ಯಾಶ್ಯೂಸ್ ಎಲಿಮಲೆ, ಸುಳ್ಯ ತಾಲೂಕು

ವರ್ಷ	ಪ್ರಮಾಣ (ಕೆ.ಜಿ.ಗಳಲ್ಲಿ)	(ಲಕ್ಷ ರೂ.ಗಳಲ್ಲಿ)		
		ಒಟ್ಟು ಮೌಲ್ಯ	ಒಟ್ಟು ವೆಚ್ಚ	ಒಟ್ಟು ಲಾಭ
೨೦೦೬–೦೭	೨೫೩೫೨೨.೮೬	೪೪೩.೬೭	೩೭೧.೧೩	೭೨.೫೪
೨೦೦೭–೦೮	೨೨೬೩೪೫.೯೫	೪೧೮.೭೪	೩೫೦.೨೮	೬೮.೪೬
೨೦೦೮–೦೯	೨೨೫೬೩೬.೮೪	೪೨೮.೭೧	೩೫೮.೬೨	೭೦.೦೯
೨೦೦೯–೧೦	೨೨೨೪೦೭.೬೯	೪೩೩.೭೦	೩೬೨.೭೯	೭೦.೯೧
೨೦೧೦–೧೧	೨೧೩೬೪೨.೮೬	೪೪೮.೬೫	೩೭೫.೩೦	೭೩.೩೫
೨೦೧೧–೧೨	೨೧೪೯೪೯.೫೪	೪೬೮.೫೯	೩೯೧.೯೮	೭೬.೬೧
೨೦೧೨–೧೩	೨೦೭೭೦೮.೩೩	೪೯೮.೫೦	೪೧೭.೦೦	೮೧.೫೦

ಮೂಲ: ಕ್ಷೇತ್ರಾಧ್ಯಯನದ ದತ್ತಾಂಶಗಳು

೫.೩ ಸಂಸ್ಕರಣಾ ಘಟಕಗಳ ಸಮಸ್ಯೆಗಳು

ಗೇರು ಸಂಸ್ಕರಣಾ ಘಟಕಗಳ ಪ್ರಮುಖ ಸಮಸ್ಯೆಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

- ❖ ಮುಖ್ಯವಾಗಿ ಸಂಸ್ಕರಣಾ ಘಟಕದ ಸ್ಥಾಪನೆಗೆ ಬೇಕಾಗುವ ಮೂಲಭೂತ ಅಗತ್ಯ ಭೂಮಿ ಹಾಗೂ ಕಟ್ಟಡ. ಸಾಮಾನ್ಯವಾಗಿ ಒಂದು ಘಟಕ ಪ್ರಾರಂಭಿಸಲು ಕನಿಷ್ಠ ಒಂದು ಎಕರೆ ಭೂಮಿ ಬೇಕಾಗುತ್ತದೆ. ವಿಶಾಲವಾದ ಕೆಲಸದ ಪ್ರದೇಶಗಳನ್ನೊಳಗೊಂಡ ಕೊಠಡಿ ಹಾಗೂ ಗೇರು ಬೀಜ ಒಣಗಿಸಲು ಅಂಗಳದ ಅಗತ್ಯ ಕೂಡಾ ಇದೆ. ಇಷ್ಟೆಲ್ಲಾ ವಿಸ್ತಾರವುಳ್ಳ ಭೂಮಿಯನ್ನಾಗಲೀ ಅಥವಾ ಕಟ್ಟಡವನ್ನಾಗಲೀ ಬಾಡಿಗೆ ಆಧಾರದಲ್ಲಿ ಹೊಂದುವುದು ಆರ್ಥಿಕ

ಹೊರೆಯಾಗುತ್ತದೆ. ಆ ಕಾರಣದಿಂದ ಸಾಧ್ಯವಾದಷ್ಟು ಸ್ವಂತ ಭೂಮಿ ಹಾಗೂ ಕಟ್ಟಡವನ್ನು ಪಡೆದುಕೊಳ್ಳಲುಘಟಕಗಳು ಪ್ರಯತ್ನಿಸಿ ಬಹುತೇಕವಾಗಿ ಯಶಸ್ವಿಯಾಗಿವೆ. ಸಾಮಾನ್ಯವಾಗಿ ನಗರದ ಕೇಂದ್ರ ಭಾಗದಲ್ಲಿ ಭೂಮಿ ಹಾಗೂ ಕಟ್ಟಡದ ಬೆಲೆ ಹೆಚ್ಚಾಗಿರುವುದರಿಂದ ನಗರದ ಹೊರ ವಲಯಗಳಲ್ಲಿ ಗೇರು ಕಾರ್ಖಾನೆಗಳು ಸ್ಥಾಪಿಸಲ್ಪಡುತ್ತವೆ. ಶೇ. ೮೭ ರಷ್ಟು ಕಾರ್ಖಾನೆಗಳು ನಗರದ ಹೊರವಲಯದಲ್ಲಿದ್ದು ಸ್ವಂತ ಭೂಮಿ, ಕಟ್ಟಡ ಹಾಗೂ ವಿಶಾಲವಾದ ಅಂಗಳವನ್ನು ಹೊಂದಿವೆ. ಎಲ್ಲಾ ಘಟಕಗಳಲ್ಲಿ ಶೌಚಾಲಯದ ವ್ಯವಸ್ಥೆ ಇದೆ. ಶೇ. ೭೮ ರಷ್ಟು ಕಾರ್ಖಾನೆಗಳಲ್ಲಿ ಪ್ರತ್ಯೇಕ ವಿಶ್ರಾಂತಿ ಕೊಠಡಿ ಇವೆ. ಗೇರು ಕಾರ್ಖಾನೆಯಲ್ಲಿ ದುಡಿಯುತ್ತಿರುವವರಲ್ಲಿ ಶೇ. ೯೦ ರಷ್ಟು ಮಹಿಳೆಯರೇ ಆಗಿರುವುದರಿಂದ, ಚಿಕ್ಕ ಮಕ್ಕಳನ್ನು ನೋಡಿಕೊಳ್ಳಲು ಮಕ್ಕಳಾ ಪಾಲನಾ ಕೇಂದ್ರ ಶೇ. ೧೨ ರಷ್ಟು ಕಾರ್ಖಾನೆಗಳಲ್ಲಿ ಇವೆ. ಆದರೆ ಸ್ವಂತ ಗೇರು ಕೃಷಿ ಭೂಮಿ ಹೊಂದಿದ್ದು ತಮಗೆ ಬೇಕಾದ ಕಚ್ಚಾಗೇರು ಉತ್ಪಾದಿಸುವ ಘಟಕಗಳು ಯಾವುದೂ ಇಲ್ಲ. ಶೇ. ೧೩ ರಷ್ಟು ಘಟಕಗಳು ಸ್ವಂತ ಗೇರು ತೋಟವನ್ನು ಹೊಂದಿದ್ದರೂ, ಕೃಷಿ ಮಾಡುವ ಆಸಕ್ತಿ ಹೊಂದಿಲ್ಲ. ಸ್ವಂತ ಗೇರು ಕೃಷಿ ಮಾಡುವುದಕ್ಕಿಂತ ಹೊರಗಿನ ಮೂಲಗಳಿಂದ ಕಚ್ಚಾಗೇರು ಪಡೆಯುವುದು ಹೆಚ್ಚು ಸೂಕ್ತ ಎಂಬ ಅಭಿಪ್ರಾಯವಿದೆ.

- ಕಾರ್ಮಿಕರ ಲಭ್ಯತೆ ಉದ್ಯಮದ ಬಹು ದೊಡ್ಡ ಸಮಸ್ಯೆ. ಘಟಕವೊಂದು ಸರಾಸರಿ ೧೬೪ ಕಾರ್ಮಿಕರನ್ನು ಹೊಂದಿದ್ದು ಇದರಲ್ಲಿ ಶೇ. ೯೦ ರಷ್ಟು ಮಹಿಳಾ ಕಾರ್ಮಿಕರಿದ್ದಾರೆ. ಗೇರು ಕಾರ್ಖಾನೆಗಳಲ್ಲಿ ಬಹುತೇಕ ಕೆಲಸಗಳು ಹಗುರ ಕೆಲಸಗಳೆಂದೂ, ನಾಜೂಕಿನ ಕೆಲಸಗಳೆಂದೂ ಪರಿಗಣಿಸಲ್ಪಡುವುದರಿಂದ ಹೆಚ್ಚಾಗಿ ಮಹಿಳೆಯರೇ ಇವುಗಳನ್ನು ನಿರ್ವಹಿಸುತ್ತಾರೆ. ಗೇರು ಬೀಜ ಬೇಯಿಸುವ, ಒಣಗಿಸುವ, ತಲೆ ಹೊರೆಯಿಂದ ಸಾಗಿಸುವ ಹಾಗೂ ವಾಹನ ಚಾಲನೆ ಇತ್ಯಾದಿ ಕೆಲಸಗಳನ್ನು ಪುರುಷ ಕಾರ್ಮಿಕರು ನಿಭಾಯಿಸುತ್ತಾರೆ. ಶೇ. ೫೩ ಘಟಕಗಳಲ್ಲಿ ತರಬೇತಿ ಹೊಂದಿದ ಮೆಕಾನಿಕ್ ಗಳಿದ್ದರೆ ಸರಾಸರಿ ಶೇ. ೩ ರಷ್ಟು ಕಾರ್ಯಾಲಯ ಸಿಬ್ಬಂದಿಗಳಿದ್ದಾರೆ. ಕಾರ್ಮಿಕರ ಉತ್ಪಾದನಾ ಸಾಮರ್ಥ್ಯದ ಕುರಿತಂತೆ ಹೊಸತಾಗಿ ಸೇರುವ ಕಾರ್ಮಿಕರ ಕೆಲಸದ ವೇಗ ತೀರಾ ಕಡಿಮೆ. ಹಾಗೂ ಕಲಿಯುವ ಅವಧಿಯಲ್ಲಿ ಗುಣ ಮಟ್ಟದ ಕೆಲಸ ಅವರಿಂದ ಸಿಗುವುದಿಲ್ಲ. ಹಿಂದೆ ಸರಕಾರದಿಂದ ಹೊಸತಾಗಿ ಸೇರಿದ ಕಾರ್ಮಿಕರಿಗೆ ಪ್ರಾರಂಭದ ಎರಡು ತಿಂಗಳು ತರಬೇತಿ ಭತ್ಯೆ (ಸ್ಟೈಫಂಡರಿ) ಸಿಗುತ್ತಿತ್ತು. ಆದರೆ ಆ ಸೌಲಭ್ಯ ಈಗ ನಿಂತು ಹೋಗಿದೆ. ಇನ್ನು ಕೆಲಸದಲ್ಲಿ ಪರಿಣಿತಿ ಹೊಂದುತ್ತಿದ್ದಂತೆ ಕೆಲಸದಿಂದ ಹೊರ ನಡೆಯುತ್ತಾರೆ. ಒಟ್ಟಿನಲ್ಲಿ ಕಾರ್ಮಿಕರಲ್ಲಿ ಸಾಮರ್ಥ್ಯ ಕಡಿಮೆ ಆಗುತ್ತಿದೆ. ಎರಡು ದಶಕಗಳ ಹಿಂದೆ ಕಾರ್ಮಿಕರ ಕೊರತೆ ಇದ್ದಿರಲಿಲ್ಲ. ಕಾರಣ ಆಗ ಕುಟುಂಬದ ಗಾತ್ರ ದೊಡ್ಡದಾಗಿದ್ದು ವಿಶೇಷ ಶಿಕ್ಷಣದ ಸೌಲಭ್ಯ ಇರುತ್ತಿರಲಿಲ್ಲ. ಹಾಗಾಗಿ ಏಳನೇ ತರಗತಿ ಅಥವಾ ಹತ್ತನೇ ತರಗತಿ ಮುಗಿಸಿದ ಹೆಣ್ಣು ಮಕ್ಕಳು ಗೇರು ಕಾರ್ಖಾನೆಗೆ ಕೆಲಸಕ್ಕೆ ದೊರೆಯುತ್ತಿದ್ದರು. ವರ್ಷಕ್ಕೆ ಮೂವತ್ತು ಪ್ರತಿಶತ ಕೆಲಸಗಾರರು ಬಿಟ್ಟುಹೋದರೂ ಅಷ್ಟೇ ಪ್ರಮಾಣದಲ್ಲಿ ಹೊಸಬರು ಬಂದು ಸೇರುತ್ತಿದ್ದರು. ಆದರೆ ಈಗ ಕುಟುಂಬದ ಗಾತ್ರ ಚಿಕ್ಕದು. ಮಕ್ಕಳ ಸಂಖ್ಯೆ ಕಡಿಮೆ. ಇದರೊಂದಿಗೆ ಜನ ಸಾಮಾನ್ಯರಿಗೆ ಶಿಕ್ಷಣದ ಮಹತ್ವದ ಅರಿವು ಮೂಡಿದೆ. ಇದರಿಂದಾಗಿ ಶಿಕ್ಷಣ ಪಡೆಯುತ್ತಿರುವವರ ಸಂಖ್ಯೆ ಹೆಚ್ಚಾಗಿದೆ. ಈ ಕಾರಣದಿಂದಾಗಿ ಗೇರು ಬೀಜದ ಫ್ಯಾಕ್ಟರಿಗೆ ಹೊಸಬರು ಸೇರುತ್ತಿಲ್ಲ. ಈಗ ಹೆಣ್ಣು ಮಕ್ಕಳು ಕಛೇರಿಗಳಲ್ಲಿ, ಅಂಗಡಿಗಳಲ್ಲಿ, ಮಾಲ್‌ಗಳಲ್ಲಿ ಕೆಲಸಗಳತ್ತ ಹೆಚ್ಚು ಆಕರ್ಷಿತರಾಗುವುದರಿಂದ ಗೇರು ಕಾರ್ಖಾನೆಗಳಲ್ಲಿ ದುಡಿಯಲು ಇಚ್ಛಿಸುವುದಿಲ್ಲ. ಇದರೊಂದಿಗೆ ಗೇರು ಬೀಜ ಒಡೆಯುವುದು, ಸುಲಿಯುವುದರಿಂದ ಕೈಗಳ ಅಂದ ಹೊರಟು ಹೋಗುತ್ತದೆ ಎಂಬ ಸೌಂದರ್ಯ ಪ್ರಜ್ಞೆಯೂ ಕಾರಣ. ಇದೂ ಕೂಡಾ ಕಾರ್ಮಿಕರ ಕೊರತೆಗೆ ಕಾರಣವಾಗಿದೆ.

ಬದಲಾಗುತ್ತಿರುವ ಸಾಮಾಜಿಕ ಜೀವನ ಪದ್ಧತಿ ಈ ಎಲ್ಲಾ ಸಮಸ್ಯೆಗಳಿಗೂ ಮೂಲ ಕಾರಣವಾಗಿದೆ. ಉತ್ತರ ಭಾರತದಲ್ಲಿ ಶ್ರಮ ವೆಚ್ಚ ತೀರಾ ಕಡಿಮೆ. ಆದುದರಿಂದ ಅಲ್ಲಿ ಗೋಡಂಬಿ ಉತ್ಪಾದನಾ ವೆಚ್ಚ ಕಡಿಮೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶ್ರಮ ವೆಚ್ಚ ಜಾಸ್ತಿ. ಇದರಿಂದಾಗಿ ಉತ್ಪಾದನಾ ವೆಚ್ಚ ಅಧಿಕವಾಗುವುದರಿಂದ ಮಾರುಕಟ್ಟೆಯಲ್ಲಿ ದಕ್ಷಿಣ ಕನ್ನಡದ ಘಟಕಗಳು ತೀವ್ರ ಸ್ಪರ್ಧೆಯನ್ನು ಎದುರಿಸಬೇಕಾಗಿ ಬರುತ್ತದೆ. ಹಾಗೆಂದು ಹೆಚ್ಚಿನ ಕೂಲಿ ಕೊಡುವ ಸ್ಥಿತಿಯಲ್ಲೂ ಘಟಕಗಳು ಇಲ್ಲ.

❖ ಸ್ವತಂತ್ರವಾಗಿ ಗೇರು ಬೆಳೆಯದ ಕಾರಣ ಹೆಚ್ಚಿನ ಎಲ್ಲಾ ಗೇರು ಕಾರ್ಖಾನೆಗಳು ತಮ್ಮ ಕಚ್ಚಾಗೇರಿನ ಪೂರೈಕೆಗಾಗಿ ಮಾರುಕಟ್ಟೆಯನ್ನೇ ಅವಲಂಬಿಸಿವೆ. ಕಚ್ಚಾಗೇರನ್ನು ಕೊಂಡುಕೊಳ್ಳಲು ಹಾಗೂ ದಾಸ್ತಾನು ಮಾಡಲು ಹೆಚ್ಚಿನ ಮೊತ್ತವನ್ನು ವ್ಯಯಿಸುತ್ತವೆ. ಕಾರ್ಖಾನೆಗಳ ಸ್ಥಿರ ವೆಚ್ಚಕ್ಕಿಂತ ಕಚ್ಚಾಗೇರಿನಲ್ಲಿ ತೊಡಗಿಸುವ ಮೊತ್ತ ಅಧಿಕ. ಗೇರು ಉದ್ಯಮದಲ್ಲಿ ಕಚ್ಚಾಗೇರಿನ ಬೆಲೆ ಪ್ರಮುಖವಾಗಿದ್ದು ಇದರ ಬೆಲೆ ಏರಿಕೆ ಉದ್ಯಮದ ಮೇಲೆ ಗಂಭೀರ ಪರಿಣಾಮ ಬೀರಬಲ್ಲದು. ಬೆಲೆಗಳ ಅಸ್ಥಿರತೆಯಿಂದಾಗಿ ವ್ಯಾಪಾರದಲ್ಲಿ ನಷ್ಟ ಅನುಭವಿಸುವುದು ಸಹಜ. ಸ್ಥಳೀಯವಾಗಿ ಗೇರು ಬೀಜದ ಪೂರೈಕೆ ಕಡಿಮೆ ಇರುವುದರಿಂದ ಹೆಚ್ಚಾಗಿ ಬೇರೆ ರಾಜ್ಯಗಳಿಂದ ಹಾಗೂ ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳಬೇಕಾಗುತ್ತದೆ. ಶೇ. ೨೨.೬೭ ಮಾತ್ರ ಘಟಕಗಳು ಮಾತ್ರ ಸ್ಥಳೀಯ ಗೇರು ಬೀಜವನ್ನು ಕೊಂಡುಕೊಂಡರೆ ಶೇ. ೩೫.೩೬ ರಷ್ಟು ಘಟಕಗಳು ಬೇರೆ ರಾಜ್ಯಗಳಿಂದ ತರಿಸಿಕೊಳ್ಳುತ್ತವೆ. ಶೇ. ೪೧.೯೬ ರಷ್ಟು ಘಟಕಗಳು ನೆರೆಯ ಬೇರೆ ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳುತ್ತಿವೆ. ಸ್ಥಳೀಯ ಗೇರು ಬೀಜದ ಗುಣಮಟ್ಟ ಉತ್ತಮವಾಗಿದ್ದರೂ ಸಾಕಷ್ಟು ಪೂರೈಕೆಯಾಗದಿರುವುದು ಸಮಸ್ಯೆ. ಗೇರು ಬೀಜ ಒಂದು ಋತು ಸಂಬಂಧಿ ಉತ್ಪನ್ನವಾಗಿದ್ದು ನಿರಂತರ ಪೂರೈಕೆ ಅಸಾಧ್ಯ. ಆ ಕಾರಣದಿಂದ ಆಮದು ಗೇರು ಬೀಜ ಅನಿವಾರ್ಯವಾಗುತ್ತದೆ. ಸಾಮಾನ್ಯವಾಗಿ ಭಾರತಕ್ಕೆ ಗೇರು ಬೀಜ ಆಮದಾಗುತ್ತಿರುವುದು ವಿಯೆಟ್ನಾಂ, ನೈಜೀರಿಯಾ, ಮೊಜಾಂಬಿಕ್, ಕೀನ್ಯಾ, ಬೆನಿನ್, ಕೋಟೆ ಡಿ ಐವರಿ, ಬ್ರೆಜಿಲ್, ತಾಂಜೇನಿಯಾ, ಇಂಡೋನೇಶಿಯಾ, ಘಾನಾ, ಮತ್ತಿತರ ದೇಶಗಳಿಂದ. ಬೇರೆ ಬೇರೆ ರಾಷ್ಟ್ರಗಳ ಗೇರು ಬೆಳೆಯುವ ಋತುಮಾನ ಬೇರೆ ಬೇರೆಯಾಗಿರುವುದರಿಂದ ನಿರಾತಂಕವಾಗಿ ವರ್ಷವಿಡೀ ಗೇರು ಬೀಜ ಲಭ್ಯವಿದೆ. ಒಟ್ಟು ಬಳಸಲ್ಪಡುವ ಕಚ್ಚಾಗೇರಿನಲ್ಲಿ ಶೇ. ೫೦ ರಷ್ಟು ಆಮದು ಮಾಡಿಕೊಳ್ಳುತ್ತಿದ್ದು, ಮುಂದಿನ ದಿನಗಳಲ್ಲಿ ಭಾರತಕ್ಕೆ ಗೇರು ಬೀಜ ರಫ್ತು ಮಾಡುತ್ತಿರುವ ದೇಶಗಳು ಸ್ವತಃ ತಾವೇ ಸಂಸ್ಕರಣೆ ಪ್ರಾರಂಭಿಸಿದರೆ ಈ ಘಟಕಗಳು ತೀವ್ರವಾದ ಕೊರತೆ ಅನುಭವಿಸಬೇಕಾಗುತ್ತದೆ. ಈಗಾಗಲೇ ಕೆಲವು ರಾಷ್ಟ್ರಗಳು ಈ ನಿಟ್ಟಿನಲ್ಲಿ ಕಾರ್ಯಾರಂಭ ಮಾಡಿರುವುದು ದ.ಕ. ಜಿಲ್ಲೆಯ ಗೇರು ಉದ್ಯಮದಲ್ಲಿ ಆತಂಕ ಸೃಷ್ಟಿಸಿದೆ. ಇದರೊಂದಿಗೆ ಸಣ್ಣ ಸಂಸ್ಕರಣಾಗಾರರು ಗೋಡಂಬಿಯ ಸಂಸ್ಕರಣಾ ಪ್ರಕ್ರಿಯೆಯಲ್ಲಿ ಆರೋಗ್ಯಕರ ಪರಿಸರ ಕಾಯ್ದುಕೊಳ್ಳುವಲ್ಲಿ ವಿಫಲರಾಗಿದ್ದು ಗೋಡಂಬಿಯ ಗುಣಮಟ್ಟದ ಕುಸಿತಕ್ಕೆ ಕಾರಣವಾಗಿದೆ. ಇದರಿಂದಾಗಿ ಗೋಡಂಬಿ ಮಾರುಕಟ್ಟೆ ಹಿನ್ನಡೆ ಅನುಭವಿಸುವಂತಾಗಿರುವುದು ಉದ್ಯಮವನ್ನು ಸಂಕಷ್ಟಕ್ಕೆ ಗುರಿಯಾಗಿಸಿದೆ.


❖ ಗೇರು ಉದ್ಯಮ ಶ್ರಮ ಬಾಹುಳ್ಯದ ಉದ್ಯಮವಾಗಿದ್ದರೂ ಬಂಡವಾಳದ ಅಗತ್ಯತೆಯನ್ನು ಕಡೆಗಣಿಸುವಂತಿಲ್ಲ. ಒಂದು ಗೇರು ಸಂಸ್ಕರಣಾ ಘಟಕ ಪ್ರಾರಂಭಿಸಲು ಭೂಮಿ, ಕಟ್ಟಡ, ಯಂತ್ರೋಪಕರಣಗಳೆಂದು ಕನಿಷ್ಠ ರೂ. ೨೫ ರಿಂದ ೩೦ ಲಕ್ಷ ಸ್ಥಿರ ಬಂಡವಾಳ ಬೇಕು. ಇದರೊಂದಿಗೆ ಘಟಕಗಳಿಗೆ ದುಡಿಯುವ ಬಂಡವಾಳವೂ ಅಗತ್ಯ. ಕಚ್ಚಾಗೇರು ಕೊಂಡುಕೊಳ್ಳಲು ವರ್ಷಕ್ಕೆ ರೂ. ೫೦ ಲಕ್ಷ ಬೇಕಾಗುತ್ತದೆ. ಗೇರು ಬೀಜದ ಮಾರಾಟ ವ್ಯವಸ್ಥೆಯಲ್ಲಿ ಯಾವುದೇ ಸಂಘಟಿತ ವ್ಯವಸ್ಥೆಗಳು ಇಲ್ಲದೇ ಇರುವುದರಿಂದ ಬೆಲೆ ವ್ಯತ್ಯಯ ಸರ್ವೇ ಸಾಮಾನ್ಯ. ಇದರಿಂದ ಘಟಕದ ಮಾಲಕರು ನಷ್ಟ ಅನುಭವಿಸಬೇಕಾಗುತ್ತದೆ. ಹೆಚ್ಚಾಗಿ ಆಮದು ಗೇರನ್ನು ಅವಲಂಬಿಸಿರುವುದರಿಂದ ದೊಡ್ಡ ಮೊತ್ತದ ಹಣವನ್ನು ಏಕ ಕಾಲದಲ್ಲಿ

ವ್ಯಯಿಸಬೇಕು. ಇದು ಘಟಕದ ಮುಂದಿರುವ ಪ್ರಮುಖ ಸಮಸ್ಯೆ. ಶೇ. ೬೦ರಷ್ಟು ಘಟಕಗಳು ಏಕ ಯಜಮಾನ್ಯ ವ್ಯವಸ್ಥೆಯನ್ನು ಹೊಂದಿದ್ದು ಸ್ವಂತ ಬಂಡವಾಳತೊಡಗಿಸಿ ಉದ್ಯಮ ಪ್ರಾರಂಭಿಸಿದರೆ ಶೇ. ೪೦ ರಷ್ಟು ಉದ್ಯಮಗಳು ಪಾಲುದಾರಿಕೆಯಲ್ಲಿ ನಡೆಯುತ್ತಿವೆ. ಶೇ. ೮೦ ರಷ್ಟು ಉದ್ಯಮಗಳು ರಾಷ್ಟ್ರೀಕೃತ ಬ್ಯಾಕುಗಳಿಂದ ಸಾಲ ಪಡೆದರೆ ಉಳಿದ ಶೇ. ೨೦ ರಷ್ಟು ಉದ್ಯಮಗಳು ಸ್ನೇಹಿತರಿಂದ, ಸಂಬಂಧಿಕರಿಂದ ಸಾಲ ಪಡೆದುಕೊಳ್ಳುತ್ತವೆ.

- ಶೇ. ೬೫ ರಷ್ಟು ಉದ್ಯಮಗಳು ಅನಿಶ್ಚಿತ ವಿದ್ಯುತ್ ಪೂರೈಕೆಯಿಂದ ಬಳಲುತ್ತಿದ್ದು ಉತ್ಪಾದನಾ ವೆಚ್ಚ ಹೆಚ್ಚಳಕ್ಕೆ ಕಾರಣವಾಗಿದೆ. ಗ್ರಾಮೀಣ ಪ್ರದೇಶದ ಘಟಕಗಳು ಮುಖ್ಯವಾಗಿ ಈ ಸಮಸ್ಯೆಯನ್ನು ಎದುರಿಸುತ್ತಿವೆ, ಶೇ. ೧೫ ರಷ್ಟು ಉದ್ಯಮಗಳು ಸರಿಯಾದ ಸಾರಿಗೆ ಸೌಕರ್ಯಗಳನ್ನು ಹೊಂದಿಲ್ಲ. ನಗರದ ಹೊರ ವಲಯಗಳಲ್ಲಿ ಸ್ಥಾಪಿತವಾದ ಘಟಕಗಳು ಸರಿಯಾದ ರಸ್ತೆ ಹಾಗೂ ನೀರಿನ ಸೌಕರ್ಯವನ್ನು ಹೊಂದಿಲ್ಲ. ಇದರೊಂದಿಗೆ ಕಾರ್ಮಿಕರ ಲಭ್ಯತೆಯಿಂದಲೂ ವಂಚಿತವಾಗಿವೆ. ಕಾರ್ಮಿಕರು ಸಿಗುವುದಿಲ್ಲ ಎಂಬ ಕಾರಣಕ್ಕೆ ಘಟಕಗಳು ಬೇಯಿಸಿ ಒಣಗಿಸಿದ ಗೇರು ಬೀಜಗಳನ್ನು ಕಾರ್ಮಿಕರು ಲಭ್ಯವಿರುವ ನಗರದ ಜನ ನಿಬಿಡ ಪ್ರದೇಶಗಳಿಗೆ ತೆಗೆದುಕೊಂಡು ಹೋಗಿ ಶೆಡ್ ಗಳನ್ನು ನಿರ್ಮಾಣ ಮಾಡಿ ಅಥವಾ ಬಾಡಿಗೆ ಕಟ್ಟಡಗಳಲ್ಲಿ ಸ್ಥಳೀಯವಾಗಿ ಲಭ್ಯವಿರುವ ಕಾರ್ಮಿಕರನ್ನು ಬಳಸಿ ಗೇರು ಬೀಜವನ್ನು ಒಡೆದು ತಿರುಳನ್ನು ಬೇರ್ಪಡಿಸಿ ಮತ್ತೆ ಮೂಲ ಘಟಕಕ್ಕೆ ತರುವ ವ್ಯವಸ್ಥೆಯನ್ನು ರೂಢಿಸಿಕೊಂಡಿವೆ. ಇದನ್ನು ಜಾಬ್ ವರ್ಕಿಂಗ್ ಎಂದು ಕರೆಯುತ್ತಾರೆ. ಒಂದು ಪ್ರಮುಖ ಘಟಕ ಇಂತಹ ಜಾಬ್ ವರ್ಕಿಂಗ್ ಅನ್ನು ಹಲವು ಕಡೆ ಪ್ರಾರಂಭಿಸುತ್ತದೆ. ಕಾರ್ಮಿಕರಿಗೆ ದೈನಂದಿನ ವೇತನ ಬಿಟ್ಟರೆ ಬೇರೆ ಯಾವುದೇ ಹೆಚ್ಚುವರಿಭತ್ಯೆಗಳಾಗಲೀ ಸೌಲಭ್ಯಗಳಾಗಲೀ ದೊರೆಯುವುದಿಲ್ಲ. ಆದರೂ ಕಾರ್ಮಿಕರು ತಮ್ಮ ಮನೆಗಳಿಗೆ ಸಮೀಪವಾಗುತ್ತದೆ ಎಂಬ ಕಾರಣಕ್ಕೆ ಈ ಪದ್ಧತಿಯನ್ನು ಒಪ್ಪಿಕೊಂಡಿದ್ದಾರೆ. ಇದರಿಂದ ಕಾರ್ಮಿಕರು ಸವಲತ್ತು ವಂಚಿತರಾಗಿದ್ದಾರೆ.

೫.೪ ಮಹಿಳಾ ಕಾರ್ಮಿಕರ ಸ್ಥಿತಿಗತಿ

ಗೇರು ಉದ್ಯಮ ಮಹಿಳಾ ಪ್ರಾಧಾನ್ಯದ ಒಂದು ಉದ್ಯಮ. ಗೇರು ಕಾರ್ಮಿಕರಲ್ಲಿ ಶೇಕಡಾ ೯೫ ರಷ್ಟು ಮಹಿಳೆಯರಿದ್ದಾರೆ. ಹಾಗಾಗಿ ಮಹಿಳಾ ಕಾರ್ಮಿಕರ ಸಮಸ್ಯೆಗಳನ್ನು ಪ್ರತ್ಯೇಕವಾಗಿ ವ್ಯವಸ್ಥಿತ ಪ್ರಶ್ನಾವಳಿಯ ಮೂಲಕ ಅಧ್ಯಯನ ಮಾಡಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ೫೦ ಗೇರು ಸಂಸ್ಕರಣಾ ಘಟಕಗಳಿವೆ. ಅವುಗಳಲ್ಲಿ ೧೫ ಗೇರು ಸಂಸ್ಕರಣಾ ಘಟಕಗಳನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದ್ದು ಅಲ್ಲಿರುವ ಒಟ್ಟು ೨೦೬೨ ಮಹಿಳಾ ಕಾರ್ಮಿಕರಲ್ಲಿ ೨೦೦ ಮಹಿಳಾ ಕಾರ್ಮಿಕರನ್ನು ಅಧ್ಯಯನಕ್ಕಾಗಿ ಸಂದರ್ಶನ ನಡೆಸಲಾಗಿದೆ. (ಅನುಬಂಧ ಛಾಯಾಚಿತ್ರ ಸಂಖ್ಯೆ ೧೦) ಮಹಿಳಾ ಕಾರ್ಮಿಕರನ್ನು ಆಯ್ದುಕೊಳ್ಳುವಾಗ ಎಲ್ಲಾ ತಾಲೂಕುಗಳಿಗೆ ಮತ್ತು ಎಲ್ಲಾ ವರ್ಗಗಳಿಗೆ ಪ್ರಾತಿನಿಧ್ಯ ದೊರೆಯುವ ಹಾಗೆ ನೋಡಿಕೊಳ್ಳಲಾಗಿದೆ. ಉದ್ದೇಶಿತ ಪ್ರಶ್ನೆಗಳಿಗೆ ಉತ್ತರಗಳನ್ನು ಪಡೆದು ದೊರೆತ ಮೂಲ ದತ್ತಾಂಶಗಳನ್ನು ಕೋಷ್ಟಕ ರೂಪಕ್ಕೆ ಹಾಗೂ ಚಿತ್ರಗಳ ರೂಪಕ್ಕೆ ಪರಿವರ್ತಿಸಿ ಮಹಿಳಾ ಕಾರ್ಮಿಕರ ಸಮಸ್ಯೆಗಳನ್ನು ವಿಶ್ಲೇಷಿಸಲಾಗಿದೆ. ಆಯ್ದುಕೊಳ್ಳಲಾದ ಮಹಿಳಾ ಕಾರ್ಮಿಕರ ಸಾಮಾಜಿಕ ವಿವರವನ್ನು ಚಿತ್ರ ೩.೫ ರಲ್ಲಿ ತೋರಿಸಲಾಗಿದೆ.




ಚಿತ್ರ ೫.೩ ವಕ್ತೃಗಳ ವರ್ಗ/ಜಾತಿ

ವಕ್ತೃಗಳಲ್ಲಿ ಶೇಕಡಾ ೪೬ ಹಿಂದುಳಿದ ವರ್ಗಗಳಿಗೆ ಸೇರಿದವರು. ಶೇಕಡಾ ೧೬ ಪರಿಶಿಷ್ಟ ವರ್ಗದವರಾದರೆ ಶೇಕಡಾ ೧೪ ಪರಿಶಿಷ್ಟ ಜಾತಿಗೆ ಸೇರಿದವರು. ಇತರ ಸಮುದಾಯದವರ ಪ್ರಮಾಣ ಶೇಕಡಾ ೧೮. ಕ್ರೈಸ್ತರ ಪ್ರಮಾಣ ಶೇ. ೪ ಮತ್ತು ಮುಸ್ಲಿಂ ಮಹಿಳೆಯರ ಪ್ರಮಾಣ ಶೇ. ೨ ರಷ್ಟಿದೆ. ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಒಟ್ಟು ಪ್ರಮಾಣ ಶೇಕಡಾ ೭೬. ಉಳಿದೆಲ್ಲ ಸಮುದಾಯಗಳ ಪ್ರಮಾಣ ಶೇಕಡಾ ೨೪ ಮಾತ್ರ. ಅದರಲ್ಲೂ ಕ್ರೈಸ್ತರ ಮತ್ತು ಮುಸಲ್ಮಾನರ ಒಟ್ಟು ಪ್ರಮಾಣ ಬರಿಯ ಶೇ. ೬ ಮಾತ್ರ, ಇತರ ಸಮುದಾಯದ ಕಾರ್ಮಿಕರಲ್ಲಿ ಬಹುತೇಕರು ಗೌಡ ಮತ್ತು ಬಂಟ ಸಮುದಾಯಗಳಿಗೆ ಸೇರಿದವರು. ಬ್ರಾಹ್ಮಣರು, ಗೌಡ ಸಾರಸ್ವತ ಬ್ರಾಹ್ಮಣರು ಮತ್ತು ಜೈನ ಮಹಿಳೆಯರು ಎಲ್ಲೂ ಕಾರ್ಮಿಕರಾಗಿ ಕೆಲಸ ಮಾಡುತ್ತಿಲ್ಲ. ಇವರುಗಳು ಮೇಲು ಜಾತಿ ಹಾಗೂ ಮೇಲು ವರ್ಗಕ್ಕೆ ಸೇರಿದವರಾಗಿರುವುದು ಇದಕ್ಕೆ ಕಾರಣವಾಗಿರುವಂತೆ ಕಂಡುಬರುತ್ತದೆ.

ಗೇರು ಉದ್ಯಮದ ಮಹಿಳಾ ಕಾರ್ಮಿಕರಲ್ಲಿ ಮುಕ್ಕಾಲು ಭಾಗ ಸಮಾಜದ ಕೆಳಸ್ತರದಿಂದ ಬಂದವರು. ಇವರಲ್ಲಿ ಶೇಕಡಾ ೯೦ ರಷ್ಟು ಮಂದಿಗೆ ವ್ಯವಸಾಯದ ಭೂಮಿಯಾಗಲೀ ಪಿತ್ರಾರ್ಜಿತ ಆಸ್ತಿಯಾಗಲೀ ಇಲ್ಲ. ಉಳಿದ ಶೇಕಡಾ ೧೦ ರಷ್ಟು ಮಂದಿಗೆ ಕೃಷಿ ಭೂಮಿ ಇದ್ದರೂ ಜೀವನೋಪಾಯಕ್ಕೆ ಸಾಕಷ್ಟು ಆದಾಯ ತರುತ್ತಿಲ್ಲ. ಭಾರತದಲ್ಲಿ ಹಿಂದುಳಿದ ಜಾತಿಗಳೇ ಹಿಂದುಳಿದ ವರ್ಗಗಳಾಗಿರುವ ಪರಿಸ್ಥಿತಿಯ ಬಗ್ಗೆ ಸಾಕಷ್ಟು ಅಧ್ಯಯನಗಳು ನಡೆದಿವೆ. ಇಂಥವರ ಆರ್ಥಿಕ ಪ್ರಗತಿಯೊಡನೆ ಸಾಮಾಜಿಕ ಪ್ರಗತಿಯೂ ಆಗಬೇಕಾಗಿದೆ.

ಗೇರು ಸಂಸ್ಕರಣಾ ಪ್ರಕ್ರಿಯೆಯಲ್ಲಿ ಗೇರು ಬೀಜದ ಚಿಪ್ಪು ಒಡೆಯುವುದು, ಸಿಪ್ಪೆ ತೆಗೆಯುವುದು, ಶ್ರೇಣೀಕೃತಗೊಳಿಸುವುದು, ಪ್ಯಾಕಿಂಗ್ ಮಾಡುವುದು ಇವೇ ಮೊದಲಾದ ಕೆಲಸಗಳಿಗೆ ಯಾವುದೇ ಶಿಕ್ಷಣದ ಅವಶ್ಯಕತೆ ಇಲ್ಲ. ಅಲ್ಪ ಸ್ವಲ್ಪ ತರಬೇತಿಯೊಂದಿಗೆ ಈ ಕೆಲಸಗಳನ್ನು ನಿಭಾಯಿಸಲು ಸಾಧ್ಯವಿರುವುದರಿಂದ ಅನಕ್ಷರಸ್ಥರು ಹಾಗೂ ಕೇವಲ ಪ್ರಾಥಮಿಕ ಶಿಕ್ಷಣ ಪಡೆದವರು ಈ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಾರೆ. ಹಾಗಾಗಿ ಮಹಿಳಾ ಕಾರ್ಮಿಕರ ಶೈಕ್ಷಣಿಕ ಮಟ್ಟ ಕೂಡಾ ಕೆಳ ಹಂತದಲ್ಲೇ ಇದೆ. ವಕ್ತೃಗಳ ಶೈಕ್ಷಣಿಕ ಮಟ್ಟವನ್ನು ಚಿತ್ರ ೫.೪ ತೋರಿಸುತ್ತದೆ.






ಚಿತ್ರ ೫.೪ ವಕ್ಕಗಳ ಶೈಕ್ಷಣಿಕ ಮಟ್ಟ

ಒಟ್ಟು ಮಹಿಳಾ ಕಾರ್ಮಿಕರಲ್ಲಿ ಶೇ. ೧೦ ರಷ್ಟು ಅನಕ್ಷರಸ್ಥರಿದ್ದಾರೆ. ಒಂದರಿಂದ ಏಳನೆಯ ತರಗತಿಯವರೆಗೆ ಓದಿದವರ ಪ್ರಮಾಣ ಶೇ. ೪೦. ಆದರೆ ಇವರಲ್ಲಿ ಬಹುತೇಕರು ಸರಿಯಾಗಿ ಓದಲು ಮತ್ತು ಕಾಗುಣಿತ ತಪ್ಪಿಲ್ಲದೆ ಬರೆಯಲು ಸಾಮರ್ಥ್ಯವಿಲ್ಲದವರು. ಎಂಟರಿಂದ ಹತ್ತರವರೆಗೆ ಓದಿದವರು ಶೇ. ೩೨ ಮಂದಿ. ಪಿಯುಸಿ ಶಿಕ್ಷಣ ಪಡೆದವರು ಶೇ. ೧೦ ಮಾತ್ರ. ಪದವಿ ಶಿಕ್ಷಣ ಪಡೆದವರು ಕೇವಲ ಶೇ. ೮. ಪದವೀಧರ ಮಹಿಳೆಯರು ಕಾರ್ಮಿಕರಾಗಿ ಕೆಲಸ ಮಾಡುವ ಅನಿವಾರ್ಯತೆಗೆ ತೀವ್ರ ಬಡತನ ಮತ್ತು ನಿರುದ್ಯೋಗ ಕಾರಣವಾಗಿದೆ. ಮಹಿಳೆಯರಲ್ಲಿ ಕಛೇರಿ ಕೆಲಸ ಮಾಡುವವರ ಪ್ರಮಾಣ ಶೇ. ೨ ಮಾತ್ರ. ಉಳಿದವರೆಲ್ಲರೂ ಕಾರ್ಮಿಕರಾಗಿಯೇ ಕೆಲಸ ಮಾಡುತ್ತಿದ್ದಾರೆ.


ಸಂದರ್ಶನದ ಅವಧಿಯಲ್ಲಿ ಮಹಿಳಾ ಕಾರ್ಮಿಕರು ಗೇರು ಉದ್ಯಮದಲ್ಲಿ ತೊಡಗಿರುವುದು ಯಾಕೆ ಎಂಬ ಪ್ರಶ್ನೆ ಹಾಕಲಾಯಿತು ಅದಕ್ಕೆ ದೊರೆತ ಉತ್ತರಗಳು ಹೀಗಿವೆ. (ಚಿತ್ರ ೫.೫)



ಚಿತ್ರ ೫.೫ ಮಹಿಳಾ ವಕ್ಕಗಳು ಉದ್ಯೋಗ ಆರಿಸಲು ಕಾರಣ.

ಮಹಿಳಾ ಕಾರ್ಮಿಕರಲ್ಲಿ ಜೀವನೋಪಾಯಕ್ಕೆ ಬೇರೆ ದಾರಿ ಕಾಣದೆ ಶೇ. ೬೪ ಮಂದಿ ಈ ಉದ್ಯೋಗವನ್ನು ಆರಿಸಿದ್ದಾರೆ. ಶೇ. ೧೪ ಮಂದಿ ಬೇರಾವುದೇ ಕೆಲಸ ಗೊತ್ತಿಲ್ಲದೆ ಈ ಕ್ಷೇತ್ರಕ್ಕೆ ಬಂದಿದ್ದಾರೆ. ಶೇ. ೨೨ ರಷ್ಟು ಮಂದಿ ಫ್ಯಾಕ್ಟರಿ ಹತ್ತಿರದಲ್ಲಿದೆ ಎಂಬ ಕಾರಣಕ್ಕಾಗಿ ಗೇರು ಉದ್ಯಮದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಆರ್ಥಿಕ ಅನಿವಾರ್ಯತೆ ಅವರನ್ನು ಈ ಕೆಲಸ ಆರಿಸುವಂತೆ ಮಾಡಿದೆ.

ಸಂದರ್ಶಿಸಿದವರಲ್ಲಿ ವಿವಾಹಿತರ ಮತ್ತು ಅವಿವಾಹಿತರ ಪ್ರಮಾಣ ಹೀಗಿದೆ. (ಚಿತ್ರ ೫.೬)




ಚಿತ್ರ ೫.೬ ವಕ್ತೃಗಳ ವೈವಾಹಿಕ ಸ್ಥಿತಿ

ಮಹಿಳಾ ವಕ್ತೃಗಳಲ್ಲಿ ಅವಿವಾಹಿತರಿಗಿಂತ ವಿವಾಹಿತರ ಪ್ರಮಾಣ ಅಧಿಕವಿದೆ. ಅವಿವಾಹಿತರ ಪ್ರಮಾಣ ಶೇ. ೩೨ ಎಂದಾದರೆ ವಿವಾಹಿತರ ಪ್ರಮಾಣ ಶೇ. ೬೮ ರಷ್ಟು. ಮಹಿಳಾ ಕಾರ್ಮಿಕರಲ್ಲಿ ಮೂರನೆಯ ಒಂದಂಶದಷ್ಟು ಅವಿವಾಹಿತರಾದರೆ ಮೂರನೆಯ ಎರಡರಷ್ಟು ವಿವಾಹಿತರಾಗಿದ್ದಾರೆ.

ಬಡ ಕುಟುಂಬದ ಅವಿವಾಹಿತ ತರುಣಿಯರು ಕುಟುಂಬಕ್ಕೆ ಆದಾಯ ಮೂಲಗಳಾಗಿದ್ದಾರೆ. ಅವರಿಗೆ ಬೇಗ ಮದುವೆ ಮಾಡಿಸಿಬಿಟ್ಟರೆ ಅವರ ಆದಾಯ ಗಂಡಂದಿರ ಪಾಲಾಗುತ್ತದೆ. ತವರಿನಲ್ಲಿ ಕುಟುಂಬ ನಿರ್ವಹಣೆ ದುಸ್ತರವಾಗುತ್ತದೆ. ಈ ಕಾರಣದಿಂದ ಹಿರಿಯರು ಈ ತರುಣಿಯರಿಗೆ ಮದುವೆ ಮಾಡಿಸುವ ಬಗ್ಗೆ ಮುತುವರ್ಜಿ ತೋರಿಸುವುದಿಲ್ಲ. ಈ ಮಾತು ಅವರ ಶೈಕ್ಷಣಿಕ ಸ್ಥಿತಿಗೂ ಅನ್ವಯಿಸುತ್ತದೆ. ಅವರ ಶೈಕ್ಷಣಿಕ ಹಿಂದುಳಿಕೆಗೆ ಅವರ ಬಡತನ ಒಂದೇ ಕಾರಣವಲ್ಲ. ಹೆಣ್ಣನ್ನು ಆದಷ್ಟು ಬೇಗ ವರಮಾನ ಗಳಿಕೆಯ ಮೂಲವನ್ನಾಗಿ ಮಾಡುವ ಅವಸರ ಪ್ರವೃತ್ತಿಯೂ ಕಾರಣ. ಅಲ್ಲದೆ ಹೆಣ್ಣು ಮಕ್ಕಳು ಓದಿ ಏನಾಗಬೇಕು ಎಂಬ ಸಾಂಪ್ರದಾಯಿಕ ಧೋರಣೆಯೂ ಇದರ ಹಿಂದೆ ಕೆಲಸ ಮಾಡಿದೆ.

ವಿವಾಹಿತ ಮಹಿಳಾ ಕಾರ್ಮಿಕರ ಪತಿಯಂದಿರ ವೃತ್ತಿಗಳ ಬಗ್ಗೆಯೂ ಮಾಹಿತಿ ಕಲೆ ಹಾಕಲಾಗಿದೆ. (ಚಿತ್ರ ೫.೭)





ಚಿತ್ರ ೫.೭. ವಿವಾಹಿತ ಉದ್ಯೋಗಿಗಳ ಪತಿಯ ವೃತ್ತಿ ವಿವರ

ಗೇರು ಕಾರ್ಖಾನೆಯಲ್ಲಿ ದುಡಿಯುವ ಮಹಿಳೆಯರು ಆರ್ಥಿಕವಾಗಿ ಕೆಳ ಸ್ತರದವರು. ಸಹಜವಾಗಿ ಅವರ ಗಂಡಂದಿರು ಕೂಡಾ ಹೆಚ್ಚಿನ ಸಂಖ್ಯೆಯಲ್ಲಿ ಕೂಲಿ ಕಾರ್ಮಿಕರು ಅಥವಾ ಸಣ್ಣ ಕೃಷಿಕರು ಆಗಿರುವುದು ಸಮೀಕ್ಷೆಯಿಂದ ತಿಳಿದು ಬಂದ ಅಂಶ. ಒಟ್ಟು ವಿವಾಹಿತ ಮಹಿಳಾ ಕಾರ್ಮಿಕರ ಪತಿಯಂದಿರಲ್ಲಿ ಕೂಲಿಯಾಳುಗಳ ಸಂಖ್ಯೆಯೇ ಅತ್ಯಧಿಕ. ಅವರ ಪ್ರಮಾಣ ಶೇ. ೫೫.೯. ಪತ್ನಿ ದುಡಿಯುವ ಫ್ಯಾಕ್ಟರಿಯಲ್ಲಿ ಶೇ. ೧೧.೮ ಮಂದಿ ಬದುಕು ಕಂಡುಕೊಂಡಿದ್ದಾರೆ. ಶೇ. ೮.೮ ರಷ್ಟು ಮಂದಿ ಸಣ್ಣ ರೈತರು. ಡ್ರೈವರುಗಳಾಗಿ ದುಡಿಯುವವರ ಪ್ರಮಾಣವೂ ಸರಿ ಸುಮಾರು ಅಷ್ಟೇ ಇದೆ. ಶೇ. ೧೪.೭ ರಷ್ಟು ಮಂದಿ ಟೈಲರ್‌ಗಳಾಗಿಯೂ, ಸಣ್ಣ ವ್ಯಾಪಾರಸ್ಥರಾಗಿಯೂ, ಮರದ ಕೆಲಸ ಇತ್ಯಾದಿಗಳಲ್ಲಿಯೂ ತೊಡಗಿಸಿಕೊಂಡಿದ್ದಾರೆ.


ವಿವಾಹಿತ ಮಹಿಳೆಯರ ಪತಿಯಂದಿರಲ್ಲಿ ಅರ್ಧಾಂಶಕ್ಕಿಂತಲೂ ಅಧಿಕ ಮಂದಿ ಕೂಲಿ ಕೆಲಸ ಮಾಡುವವರು. ಇದು ಅವರ ಬಡತನಕ್ಕೆ ಹಿಡಿದ ಕನ್ನಡಿಯಾಗಿದೆ. ಶೇ. ೧೧.೮ ಮಂದಿ ಪತ್ನಿಯೊಂದಿಗೆ ಅದೇ ಫ್ಯಾಕ್ಟರಿಯಲ್ಲಿ ಹೊರೆ ಕೆಲಸ, ಡ್ರೈವರ್, ಕಾವಲುಗಾರರಾಗಿ ಕೆಲಸ ಮಾಡುತ್ತಿರುವವರು. ಉಳಿದವರು ಸಣ್ಣ ರೈತರಾಗಿ, ರಿಕ್ಷಾ ಡ್ರೈವರ್‌ಗಳಾಗಿ ಮತ್ತಿತರ ಆದಾಯ ಹೆಚ್ಚಿಲ್ಲದ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಹೀಗಾಗಿ ಒಟ್ಟು ಕುಟುಂಬ ಬಡತನದಲ್ಲಿಯೇ ಇದೆ. ಕೆಲಸ ಮಾಡದೆ ಬದುಕುವ ಪರಿಸ್ಥಿತಿಯಲ್ಲಿ ಯಾರೂ ಇಲ್ಲ ಎನ್ನುವುದು ಗಮನಿಸಬೇಕಾದ ಅಂಶ.

ಬಡತನ ಅಥವಾ ಸಿರಿವಂತಿಕೆಯನ್ನು ನಿರ್ಧರಿಸುವಲ್ಲಿ ಕುಟುಂಬದ ಗಾತ್ರ ಬಹಳ ಮುಖ್ಯವಾದುದು. ದೊಡ್ಡ ಗಾತ್ರದ ಕುಟುಂಬಗಳ ಆದಾಯ ಕಡಿಮೆ ಇರುತ್ತದೆ. ತಲಾ ಆದಾಯ ಹೆಚ್ಚಾಗಬೇಕಾದರೆ ಕುಟುಂಬದ ಗಾತ್ರ ಸಣ್ಣದಿರಬೇಕು. ವಕ್ತೃಗಳ ಕುಟುಂಬಗಳ ಗಾತ್ರದ ವಿವರ ಇಂತಿದೆ. (ಕೋಷ್ಟಕ ೫.೧೬)

ಕೋಷ್ಟಕ ೫.೧೬ ವಿವಾಹಿತ ಮಹಿಳಾ ವಕ್ತೃಗಳ ಕುಟುಂಬದ ವಿವರ

ಕ್ರಮ ಸಂಖ್ಯೆ	ವಿವರ	ವಿವಾಹಿತ ವಕ್ತೃಗಳ ಮಕ್ಕಳ ಸಂಖ್ಯೆ	ಶೇಕಡಾ
೧	ಗಂಡು	೧೨೮	೪೭.೮
೨	ಹೆಣ್ಣು	೧೪೦	೫೨.೨
	ಒಟ್ಟು	೨೬೮	೧೦೦

ವಿವಾಹಿತ ಮಹಿಳಾ ವಕ್ತೃಗಳ ಮಕ್ಕಳ ಸಂಖ್ಯೆಯು ಕುತೂಹಲಕಾರಿ ಅಂಶವೊಂದನ್ನು ತಿಳಿಸುತ್ತದೆ. ವಿವಾಹಿತರಾದ ೧೩೬ ವಕ್ತೃಗಳಿಗೆ ಒಟ್ಟು ೨೬೮ ಮಕ್ಕಳಿದ್ದಾರೆ. ಬಹುತೇಕವಾಗಿ ಎಲ್ಲಾ ಕುಟುಂಬಗಳಲ್ಲಿ ಸರಾಸರಿ ಇಬ್ಬರು ಮಕ್ಕಳಿದ್ದಾರೆ. ಕೆಲವು ಕುಟುಂಬಗಳಲ್ಲಿ ಮೂವರು ಮಕ್ಕಳಿದ್ದರೆ, ಕೇವಲ ಒಂದೇ ಮಗು ಇರುವ ಕುಟುಂಬಗಳೂ ಅಪರೂಪಕ್ಕೆ ಕಂಡು ಬರುತ್ತವೆ. ಮಕ್ಕಳಲ್ಲಿ ಶೇ. ೪೭.೮ ರಷ್ಟು ಗಂಡು ಮಕ್ಕಳಾದರೆ ಶೇ. ೫೨.೨ ರಷ್ಟು ಹೆಣ್ಣು ಮಕ್ಕಳು. ಇದನ್ನು ಚಿತ್ರ ೫.೮ ರಲ್ಲಿ ಅಭಿವ್ಯಕ್ತಿಗೊಳಿಸಲಾಗಿದೆ.




ಚಿತ್ರ ೫.೮ ಮಹಿಳಾ ವಕ್ತೃಗಳ ಮಕ್ಕಳ ಸಂಖ್ಯೆ

ದೇಶದ ೨೦೧೧ ರ ಜನಗಣತಿಯ ಪ್ರಕಾರ ಲಿಂಗಾನುಪಾತ ೧೦೦೦:೯೪೦ ಇದೆ. ಅಂದರೆ ಪ್ರತಿ ಸಾವಿರ ಗಂಡಸರಿಗೆ ೯೪೦ ಹೆಂಗಸರು. ಆದರೆ ೨೦೧೧ರ ಜನಗಣತಿಯ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಲಿಂಗಾನುಪಾತ ಪ್ರತಿ ಸಾವಿರ ಗಂಡಸರಿಗೆ ೧೦೨೦ ಹೆಂಗಸರು ಇದ್ದು, ಈ ವಿಷಯದಲ್ಲಿ ನಾವು ಪ್ರಮೀಳಾ ರಾಜ್ಯವಾದ ಸಮೀಪದ ಕೇರಳಕ್ಕೆ ಹತ್ತಿರದಲ್ಲೇ ಇದ್ದೇವೆ. ೨೦೧೧ ರ ಜನಗಣತಿಯ ಪ್ರಕಾರ ನೆರೆಯ ಕೇರಳ ರಾಜ್ಯದಲ್ಲಿ ಪ್ರತೀ ಸಾವಿರ ಗಂಡಸರಿಗೆ ೧೦೮೪ ಮಹಿಳೆಯರು ಇದ್ದಾರೆ. ಹೆಣ್ಣುಗಳ ಪ್ರಮಾಣ ಅಧಿಕವಿರುವುದು ಮಹಿಳೆಯರಿಗೆ ಹೆಚ್ಚಿನ ಸಾಮಾಜಿಕ ಸ್ಥಾನಮಾನ ಇರುವುದರ ಮತ್ತು ಹೆಣ್ಣು ಭ್ರೂಣ ಹತ್ಯೆ ಆಗದಿರುವುದರ ಸೂಚನೆಯಾಗಿದೆ. ಕುಟುಂಬದ ಗಾತ್ರ ಚಿಕ್ಕದಾಗಿರುವ ಕಾರಣ ವಕ್ತೃಗಳು ಆರ್ಥಿಕವಾಗಿ ಸಾಕಷ್ಟು ಸ್ಥಿತಿವಂತರಾಗಿದ್ದು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡುವ ಇಚ್ಛೆ ಹೊಂದಿದ್ದು ಒಳ್ಳೆಯ ಉದ್ಯೋಗ



ಮಾಡುವಂತಾಗಲೀ ಎಂದು ಬಯಸುತ್ತಿರುವುದು ಅಂಕಿ ಅಂಶಗಳು ಸ್ಪಷ್ಟಪಡಿಸುತ್ತವೆ. ತಮ್ಮ ಮಕ್ಕಳನ್ನು ಗೇರು ಉದ್ಯಮದಲ್ಲಿ ಮುಂದುವರಿಸುವ ಬಗ್ಗೆ ಈ ಕೆಳಗಿನ ಅಭಿಪ್ರಾಯಗಳು ಲಭ್ಯವಾದವು. (ಚಿತ್ರ ೫.೯)




ಚಿತ್ರ ೫.೯ ವಕ್ತೃಗಳ ಮಕ್ಕಳನ್ನು ಇದೇ ಉದ್ಯಮದಲ್ಲಿ ಮುಂದುವರಿಸುವ ಬಗ್ಗೆ.

ಶೇಕಡಾ ೬ ರಷ್ಟು ಮಹಿಳಾ ಕಾರ್ಮಿಕರು ಗೇರು ಉದ್ಯಮದಲ್ಲಿ ತಮ್ಮ ಮಕ್ಕಳನ್ನು ಮುಂದುವರಿಸಲು ಬಯಸುತ್ತಾರೆ. ಶೇ.೯೪ ಮಂದಿಗೆ ತಮ್ಮ ಮಕ್ಕಳಿಗೆ ಒಳ್ಳೆಯ ಬೇರೆ ಉದ್ಯೋಗ ಸಿಗಬೇಕೆಂದಿದೆ ಎಂದಿದ್ದಾರೆ. ಶೇ. ೮ ವಕ್ತೃಗಳು ಮಕ್ಕಳು ಡಾಕ್ಟರಾಗಬೇಕೆಂದು, ಶೇ.೧೫ ರಷ್ಟು ವಕ್ತೃಗಳು ಮಕ್ಕಳು ಎಂಜಿನಿಯರಾಗಬೇಕೆಂದು ಕನಸು ಕಾಣುತ್ತಿದ್ದಾರೆ. ಶೇ. ೧೦ ರಷ್ಟು ಮಂದಿ ಮಕ್ಕಳನ್ನು ಬ್ಯಾಂಕು ಉದ್ಯೋಗಿಗಳಾಗಿ, ಶೇ. ೧೬ ರಷ್ಟು ವಕ್ತೃಗಳು ಮಕ್ಕಳನ್ನು ಶಿಕ್ಷಕ/ಶಿಕ್ಷಕಿಯರಾಗಿ ಕಾಣಲು ಬಯಸಿದ್ದಾರೆ. ಶೇ. ೩೨ ರಷ್ಟು ಮಂದಿ ಮಕ್ಕಳನ್ನು ಉನ್ನತ ಸರಕಾರಿ ಉದ್ಯೋಗಗಳಲ್ಲಿ ಪ್ರತಿಷ್ಠಾಪಿಸಲು ಬಯಸುತ್ತಾರೆ. ಶೇ. ೧೮ ರಷ್ಟು ವಕ್ತೃಗಳು ಮಕ್ಕಳು ಇತರೆ ಉದ್ಯೋಗ ಗಳಿಸಿ ಅಭಿವೃದ್ಧಿ ಸಾಧಿಸಬೇಕೆನ್ನುತ್ತಾರೆ. ಗೇರು ಉದ್ಯಮವನ್ನು ನೆಚ್ಚಿ ಜೀವನ ಮಟ್ಟವನ್ನು ಉತ್ಕೃಷ್ಟಗೊಳಿಸಲು ಸಾಧ್ಯವಿಲ್ಲವೆನ್ನುವುದು ಬಹುತೇಕ ಮಹಿಳಾ ವಕ್ತೃಗಳ ಅಭಿಪ್ರಾಯವಾಗಿದೆ. ಮುಂದಿನ ಪೀಳಿಗೆ ಗೇರು ಸಂಸ್ಕರಣೆಯಲ್ಲಿ ತೊಡಗುವ ಸಾಧ್ಯತೆಗಳು ಇಲ್ಲ ಎಂಬುದಾಗಿ ಲಭ್ಯ ಮಾಹಿತಿಗಳು ಸ್ಪಷ್ಟಪಡಿಸುತ್ತವೆ.

ಮಹಿಳಾ ಕಾರ್ಮಿಕರು ಸುದೀರ್ಘ ಅವಧಿಯವರೆಗೆ ಗೇರು ಉದ್ಯಮದಲ್ಲಿ ತೊಡಗಿಸಿಕೊಳ್ಳಲು ಬಯಸುತ್ತಾರೆಯೇ ಎಂಬ ಪ್ರಶ್ನೆಗೆ ದೊರೆತ ಉತ್ತರ ಹೀಗಿದೆ. (ಚಿತ್ರ ೫.೧೦)






ಚಿತ್ರ ೫.೧೦. ವಕ್ತೃಗಳ ಸೇವಾ ಅವಧಿ

ಸಂದರ್ಶನ ನಡೆಸಲಾದ ಮಹಿಳೆಯರಲ್ಲಿ ಶೇ. ೧೬ ಮಂದಿ ಗೇರು ಉದ್ಯಮದಲ್ಲಿ ೧ ಲಿಂದ ೫ ವರ್ಷಗಳವರೆಗೆ ತೊಡಗಿಸಿಕೊಂಡವರು. ೬ ಲಿಂದ ೧೦ ವರ್ಷ ತೊಡಗಿಸಿಕೊಂಡವರ ಪ್ರಮಾಣ ಶೇ. ೩೮. ೧೧ ಲಿಂದ ೧೫ ವರ್ಷಗಳವರೆಗೆ ತೊಡಗಿಸಿಕೊಂಡವರು ಶೇ. ೨೬ ರಷ್ಟು. ೧೬ ಲಿಂದ ೨೦ ವರ್ಷಗಳವರೆಗೆ ತೊಡಗಿಸಿಕೊಂಡವರು ಶೇ. ೬ ರಷ್ಟು. ೨೦ ವರ್ಷಗಳಿಗಿಂತಲೂ ಅಧಿಕ ವರ್ಷ ದುಡಿಯುತ್ತಿರುವವರ ಪ್ರಮಾಣ ಶೇ. ೧೪ ರಷ್ಟು.

ಗೇರು ಉದ್ಯಮದಲ್ಲಿ ತೊಡಗಿರುವ ಮಹಿಳೆಯರಲ್ಲಿ ಶೇ. ೫೦ ರಷ್ಟು ಮಂದಿ ನಿಂತುಕೊಂಡೇ ಕೆಲಸ ಮಾಡಬೇಕಾಗುತ್ತದೆ. ಇತ್ತೀಚೆಗಿನ ವರ್ಷಗಳ ತನಕ ಕಾಲಿನಿಂದ ಒತ್ತುವ ಯಂತ್ರಗಳನ್ನು ಬಳಸಿ ಗೇರು ಬೀಜ ಒಡೆಯುವ ಕೆಲಸ ಮಾಡಬೇಕಿತ್ತು. ಹಾಗಾಗಿ ಕಾಲು ನೋವು, ಬೆನ್ನು ನೋವು ಇತ್ಯಾದಿ ಸಮಸ್ಯೆಗಳಿಗೆ ತುತ್ತಾಗುತ್ತಿದ್ದರು. ಈಗ ಹೆಚ್ಚಿನ ಕಾರ್ಖಾನೆಗಳಲ್ಲಿ ಸ್ವಯಂ ಚಾಲಿತ ಯಂತ್ರಗಳು ಬಳಸಲ್ಪಡುತ್ತಿದ್ದರೂ ಹಳೇ ಯಂತ್ರಗಳು ಸಂಪೂರ್ಣವಾಗಿ ಮರೆಯಾಗಿಲ್ಲ. ಗೇರು ಬೀಜದ ಸಿಪ್ಪೆ ತೆಗೆಯುವ ಕೆಲಸ ಕುಳಿತುಕೊಂಡು ಮಾಡುವ ಕೆಲಸ. ನಿರಂತರವಾಗಿ ಹೀಗೆ ಕುಳಿತುಕೊಂಡು ಕೆಲಸ ಮಾಡುವುದು ಕಾರ್ಮಿಕರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ವಯೋ ಸಹಜವಾಗಿ ಕುತ್ತಿಗೆ ನೋವು, ಸೊಂಟ ನೋವು, ದೃಷ್ಟಿ ಮಾಂದ್ಯತೆ ಇತ್ಯಾದಿ ಸಮಸ್ಯೆಗಳಿಗೆ ಬಲಿಯಾಗುತ್ತಾರೆ. ಇದರೊಂದಿಗೆ ಬಡತನ, ಅಪೌಷ್ಟಿಕತೆಯಿಂದಲೂ ಬಳಲುತ್ತಾರೆ. ಆದುದರಿಂದ ಅವರು ತುಂಬಾ ವರ್ಷಗಳವರೆಗೆ ಫ್ಯಾಕ್ಟರಿಯಲ್ಲಿ ದುಡಿಯಲು ಸಾಧ್ಯವಾಗುವುದಿಲ್ಲ.

ಕಾರ್ಮಿಕರಲ್ಲಿ ಕಛೇರಿ ಕೆಲಸ ಮಾಡುವವರ ಪ್ರಮಾಣ ಶೇ.೨ ರಷ್ಟು ಮಾತ್ರ. ಅವರು ಮಾಸಿಕ ಸಂಬಳ ಪಡೆಯುತ್ತಾರೆ. ಅದು ಕನಿಷ್ಠ ರೂ. ೬,೦೦೦ ದಿಂದ ಗರಿಷ್ಠ ೧೩,೦೦೦ ದ ತನಕವಾಗಿರುತ್ತದೆ. ಗೇರು ಬೀಜ ಒಡೆಯುವ, ಸಿಪ್ಪೆ ಸುಲಿಯುವ ಮಹಿಳೆಯರು ಅವರ ಸಾಮರ್ಥ್ಯಕ್ಕನುಗುಣವಾಗಿ ವಾರಕ್ಕೊಮ್ಮೆ ಕೂಲಿ ಪಡೆಯುತ್ತಾರೆ. ಅವರು ಪಡೆಯುವ ಕೂಲಿಯ ವಿವರ ಹೀಗಿದೆ. (ಚಿತ್ರ ೫.೧೧)






ಚಿತ್ರ ೫.೧೧ ವಕ್ಕಗಳ ವಾರದ ಗಳಿಕೆ

ಮಹಿಳಾ ಕಾರ್ಮಿಕರಲ್ಲಿ ಶೇಕಡಾ ೫೮ ಮಂದಿ ರೂ. ೫೦೦ ಎಂದ ೧೦೦೦ದವರೆಗೆ ವಾರದಲ್ಲಿ ಗಳಿಸುತ್ತಾರೆ. ರೂ. ೧೦೦೦ ದಿಂದ ೧೫೦೦ರವರೆಗೆ ಗಳಿಸುವವರು ಶೇ. ೪೦ ರಷ್ಟಿದ್ದಾರೆ. ಉಳಿದ ಶೇ. ಎರಡರಷ್ಟು ಮಂದಿ ರೂ. ೧೫೦೦ ಎಂದ ರೂ. ೨೦೦೦ ದವರೆಗೆ ಗಳಿಸುತ್ತಾರೆ. ಸಾಮಾನ್ಯವಾಗಿ ತಿಂಗಳಿಗೆ ಸರಾಸರಿ ರೂ. ೪೦೦೦ ಅವರು ಗಳಿಸುತ್ತಾರೆ. ಇನ್ನೂ ಹೆಚ್ಚು ಸಾಮರ್ಥ್ಯವುಳ್ಳವರು ರೂ. ೬೦೦೦ ಮತ್ತು ಅತ್ಯಧಿಕ ಸಾಮರ್ಥ್ಯವುಳ್ಳವರು ತಿಂಗಳಿಗೆ ರೂ. ೮೦೦೦ ಗಳಿಸಬಲ್ಲರು. ಉತ್ಪಾದನಾ ಆಧರಿತ ಕೂಲಿ ಪದ್ಧತಿಯಿಂದಾಗಿ ಕಾರ್ಮಿಕರಲ್ಲಿ ಸಾಮರ್ಥ್ಯ ಹೆಚ್ಚಿಸಲು ಪೈಪೋಟಿ ನಡೆಯುತ್ತದೆ. ಉದ್ಯಮದ ಬೆಳವಣಿಗೆಯ ದೃಷ್ಟಿಯಿಂದ ಇದು ಅತ್ಯಂತ ಅಗತ್ಯ. ನಿರಂತರವಾಗಿ ಹೆಚ್ಚು ವರ್ಷಗಳ ಕಾಲ ಸೇವೆಯಲ್ಲಿ ಮುಂದುವರಿದದ್ದೇ ಆದಲ್ಲಿ ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸಲು ಸಾಧ್ಯವಿದೆ.


ಗೇರು ಉದ್ಯಮದ ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ, ಹೆರಿಗೆ ರಜೆ, ಪ್ರಾವಿಡೆಂಟ್ ಫಂಡ್, ಬೋನಸ್, ವಾರದ ರಜೆ ಮತ್ತು ಇತರ ಸೌಲಭ್ಯಗಳಿವೆ. ಅದರ ವಿವರ ಹೀಗಿದೆ. (ಚಿತ್ರ ೫.೧೨)



ಚಿತ್ರ ೫.೧೨ ಮಹಿಳಾ ಕಾರ್ಮಿಕರಿಗೆ ಸಿಗುವ ಸೌಲಭ್ಯ

ಒಟ್ಟು ವಿವಾಹಿತ ಮಹಿಳೆಯರಲ್ಲಿ ಶೇ. ೨೪ ರಷ್ಟು ಮಂದಿ ಹೆರಿಗೆ ಭತ್ಯೆ ಪಡೆದರೆ ಶೇ. ೯೧ ರಷ್ಟು ವಕ್ತೃಗಳು ಹೆರಿಗೆ ರಜೆಯನ್ನಷ್ಟೇ ಪಡೆದಿದ್ದಾರೆ. ಹೆಚ್ಚಿನ ಮಹಿಳೆಯರು ಹೆರಿಗೆ ರಜೆಯ ಅವಧಿಯ ನಂತರವೂ ಕೆಲಸಕ್ಕೆ ಹಾಜರಾಗುವುದಿಲ್ಲ. ಹಾಗಾಗಿ ಹೆರಿಗೆ ಭತ್ಯೆಯಿಂದ ವಂಚಿತರಾಗುತ್ತಾರೆ. ಒಟ್ಟು ಕಾರ್ಮಿಕರಲ್ಲಿ ಶೇ. ೯೬ ರಷ್ಟು ಮಂದಿ ಪ್ರಾವಿಡೆಂಟ್ ಫಂಡ್ ಪಡೆದರೆ ಶೇ. ೯೮ ರಷ್ಟು ವಕ್ತೃಗಳು ಬೋನಸ್ ಪಡೆಯುತ್ತಾರೆ. ಶೇ. ೬೨ ರಷ್ಟು ಮಂದಿ ಪೆನ್ಷನ್ ಪಡೆಯುತ್ತಿದ್ದಾರೆ. ಖಾಯಂ ಕೆಲಸಗಾರರೆಂದು ಪರಿಗಣಿಸಿದ ಕಾರ್ಮಿಕರಿಗೆ ಮಾತ್ರ ಪ್ರಾವಿಡಂಟ್ ಫಂಡ್ ಬೋನಸ್ ದೊರೆತರೆ, ಹತ್ತು ವರ್ಷಗಳಿಗಿಂತಲೂ ಹೆಚ್ಚು ಸೇವೆ ಸಲ್ಲಿಸಿದವರಿಗೆ ಮಾತ್ರ ಅವರ ನಿವೃತ್ತಿ ವಯಸ್ಸಿನ ನಂತರ ಪೆನ್ಷನ್ ಸಿಗುತ್ತದೆ. ತಾತ್ಕಾಲಿಕ ನೆಲೆಯಲ್ಲಿ ದುಡಿಯುವ ಕಾರ್ಮಿಕರಿಗೆ ಯಾವುದೇ ಸೌಲಭ್ಯಗಳಿಲ್ಲ. ಕೇವಲ ಅವರ ವಾರದ ಗಳಿಕೆ ಮಾತ್ರ ಸಿಗುತ್ತದೆ. ಖಾಯಂ ನೆಲೆಯಲ್ಲಿ ದುಡಿಯುವ ಹಾಗೂ ಕಾರ್ಖಾನೆಗಳ ದಾಖಲೆ ಪುಸ್ತಕಗಳಲ್ಲಿ ನೋಂದಾಯಿಸಲ್ಪಟ್ಟ ಕಾರ್ಮಿಕರು ಮಾತ್ರ ಮೇಲಿನ ಸೌಲಭ್ಯಗಳಿಗೆ ಬಾಧ್ಯರಾಗುತ್ತಾರೆ.

ಪ್ರಾವಿಡೆಂಟ್ ಫಂಡ್ ಬೋನಸ್, ಪೆನ್ಷನ್ ಇತ್ಯಾದಿ ನೆರವುಗಳಲ್ಲದೆ ಕಾರ್ಮಿಕರಿಗೆ ಆರೋಗ್ಯ ನೆರವು, ಸಾಲ, ಮಕ್ಕಳಿಗೆ ವಿದ್ಯಾರ್ಥಿ ವೇತನ ಹಾಗೂ ಇತರೆ ಸೌಲಭ್ಯಗಳು ಲಭ್ಯವಿದೆ. ಅವುಗಳ ವಿವರ ಇಂತಿದೆ. (ಚಿತ್ರ ೫.೧೩)




ಚಿತ್ರ ೫.೧೩. ಮಹಿಳಾ ಕಾರ್ಮಿಕರಿಗೆ ಸಿಗುವ ಹೆಚ್ಚುವರಿ ಸೌಲಭ್ಯಗಳು

ಪುತ್ತೂರು ಹಾಗೂ ಮಂಗಳೂರು ತಾಲೂಕು ರಾಜ್ಯ ಕಾರ್ಮಿಕ ವಿಮಾ ಯೋಜನೆ (ಇ. ಎಸ್.ಐ) ಯಡಿಯಲ್ಲಿ ಬರುವುದರಿಂದ ಆರೋಗ್ಯ ನೆರವು ಲಭ್ಯವಿದೆ. ಇನ್ನುಳಿದ ಎಲ್ಲಾ ತಾಲೂಕುಗಳಿಗೂ ಆಯಾ ಕಾರ್ಖಾನೆಗಳ ಮಾಲಕರು ಸಣ್ಣ ಪ್ರಮಾಣದ ವೈದ್ಯಕೀಯ ನೆರವು, ವೈದ್ಯಕೀಯ ಮಾಹಿತಿ ಹಾಗೂ ತಪಾಸಣೆ ಸೌಲಭ್ಯವನ್ನು ನೀಡುತ್ತಿದ್ದಾರೆ. ಶೇ. ೫೪ ಮಂದಿ ಕಾರ್ಮಿಕರು ಆರೋಗ್ಯ ನೆರವು ಪಡೆದಿರುತ್ತಾರೆ. ಶೇ. ೫೮ ಮಂದಿ ತಮ್ಮ ಫ್ಯಾಕ್ಟರಿಗಳಿಂದ ಸಾಲವನ್ನು ತೆಗೆದುಕೊಂಡಿದ್ದಾರೆ. ಶೇ. ೨೨ರಷ್ಟು ಮಂದಿ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವು ಪಡೆದಿದ್ದಾರೆ. ಶೇ. ೨೦ ಮಂದಿ ಇತರೆ ಸೌಲಭ್ಯಗಳನ್ನು ಅಂದರೆ ವಾಸಕ್ಕೆ ಮನೆ, ಉಚಿತ ಊಟ ಹಾಗೂ ತಿಂಡಿ, ಮಕ್ಕಳ ಪಾಲನಾ ಕೇಂದ್ರ ಇತ್ಯಾದಿಯಾಗಿ ಸೌಲಭ್ಯಗಳನ್ನು ಪಡೆದಿದ್ದಾರೆ.

ಮಹಿಳಾ ಸಬಲೀಕರಣವನ್ನು ಎರಡು ಮಾನದಂಡಗಳ ಮೂಲಕ ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ. ಮೊದಲನೆಯದು ಮಹಿಳೆಯರ ಆರ್ಥಿಕ ಸ್ವಾತಂತ್ರ್ಯ. ಇದಕ್ಕೆ ಸಂಬಂಧಿಸಿದ ದೊರೆತ ಉತ್ತರ ಹೀಗಿದೆ. (ಚಿತ್ರ ೫.೧೪)






ಚಿತ್ರ ೫.೧೪ ಕಾರ್ಮಿಕ ಮಹಿಳೆಯರ ಆರ್ಥಿಕ ಸ್ವಾತಂತ್ರ್ಯ

ಮಹಿಳಾ ಕಾರ್ಮಿಕರಲ್ಲಿ ಶೇ. ೭೮ ಮಂದಿಗೆ ತಮ್ಮ ಗಳಿಕೆಯ ಮೇಲೆ ಪೂರ್ಣ ಹಕ್ಕಿದೆ. ಅವರು ತಮ್ಮದೇ ಬ್ಯಾಂಕ್ ಖಾತೆ ಹೊಂದಿ ಆರ್ಥಿಕ ವ್ಯವಹಾರ ನಡೆಸುತ್ತಾರೆ. ತಮ್ಮ ಗಳಿಕೆಯನ್ನು ಕುಟುಂಬದ ಹಿರಿಯನ ಕೈಗೆ ಸುರಿದು ತಮ್ಮ ಖರ್ಚಿಗೆ ಕೈಯೊಡ್ಡುವ ಪರಿಸ್ಥಿತಿ ಇಲ್ಲ. ಶೇ. ೨೨ ಮಂದಿ ತಮ್ಮ ಗಳಿಕೆಯನ್ನು ಕುಟುಂಬದ ಯಜಮಾನನಿಗೆ ನೀಡಿ ಆತನ ಸಮ್ಮತಿಯಂತೆ ಖರ್ಚು ಮಾಡುತ್ತಾರೆ. ಅವರ ಆರ್ಥಿಕ ಸ್ವಾತಂತ್ರ್ಯ ಕಡಿಮೆಯಾದರೂ ಎಲ್ಲರೂ ಬ್ಯಾಂಕ್ ಖಾತೆ ಹೊಂದಿದ್ದಾರೆ.

ಸಬಲೀಕರಣಕ್ಕೆ ಸಂಬಂಧಿಸಿದ ಎರಡನೇ ಮಾನದಂಡ ಮಹಿಳಾ ಉದ್ಯೋಗಿಗಳ ಅಭಿಪ್ರಾಯಕ್ಕೆ ಮನ್ನಣೆ ಎಷ್ಟರ ಮಟ್ಟಿಗೆ ಇದೆ ಎನ್ನುವುದು. ಇದಕ್ಕೆ ದೊರೆತ ಪ್ರತಿಕ್ರಿಯೆ ಹೀಗಿದೆ. (ಚಿತ್ರ ೫.೧೫)



ಚಿತ್ರ ೫.೧೫ ಮಹಿಳಾ ಸಬಲೀಕರಣ





ಮಹಿಳಾ ಕಾರ್ಮಿಕರಲ್ಲಿ ಶೇ. ೯೪ ಮಂದಿ ತಮ್ಮ ಅಭಿಪ್ರಾಯಕ್ಕೆ ಮನ್ನಣೆ ಇದೆ ಎನ್ನುತ್ತಾರೆ. ಯಾವುದೇ ತೀರ್ಮಾನ ಕೈಗೊಳ್ಳುವಾಗ ಕುಟುಂಬದ ಹಿರಿಯ ತಮ್ಮಲ್ಲಿ ಕೇಳದೇ ಇರುವುದಿಲ್ಲ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಶೇ. ೬ ಮಂದಿ ತಮ್ಮ ಅಭಿಪ್ರಾಯಗಳನ್ನು ಮನೆಯಲ್ಲಿ ಕೇಳುವುದಿಲ್ಲ ಎಂದಿದ್ದಾರೆ. ಪುರುಷ ಪ್ರಧಾನ ಸಮಾಜದಲ್ಲಿ ಅದು ಸಹಜವೂ ಕೂಡಾ.

ಆರ್ಥಿಕ ಸ್ವಾತಂತ್ರ್ಯ ಮತ್ತು ಅಭಿಪ್ರಾಯ ಸ್ವಾತಂತ್ರ್ಯ ಇವೆರಡು ಮಾನದಂಡಗಳನ್ನು ಪರಿಶೀಲಿಸಿದರೆ ಗೇರು ಉದ್ಯಮವು ಮಹಿಳಾ ಸಬಲೀಕರಣ ಸಾಧಿಸಿದೆ ಎಂದು ಹೇಳಬಹುದು.

೫.೫ ಮಹಿಳಾ ಕಾರ್ಮಿಕರ ಸಮಸ್ಯೆಗಳು

ಗೇರು ಉದ್ಯಮದಲ್ಲಿ ತೊಡಗಿಸಿಕೊಂಡಿರುವ ಮಹಿಳೆಯರ ನಿರ್ದಿಷ್ಟ ಸಮಸ್ಯೆಗಳಿವು:

- ಮಹಿಳಾ ಕಾರ್ಮಿಕರಲ್ಲಿ ಬಹುತೇಕರು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗದಿಂದ ಬಂದವರು. ಆರ್ಥಿಕ ಬಡತನದ ಜೊತೆಗೆ ಅವರು ಸಾಮಾಜಿಕವಾಗಿಯೂ ಹಿಂದುಳಿದಿದ್ದಾರೆ. ಅವರ ಆರ್ಥಿಕ ಹಾಗೂ ಸಾಮಾಜಿಕ ಸ್ಥಾನಮಾನಗಳನ್ನು ಎತ್ತರಿಸುವ ಯಾವುದೇ ಗಂಭೀರ ಪ್ರಯತ್ನಗಳು ಆಗುತ್ತಿಲ್ಲ. ಮೇಲ್ವರ್ಗಕ್ಕೆ ಸೇರಿದ ಮಹಿಳೆಯರು ಗೇರು ಕಾರ್ಖಾನೆಗಳಿಂದ ದೂರ ಉಳಿಯುವುದರೊಂದಿಗೆ ಒಂದು ಸಾಮಾಜಿಕ ಕಂದರ ನಿರ್ಮಾಣವಾಗುತ್ತಿದೆ. ಮಾತ್ರವಲ್ಲ ಒಂದು ಕಾಲದಲ್ಲಿ ಇದ್ದ "ನಾವು ಫ್ಯಾಕ್ಟರಿ ಕೆಲಸಕ್ಕೆ ಹೋಗುತ್ತಿದ್ದೇವೆ" ಎಂಬ ಅಭಿಮಾನದ ಭಾವನೆ ಮರೆಯಾಗಿ ಕೀಳರಿಮೆಯ ಪ್ರಜ್ಞೆ ಕಾರ್ಮಿಕರಲ್ಲಿ ಮೂಡುತ್ತಿದೆ. ಮಹಿಳೆಯರು ಬದಲಿ ಉದ್ಯೋಗದತ್ತ ಮನಸ್ಸು ಮಾಡುತ್ತಿದ್ದು ಗೇರು ಉದ್ಯಮದ ಭವಿಷ್ಯ ಸಂದಿಗ್ದತೆಯಲ್ಲಿ ಸಿಲುಕಿದೆ.
- ಬಹುತೇಕ ಮಹಿಳಾ ಕಾರ್ಮಿಕರು ಪ್ರಾಥಮಿಕ ಶಿಕ್ಷಣವನ್ನಷ್ಟೇ ಪಡೆದಿದ್ದಾರೆ. ಇದು ಅವರಲ್ಲಿ ಓದುವ ಬರೆಯುವ ಹವ್ಯಾಸವನ್ನು ಸೃಷ್ಟಿಸಿಲ್ಲ. ಶೈಕ್ಷಣಿಕ ಹಿಂದುಳಿಕೆಯಿಂದಾಗಿ ಉಳಿತಾಯದ ಹವ್ಯಾಸ ಜನಪ್ರಿಯವಾಗಿಲ್ಲ. ಪ್ರಸಕ್ತ ದುಡಿಯುವ ಮಹಿಳೆಯರು ವಯೋ ಸಹಜವಾದ ಅನಾರೋಗ್ಯಕ್ಕೆ ಒಳಗಾದಾಗ ಅವರ ಆರ್ಥಿಕ ಸ್ಥಿತಿ ಶೋಚನೀಯವಾಗಲಿದೆ. ಉಳಿತಾಯದ ಕೊರತೆಯಿಂದಾಗಿ ಬಂಡವಾಳ ಸಂಚಯನಕ್ಕೆ ಅವರ ಕೊಡುಗೆ ನಗಣ್ಯವೆನಿಸಿದೆ.
- ಮಹಿಳಾ ಕಾರ್ಮಿಕರು ಗೇರು ಬೀಜವನ್ನು ಎಷ್ಟು ಸುಲಿಯುತ್ತಾರೆ ಎನ್ನುವ ಆಧಾರದ ಮೇಲೆ ಅವರ ಆದಾಯ ನಿರ್ಧಾರವಾಗುತ್ತದೆ. ಅವರ ಸಾಮರ್ಥ್ಯ ಅಧಿಕವಾದರೆ ಗಳಿಕೆಯು ಅಧಿಕವಾಗುತ್ತದೆ. ಆದರೆ ಎಲ್ಲಾ ದಿನಗಳಲ್ಲೂ ಅವರ ಸಾಮರ್ಥ್ಯ ಒಂದೇ ತೆರನಾಗಿರಲು ಸಾಧ್ಯವಿಲ್ಲ. ತಿಂಗಳ ತೊಂದರೆಯ ದಿನಗಳಲ್ಲಿ ಅವರ ಸಾಮರ್ಥ್ಯ ಕುಗ್ಗುತ್ತದೆ. ಅಲ್ಲದೆ ವಯಸ್ಸಾದಂತೆ ಸಹಜವಾಗಿ ಅವರ ಸಾಮರ್ಥ್ಯ ಕಡಿಮೆಯಾಗುತ್ತದೆ. ದುಡಿದರಷ್ಟೇ ಆದಾಯ ಎನ್ನುವ ಇವರಿಗೆ ಖಚಿತವಾದ ದಿನಕೂಲಿಯಾಗಲೀ ಮಾಸಿಕ ವೇತನವಾಗಿ ಇರುವುದಿಲ್ಲ. ಆದ್ದರಿಂದ ಸಂಕಷ್ಟ ಕಾಲದಲ್ಲಿ, ರೋಗ ರುಜಿನಗಳ ಕಾಲದಲ್ಲಿ ಅವರಿಗೆ ಯಾವ ಗಳಿಕೆಯೂ ಇರುವುದಿಲ್ಲ. ಕೆಲವೊಂದು ಕಾರ್ಖಾನೆಗಳು ದೇಶೀ ಕಚ್ಚಾಗೇರನ್ನೇ ನೆಚ್ಚಿಕೊಂಡಿರುವುದರಿಂದ ಕಚ್ಚಾಗೇರಿನ ಕೊರತೆಯಿಂದ ವರ್ಷದಲ್ಲಿ ಒಂದೆರಡು ತಿಂಗಳು ಉದ್ಯೋಗ ನೀಡಲು ವಿಫಲವಾಗುತ್ತವೆ. ಆ ಸಂದರ್ಭದಲ್ಲಿ ಕಾರ್ಮಿಕರು ನಿರುದ್ಯೋಗ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಆರ್ಥಿಕ ಅಭದ್ರತೆ, ಉದ್ಯೋಗದ ಅಸ್ಥಿರತೆ ಅವರನ್ನು ಮಾನಸಿಕವಾಗಿ ಜರ್ಜರಿತರನ್ನಾಗಿಸುತ್ತವೆ.
- ಗೇರು ಉದ್ಯಮದಲ್ಲಿ ಸಾಮರ್ಥ್ಯಕ್ಕನುಗುಣವಾಗಿ ಸಂಭಾವನೆ ಸಿಗುವುದರಿಂದ ಮಹಿಳಾ ಕಾರ್ಮಿಕರು ಪ್ರತಿದಿನ ಸುಮಾರು ೮ ರಿಂದ ೧೦ ಗಂಟೆಗಳವರೆಗೆ ಕೆಲಸ ಮಾಡುತ್ತಾರೆ. ಸರಿಯಾದ ವಿಶ್ರಾಂತಿಯ ಕೊಠಡಿಯಾಗಲೀ, ವಿಶ್ರಾಂತಿಯ ಅವಧಿಯಾಗಲೀ, ಇರುವುದಿಲ್ಲ. ನಿರಂತರವಾಗಿ ನಿಂತುಕೊಂಡೇ ಅಥವಾ ಕುಳಿತುಕೊಂಡೇ ಏಕತಾನತೆಯ ಕೆಲಸವನ್ನು

ಗಂಟೆಗಟ್ಟಳೆ ಮಾಡಬೇಕಾಗುತ್ತದೆ. ಸ್ವಚ್ಛವಾದ ಕೆಲಸದ ಪರಿಸರದ ಕೊರತೆ, ಶುಚಿತ್ವದ ಕೊರತೆ ಇವೆಲ್ಲವೂ ಅವರ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರಿವೆ. ಬದಲಿ ಉದ್ಯೋಗ ಲಭ್ಯವಿಲ್ಲದ ಕಾರಣ ಅನಿವಾರ್ಯವಾಗಿ ಈ ಕೆಲಸದಲ್ಲೇ ಅವರು ಮುಂದುವರಿಯಬೇಕಾಗಿದೆ.

- ಬಹುತೇಕ ಮಹಿಳಾ ಕಾರ್ಮಿಕರು ಬಡತನದ ಹಿನ್ನಲೆಯನ್ನು ಹೊಂದಿದ್ದು ಮನೆಯಲ್ಲಿ ಕೃಷಿ ಕೆಲಸ, ಅಡುಗೆ ಕೆಲಸ ಇತ್ಯಾದಿ ಜವಾಬ್ದಾರಿಗಳನ್ನು ನಿರ್ವಹಿಸಿ ಫ್ಯಾಕ್ಟರಿಗೆ ಬರುತ್ತಾರೆ. ಫ್ಯಾಕ್ಟರಿಗಳಲ್ಲಿ ೮-೧೦ ಗಂಟೆ ಅವಿಶ್ರಾಂತ ದುಡಿಮೆ ಮಾಡುತ್ತಾರೆ. ವಸ್ತುಶಃ ಅವರಿಗೆ ವಿಶ್ರಾಂತಿ ಎಂಬುದಿಲ್ಲ. ಅವಿರತ ದುಡಿಮೆಯಿಂದ ಅವರ ಸಾಮರ್ಥ್ಯ ಕಡಿಮೆಯಾಗುತ್ತದೆ. ಆಗ ಅವರ ದುಡಿಮೆಯ ಗಳಿಕೆಯು ಕೂಡಾ ಕಡಿಮೆಯಾಗುತ್ತದೆ.
- ಮಹಿಳಾ ಕಾರ್ಮಿಕರ ಶೈಕ್ಷಣಿಕ ಮಟ್ಟ ಬಹಳ ಕಡಿಮೆ ಇದೆ. ಆದುದರಿಂದ ಅವರು ಆರ್ಥಿಕೇತರ ಕಾರಣಗಳಿಗಾಗಿ ಹೆಚ್ಚು ಖರ್ಚು ಮಾಡುತ್ತಾರೆ. ದೇವರು, ಪೂಜೆ, ಹಬ್ಬ ಹರಿದಿನಗಳೆಂದು ಅವರ ಗಳಿಕೆಯ ಬಹುಪಾಲು ಆರ್ಥಿಕೇತರ ಕಾರಣಗಳಿಗಾಗಿ ವ್ಯಯವಾಗುತ್ತದೆ. ಇದು ಅವರ ಜೀವನ ಮಟ್ಟವನ್ನು ಮತ್ತಷ್ಟು ಕುಗ್ಗಿಸಿದೆ.
- ಗೇರು ಕಾರ್ಖಾನೆಗಳಲ್ಲಿ ದುಡಿಯುವ ಮಹಿಳೆಯರು ಬಹು ಸಂಖ್ಯಾತರು ಆರ್ಥಿಕವಾಗಿ, ಸಾಮಾಜಿಕವಾಗಿ ಕೆಳ ಸ್ತರಕ್ಕೆ ಸೇರಿದವರು. ಮೇಲ್ಜಾತಿಯ ಮಹಿಳೆಯರು ಇಲ್ಲವೇ ಇಲ್ಲ ಎನ್ನಬಹುದು. ಗೇರು ಬೀಜ ಒಡೆಯುವ, ಸುಲಿಯುವ ಕೆಲಸವನ್ನು ತುಚ್ಛವಾಗಿ ಅಥವಾ ನಿಕೃಷ್ಟವಾಗಿ ನೋಡುವ ಮನೋಭಾವ ಸಮಾಜದಲ್ಲಿ ಇದೆ. ಅಂತಹ ಕೆಲಸವನ್ನು ಕೆಳವರ್ಗದವರಷ್ಟೇ ಮಾಡಬಲ್ಲರು ಎಂಬ ಭಾವನೆ ಗೇರು ಉದ್ಯಮದಲ್ಲಿ ವ್ಯಾಪಕವಾಗಿ ಹರಡಿದೆ. ಹಾಗಾಗಿ ಮೇಲ್ವರ್ಗದ ಮಹಿಳೆಯರು ಗೇರು ಫ್ಯಾಕ್ಟರಿಯಲ್ಲಿ ದುಡಿಯಲು ಹಿಂದೇಟು ಹಾಕುತ್ತಾರೆ. ಇದು ಸಮಾಜದ ಅಸಮಾನತೆಯನ್ನು ಹೆಚ್ಚಿಸುವುದರೊಂದಿಗೆ ಗೇರು ಉದ್ಯಮದಲ್ಲಿ ದುಡಿಯುವ ಮಹಿಳೆಯರಲ್ಲಿ ಕೀಳರಿಮೆಯನ್ನು ಹುಟ್ಟು ಹಾಕುತ್ತದೆ. ಅವರಲ್ಲಿ ವೃತ್ತಿ ಗೌರವವನ್ನು ನಾಶ ಮಾಡುತ್ತದೆ. ಇಷ್ಟೇ ಅಲ್ಲ ಅವರ ಮಕ್ಕಳು ಒಳ್ಳೆಯ ಶಿಕ್ಷಣ ಪಡೆದು ಉನ್ನತ ಹುದ್ದೆ ಗಳಿಸಿದಾಗ ತಮ್ಮ ತಾಯಂದಿರನ್ನು ಅಥವಾ ಸಹೋದರಿಯರನ್ನು ಫ್ಯಾಕ್ಟರಿ ಕೆಲಸಕ್ಕೆ ಹೋಗಬೇಡಿ ಅದು ನಮ್ಮ ಗೌರವಕ್ಕೆ ಕುಂದು ಎಂದು ತಡೆಯುತ್ತಾರೆ. ಒಂದು ಕಡೆಯಿಂದ ಗೇರು ಉದ್ಯಮ ಆರ್ಥಿಕ ಭದ್ರತೆ ಒದಗಿಸಿ ಮಹಿಳಾ ಸಬಲೀಕರಣಕ್ಕೆ ಒತ್ತು ನೀಡುತ್ತಿರುವಾಗ ಇನ್ನೊಂದೆಡೆಯಲ್ಲಿ ಸಾಮಾಜಿಕ ಅಸಮಾನತೆಯನ್ನು ಹುಟ್ಟು ಹಾಕುತ್ತಿರುವುದು ವಿಪರ್ಯಾಸ.

ಅಧ್ಯಾಯ ೬

ಗೇರು ಬೀಜ ವ್ಯಾಪಾರ ಮತ್ತು ನಿರ್ಯಾತದ ಸಮಸ್ಯೆಗಳು

೬.೧. ಸಾಮಾನ್ಯ ಕೃಷಿ ಮಾರುಕಟ್ಟೆಯ ಸ್ವರೂಪ

೬.೨. ಗೇರು ಬೀಜದ ಮಾರುಕಟ್ಟೆ ಸ್ವರೂಪ

೬.೩. ಗುಣ ಮಟ್ಟ ಮತ್ತು ಬೆಲೆ ನಿರ್ಣಯ

೬.೪. ಗೇರು ಬೀಜ ಮಾರಾಟದ ಸಮಸ್ಯೆಗಳು

೬.೫. ಸ್ಥಳೀಯ ವ್ಯಾಪಾರಿಗಳ ಸಮಸ್ಯೆಗಳು

೬.೬ ಗೇರುಬೀಜ ಖರೀದಿಸುವ ಸಂಸ್ಕರಣಾ ಘಟಕಗಳ ಸಮಸ್ಯೆಗಳು

೬.೭. ಗೋಡಂಬಿ ನಿರ್ಯಾತ ಸಂಬಂಧಿ ಸಮಸ್ಯೆಗಳು

ಅಧ್ಯಾಯ ೬
ಗೇರು ಬೀಜ ವ್ಯಾಪಾರ ಮತ್ತು ನಿರ್ಯಾತದ ಸಮಸ್ಯೆಗಳು

ಗೇರು ಬೀಜದ ವ್ಯಾಪಾರ ಪ್ರಕ್ರಿಯೆ ಹಲವು ಸಂಕೀರ್ಣತೆಗಳಿಂದ ಕೂಡಿದೆ. ಗೇರು ಬೆಳೆಗಾರ ತನ್ನ ಉತ್ಪನ್ನವನ್ನು ಲಾಭದಾಯಕವಾಗಿ ಮಾರಾಟ ಮಾಡುವುದು ಆತನ ಪಾಲಿನ ಬದ್ಧತೆ ಎನಿಸಿಕೊಂಡರೆ, ಸ್ಥಳೀಯ ವ್ಯಾಪಾರಿಗಳು ಅದನ್ನು ಖರೀದಿಸಿ ಸಂಸ್ಕರಣಾ ಘಟಕಗಳಿಗೆ ಮಾರಾಟ ಮಾಡುವುದು ಅಷ್ಟೇ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ಗುಣ ಮಟ್ಟದ ಬೀಜಗಳನ್ನು ಸ್ಪರ್ಧಾತ್ಮಕ ಬೆಲೆಯಲ್ಲಿ ಖರೀದಿಸುವುದು ಸಂಸ್ಕರಣಾಗಾರರ ಮುಂದಿರುವ ಸವಾಲು. ಗೋಡಂಬಿ ನಿರ್ಯಾತದಲ್ಲಿ ಇವೆರಡೂ ಅಂಶಗಳು ನಿರ್ಣಾಯಕವಾದುದರಿಂದ ಸಂಸ್ಕರಣಾಗಾರ ತನ್ನ ಎಲ್ಲಾ ವ್ಯವಹಾರ ಕೌಶಲ್ಯಗಳನ್ನು ಪಣಕ್ಕಿಟ್ಟು ಶ್ರಮಿಸಬೇಕಾಗುತ್ತದೆ. ಈ ಅಧ್ಯಾಯವು ಗೇರು ಬೀಜದ ವ್ಯಾಪಾರ ಹಾಗೂ ನಿರ್ಯಾತದ ಹಲವು ಮಜಲುಗಳನ್ನು ಪರಿಚಯಿಸುತ್ತದೆ.

೬.೧. ಸಾಮಾನ್ಯ ಕೃಷಿ ಮಾರುಕಟ್ಟೆಯ ಸ್ವರೂಪ

ಗೇರುಬೀಜದ ಮಾರುಕಟ್ಟೆಯು ಕೃಷಿ ಮಾರುಕಟ್ಟೆಯನ್ನು ಹೋಲುತ್ತದೆ. ಆದುದರಿಂದ ಗೇರು ಮಾರುಕಟ್ಟೆಯ ಅಧ್ಯಯನಕ್ಕೆ ಮುನ್ನ ಕೃಷಿ ಮಾರುಕಟ್ಟೆಯ ಕಾರ್ಯನಿರ್ವಹಣೆಯನ್ನು ತಿಳಿದುಕೊಳ್ಳಬೇಕಾಗುತ್ತದೆ. ವ್ಯವಸ್ಥಿತವಾದ ಕೃಷಿ ಮಾರುಕಟ್ಟೆ ಒಂದು ಪ್ರದೇಶದ, ಆ ಮೂಲಕ ದೇಶದ ಒಟ್ಟು ಅಭಿವೃದ್ಧಿಗೆ ಪೂರಕವಾಗಿರುತ್ತದೆ. ಯಾವುದೇ ಬೆಳೆ ಅಥವಾ ಪಶು ಉತ್ಪನ್ನವನ್ನು ಉತ್ಪಾದಿಸಿದರೆ ಮಾತ್ರ ಸಾಕಾಗುವುದಿಲ್ಲ; ಅದನ್ನು ತೃಪ್ತಿಕರವಾಗಿ ಮಾರಾಟ ಮಾಡಬೇಕು. ಕೃಷಿ ಉತ್ಪನ್ನದ ಮಾರಾಟದ ಫಲ ಉತ್ಪಾದಕನಿಗೆ ಮಾತ್ರವಲ್ಲದೆ ಮಧ್ಯವರ್ತಿ ಹಾಗೂ ಅನುಭೋಗಿಗೂ ಸಂದಾಯವಾಗುತ್ತದೆ. ಹಾಗಾಗಿ ಹಲವು ಸ್ತರಗಳನ್ನೊಳಗೊಂಡ ಕೃಷಿ ಮಾರುಕಟ್ಟೆ ರೈತ, ಅನುಭೋಗಿ, ಮಧ್ಯವರ್ತಿ ಹಾಗೂ ಮಾರಾಟಗಾರ ಎಲ್ಲರಿಗೂ ಆಸಕ್ತಿದಾಯಕ ವಿಷಯವಾಗಿರುತ್ತದೆ. ಕೃಷಿ ಉತ್ನ್ನಗಳ ಮಾರಾಟವು ರೈತನಿಗೆ ಅವಶ್ಯಕ ಆದಾಯವನ್ನೊದಗಿಸಿದರೆ ಅನುಭೋಗಿಗೆ ಅಗತ್ಯ ವಸ್ತುಗಳನ್ನೊದಗಿಸುವ ಮೂಲಕ ಆತನ ಜೀವನ ನಿರ್ವಹಣೆಗೆ ಸಹಾಯ ಮಾಡುತ್ತದೆ. ಉತ್ಪಾದಕ ಹಾಗೂ ಅನುಭೋಗಿಯ ನಡುವೆ ಮಧ್ಯವರ್ತಿಗಳು, ವ್ಯಾಪಾರಿಗಳು ವ್ಯವಹರಿಸಿ ತಮ್ಮತಮ್ಮ ಜೀವನೋಪಾಯವನ್ನು ಕಂಡುಕೊಳ್ಳುತ್ತಾರೆ. ಉತ್ಪಾದಕನು ತನ್ನ ಉತ್ಪನ್ನಗಳಿಗೆ ಗರಿಷ್ಠ ಬೆಲೆ ನಿರೀಕ್ಷಿಸಿದರೆ ಅನುಭೋಗಿಯು ಕನಿಷ್ಠ ಬೆಲೆಯಲ್ಲಿ ವಸ್ತುಗಳನ್ನು ಖರೀದಿಸಲು ಬಯಸುತ್ತಾನೆ. ಈ ನಡುವೆ ಮಧ್ಯವರ್ತಿಯು ಉತ್ಪಾದಕನ ಬೆಲೆ ಹಾಗೂ ಅನುಭೋಗಿಯ ಬೆಲೆಯ ನಡುವಿನ ಅಂತರದಲ್ಲಿ ಸಾಕಷ್ಟು ಹೆಚ್ಚಿನ ಭಾಗವನ್ನು ತನ್ನದಾಗಿಸಿಕೊಳ್ಳಲು ಯತ್ನಿಸುತ್ತಾನೆ. ಉತ್ಪಾದನೆಯಷ್ಟೇ ಮಾರಾಟವೂ ಸಹ ದೇಶದ ಅಭಿವೃದ್ಧಿಯಲ್ಲಿ ನಿರ್ಣಾಯಕವಾದ ಪಾತ್ರವನ್ನು ವಹಿಸುತ್ತದೆ.

ಸಾಮಾನ್ಯವಾಗಿ ಮೂರು ವಿಧದ ಕೃಷಿ ಮಾರುಕಟ್ಟೆಗಳು ಕಂಡು ಬರುತ್ತವೆ. ಮೊದಲನೆಯದಾಗಿ ಪ್ರಾಥಮಿಕ ಮಾರುಕಟ್ಟೆಗಳು. ಇವು ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ರೈತರಿಗೆ ಅದರಲ್ಲೂ ವಿಶೇಷವಾಗಿ ಚಿಕ್ಕ ಮತ್ತು ಅಂಚಿನ ರೈತರಿಗೆ ಮಾರುಕಟ್ಟೆ ಸೌಲಭ್ಯವನ್ನು ಒದಗಿಸುವ ತಾಣವಾಗಿರುತ್ತದೆ. ಸಾಮಾನ್ಯವಾಗಿ ಖಾಸಗಿ ಒಡೆತನಕ್ಕೆ ಒಳಪಟ್ಟ ಈ ವ್ಯವಸ್ಥೆ ಮಾರುಕಟ್ಟೆಯ ಪ್ರಥಮ ಸಂಪರ್ಕ ಮಾಧ್ಯಮವಾಗಿ ಕಾರ್ಯ ನಿರ್ವಹಿಸುತ್ತದೆ.

ಪ್ರಾಥಮಿಕ ಮಾರುಕಟ್ಟೆಗೆ ಪೂರಕವಾಗಿ ಆನುಷಂಗಿಕ ಮಾರುಕಟ್ಟೆಗಳಿವೆ. ಇವು ಸಾಮಾನ್ಯವಾಗಿ ರಸ್ತೆಗಳ ಅಥವಾ ರೈಲ್ವೆ/ಬಸ್ ನಿಲ್ದಾಣಗಳ ಬಳಿಯಲ್ಲಿ ನೆಲೆಗೊಂಡಿರುವ ಮಾರುಕಟ್ಟೆಗಳು. ಆಸು ಪಾಸಿನ ೧೫ ರಿಂದ ೩೦ ಕಿ. ಮೀ. ಗಳ ದೂರದಿಂದ ಉತ್ಪನ್ನವನ್ನು ತಂದು ಈ ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗುತ್ತದೆ. ಈ ಮಾರುಕಟ್ಟೆಗಳು ಶಾಶ್ವತ


ಮಾರುಕಟ್ಟೆಗಳಾಗಿದ್ದು ಇವುಗಳಲ್ಲಿ ವರ್ಷದಾದ್ಯಂತ ಮಾರಾಟ ನಡೆಯುತ್ತದೆ. ಇವುಗಳು ದಾಸ್ತಾನು ವ್ಯವಸ್ಥೆಯನ್ನೂ ಹೊಂದಿರುತ್ತದೆ.

ಅಂತಿಮ ಮಾರುಕಟ್ಟೆಗಳು ಕೊನೆಯ ಸ್ವರೂಪದ್ದಾಗಿರುತ್ತವೆ. ದೊಡ್ಡ ನಗರಗಳಲ್ಲಿ ಅಥವಾ ಬಂದರು ಪಟ್ಟಣಗಳಲ್ಲಿ ನೆಲೆಗೊಂಡಿರುವ ಅಂತಿಮ ಮಾರುಕಟ್ಟೆಯ ವ್ಯವಹಾರಗಳು ಒಂದು ಜಿಲ್ಲೆ, ರಾಜ್ಯ ಅಥವಾ ಹೆಚ್ಚಿನ ಪ್ರದೇಶಕ್ಕೆ ಅನ್ವಯಿಸುವಂತೆ ನಡೆಯುತ್ತವೆ. ಈ ಮಾರುಕಟ್ಟೆಗಳು ಚಿಲ್ಲರೆ ಮಾರಾಟಗಾರರಿಗೆ, ದಾಸ್ತಾನುಗಾರರಿಗೆ, ಸಂಸ್ಕರಣೆಯ ಸ್ಥಳಗಳಿಗೆ ಹಾಗೂ ರಫ್ತುದಾರರಿಗೆ ಸರಕುಗಳನ್ನು ಸಾಗಿಸಿ ಕೊಡುವ ಕಾರ್ಯವನ್ನು ನಿರ್ವಹಿಸುತ್ತವೆ. ಭಾರತದಲ್ಲಿ ಕೃಷಿ ಉತ್ಪನ್ನಗಳು ಅಸಂಖ್ಯಾತ ಸಣ್ಣ ರೈತರಿಂದ ಉತ್ಪಾದಿಸಲ್ಪಡುತ್ತವೆ. ಪ್ರತಿಯೊಬ್ಬ ರೈತನು ತಾನು ಬೆಳೆದುದನ್ನು ತಾನೇ ನೇರವಾಗಿ ಅಂತಿಮ ಅನುಭೋಗಿಗೆ ತಲುಪಿಸಲು ಸಾಧ್ಯವಾಗುವುದಿಲ್ಲ. ಕಾರಣ ಸಮಯ, ಅನುಭವ ಹಾಗೂ ಸಾಮರ್ಥ್ಯದ ಕೊರತೆ. ಆದ್ದರಿಂದ ಅನೇಕ ಸಂದರ್ಭಗಳಲ್ಲಿ ರೈತರ ಪೂರ್ಣ ಉತ್ಪನ್ನವನ್ನು ಮಾರಾಟ ಮಾಡುವುದಕ್ಕಾಗಿ ಮಧ್ಯವರ್ತಿಗಳ ಮೇಲಿನ ಅವಲಂಬನೆ ಅನಿವಾರ್ಯವೆನಿಸಿದೆ. ಆ ಪ್ರಕಾರ ಉತ್ಪಾದಕರ ಮತ್ತು ಅನುಭೋಗಿಗಳ ನಡುವೆ ಉತ್ಪನ್ನಗಳು ಕನಿಷ್ಠ ಮೂರು ಬಾರಿ ಹಸ್ತಾಂತರವಾಗುವ ಸಾಧ್ಯತೆ ಇರುತ್ತದೆ. ಸಾಮಾನ್ಯವಾಗಿ ರೈತರು ತಮ್ಮ ಉತ್ಪನ್ನಗಳನ್ನು ಗ್ರಾಮೀಣ ಮಟ್ಟದಲ್ಲಿ ಸಣ್ಣ ವ್ಯಾಪಾರಿಗಳಿಗೆ ಅಥವಾ ಪ್ರವಾಸಿ ವ್ಯಾಪಾರಿಗಳಿಗೆ ಮಾರಾಟ ಮಾಡುತ್ತಾರೆ. ಹೀಗೆ ಮಾರಾಟ ಮಾಡಿದ ಉತ್ಪನ್ನವನ್ನು ಸಗಟು ಮಾರುಕಟ್ಟೆಗಳಿಗೆ ಕೊಂಡೊಯ್ಯಲಾಗುತ್ತದೆ. ನಂತರ ಅದನ್ನು ಚಿಲ್ಲರೆ ವ್ಯಾಪಾರಿಗಳಿಗೆ ಮಾರಾಟ ಮಾಡಲಾಗುತ್ತದೆ. ಚಿಲ್ಲರೆ ವ್ಯಾಪಾರಿಗಳು ಅದನ್ನು ಅಂತಿಮ ಅನುಭೋಗಿಗಳಿಗೆ ಮಾರಾಟ ಮಾಡುತ್ತಾರೆ. ಆದರೆ ದೊಡ್ಡ ಹಿಡುವಳಿಗಳ ರೈತರು ಈ ರೀತಿಯಾಗಿ ವ್ಯವಹರಿಸದೆ ನೇರವಾಗಿ ಬೃಹತ್ ಸಗಟು ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದಿದೆ.

ರೈತನ ಮತ್ತು ಅಂತಿಮ ಅನುಭೋಗಿಯ ನಡುವೆ ಸಾಮಾನ್ಯವಾಗಿ ಅಸ್ತಿತ್ವದಲ್ಲಿರಬಹುದಾದ ಮಾರುಕಟ್ಟೆಯ ರಚನೆ ಈ ರೀತಿಯಾಗಿರುತ್ತದೆ. (ಚಿತ್ರ ೬.೧)

ಸಾಮಾನ್ಯ ಕೃಷಿ ಮಾರುಕಟ್ಟೆಯ ಸಂರಚನೆಯ ಸ್ವರೂಪವನ್ನು ಸಂಕ್ಷಿಪ್ತವಾಗಿ ಹೀಗೆ ಕ್ರೋಢೀಕರಿಸಬಹುದು:

ನಕ್ಷೆ ೬. ೧. ಸಾಮಾನ್ಯ ಕೃಷಿ ಮಾರುಕಟ್ಟೆಯ ಸಂರಚನೆ



❖ ಅಸಂಖ್ಯಾತ ರೈತರು ತಮ್ಮ ಕೃಷಿ ಉತ್ಪನ್ನಗಳನ್ನು ಸ್ಥಳೀಯ ಮಾರುಕಟ್ಟೆಗಳಿಗೆ ಕೊಂಡೊಯ್ಯುತ್ತಾರೆ. ಉತ್ಪಾದನಾ ಕೇಂದ್ರಗಳ ಬಳಿ ನೆಲೆಗೊಂಡಿರುವ ಮಾರುಕಟ್ಟೆಗಳಿಂದ ಸಂಗ್ರಹಿಸಿದ ಕೃಷಿ ಉತ್ಪನ್ನಗಳನ್ನು ಸ್ಥಳೀಯ ಖರೀದಿದಾರರು ಒಟ್ಟುಗೂಡಿಸಿ ಜಿಲ್ಲಾ ಮಾರುಕಟ್ಟೆಗಳಿಗೆ ಅಥವಾ ಕೇಂದ್ರ ಮಾರುಕಟ್ಟೆಗಳಿಗೆ ಕಳುಹಿಸುತ್ತಾರೆ. ಇಂತಹಸ್ಥಳೀಯ ಮಾರುಕಟ್ಟೆಗಳನ್ನು ಬೆಳೆಗಾರರ ಮಾರುಕಟ್ಟೆ ಅಥವಾ ಪ್ರಾಥಮಿಕ ಮಾರುಕಟ್ಟೆ ಎಂದು ಕರೆಯುತ್ತಾರೆ. ಇವು ಸ್ಥಳೀಯವಾಗಿ ಒಗ್ಗೂಡಿಸುವ ಮತ್ತು ಸಂಸ್ಕರಿಸುವ ಮಾರುಕಟ್ಟೆಗಳಾಗಿವೆ.

❖ ಸಾಮಾನ್ಯವಾಗಿ ಕೆಲವೊಂದು ಕೃಷಿ ಉತ್ಪನ್ನಗಳು ಸ್ಥಳೀಯ ಮಾರುಕಟ್ಟೆಯಲ್ಲಿಯೇ ಸಂಪೂರ್ಣವಾಗಿ ಅಥವಾ ಭಾಗಶಃ ಸಂಸ್ಕರಣೆಗೊಂಡಿರುತ್ತದೆ. ಆದರೆ ಬಹುತೇಕ ಕೃಷಿ ಉತ್ಪನ್ನಗಳು ದೊಡ್ಡ ಪ್ರಮಾಣದ ಕೇಂದ್ರೀಯ ಮಾರುಕಟ್ಟೆಯಲ್ಲಿ ಸಂಸ್ಕರಣೆಗೆ ಒಳಪಡುತ್ತವೆ. ಈ ಕಾರ್ಯವನ್ನು ಜಿಲ್ಲಾ ಕೇಂದ್ರೀಕೃತ ಮತ್ತು ಸಂಸ್ಕರಣಾ ಮಾರುಕಟ್ಟೆಗಳು ಮಾಡುತ್ತವೆ. ಸ್ಥಳೀಯವಾಗಿ ಒಗ್ಗೂಡಿಸಿದ ಮಾರುಕಟ್ಟೆಯಿಂದ ಸರಕುಗಳು ಜಿಲ್ಲಾ ಕೇಂದ್ರೀಕೃತ ಮಾರುಕಟ್ಟೆಗೆ ಬರುತ್ತವೆ. ಅಲ್ಲಿಂದ ಕೇಂದ್ರೀಯ ಮಾರುಕಟ್ಟೆಗೆ ಸಾಗಿಸಲ್ಪಡುತ್ತವೆ ಅಥವಾ ನೇರವಾಗಿ ಅನುಭೋಗಿ ಮಾರುಕಟ್ಟೆಯನ್ನು ಸೇರುತ್ತವೆ.

❖ ಕೃಷಿ ಮಾರುಕಟ್ಟೆಯ ಒಂದು ತುದಿಯಲ್ಲಿ ಉತ್ಪಾದಕರಿದ್ದರೆ ಇನ್ನೊಂದು ತುದಿಯಲ್ಲಿ ಅನುಭೋಗಿಗಳು ಇರುತ್ತಾರೆ. ಇವರ ನಡುವೆ ಅನೇಕ ಕೇಂದ್ರೀಯ ಮಾರುಕಟ್ಟೆಗಳು ಕಾರ್ಯನಿರ್ವಹಿಸುತ್ತಿರುತ್ತವೆ. ಕೇಂದ್ರೀಯ ಮಾರುಕಟ್ಟೆಗಳಲ್ಲಿ ಸ್ಥಳೀಯ ಮಾರುಕಟ್ಟೆಗಳಿಂದ ಅಥವಾ ಜಿಲ್ಲಾ ಸಂಸ್ಕರಣಾ ಕೇಂದ್ರಗಳಿಂದ ಬಂದ ಸರಕುಗಳನ್ನು ಸಂಚಯಿಸಿ ಅಗತ್ಯವಿದ್ದರೆ ಸಂಸ್ಕರಿಸಿ ಅಂತಿಮ ಅನುಭೋಗಕ್ಕೆ ಅಥವಾ ರಫ್ತು ವ್ಯಾಪಾರಕ್ಕೆ ಸಿದ್ಧಪಡಿಸಲಾಗುತ್ತದೆ. ಈ ಮಾರುಕಟ್ಟೆಗಳನ್ನು ದೊಡ್ಡ ಸಗಟು ಮಾರುಕಟ್ಟೆಗಳಿಗೆ ಹೋಲಿಸಬಹುದಾಗಿದ್ದು, ವಿವಿಧ ಉತ್ಪಾದನಾ ಪ್ರದೇಶಗಳಿಂದ ಉತ್ಪನ್ನವು ಈ ಮಾರುಕಟ್ಟೆಗೆ ಹರಿದು ಬರುತ್ತದೆ. ಸರಕುಗಳ ಬೆಲೆ ನಿರ್ಧಾರದ ಚಟುವಟಿಕೆಗಳು ಈ ಮಾರುಕಟ್ಟೆಯಲ್ಲಿಯೇ ಜರುಗುತ್ತದೆ. ಕೇಂದ್ರೀಯ ಮಾರುಕಟ್ಟೆಗಳಲ್ಲಿ ಬೇಡಿಕೆ ಮತ್ತು ಪೂರೈಕೆಯ ನಡುವಿನ ಹೊಂದಾಣಿಕೆಯಾಗುತ್ತದೆ. ಈ ಮಾರುಕಟ್ಟೆಗಳನ್ನು ಅಂತಿಮ ಮಾರುಕಟ್ಟೆಗಳು ಎಂತಲೂ ಕರೆಯುತ್ತಾರೆ. ಮಾರಾಟ ಪ್ರಕ್ರಿಯೆಯ ಮೂರು ಅಂಶಗಳಾದ ಕೇಂದ್ರೀಕರಣ, ಸಮೀಕರಣ ಮತ್ತು ವಿಕ್ರಯ ಒಂದೆಡೆ ಸೇರುವ ಸ್ಥಳವೇ ಕೇಂದ್ರೀಯ ಮಾರುಕಟ್ಟೆ ಅಥವಾ ಅಂತಿಮ ಮಾರುಕಟ್ಟೆಯಾಗಿರುತ್ತದೆ.

❖ ಸರಕುಗಳನ್ನು ಕಡಲ ತೀರದಿಂದ ವಿದೇಶಿ ಕೇಂದ್ರಗಳಿಗೆ ಹಡಗಿನ ಮೂಲಕ ಕಳುಹಿಸುವ ಕೆಲಸವನ್ನು ಸಮುದ್ರ ತೀರದ ಮಾರುಕಟ್ಟೆಗಳು ನಿರ್ವಹಿಸುತ್ತವೆ. ಕೇಂದ್ರೀಯ ಮಾರುಕಟ್ಟೆಯಿಂದ ಬರುವ ಸರಕುಗಳನ್ನು ಹಡಗುಗಳಿಗೆ ತುಂಬಿಸುವ, ಸರಕುಗಳನ್ನು ಇಳಿಸುವ, ದಾಸ್ತಾನು ಮಾಡುವ, ಸರಕುಗಳನ್ನು ವರ್ಗೀಕರಿಸುವ, ಪ್ರಮಾಣೀಕರಣಗೊಳಿಸುವ, ಬೆಲೆಗಳ ಬಗ್ಗೆ ಮಾಹಿತಿ ನೀಡುವ ಸಕಲ ಸೌಲಭ್ಯಗಳನ್ನು ಸಮುದ್ರ ತೀರದ ಮಾರುಕಟ್ಟೆಗಳು ಒಳಗೊಂಡಿರುತ್ತವೆ. ಕೃಷಿ ಉತ್ಪನ್ನಗಳ ಆಮದುಗಳಿಗೆ ಸಂಬಂಧಿಸಿದಂತೆಯೂ ಸಕಲ ಸೌಲಭ್ಯಗಳು ಇಲ್ಲಿ ಲಭ್ಯವಿರುತ್ತವೆ.

❖ ಕೇಂದ್ರೀಯ ಮಾರುಕಟ್ಟೆಗಳಲ್ಲಿ ಒಟ್ಟುಗೂಡಿಸಲಾದ ಕೃಷಿ ಉತ್ಪನ್ನಗಳನ್ನು ಚಿಲ್ಲರೆ ವ್ಯಾಪಾರಿಗಳ ಮೂಲಕ ಅನುಭೋಗಿಗಳಿಗೆ ಕಳುಹಿಸಬೇಕಾಗುತ್ತದೆ. ಈ ಕಾರ್ಯವನ್ನು ಸಗಟು ವಿತರಣಾ ಮಾರುಕಟ್ಟೆಗಳು ಮಾಡುತ್ತವೆ. ಕೇಂದ್ರೀಯ ಮಾರುಕಟ್ಟೆಗಳಲ್ಲಿರುವ ಸಗಟು ಮಾರಾಟಗಾರರು ಬೃಹತ್ ಪ್ರಮಾಣದ ವಹಿವಾಟಿನಲ್ಲಿ ನಿರತರಾಗುವುದರಿಂದ ಚಿಲ್ಲರೆ ವ್ಯಾಪಾರಿಗಳಿಗೆ ಸರಕುಗಳನ್ನು ವಿಕ್ರಯಿಸುವುದಕ್ಕಾಗಿ ಕೇಂದ್ರೀಯ ಮಾರುಕಟ್ಟೆ ಮತ್ತು ಚಿಲ್ಲರೆ ವ್ಯಾಪಾರಿಗಳ ನಡುವೆ ಪ್ರತ್ಯೇಕ ಸಗಟು ಮಾರುಕಟ್ಟೆಗಳಿವೆ. ಇದನ್ನು ದ್ವಿತೀಯ ಮಾರುಕಟ್ಟೆಗಳೆಂದು ಕರೆಯಲಾಗುತ್ತದೆ. ಕಾರಣ ಇವು

ಪ್ರಾಥಮಿಕ ಮತ್ತು ಕೇಂದ್ರೀಯ ಸಗಟು ಮಾರುಕಟ್ಟೆಗಳಿಗಿಂತ ಭಿನ್ನವಾಗಿರುತ್ತದೆ. ಬೆಲೆ ನಿರ್ಧಾರದಲ್ಲಿ ಇವುಗಳ ಪಾತ್ರ ಏನೂ ಇಲ್ಲ. ಚಿಲ್ಲರೆ ವ್ಯಾಪಾರಿಗಳ ಅವಶ್ಯಕತೆಗಳನ್ನು ಈಡೇರಿಸುವುದಷ್ಟೇ ಈ ಮಾರುಕಟ್ಟೆಗಳ ಉದ್ದೇಶ.


- ಅಂತಿಮ ಅನುಭೋಗಿಗಳಿಗೆ ಸರಕುಗಳನ್ನು ತಲುಪಿಸುವ ವ್ಯವಸ್ಥೆಯನ್ನು ಚಿಲ್ಲರೆ ಮಾರುಕಟ್ಟೆಗಳು ಮಾಡುತ್ತವೆ. ಪ್ರತಿಯೊಂದು ಚಿಲ್ಲರೆ ಅಂಗಡಿಯೂ ಚಿಲ್ಲರೆ ಮಾರುಕಟ್ಟೆಯಾಗಿರುತ್ತದೆ. ಸರಕಿನ ಗುಣಮಟ್ಟದ ಬಗ್ಗೆ ಹಾಗೂ ಬೆಲೆಯನ್ನು ಕುರಿತಂತೆ ಚರ್ಚೆ ಇಲ್ಲಿ ಸ್ಪಷ್ಟ ರೂಪವನ್ನು ತಾಳುತ್ತದೆ. ಈ ಮಾರುಕಟ್ಟೆಯು ತಮ್ಮ ಉತ್ಪನ್ನವನ್ನು ಉಪಯೋಗಿಸುವವರೊಡನೆ ಸಂಪರ್ಕ ಹೊಂದುವ ಅಂತಿಮ ಸ್ಥಾನವಾಗಿರುತ್ತದೆ.

೬.೨. ಗೇರು ಬೀಜದ ಮಾರುಕಟ್ಟೆ ಸ್ವರೂಪ

ಗೇರು ಬೀಜದ ಮಾರುಕಟ್ಟೆಯು ಸಾಮಾನ್ಯ ಕೃಷಿ ಮಾರುಕಟ್ಟೆಯ ಸಂರಚನೆಯನ್ನೇ ಹೊಂದಿದೆ. ಗೇರು ಉದ್ಯಮದಲ್ಲಿ ಕಚ್ಚಾಗೇರಿನ ಬೆಲೆ ಪ್ರಮುಖ ಭಾಗವಾಗಿದ್ದು ಗೇರು ಬೀಜದ ಬೆಲೆ ವ್ಯತ್ಯಯ ಉದ್ಯಮದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಗೇರು ಬೀಜವನ್ನು ಮಾರಾಟ ಮಾಡುವ ಯಾವ ವ್ಯವಸ್ಥಿತ ಕ್ರಮಗಳೂ ಭಾರತದ ಬಹುತೇಕ ರಾಜ್ಯಗಳಲ್ಲಿ ಇಲ್ಲ. ಕೇರಳ, ಗೋವಾ ಮತ್ತು ತಮಿಳುನಾಡನ್ನು ಹೊರತುಪಡಿಸಿ ಉಳಿದೆಲ್ಲಾ ರಾಜ್ಯಗಳಲ್ಲಿ ಅಸಂಘಟಿತ ವ್ಯಾಪಾರ ವ್ಯವಸ್ಥೆ ಅಸ್ತಿತ್ವದಲ್ಲಿದ್ದು ಗೇರು ಕೃಷಿಕರು, ಮಧ್ಯವರ್ತಿಗಳಿಗೆ ಮತ್ತು ದಲ್ಲಾಳಿಗಳಿಗೆ ತಮ್ಮ ಸರಕುಗಳನ್ನು ಸಿಕ್ಕಿದಷ್ಟು ಬೆಲೆಗೆ ಮಾರಬೇಕಾದ ಅನಿವಾರ್ಯತೆ ಇದೆ. ಗೇರು ಮಾರುಕಟ್ಟೆಯ ಪ್ರಕ್ರಿಯೆ ಕಚ್ಚಾಗೇರು ಬೀಜದ ಉತ್ಪಾದಕನೊಂದಿಗೆ ಪ್ರಾರಂಭವಾಗಿ ಕಟ್ಟ ಕಡೆಯ ಅನುಭೋಗಿಯೊಂದಿಗೆ ಮುಕ್ತಾಯಗೊಳ್ಳುತ್ತದೆ. ಗೇರು ಬೀಜ ಒಂದು ಋತು ಸಂಬಂಧೀ ಉತ್ಪನ್ನವಾದುದರಿಂದ ಅದರ ಉತ್ಪಾದನೆ ಹಾಗೂ ಬೆಲೆ ಋತುಮಾನದ ವೈಪರೀತ್ಯಗಳನ್ನು ಅವಲಂಬಿಸಿಕೊಂಡಿರುತ್ತದೆ. ಗೇರು ಬೀಜದ ಕೊಯ್ಲು ಕೇವಲ ಮೂರರಿಂದ ನಾಲ್ಕು ತಿಂಗಳುಗಳಿಗೆ ಸೀಮಿತವಾಗಿದ್ದು ಬೀಜಗಳನ್ನು ಸಂಗ್ರಹಿಸಿ ಒಂದು ವರ್ಷದವರೆಗೂ ದಾಸ್ತಾನು ಇಡಲು ಸಾಧ್ಯ. ಇದರೊಂದಿಗೆ ಬೇರೆ ಬೇರೆ ದೇಶಗಳಿಂದ ಬೇರೆ ಬೇರೆ ಅವಧಿಯಲ್ಲಿ ಗೇರು ಬೀಜದ ಪೂರೈಕೆಯಾಗುತ್ತದೆ. ವಿಯೆಟ್ನಾಂ , ಕೋಟೆ ಡಿ ಐವರಿ. ನೈಜೀರಿಯಾ ಮತ್ತು ಘಾನಾ ದೇಶಗಳು ಮಾರ್ಚ್‌ನಿಂದ ಜೂನ್ ತನಕ ಗೇರು ಪೂರೈಕೆ ಮಾಡಿದರೆ, ಬ್ರೆಜಿಲ್, ಇಂಡೋನೇಶ್ಯಾ, ತಾಂಜೇನಿಯಾ, ಬೆನಿನ್, ಮೊಜಾಂಬಿಕ್ ಹಾಗೂ ಕೇನ್ಯಾ ದೇಶಗಳು ಜುಲೈನಿಂದ ಫೆಬ್ರವರಿ ತನಕ ಗೇರು ಬೀಜವನ್ನು ಪೂರೈಸುತ್ತವೆ. ಸೆನೆಗಲ್ ಮತ್ತು ಗುನಿಯಾಬಿಸು ದೇಶಗಳು ಜುಲೈನಿಂದ ಆಗಸ್ಟ್ ತನಕ ಪೂರೈಕೆ ಮಾಡಬಲ್ಲವು. ಆಮದು ಗೇರು ಬೀಜದ ಬೆಲೆ ಹಾಗೂ ಪೂರೈಕೆ ಸ್ಥಳೀಯ ಗೇರು ಬೀಜದ ಬೆಲೆಯ ಮೇಲೆ ಪರಿಣಾಮ ಉಂಟುಮಾಡುತ್ತದೆ. ಆದರೆ ದೇಶೀ ಬೀಜಗಳು ಗಾತ್ರ ಹಾಗೂ ಗುಣಮಟ್ಟದಲ್ಲಿ ಶ್ರೇಷ್ಠವೆನಿಸಿಕೊಂಡಿದ್ದು ಬೆಲೆ ಆಮದು ಬೀಜಕ್ಕಿಂತಲೂ ಅಧಿಕವಾಗಿರುತ್ತದೆ.

ಅಖಿಲ ಭಾರತ ಮಟ್ಟದಲ್ಲಿ ಗೇರು ಬೀಜದ ಮಾರುಕಟ್ಟೆಯ ಹರಿವು ಈ ರೀತಿಯಾಗಿರುತ್ತದೆ:

ನಕ್ಷೆ ೬.೨. ಗೇರು ಬೀಜದ ಮಾರುಕಟ್ಟೆ ಸಂರಚನೆ



ಗೇರು ಬೆಳೆಗಾರರು ತಮ್ಮ ಉತ್ಪನ್ನವನ್ನು ಸ್ಥಳೀಯ ವ್ಯಾಪಾರಿಗಳಿಗೆ ಅಥವಾ ಕಮಿಷನ್ ಏಜೆಂಟ್‌ಗಳಿಗೆ ಮಾರುತ್ತಾರೆ. ಬಹುಸಂಖ್ಯಾತ ರೈತರಿಂದ ಗೇರು ಬೀಜವನ್ನು ಸಂಗ್ರಹಿಸುವ ಕೆಲಸ ಪ್ರಾಥಮಿಕ ಮಾರುಕಟ್ಟೆಯಲ್ಲಿ ನಡೆಯುತ್ತದೆ. ಗೇರು ಮಾರುಕಟ್ಟೆಯ ಪ್ರಕ್ರಿಯೆಯಲ್ಲಿ ಇದು ಪ್ರಥಮ ಮಾಧ್ಯಮವಾಗಿರುತ್ತದೆ. ಸ್ಥಳೀಯ ಮಾರುಕಟ್ಟೆಯಲ್ಲಿ ಸಂಗ್ರಹಿಸಿದ ಗೇರುಬೀಜಗಳನ್ನು ವ್ಯಾಪಾರಿಗಳು ಜಿಲ್ಲಾ ಕೇಂದ್ರಿಕೃತ ಮತ್ತು ಸಂಸ್ಕರಣಾ ಮಾರುಕಟ್ಟೆಗಳಿಗೆ ರವಾನೆ ಮಾಡುತ್ತಾರೆ. ಅಲ್ಲಿಂದ ಅದು ಕೇಂದ್ರೀಯ ಮಾರುಕಟ್ಟೆಯನ್ನು ತಲುಪುತ್ತದೆ. ಗೇರು ಬೀಜದ ಬೆಲೆ ಈ ಮಾರುಕಟ್ಟೆಯಲ್ಲಿ ನಿರ್ಧಾರವಾಗುತ್ತದೆ. ಅಂತರ್ ರಾಜ್ಯಗಳ ಹಾಗೂ ಆಮದು ಗೇರು ಬೀಜಗಳು ಇಲ್ಲಿಗೆ ಹರಿದು ಬರುವುದರಿಂದ ಗೇರು ವ್ಯಾಪಾರ ಒಂದು ವ್ಯವಸ್ಥಿತ ರೂಪವನ್ನು ಪಡೆದುಕೊಳ್ಳುತ್ತದೆ. ಕೇಂದ್ರೀಯ ಮಾರುಕಟ್ಟೆಗಳಲ್ಲಿ ಸಂಗ್ರಹಿಸಲಾದ ಗೇರು ಬೀಜಗಳನ್ನು ಚಿಲ್ಲರೆ ಸಂಸ್ಕರಣಾ ಘಟಕಗಳಿಗೆ ರವಾನೆ ಮಾಡಲಾಗುತ್ತದೆ. ಕೆಲವೊಮ್ಮೆ ಸಂಸ್ಕರಣಾ ಘಟಕಗಳು ನೇರವಾಗಿ ಆಮದು ಗೇರು ಬೀಜವನ್ನು ಪಡೆಯುವುದುಂಟು. ದೇಶೀ ಗೇರು ಬೀಜಗಳನ್ನು ಖರೀದಿ ಮಾಡಿದ ನಂತರ ಮತ್ತೆ ಅವುಗಳನ್ನು ಬಿಸಿಲಿನಲ್ಲಿ ಹರಡಿ ಒಣಗಿಸ ಬೇಕಾಗುತ್ತದೆ. ಆದರೆ ಆಮದು ಗೇರು ಬೀಜಗಳನ್ನು ನೇರವಾಗಿ ಸಂಸ್ಕರಣೆಯಲ್ಲಿ ಬಳಸಬಹುದಾದುದರಿಂದ ಸಂಸ್ಕರಣಾ ಘಟಕಗಳು ಆಮದು ಗೇರು ಬೀಜಗಳಿಗೆ ಆದ್ಯತೆ ನೀಡುತ್ತವೆ. ಇದಕ್ಕೆ ಕಾರ್ಮಿಕರ ಕೊರತೆಯೇ ಮುಖ್ಯ ಕಾರಣವಾಗುತ್ತದೆ.

ದ. ಕ. ಜಿಲ್ಲೆಯು ಕಚ್ಚಾಗೇರು ಬೀಜದ ಉತ್ಪಾದನೆಯಲ್ಲಿ ರಾಜ್ಯದಲ್ಲಿ ಮೊದಲ ಸ್ಥಾನವನ್ನು ಪಡೆದುಕೊಂಡಿದೆ. ರಾಜ್ಯದ ಒಟ್ಟು ಕೃಷಿ ಭೂಮಿಯಲ್ಲಿ ಶೇಕಡಾ ೨೩.೬ ರಷ್ಟು ಭಾಗದಲ್ಲಿ ಗೇರು ಬೆಳೆಯುತ್ತಿರುವ ದಕ್ಷಿಣ ಕನ್ನಡ ಗೇರು ಸಂಸ್ಕರಣೆಯಲ್ಲೂ ಅಷ್ಟೇ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಕರ್ನಾಟಕ ರಾಜ್ಯದ ಒಟ್ಟು ೨೬೬ ಸಂಸ್ಕರಣಾ ಘಟಕಗಳಲ್ಲಿ ೧೪೦ ಘಟಕಗಳು ಕರ್ನಾಟಕದ ಕರಾವಳಿ ತೀರದಲ್ಲಿವೆ. ದ. ಕ. ಜಿಲ್ಲೆಯೊಂದರಲ್ಲೇ ೫೦ ಘಟಕಗಳು ಕಾರ್ಯವೆಸಗುತ್ತಿವೆ. ಆದುದರಿಂದ ಗೇರು ಬೀಜದ ವ್ಯಾಪಾರ ಕೂಡಾ ದ. ಕ. ಜಿಲ್ಲೆಯ ಆರ್ಥಿಕತೆಯಲ್ಲಿ ನಿರ್ಣಾಯಕವೆನಿಸಿಕೊಂಡಿದೆ.

ದ. ಕ. ಜಿಲ್ಲೆಯ ಮಾರುಕಟ್ಟೆಯ ರಚನೆ ಹೀಗಿದೆ.

- ಹರಿವು ೧

  ರೈತ ⟶ ಕೊಯ್ಲು ಪೂರ್ವ ಗುತ್ತಿಗೆದಾರ ⟶ ಗ್ರಾಮೀಣ ವ್ಯಾಪಾರಿ ⟶ ಸಂಸ್ಕರಣಾ ಘಟಕ

- ಹರಿವು ೨

  ರೈತ ⟶ ಗ್ರಾಮೀಣ ವ್ಯಾಪಾರಿ ⟶ ಸಗಟು ವ್ಯಾಪಾರಿ ⟶ ಸಂಸ್ಕರಣಾ ಘಟಕ

- ಹರಿವು ೩

  ರೈತ ⟶ ಗ್ರಾಮೀಣ ವ್ಯಾಪಾರಿ ⟶ ಸಂಸ್ಕರಣೆಗಾರ

- ಹರಿವು ೪

  ರೈತ ⟶ ಸಗಟು ವ್ಯಾಪಾರಿ ⟶ ಸಂಸ್ಕರಣಾ ಘಟಕ

- ಹರಿವು ೫

  ರೈತ ⟶ ಸಂಸ್ಕರಣಾ ಘಟಕ

ಮೊದಲನೆ ವಿಧಾನದಲ್ಲಿ ರೈತನು ಕೊಯ್ಲು ಪೂರ್ವ ಗುತ್ತಿಗೆದಾರನಿಂದ ಮುಂಗಡವನ್ನು ಪಡೆದುಕೊಂಡು ಅವನಿಗೆ ಸರಕು ಪೂರೈಕೆ ಮಾಡುವ ಒಪ್ಪಂದಕ್ಕೆ ಬದ್ಧನಾಗುತ್ತಾನೆ. ನಂತರದ ಲಾಭ/ನಷ್ಟ ಗುತ್ತಿಗೆದಾರರಿಗೆ ಸೇರಿದ್ದೇ ವಿನಾ ರೈತರಿಗೆ ಯಾವುದೇ ಬದ್ಧತೆ ಇರುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರಕಾರಿ ಸ್ವಾಮ್ಯದ ಗೇರು ತೋಟಗಳು ಹಾಗೂ ಗೇರು ಪ್ರಾಧಿಕಾರದ ಒಡೆತನದ ಗೇರು ತೋಟಗಳು ಸಾಕಷ್ಟು ಇರುವುದರಿಂದ ಏಲಂನಲ್ಲಿ ತೋಟಗಳನ್ನು ಗುತ್ತಿಗೆದಾರರಿಗೆ ಬಿಟ್ಟುಕೊಡಲಾಗುವುದು. ಶೇ. ೭ ರಷ್ಟು ಉತ್ಪಾದಕರು ಈ ರೀತಿ ಗೇರು ಬೀಜದ ವ್ಯವಹಾರ ಮಾಡಿಕೊಂಡಿರುತ್ತಾರೆ. ಕಾರ್ಮಿಕರ ಸಮಸ್ಯೆ, ನಿರ್ವಹಣೆಯ ಸಮಸ್ಯೆಯಿಂದಾಗಿ ಬಹುತೇಕ ರೈತರು ಇದೇ ವಿಧಾನದ ಮೂಲಕ ತಮ್ಮ ಫಸಲನ್ನು ವಿಲೇವಾರಿ ಮಾಡುವುದಿದೆ.

ಎರಡನೆ ವಿಧಾನದಲ್ಲಿ ಸ್ಥಳೀಯ ವ್ಯಾಪಾರಿ ನೇರವಾಗಿ ರೈತನಿಂದ ಪ್ರಸ್ತುತ ಮಾರುಕಟ್ಟೆ ದರದಲ್ಲಿ ಕಚ್ಚಾಗೇರನ್ನು ಕೊಂಡುಕೊಳ್ಳುತ್ತಾರೆ. ಪ್ರವಾಸಿ ವ್ಯಾಪಾರಿಗಳು ಹಳ್ಳಿಗಳಿಂದ ಸಣ್ಣ ರೈತರಿಂದ ಈ ರೀತಿ ಗೇರು ಬೀಜ ಸಂಗ್ರಹಿಸುತ್ತಾರೆ. ಕೆಲವು ರೈತರು ಈ ವಿಧಾನಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡುತ್ತಾರೆ. ಕಾರಣ ಸಣ್ಣ ಪ್ರಮಾಣದ ಉತ್ಪಾದನೆ, ಸಾಗಾಣಿಕೆಯ ವೆಚ್ಚ, ಸಮಯದ ಕೊರತೆ ಇತ್ಯಾದಿ ಸಮಸ್ಯೆಗಳಿಂದಾಗಿ ಪ್ರವಾಸಿ ವ್ಯಾಪಾರಿಯೇ ರೈತನಿಗೆ ಆಪ್ತನಾಗಿ ಬಿಡುತ್ತಾನೆ. ಹೀಗೆ ಸಂಗ್ರಹಿಸಿದ ಬೀಜಗಳು ಸಗಟು ವ್ಯಾಪಾರಿಯ ಮೂಲಕ ಸಂಸ್ಕರಣಾ ಕೇಂದ್ರಗಳನ್ನು ತಲುಪುತ್ತವೆ. ದ. ಕ. ಜಿಲ್ಲೆಯಲ್ಲಿ ಶೇ. ೪೯ ರಷ್ಟು ರೈತರು ತಾವು ಬೆಳೆದ ಗೇರನ್ನು ಈ ಮಾದರಿಯಲ್ಲಿ ವಿಲೇವಾರಿ ಮಾಡುತ್ತಾರೆ.

ಮೂರನೇ ವಿಧಾನದಲ್ಲಿ ರೈತನಿಂದ ಕೊಂಡುಕೊಂಡ ಗೇರು ಬೀಜವನ್ನು ಸ್ಥಳೀಯ ವ್ಯಾಪಾರಿ ನೇರವಾಗಿ ಸಂಸ್ಕರಣಾ ಘಟಕಗಳಿಗೆ ಮಾರುತ್ತಾನೆ. ಇಲ್ಲಿ ಸ್ಥಳೀಯ ವ್ಯಾಪಾರಿ ಸ್ವತಂತ್ರವಾದ ವ್ಯಾಪಾರಿ ಮಳಿಗೆಗಳನ್ನು ದಾಸ್ತಾನು

ವ್ಯವಸ್ಥೆಯನ್ನು ಹೊಂದಿದವನಾಗಿರುತ್ತಾನೆ. ಗೇರು ವ್ಯಾಪಾರಕ್ಕೆಂಧು ಸಾಕಷ್ಟು ಬಂಡವಾಳ ಹೂಡಿ ಲಾಭಗಳಿಸುತ್ತಾನೆ. ಶೇ. ೧೫ ರಷ್ಟು ರೈತರು ದ. ಕ. ಜಿಲ್ಲೆಯಲ್ಲಿ ಈ ರೀತಿ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುತ್ತಾರೆ.

ನಾಲ್ಕನೆಯ ವಿಧಾನದಲ್ಲಿ ರೈತ ಸ್ವತಃ ತಾನೇ ತನ್ನ ಗೇರು ಉತ್ಪನ್ನವನ್ನು ಸಗಟು ವ್ಯಾಪಾರಿಗೆ ಮಾರಾಟ ಮಾಡುತ್ತಾನೆ. ಇಲ್ಲಿ ಸ್ಥಳೀಯ ವ್ಯಾಪಾರಿಯ ಪಾತ್ರ ಇಲ್ಲ. ಹೆಚ್ಚಿನ ಪ್ರಮಾಣದಲ್ಲಿ ಗೇರು ಬೆಳೆಯುವ ರೈತರು ತಮ್ಮದೇ ಆದ ವಾಹನಗಳಲ್ಲಿ ಸ್ಥಳೀಯ ವ್ಯಾಪಾರಿಗಳನ್ನು ಸಂಪರ್ಕಿಸದೇ ದೂರದ ಸಗಟು ವ್ಯಾಪಾರಿಗಳಿಗೆ ತಮ್ಮ ಉತ್ಪನ್ನಗಳನ್ನು ಮಾರಿ ಹೆಚ್ಚಿನ ಬೆಲೆ ಪಡೆದುಕೊಳ್ಳುತ್ತಾರೆ. ದ. ಕ. ಜಿಲ್ಲೆಯಲ್ಲಿ ಶೇ. ೧೪ ರಷ್ಟು ರೈತರು ಈ ರೀತಿಯಾಗಿ ತಮ್ಮ ಉತ್ಪನ್ನವನ್ನು ವಿಲೇವಾರಿ ಮಾಡುತ್ತಾರೆ.


ಕೊನೆಯ ವಿಧಾನ ನೇರವಾಗಿ ರೈತನೇ ತನ್ನ ಉತ್ಪನ್ನಗಳನ್ನು ಸಂಸ್ಕರಣಾ ಘಟಕಗಳಿಗೆ ಮಾರಾಟ ಮಾಡುವುದು. ಇಲ್ಲಿ ಉತ್ಪಾದಕ ಹಾಗೂ ಘಟಕಗಳ ನಡುವೆ ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಹಾಗಾಗಿ ಸಂಸ್ಕರಣಾ ಘಟಕಗಳು ಪಾವತಿಸಿದ ಹಣ ನೇರವಾಗಿ ಉತ್ಪಾದಕನಿಗೆ ದೊರೆಯುತ್ತದೆ. ದೊಡ್ಡ ಪ್ರಮಾಣದಲ್ಲಿ ಗೇರು ಬೆಳೆಯುವ ರೈತರು, ಗುತ್ತಿಗೆದಾರರು ಈ ಕ್ರಮ ಅನುಸರಿಸುತ್ತಾರೆ. ದ. ಕ. ಜಿಲ್ಲೆಯ ಪ್ರತಿಯೊಂದು ತಾಲೂಕಿನಲ್ಲೂ ಗೇರು ಸಂಸ್ಕರಣಾ ಘಟಕಗಳು ಇರುವುದರಿಂದ ಎಲ್ಲಾ ತಾಲೂಕಿನ ರೈತರಿಗೆ ತಮ್ಮ ಗೇರು ಉತ್ಪನ್ನಗಳ ನೇರ ಮಾರಾಟ ಸುಲಭ ಸಾಧ್ಯ. ದ.ಕ. ಜಿಲ್ಲೆಯ ಶೇ. ೧೫ ರಷ್ಟು ಗೇರು ಬೆಳೆಗಾರರು ಈ ಕ್ರಮ ಅನುಸರಿಸುತ್ತಾರೆ.

ಮೇಲಿನ ಎಲ್ಲಾ ಮಾರುಕಟ್ಟೆ ವಿಧಾನಗಳಿಗಿಂತ ಕೊನೆಯ ವಿಧಾನ ಅಂದರೆ ಕಚ್ಚಾಗೇರನ್ನು ಉತ್ಪಾದಿಸುವ ರೈತನೇ ನೇರವಾಗಿ ಸಂಸ್ಕರಣಾ ಘಟಕಗಳಿಗೆ ಮಾರಾಟ ಮಾಡುವ ಕ್ರಮ ಅತ್ಯುತ್ತಮವಾದುದು. ಆದರೆ ರೈತರು ತಮ್ಮ ಆರ್ಥಿಕ ಅಗತ್ಯತೆಗಳಿಗಾಗಿ ಕೊಯ್ಲು ಪೂರ್ವದ ಒಪ್ಪಂದಕ್ಕೆ ಹಾಗೂ ಒತ್ತಡಕ್ಕೆ ಒಳಗಾಗುವುದರಿಂದ ಮಧ್ಯವರ್ತಿಗಳ ಪ್ರಭಾವ ಹೆಚ್ಚಾಗಿರುತ್ತದೆ.

ಗ್ರಾಹಕ ಕೊಡುವ ಬೆಲೆಯಲ್ಲಿ ಯಾರ್ಯಾರ ಪಾಲು ಎಷ್ಟು ಎಂಬುದು ಇಲ್ಲಿ ಸೂಚಿಸಲಾಗಿದೆ.

- ಉತ್ಪಾದಕನ ಪಾಲು ಶೇ. ೫೦ ರಿಂದ ೫೫
- ವರ್ತಕನ ಪಾಲು ಶೇ ೦.೫೦–೦.೭೦
- ಸಂಸ್ಕರಣಾಕಾರರ ಪಾಲು ಶೇ. ೮ ರಿಂದ – ೮.೫
- ಸಗಟು ವರ್ತಕರ ಪಾಲು ಶೇ. ೧೫ ರಿಂದ ೧೫.೫
- ಚಿಲ್ಲರೆ ಮಾರಾಟಗಾರರ ಪಾಲು ಶೇ.೬ ರಿಂದ ೭
- ಇತರೆ ವೆಚ್ಚದ ಪಾಲು ೧೫ ರಿಂದ ೧೬

ದ.ಕ. ಜಿಲ್ಲೆಯಲ್ಲಿ ಗೇರುಬೀಜ ಮಾರಾಟವಾಗುವ ವಿಧಾನವನ್ನು ಚಿತ್ರ ೬.೧ ರಲ್ಲಿ ತೋರಿಸಲಾಗಿದೆ.



ಚಿತ್ರ ೬.೧ ಗೇರುಬೀಜ ಮಾರಾಟ ವಿಧಾನ

ದ.ಕ. ಜಿಲ್ಲೆಯ ಶೇ. ೪೯ ರಷ್ಟು ರೈತರು ತಮ್ಮ ಗೇರು ಉತ್ಪನ್ನವನ್ನು ಗ್ರಾಮೀಣ ವ್ಯಾಪಾರಿಯ ಮುಖಾಂತರ ಸಗಟು ಮಾರಾಟಗಾರರಿಗೆ ತಲುಪಿಸುತ್ತಾರೆ. ಶೇ. ೭ ರಷ್ಟು ಉತ್ಪಾದಕರು ಗುತ್ತಿಗೆದಾರರ ಮೊರೆ ಹೋಗುತ್ತಾರೆ. ಒಟ್ಟು ಗೇರು ಮಾರುಕಟ್ಟೆಯ ಪ್ರಕ್ರಿಯೆಯಲ್ಲಿ ಗ್ರಾಮೀಣ ವ್ಯಾಪಾರಿಯೇ ಹೆಚ್ಚು ಪ್ರಭಾವಿಯಾಗಿರುವುದು ಕಂಡು ಬರುತ್ತದೆ.


೬.೩. ಗುಣಮಟ್ಟ ಮತ್ತು ಬೆಲೆ ನಿರ್ಣಯ

ಗೋಡಂಬಿ ಉದ್ಯಮದಲ್ಲಿ ಗೇರು ಬೀಜದ ಗುಣಮಟ್ಟ ಒಂದು ಪ್ರಮುಖ ಅಂಶ. ಗೇರು ಬೀಜದ ಗಾತ್ರ, ತೇವಾಂಶ, ಬೀಜದ ಮೇಲ್ಭಾಗದಲ್ಲಿ ಇರುವ ಕಲೆಗಳು, ಬೀಜದ ಬಣ್ಣ ಇವುಗಳೆಲ್ಲಾ ಗೇರು ಬೀಜದ ತಿರುಳಿನ ಮೇಲೆ ಪ್ರಭಾವ ಬೀರುತ್ತವೆ ಮತ್ತು ಅದರ ಗುಣಮಟ್ಟವನ್ನು ನಿರ್ಣಯಿಸುತ್ತವೆ. ಸಂಪೂರ್ಣವಾಗಿ ಬಲಿತ ಗೇರು ಬೀಜದಿಂದ ಉತ್ತಮ ಗೋಡಂಬಿ ತಿರುಳನ್ನು ಪಡೆಯಲು ಸಾಧ್ಯ. ಸಾಮಾನ್ಯವಾಗಿ ಫೆಬ್ರವರಿ/ಮಾರ್ಚ್‌ನಲ್ಲಿ ಗೇರು ಹಣ್ಣು ಬಲಿತು ಗೇರು ಬೀಜ ಕೊಯ್ಲಿಗೆ ಸಿದ್ಧವಾಗುತ್ತದೆ. ಹಣ್ಣು ಚೆನ್ನಾಗಿ ಮಾಗಿದಾಗ ತಾನಾಗಿಯೇ ಉದುರಿ ಬೀಳುತ್ತದೆ. ಆ ಸಮಯದಲ್ಲಿ ಹಣ್ಣನ್ನು ಹೆಕ್ಕಿ ಬೀಜವನ್ನು ಹಣ್ಣಿನಿಂದ ಬೇರ್ಪಡಿಸಬೇಕು. ಗೇರು ಬೀಜ ಬಲಿತಾಗ ಅದು ಹಸಿರು ಬಣ್ಣದಿಂದ ಬೂದು ಬಣ್ಣಕ್ಕೆ ತಿರುಗುತ್ತದೆ ಮತ್ತು ಗೇರು ಹಣ್ಣಿನ ಬಣ್ಣ ಹಳದಿ ಇಲ್ಲವೇ ಕೆಂಪಾಗುತ್ತದೆ. ಆಗ ಉದ್ದನೆಯ ಕೊಕ್ಕೆ ಇರುವ ಕೋಲಿನಿಂದ ಹಣ್ಣನ್ನು ಬೀಳಿಸಿ ಹೆಕ್ಕಿ ಸಂಗ್ರಹಿಸಬೇಕು. ಕಳ್ಳತನದ ಭಯದಿಂದ ಅಥವಾ ಕಾರ್ಮಿಕರ ಕೊರತೆಯಿಂದ ಬೀಜ ಬಲಿಯುವ ಮುನ್ನವೇ ಕಾಯಿ ಕೀಳುವುದರಿಂದ ಬೀಜದ ಗುಣಮಟ್ಟ ಕುಸಿಯುತ್ತದೆ. ಅಂತಹ ಬೀಜಗಳಿಗೆ ನಿರೀಕ್ಷಿತ ಬೆಲೆ ದೊರಕುವುದಿಲ್ಲ. ಮಾರ್ಚ್‌ನಿಂದ ಮೇ ತನಕ ಪ್ರತಿದಿನ ಎಂಬಂತೆ ಗೇರು ಬೀಜದ ಸಂಗ್ರಹಣೆ ಆಗುತ್ತದೆ. ಕೊಯ್ಲಿನ ಅವಧಿ ४೫ ದಿನಗಳಿಂದ ೬೫ ದಿನಗಳ ತನಕ ವಿಸ್ತರಿಸಲ್ಪಡುತ್ತದೆ. ಬಲಿತ ಬೀಜಗಳನ್ನು ಹೆಕ್ಕಿ ಸಂಗ್ರಹಿಸಿ ಒಣಗಿಸಿ ಒಂದು ವರ್ಷದವರೆಗೆ ದಾಸ್ತಾನು ಇಡಬಹುದು. ಸಾಮಾನ್ಯವಾಗಿ ಸೆಪ್ಟೆಂಬರ್ ಹಾಗೂ ಅಕ್ಟೋಬರ್‌ನಲ್ಲಿ ಗೇರು ಬೀಜದ ಬೆಲೆ ಗರಿಷ್ಠ ಮಟ್ಟಕ್ಕೆ ಏರುತ್ತದೆ.



ಸಾಮಾನ್ಯವಾಗಿ ಗೇರು ಬೀಜದ ತೂಕ ೩ ರಿಂದ ೧೫ ಗ್ರಾಂನಷ್ಟಿರುತ್ತದೆ. ೩ ರಿಂದ ೬ ಸೆಂ. ಮೀ. ಉದ್ದ ಹಾಗೂ ಸುಮಾರು ೨.೫ ಸೆಂ. ಮೀ. ನಿಂದ ೩ ಸೆಂ. ಮೀ. ನಷ್ಟು ದಪ್ಪ ಇರುತ್ತದೆ. ಉತ್ತಮ ಗುಣ ಮಟ್ಟದ ಗೇರು ಬೀಜ ಹೆಚ್ಚು ಪ್ರಮಾಣದ ಗೋಡಂಬಿ ತಿರುಳನ್ನು ಹೊಂದಿದ್ದು ಗೇರು ಬೀಜದ ತೇವಾಂಶ ಶೇ. ೮ ರಿಂದ ೧೦ರಷ್ಟು ದಾಟಿರಬಾರದು. ಬೀಜದ ಮೇಲ್ಭಾಗದಲ್ಲಿ ಯಾವುದೇ ರೀತಿಯ ಕಪ್ಪು ಚುಕ್ಕೆಗಳು ಹಾಗೂ ಮಾಸಲು ಬಣ್ಣ ಇರಕೂಡದು. ಗೇರು ಬೀಜದಲ್ಲಿ ಮೂರು ವರ್ಗಗಳಿವೆ. ೫ ಗ್ರಾಂಗಿಂತ ಕಡಿಮೆ ತೂಕವಿದ್ದರೆ ಸಣ್ಣ ಪ್ರಮಾಣದ ಗೇರು ಬೀಜಗಳೆಂದು, ೫ ರಿಂದ ೯ ಗ್ರಾಂನ ಒಳಗೆ ಇದ್ದರೆ ಮಧ್ಯಮ ಗಾತ್ರದ ಬೀಜವೆಂದು, ೯ ಗ್ರಾಂಗಳಿಗಿಂತ ಜಾಸ್ತಿ ಇದ್ದರೆ ದೊಡ್ಡ ಗಾತ್ರದ ಬೀಜಗಳೆಂದು ನಿರ್ಧರಿಸಲಾಗುತ್ತದೆ. ಗೇರು ಬೀಜದಲ್ಲಿ ಸರಾಸರಿ ಶೇ. ೬೩ ರಷ್ಟು ಚಿಪ್ಪು, ಶೇ. ೨೮ ರಷ್ಟು ಗೋಡಂಬಿ ತಿರುಳು ಹಾಗೂ ಶೇ. ೯ ರಷ್ಟು ಹಸ್ಕ್ ಇರುತ್ತದೆ. ಕಚ್ಚಾಗೇರು ಬೀಜದ ಬಣ್ಣವು ಬೇರೆ ಬೇರೆಯಾಗಿರುತ್ತದೆ. ಕೊಯ್ಲು ಮಾಡಿದ ಅವಧಿ, ತೇವಾಂಶ ಹಾಗೂ ಸಂಗ್ರಹ ಮಾಡಿದ ರೀತಿ ಇವೆಲ್ಲವೂ ಗೇರುಬೀಜದ ಬಣ್ಣದ ಮೇಲೆ ಪ್ರಭಾವ ಬೀರುತ್ತದೆ. ಸಾಮಾನ್ಯವಾಗಿ ಪ್ರಕಾಶಮಾನವಾದ ಬೂದು ಬಣ್ಣದ ಗೇರು ಬೀಜ ಉತ್ತಮ ಗುಣಮಟ್ಟದ್ದಾಗಿರುತ್ತದೆ. ಮೊದಲ ಹಂತದಲ್ಲಿ ಕೊಯ್ಲು ಮಾಡಿದ ಗೇರು ಬೀಜಗಳು ಈ ವರ್ಗಕ್ಕೆ ಸೇರುತ್ತದೆ. ಸರಿಯಾಗಿ ಬಲಿಯದ, ಮಳೆ ಹಾಗೂ ರೋಗ ಬಾಧೆಗಳಿಗೆ ತುತ್ತಾದ ಗೇರು ಬೀಜಗಳು ಸ್ವಲ್ಪ ಮಾಸಲು ಬಣ್ಣವನ್ನು ಹೊಂದಿರುತ್ತದೆ. ಗೇರು ಬೀಜದ ದಾಸ್ತಾನು ವಿಧಾನವು ಅದರ ಬಣ್ಣದ ಮೇಲೆ ಪರಿಣಾಮ ಬೀರಬಲ್ಲದು. ಗೋಡಂಬಿಯ ತಿರುಳು ಉತ್ತಮವಾಗಿದ್ದರೂ, ಸಿಪ್ಪೆಯ ಬಣ್ಣ ಹದಗೆಟ್ಟಿದ್ದರೆ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ದೊರಕುವುದಿಲ್ಲ.

ಗೇರು ಮಾರುಕಟ್ಟೆಯು ಒಂದು ಪರಿಪೂರ್ಣ ಪೈಪೋಟಿಯ ಮಾರುಕಟ್ಟೆಯಾದುದರಿಂದ ಸಾಧಾರಣವಾಗಿ ಬೆಲೆಯು ಪರಿಪೂರ್ಣ ಪೈಪೋಟಿಯ ಸಿದ್ಧಾಂತಕ್ಕನುಗುಣವಾಗಿ ನಿರ್ಧಾರವಾಗುತ್ತದೆ. ಚಿತ್ರ ೬.೨ ರಲ್ಲಿ ಗೇರು ಬೀಜದ ಮಾರುಕಟ್ಟೆಯ ಬೆಲೆ ನಿರ್ಧಾರವಾಗುವ ವಿಧಾನವನ್ನು ತೋರಿಸಲಾಗಿದೆ.



ಚಿತ್ರ ೬.೨ ಸಮತೋಲನ ಬೆಲೆ


ಸಮತೋಲನ ಬೆಲೆಯ ಬೇಡಿಕೆ ಮತ್ತು ಪೂರೈಕೆಗಳ ಮುಕ್ತ ನಿರ್ವಹಣೆಯಿಂದ ನಿರ್ಧಾರವಾಗುತ್ತದೆ. ಚಿತ್ರ ೬.೨ ರಲ್ಲಿ ಸಮತೋಲನ ಬೆಲೆ O P ಯು ಬೇಡಿಕೆ ಮತ್ತು ಪೂರೈಕೆಗಳ ಸಂಗಮದಿಂದ ನಿರ್ಧಾರವಾಗುತ್ತದೆ. S S ಮೇಲ್ಮುಖ ಓಟದ ರೇಖೆಯು ಪೂರೈಕೆಯನ್ನು ಮತ್ತು D D ಕೆಳಮುಖ ಓಟದ ರೇಖೆಯು ಬೇಡಿಕೆಯನ್ನು ತೋರಿಸುತ್ತದೆ. ಅವು E

ಬಿಂದುವಿನಲ್ಲಿ ಒಂದನ್ನೊಂದು ಸಂಧಿಸುತ್ತವೆ. E ಸಮತೋಲನ ಬಿಂದುವಾಗಿದ್ದು O P ಯು ಸಮತೋಲನ ಬೆಲೆಯಾಗಿದೆ ಮತ್ತು OM ಸಮತೋಲನ ಉತ್ಪನ್ನವಾಗಿರುತ್ತದೆ.


ಮುಕ್ತ ವ್ಯವಸ್ಥೆಯಲ್ಲಿ ಮಾರುಕಟ್ಟೆಯ ಅಗೋಚರ ಶಕ್ತಿಗಳು ಸಮತೋಲನವನ್ನು ಸ್ವಯಂ ನಿರ್ವಹಣಾ ವ್ಯವಸ್ಥೆಯ ಮೂಲಕ ಉಳಿಸಿಕೊಳ್ಳುತ್ತವೆ. ಸಮತೋಲನ ಬೆಲೆಗಿಂತಲೂ ಬೆಲೆ ಹೆಚ್ಚಾದಾಗ ಬೇಡಿಕೆ ಕುಸಿಯುತ್ತದೆ ಮತ್ತು ಪೂರೈಕೆ ಅಧಿಕವಾಗುತ್ತದೆ. ಆಗ ಮಾರಾಟಗಾರರು ತಮ್ಮೊಳಗೆ ಪೈಪೋಟಿ ನಡೆಸಿ, ಬೇಗನೆ ತಮ್ಮ ಸರಕುಗಳನ್ನು ಖಾಲಿ ಮಾಡುವ ಉದ್ದೇಶದಿಂದ ಬೆಲೆಗಳನ್ನು ಇಳಿಸುತ್ತಾರೆ. ಬೇಡಿಕೆಯ ಅಭಾವವು ಸ್ವಯಂ ಚಾಲಿತ ಬೆಲೆಯನ್ನು ಸಮತೋಲನ ಬೆಲೆಗೆ ಇಳಿಸುತ್ತದೆ. ಇದಕ್ಕೆ ಮಾರಾಟಗಾರರ ಸ್ವಹಿತ ಕಾರಣವಾಗಿರುತ್ತದೆ.

ಬೆಲೆಯು ಸಮತೋಲನ ಬೆಲೆಗಿಂತ ಕಡಿಮೆಯಾದರೆ ಬೇಡಿಕೆ ಹೆಚ್ಚಾಗಿ, ಪೂರೈಕೆ ಕಡಿಮೆಯಾಗುತ್ತದೆ. ಬೆಲೆ ಕಡಿಮೆಯಾದಾಗ ಅನುಭೋಗಿಗಳು ಸರಕುಗಳನ್ನು ಪಡೆಯಲು ಪೈಪೋಟಿ ನಡೆಸುತ್ತಾರೆ. ಇದಕ್ಕೆ ಕೊಳ್ಳುವವರ ಸ್ವಹಿತ ಕಾರಣವಾಗಿರುತ್ತದೆ. ಬೇಡಿಕೆಯ ಹೆಚ್ಚಳದಿಂದಾಗಿ ಬೆಲೆ ಏರುತ್ತದೆ ಮತ್ತು ಬೆಲೆಯು ಸಮತೋಲನ ಹಂತಕ್ಕೆ ಬಂದು ನಿಲ್ಲುತ್ತದೆ. ಬೇಡಿಕೆ ಮತ್ತು ಪೂರೈಕೆಗಳು ಬೆಲೆ ಏರಿಕೆ ಅಥವಾ ಇಳಿಕೆಯಿಂದಾಗಿ ಸಮಾನವಾಗದಿದ್ದರೆ, ಸಮತೋಲನ ಬೆಲೆಯು ಸ್ವಯಂ ಚಾಲಿತವಾಗಿ ಸಾಧಿಸಲ್ಪಡುತ್ತದೆ. ಇದನ್ನೇ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು 'ಕಾಣದ ಕೈ' ಅಥವಾ ಅದೃಶ್ಯ ಹಸ್ತದ ಪ್ರಭಾವ ಎಂದು ಕರೆದಿರುವುದು. ಡಾ। ಆಲ್ಫ್ರೆಡ್ ಮಾರ್ಷಲ್ ಬೇಡಿಕೆ ಮತ್ತು ಪೂರೈಕೆಗಳನ್ನು ಕತ್ತರಿಯೊಂದರ ಎರಡು ಅಲಗುಗಳಿಗೆ ಹೋಲಿಸಿದ್ದಾರೆ. ಕತ್ತರಿಸಲು ಎರಡೂ ಅಲಗುಗಳ ಪರಸ್ಪರ ಸಹಕಾರ ಅಗತ್ಯವಿರುವಂತೆ ಬೆಲೆ ನಿರ್ಧಾರದಲ್ಲಿ ಬೇಡಿಕೆ ಮತ್ತು ಪೂರೈಕೆಗಳು ಎರಡೂ ಸಮಾನವಾಗಲೇ ಬೇಕು ಎಂದಿದ್ದಾರೆ.

ಬೇಡಿಕೆಯಲ್ಲಿ ಮತ್ತು ಪೂರೈಕೆಯಲ್ಲಿ ಬದಲಾವಣೆಯಾದಾಗ ಸಮತೋಲನ ಬೆಲೆಯೂ ಬದಲಾಗುತ್ತಿರುತ್ತದೆ. ಅಂತಹ ಎರಡು ಸಂದರ್ಭಗಳನ್ನು ಚಿತ್ರ ೬.೩ ಮತ್ತು ೬.೪ ತೋರಿಸುತ್ತದೆ.



ಚಿತ್ರ ೬.೩ ಬೇಡಿಕೆಯ ವ್ಯತ್ಯಾಸದಿಂದಾಗುವ ಪರಿಣಾಮ



ಚಿತ್ರ ೬.೪ ಪೂರೈಕೆಯ ವ್ಯತ್ಯಾಸದಿಂದಾಗುವ ಪರಿಣಾಮ

ಚಿತ್ರ ೬.೩ ಬೇಡಿಕೆಯಲ್ಲಿನ ಬದಲಾವಣೆಯಿಂದ ಬೆಲೆಯು ಹೇಗೆ ಬದಲಾಗುತ್ತದೆಂಬುದನ್ನು ತೋರಿಸುತ್ತದೆ. SS ಪೂರೈಕೆ ರೇಖೆಯು DD ಬೇಡಿಕೆಯ ರೇಖೆಯೊಡನೆ ಬಿಂದು E ನಲ್ಲಿ ಸಂಧಿಸಿ ಸಮತೋಲನ ಬೆಲೆ OP ಮತ್ತು ಸಮತೋಲನ ಉತ್ಪನ್ನ OM ನಿರ್ಧಾರವಾಗುತ್ತದೆ. SS ಪೂರೈಕೆ ರೇಖೆಯನ್ನು D_1 D_1 ಸಂಕುಚಿತ ಬೇಡಿಕೆಯ ರೇಖೆಯು E_1 ನಲ್ಲಿ ಸಂಧಿಸುತ್ತದೆ. OP_1 ಇಳಿಕೆಯ ಬೆಲೆಯನ್ನು OM_1 ಇಳಿಕೆಯ ಉತ್ಪನ್ನವನ್ನು ತೋರಿಸುತ್ತದೆ. D_2, D_2 ವಿಸ್ತೃತ ಬೇಡಿಕೆ ರೇಖೆಯು SS ಪೂರೈಕೆ ರೇಖೆಯನ್ನು E_2 ನಲ್ಲಿ ಸಂಧಿಸುತ್ತದೆ. OP_2 ಏರಿಕೆ ಬೆಲೆಯನ್ನು ಮತ್ತು OM_2 ವಿಸ್ತೃತ ಉತ್ಪನ್ನವನ್ನು ತೋರಿಸುತ್ತದೆ. ಬೇಡಿಕೆ ಇಳಿದಾಗ (D_1 D_1) ಬೆಲೆ ಕಡಿಮೆಯಾಗುತ್ತದೆ. (OP_1) ಮತ್ತು ಉತ್ಪನ್ನವೂ ಕಡಿಮೆಯಾಗುತ್ತದೆ (OM_1). ಬೇಡಿಕೆ ಹೆಚ್ಚಾದಾಗ (D_2,D_2) ಬೆಲೆ ಏರುತ್ತದೆ (OP_2). ಮತ್ತು ಉತ್ಪನ್ನವು ಅಧಿಕವಾಗಿರುತ್ತದೆ. (OM_2).

ಚಿತ್ರ ೬.೪ ಪೂರೈಕೆ ಬದಲಾಗುವುದರಿಂದ ಬೆಲೆ ಹೇಗೆ ಬದಲಾಗುತ್ತದೆಂಬುದನ್ನು ತೋರಿಸುತ್ತದೆ. DD ಬೇಡಿಕೆಯ ರೇಖೆಯನ್ನು S S ಪೂರೈಕೆ ರೇಖೆಯು E ನಲ್ಲಿ ಸಂಧಿಸುತ್ತದೆ. OM ಸಮತೋಲನ ಉತ್ಪನ್ನವಾಗಿರುತ್ತದೆ. S_1S_1 ವಿಕಸಿತ ಪೂರೈಕೆ ರೇಖೆಯು DD ಬೇಡಿಕೆಯ ರೇಖೆಯನ್ನು E_1 ನಲ್ಲಿ ಸಂಧಿಸುತ್ತದೆ. ಪೂರೈಕೆ ಅಧಿಕವಾದುದರಿಂದ (OM_1) ಬೆಲೆಯು OP_1ಗೆ ಕುಸಿಯುತ್ತದೆ. S_2S_2 ಸಂಕುಚಿತ ಪೂರೈಕೆಯ ರೇಖೆಯಾಗಿದ್ದು ಬೇಡಿಕೆಯ ರೇಖೆ DD ಯನ್ನು E2 ನಲ್ಲಿ ಸಂಧಿಸುತ್ತದೆ ಮತ್ತು ಬೆಲೆ P_2 ಗೆ ಏರುತ್ತದೆ ಹಾಗೂ ಉತ್ಪನ್ನವು M_2 ಗೆ ಇಳಿಯುತ್ತದೆ. ಹೀಗೆ ಪೂರೈಕೆ ಅಧಿಕವಾದಾಗ (S_1S_1)ಬೆಲೆ OP_1 ಕಡಿಮೆಯಾಗುತ್ತದೆ. ಮತ್ತು ಪೂರೈಕೆ ಕಡಿಮೆಯಾದಾಗ (S_2S_2)ಬೆಲೆ ಏರುತ್ತದೆ (P_2).

ಗೇರು ಬೀಜದ ಮಾರುಕಟ್ಟೆಯಲ್ಲಿ ಅಸಂಖ್ಯಾತ ರೈತರು, ವ್ಯಾಪಾರಿಗಳು ಪಾಲ್ಗೊಳ್ಳುತ್ತಾರೆ. ಬೆಲೆಯು ಬೇಡಿಕೆ ಪೂರೈಕೆಗಳಿಂದ ನಿರ್ಧಾರವಾಗುವುದೇನೋ ನಿಜವೇ. ಆದರೆ ಪರಿಪೂರ್ಣ ಸ್ಪರ್ಧೆಯಲ್ಲಿ ಇಲ್ಲದ ಗುಣ ನಿಷ್ಕರ್ಷೆ ಇಲ್ಲಿದೆ. ಕಾರಣ ಗೇರು ಬೀಜದ ಗುಣಮಟ್ಟದಲ್ಲಿ ಅಗಾಧವಾದ ವ್ಯತ್ಯಾಸಗಳು ಕಂಡು ಬರುವುದರಿಂದ ಏಕ ರೂಪದ ಬೆಲೆ ನಿಗದಿ

ಇರುವುದಿಲ್ಲ. ಗೇರು ಬೀಜದ ಗುಣ ಮಟ್ಟವನ್ನು ಅನುಸರಿಸಿ ಬೆಲೆಗಳನ್ನು ನಿರ್ಧರಿಸಲಾಗುತ್ತದೆ. ಗುಣ ಮಟ್ಟವನ್ನು ನಿರ್ಧರಿಸುವ ವಿಧಾನವು ಸ್ವಾರಸ್ಯಕರವಾಗಿದೆ.

ಗೇರು ಬೀಜದ ಗುಣಮಟ್ಟ ನಿರ್ಧಾರಕ್ಕೆ ಯಾವುದೇ ನಿಖರವಾದ ಮಾನದಂಡಗಳಿಲ್ಲ. ಹಾಗಾಗಿ ಬೆಲೆ ನಿಗದಿ ಮಾಡುವಲ್ಲಿ ಸಾಕಷ್ಟು ಗೊಂದಲಗಳು ಮೂಡುವುದು ಸಹಜ. ಕತ್ತರಿಸುವ, ನೀರಿನಲ್ಲಿ ಮುಳುಗಿಸಿ ಪರೀಕ್ಷಿಸುವ, ಒಂದು ಕೆ.ಜಿ .ಗೇರು ಬೀಜದಲ್ಲಿರುವ ಬೀಜಗಳ ಸಂಖ್ಯೆಯ ಆಧಾರದಲ್ಲಿ ಹಾಗೂ ಅದರ ತೇವಾಂಶದ ಆಧಾರದಲ್ಲಿ ಗೇರು ಬೀಜದ ಗುಣಮಟ್ಟ ಹಾಗೂ ತತ್ಸಂಬಂಧಿ ಬೆಲೆ ನಿರ್ಧರಿಸಲ್ಪಡುತ್ತದೆ. ಕತ್ತರಿಸುವ ವಿಧಾನದಲ್ಲಿ ಒಂದು ಕೆ. ಜಿ. ಗೇರು ಬೀಜವನ್ನು ಕತ್ತರಿಸಿ ಅದರ ತಿರುಳಿನ ಬಣ್ಣ, ಗಾತ್ರ, ಬೀಜದ ಮೇಲೆ ಆಗಿರುವ ಕಲೆಗಳು ಇತ್ಯಾದಿಗಳನ್ನು ಪರಿಶೀಲಿಸಿ ಬೆಲೆ ನಿರ್ಧರಿಸಲಾಗುತ್ತದೆ. ಸಾಮಾನ್ಯವಾಗಿ ಫ್ಯಾಕ್ಟರಿಗಳಲ್ಲಿ ಈ ರೀತಿ ಪರೀಕ್ಷಿಸಿ ಬೆಲೆ ನಿರ್ಧರಿಸುತ್ತಾರೆ. ಗೇರು ಬೀಜದ ತೂಕದ ಶೇ. ೨೫ ರಷ್ಟು ತೂಕದ ತಿರುಳು ದೊರೆಯಬೇಕು. ಗೇರು ಬೀಜ ಸರಿಯಾಗಿ ಬಲಿಯದೆ ಇದ್ದಲ್ಲಿ, ಹಾನಿಗೊಳಗಾದಲ್ಲಿ ಈ ಪ್ರಮಾಣದ ಗೋಡಂಬಿ ಸಿಗುವುದಿಲ್ಲ. ಎರಡನೆಯ ವಿಧಾನ ಗೇರುಬೀಜಗಳನ್ನು ನೀರಿನಲ್ಲಿ ಮುಳುಗಿಸಿ ಪರೀಕ್ಷೆಗೆ ಒಡ್ಡುವುದು. ಗೇರುಬೀಜಗಳನ್ನು ನೀರಿನಲ್ಲಿ ಮುಳುಗಿಸಿದಾಗ ಉತ್ತಮ ಗುಣಮಟ್ಟದ ಬೀಜಗಳು ನೀರಿನಲ್ಲಿ ಮುಳುಗುತ್ತವೆ. ಶೇಕಡಾ ೨೪ ಕ್ಕಿಂತ ಹೆಚ್ಚು ಗೇರು ಬೀಜಗಳು ನೀರಿನ ಮೇಲ್ಭಾಗದಲ್ಲಿ ತೇಲುತ್ತಿದ್ದರೆ ಗೇರು ಬೀಜದ ಗುಣಮಟ್ಟ ಕಳಪೆ ಎಂದು ತೀರ್ಮಾನಿಸಲಾಗುತ್ತದೆ. ಮೂರನೆಯ ವಿಧಾನ ಗೇರು ಬೀಜದ ತೂಕಕ್ಕೆ ಸಂಬಂಧಿಸಿದ್ದು. ಒಂದು ಕೆ. ಜಿ. ಗೇರುಬೀಜದಲ್ಲಿ ಸಾಮಾನ್ಯವಾಗಿ ೧೮೦ ಬೀಜಗಳಿರುತ್ತವೆ. ಗೇರು ಬೀಜದ ಸಂಖ್ಯೆ ಜಾಸ್ತಿ ಇದ್ದಷ್ಟು ಅದರಲ್ಲಿರುವ ತಿರುಳಿನ ಗಾತ್ರ ಚಿಕ್ಕದು ಎಂದು ನಿರ್ಧರಿಸಲಾಗುತ್ತದೆ. ಅದಕ್ಕೆ ಅನುಗುಣವಾಗಿ ಬೆಲೆ ನಿರ್ಧಾರವಾಗುತ್ತದೆ. ಗೇರು ಬೀಜದ ತೇವಾಂಶದ ಭಾಗ ಶೇ. ೮ ರಿಂದ ೧೦ ರಷ್ಟು ಇರಬೇಕು. ಶೇ. ೧೦ ಕ್ಕಿಂತ ಜಾಸ್ತಿ ಇದ್ದರೆ ಕಳಪೆ ಗುಣಮಟ್ಟದ ಬೀಜ ಎಂದು ನಿರ್ಣಯಿಸಲ್ಪಡುತ್ತದೆ.

ಗೇರು ಬೀಜಗಳನ್ನು ಕೊಯ್ಯುವಾಗ ಅವುಗಳಲ್ಲಿ ಶೇ. ೧೨ ರಿಂದ ೧೬ರಷ್ಟು ತೇವಾಂಶವಿರುತ್ತದೆ. ಗೇರು ಬೀಜಗಳನ್ನು ಕನಿಷ್ಠ ೬ ರಿಂದ ೧೨ ತಿಂಗಳುಗಳವರೆಗೆ ದಾಸ್ತಾನು ಮಾಡಬೇಕಾದುದರಿಂದ ಅದರಲ್ಲಿರುವ ತೇವಾಂಶವನ್ನು ಕನಿಷ್ಠ ಶೇ. ೮ ರಿಂದ ೧೦ರ ತನಕ ಇಳಿಸಬೇಕು. ಅದಕ್ಕಾಗಿ ೨–೩ ದಿನಗಳವರೆಗೆ ಬಿಸಿಲಿನಲ್ಲಿ ಹರಡಿ ಒಣಗಿಸಬೇಕಾಗುತ್ತದೆ. ನಂತರ ತಲಾ ೮೦ ಕೆ. ಜಿ. ಗಳಂತೆ ಗೋಣಿಚೀಲಗಳಲ್ಲಿ ತುಂಬಿಸಿ ದಾಸ್ತಾನು ಮಾಡಲಾಗುತ್ತದೆ. ದಾಸ್ತಾನು ಮಾಡುವ ಉಗ್ರಾಣಗಳು ಕ್ರಿಮಿ-ಕೀಟ ಮುಕ್ತವಾಗಿರಬೇಕು ಹಾಗೂ ಸ್ವಚ್ಛವಾಗಿರಬೇಕು. ನೆಲ, ಗೋಡೆ ಹಾಗೂ ಕೊಠಡಿಗಳಲ್ಲಿ ಯಾವುದೇ ಬಿರುಕು ಇರಬಾರದು. ಉಗ್ರಾಣದಲ್ಲಿ ಚೀಲಗಳನ್ನು ಗೋಡೆಯಿಂದ ಸ್ವಲ್ಪ ಅಂತರದಲ್ಲಿ ಇಡಬೇಕು. ಚೀಲಗಳನ್ನು ನೇರವಾಗಿ ನೆಲದ ಮೇಲೆ ಇಡಬಾರದು. ಕಾರಣ ನೆಲದ ಅಥವಾ ಗೋಡೆಯ ಮೇಲಿನ ತೇವಾಂಶದಿಂದಾಗಿ ಗೇರು ಬೀಜದ ಗುಣಮಟ್ಟ ಕೆಡಬಹುದಾದ ಸಾಧ್ಯತೆಗಳು ಹೆಚ್ಚು. ಅದಕ್ಕಾಗಿ ನೆಲದಿಂದ ಹಾಗೂ ಗೋಡೆಯಿಂದ ೩೦ ಸೆಂ. ಮೀ. ನಷ್ಟು ಅಂತರದಲ್ಲಿ ಮರದ ದಿಂಬಿಗಳ ಮೇಲೆ ಗೇರು ಬೀಜದ ಚೀಲಗಳನ್ನು ಸಾಲಾಗಿ ಪೇರಿಸಿಡಬೇಕು. ನೆಲದ ಮೇಲೆ ಮರಳನ್ನು ಹರಡಿದರೆ ತೇವಾಂಶದಿಂದ ಗೇರು ಬೀಜದ ಚೀಲಗಳ ರಕ್ಷಣೆ ಸಾಧ್ಯವಾಗುತ್ತದೆ.

೬.೪ ಗೇರು ಬೀಜ ಮಾರಾಟದ ಸಮಸ್ಯೆಗಳು

ಗೇರು ಬೀಜವನ್ನು ಮಾರಾಟ ಮಾಡುವ ರೈತ ತನ್ನ ಇತರೆ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವಾಗ ಯಾವ ಯಾವ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆಯೋ ಅವೆಲ್ಲವನ್ನೂ ಇಲ್ಲೂ ಎದುರಿಸಬೇಕಾಗುತ್ತದೆ.

- ಅಸಂಘಟಿತ ಮಾರುಕಟ್ಟೆಯ ಸಮಸ್ಯೆಯು ಗೇರು ಕೃಷಿಕರನ್ನು ಬಾಧಿಸುತ್ತದೆ. ದ. ಕ. ಜಿಲ್ಲೆಯಲ್ಲಿ ಗೇರು ಬೀಜದ ಮಾರಾಟಕ್ಕೆ ಸಂಬಂಧಿಸಿದಂತೆ ಸಹಕಾರಿ ಸಂಘವಾಗಲೀ, ನಿಯಂತ್ರಿತ ಮಾರುಕಟ್ಟೆಯಾಗಲೀ ಇಲ್ಲ. ಗೇರು ಬೀಜವನ್ನು ಮಾತ್ರ ಕೊಂಡುಕೊಳ್ಳುವ ಪ್ರತ್ಯೇಕ ಮಾರುಕಟ್ಟೆಯಾಗಲೀ, ವ್ಯಾಪಾರಿಯಾಗಲೀ ಇಲ್ಲ. ಇತರೆ ಕೃಷಿ ಉತ್ಪನ್ನಗಳನ್ನು ಕೊಂಡುಕೊಳ್ಳುವ ವ್ಯಾಪಾರಿಗಳೇ ಗೇರು ಬೀಜವನ್ನು ಖರೀದಿಸುತ್ತಾರೆ. ಹಾಗಾಗಿ ಗೇರು ಬೀಜದ ವ್ಯಾಪಾರಕ್ಕೆ ವರ್ತಕರು ಪ್ರತ್ಯೇಕವಾಗಿ ವಿಶೇಷ ಮುತುವರ್ಜಿ ವಹಿಸುವುದಿಲ್ಲ. ಜೊತೆಗೆ ಗೇರು ಬೀಜದ ವ್ಯಾಪಾರ ೩–೪ ತಿಂಗಳುಗಳಿಗೆ ಮಾತ್ರ ಸೀಮಿತವಾದುದರಿಂದ ಅದನ್ನೊಂದು ಪ್ರಮುಖ ವ್ಯಾಪಾರದ ಭಾಗ ಎಂದು ಅವರು ಭಾವಿಸುವುದಿಲ್ಲ. ಈ ಕಾರಣದಿಂದಾಗಿ ಗೇರು ಬೆಳೆಗಾರ ಮಾರುಕಟ್ಟೆಯ ಮೇಲೆ ಪ್ರಭಾವ ಬೀರಲು ಸಾಧ್ಯವಾಗುವುದಿಲ್ಲ.
- ದ. ಕ. ಜಿಲ್ಲೆಯಲ್ಲಿ ಗೇರು ಬೆಳೆಯುವ ಅಸಂಖ್ಯಾತ ರೈತರು ಸಣ್ಣ ಹಾಗೂ ಅಂಚಿನ ರೈತರು. ಸಣ್ಣ ಪ್ರಮಾಣದಲ್ಲಿ ಗೇರು ಬೀಜದ ಮಾರಾಟ ಮಾಡುವುದರಿಂದ ಬೆಲೆ ನಿರ್ಧರಿಸುವ ಶಕ್ತಿ ಇವರಿಗೆ ಇಲ್ಲ. ಮಾರುಕಟ್ಟೆಯ ಬೆಲೆಯನ್ನು ಒಪ್ಪಿಕೊಳ್ಳುವುದು ಅನಿವಾರ್ಯ. ಇದರಿಂದಾಗಿ ಇವರ ಸರಕುಗಳಿಗೆ ಸಿಗುವ ಬೆಲೆ ಕಡಿಮೆ.
- ದಕ್ಷಿಣ ಕನ್ನಡ ಜಿಲ್ಲೆಯ ಬಹುತೇಕ ಹಳ್ಳಿಗಳು ಸರಿಯಾದ ರಸ್ತೆ ಸೌಲಭ್ಯವನ್ನು ಹೊಂದಿರುವುದಿಲ್ಲ. ಇಲ್ಲಿನ ವಿಶಿಷ್ಟವಾದ ಭೌಗೋಳಿಕತೆಯಿಂದಾಗಿ ಮಳೆಗಾಲದಲ್ಲಿ ಗ್ರಾಮೀಣ ಭಾಗಗಳಲ್ಲಿ ವಾಹನ ಸಂಚಾರ ಅಸಾಧ್ಯವಾಗಿರುತ್ತದೆ. ಬಹುತೇಕ ರೈತರು ತಮ್ಮ ಸರಕುಗಳನ್ನು ತಲೆ ಹೊರೆಯಲ್ಲಿ ಸಾಗಿಸಬೇಕಾಗುತ್ತದೆ. ಇದರಿಂದಾಗಿ ಸೂಕ್ತ ಬೆಲೆ ದೊರೆಯಬಹುದಾದ ಜಿಲ್ಲಾ ಹಾಗೂ ಕೇಂದ್ರೀಯ ಮಾರುಕಟ್ಟೆಗಳಿಗೆ ತಮ್ಮ ಉತ್ಪನ್ನಗಳನ್ನು ತಲುಪಿಸುವಲ್ಲಿ ವಿಫಲರಾಗುತ್ತಾರೆ.
- ಬಹುಸಂಖ್ಯೆ ರೈತರು ಸಣ್ಣ ರೈತರಾಗಿದ್ದು ಸಾಲದಲ್ಲಿ ಮುಳುಗಿರುವುದರಿಂದ ಗೇರು ಬೀಜ ಬಲಿತ ಕೂಡಲೇ ತಮ್ಮ ಸರಕುಗಳನ್ನು ಅಗ್ಗದ ಬೆಲೆಯಲ್ಲಿ ಹಣದ ಲೇವಾದೇವಿಗಾರರಿಗೆ ಸ್ಥಳೀಯ ವರ್ತಕರಿಗೆ ಮಾರಾಟ ಮಾಡುತ್ತಾರೆ. ಉತ್ತಮ ಬೆಲೆ ಲಭಿಸುವವರೆಗೆ ಮಾರಾಟವನ್ನು ಮುಂದೂಡಲು ಅವರಿಗೆ ಸಾಧ್ಯವೇ ಇರುವುದಿಲ್ಲ. ರೈತರ ಆರ್ಥಿಕ ದುರ್ಬಲತೆಯೇ ಇದಕ್ಕೆ ಕಾರಣ. ಒತ್ತಡದ ಮಾರಾಟದಿಂದಾಗಿ ಗೇರು ಬೀಜದ ಬಹು ಪಾಲು ಬೆಲೆ ಇವರಿಗೆ ಸಂದಾಯವಾಗುವುದೇ ಇಲ್ಲ.
- ದ. ಕ. ಜಿಲ್ಲೆಯ ಗೇರು ಮಾರುಕಟ್ಟೆಯಲ್ಲಿ ಉತ್ಪಾದಕ ಹಾಗೂ ಸಂಸ್ಕರಣಾಗಾರರ ನಡುವೆ ಸಾಕಷ್ಟು ಮಧ್ಯವರ್ತಿಗಳ ಸರಣಿ ಇದೆ. ಗ್ರಾಮೀಣ ಪ್ರದೇಶದ ಪ್ರವಾಸಿ ವ್ಯಾಪಾರಿಯಿಂದ ಪ್ರಾರಂಭಿಸಿ ಕೇಂದ್ರೀಯ/ಜಿಲ್ಲಾ ಮಾರುಕಟ್ಟೆಯವರೆಗೆ ಗೇರು ಬೀಜಗಳು ಹಲವು ಬಾರಿ ಹಸ್ತಾಂತರಿಸಲ್ಪಡುತ್ತವೆ. ಈ ಪರಿಣಾಮವಾಗಿ ಉತ್ಪನ್ನದ ನಿಜವಾದ ಬೆಲೆ ಮತ್ತು ರೈತರು ಪಡೆಯುವ ಪ್ರತಿಫಲದ ನಡುವೆ ಅಜಗಜಾಂತರ ವ್ಯತ್ಯಾಸವಿರುತ್ತದೆ. ದಲ್ಲಾಳಿಗಳ ಜಾಲ ಒಂದು ವ್ಯವಸ್ಥಿತ ಅಂಗವಾಗಿ ಬೆಳೆದಿರುವುದರಿಂದ ಅವರ ಹೊರತು ಮಾರಾಟ ಕಾರ್ಯವೇ ಅಸಾಧ್ಯವಾಗಿರುತ್ತದೆ.
- ಗೇರು ಬೀಜಗಳನ್ನು ವರ್ಗೀಕರಿಸುವ ಹಾಗೂ ಪ್ರಮಾಣೀಕರಿಸುವ ಯಾವುದೇ ನಿಖರ ಮಾಪನಗಳು ಇಲ್ಲ. ಇದರ ಪರಿಣಾಮವಾಗಿ ಹಲವಾರು ಗುಣ ಮಟ್ಟದ ಗೇರುಬೀಜಗಳನ್ನು ಒಟ್ಟಾಗಿ ಮಾರಲಾಗುತ್ತದೆ. ದ. ಕ. ಜಿಲ್ಲೆಯ ಗೇರು ವ್ಯಾಪಾರಿಗಳು ಕೇವಲ ಕಣ್ಣೋಟದಿಂದಲೇ ಗೇರು ಬೀಜದ ಗುಣ ಮಟ್ಟ ನಿರ್ಧರಿಸಿ ಬೆಲೆ ನಿಗದಿ ಮಾಡುತ್ತಾರೆ.

ಕೇಂದ್ರೀಯ/ಜಿಲ್ಲಾ ಮಾರುಕಟ್ಟೆಯ ಬೆಲೆಗೆ ಸಮಾನವಾದ ಬೆಲೆ ರೈತನಿಗೆ ದೊರಕುತ್ತಿಲ್ಲ. ಉತ್ಪನ್ನ, ಗುಣಮಟ್ಟ ಮತ್ತು ಬೆಲೆಯ ನಡುವೆ ಒಂದಕ್ಕೊಂದಕ್ಕೆ ಸಂಬಂಧವೇ ಇಲ್ಲದಂತಾಗುವುದರಿಂದ ಉತ್ತಮ ಗುಣ ಮಟ್ಟದ ಸರಕುಗಳೂ ಅತ್ಯಲ್ಪ ಬೆಲೆಯಲ್ಲಿ ಮಾರಾಟವಾಗಿ ಬಿಡುತ್ತದೆ.

- ಗೇರು ಬೀಜಗಳನ್ನು ಕೊಯ್ಲು ಮಾಡಿದ ಒಂದೆರಡು ದಿನಗಳಲ್ಲೇ ಮಾರಾಟ ಮಾಡಬೇಕಾಗುತ್ತದೆ. ಇಲ್ಲವಾದಲ್ಲಿ ಬೀಜಗಳು ತಮ್ಮ ತೂಕವನ್ನು ಕಳೆದುಕೊಂಡು ಬಿಡುತ್ತದೆ. ಹಾಗಾಗಿ ರೈತರು ತಮ್ಮ ಗೇರು ಬೀಜಗಳನ್ನು ಅತೀ ಶೀಘ್ರದಲ್ಲಿ ಮಾರಾಟ ಮಾಡುವುದರಿಂದ ಉತ್ತಮ ಬೆಲೆ ಸಿಗುವವರೆಗೆ ಕಾಯುವ ಸಾಧ್ಯತೆಗಳು ಇರುವುದಿಲ್ಲ. ಶೇಖರಣೆಯ ಸವಲತ್ತಿನ ಕೊರತೆಯಿಂದ ರೈತರಿಗೆ ನಿರೀಕ್ಷಿತ ಬೆಲೆ ದೊರಕುತ್ತಿಲ್ಲ.
- ಬುದ್ಧಿವಂತರ ಜಿಲ್ಲೆಯೆಂದೇ ಪ್ರಸಿದ್ಧಿ ಪಡೆದ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ರೈತರು ಮಧ್ಯವರ್ತಿಗಳಿಂದ ಮೋಸಕ್ಕೊಳಗಾಗುತ್ತಾರೆ. ಗೇರು ಬೆಲೆಯ ಬಗೆಗಿನ ತಪ್ಪು ಮಾಹಿತಿ ತೂಕ ಮತ್ತು ಅಳತೆಯಲ್ಲಿ ಅಸಮರ್ಪಕ ಮಾನದಂಡಗಳಿಂದಾಗಿ ರೈತರು ವಂಚನೆಗೆ ಒಳಗಾಗುತ್ತಾರೆ. ಮಾರುಕಟ್ಟೆಯ ಕೃತ್ರಿಮಗಳಿಂದಾಗಿ ಗೇರು ಬೆಳೆಗಾರರಿಗೆ ನ್ಯಾಯವಾದ ಬೆಲೆ ದೊರಕುತ್ತಿಲ್ಲ.
- ದ. ಕ. ಜಿಲ್ಲೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಗೇರು ತೋಟಗಳನ್ನು ಹೊಂದಿರುವ ರೈತರು ಕಾರ್ಮಿಕರ ಕೊರತೆ, ನಿರ್ವಹಣಾ ಸಮಸ್ಯೆಗಳಿಂದಾಗಿ ಕೊಯ್ಲು ಪೂರ್ವ ಗುತ್ತಿಗೆದಾರರಿಗೆ ತಮ್ಮ ಗೇರು ತೋಟಗಳನ್ನು ವಹಿಸಿಕೊಡುತ್ತಾರೆ. ಗೇರು ತೋಟಗಳ ಫಸಲನ್ನು ಮೇಲ್ನೋಟದಿಂದ ಅಂದಾಜಿಸಿ ಒಪ್ಪಂದ ಮಾಡಿಕೊಳ್ಳಲಾಗುತ್ತದೆ. ರೈತರಿಗೆ ಹೆಚ್ಚಿನ ಅಪಾಯಗಳನ್ನು ಎದುರಿಸುವ ಶಕ್ತಿ ಇಲ್ಲದಿರುವುದರಿಂದ ಈ ರೀತಿ ಹೊಂದಾಣಿಕೆ ಅನಿವಾರ್ಯವಾಗುತ್ತದೆ. ಇದರಿಂದಾಗಿ ರೈತರಿಗೆ ಸರಿಯಾದ ಪ್ರತಿಫಲ ಸಿಗುವುದಿಲ್ಲ.
- ಸಾಮಾನ್ಯವಾಗಿ ಗೇರು ತೋಟಗಳಿಗೆ ಯಾವುದೇ ಭದ್ರತೆ ಇರುವುದಿಲ್ಲ. ಗೇರು ಬೀಜ ಬಲಿಯುವ ಸಮಯದಲ್ಲಿ ಅದನ್ನು ಕಾಯುವ ಕೆಲಸ ಅತ್ಯಂತ ಕಷ್ಟ. ಗೇರು ತೋಟದ ರಕ್ಷಣೆಗೆಂದೇ ಪ್ರತ್ಯೇಕವಾಗಿ ಕಾವಲುಗಾರರ ನೇಮಕ ಮಾಡುವ ಸಾಮರ್ಥ್ಯವೂ ಸಣ್ಣ ರೈತರಿಗೆ ಇರುವುದಿಲ್ಲ. ಗೇರು ಬೀಜದ ಸಂಗ್ರಹಣೆ ತುಂಬಾ ಸುಲಭವಾದುದರಿಂದ ಯಾರೂ ಬೇಕಾದರೂ ಗೇರು ಬೀಜವನ್ನು ಸಂಗ್ರಹಿಸಬಹುದಾದುದರಿಂದ ಹೆಚ್ಚಿನ ಸಂದರ್ಭಗಳಲ್ಲಿ ರೈತ ಬೆಳೆದ ಗೇರು ಬೀಜಗಳು ದಾರಿಹೋಕರ ಪಾಲಾಗುತ್ತವೆ. ಈ ಭಯದಿಂದ ಗೇರು ಬೆಳೆಗಾರ ಕಾಯಿ ಬಲಿಯುವ ಮೊದಲೇ ಅದನ್ನು ಕಿತ್ತು ಬಿಡುತ್ತಾನೆ. ಇದರಿಂದಾಗಿ ಗೇರು ಬೀಜದ ಗುಣ ಮಟ್ಟ ಕುಸಿಯುತ್ತದೆ. ದ. ಕ. ಜಿಲ್ಲೆ, ಕೊಡಗು ಮತ್ತು ಉಡುಪಿಯ ಕೆಲ ಭಾಗಗಳಲ್ಲಿ ಮೇ ತಿಂಗಳ ಕೊನೆಯ ವಾರದಲ್ಲಿ ಪತ್ತನಾಜೆ ಎಂಬ ಪ್ರಾದೇಶಿಕ ಹಬ್ಬದ ಆಚರಣೆ ಇದೆ. ಪತ್ತನಾಜೆಯ ನಂತರ ಗೇರು ಬೀಜವನ್ನು ದೇವರ ಸೊತ್ತು ಎಂದು ಭಾವಿಸುತ್ತಾರೆ. ಈ ನಂಬಿಕೆಯಿಂದ ಸುತ್ತಮುತ್ತಲಿನ ಜನ ಉಳಿದ ಹಸಿ ಅಥವಾ ಬಲಿತ ಗೇರು ಬೀಜಗಳನ್ನು ಸಂಗ್ರಹಿಸುತ್ತಾರೆ. ಇದಕ್ಕೆ ಮಾಲಿಕರ ಆಕ್ಷೇಪ ಇರುವುದಿಲ್ಲ. ಈ ಕಾರಣದಿಂದಾಗಿ ರೈತನ ಬಹುಪಾಲು ಫಸಲು ಕೈತಪ್ಪಿ ಹೋಗುತ್ತದೆ.

ಈ ಮೇಲಿನ ಸಮಸ್ಯೆಗಳಿಂದಾಗಿ ಗೇರು ಬೆಳೆಗಾರ ತನ್ನ ಸರಕುಗಳಿಗೆ ಸೂಕ್ತ ಬೆಲೆ ಕಂಡುಕೊಳ್ಳಲು ಸಾಧ್ಯವಾಗುತ್ತಿಲ್ಲ. ವರ್ಷದಿಂದ ವರ್ಷಕ್ಕೆ ಗೇರು ಕೃಷಿ ತನ್ನ ಆಕರ್ಷಣೆಯನ್ನು ಕಳೆದುಕೊಳ್ಳುತ್ತಿದ್ದು ಗೇರು ಕೃಷಿ ಅವನತಿಯತ್ತ ಸಾಗುತ್ತಿದೆ.

೬.೫ ಸ್ಥಳೀಯ ವ್ಯಾಪಾರಿಗಳ ಸಮಸ್ಯೆಗಳು

ಗೇರು ಮಾರುಕಟ್ಟೆಯಲ್ಲಿ ಸ್ಥಳೀಯ ವ್ಯಾಪಾರಿಗಳು ಪ್ರಮುಖ ಪಾತ್ರ ನಿರ್ವಹಿಸುತ್ತಾರೆ. ಮಾರುಕಟ್ಟೆಯ ಮೊದಲ ಪ್ರಕ್ರಿಯೆ ಇಲ್ಲಿಂದಲೇ ಪ್ರಾರಂಭವಾಗುತ್ತದೆ. ಅಸಂಖ್ಯಾತ ಸಂಖ್ಯೆಯಲ್ಲಿರುವ ಸಣ್ಣ ರೈತರು ತಾವು ಬೆಳೆದ ಅಲ್ಪ ಪ್ರಮಾಣದ ಗೇರು ಬೀಜವನ್ನು ನೇರವಾಗಿ ಕೇಂದ್ರೀಯ ಮಾರುಕಟ್ಟೆಗಾಗಲೀ, ಸಂಸ್ಕರಣಾ ಘಟಕಗಳಿಗಾಗಲೀ ರವಾನೆ ಮಾಡುವುದು ಸಾಧ್ಯವಿಲ್ಲದ ವಿಷಯ. ಆ ಕಾರಣದಿಂದ ಸ್ಥಳೀಯ ಮಾರುಕಟ್ಟೆ ಗೇರು ಮಾರಾಟದ ಪ್ರಾಥಮಿಕ ಹಂತವೆನಿಸಿಕೊಳ್ಳುತ್ತದೆ. ಸ್ಥಳೀಯ ಮಾರುಕಟ್ಟೆಯು ಸಾಮಾನ್ಯವಾಗಿ ಖಾಸಗಿ ಒಡೆತನದಲ್ಲಿದ್ದು ಅಲ್ಲಿನ ವ್ಯಾಪಾರಿಗಳು ಸುತ್ತಮುತ್ತಲಿನ ಜನಗಳಿಗೆ ಚಿರಪರಿಚಿತರೂ ಆಗಿರುವುದರಿಂದ ವ್ಯಾಪಾರದಲ್ಲಿ ವಿಶ್ವಾಸಾರ್ಹತೆಯೂ ಹೆಚ್ಚಾಗಿರುತ್ತದೆ. ಅವರು ರೈತರ ಸಾಂದರ್ಭಿಕ ಸಮಸ್ಯೆಗಳಿಗೆ ಸದಾ ಸ್ಪಂದಿಸುವವರೂ ಆಗಿರುವುದರಿಂದ ರೈತರ ಆಪ್ತರೂ ಆಗಿರುತ್ತಾರೆ. ಹೆಚ್ಚಿನ ವ್ಯಾಪಾರಿಗಳು ಗೇರು ಬೀಜದ ಖರೀದಿಯೊಂದಿಗೆ ಇತರ ಕೃಷಿ ಉತ್ಪನ್ನಗಳನ್ನು ಖರೀದಿಸುವವರಾಗಿರುತ್ತಾರೆ. ದ. ಕ. ಜಿಲ್ಲೆಯಾದ್ಯಂತ ಪ್ರಮುಖ ಬೆಳೆ ಎಂದೆನಿಸಿಕೊಂಡ ಅಡಿಕೆ ಅದರೊಂದಿಗೆ ತೆಂಗಿನಕಾಯಿ, ಕೋಕೋ ಇತ್ಯಾದಿಯಾಗಿ ಅನೇಕ ಕೃಷಿ ಉತ್ಪನ್ನಗಳನ್ನು ಖರೀದಿಸುತ್ತಾರೆ. ಗೇರು ಬೀಜದ ಕೊಯ್ಲಿನ ಸಮಯದಲ್ಲಿ ಸುತ್ತಮುತ್ತಲಿನ ಹಳ್ಳಿಗಳಿಂದ ಗೇರು ಬೀಜವನ್ನು ಖರೀದಿಸಿ ವ್ಯವಹರಿಸುತ್ತಾರೆ. ಸ್ಥಳೀಯ ವ್ಯಾಪಾರಿಗಳು ಹೆಚ್ಚಾಗಿ ರೈತರಿಗೆ ಸುಲಭವಾಗಿ ಸಂಪರ್ಕಿಸಬಹುದಾದಂತಹ ಸ್ಥಳಗಳಲ್ಲಿ ತಮ್ಮ ವ್ಯಾಪಾರಿ ಮಳಿಗೆಯನ್ನು ಹೊಂದಿರುತ್ತಾರೆ. ಜನದಟ್ಟಣೆ ಇರುವ ಪ್ರದೇಶ, ಬಸ್ ನಿಲ್ದಾಣಗಳ ಬಳಿ, ಪಟ್ಟಣದ ಕೇಂದ್ರ ಭಾಗ ಇಂತಹ ಸ್ಥಳಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಾರೆ. ಬಹುತೇಕ ವ್ಯಾಪಾರಿಗಳು ಸೂಕ್ತ ದಾಸ್ತಾನು ಮಳಿಗೆಗಳನ್ನು ಹೊಂದಿರುತ್ತಾರೆ.

ದ. ಕ. ಜಿಲ್ಲೆಯ ಸ್ಥಳೀಯ ಗೇರು ವ್ಯಾಪಾರಿಗಳು ತಮ್ಮ ಖರೀದಿ ಪ್ರಕ್ರಿಯೆಯಲ್ಲಿ ಅನೇಕ ರೀತಿಯ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.

- ಸ್ಥಳೀಯ ವ್ಯಾಪಾರಿಗಳು ಪ್ರತ್ಯೇಕವಾದ ಸ್ವಂತ ಅಥವಾ ಬಾಡಿಗೆ ಕಟ್ಟಡವನ್ನು ಹೊಂದಿರುವುದು ಅತ್ಯಗತ್ಯ. ತೂಕ ಮತ್ತು ಅಳತೆಯ ಸಾಧನಗಳು, ದಾಸ್ತಾನು ಮಳಿಗೆಗಳು ಇತ್ಯಾದಿಯಾಗಿ ಪ್ರಾರಂಭಿಕ ಬಂಡವಾಳ ಸುಮಾರು ರೂ. ೩ ಲಕ್ಷಗಳಷ್ಟು ಬೇಕಾಗುತ್ತದೆ. ಇದೆಲ್ಲಕ್ಕಿಂತ ಹೆಚ್ಚಾಗಿ ಗೇರು ಬೀಜದ ಖರೀದಿಗಾಗಿ ಒಂದೆರಡು ತಿಂಗಳ ಅವಧಿಗೆ ಆತ ಇದಕ್ಕೂ ಹೆಚ್ಚಿನ ಮೊತ್ತ ಹೊಂದಿಸಿಕೊಳ್ಳಬೇಕಾಗುತ್ತದೆ. ಸ್ವಂತ ಹಣ, ಬ್ಯಾಂಕ್ ಸಾಲ, ಖಾಸಗಿ ಸಂಸ್ಥೆಗಳ ಮೂಲಕ ಬಂಡವಾಳ ಹೊಂದಿಸಿಕೊಳ್ಳಬೇಕಾಗುತ್ತದೆ. ಈ ಹಣಕ್ಕೆ ಅವನು ಅಧಿಕ ಬಡ್ಡಿ ನೀಡಬೇಕಾಗುತ್ತದೆ. ಇದರಿಂದಾಗಿ ಆತ ನಷ್ಟ ಅನುಭವಿಸುವ ಸಾಧ್ಯತೆಗಳೂ ಇರುತ್ತವೆ.
- ರೈತನಿಂದ ಖರೀದಿಸಿದ ಗೇರು ಬೀಜಗಳನ್ನು ಅಲ್ಪ ಪ್ರಮಾಣದಲ್ಲಿ ಶ್ರೇಣೀಕರಿಸುವ ವೆಚ್ಚ, ಮೂಟೆ ಕಟ್ಟುವ ವೆಚ್ಚ, ಹೊರೆ ಏರಿಸುವ ವೆಚ್ಚ, ಹೊರೆ ಇಳಿಸುವ ವೆಚ್ಚ, ದಾಸ್ತಾನು ವೆಚ್ಚ, ದಾಸ್ತಾನು ಸಂಬಂಧಿ ನಷ್ಟಗಳು ಇತ್ಯಾದಿಯಾಗಿ ಅನೇಕ ರೀತಿಯ ಖರ್ಚುಗಳನ್ನು ನಿಭಾಯಿಸಬೇಕಾಗುತ್ತದೆ. ಮತ್ತು ಸರಕುಗಳನ್ನು ಜಿಲ್ಲಾ ಕೇಂದ್ರೀಕೃತ ಮಾರುಕಟ್ಟೆ ಅಥವಾ ಕೇಂದ್ರೀಯ ಮಾರುಕಟ್ಟೆಗೆ ರವಾನೆ ಮಾಡಬೇಕಾಗುತ್ತದೆ. ಇದಕ್ಕೆ ತುಂಬಾ ವೆಚ್ಚ ತಗಲುತ್ತದೆ.
- ಸಾಮಾನ್ಯವಾಗಿ ಗೇರು ಬೀಜದ ಗುಣಮಟ್ಟದ ನಿರ್ಧಾರಕ್ಕೆ ನಿಖರವಾದ ಮಾನ ದಂಡಗಳಿಲ್ಲ. ಆ ಕಾರಣದಿಂದ ಬೀಜದ ಗಾತ್ರ, ಬಣ್ಣ ಮತ್ತು ತೂಕದ ಆಧಾರದಲ್ಲಿ ಬೆಲೆ ನಿಷ್ಕರ್ಷೆ ಆಗುತ್ತದೆ. ರೈತನ ಅನಿವಾರ್ಯತೆಯ ಅರಿವು ಇರುವ ವ್ಯಾಪಾರಿ


ಕೇಂದ್ರೀಯ ಮಾರುಕಟ್ಟೆಯ ಬೆಲೆಗಿಂತ ಕಡಿಮೆ ಬೆಲೆಗೆ ಖರೀದಿಸುತ್ತಾನೆ. ಒಂದು ವೇಳೆ ಮತ್ತೆ ಬೆಲೆ ಇಳಿದರೆ ವ್ಯಾಪಾರಿಯ ಲಾಭದ ಅಂಶ ಕಡಿಮೆಯಾಗುತ್ತದೆ.

- ಕೃಷಿ ಉತ್ಪನ್ನ ಮಾರಾಟ ಮಾಡುವ ವ್ಯಾಪಾರಿ ಕೃಷಿ ಉತ್ಪನ್ನ ಮಾರುಕಟ್ಟೆಯಿಂದ ಲೈಸನ್ಸ್ ಪಡೆದಿರುವುದು ಕಡ್ಡಾಯ ಮತ್ತು ಅದನ್ನು ನವೀಕರಿಸಲೂ ಬೇಕಾಗುತ್ತದೆ. ಸರ್ಕಾರದ ವಿವಿಧ ಇಲಾಖೆಗಳಿಂದಾಗುವ ತಪಾಸಣೆಗಳನ್ನು, ಆ ಸಂಬಂಧಿ ವೆಚ್ಚಗಳನ್ನು ಭರಿಸಬೇಕಾಗುತ್ತದೆ. ಇದರಿಂದಾಗಿ ಅವನ ನಿರ್ವಹಣಾ ವೆಚ್ಚ ಅಧಿಕವಾಗುತ್ತದೆ.
- ಬೆಲೆಗಳ ಏರಿಳಿತಗಳು ಗೇರು ಬೀಜದ ವ್ಯಾಪಾರಿಗಳು ಎದುರಿಸಬೇಕಾದ ಪ್ರಮುಖ ಸಮಸ್ಯೆ. ಗೇರು ಬೀಜಗಳನ್ನು ಸ್ಥಳೀಯವಾಗಿ ಸಂಗ್ರಹಿಸಿ, ದಾಸ್ತಾನು ಮಾಡಿ ಕೇಂದ್ರೀಯ ಮಾರುಕಟ್ಟೆಗೆ ತಲುಪಿಸುವ ಸಂದರ್ಭದಲ್ಲಿ ಬೆಲೆ ಕುಸಿತ ಉಂಟಾಗುವ ಸಾಧ್ಯತೆಗಳು ಹೆಚ್ಚು. ಹಾಗಾದಾಗ ವ್ಯಾಪಾರಿ ನಷ್ಟವನ್ನು ಅನುಭವಿಸಬೇಕಾಗುತ್ತದೆ. ಹೆಚ್ಚು ದಿನಗಳ ಕಾಲ ಗೇರು ಬೀಜಗಳನ್ನು ಮಳಿಗೆಗಳಲ್ಲಿ ದಾಸ್ತಾನು ಮಾಡಿಟ್ಟು ಕೊಳ್ಳುವುದು ಸಾಧ್ಯವಿಲ್ಲವಾದುದರಿಂದ ಬೆಲೆ ಚೇತರಿಸಿಕೊಳ್ಳುವ ತನಕ ಕಾಯಲು ಸಾಧ್ಯವಾಗುವುದಿಲ್ಲ. ಬೆಲೆ ವ್ಯತ್ಯಯದಿಂದಾಗಿ ವ್ಯಾಪಾರಿಗಳು ನಷ್ಟಕ್ಕೊಳಗಾಗುವ ಭೀತಿ ಸದಾ ಇರುತ್ತದೆ. ಇವೆಲ್ಲದರೊಂದಿಗೆ ಆಮದು ಗೇರು ಬೀಜಗಳು ಗೇರು ಮಾರುಕಟ್ಟೆಯ ಮೇಲೆ ಪ್ರಭಾವ ಬೀರುತ್ತವೆ. ಸುಲಭವಾಗಿ, ಕಡಿಮೆ ಬೆಲೆಗೆ ನಿರಂತರವಾಗಿ ಪೂರೈಸಲ್ಪಡುವ ಆಮದು ಗೇರು ಬೀಜಗಳು ದೇಶೀ ಗೇರು ಮಾರುಕಟ್ಟೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಬಲ್ಲವು. ದೇಶೀ ಬೀಜಗಳನ್ನು ಫ್ಯಾಕ್ಟರಿಗಳಿಗೆ ಸಾಗಿಸಿದ ನಂತರ ದಾಸ್ತಾನು ಮಾಡುವ ಮುನ್ನ ೩ ದಿನಗಳ ತನಕ ಬಿಸಿಲಿನಲ್ಲಿ ಒಣಗಿಸಬೇಕಾಗುತ್ತದೆ. ಹೀಗೆ ಒಣಗಿಸುವುದರಿಂದ ಶೇ.೫ ರಷ್ಟು ಪ್ರಮಾಣದ ನಷ್ಟ ಸಂಸ್ಕರಣಾಗಾರರಿಗೆ ಆಗುತ್ತದೆ. ಇದರೊಂದಿಗೆ ಒಣಗಿಸುವ ಮತ್ತೆ ಮೂಟೆ ಕಟ್ಟುವ ಕೆಲಸಗಳಿಗೆ ಕಾರ್ಮಿಕರನ್ನು ಬಳಸಬೇಕಾಗುತ್ತದೆ. ಇದರಿಂದಾಗಿ ಇನ್ನಷ್ಟು ನಷ್ಟ ಅನುಭವಿಸಬೇಕಾಗುತ್ತದೆ. ಅದಕ್ಕಾಗಿ ಗೇರು ಸಂಸ್ಕರಣಾಗಾರರು ಕಡಿಮೆ ವೆಚ್ಚದ ನೇರ ಬಳಕೆಯ ಆಮದು ಗೇರು ಬೀಜದ ಮೊರೆ ಹೋಗುತ್ತಾರೆ. ಇದರಿಂದಾಗಿ ಸ್ಥಳೀಯ ಗೇರು ಬೀಜದ ಬೆಲೆ ಕುಸಿಯುತ್ತದೆ. ಇದರೊಂದಿಗೆ ಗೇರು ಬೀಜ ಮಾರುಕಟ್ಟೆಗೆ ಬರುವ ಮಾರ್ಚ್, ಏಪ್ರಿಲ್ ತಿಂಗಳಲ್ಲಿ ಮಳೆ ಬರುವ ಸಾಧ್ಯತೆಗಳೂ ಇರುವುದರಿಂದ ಫ್ಯಾಕ್ಟರಿಯ ಮಾಲಿಕರು ಗೇರು ಬೀಜಗಳನ್ನು ಒಣಗಿಸಲು ಅನಾನುಕೂಲವಾಗುತ್ತದೆ ಎಂಬ ಕಾರಣ ನೀಡಿ ಗೇರು ಬೀಜ ಖರೀದಿ ಮಾಡುವುದಿಲ್ಲ. ಫ್ಯಾಕ್ಟರಿಗಳನ್ನೇ ನಂಬಿ ಸ್ಥಳೀಯವಾಗಿ ಒಗ್ಗೂಡಿಸಿದ ಗೇರು ಬೀಜಕ್ಕೆ ಮಾರುಕಟ್ಟೆ ಇಲ್ಲವಾಗುತ್ತದೆ. ಹೀಗೆ ಸ್ಥಳೀಯ ವ್ಯಾಪಾರಿ ಹಲವು ಬಗೆಯ ಅನಿಶ್ಚಿತತೆಯಿಂದ ವ್ಯಾಪಾರ ಮಾಡಬೇಕಾಗುತ್ತದೆ.

ದ.ಕ. ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಸ್ಥಳೀಯ ವ್ಯಾಪಾರಿಗಳು ಸಂಗ್ರಹಿಸಿದ ಗೇರು ಬೀಜಗಳು ಹೆಚ್ಚಾಗಿ ದ. ಕ. ಜಿಲ್ಲೆಯ ಗೇರು ಸಂಸ್ಕರಣಾ ಘಟಕಗಳಿಗೆ ಮಾರಾಟ ಮಾಡುತ್ತಾರೆ. ಅದರೊಂದಿಗೆ ಪಕ್ಕದ ಉಡುಪಿ ಜಿಲ್ಲೆಯಲ್ಲಿರುವ ಸಂಸ್ಕರಣಾ ಘಟಕಗಳಿಗೆ ರವಾನೆಯಾಗುತ್ತದೆ. ಸ್ಥಳೀಯ ವ್ಯಾಪಾರಿಗಳ ಅಭಿಪ್ರಾಯದಂತೆ ಗೇರು ಬೀಜದ ವ್ಯಾಪಾರ ಇತರೆ ಕೃಷಿ ಉತ್ಪನ್ನಗಳ ಮಾರಾಟಕ್ಕಿಂತ ಉತ್ತಮ. ಕಾರಣ ಇಲ್ಲಿ ತೊಡಗಿಸಿದ ಬಂಡವಾಳ ಶೀಘ್ರವಾಗಿ ಲಾಭಾಂಶದೊಂದಿಗೆ ಮರಳಿ ಬರುತ್ತದೆ. ಸರ್ಕಾರಕ್ಕೆ ಕಟ್ಟುವ ಮಾರಾಟ ತೆರಿಗೆ, ಕೃಷಿ ಉತ್ಪನ್ನ, ಮಾರಾಟ ಸಂಘದ ಶುಲ್ಕ ಸಾಗಾಣಿಕೆಯ ವೆಚ್ಚ ಎಲ್ಲವನ್ನೂ ಗೇರು ಸಂಸ್ಕರಣಾ ಘಟಕಗಳೇ ಭರಿಸುವುದರಿಂದ ಗೇರು ವ್ಯಾಪಾರಿಗೆ ಆ ಬಾಬ್ತು ಹೊರೆ ಇಲ್ಲ. ಗೇರುಬೆಲೆಯ ಏರಿಳಿತಗಳನ್ನು ಹೊರತುಪಡಿಸಿದರೆ ಗೇರು ವ್ಯಾಪಾರ ಹೆಚ್ಚು ಲಾಭಕರ ಎಂದು ಧಾರಾಳವಾಗಿ ಹೇಳಬಹುದು.

೬.೬ ಗೇರುಬೀಜ ಖರೀದಿಸುವ ಸಂಸ್ಕರಣಾ ಘಟಕಗಳ ಸಮಸ್ಯೆಗಳು

ದ. ಕ. ಜಿಲ್ಲೆಯು ಗೇರು ಬೀಜದ ಉತ್ಪಾದನೆಯಲ್ಲಿ ಮಾತ್ರವಲ್ಲ ಸಂಸ್ಕರಣೆಯಲ್ಲೂ ಮುಂಚೂಣಿಯಲ್ಲಿದೆ. ಕರ್ನಾಟಕ ರಾಜ್ಯದ ಒಟ್ಟು ೨೬೬ ಸಂಸ್ಕರಣಾ ಘಟಕಗಳಲ್ಲಿ ೧೪೦ ಘಟಕಗಳು ಕರ್ನಾಟಕದ ಕರಾವಳಿ ತೀರದಲ್ಲಿವೆ. ದ.ಕ. ಜಿಲ್ಲೆಯೊಂದರಲ್ಲೇ ೫೦ ಘಟಕಗಳು ಕಾರ್ಯಚಲಿಸುತ್ತಿವೆ. ಗೇರು ಘಟಕಗಳ ಒಟ್ಟು ವೆಚ್ಚದಲ್ಲಿ ಶೇ. ೫೦ರಷ್ಟನ್ನು ಅವುಗಳು ಕಚ್ಚಾಗೇರು ಬೀಜವನ್ನು ಕೊಂಡುಕೊಳ್ಳಲು ಬಳಸುತ್ತವೆ. ದ. ಕ. ಜಿಲ್ಲೆಯಲ್ಲಿ ಅಧ್ಯಯನ ಮಾಡಲಾದ ಒಟ್ಟು ೧೫ ಘಟಕಗಳು ಗೇರು ಬೀಜವನ್ನು ಕೊಂಡುಕೊಳ್ಳುವ ಬಗ್ಗೆ ಹೀಗೆ ಪ್ರತಿಕ್ರಯಿಸಿವೆ. (ಚಿತ್ರ ೬.೫)




ಚಿತ್ರ ೬.೫ ಘಟಕಗಳ ಗೇರು ಬೀಜದ ವ್ಯಾಪಾರ

ಶೇ. ೨೨.೬೭ ರಷ್ಟು ಘಟಕಗಳು ಸ್ಥಳೀಯವಾಗಿ ಕಾರ್ಯಾಚರಿಸುವ ವ್ಯಾಪಾರಿಗಳು, ಕಮಿಷನ್ ಏಜೆಂಟ್, ಸಗಟು ವ್ಯಾಪಾರಿಗಳಿಂದ ಗೇರು ಬೀಜವನ್ನು ಕೊಂಡು ಕೊಂಡರೆ ಶೇ. ೩೫.೩೬ ರಷ್ಟು ಘಟಕಗಳು ನೆರೆಯ ರಾಜ್ಯಗಳ ಗೇರು ಬೀಜವನ್ನು ಅವಲಂಬಿಸಿವೆ. ಸುಮಾರು ೪೧.೯೬ ಶೇ. ಘಟಕಗಳು ಆಮದು ಗೇರು ಬೀಜವನ್ನು ನೆಚ್ಚಿಕೊಂಡಿವೆ. ಆಮದು ಗೇರು ಬೀಜಗಳ ಲಭ್ಯತೆ ನಿರಂತರವಾಗಿರುವುದು ಮತ್ತು ಆಮದು ಗೇರು ಬೀಜಗಳನ್ನು ದಾಸ್ತಾನು ಮಾಡಿಡುವ ಮೊದಲು ೧-೨ ದಿನಗಳ ತನಕ ಬಿಸಿಲಿನಲ್ಲಿ ಒಣಗಿಸುವ ಅವಶ್ಯಕತೆ ಕೂಡಾ ಇಲ್ಲದಿರುವುದರಿಂದ ಘಟಕಗಳು ಆಮದು ಗೇರು ಬೀಜಕ್ಕೆ ಹೆಚ್ಚಿನ ಆದ್ಯತೆ ನೀಡಲು ಕಾರಣವಾಗಿದೆ. ದೇಶೀ ಗೇರು ಬೀಜಗಳ ಗುಣಮಟ್ಟ ಉತ್ತಮವಾಗಿದ್ದರೂ ನಿರಂತರ ಲಭ್ಯತೆ ಇಲ್ಲದಿರುವುದು ಹಾಗೂ ಬೆಲೆಗಳ ಏರಿಳಿತದಿಂದಾಗಿ ದೇಶಿ ಗೇರು ಬೀಜಗಳ ಬೇಡಿಕೆ ಕುಸಿಯುವಂತೆ ಮಾಡಿದೆ.

ದೇಶೀ ಬೀಜಗಳ ಅವಲಂಬನೆ ಹೆಚ್ಚಾಗಿಲ್ಲದ ಕಾರಣ ಗೇರು ಸಂಸ್ಕರಣಾ ಘಟಕಗಳು ಗೇರು ಬೀಜದ ಉತ್ಪಾದನೆಯ ಹೆಚ್ಚಳ, ಗುಣಮಟ್ಟದ ಉನ್ನತೀಕರಣದ ಬಗ್ಗೆ ಯಾವುದೇ ಆಸಕ್ತಿ ವಹಿಸುತ್ತಿಲ್ಲ. ಇದರಿಂದಾಗಿ ಗೇರು ಕೃಷಿಯ ಅಭಿವೃದ್ಧಿಗೆ ಗೇರು ಸಂಸ್ಕರಣಾ ಘಟಕಗಳ ಪ್ರೋತ್ಸಾಹ ಅಕ್ಷರಶಃ ಇಲ್ಲವಾಗಿದೆ ಮತ್ತು ಇವೆರಡರ ನಡುವಿನ ಅಂತರ ಹೆಚ್ಚಾಗುತ್ತಿದೆ.

ಗೇರು ಬೀಜದ ಖರೀದಿಯನ್ನು ಸಂಸ್ಕರಣಾ ಘಟಕಗಳು ತಮ್ಮ ಅನುಕೂಲತೆಯ ಆಧಾರದಲ್ಲಿ ಮಾಡುತ್ತವೆ. ಗೇರು ಬೀಜದ ಖರೀದಿಯ ಸಂದರ್ಭದ ಕುರಿತಂತೆ ದ. ಕ. ಜಿಲ್ಲೆಯ ಆಯ್ದ ೧೫ ಘಟಕಗಳ ಉದ್ಯಮಿಗಳ ಅಭಿಪ್ರಾಯ ಇಂತಿದೆ. (ಚಿತ್ರ ೬.೬)






ಚಿತ್ರ ೬.೬ ಗೇರು ಬೀಜದ ವ್ಯಾಪಾರ ಸಂದರ್ಭ

ಗೇರು ಸಂಸ್ಕರಣಾ ಘಟಕಗಳ ಬೇಡಿಕೆಗೆ ತಕ್ಕಂತೆ ಶೇ. ೪೦ ವಕ್ತೃಗಳು ಗೇರು ಬೀಜ ತೆಗೆದುಕೊಂಡರೆ, ಕೊಯ್ಲಿನ ಸಂದರ್ಭದಲ್ಲಿ ಶೇ. ೧೩ ರಷ್ಟು ಘಟಕಗಳು ಗೇರು ಬೀಜ ಕೊಂಡುಕೊಳ್ಳುತ್ತವೆ. ಬೆಲೆ ಕಡಿಮೆ ಇರುವ ದಿನಗಳಲ್ಲಿ ಶೇ. ೨೭ ರಷ್ಟು ಘಟಕಗಳು ವ್ಯಾಪಾರ ಮಾಡಿದರೆ ಹಣದ ಲಭ್ಯತೆಯ ಮೇರೆಗೆ ಶೇ. ೨೦ ರಷ್ಟು ಘಟಕಗಳು ಗೇರು ಬೀಜ ಕೊಂಡುಕೊಳ್ಳುತ್ತವೆ. ನಿರಂತರ ಗೇರು ಬೀಜದ ಪೂರೈಕೆ ಉದ್ಯಮ ನಡೆಸಲು ಅನಿವಾರ್ಯವಾದುದರಿಂದ ತಮ್ಮ ಅಗತ್ಯಗಳಿಗೆ ತಕ್ಕಷ್ಟು ಬೇರೆ ಬೇರೆ ಸಂದರ್ಭಗಳಲ್ಲಿ ಕೊಂಡು ಕೊಳ್ಳುವುದು ಘಟಕಗಳ ಪಾಲಿಗೆ ಅನಿವಾರ್ಯವಾಗಿದೆ.

ಗೇರು ಉದ್ಯಮದ ಒಟ್ಟು ಬಂಡವಾಳದಲ್ಲಿ ಘಟಕಗಳು ಶೇ. ೫೦ ರಷ್ಟು ಕಚ್ಚಾಗೇರನ್ನು ಕೊಂಡುಕೊಳ್ಳಲು ಹಾಗೂ ದಾಸ್ತಾನು ಮಾಡಲು ಬಳಸಬೇಕಾಗುತ್ತದೆ. ಹಾಗಾಗಿ ಗೇರು ಬೀಜಗಳ ಲಭ್ಯತೆ ಇರುವಾಗ ಯವುದಾದರೊಂದು ಮೂಲದಿಂದ ಹಣಕಾಸನ್ನು ಹೊಂದಿಸಿಕೊಂಡು ಬೀಜಗಳನ್ನು ಕೊಂಡುಕೊಳ್ಳಲಾಗುತ್ತದೆ. ಅಧ್ಯಯನದ ಅವಧಿಯಲ್ಲಿ ಹಣಕಾಸಿನ ಹೊಂದಾಣಿಕೆಗೆ ಸಂಬಂದಿಸಿದಂತೆ ವಕ್ತೃಗಳ ಅಭಿಪ್ರಾಯವನ್ನು ಹೀಗೆ ಅಭಿವ್ಯಕ್ತಿಸಬಹುದು. (ಚಿತ್ರ ೬.೭)



ಚಿತ್ರ ೬.೭ ಗೇರು ಘಟಕಗಳ ಗೇರು ವ್ಯಾಪಾರದ ಹಣಕಾಸಿನ ಮೂಲ





ರಾಷ್ಟ್ರೀಕೃತ ಬ್ಯಾಂಕುಗಳು ಗೇರು ಘಟಕಗಳಿಗೆ ಪ್ರಮುಖ ಹಣಕಾಸಿನ ಮೂಲಗಳಾಗಿದ್ದು ಶೇ. ೫೩ ರಷ್ಟು ಮಂದಿ ಈ ಮೂಲಗಳಿಂದ ಸಾಲ ಪಡೆದಿವೆ. ಶೇ. ೨೦ ರಷ್ಟು ಘಟಕಗಳು ಖಾಸಗಿ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದುಕೊಂಡಿವೆ. ಸ್ನೇಹಿತರು ಸಂಬಂಧಿಗಳಿಂದ ಶೇ. ೧೩ ಮಂದಿ ಘಟಕಗಳಿಗೆ ಸಾಲ ದೊರೆತಿದೆ. ಶೇ. ೧೩ ರಷ್ಟು ಘಟಕಗಳು ಸ್ವಂತ ಹಣವನ್ನು ಬಳಸಿ ಗೇರು ಬೀಜವನ್ನು ಕೊಂಡುಕೊಳ್ಳುತ್ತವೆ. ಹೀಗೆ ಯಾವುದಾದರೊಂದು ಮೂಲಗಳಿಂದ ಹಣ ಹೊಂದಿಸಿಕೊಂಡು ಕಚ್ಚಾಗೇರನ್ನು ದಾಸ್ತಾನು ಮಾಡಿಟ್ಟುಕೊಳ್ಳುವುದು ಉದ್ಯಮಿಗಳಿಗೆ ಅನಿವಾರ್ಯವಾಗಿದೆ.

ಗೇರು ಬೀಜವನ್ನು ಮಾರಾಟ ಮಾಡಿದಾಗ ಪ್ರತಿಯಾಗಿ ಹಣ ಪಾವತಿಸುವ ವಿಧಾನವು ವಿಭಿನ್ನವಾಗಿದೆ. ಶೇ. ೨೦ ರಷ್ಟು ಘಟಕಗಳು ಸ್ಥಳದಲ್ಲೇ ಪಾವತಿ ಮಾಡುತ್ತಿವೆ. ಶೇ. ೧೩ ರಷ್ಟು ಘಟಕಗಳು ಒಂದು ವಾರದ ಒಳಗೆ ಪಾವತಿ ಮಾಡುತ್ತವೆ. ಶೇ. ೪೭ ರಷ್ಟು ಘಟಕಗಳು ಒಂದು ತಿಂಗಳ ಕಾಲಾವಧಿ ತೆಗೆದುಕೊಳ್ಳುತ್ತವೆ. ಶೇ. ೨೦ ರಷ್ಟು ಘಟಕಗಳು ಒಂದುವರೆ ತಿಂಗಳ ಕಾಲಾವಕಾಶ ತೆಗೆದುಕೊಳ್ಳುತ್ತವೆ. ಸೂಕ್ತ ಸಮಯದಲ್ಲಿ ಹಣ ಹೊಂದಿಸಿ ಸೂಕ್ತ ಬೆಲೆಗೆ ಕಚ್ಚಾಗೇರನ್ನು ಖರೀದಿಸುವುದು ಘಟಕಗಳ ಪಾಲಿಗೆ ದೊಡ್ಡ ಸವಾಲೇ ಆಗಿದೆ.

೬.೭. ಗೋಡಂಬಿ ನಿರ್ಯಾತ ಸಂಬಂಧಿ ಸಮಸ್ಯೆಗಳು

ಮಾರಾಟಗಾರ ಹಾಗೂ ಗ್ರಾಹಕ ಮಾರುಕಟ್ಟೆಯ ಎರಡು ಅಂಗಗಳು. ಆಂತರಿಕ ವ್ಯಾಪಾರದಲ್ಲಿ ಒಬ್ಬ ಮಾರಾಟಗಾರ ಹಾಗೂ ಒಬ್ಬ ಗ್ರಾಹಕ ಫಲಾನುಭವಿಗಳೆನಿಸಿಕೊಂಡರೆ ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ ಮೂರು ವಿಧದ ಫಲಾನುಭವಿಗಳಿದ್ದಾರೆ. ಮೊದಲನೆಯದಾಗಿ ನಿರ್ಯಾತಗಾರ, ಎರಡನೆಯದಾಗಿ ಆಯಾತಗಾರ ಹಾಗೂ ಮೂರನೆಯದಾಗಿ ನಿರ್ಯಾತ ರಾಷ್ಟ್ರ. ಕೇವಲ ಮಾರಾಟಗಾರ ಹಾಗೂ ಗ್ರಾಹಕ ಮಾತ್ರ ಇಲ್ಲಿ ಫಲಾನುಭವಿಗಳಲ್ಲ. ಜೊತೆಗೆ ನಿರ್ಯಾತ ಮಾಡುವ ರಾಷ್ಟ್ರವು ವಿದೇಶಿ ವಿನಿಮಯ ಗಳಿಸುವುದರ ಮೂಲಕ ಪ್ರಯೋಜನ ಪಡೆದುಕೊಳ್ಳುತ್ತದೆ. ವಿದೇಶಿ ವಿನಿಮಯ ಒಂದು ರಾಷ್ಟ್ರಕ್ಕೆ ಅತ್ಯಂತ ಅನಿವಾರ್ಯ.

ಭಾರತದ ರಫ್ತು ಗಳಿಕೆಯಲ್ಲಿ ಕೃಷಿ ಉತ್ಪನ್ನದ ಪಾಲು ಶೇ. ೭.೪೬ ರಷ್ಟಿದೆ (೨೦೧೨-೧೩). ಗೋಡಂಬಿಯ ಪಾಲು ಶೇ. ೩.೩೪ ರಷ್ಟು ಆಗಿದ್ದು, ೧೧ನೇ ಸ್ಥಾನವನ್ನು ಗೋಡಂಬಿ ಗಳಿಸಿಕೊಂಡಿದೆ. ಒಟ್ಟು ವಿದೇಶಿ ವಿನಿಮಯ ಗಳಿಕೆಯಲ್ಲಿ ಗೋಡಂಬಿಯ ಪಾಲು ಶೇ. ೦.೨೫ ರಷ್ಟು ಎಂದು ಅಂದಾಜಿಸಲಾಗಿದೆ. ಸಾಮಾನ್ಯವಾಗಿ ಎಲ್ಲಾ ಸಸ್ಯ ಜನ್ಯ ಬೀಜಗಳಲ್ಲಿ ಗೋಡಂಬಿ ಅತಿ ಹೆಚ್ಚಿನ ಬೆಲೆ ಉಳ್ಳದ್ದು. ಗೋಡಂಬಿ ರಫ್ತು ವ್ಯಾಪಾರದಲ್ಲಿ ಭಾರತ ಪ್ರಪಂಚದಲ್ಲೇ ಮೊಟ್ಟ ಮೊದಲ ರಾಷ್ಟ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಭಾರತದ ಗೋಡಂಬಿ ಗುಣಮಟ್ಟದಲ್ಲಿ, ಗಾತ್ರದಲ್ಲಿ ಹಾಗೂ, ಸ್ವಾದದಲ್ಲಿ ಅತಿ ಶ್ರೇಷ್ಠ ಮಟ್ಟದ್ದು ಎಂದು ಗುರುತಿಸಲ್ಪಡುತ್ತದೆ. ಸುಮಾರು ಅರವತ್ತಕ್ಕೂ ಹೆಚ್ಚಿನ ರಾಷ್ಟ್ರಗಳಿಗೆ ಭಾರತ ಗೋಡಂಬಿಯನ್ನು ರಫ್ತು ಮಾಡುತ್ತಿದ್ದು ಅಮೇರಿಕಾ, ನೆದರ್ಲ್ಯಾಂಡ್, ಯು.ಎ.ಇ, ಇಂಗ್ಲೆಂಡ್, ಸೌದಿ ಅರೇಬಿಯಾ, ಜರ್ಮನಿ, ಜಪಾನ್, ಆಸ್ಟ್ರೇಲಿಯಾ ಮತ್ತಿತರ ರಾಷ್ಟ್ರಗಳು ಪ್ರಮುಖ ಗ್ರಾಹಕ ರಾಷ್ಟ್ರಗಳೆನಿಸಿಕೊಂಡಿವೆ. ೨೦೧೦-೧೧ರ ಅವಧಿಗೆ ಹೋಲಿಸಿದಾಗ ೨೦೧೧-೧೨ ರಲ್ಲಿ ಗೋಡಂಬಿಯ ರಫ್ತು ಪ್ರಮಾಣ ಶೇ. ೨೪ ರಷ್ಟು ಹಾಗೂ ರಫ್ತು ಮೌಲ್ಯ ಶೇ. ೫೫ ರಷ್ಟು ಹೆಚ್ಚಳ ಕಂಡು ಬಂದಿದೆ. ಆದರೆ ೨೦೧೨-೧೩ ರ ಅವಧಿಯು ಗೋಡಂಬಿ ಉದ್ಯಮಕ್ಕೆ ಸಂಕಷ್ಟದ ವರ್ಷವಾಗಿದ್ದು ರೂಪಾಯಿ ಅಪಮೌಲ್ಯದಿಂದಾಗಿ ನಿರ್ಯಾತದಾರರು ತೀವ್ರ ಸಂಕಷ್ಟಕ್ಕೆ ಒಳಗಾಗಬೇಕಾಯಿತು. ಆದಾಗ್ಯೂ ಕಳೆದ ೧೫ ವರ್ಷಗಳಿಂದ ಗೋಡಂಬಿಯ ದೇಶೀ ಬಳಕೆ ಹೆಚ್ಚಾಗುತ್ತಿದ್ದು ಸರಿ ಸುಮಾರು ಶೇ. ೩೦ ರಷ್ಟು ಉತ್ಪಾದನೆ ದೇಶೀ ಬಳಕೆಗೆ ಉಪಯೋಗಿಸಲ್ಪಡುತ್ತಿದೆ. ಭಾರತೀಯರ ಹೆಚ್ಚುತ್ತಿರುವ ತಲಾ

ಆದಾಯವು ಇದಕ್ಕೆ ಪ್ರಮುಖ ಕಾರಣವಾಗಿದ್ದು ತಲಾ ಆದಾಯ ಹೆಚ್ಚಾಗುತ್ತಿದ್ದಂತೆ ಜೀವನ ಮಟ್ಟದ ಸುಧಾರಣೆ ಕಂಡು ಬಂದಿದ್ದು ಅನುಭೋಗದ ಮಟ್ಟ ಹೆಚ್ಚಳವಾಗುತ್ತಿದೆ. ಅದರ ಪರಿಣಾಮ ಗೋಡಂಬಿಯ ಬಳಕೆಯ ಮೇಲೂ ಆಗುತ್ತಿರುವುದು ಕಂಡುಬಂದಿದೆ. ಪ್ರಸ್ತುತ ವಾರ್ಷಿಕ ಶೇ.೧೧ ರ ದರದಲ್ಲಿ ದೇಶೀ ಬಳಕೆ ಏರುತ್ತಿದ್ದು ಇದು ಹೀಗೆ ಮುಂದುವರಿದರೆ ಮುಂದಿನ ೫-೧೦ ವರ್ಷಗಳಲ್ಲಿ ಭಾರತವು ಗೋಡಂಬಿಯನ್ನು ಆಮದು ಮಾಡಿಕೊಳ್ಳಬಹುದಾದ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲ.

ಗೋಡಂಬಿ ನಿರ್ಯಾತದಲ್ಲಿ ಗೋಡಂಬಿ ರಫ್ತು ಅಭಿವೃದ್ಧಿ ಮಂಡಳಿಯ ಪಾತ್ರ ಬಹಳ ಪ್ರಮುಖವಾದುದು. ಗೋಡಂಬಿ ರಫ್ತು ಅಭಿವೃದ್ಧಿ ಮಂಡಳಿ (Cashew Export Promotion Council) ೧೯೫೫ ರಲ್ಲಿ ಪ್ರಾರಂಭವಾಯಿತು. ಗೋಡಂಬಿ ಸಂಸ್ಕರಣಾದಾರರು ಹಾಗೂ ನಿರ್ಯಾತದಾರರನ್ನು ಸದಸ್ಯರನ್ನಾಗಿ ಹೊಂದಿರುವ ಈ ಮಂಡಳಿಯು ಗೋಡಂಬಿ ಹಾಗೂ ಗೇರು ಬೀಜದ ದ್ರವವನ್ನು ನಿರ್ಯಾತ ಮಾಡುವಲ್ಲಿ ವಿಶೇಷವಾಗಿ ಶ್ರಮಿಸುತ್ತಿದೆ. ಭಾರತದ ಉತ್ಪನ್ನಗಳಿಗೆ ದೇಶ ವಿದೇಶಗಳಲ್ಲಿ ಪ್ರದರ್ಶನಗಳನ್ನು ಏರ್ಪಡಿಸುವ ಮೂಲಕ ವಿಶೇಷ ಪ್ರಚಾರ ನೀಡುತ್ತಿದೆ. ಅಂತರ್ರಾಷ್ಟ್ರೀಯ ವ್ಯಾಪಾರದಲ್ಲಿ ಗುಣಮಟ್ಟಕ್ಕೆ ವಿಶೇಷ ಪ್ರಾಮುಖ್ಯತೆ ಇರುವುದರಿಂದ ಗೋಡಂಬಿಯ ಗುಣ ಮಟ್ಟದ ನಿಯಂತ್ರಣ ಹಾಗೂ ನಿರ್ವಹಣೆ ಬಗ್ಗೆ ವಿಶೇಷ ಮುತುವರ್ಜಿ ವಹಿಸುತ್ತಿದೆ. ೧೯೬೩ ರಲ್ಲಿ ರಫ್ತು ನಿಯಂತ್ರಣ ಹಾಗೂ ತಪಾಸಣಾ ಕಾಯಿದೆಯನ್ನು ಜಾರಿ ಮಾಡಿದ್ದು ಆ ಪ್ರಕಾರವಾಗಿ ಗೋಡಂಬಿಯಲ್ಲಿ ಒಟ್ಟು ೩೩ ವಿವಿಧ ಶ್ರೇಣಿಯನ್ನು ಗುರುತಿಸಿದೆ. ಆದರೆ ವ್ಯವಹಾರಿಕವಾಗಿ ಪ್ರಸ್ತುತ ೨೬ ಶ್ರೇಣಿ ಗೋಡಂಬಿಗಳು ರಫ್ತು ವ್ಯಾಪಾರಕ್ಕೆ ಲಭ್ಯವಾಗಿವೆ. ಅವುಗಳಲ್ಲಿ ಬಿಳಿ ಅಥವಾ ದಂತದ ಬಣ್ಣದ ಇಡಿ ಗೋಡಂಬಿಗಳು ಅತ್ಯಂತ ಉನ್ನತ ಶ್ರೇಣಿಗೆ ಸೇರುತ್ತದೆ. ಉಳಿದಂತೆ ಗೋಡಂಬಿಯು ತುಂಡುಗಳ ಮತ್ತು ಚೂರುಗಳ ರೂಪದಲ್ಲಿ ಲಭ್ಯವಿವೆ. ಆದರೆ ಇವುಗಳ ಸ್ವಾದದಲ್ಲಿಯಾವುದೇ ವ್ಯತ್ಯಾಸವಿಲ್ಲ ಹಾಗೂ ಎಲ್ಲಾ ಶ್ರೇಣಿಯ ಗೋಡಂಬಿಗಳೂ ಬಳಕೆಗೆ ಲಭ್ಯವಿದೆ. ಆದಾಗ್ಯೂ ರಫ್ತು ವ್ಯಾಪಾರಕ್ಕೆ ಉತ್ತಮ ಗುಣಮಟ್ಟದ ಇಡಿ ಗೋಡಂಬಿಗಳನ್ನು ಮಾತ್ರ ಬಳಸಲಾಗುತ್ತದೆ. ಹಡಗಿಗೆ ಹೇರುವ ಮುನ್ನ ಗೋಡಂಬಿಯ ಗುಣಮಟ್ಟ ನಿಯಂತ್ರಣ ಹಾಗೂ ತಪಾಸಣಾ ಪದ್ಧತಿಗೆ ಒಳಪಡಿಸಲಾಗುತ್ತದೆ. ಇದರೊಂದಿಗೆ ಗೋಡಂಬಿಯು ನಿರ್ದಿಷ್ಟವಾದ ಪ್ರಮಾಣದಲ್ಲಿ ಹಾಗೂ ನಿರ್ದಿಷ್ಟವಾದ ರೀತಿಯಲ್ಲಿ ಪ್ಯಾಕಿಂಗ್ ಆಗಿರಬೇಕಾಗುತ್ತದೆ. ಪ್ರತಿ ಡಬ್ಬದಲ್ಲಿ ೧೧.೩೪ ಕೆ.ಜಿ. ತೂಕದ ಅಥವಾ ೨೫ ಪೌಂಡು ತೂಕದ ಗೋಡಂಬಿ ಇದ್ದು ತುಂಬಿಸುವ ಮೊದಲು ಡಬ್ಬಿಯಲ್ಲಿನ ಗಾಳಿಯನ್ನು ಹೊರ ತೆಗೆದು ಕಾರ್ಬನ್ ಡೈ ಆಕ್ಸೈಡನ್ನು ಅಥವಾ ಇಂಗಾಲಾಮ್ಲವನ್ನು ತುಂಬಲಾಗುತ್ತದೆ. ಇದರಿಂದ ಗೋಡಂಬಿಯ ಗುಣಮಟ್ಟ ಕೆಡುವುದಿಲ್ಲ. ಎರಡು ಇಂತಹ ಟಿನ್‌ಗಳನ್ನು ಒಂದು ಮರದ ಪೆಟ್ಟಿಗೆಯಲ್ಲಿ ಇಟ್ಟು ಪ್ಯಾಕ್ ಮಾಡಲಾಗುತ್ತದೆ. ಪ್ರತಿ ಹಡಗಿನಲ್ಲಿ ಇಂತಹ ೬೫೦ ರಿಂದ ೭೦೦ ಪೆಟ್ಟಿಗೆಗಳನ್ನಿಟ್ಟು ಸಾಗಿಸಲಾಗುತ್ತದೆ.

ಗೋಡಂಬಿ ರಫ್ತು ವ್ಯಾಪಾರದಲ್ಲಿ ಸಾಮಾನ್ಯವಾಗಿ ಸರಕು ಹೇರುವ ಒಪ್ಪಂದ (Free on Board) ಮತ್ತು ವೆಚ್ಚ ಮತ್ತು ಹಡಗಿನ ಬಾಡಿಗೆ (Cost and Freight) ಒಪ್ಪಂದದ ಪ್ರಕಾರ ನಿರ್ಯಾತ ಮಾಡಲಾಗುವುದು. ಸರಕು ಹೇರುವ ಒಪ್ಪಂದದಲ್ಲಿ ಕೊಳ್ಳುವಾತ ಮಾರಾಟಗಾರನಿಗೆ ಬೇಕಾದ ಸರಕುಗಳ ಪ್ರಮಾಣ, ಹಡಗಿನ ಹೆಸರು, ಯಾನದ ದಿನಾಂಕ ಮತ್ತು ಸರಕುಗಳನ್ನು ಹೇರಲು ಇರುವ ಅಂತಿಮ ಗಡುವುಗಳನ್ನು ಮುಂಚಿತವಾಗಿ ತಿಳಿಸಬೇಕು. ಸರಕು ಹೇರಿಯಾದ ನಂತರದ ಎಲ್ಲ ವೆಚ್ಚ ಮತ್ತು ಹಾನಿಗಳನ್ನು ಕೊಳ್ಳುವಾತನೇ ಹೊರುತ್ತಾನೆ. ಹಡಗಿನಲ್ಲಿ ಸ್ಥಳವಕಾಶ ಮಾಡಿಕೊಡುವುದೂ ಗಿರಾಕಿಯ ಜವಾಬ್ದಾರಿ. ಮಾರಾಟಗಾರರಿಗೆ ಬೇರಾವ ಜವಾಬ್ದಾರಿಗಳೂ ಇರುವುದಿಲ್ಲ. ವೆಚ್ಚ ಮತ್ತು ಹಡಗಿನ ಬಾಡಿಗೆ (Cost & Freight) ಒಪ್ಪಂದದ ಪ್ರಕಾರ ಮಾರಾಟಗಾರ ಸೂಚಿಸುವ ಬೆಲೆಯಲ್ಲಿ ವೆಚ್ಚ ಮತ್ತು ಹಡಗಿನ ಬಾಡಿಗೆಯೂ ಸೇರಿರುತ್ತದೆ.

ಮಾರಾಟಗಾರನೇ ಸರಕು ರವಾನೆಯ ಹಡಗಿನ ಬಾಡಿಗೆಯನ್ನು ಭರಿಸುತ್ತಾನೆ. ಹಡಗಿನ ವಿಮೆಯ ಜವಾಬ್ದಾರಿ ಮಾತ್ರ ಸರಕು ಕೊಳ್ಳುವವರದ್ದಾಗಿರುತ್ತದೆ. ಬಂದರಿಗೆ ಸರಕು ಸಾಗಾಟ, ಹಡಗಿಗೆ ಸರಕು ಹೇರಿಕೆ ಮತ್ತು ಸುರಕ್ಷಿತ ಗುರಿ ತಲುಪುವಿಕೆಯಲ್ಲಿನ ಜವಾಬ್ದಾರಿ ಮಾರಾಟಗಾರನದ್ದೇ ಆಗಿರುತ್ತದೆ. ಎಲ್ಲಾ ರೀತಿಯ ರಶೀದಿಗಳನ್ನು ಆತ ಮಾಡಿಸಿ ಖರ್ಚನ್ನು ವಹಿಸಿಕೊಳ್ಳಬೇಕಾಗುತ್ತದೆ. ಕೊಳ್ಳುವಾತ ಸರಕುಗಳ ವಿಮೆಯ ಜವಾಬ್ದಾರಿ ಮಾತ್ರ ವಹಿಸಿಕೊಳ್ಳುತ್ತಾನೆ. ಬಂದರಿನಲ್ಲಿ ಸರಕು ಇಳಿಸಿ, ಸುಂಕ ಮತ್ತು ಬಂದರಿನ ಖರ್ಚುಗಳನ್ನು ಆತ ನೋಡಿಕೊಳ್ಳುತ್ತಾನೆ. ಪಾವತಿಯ ಕರಾರುಗಳನ್ನು ಮಾತ್ರ ಆತ ತಪ್ಪದೆ ಪಾಲಿಸಬೇಕಾಗುತ್ತದೆ.

ದ. ಕ. ಜಿಲ್ಲೆಯ ಮಂಗಳೂರು ಗೋಡಂಬಿಯ ರಫ್ತು ವ್ಯಾಪಾರದಲ್ಲಿ ಸಾಂಪ್ರದಾಯಿಕ ನಗರವೆಂದೇ ಪ್ರಸಿದ್ಧಿ ಪಡೆದಿದೆ. ಉಡುಪಿ ಜಿಲ್ಲೆ ದ. ಕ. ಜಿಲ್ಲೆಯಿಂದ ವಿಭಜಿಸಿದ ನಂತರ ದ. ಕ. ಜಿಲ್ಲೆಯ ಗೋಡಂಬಿ ವ್ಯಾಪಾರ ಕೊಂಚ ಮಟ್ಟಿಗೆ ಹಿನ್ನಡೆ ಅನುಭವಿಸುವಂತಾಗಿದೆ. ಅದಾಗಿಯೂ ದ. ಕ. ಜಿಲ್ಲೆಯ ಗೋಡಂಬಿ ಕಾರ್ಖಾನೆಗಳ ಅಧ್ಯಯನ ನಡೆಸಿದಾಗ ಪ್ರತಿಶತ ೧೦ ರಫ್ತು ಘಟಕಗಳು ಗೋಡಂಬಿ ರಫ್ತು ವ್ಯಾಪಾರದಲ್ಲಿ ತೊಡಗಿ ಕೊಂಡಿರುವುದು ಕಂಡು ಬಂತು. ಗೋಡಂಬಿ ನಿರ್ಯಾತ ಮಾಡುವ ಘಟಕಗಳು ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ನಿರ್ದಿಷ್ಟ ಕೋಡ್ ನಂಬರನ್ನು ಪಡೆಯಬೇಕು. ತಮ್ಮ ಸರಕುಗಳನ್ನು ರಫ್ತು ಮಾಡುವಾಗ ಆಗಲೀ ಆಮದು ಮಾಡಿಕೊಳ್ಳುವಾಗ ಆಗಲೀ ತಪ್ಪದೇ ತಮ್ಮ ವಸ್ತುಗಳ ಮೇಲೆ ಆ ಕೋಡ್ ನಂಬರ್ ಹಾಕಲೇಬೇಕು. ಸಾಮಾನ್ಯವಾಗಿ ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ ಅನೇಕ ದಾಖಲೆ ಪತ್ರಗಳ ಬಳಕೆಯಾಗುತ್ತದೆ. ಅದರಲ್ಲಿ ವಾಸ್ತವಿಕ ದಾಖಲೆಗಳು ಮತ್ತು ಸಹಾಯಕ ದಾಖಲೆಗಳು ಎಂಬ ಎರಡು ವರ್ಗಗಳಿವೆ. ವಾಸ್ತವಿಕ ದಾಖಲೆಗಳಲ್ಲಿ ಪ್ರಮುಖವಾಗಿ ಸಾಮಾನು ಸಂಜಾಮುಗಳ (ಹೊರೆಯ) ಹುಂಡಿ, ಹಡಗಿನ ವಿಮಾ ಪತ್ರಗಳು ಮತ್ತು ವಿನಿಮಯದ ಹುಂಡಿಗಳು. ಸಹಾಯಕ ದಾಖಲೆಗಳಲ್ಲಿ ಮುಖ್ಯವಾಗಿ ವಾಣಿಜ್ಯಧಾರಣೆ ಪಟ್ಟಿ, ರಾಯಬಾರಿಯ ತಖ್ತೆ, ಸುಂಕದ ದರದ ಪಟ್ಟಿ, ಮೂಲ ಪತ್ರ, ಪರಿಶೀಲನೆಯ ಪತ್ರ, ಪ್ಯಾಕಿಂಗ್ ತಕ್ತೆಗಳು ಮತ್ತು ನಂಬಿಕೆ ರಶೀತಗಳು ಮುಖ್ಯವಾದುವು. ಗೋಡಂಬಿ ನಿರ್ಯಾತದರರು ಈ ಎಲ್ಲಾ ನಿಯಮಗಳಿಗನುಸಾರವಾಗಿ ವ್ಯಾಪಾರ ಮಾಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ದ.ಕ. ಜಿಲ್ಲೆಯ ನಿರ್ಯಾತದಾರರು ಎದುರಿಸುವ ಸಮಸ್ಯೆಗಳು ಇಂತಿವೆ:

❖ ನಿರ್ಯಾತ ಮಾಡುವಾಗ ಸಾಮಾನ್ಯವಾಗಿ ದೊಡ್ಡ ಪ್ರಮಾಣದಲ್ಲಿ ನಿರ್ಯಾತ ಮಾಡುವುದು ಲಾಭದಾಯಕ. ದ.ಕ. ಜಿಲ್ಲೆಯಲ್ಲಿ ಗೋಡಂಬಿ ರಫ್ತು ಮಾಡುತ್ತಿರುವವರು ಶೇ. ೧೦ ರಷ್ಟು ಮಾತ್ರ. ಉಳಿದಂತೆ ಇತರೆ ಘಟಕಗಳು ಸ್ಥಳೀಯ ಹಾಗೂ ಅಂತರ್ ರಾಜ್ಯ ಮಾರುಕಟ್ಟೆಗಷ್ಟೇ ಪೂರೈಸುವವರಾಗಿದ್ದಾರೆ. ರಫ್ತು ಮಾಡುವ ಘಟಕಗಳು ತಮ್ಮ ಉತ್ಪನ್ನಗಳಲ್ಲದೆ ಇತರೆ ಘಟಕಗಳಿಂದ ಗೋಡಂಬಿಯನ್ನು ವ್ಯಾಪಾರ ಮಾಡಿ ಅದನ್ನು ಒಂದೇ ಗುಣಮಟ್ಟಕ್ಕೆ ತರುತ್ತಾರೆ. ಅದಕ್ಕಾಗಿ ಹೆಚ್ಚಿನ ನುರಿತ ಕಾರ್ಮಿಕರನ್ನು ನೇಮಿಸಿಕೊಳ್ಳಬೇಕಾಗುತ್ತದೆ. ಬೇರೆ ಬೇರೆ ಘಟಕಗಳಿಂದ ಗೋಡಂಬಿಯನ್ನು ಸಂಗ್ರಹಿಸುವುದರಿಂದ ಏಕರೂಪದ ಗುಣಮಟ್ಟವನ್ನು ಕಾಯ್ದುಕೊಳ್ಳಲು ಶ್ರಮಿಸಬೇಕಾಗುತ್ತದೆ. ಒಂದು ವೇಳೆ ಗುಣಮಟ್ಟದ ಶ್ರೇಷ್ಠತೆಯನ್ನು ಕಾಯ್ದುಕೊಳ್ಳದಿದ್ದಲ್ಲಿ ಸರಕುಗಳು ಮರಳಿ ಬರುವ ಸಂಭವ ಇದೆ. ಈ ಬಗೆಯ ಸಂಕಷ್ಟಕ್ಕೆ ನಿರ್ಯಾತಗಾರರು ತಮ್ಮನ್ನು ತಾವು ಒಡ್ಡಿಕೊಳ್ಳುವುದು ಅನಿವಾರ್ಯವಾಗಿದೆ.

❖ ದ. ಕ. ಜಿಲ್ಲೆಯ ಗೋಡಂಬಿ ನಿರ್ಯಾತದಾರರು ತಮ್ಮ ಘಟಕಗಳಲ್ಲಿ ಏಕ ಕಾಲದಲ್ಲಿ ಹೆಚ್ಚಿನ ಬಂಡವಾಳ ತೊಡಗಿಸಬೇಕಾಗುತ್ತದೆ. ಇತರೆ ಘಟಕಗಳಿಂದ ಗೋಡಂಬಿಯ ಜಮಾವಣೆಗಾಗಿ ಸಾಕಷ್ಟು ಪ್ರಮಾಣದ ಬಂಡವಾಳ ಅಗತ್ಯ. ಹೀಗೆ ತೊಡಗಿಸಿದ ಬಂಡವಾಳಕ್ಕೆ ಶೀಘ್ರ ಪ್ರತಿಫಲ ದೊರಕುವ ಸಂಭವ ಇರುವುದಿಲ್ಲ. ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ

ಬೇಡಿಕೆ ಹಾಗೂ ಬೆಲೆಯ ವ್ಯತ್ಯಯದಿಂದಾಗಿ ನಿರ್ಯಾತದಾರರು ಆಪತ್ತಿಗೆ ಒಳಗಾಗಬೇಕಾಗುತ್ತದೆ. ಹೆಚ್ಚಿನ ಘಟಕಗಳ ಮಾಲಿಕರು ಈ ಕಾರಣಕ್ಕಾಗಿಯೇ ರಫ್ತು ವ್ಯಾಪಾರದಿಂದ ದೂರ ಉಳಿದು ಬಿಡುತ್ತಾರೆ.

❖ ಬಹುತೇಕ ನಿರ್ಯಾತದಾರರು ತಮ್ಮ ವ್ಯವಹಾರಕ್ಕಾಗಿ ಸಂಪೂರ್ಣವಾಗಿ ದಲ್ಲಾಳಿಗಳನ್ನು ಅವಲಂಬಿಸಿದ್ದಾರೆ. ಗಿರಾಕಿಗಳನ್ನು ನಿಗದಿ ಪಡಿಸುವುದು, ಬೆಲೆ ನಿರ್ಧಾರ, ಸಾಗಾಟದ ಪ್ರಕ್ರಿಯೆ ಎಲ್ಲವನ್ನೂ ತಮ್ಮ ದಲ್ಲಾಳಿಗಳ ಮೂಲಕ ನಡೆಸುತ್ತಾರೆ. ಕಮಿಷನ್ ಆಧಾರದಲ್ಲಿ ಈ ಎಲ್ಲಾ ವ್ಯವಹಾರ ನಡೆಯುತ್ತದೆ. ಇದರಿಂದಾಗಿ ನಿರ್ಯಾತದಾರರಿಗೆ ಸಿಗಬೇಕಾದ ಲಾಭಾಂಶದಲ್ಲಿ ಸಾಕಷ್ಟು ಕಡಿತ ಉಂಟಾಗುತ್ತದೆ.

❖ ಗೋಡಂಬಿಯನ್ನು ಪ್ಯಾಕ್ ಮಾಡುವಾಗ ಆಗಲಿ, ಸಾಗಿಸುವಾಗ ಆಗಲಿ ಗೋಡಂಬಿಯ ಪ್ಯಾಕೆಟ್‌ಗಳು ಹಾನಿಗೊಳಗಾದಲ್ಲಿ ಗೋಡಂಬಿ ಕೆಡುವ ಸಂಭವ ಇದೆ. ಹಾಗಾದಾಗ ವಿದೇಶಿ ಮಾರುಕಟ್ಟೆಯಲ್ಲಿ ಅದು ತಿರಸ್ಕರಿಲ್ಪಡುತ್ತದೆ. ಇದರಿಂದಾಗಿ ನಿರ್ಯಾತದಾರರು ತೀವ್ರ ಸಂಕಷ್ಟಕ್ಕೆ ಒಳಗಾಗುತ್ತಾರೆ.

❖ ದ. ಕ. ಜಿಲ್ಲೆಯಿಂದ ನಿರ್ಯಾತ ಮಾಡಲ್ಪಡುವ ಗೋಡಂಬಿಯ ಗಳಿಕೆ ಡಾಲರ್ ರೂಪದಲ್ಲೇ ಪಡೆಯುತ್ತಿದ್ದು, ೨೦೦೯–೧೦ ಹಾಗೂ ೨೦೧೨–೧೩ರಲ್ಲಿ ಡಾಲರ್‌ನೆದುರು ರೂಪಾಯಿಯ ಮೌಲ್ಯ ತೀವ್ರವಾಗಿ ಕುಸಿದ ಪರಿಣಾಮ ನಿರ್ಯಾತದಾರರು ತೀವ್ರ ಸಂಕಷ್ಟಕ್ಕೆ ಒಳಗಾಗಬೇಕಾಗಿ ಬಂತು. ಇದು ಸಾರ್ವತ್ರಿಕ ಸಮಸ್ಯೆಯಾಗಿದ್ದರೂ ಸಣ್ಣ ಉದ್ದಿಮೆದಾರರ ಮೇಲೆ ಗಂಭೀರ ಪರಿಣಾಮ ಉಂಟು ಮಾಡಿದ್ದು ಕೆಲವು ಗೋಡಂಬಿ ಸಂಸ್ಕರಣಾಗಾರರು ತಮ್ಮ ವ್ಯವಹಾರವನ್ನು ಸ್ಥಗಿತಗೊಳಿಸಬೇಕಾಯಿತು.

❖ ಭಾರತದ ಗೋಡಂಬಿ ಉದ್ಯಮಕ್ಕೆ ಬ್ರೆಜಿಲ್ ಹಾಗೂ ವಿಯೆಟ್ನಾಂ ದೇಶಗಳು ತೀವ್ರ ಪೈಪೋಟಿ ನೀಡುತ್ತಿದ್ದು, ಭಾರತೀಯ ನಿರ್ಯಾತದಾರರು ಆತಂಕಕ್ಕೆ ಒಳಗಾಗುತ್ತಿದ್ದಾರೆ. ವಿಯೆಟ್ನಾಂ ಹಾಗೂ ಬ್ರೆಜಿಲ್ ದೇಶಗಳ ಗೋಡಂಬಿ ಗುಣಮಟ್ಟ ಕಡಿಮೆ ಇದ್ದರೂ ಮಾರುಕಟ್ಟೆಯ ಬೆಲೆ ಕಡಿಮೆ ಇರುವುದು ಅದರ ಬಗೆಗಿನ ಆಕರ್ಷಣೆಯನ್ನು ಹೆಚ್ಚಿಸಿದೆ. ಇದರಿಂದಾಗಿ ನಿರ್ಯಾತದಾರರು ತೀವ್ರ ಪೈಪೋಟಿ ಎದುರಿಸಬೇಕಾಗಿದೆ.

❖ ಗೋಡಂಬಿ ನಿರ್ಯಾತದಾರರು ಏಕಕಾಲಿಕ ದೊಡ್ಡ ಮೊತ್ತದ ಬಂಡವಾಳ ಹೂಡಬೇಕಾಗುತ್ತದೆ. ಸಾಮಾನ್ಯವಾಗಿ ಸರಕು ಸಾಗಾಟದ ೨೧ ದಿನದ ಒಳಗಾಗಿ ಗಿರಾಕಿಗಳು ಹಣ ಪಾವತಿಸುವುದು ವಾಡಿಕೆ. ಆದರೆ ಕೆಲವು ಸಂದರ್ಭದಲ್ಲಿ ಪಾವತಿಯ ವಿಳಂಬದಿಂದಾಗಿ ನಿರ್ಯಾತದಾರರು ಬ್ಯಾಂಕಿಗೆ ಹೆಚ್ಚಿನ ಬಡ್ಡಿಯನ್ನು ಕೊಡಬೇಕಾಗುತ್ತದೆ. ದೊಡ್ಡ ಪ್ರಮಾಣದ ಬಂಡವಾಳ ಹೂಡಿಕೆ ವ್ಯವಹಾರಿಕವಾಗಿ ಲಾಭದಾಯಕವಾಗಿದ್ದರೂ, ಪಾವತಿ ವಿಳಂಬದಿಂದ ಆರ್ಥಿಕ ನಷ್ಟ ಸಂಭವಿಸುತ್ತದೆ.

ಇಷ್ಟೆಲ್ಲಾ ಸಮಸ್ಯೆಗಳ ನಡುವೆಯೂ ನಿರ್ಯಾತದಾರರು ಗೋಡಂಬಿ ನಿರ್ಯಾತದ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿದ್ದು, ನಿರ್ಯಾತಕ್ಕೆ ಸರಕಾರ ನೀಡುತ್ತಿರುವ ಉತ್ತೇಜನ ಕ್ರಮಗಳು ನಿರ್ಯಾತದಾರರಿಗೆ ವರದಾನವಾಗಿದೆ. ಅನಿಶ್ಚಿತತೆ, ಅನಿರೀಕ್ಷಿತ ಸಂಕಷ್ಟಗಳು ಎಲ್ಲಾ ಉದ್ದಿಮೆಯಲ್ಲೂ ಸಹಜ. ಹಾಗಾಗಿ ಗೋಡಂಬಿ ನಿರ್ಯಾತಕ್ಕೂ ಇದು ಅನ್ವಯಿಸುತ್ತದೆ. ಕಳೆದ ಒಂದು ದಶಕದಲ್ಲಿ ಗೋಡಂಬಿ ನಿರ್ಯಾತದಲ್ಲಿ ಸಾಕಷ್ಟು ಧನಾತ್ಮಕ ಬದಲಾವಣೆಗಳಾಗಿವೆ. ಸರಕು ಸಾಗಾಟದ ಶ್ರಮ ಹಗುರವಾಗಿದೆ. ವ್ಯವಹಾರದ ಬಹುಪಾಲು ಜವಾಬ್ದಾರಿ ದಲ್ಲಾಳಿಗಳದ್ದಾಗಿದ್ದು ,ವ್ಯಾಪಾರಸ್ಥರು ತಮ್ಮ ಲಾಭದ ಪ್ರಮಾಣವನ್ನಷ್ಟೇ ಗಮನಿಸಿ ವ್ಯವಹರಿಸುತ್ತಾರೆ. ಮಂಗಳೂರಿನ ಬಂದರಿನ ಸುಧಾರಿತ ಸಾಗಾಟ ವ್ಯವಸ್ಥೆ, ಸುಲಭ ಹಾಗೂ ಸರಳ ಹಣಕಾಸಿನ ನೆರವು ಈಗ ಸುಧಾರಿಸಿದೆ. ಆದರೆ ಕಚ್ಚಾಗೇರು ಬೀಜದ ಕೊರತೆ ಇರುವುದರಿಂದ ಗೇರುಬೀಜದ ಉತ್ಪಾದನೆಯನ್ನು ಹೆಚ್ಚುಸುವತ್ತ ವಿಶೇಷ ಗಮನ ಅಗತ್ಯ ಎಂಬುದು ಉದ್ಯಮಿಗಳ ಅಭಿಪ್ರಾಯವಾಗಿದೆ.

ಅಧ್ಯಾಯ ೭

ಅಧ್ಯಯನದ ಫಲಿತಗಳು ಮತ್ತು ಸಲಹೆಗಳು

೭.೧ ಗೇರು ಬೆಳೆಗಾರರ ಸಮಸ್ಯೆಗಳ ವಿಶ್ಲೇಷಣೆಯ ಫಲಿತಗಳು

೭.೨ ಗೇರು ಬೆಳೆಗಾರರ ಸಮಸ್ಯೆ ಪರಿಹಾರಕ್ಕೆ ಸಲಹೆಗಳು

೭.೩ ಗೇರು ಬೀಜ ಮಾರಾಟಗಾರರ ಸಮಸ್ಯೆಗಳ ಅಧ್ಯಯನದ ಫಲಿತಗಳು

೭.೪ ಗೇರುಬೀಜ ಮಾರಾಟದ ಸಮಸ್ಯೆ ಪರಿಹಾರಕ್ಕೆ ಸಲಹೆಗಳು

೭.೫ ಗೇರು ವ್ಯಾಪಾರಿಗಳ ಸಮಸ್ಯೆಗಳ ವಿಶ್ಲೇಷಣೆಯ ಫಲಿತಗಳು

೭.೬. ಗೇರು ವ್ಯಾಪಾರಿಗಳ ಸಮಸ್ಯೆ ಪರಿಹಾರಕ್ಕೆ ಸಲಹೆಗಳು

೭.೭. ಗೇರು ಸಂಸ್ಕರಣಾ ಘಟಕಗಳ ಸಮಸ್ಯೆಗಳ ಅಧ್ಯಯನದ ಫಲಿತಗಳು

೭.೮ ಗೇರು ಸಂಸ್ಕರಣಾ ಘಟಕಗಳ ಸಮಸ್ಯಾ ಪರಿಹಾರಕ್ಕೆ ಸಲಹೆಗಳು

೭.೯ ಗೋಡಂಬಿ ನಿರ್ಯಾತದ ಸಮಸ್ಯೆಗಳ ವಿಶ್ಲೇಷಣೆಯ ಫಲಿತಗಳು

೭.೧೦ ನಿರ್ಯಾತದ ಸಮಸ್ಯಾ ಪರಿಹಾರಕ್ಕೆ ಸಲಹೆಗಳು

೭.೧೧ ಮಹಿಳಾ ಕಾರ್ಮಿಕರ ಸಮಸ್ಯೆಗಳ ವಿಶ್ಲೇಷಣೆಯ ಫಲಿತಗಳು

೭.೧೨ ಮಹಿಳಾ ಕಾರ್ಮಿಕರ ಸಮಸ್ಯೆ ಪರಿಹಾರಕ್ಕೆ ಸಲಹೆಗಳು

ಅಧ್ಯಾಯ ೭
ಅಧ್ಯಯನದ ಫಲಿತಗಳು ಮತ್ತು ಸಲಹೆಗಳು

೭.೧ ಗೇರು ಬೆಳೆಗಾರರ ಸಮಸ್ಯೆಗಳ ವಿಶ್ಲೇಷಣೆಯ ಫಲಿತಗಳು

ಅಧ್ಯಾಯ ನಾಲ್ಕರಲ್ಲಿ ಗೇರು ಬೆಳೆಗಾರರ ಸಮಸ್ಯೆಗಳನ್ನು ಕ್ರಮ ಬದ್ಧವಾಗಿ ವಿಶ್ಲೇಷಿಸಲಾಗಿದೆ. ಅದರ ಫಲಿತಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ದಾಖಲಿಸಲಾಗಿದೆ.

೭.೧.೧ ದ. ಕ. ಜಿಲ್ಲೆಯಲ್ಲಿ ಗೇರು ಬೆಳೆ ಒಂದು ಅನಿವಾರ್ಯತೆಯಾಗಿ ಉಳಿದುಕೊಂಡಿದೆಯೇ ಹೊರತು ಆರ್ಥಿಕವಾಗಿ ಆಕರ್ಷಕ ಬೆಳೆಯಾಗಿ ಉಳಿದಿಲ್ಲ. ಇದಕ್ಕೆ ಬೆಳೆಗಾರರಲ್ಲಿ ಸುಮಾರು ಅರ್ಧಾಂಶದಷ್ಟು ಜನರು ಒಂದು ಎಕರೆಗಿಂತ ಕಡಿಮೆ ಭೂಮಿ ಹೊಂದಿರುವುದೇ ಸಾಕ್ಷಿ. ಗೇರು ಬೆಳೆಯುವಲ್ಲಿ ಬೇರೇನೂ ಬೆಳೆಯಲಾರದು ಎಂಬ ಭಾವನೆಯಿಂದ ಗೇರು ಬೆಳೆ ಇಷ್ಟಾದರೂ ಉಳಿದುಕೊಂಡಿದೆ. ಪಿತ್ರಾರ್ಜಿತ ಭೂಮಿಯಲ್ಲಿ ಮತ್ತು ಅದಕ್ಕೆ ಲಗತ್ತು ಇರುವ ಒತ್ತುವರಿ ಜಮೀನಿನಲ್ಲಿ ಗೇರು ಕೃಷಿ ಮಾಡುವವರು ಬಹು ಸಂಖ್ಯೆಯಲ್ಲಿದ್ದಾರೆ. ಕೃಷಿ ಮಾಡದ ಭೂಮಿ ಸರಕಾರದ ಪಾಲಾಗಬಹುದು ಎಂಬ ಭೀತಿಯಿಂದಾಗಿ ಯಾವುದಾದರೂ ಒಂದು ಕೃಷಿ ಇರಲಿ ಎಂಬ ಧೋರಣೆಯಿಂದ ಸುಲಭವಾಗಿ ಪ್ರತಿಫಲ ದಕ್ಕುವ ಗೇರು ಕೃಷಿಯನ್ನು ಉಳಿಸಿಕೊಂಡವರು ಇವರು. ಇಷ್ಟಾದರೂ ಮುಂದಿನ ದಿನಗಳಲ್ಲಿ ಗೇರು ಕೃಷಿ ಭೂಮಿ ನಿಧಾನವಾಗಿ ಕಣ್ಮರೆಯಾಗಿ ಅದರ ಸ್ಥಾನವನ್ನು ಬೇರೆ ಕೃಷಿಗಳು ಆಕ್ರಮಿಸುವ ಅಪಾಯ ಇದ್ದೇ ಇದೆ.

೭.೧.೨ ದಕ್ಷಿಣ ಕನ್ನಡ ಜಿಲ್ಲೆಯಿಂದ ಅಕ್ಕಿ ರಫ್ತಾಗುತ್ತಿದ್ದ ಕಾಲವೊಂದಿತ್ತು. ಈ ಜಿಲ್ಲೆಯ ಅಕ್ಕಿಯ ಬಗ್ಗೆ ಅರಬರು ವಿಶೇಷ ಮೋಹ ಹೊಂದಿದ್ದರು. ಸ್ವಾತಂತ್ರ ಗಳಿಸಿದ ಬಳಿಕ ಪರಿಸ್ಥಿತಿ ಬದಲಾಗುತ್ತಾ ಬಂತು. ವಾಣಿಜ್ಯ ಬೆಳೆಗಳು ಭತ್ತದ ಬೆಳೆಯ ಸ್ಥಾನವನ್ನು ಆಕ್ರಮಿಸಿಕೊಂಡವು. ಭತ್ತದ ಮಹತ್ವ ತಪ್ಪಿ ಹೋಗಿ ಅಡಿಕೆಗೆ ಮಾನ ಬಂತು. ಅಡಿಕೆಯ ಬೆಲೆ ಹೆಚ್ಚಾಗುತ್ತಾ ಹೋದುದು ಇದಕ್ಕೆ ಬಹು ಮುಖ್ಯ ಕಾರಣವಾದರೆ, ಭತ್ತದ ಬೆಳೆಗೆ ಹೋಲಿಸಿದರೆ ಅಡಿಕೆಯ ಬೆಳೆ ತುಲನಾತ್ಮಕವಾಗಿ ಸುಲಭ ಮತ್ತು ಮಿತ ವ್ಯಯಕರ ಎನ್ನುವುದು ಇನ್ನೊಂದು ಕಾರಣ. ಭತ್ತದ ಬೆಳೆಗೆ ಹಗಲೂ ರಾತ್ರಿ ಸಂರಕ್ಷಣೆ ಬೇಕು. ನೇಜಿ ತೆಗೆಯುವ, ನೇಜಿ ನೆಡುವ, ಹೊಲ ಉಳುವ, ಭತ್ತದ ಕಟಾವು ಮಾಡುವ, ದಂಟಿನಿಂದ ಭತ್ತವನ್ನು ಪ್ರತ್ಯೇಕಿಸುವ ಕೆಲಸ ಕಾರ್ಯಗಳಿಗೆ ದೊಡ್ಡ ಪ್ರಮಾಣದಲ್ಲಿ ಜನಶಕ್ತಿ ಬೇಕಾಗುತ್ತದೆ. ಯಾವ ರೀತಿಯಿಂದ ನೋಡಿದರೂ ಅಡಿಕೆಗೆ ಅಷ್ಟು ಜನಶಕ್ತಿಯಾಗಲೀ ಧನ ಶಕ್ತಿಯಾಗಲೀ ಅಗತ್ಯವಿರುವುದಿಲ್ಲ. ಇದರಿಂದಾಗಿ ಅಡಿಕೆ ಕೃಷಿಯು ಭತ್ತದ ಬೇಸಾಯದ ಮಾತ್ರವಲ್ಲದೆ ಗೇರು ಕೃಷಿಯ ಭೂಮಿಯನ್ನು ಆಕ್ರಮಿಸ ತೊಡಗಿತು. ಬೆಳೆಯ ಏಕರೂಪತೆಯಿಂದಾಗಿ ಅಡಿಕೆ ಬೆಳೆ ಇತ್ತೀಚೆಗೆ ಕೊಳೆರೋಗ ಮತ್ತು ಹಳದಿ ರೋಗಕ್ಕೆ ಈಡಾಗುತ್ತಿದೆ. ಆದರೂ ಅಡಿಕೆಯ ಮಾರುಕಟ್ಟೆಯ ಬೆಲೆ ಏರಿಕೆಯಿಂದಾಗಿ ರೈತಾಪಿ ವರ್ಗ ಅದರ ಮೇಲಣ ಮೋಹವನ್ನು ಕಳೆದುಕೊಂಡಿಲ್ಲ.

೭.೧.೩: ರಬ್ಬರ್ ಬೆಳೆಯ ಆಕರ್ಷಣೆಯು ಗೇರು ಕೃಷಿಗೆ ಕಂಟಕ ಪ್ರಾಯವಾಗುತ್ತಿರುವುದು ಒಂದು ದುರಂತ ಬೆಳವಣಿಗೆ. ಎತ್ತರದ ಪ್ರದೇಶಗಳು, ಇಳಿಜಾರುಗಳು ಮತ್ತು ಹಳದಿ ರೋಗದಿಂದ ನಾಶವಾದ ತೋಟಗಳಲ್ಲಿ ರಬ್ಬರನ್ನು ವ್ಯಾಪಕವಾಗಿ ಬೆಳೆಯಲಾಗುತ್ತಿದೆ. ೧೯೭೩-೭೪ರ ಶಾಸ್ತ್ರಿ-ಸಿರಿಮಾವೊ ಒಪ್ಪಂದದ ಪ್ರಕಾರ ಶ್ರೀಲಂಕಾದಿಂದ ಬಂದ ತಮಿಳು ನಿರ್ವಸಿತರು ಸುಳ್ಯ ತಾಲೂಕಿನಲ್ಲಿ ತಮ್ಮ ಬದುಕನ್ನು ಕಂಡುಕೊಂಡರು. ಅದರೊಂದಿಗೆ ರಬ್ಬರ್ ಬೆಳೆ ದಕ್ಷಿಣ ಕನ್ನಡ ಜಿಲ್ಲೆಗೆ ಪ್ರವೇಶವಾಯಿತು. ರಬ್ಬರ್‌ನ ಬೆಲೆ ಏರಿಕೆ ಮತ್ತು ಬೆಳೆಯ ಸುಲಭ ಶೀಲತೆಯಿಂದಾಗಿ ಗೇರು ಬೆಳೆಗಾರರು ರಬ್ಬರ್‌ನತ್ತ

ಆಕರ್ಷಿತರಾಗತೊಡಗಿದರು. ಸರಕಾರವು ರಬ್ಬರ್ ಬೆಳೆಗೆ ಸಬ್ಸಿಡಿ ನೀಡತೊಡಗಿದ್ದು ಸಹಜವಾಗಿ ರಬ್ಬರ್ ಬೆಳೆ ಹೆಚ್ಚು ಲಾಭದಾಯಕ ಎಂಬ ತಪ್ಪು ಅಭಿಪ್ರಾಯವನ್ನು ಮೂಡಿಸಿತ್ತು. ವಾಸ್ತವವಾಗಿ ರಬ್ಬರ್‌ಗಿಂತ ಗೇರು ಕೃಷಿ ಹೆಚ್ಚು ಲಾಭದಾಯಕ ಎನ್ನುವುದು ವಿಶ್ಲೇಷಣೆಯಲ್ಲಿ ವಿದಿತವಾಗಿದೆ. ಆದರೂ ರಬ್ಬರ್ ಒಡ್ಡಿರುವ ಸವಾಲನ್ನು ಎದುರಿಸಲು ಗೇರು ಕೃಷಿಗೆ ಸಾಧ್ಯವಾಗಿಲ್ಲ ಎನ್ನುವುದು ಒಂದು ವಿಷಾದನೀಯ ಸತ್ಯವಾಗಿದೆ.

೭.೧.೪: ಗೇರು ಬೀಜದ ಇಳುವರಿ ಇಳಿಕೆಯಾಗುತ್ತಾ ಹೋಗುತ್ತಿರುವುದು ಒಂದು ಆತಂಕಕಾರಿ ವಿದ್ಯಮಾನವಾಗಿದೆ. ಕೃಷಿಯಲ್ಲಿ ಸುಧಾರಣೆಗಳಿಲ್ಲದಿದ್ದರೆ ವರ್ಷದಿಂದ ವರ್ಷಕ್ಕೆ ಇಳುವರಿ ಕಡಿಮೆಯಾಗುತ್ತಾ ಹೋಗುತ್ತದೆಂದು ಇಳಿಕೆಯ ಸಿಮಾಂತ ಪ್ರತಿಫಲ ನಿಯಮ ಹೇಳುತ್ತದೆ. ಗೇರು ಕೃಷಿ ಮಾಡುತ್ತಿರುವವರು ಅದನ್ನು ಒಂದು ಲಾಭದಾಯಕವಾದ ಉದ್ಯಮವನ್ನಾಗಿ ಪರಿವರ್ತಿಸುವ ಗೊಡವೆಗೆ ಹೋಗುತ್ತಿಲ್ಲ. ಸಿಕ್ಕಷ್ಟು ಸಾಕು ಎಂಬ ಅಲ್ಪ ತೃಪ್ತಿಯಿಂದಾಗಿ ಗೇರು ಕೃಷಿ ಇಳುವರಿ ಕಡಿಮೆಯಾಗುತ್ತಾ ಹೋಗುತ್ತಿದೆ. ಗೇರು ಕೃಷಿಯನ್ನು ವೈಜ್ಞಾನಿಕವಾಗಿ ಕೈಗೆತ್ತಿಕೊಂಡವರು ಬೆರಳೆಣಿಕೆಯಷ್ಟೇ ಮಾತ್ರವೇ ಇದ್ದಾರೆ. ಹಳೆಯ ಗೇರು ಮರಗಳು ಹಾಗೆಯೇ ಉಳಿದುಕೊಂಡಿವೆ. ಹೊಸದಾಗಿ ಕೃಷಿ ಮಾಡುವವರು ಬೀಜಾಂಕುರ ಸಸಿಗಳನ್ನು ಬಳಸುತ್ತಿದ್ದಾರೆ. ಸರಕಾರದ ಸ್ವಾಮ್ಯದಲ್ಲಿ ಕೆಲವು ಗೇರು ತೋಟಗಳಿವೆ. ಇಲ್ಲೂ ಪರಿಸ್ಥಿತಿ ಭಿನ್ನವಾಗೇನೂ ಇಲ್ಲ. ಪರಿಣಾಮವಾಗಿ ವರ್ಷದಿಂದ ವರ್ಷಕ್ಕೆ ಇಳುವರಿ ಕಡಿಮೆಯಾಗುತ್ತಾ ಹೋಗುತ್ತಿದೆ. ಗೇರು ಕೃಷಿಯಿಂದ ಉನ್ನತ ಜೀವನ ಮಟ್ಟವನ್ನು ತಲುಪಲು ಗೇರು ಕೃಷಿಕರಿಗೆ ಇನ್ನೂ ಸಾಧ್ಯವಾಗಿಲ್ಲ.

೭.೧.೫: ಭಾರತದ ಕೃಷಿಯನ್ನು ಮಳೆಯೊಡನಾಡುವ ಜೂಜು ಎಂದು ಪರಿಗಣಿಸಲಾಗುತ್ತದೆ. ಜಿಲ್ಲೆಯಲ್ಲಿ ಗೇರು ಗಿಡಗಳು ಸಾಮಾನ್ಯವಾಗಿ ಜನವರಿ ಕೊನೆಯಲ್ಲಿ ಅಥವಾ ಫೆಬ್ರವರಿಯಲ್ಲಿ ಹೂ ಬಿಟ್ಟು ಮಾರ್ಚ್ ಮತ್ತು ಏಪ್ರಿಲ್‌ನಲ್ಲಿ ಫಲ ಕೊಡಲು ಆರಂಭಿಸುತ್ತವೆ. ಈ ಸಮಯದಲ್ಲಿ ಆಗಾಗ ಆಕಾಶದಲ್ಲಿ ಮೋಡ ಕಟ್ಟುತ್ತಿರುತ್ತದೆ. ಅಕಾಲಿಕವಾಗಿ ಮಳೆ ಸುರಿಯುವುದು ಕೂಡಾ ಈ ಅವಧಿಯ ವೈಶಿಷ್ಟ್ಯ. ಇದರಿಂದಾಗಿ ಗೇರು ಹೂವುಗಳು ಮರದಿಂದ ಕೆಳಗುರುಳುತ್ತವೆ. ಫಸಲು ಕಡಿಮೆಯಾಗುತ್ತದೆ. ಇಂತಹ ನೈಸರ್ಗಿಕ ವಿದ್ಯಮಾನವನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಇತರೆ ಕೃಷಿ ಉತ್ಪನ್ನಗಳು ಅತಿವೃಷ್ಟಿ ಅಥವಾ ಅನಾವೃಷ್ಟಿಯಿಂದ ನಾಶವಾದರೆ ಅಥವಾ ರೈತರಿಗೆ ನಷ್ಟ ಸಂಭವಿಸಿದರೆ ಸರಕಾರವು ರೈತರಿಗೆ ನಷ್ಟ ಪರಿಹಾರವನ್ನು ಕೊಡುತ್ತದೆ. ಗೇರು ಬೆಳೆಗಾರರಿಗೆ ಕೃಷಿ ನಷ್ಟ ಎಷ್ಟು ಎಂದು ಯಾರೂ ಅಂದಾಜಿಸಲು ಹೋಗುವುದಿಲ್ಲ. ನಷ್ಟ ಹೊಂದಿದ ಗೇರು ಬೆಳೆಗಾರರಿಗೆ ಸರಕಾರ ನಷ್ಟ ಪರಿಹಾರವನ್ನು ನೀಡುವುದಿಲ್ಲ.

೭.೧.೬: ಗೇರು ಸಸಿಗಳನ್ನು ಮತ್ತು ಗೇರು ಹಣ್ಣು ಹಾಗೂ ಬೀಜಗಳನ್ನು ರಕ್ಷಿಸಿಕೊಳ್ಳುವುದು ಕೂಡಾ ಒಂದು ಸಮಸ್ಯೆಯೆನಿಸಿದೆ. ಆರಂಭದ ವರ್ಷಗಳಲ್ಲಿ ಗೇರು ಸಸಿಗಳನ್ನು ದನಗಳು ಮತ್ತು ಆಡುಗಳು ತಿಂದು ಬಿಡುತ್ತವೆ. ಇಲಿ, ಹೆಗ್ಗಣ ಮತ್ತು ಮುಳ್ಳು ಹಂದಿಗಳು ಗೇರು ಸಸಿಯನ್ನು ಬುಡಮೇಲು ಮಾಡಿ ಏನಾದರೂ ಗೆಡ್ಡೆ ತಿನ್ನಲು ಸಿಗುತ್ತದೆಯೋ ಎಂದು ನೋಡುತ್ತವೆ. ಗೇರು ಹಣ್ಣುಗಳನ್ನು ಇಣಚಿ, ಬಾವಲಿ ಮತ್ತು ಮಂಗಗಳು ತಿಂದು ಗೇರು ಬೀಜವನ್ನು ಎಲ್ಲೆಲ್ಲೋ ಹಾಕಿ ಬಿಡುತ್ತವೆ. ಬೀಜ ಸಹಿತ ಬಿದ್ದ ಗೇರು ಹಣ್ಣನ್ನು ದನಗಳು ಮತ್ತು ಆಡುಗಳು ತಿಂದು, ಗೇರು ಬೀಜವನ್ನು ಕಚ್ಚಿ ಕಚ್ಚಿ ಇಡುತ್ತವೆ. ಅವುಗಳನ್ನು ಮಾರಾಟ ಮಾಡಲು ಸಾಧ್ಯವೇ ಇಲ್ಲ. ಗೇರು ಹಣ್ಣಾದ ಕಾಲದಲ್ಲಿ ಅಕ್ಕ ಪಕ್ಕದ ಮಕ್ಕಳು ಹಿರಿಯರ ಕಣ್ಣು ತಪ್ಪಿಸಿ, ಗೇರು ಹಣ್ಣು ಕೊಯ್ದು ಬೀಜ ತೆಗೆದುಕೊಂಡು ಹೋಗಿಬಿಡುತ್ತಾರೆ. ಕೆಲವು ಸಂದರ್ಭದಲ್ಲಿ ಹಿರಿಯರು ಗೇರು ಬೀಜ ಕಳ್ಳತನ ಮಾಡುವುದಿದೆ. ಆರಂಭದಲ್ಲಿ ಗೇರು ಸಸಿಗಳನ್ನು ಉಳಿಸಿಕೊಳ್ಳುವ ಸಮಸ್ಯೆ ಮತ್ತು ಆ ಬಳಿಕ ಗೇರು ಬೀಜಗಳನ್ನು ಉಳಿಸುವ ಸಮಸ್ಯೆ ರೈತಾಪಿ ಜನರನ್ನು ಕಾಡುತ್ತಿದ್ದು ಈ ಸಮಸ್ಯೆಗೆ ಪರಿಹಾರವನ್ನು ಕಂಡು ಹಿಡಿಯಲು ಸಾಧ್ಯವಾಗಿಲ್ಲ.

೭.೧.೭: ಗೇರು ಬೀಜದ ಬೆಲೆಗೆ ಸಂಬಂಧಿಸಿದಂತೆ ತೀವ್ರವಾದ ಸಮಸ್ಯೆಯನ್ನು ಗೇರು ಕೃಷಿಕರು ಎದುರಿಸುತ್ತಿದ್ದಾರೆ. ಗೇರು ಬೀಜದ ಗುಣಮಟ್ಟವನ್ನು ನಿರ್ಧರಿಸಲು ಯಾವುದೇ ಸಮರ್ಪಕವಾದ ಮಾನದಂಡಗಳಿಲ್ಲ. ಗೇರು ಬೀಜ ಕೊಳ್ಳುವವರು ಕೇವಲ ಕಣ್ಣೋಟದಿಂದ ಗೇರು ಬೀಜದ ಬೆಲೆ ನಿರ್ಧರಿಸುತ್ತಾರೆ. ಮಾರುಕಟ್ಟೆ ಬೆಲೆ ಅದಕ್ಕಿಂತ ಹೆಚ್ಚಿದ್ದರೂ, ಬೆಳೆಗಾರರು ಗೇರು ಬೀಜದ ವರ್ಗೀಕರಣ ಮಾಡದೆ ಮಾರಾಟ ಮಾಡುವುದರಿಂದ ಹೆಚ್ಚು ಬೆಲೆಯನ್ನು ನಿರೀಕ್ಷಿಸುವಂತಿಲ್ಲ. ಗೇರು ಒಂದು ಋತು ಸಂಬಂಧೀ ಬೆಳೆಯಾಗಿದ್ದು ಹವಮಾನದ ವೈಪರೀತ್ಯಗಳು ಅದರ ಮೇಲೆ ಪ್ರಭಾವ ಬೀರುತ್ತವೆ. ಇದರಿಂದಾಗಿ ಗೇರು ಬೀಜದ ಬೆಲೆ ಏರಿಳಿಯುತ್ತಿರುತ್ತದೆ. ಹಾಗಾಗಿ ಬೆಳೆಗಾರರು ನಿಶ್ಚಿತವಾದ ವರಮಾನವನ್ನು ಗೇರು ಬೆಳೆಯಿಂದ ನಿರೀಕ್ಷಿಸುವಂತಿಲ್ಲ. ಗೇರು ಕೃಷಿಕರಲ್ಲಿ ಸಿಕ್ಕಿದ್ದು ಲಾಭ ಎಂಬ ಮನೋಬಾವ ಎಲ್ಲಾ ಕಡೆಗಳಲ್ಲಿ ಕಂಡು ಬರುತ್ತದೆ.

೭.೧.೮: ಭತ್ತ, ಗೋಧಿ, ರಾಗಿಯಂತಹ ಬೆಳೆಗಳಿಗಿರುವಂತೆ ಗೇರು ಬೀಜಕ್ಕೆ ಉಗ್ರಾಣದ ವ್ಯವಸ್ಥೆ ಇರುವುದಿಲ್ಲ. ಗೇರು ಬೆಳೆಗಾರರಲ್ಲಿ ಬಹುತೇಕರು ಸಣ್ಣ ಮತ್ತು ಅಂಚಿನ ರೈತರಾದುದರಿಂದ ಅವರಲ್ಲಿ ಗೇರು ಬೀಜ ದಾಸ್ತಾನಿಗೆ ಕೊಠಡಿಗಳಿರುವುದಿಲ್ಲ. ಅಲ್ಲದೆ ಗೇರು ಬೀಜವು ಬಹುಬೇಗನೆ ತೂಕ ಕಳೆದುಕೊಳ್ಳುವುದರಿಂದ ಬೆಳೆಗಾರರು ಅದನ್ನು ಕೊಯ್ದು ಕೂಡಲೇ ಮಾರಾಟ ಮಾಡಿಬಿಡಬೇಕಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಅವರ ಬೆಳೆಗೆ ಹೆಚ್ಚು ಬೆಲೆ ಸಿಗಲು ಸಾಧ್ಯವೂ ಇಲ್ಲ. ಆದುದರಿಂದ ಕಡಿಮೆ ಬೆಲೆಗೆ ಅಲ್ಪ ತೃಪ್ತಿ ಪಡಬೇಕಾದುದು ಬಹುತೇಕ ಗೇರು ಬೆಳೆಗಾರರಿಗೆ ಅನಿವಾರ್ಯ ಸ್ಥಿತಿಯಾಗಿದೆ.

೭.೧.೯.: ಬಹುತೇಕ ರೈತರಂತೆ ಗೇರು ಬೆಳೆಗಾರರು ಕೂಡಾ ಸಾಗಾಟದ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಗೇರು ಬೀಜದ ಹಾಡಿಗಳು ಬಹುತೇಕವಾಗಿ ಗುಡ್ಡಗಾಡು ಪ್ರದೇಶಗಳಲ್ಲಿವೆ. ಬಹುತೇಕ ಕಡೆಗಳಿಗೆ ಸಾರಿಗೆ ವ್ಯವಸ್ಥೆ ಏರ್ಪಡಿಸಲು ಸಾಧ್ಯವಾಗುತ್ತಿಲ್ಲ. ಸಾಧ್ಯವಾಗುವ ಪ್ರದೇಶಗಳಿಂದ ಮಾರುಕಟ್ಟೆಗೆ ಗೇರು ಬೀಜ ಸಾಗಿಸಲು ಪಿಕಪ್ ವ್ಯಾನ್, ಜೀಪು, ಮಿನಿ ಲಾರಿ, ಟ್ರ್ಯಾಕ್ಟರ್ ಇತ್ಯಾದಿಗಳನ್ನು ಬಳಸಬೇಕಾಗುತ್ತದೆ. ಕಬ್ಬಿಣ ಕಾದಾಗಲೇ ಬಡಿಯಬೇಕು ಎಂಬಂತೆ ವಾಹನ ಮಾಲಿಕರು ಇಂತಹ ಸಂದರ್ಭದಲ್ಲಿ ಸಾಗಾಟ ದರವನ್ನು ಏರಿಸುತ್ತಾರೆ. ಸಾಗಾಟ ದರ ಪಾವತಿಸಿದ ಬಳಿಕ ಗೇರು ಕೃಷಿಕರಲ್ಲಿ ಉಳಿಯುವ ಗೇರು ಬೀಜ ಮಾರಾಟದ ಆದಾಯ ಬಹಳ ಕಡಿಮೆ. ಇದು ಗೇರು ಬೆಳೆಯನ್ನು ನಿರುತ್ತೇಜಕವಾಗಿಸುತ್ತದೆ.

೭.೧.೧೦: ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಕೃಷಿಕಾರ್ಮಿಕರ ಕೊರತೆ ಇದೆ. ಕೆಲವು ವರ್ಷಗಳ ಹಿಂದೆ ಭೂ ರಹಿತರು ಅನುಸೂಚಿತ ಜಾತಿ ಮತ್ತು ಪಂಗಡಗಳ ಬಹುತೇಕರು ಕೃಷಿ ಕಾರ್ಮಿಕರಾಗಿದ್ದರು. ಉತ್ತರ ಕರ್ನಾಟಕದ ಜನರು ಈ ಜಿಲ್ಲೆಗೆ ವಲಸೆ ಬಂದು ಕೃಷಿ ಸೇವೆಗೆ ಲಭ್ಯವಿರುತ್ತಿದ್ದರು. ಜಾಗತೀಕರಣದ ಪ್ರಕ್ರಿಯೆಯಿಂದಾಗಿ ಪರಿಸ್ಥಿತಿ ಬದಲಾಗಿದೆ. ತಮ್ಮ ಮಕ್ಕಳಿಗೆ ಆಧುನಿಕ ಇಂಗ್ಲೀಷ್ ಮಾಧ್ಯಮದ ಶಿಕ್ಷಣ ನೀಡಿ ಅವರನ್ನು ವೃತ್ತಿಪರ ಕೋರ್ಸುಗಳಿಗೆ ಕೃಷಿ ಕಾರ್ಮಿಕರು ಸೇರಿಸುತ್ತಿದ್ದಾರೆ. ಹೊಸ ತಲೆಮಾರಿನಲ್ಲಿ ಕೃಷಿ ಕಾರ್ಮಿಕರೇ ಸಿದ್ಧರಾಗುತ್ತಿಲ್ಲ. ಉತ್ತರ ಕರ್ನಾಟಕದಿಂದ ಗುಳೆ ಬರುವವರ ಸಂಖ್ಯೆ ಕಡಿಮೆಯಾಗಿದೆ. ಬಿಹಾರದಿಂದ ಒಂದಷ್ಟು ಕೃಷಿ ಕಾರ್ಮಿಕರು ಈ ಜಿಲ್ಲೆಗೆ ಬಂದು ನೆಲೆಗೊಂಡಿರುವುದು ನಿಜ. ಆದರೆ ಅವರಲ್ಲಿ ಅನುಭವ ಮತ್ತು ಕೌಶಲದ ಕೊರತೆ ಇದೆ. ಇದರಿಂದಾಗಿ ಗೇರು ಬೆಳೆಯಲು, ಕಾಯಿ ಕೀಳಲು, ವಾಹನಗಳಿಗೆ ಅವುಗಳ ಮೂಟೆಯನ್ನು ಏರಿಸಲು ಕಾರ್ಮಿಕರು ಸಿಗುತ್ತಿಲ್ಲ. ಇದು ಗೇರು ಕೃಷಿಯನ್ನು ಅನಾಕರ್ಷಕವಾಗಿಸುತ್ತಿದೆ.

೭.೧.೧೧: ಗೇರು ಮಾರುಕಟ್ಟೆಯಲ್ಲಿ ಸಾಕಷ್ಟು ಮಧ್ಯವರ್ತಿಗಳಿದ್ದಾರೆ. ಇದು ಸಮಗ್ರ ಕೃಷಿ ರಂಗಕ್ಕೆ ಸಂಬಂಧಿಸಿದ ಸಮಸ್ಯೆ. ಸಂಖ್ಯೆ ಸಾಕಷ್ಟಿದ್ದರೂ ಮಧ್ಯವರ್ತಿಗಳು ತಮ್ಮ ನಡುವೆ ಪೈಪೋಟಿ ನಡೆಸದೆ ಗೇರು ಬೆಳೆಗಾರರ ಬಗ್ಗೆ ಒಂದೇ ರೀತಿಯ ಧೋರಣೆ ತಾಳುತ್ತಿದ್ದಾರೆ. ಅತೀ ಕಡಿಮೆ ಬೆಲೆ ನೀಡಿ ರೈತರನ್ನು ವಂಚಿಸಲು ಇನ್ನಿಲ್ಲದ ಯತ್ನಗಳನ್ನು ಮಾಡುತ್ತಿದ್ದಾರೆ. ಅವರು ಬೆಲೆಯನ್ನು ಆದಷ್ಟು ಇಳಿಸುತ್ತಾರೆಯೇ ವಿನಾ ಹೆಚ್ಚಿಸಲು ಹೋಗುವುದಿಲ್ಲ. ಮಧ್ಯವರ್ತಿಗಳು ಒಗ್ಗಟ್ಟಾಗುವುದು ಬೇರೆಯವರಿಗೆ

ಮೋಸ ಮಾಡಲು ಮಾತ್ರ ಎಂದು ಅರ್ಥಶಾಸ್ತ್ರದ ಪಿತ ಆಡಂ ಸ್ಮಿತ್ ಹೇಳಿರುವುದು ಗೇರು ಮಾರುಕಟ್ಟೆಗೆ ಸಂಬಂಧಿಸಿದಂತೆ ನಿಜವಾಗಿದೆ. ಇದರಿಂದಾಗಿ ಗೇರು ಮಾರುಕಟ್ಟೆಯಲ್ಲಿ ಗೇರು ಕೃಷಿಕರು ಶೋಷಣೆಗೆ ಒಳಗಾಗುತ್ತಾರೆ.

೭.೧.೧೨: ಗೇರು ಬೆಳೆಗಾರರ ಅಗತ್ಯಗಳನ್ನು ಪೂರೈಸಲು ಅವರಿಗೆ ಸಾಕಷ್ಟು ಸಾಲ ಸೌಲಭ್ಯ ದೊರೆಯುತ್ತಿಲ್ಲ. ಗೇರು ಕೃಷಿಗಾಗಿ ಪ್ರತ್ಯೇಕ ಸಾಲ ವ್ಯವಸ್ಥೆ ಇಲ್ಲ. ಕೃಷಿ ಸಾಲವನ್ನೇ ಗೇರು ಕೃಷಿಗೆ ಬಳಸಬೇಕಾಗುತ್ತದೆ. ಇತರ ಬೆಳೆಗಳಿಗೆ ದೊರೆಯುವ ಬೆಳೆ ಸಾಲ ಗೇರು ಕೃಷಿಗೆ ಲಭ್ಯವಾಗುತ್ತಿಲ್ಲ. ಹಾಗಾಗಿ ಗೇರು ಕೃಷಿಕರು ಸ್ವಂತ ಬಂಡವಾಳವನ್ನೇ ಅವಲಂಬಿಸಿ ಗೇರು ಕೃಷಿ ಮಾಡಬೇಕಾಗುತ್ತದೆ. ಗೇರು ಕೃಷಿಗಾರರ ಹಣದ ಅವಶ್ಯಕತೆಗಳ ಈಡೇರಿಕೆಗಾಗಿ ಸರ್ಕಾರ ಪ್ರತ್ಯೇಕ ವ್ಯವಸ್ಥೆಯನ್ನೇನೂ ಮಾಡಿಲ್ಲ. ಪರಿಣಾಮವಾಗಿ ಗೇರು ಕೃಷಿಕರು ಸಾಂಸ್ಥಿಕ ಹಣಕಾಸಿನ ನೆರವನ್ನು ನಂಬದೆ ಗೇರು ಕೃಷಿ ಮಾಡಬೇಕಾದ ಪರಿಸ್ಥಿತಿ ಇದೆ. ಸಾಮಯಿಕ ಹಣಕಾಸಿನ ನೆರವು ಸಿಗದಿರುವುದು ಗೇರು ಉದ್ಯಮದ ನವೀಕರಣಕ್ಕೆ ಅಡ್ಡಿಯಾಗಿದೆ.

೭.೧.೧೩: ಗೇರು ಬೀಜಕ್ಕಿಂತ ಹೆಚ್ಚು ಪಟ್ಟು ತೂಕದ ಗೇರು ಹಣ್ಣು ಬೆಳೆಯುತ್ತದೆ. ಗೇರು ಹಣ್ಣಿನ ರಸ ತೆಗೆದು ರಸವನ್ನು ಮಾರಾಟ ಮಾಡಿದರೆ ಗೇರು ಬೆಳೆಗಾರರಿಗೆ ತುಂಬಾ ಲಾಭವಾಗಲಿದೆ. ಆದರೆ ಗೇರು ಹಣ್ಣನ್ನು ಆರ್ಥಿಕವಾಗಿ ದೊಡ್ಡ ಪ್ರಮಾಣದಲ್ಲಿ ಬಳಸುವ ಪ್ರಯತ್ನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗಿಲ್ಲ. ಅದಕ್ಕೆ ಬೇಕಾದ ಸಾಂಸ್ಥಿಕ ರಚನೆಗಳು ಇನ್ನೂ ರೂಪುಗೊಂಡಿಲ್ಲ. ಈ ಬಗ್ಗೆ ಗಂಭೀರವಾಗಿ ಯಾರೂ ಯೋಚಿಸುತ್ತಿಲ್ಲ. ಆದುದರಿಂದ ಅಮೂಲ್ಯವಾದ ಗೇರು ಹಣ್ಣು ವ್ಯರ್ಥವಾಗಿ ಹೋಗುತ್ತಿದೆ.ರೈತರಿಗೆ ಬರಬಹುದಾದ ದೊಡ್ಡ ಮೊತ್ತದ ಆದಾಯದ ಅವಕಾಶಕ್ಕೆ ಕಲ್ಲು ಬಿದ್ದಂತಾಗಿದೆ. ರೈತರಿಗೂ ಗೇರು ಹಣ್ಣಿನ ಆರ್ಥಿಕ ಬಳಕೆಯ ಅರಿವಿಲ್ಲ. ಅರಿವು ಮೂಡಿಸುವ ಸಾಂಸ್ಥಿಕ ರಚನೆಗಳಾಗಲೀ, ಸಂಘ ಸಂಸ್ಥೆಗಳಾಗಲೀ ಇಲ್ಲ. ಹಾಗಾಗಿ ರೈತರು ಗೇರು ಹಣ್ಣಿನಿಂದ ಬೀಜವನ್ನು ಪ್ರತ್ಯೇಕಿಸಿ ಬಳಿಕ ಹಣ್ಣನ್ನು ಹಾಗೇ ಮರಗಳ ಕೆಳಗೆ ಬಿಟ್ಟು ಬಿಡುತ್ತಾರೆ. ಕೊಳೆತ ಹಣ್ಣುಗಳಲ್ಲಿ ಕ್ರಿಮಿಗಳು ಮತ್ತು ನುಸಿಗಳು ಹುಟ್ಟಿಕೊಂಡು ಕೆಲವು ಕಾಯಿಲೆಗಳಿಗೆ ಕಾರಣವಾಗುತ್ತಿವೆ.

೭.೧.೧೪: ಗೇರು ಬೆಳೆಗೆ ಸಂಬಂಧಿಸಿದ ಅತಿ ಭೀಕರ ಸಮಸ್ಯೆ ಎಂಡೋ ಸಲ್ಫಾನಿನದು. ಈ ಕೀಟ ನಾಶಕದ ಸಿಂಪಡಣೆಯಿಂದ ಬೆಳ್ತಂಗಡಿ, ಪುತ್ತೂರು ಹಾಗೂ ಸುಳ್ಯ ತಾಲೂಕುಗಳಲ್ಲಿ ಭಯಾನಕ ದುರಂತಗಳು ಸಂಭವಿಸಿವೆ. ವಿಕಲ ಚೇತನರ ಸಂಖ್ಯೆ ಅಧಿಕವಾಗಿದೆ. ವಿಕಲ ಚೇತನ ಮಕ್ಕಳು ಹುಟ್ಟುತ್ತಿದ್ದಾರೆ. ಕೇರಳ ಹಾಗೂ ಕರ್ನಾಟಕ ರಾಜ್ಯದಲ್ಲಿ ಎಂಡೋ ಸಲ್ಫಾನ್ ವಿರೋಧಿ ಸಮಿತಿಯ ನಿರಂತರ ಪ್ರತಿಭಟನೆಯ ಫಲವಾಗಿ ೨೦೧೩ ರಲ್ಲಿ ದೇಶಾದ್ಯಂತ ಎಂಡೋಸಲ್ಫಾನನ್ನು ನಿಷೇಧಿಸಲಾಯಿತು. ಆದರೆ ೧೯೮೦ ರ ಇಸವಿಯಿಂದ ೨೦೦೦ ಇಸವಿಯ ತನಕ ದಕ್ಷಿಣ ಕನ್ನಡ ಜಿಲ್ಲೆಯ ೯೨ ಗ್ರಾಮಗಳಲ್ಲಿ ೬೦ ಸಾವಿರ ಲೀಟರ್‌ಗೂ ಮಿಕ್ಕಿ ಎಂಡೋ ಸಲ್ಫಾನಿನ ಮಳೆ ಸುರಿಸಿದ್ದರ ಪರಿಣಾಮ ಆ ಭಾಗದ ಜನರ ಬದುಕು ಬರ್ಬರವಾಗಿ ಹೋಗಿದೆ. ಶಾಶ್ವತ ಬಂಜೆತನ, ಅಂಗವಿಕಲತೆ, ಬುದ್ಧಿಮಾಂದ್ಯ, ಕುರುಡುತನ ಇತ್ಯಾದಿ ಹಲವು ವೈಕಲ್ಯತೆಗಳಿಗೆ ಜನ ತುತ್ತಾಗಿರುವುದು ಮಾತ್ರವಲ್ಲ ಎಂಡೋ ವಿಷ ವಂಶ ವಾಹಿನಿಯ ಮೇಲೂ ಪರಿಣಾಮ ಬೀರಿದ ಕಾರಣ ಮುಂದೆ ಹುಟ್ಟಲಿರುವ ಮಕ್ಕಳು ಅಂಗವಿಕಲತೆಗೆ ಒಳಗಾಗುವ ಸಾಧ್ಯತೆಗಳಿವೆ ಎಂಬುದಾಗಿ ವೈದ್ಯಕೀಯ ವರದಿಗಳು ತಿಳಿಸಿವೆ. ಇದರಿಂದಾಗಿ ಆ ಭಾಗದ ಯುವಕ ಯುವತಿಯರು ಅವಿವಾಹಿತರಾಗಿಯೇ ಉಳಿಯುವ ತೀರ್ಮಾನಕ್ಕೆ ಬಂದಿರುವುದು ವಿಷಾದನೀಯ. ಎಂಡೋ ಸಲ್ಫಾನಿನ ಬದಲು ಮೊನೋಕ್ರೋಟೋಫಸ್ ಕರಾಟೆ, ಲಾಮ್ಡಾ ಕಾರ್ಬರಿಲ್, ಇತ್ಯಾದಿ ಕೀಟನಾಶಕಗಳನ್ನು ಗೇರು ಕೃಷಿಕರು ಬಳಸುತ್ತಿದ್ದಾರೆ. ಈ ಬದಲಿ ಕೀಟನಾಶಕಗಳು ಎಂಡೋ ಸಲ್ಫಾನಿಗಿಂತ ಭಯಾನಕವಾದವುಗಳು ಎಂದು ವಿಜ್ಞಾನಿಗಳು ವಾದಿಸುತ್ತಿದ್ದಾರೆ. ವಿವೇಚನಾ ಶೂನ್ಯ ಕಾಡು ಕಡಿತದಿಂದಾಗಿ ಕ್ರಿಮಿ ಕೀಟಗಳ ಪ್ರಮಾಣ ಎದ್ವಾ ತದ್ವಾ ಜಿದ್ರಿಯಾಗಿ ಹೆಚ್ಚಿ ಯಾವುದೇ ಬೆಳೆಯನ್ನು ರೈತ ಕೀಟ ನಾಶಕಗಳ ಸಿಂಪಡಣೆ ಇಲ್ಲದೆ ಉಳಿಸಿಕೊಳ್ಳಲು

ಸಾಧ್ಯವೇ ಇಲ್ಲದ ಪರಿಸ್ಥಿತಿ ಇದೆ. ಎಂಡೋಸಲ್ಫಾನ್ ಪೀಡಿತರ ಬಗ್ಗೆ ಹರಿಸಿದ ಗಮನ ಏನೇನೋ ಸಾಲದು. ಈ ಸಮಸ್ಯೆಯನ್ನು ಮಾನವೀಯ ನೆಲೆಗಟ್ಟಿನಲ್ಲಿ ಪರಿಹರಿಸುವ ಪ್ರಮಾಣಿಕ ಪ್ರಯತ್ನಗಳ ಕೊರತೆಯಿದೆ.

೭.೧.೧೫: ಗೇರು ಬೆಳೆಗಾರರು ಪುತ್ತೂರಿನಲ್ಲಿರುವ ಗೇರು ಸಂಶೋಧನಾ ನಿರ್ದೇಶನಾಲಯದ ಕಾರ್ಯ ಚಟುವಟಿಕೆಗಳ ಬಗ್ಗೆ ಸಾಕಷ್ಟು ತಿಳಿದುಕೊಂಡಿಲ್ಲ. ಇಂತಹ ಸಂಸ್ಥೆ ಭಾರತದಲ್ಲಿ ಇರುವುದು ಇದೊಂದೆ. ವಿಶ್ವದಲ್ಲಿ ಇರುವುದು ಕೇವಲ ಎರಡು. ಎರಡನೆಯದು ಬ್ರೆಜಿಲ್‌ನಲ್ಲಿದೆ. ಪುತ್ತೂರಿನ ಗೇರು ನಿರ್ದೇಶನಾಲಯ ಗೇರು ಬೆಳೆಯ ಬಗ್ಗೆ ಸಂಶೋಧನೆ ಹಾಗೂ ಆವಿಷ್ಕಾರಿಕ ಕ್ರಮಗಳನ್ನು ಕೈಗೊಳ್ಳುತ್ತಿದೆ. ಅಧಿಕ ಇಳುವರಿಯ ಕಡಿಮೆ ಗರ್ಭಾವಧಿಯ ಗೇರು ಗಿಡಗಳನ್ನು ಸಂಸ್ಥೆಯು ಆವಿಷ್ಕರಿಸಿದೆ. ಆದರೆ ನಿರ್ದೇಶನಾಲಯದೊಡನೆ ಬಹುತೇಕ ಗೇರು ಬೆಳೆಗಾರರು ಸಂಪರ್ಕ ಇಟ್ಟುಕೊಂಡಿಲ್ಲ. ಅದರ ಅಸ್ತಿತ್ವ ಮತ್ತು ಕಾರ್ಯಗಳ ಬಗ್ಗೆ ಕೇವಲ ಬೆರಳೆಣಿಕೆಯಷ್ಟು ರೈತರಿಗೆ ಮಾತ್ರ ಅರಿವಿದೆ. ಅವರನ್ನು ಹೊರತು ಪಡಿಸಿದರೆ ನಿರ್ದೇಶನಾಲಯದ ಪ್ರಯತ್ನಗಳು ನೀರಿನಲ್ಲಿಟ್ಟ ಹೋಮದಂತಾಗಿದೆ. ಇದರಿಂದಾಗಿ ಗೇರು ಕೃಷಿಕರಿಗೆ ಬರಬಹುದಾಗಿದ್ದ ಹೆಚ್ಚುವರಿ ಆದಾಯದ ಅವಕಾಶವೇ ತಪ್ಪಿ ಹೋದಂತಾಗಿದೆ.

೭. ೨ ಗೇರು ಬೆಳೆಗಾರರ ಸಮಸ್ಯೆ ಪರಿಹಾರಕ್ಕೆ ಸಲಹೆಗಳು

೭.೨.೧: ಗೇರು ಕೃಷಿಯನ್ನು ಪ್ರೀತಿಯಿಂದ ಆಯ್ಕೆ ಮಾಡದೆ ಅನಿವಾರ್ಯತೆಯಿಂದ ಆಯ್ಕೆ ಮಾಡಿದವರ ಸಂಖ್ಯೆ ಅಧಿಕವಾಗಿರುವುದು ಒಂದು ಸಮಸ್ಯೆಯಾಗಿ ಈ ಅಧ್ಯಯನವು ಗುರುತಿಸುತ್ತದೆ. ಗೇರು ಬೆಳೆಗಾರರಲ್ಲಿ ಹೆಚ್ಚಿನವರು ಪಿಯುಸಿ ಮಟ್ಟಕ್ಕಿಂತ ಹೆಚ್ಚಿನ ಶಿಕ್ಷಣ ಪಡೆದವರಲ್ಲ. ಹಾಗಾಗಿ ಆರ್ಥಿಕ ಬೆಳೆಯಾಗಿ ಗೇರು ಕೃಷಿಯ ಬಗ್ಗೆ ಯೋಚಿಸುವ ಸಾಮರ್ಥ್ಯ ಬಹುತೇಕರಲ್ಲಿ ಇಲ್ಲ. ಗೇರು ಮರಗಳಿಗೆ ಬೇಕಾಗುವ ನೀರಿನ ಬಗ್ಗೆಯಾಗಲೀ, ಗೊಬ್ಬರದ ಬಗ್ಗೆಯಾಗಲೀ ಇವರು ಯೋಚಿಸುತ್ತಿಲ್ಲ. ಆದುದರಿಂದ ಗೇರು ಬೆಳೆಗಾರರಿಗೆ ವೈಜ್ಞಾನಿಕವಾಗಿ ಗೇರು ಕೃಷಿ ಮಾಡುವುದು ಹೇಗೆ ಎಂಬ ಶಿಕ್ಷಣವನ್ನು ನೀಡಬೇಕಾಗಿದೆ. ಈ ನಿಟ್ಟಿನಲ್ಲಿ ಕೃಷಿ ವಿಶ್ವ ವಿದ್ಯಾಲಯಗಳು ಹೆಚ್ಚಿನ ಗಮನ ಹರಿಸಬೇಕಿದೆ. ವಯಸ್ಕರ ಶಿಕ್ಷಣ ಕೇಂದ್ರಗಳನ್ನು ಈ ಉದ್ದೇಶಕ್ಕೆ ಬಳಸಬಹುದಾಗಿದೆ. ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್‌ಗಳು ಮತ್ತು ಗ್ರಾಮ ಪಂಚಾಯಿತಿಗಳು ತಜ್ಞರಿಂದ ಗೇರು ಕೃಷಿ ಪಾಠವನ್ನು ಗೇರು ಕೃಷಿಕರಿಗೆ ನೀಡಬೇಕು. ಆಕಾಶವಾಣಿಯ ಕೃಷಿ ರಂಗದಲ್ಲಿ ಗೇರು ಕೃಷಿಯನ್ನು ಜನಪ್ರಿಯಗೊಳಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ದೂರದರ್ಶನವನ್ನು ಈ ಉದ್ದೇಶಕ್ಕೆ ಬಳಸಿಕೊಳ್ಳಲು ಸಾಧ್ಯ ಇದೆ.

೭.೨.೨: ಅಡಿಕೆ ಬೆಳೆ ಗೇರು ಕೃಷಿಯ ಭೂಮಿಗೂ ಪಸರಿಸ ತೊಡಗಿದ್ದುದರಿಂದ ಗೇರು ಬೀಜದ ಉತ್ಪಾದನೆ ಬಹಳಷ್ಟು ಕಡಿಮೆಯಾಗುತ್ತಿದೆ. ಸರಕಾರವೇನೋ ಗೇರು ಕೃಷಿ ಭೂಮಿಯ ವಿಸ್ತೀರ್ಣ ಪ್ರತೀ ವರ್ಷ ಹೆಚ್ಚಾಗುವಂತೆ ತೋರಿಸುತ್ತಿದೆ. ಆದರೆ ಇವು ನಂಬಿಕೆಗೆ ಅರ್ಹವಾದ ಅಂಕಿ ಅಂಶಗಳಲ್ಲವೆನ್ನುವುದು ಅಧ್ಯಯನ ಕಾಲದಲ್ಲಿ ಕಂಡು ಬಂತು. ಪುತ್ತೂರಿನ ಗೇರು ನಿರ್ದೇಶನಾಲಯದ ಅಧ್ಯಯನಗಳು ಕೂಡಾ ಕೃಷಿ ಭೂಮಿ ಕಡಿಮೆಯಾಗುತ್ತಾ ಹೋಗುತ್ತಿರುವುದನ್ನು ಕಳವಳದಿಂದ ದಾಖಲಿಸಿವೆ. ಗೇರು ಕೃಷಿ ಕಡಿಮೆಯಾಗುತ್ತಿರುವುದನ್ನು ತಡೆಗಟ್ಟಲು ರಬ್ಬರ್ ಬೋರ್ಡಿನ ಮಾದರಿಯಲ್ಲಿ ಒಂದು ಬೋರ್ಡನ್ನು ಸ್ಥಾಪಿಸಬೇಕು. ಅದು ಗೇರು ಕೃಷಿ ಭೂಮಿಯ ವಿಸ್ತೀರ್ಣ ಕಡಿಮೆಯಾಗದಂತೆ ಮತ್ತು ಗೇರು ಕೃಷಿಯು ಆಕರ್ಷಕ ಉದ್ಯಮವಾಗಿರುವಂತೆ ನೋಡಿಕೊಳ್ಳಬೇಕು.

೭.೨.೩: ಶಾಸ್ತ್ರಿ-ಸಿರಿಮಾವೋ ಒಪ್ಪಂದದಿಂದಾಗಿ ದ.ಕ. ಜಿಲ್ಲೆಗೆ ಬಂದ ಶ್ರೀಲಂಕಾದ ತಮಿಳು ನಿರಾಶ್ರಿತರು ಈ ಜಿಲ್ಲೆಯಲ್ಲಿ ರಬ್ಬರ್ ಬೃಹತ್ತಾಗಿ ಬೆಳೆಯಲು ಕಾರಣರಾದರು. ಸ್ಥಳೀಯರು ಗೇರು ಮರಗಳನ್ನು ಕಡಿದು ರಬ್ಬರ್ ಗಿಡಗಳನ್ನು ನೆಟ್ಟರು.

ರಬ್ಬರಿಗೆ ಅರಣ್ಯ ಇಲಾಖೆಯ ಬೆಂಬಲವೂ ದೊರೆಯಿತು. ಆದರೆ ಗೇರು ಕೃಷಿಗೆ ಯಾವ ಇಲಾಖೆಯ ಬೆಂಬಲವೂ ಸಿಗಲಿಲ್ಲ. ಹೆಸರಿಗೆ ಗೇರು ಬೆಳೆ ನಿಗಮವೊಂದು ದಾಖಲೆಗಳಲ್ಲಿ ಅಸ್ತಿತ್ವದಲ್ಲಿದೆ. ಆದರೆ ಅದು ಕಾರ್ಯವನ್ನೇ ನಿರ್ವಹಿಸುತ್ತಿಲ್ಲ. ಕೆಲವು ವರ್ಷಗಳಿಂದ ಅದಕ್ಕೊಬ್ಬ ಅಧ್ಯಕ್ಷನಿಲ್ಲ. ಈ ಹಿಂದಿನ ಕೆಲವು ವರ್ಷಗಳಲ್ಲಿ ಈ ನಿಗಮಕ್ಕೆ ಅಧ್ಯಕ್ಷರನ್ನು ನೇಮಕ ಮಾಡಿದ್ದಿದೆ. ಅಂತಹ ಅಧ್ಯಕ್ಷರು ರಾಜಕೀಯ ಪುನರ್ವಸತಿ ಕೇಂದ್ರವನ್ನಾಗಿ ನಿಗಮವನ್ನು ಮಾಡಿಕೊಂಡರೇ ವಿನಾ ಅದರ ಸಾಧ್ಯತೆಗಳನ್ನು ಬಳಸಿಕೊಳ್ಳಲಿಲ್ಲ. ಪರಿಣಾಮವಾಗಿ ಗೇರು ನಿಗಮ ಒಂದು ನಿಷ್ಕ್ರಿಯ, ನಿಷ್ಪ್ರಯೋಜಕ ರಾಜಕೀಯ ಸಂತ್ರಸ್ತರ ಲೆಟರ್ ಹೆಡ್‌ಗಳಲ್ಲಿ ಮಾತ್ರ ಉಳಿದುಕೊಂಡಿತು. ಸರಕಾರಕ್ಕೆ ಗೇರು ಕೃಷಿಯ ಪುನರುಜ್ಜೀವನದಲ್ಲಿ ನಿಜವಾದ ಕಾಳಜಿ ಇರುವುದೇ ಆದಲ್ಲಿ ಗೇರು ನಿಗಮವನ್ನು ಒಂದು ಸಶಕ್ತ ಸಂಸ್ಥೆಯಾಗಿ ಮಾರ್ಪಡಿಸಿ ಗೇರು ಕೃಷಿಯ ಅಭಿವೃದ್ಧಿ ಸಾಧಿಸಲು ಸಾಧ್ಯವಿದೆ.

೭.೨.೪: ಗೇರು ಬೀಜದ ಇಳುವರಿ ಕಡಿಮೆಯಾಗುತ್ತಾ ಹೋಗುತ್ತಿರುವುದಕ್ಕೆ ವೈಜ್ಞಾನಿಕ ವಿಧಾನದ ಗೇರು ಕೃಷಿ ನಡೆಯದಿರುವುದು ಕಾರಣ. ಮಳೆಗಾಲಕ್ಕೆ ಮುನ್ನ ಗೇರು ಗಿಡಗಳ ಸುತ್ತ ಹೊಂಡ ತೋಡಿ ಇಂಗು ಗುಂಡಿಗಳನ್ನು ನಿರ್ಮಿಸಿದರೆ ಸಹಜವಾಗಿ ಜಲ ಕೊಯ್ಲು ಮಾಡಿದಂತಾಗುತ್ತದೆ. ಗೇರು ಗಿಡಗಳಿಗೆ ಸಾಕಷ್ಟು ನೀರು ಸಿಗುತ್ತದೆ. ಅಗತ್ಯವಿದ್ದರೆ ಹಸಿರು ಸೊಪ್ಪು, ದನ-ಎಮ್ಮೆ ಗಂಜಲ ಇತ್ಯಾದಿಗಳನ್ನು ಗೇರು ಸಸಿಗಳ ಬುಡಕ್ಕೆ ಹಾಕಬಹುದು. ಇದರಿಂದ ಗಿಡಕ್ಕೆ ಬೇಕಾದ ಪೋಷಕಾಂಶ ಲಭ್ಯವಾಗುತ್ತದೆ. ಗಿಡದ ರೋಗ ನಿರೋಧಕ ಸಾಮಾರ್ಥ್ಯ ಅಧಿಕವಾಗುತ್ತದೆ. ಈ ನಿಟ್ಟಿನಲ್ಲಿ ಗೇರು ಕೃಷಿಕರಲ್ಲಿ ಅರಿವು ಮೂಡಿಸುವ ಕಾರ್ಯ ಆಗಬೇಕಾಗಿದೆ.

೭.೨.೫: ಗೇರು ಬೀಜವು ಋತು ಸಂಬಂಧೀ ಬೆಳೆಯಾಗಿದ್ದು ಹವಮಾನದ ವೈಪರೀತ್ಯವು ಇಳುವರಿಯ ಮೇಲೆ ಪ್ರಭಾವ ಬೀರುತ್ತದೆ. ಮೋಡ ಕಟ್ಟಿದಾಗ ಗೇರು ಹೂವುಗಳು ಕರಟಿ ಹೋಗಿ ಬೆಳೆ ಕಡಿಮೆಯಾಗುತ್ತಿರುತ್ತದೆ. ಬೆಳೆ ನಷ್ಟವಾದರೆ ರೈತನಿಗೆ ಯಾವುದೇ ಪರಿಹಾರ ದೊರೆಯುವುದಿಲ್ಲ. ಈ ಪರಿಸ್ಥಿತಿ ಬದಲಾಗಬೇಕು. ಗೇರು ಬೆಳೆಯುವವರ ಸಮಗ್ರ ಮಾಹಿತಿ ಸರಕಾರದಲ್ಲಿರಬೇಕು. ಹಿಂದೆ ಹೇಳಲಾದ ಗೇರು ಮಂಡಳಿಯೊಂದರ ರಚನೆಯಿಂದ ಈ ಸಮಸ್ಯೆಗೆ ಉತ್ತರ ಕಂಡುಕೊಳ್ಳಬೇಕು. ಗೇರು ಮಂಡಳಿಯು ಗೇರು ಬೆಳೆಗಾರರ ಸಮಗ್ರ ಮಾಹಿತಿ ಗೇರು ಬೆಳೆಯುವ ಪ್ರದೇಶದ ವಿಸ್ತೀರ್ಣ ಅಥವಾ ಗಿಡಗಳ ಸಂಖ್ಯೆ, ಸರಾಸರಿ ವಾರ್ಷಿಕ ಗೇರು ಇಳುವರಿಯ ಪ್ರಮಾಣದ ಅಂಕಿ ಅಂಶಗಳನ್ನು ಹೊಂದಿರಬೇಕು. ಗೇರು ಬೆಳೆಗಾರರಿಗೆ ನಷ್ಟ ಸಂಭವಿಸಿದ ವರ್ಷ ಸರಕಾರ ನಷ್ಟ ಪರಿಹಾರ ನೀಡಬೇಕು. ಪರಿಹಾರ ನೀಡಿಕೆಯ ಪ್ರಕ್ರಿಯೆ ಸರಳವಾಗಿದ್ದು ಸಾಮಾನ್ಯ ರೈತರಿಗೆ ಕೈಗೆಟುಕುವಂತಾಗಬೇಕು. ಇದು ಗೇರು ಬೆಳೆಯಲು ಉತ್ತೇಜಕಾರಿಯಾಗಿರುತ್ತದೆ.

೭.೨.೬: ಗೇರು ಗಿಡಗಳನ್ನು ಮತ್ತು ಗೇರು ಹಣ್ಣು- ಬೀಜಗಳನ್ನು ಪ್ರಾಣಿ ಮತ್ತು ಪಕ್ಷಿಗಳಿಂದ ರಕ್ಷಿಸಿಕೊಳ್ಳುವುದು ಸ್ವಲ್ಪ ಕಷ್ಟದ ಕೆಲಸ. ಆದರೆ ಇತರ ಬೆಳೆಗಳನ್ನು ರಕ್ಷಿಸಿಕೊಳ್ಳಲು ರೈತ ಯಾವ ತಂತ್ರಗಳನ್ನು ಹೂಡುತ್ತಾನೆಯೋ ಅವುಗಳನ್ನು ಗೇರು ಗಿಡಗಳನ್ನು ರಕ್ಷಿಕೊಳ್ಳಲು ಬಳಸಬೇಕು. ಮಂಗಗಳ ಸಂಖ್ಯೆ ಇತ್ತೀಚಿನ ವರ್ಷಗಳಲ್ಲಿ ವಿಪರೀತವಾಗಿ ಹೆಚ್ಚುತ್ತಿರುವುದರೊಂದಿಗೆ ಅವುಗಳ ಉಪಟಳವೂ ಕೂಡಾ ಅಧಿಕಾಗಿದೆ. ಸ್ವಲ್ಪ ಕಷ್ಟವಾದರೂ ಮಂಗಗಳ ಸಂತಾನ ಹರಣ ಶಸ್ತ್ರ ಚಿಕಿತ್ಸೆಯ ಬಗ್ಗೆ ಸರಕಾರ ಪ್ರಾಮಾಣಿಕವಾಗಿ ಯೋಚಿಸಬೇಕಾದ ಕಾಲವೀಗ ಬಂದಿದೆ. ಗೇರು ಬೆಳೆಯುವ ಪ್ರದೇಶಕ್ಕೆ ಭದ್ರವಾದ ಬೇಲಿ ನಿರ್ಮಿಸುವುದರ ಮೂಲಕ ಜಾನುವಾರುಗಳ ಉಪಟಳ ತಡೆಗಟ್ಟಬಹುದು. ಗೇರು ಹಾಡಿ ತುಂಬಾ ದೊಡ್ಡದು ಎಂದಾದರೆ ಕಾವಲುಗಾರರನ್ನು ನೇಮಿಸುವ ಬಗ್ಗೆಯೂ ಯೋಚಿಸಬಹುದು. ಇದು ದೊಡ್ಡ ಪ್ರಮಾಣದಲ್ಲಿ ಗೇರು ಬೆಳೆಯುವವರಿಂದ ಮಾತ್ರ ಸಾಧ್ಯ.

೭.೨.೭: ಗೇರು ಬೀಜಕ್ಕೆ ಬೆಲೆ ನಿಷ್ಕರ್ಷೆಗೆ ವೈಜ್ಞಾನಿಕ ಮಾನದಂಡಗಳಿಲ್ಲದಿರುವುದು ಒಂದು ಕೊರತೆ. ಕೃಷಿ ಉತ್ಪನ್ನವಾದ ಗೇರು ಬೀಜದ ಬೆಲೆ ಬೇಡಿಕೆ ಮತ್ತು ಪೂರೈಕೆಗಳಿಂದ ನಿರ್ಧಾರವಾಗಬೇಕು. ಆದರೆ ಗೇರು ಬೀಜದ ವರ್ಗೀಕರಣವಾಗದ ಕಾರಣ

ವ್ಯಾಪಾರಿಗಳು ಗೇರು ಬೆಳೆಗಾರರಿಗೆ ಕಡಿಮೆ ಬೆಲೆ ನೀಡಿ ವಂಚಿಸುತ್ತಾರೆ. ಹೀಗಾಗುವುದಕ್ಕೆ ಬಹುಮುಖ್ಯವಾದ ಕಾರಣ ಗೇರು ಬೆಳೆಗಾರರಲ್ಲಿ ಒಗ್ಗಟ್ಟಿಲ್ಲದಿರುವುದು. ಗೇರು ಬೆಳೆಗಾರರ ಸಹಕಾರಿ ಸಂಘವೊಂದು ಇದುವರೆಗೆ ಅಸ್ತಿತ್ವಕ್ಕೆ ಬಂದಿಲ್ಲ. ಒಂದು ಕಾಲದಲ್ಲಿ ಹಾಲು ಉತ್ಪಾದಕರು ಶೋಷಣೆಗೆ ಒಳಗಾಗಿದ್ದರು. ಈಗ ಅಲ್ಲಲ್ಲಿ ಹಾಲು ಉತ್ಪಾದಕರ ಸಂಘಗಳು ತಲೆ ಎತ್ತಿವೆ. ಗೇರು ಬೆಳೆಗಾರರು ಕನಿಷ್ಠ ತಾಲೂಕಿಗೊಂದು ಗೇರು ಬೆಳೆಗಾರರ ಸಂಘವನ್ನು ರಚಿಸಿಕೊಳ್ಳಬೇಕು. ಅವು ಜಿಲ್ಲಾ ಫೆಡರೇಶನ್ನಿನ ಸದಸ್ಯತ್ವ ಪಡೆದಿರಬೇಕು. ಹಾಗೆ ಮಾಡುವುದರ ಮೂಲಕ ಗೇರು ಉತ್ಪಾದಕರು ತಮ್ಮ ಚೌಕಾಶಿ ಸಾಮಾರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗುತ್ತದೆ. ಗೇರು ಬೀಜದ ಬೆಲೆಗಳಲ್ಲಿನ ಅಸ್ಥಿರತೆ ಮಾಯವಾಗಿ ಗೇರು ಬೆಳೆಗಾರರು ಸಾಮಾನ್ಯವಾಗಿ ಸ್ಥಿರವಾದ ಆದಾಯವನ್ನು ಗಳಿಸಲು ಸಾಧ್ಯವಿದೆ.

೭.೨.೮: ಗೇರು ಬೀಜವನ್ನು ಹೆಚ್ಚು ಕಾಲ ಸಂಗ್ರಹಿಸಿಡುವ ವ್ಯವಸ್ಥೆ ಇಲ್ಲದಿರುವ ಕಾರಣ ಸಿಕ್ಕಿದ ಬೆಲೆಗೆ ಬೆಳೆಗಾರ ಮಾರಾಟ ಮಾಡಬೇಕಾಗುತ್ತದೆ. ಇದು ಬಹುತೇಕ ಕೃಷಿ ಉತ್ಪನ್ನಗಳ ಕಥೆಯೂ ಹೌದು. ಗೇರು ಬೀಜವನ್ನು ಶೇಖರಿಸಿಟ್ಟರೆ ಅವುಗಳ ತೂಕ ಸ್ವಲ್ಪ ಮಟ್ಟಿಗೆ ಕಡಿಮೆಯಾಗುವುದು ಕೂಡಾ ನಿಜವೆ. ಆದರೆ ಸರಿಯಾದ ಉಗ್ರಾಣ ವ್ಯವಸ್ಥೆ ಇದ್ದರೆ ಸಿಗಬಹುದಾದ ಲಾಭವು ತೂಕ ಕಡಿಮೆಯಾಗಿ ಆಗುವ ನಷ್ಟಕ್ಕಿಂತ ಖಂಡಿತ ಅಧಿಕವಾಗಿರುತ್ತದೆ. ಈ ನಿಟ್ಟಿನಲ್ಲಿ ತಾಲೂಕಿಗೊಂದು ಗೇರು ಬೀಜ ಉಗ್ರಾಣ ರಚನೆಯಾಗಬೇಕು. ಇತರ ಕೃಷಿ ಉತ್ಪನ್ನಗಳ ಉಗ್ರಾಣದ ಹಾಗೆ ಗೇರು ಬೀಜ ಉಗ್ರಾಣಗಳು ತಮ್ಮಲ್ಲಿ ರೈತರು ಇಟ್ಟಿರುವ ಗೇರು ಬೀಜದ ಪ್ರಮಾಣದ ರಶೀದಿ ನೀಡಬೇಕು. ಆ ರಶೀದಿಯನ್ನು ಆಧಾರವಾಗಿರಿಸಿಕೊಂಡು ರಾಷ್ಟ್ರೀಕೃತ ವಾಣಿಜ್ಯ ಬ್ಯಾಂಕುಗಳು ಗೇರು ಬೆಳೆಗಾರರಿಗೆ ಸುಲಭವಾಗಿ ಸಾಲ ಸೌಲಭ್ಯವನ್ನು ಒದಗಿಸಬೇಕು. ಇದರಿಂದ ಗೇರು ಬೆಳೆಗಾರರಿಗೆ ಸುಯೋಗ್ಯ ಹಣಕಾಸು ಸೌಲಭ್ಯ ಸಾಮಯಿಕವಾಗಿ ದೊರೆಯುತ್ತದೆ.

೭.೨.೯: ಅನೇಕ ಗೇರು ಬೆಳೆಗಾರರ ಹಾಡಿಗಳು ಮಾರುಕಟ್ಟೆಯಿಂದ ತುಂಬಾ ದೂರದಲ್ಲಿವೆ. ಕೆಲವು ಹಾಡಿಗಳಿಗೆ ರಸ್ತೆ ಸೌಕರ್ಯವೂ ಇಲ್ಲ. ಅಂತಹ ಪ್ರದೇಶಗಳಿಂದ ಮಾರುಕಟ್ಟೆಗಳಿಗೆ ಗೇರು ಬೀಜ ಸಾಗಿಸುವುದು ಬಹು ದೊಡ್ಡ ಸಮಸ್ಯೆ. ಒಂದು ನಿರ್ದಿಷ್ಟ ಸ್ಥಳದವರೆಗೆ ಗೇರು ಬೀಜವನ್ನು ತಲೆಹೊರೆಯಿಂದು, ಆ ಬಳಿಕ ಮಾರುಕಟ್ಟೆಗೆ ವಾಹನಗಳಲ್ಲಿ ಸಾಗಿಸಬೇಕಾಗುತ್ತದೆ. ಇದರಿಂದಾಗಿ ಸಾಗಾಟ ವೆಚ್ಚ ಅಧಿಕವಾಗುತ್ತದೆ. ಗೇರು ಬೀಜದ ಬೆಳೆಗಾರರು ತಮ್ಮ ಉತ್ಪನ್ನದ ಬೆಲೆಯನ್ನು ತಾವೇ ನಿರ್ಧರಿಸುವಂತಿಲ್ಲ. ಮಾರುಕಟ್ಟೆ ಬೆಲೆಗೆ ತಮ್ಮ ಉತ್ಪನ್ನವನ್ನು ಅನಿವಾರ್ಯವಾಗಿ ಮಾರಾಟ ಮಾಡಬೇಕಾಗುತ್ತದೆ. ಆ ಬೆಲೆಯಿಂದ ಮಾರಾಟ ವೆಚ್ಚವನ್ನು ಕಳೆದಾಗ ಅದರಲ್ಲಿ ಉಳಿಯುವ ಗಳಿಕೆ ತೀರಾ ಕಡಿಮೆ ಇರುತ್ತದೆ. ಅಪರಿಪೂರ್ಣ ಪೈಪೋಟಿ ಮತ್ತು ಕೆಲ ಜನ ಸ್ವಾಮ್ಯದಲ್ಲಾದರೆ ಸಾಗಾಟದ ವೆಚ್ಚವನ್ನು ಬೆಲೆಯಲ್ಲಿ ಸೇರ್ಪಡೆಗೊಳಿಸಲು ಸಾಧ್ಯ. ಗೇರು ಬೀಜದ ಮಾರಾಟ ಪರಿಪೂರ್ಣ ಪೈಪೋಟಿಗೆ ಒಂದು ಉದಾಹರಣೆಯಾಗಿದ್ದು ಸಾಗಾಟದ ವೆಚ್ಚವು ಬೆಲೆಯಲ್ಲಿ ಸೇರಿರುವುದಿಲ್ಲ. ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು ಸುಲಭವಲ್ಲ. ಗೇರು ಬೆಳೆಗಾರರು ಒಂದು ಸಹಕಾರ ಸಂಸ್ಥೆಯನ್ನು ಸ್ಥಾಪಿಸಿ ಅದು ವಾಹನಗಳನ್ನು ಖರೀದಿಸಿ ಕಡಿಮೆ ವೆಚ್ಚಕ್ಕೆ ಸಾಗಾಟ ಮಾಡಿದರೆ ಗೇರು ಬೆಳೆಗಾರರ ಸಂಕಷ್ಟ ಸ್ವಲ್ಪ ಮಟ್ಟಿಗೆ ಕಡಿಮೆಯಾಗಲಿದೆ. ಈ ಬಗ್ಗೆ ಪ್ರಯತ್ನ ಆರಂಭಿಸುವುದು ಯಾರು ಎನ್ನುವುದು ದೊಡ್ಡ ಪ್ರಶ್ನೆಯಾಗಿ ಉಳಿದಿದೆ.

೭.೨.೧೦: ಗೇರು ಕೃಷಿ ದೊಡ್ಡ ಪ್ರಮಾಣದಲ್ಲಿ ಕೈಗೊಳ್ಳಲು ಕೃಷಿ ಕಾರ್ಮಿಕರ ಕೊರತೆಯಿಂದಾಗಿ ದೊಡ್ಡ ಸಮಸ್ಯೆಯಾಗಿದೆ. ಸಂಪೂರ್ಣ ಸಾಕ್ಷರತಾ ಜಿಲ್ಲೆಯಾಗುವತ್ತ ಹೆಮ್ಮೆಯ ಹೆಜ್ಜೆಯಿಟ್ಟಿರುವ ದಕ್ಷಿಣ ಕನ್ನಡದ ಕೃಷಿ ಕ್ಷೇತ್ರವು ಕಂಡು ಕೇಳರಿಯದ ಕೃಷಿ ಕಾರ್ಮಿಕರ ಕೊರತೆಯಿಂದಾಗಿ ಹಿನ್ನಡೆ ಸಾಧಿಸುವಂತಾಗಿದೆ. ಗೇರು ಕೃಷಿ ಕೂಡಾ ಈ ಸಮಸ್ಯೆಯಿಂದ ಮುಕ್ತವಾಗಿಲ್ಲ. ಈ ಕಾರಣದಿಂದಾಗಿ ಗೇರು ಕೃಷಿಯು ಒಂದು ಕುಟುಂಬದ ಉದ್ಯಮಕ್ಕಷ್ಟೇ ಸೀಮಿತವಾಗುತ್ತದೆ. ಮಕ್ಕಳು ತೀರಾ ಚಿಕ್ಕವರೆಂದಾದರೆ

ಗಂಡ ಹೆಂಡತಿ ಇಬ್ಬರು ಕೃಷಿಯಲ್ಲಿ ತೊಡಗಿಸಿಕೊಳ್ಳಬೇಕಾಗುತ್ತದೆ. ಬೇರೆ ಕೆಲಸವನ್ನು ಅವರು ಮಾಡುತ್ತಿದ್ದಾರೆ ಎಂದಾದರೆ ಗೇರು ಕೃಷಿ ಅಸಡ್ಡೆಗೆ ಒಳಗಾಗುತ್ತದೆ. ಗೇರು ಬೀಜ ಯಾರ್‍ಯಾರದೋ ಪಾಲಾಗುತ್ತದೆ. ಹಾಗಂತ ಕೇವಲ ಗೇರು ಕೃಷಿಯಲ್ಲಿ ಮಾತ್ರವೇ ತಮ್ಮನ್ನು ತೊಡಗಿಸಿಕೊಂಡರೆ ಜೀವನೋಪಾಯಕ್ಕೆ ಅದರಿಂದ ಬರುವ ಗಳಿಕೆ ಖಂಡಿತ ಸಾಕಾಗಲು ಸಾಧ್ಯವಿಲ್ಲ. ಚಿಕ್ಕ ಹಿಡುವಳಿಯೊಂದಿದ್ದು ಇತರ ಬೆಳೆಗಳೊಂದಿಗೆ ಗೇರು ಕೃಷಿ ಮಾಡಿದರೆ ಮಾತ್ರ ಜೀವನ ಸಾಗಿಸಲು ಸಾಧ್ಯ. ಇತ್ತೀಚೆಗೆ ಇಂತಹ ಕುಂಟುಂಬಗಳ ಸಂಖ್ಯೆ ಇಳಿಮುಖವಾಗುತ್ತಿದ್ದು ಗೇರು ಕೃಷಿ ಸಂಕಷ್ಟದಲ್ಲಿದೆ.

೭.೨.೧೧: ಗೇರು ಮಾರುಕಟ್ಟೆಯಲ್ಲಿರುವ ಮಧ್ಯವರ್ತಿಗಳು ಶ್ರಮವಿಲ್ಲದೆ ಲಾಭ ಗಳಿಸುತ್ತಾರೆ. ಅವರು ಬೇಕೆಂದೇ ಬೆಲೆಗಳನ್ನು ಇಳಿಸಿ ಗೇರು ಉತ್ಪಾದಕರಿಂದ ಗೇರು ಬೀಜ ಕೊಳ್ಳುತ್ತಾರೆ. ಗೇರು ಸಂಸ್ಕರಣಾ ಘಟಕಗಳಿಗೆ ಅಧಿಕ ಬೆಲೆಗೆ ಮಾರಿ ಲಾಭ ಮಾಡಿಕೊಳ್ಳುತ್ತಾರೆ. ಇದಕ್ಕೆ ಉತ್ಪಾದಕರ ಮತ್ತು ಸಂಸ್ಕರಣಾ ಘಟಕಗಳ ನಡುವೆ ನೇರ ಸಂಪರ್ಕ ಏರ್ಪಡಿಸುವುದೇ ಸೂಕ್ತ ಪರಿಹಾರ. ಕೆಲವು ಉತ್ಪಾದಕರು ಹೀಗೆ ನೇರವಾಗಿ ಗೇರು ಸಂಸ್ಕರಣಾ ಘಟಕಗಳೊಡನೆ ಸಂಪರ್ಕ ಇರಿಸಿಕೊಂಡು ನೇರ ಮಾರಾಟ ಮಾಡಿ ಅಧಿಕ ಲಾಭ ಗಳಿಸುತ್ತಾರೆ. ಆದರೆ ಎಲ್ಲಾ ಗೇರು ಉತ್ಪಾದಕರು ಹಾಗೆ ನೇರವಾಗಿ ಗೇರು ಸಂಸ್ಕರಣಾ ಘಟಕಕ್ಕೆ ಮಾರಾಟ ಮಾಡಲು ಸಾಧ್ಯವಾಗುವುದಿಲ್ಲ. ಸಣ್ಣ ಪ್ರಮಾಣದಲ್ಲಿ ಗೇರು ಬೀಜ ಬೆಳೆಯುವವರಂತೂ ನೇರವಾಗಿ ಮಧ್ಯವರ್ತಿಗಳಿಗೆ ಮಾರಾಟ ಮಾಡಬೇಕಾಗುತ್ತದೆ. ಗೇರು ಬೆಳೆಗಾರರ ಸಹಕಾರ ಸಂಘದ ರಚನೆಯಿಂದ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು. ಬೆಳೆಗಾರರೆಲ್ಲರೂ ಸಹಕಾರಿ ಸಂಘದ ಮೂಲಕ ಸಂಸ್ಕರಣಾ ಘಟಕಗಳಿಗೆ ಗೇರು ಬೀಜ ಮಾರಾಟ ಮಾಡಲು ಸಾಧ್ಯವಾದರೆ ಗೇರು ಬೆಳೆಗಾರರು ಶೋಷಣೆಗೆ ಒಳಗಾಗುವುದು ತಪ್ಪುತ್ತದೆ. ಗೇರು ಕೂಡಾ ಒಂದು ಆರ್ಥಿಕ ಲಾಭದಾಯಕ ಬೆಳೆ ಎನಿಸಿಕೊಳ್ಳುತ್ತದೆ.

೭.೨.೧೨: ಗೇರು ಹಣ್ಣುಗಳ ಬಳಕೆಯಾಗದೆ ಅವು ವ್ಯರ್ಥವಾಗಿ ಹಾಳಾಗುತ್ತಿರುವುದು ಒಂದು ವಿಷಾದನೀಯ ವಿದ್ಯಮಾನ. ಗೇರು ಹಣ್ಣು ಅತ್ಯಂತ ಪುಷ್ಟಿದಾಯಕವಾದುದು. ಅದರಿಂದ ಮಾದಕವಲ್ಲದ ಪೇಯವನ್ನು ತಯಾರಿಸಿ ಮಾರಾಟ ಮಾಡಿ ಲಾಭ ಗಳಿಸಬಹುದು ಎಂಬುದನ್ನು ಗೋವಾ ಅದಾಗಲೇ ಕಂಡುಕೊಂಡಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇನ್ನೂ ಗೇರು ಹಣ್ಣು ಆರ್ಥಿಕವಾಗಿ ಬಳಕೆಯಾಗುತ್ತಿಲ್ಲ. ತಾಲೂಕಿಗೊಂದು ಗೇರು ಹಣ್ಣಿನ ರಸ ಉತ್ಪಾದನೆ ಮಾಡುವ ಮತ್ತು ಗೇರು ಹಣ್ಣಿನ ಜಾಮು ತಯಾರಿಸುವ ಘಟಕ ರಚಿಸಿ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಿದೆ. ಗ್ರಾಮಗಳಿಂದ ಪ್ರತೀ ದಿನ ಈ ಘಟಕಕ್ಕೆ ಹಣ್ಣು ಪೂರೈಕೆಯಾದರೆ ವರ್ಷದ ಮೂರು ತಿಂಗಳು ಘಟಕವು ಕಾರ್ಯಾಚರಿಸಬಹುದು. ಇದೊಂದು ಋತು ಸಂಬಂಧೀ ಚಟುವಟಿಕೆಯಾಗಿಬಿಡುತ್ತದೆ., ಅದೇ ಘಟಕ ಹಲಸಿನ ಹಣ್ಣಿನ ಮತ್ತು ಅನಾನಸಿನ ಜಾಮು ತಯಾರಿಸಿದರೆ ಅದರ ಚಟುವಟಿಕೆಯನ್ನು ಫೆಬ್ರವರಿಯಿಂದ ಸೆಪ್ಟೆಂಬರ್‌ವರೆಗೆ ವಿಸ್ತರಿಸಲು ಸಾಧ್ಯವಿದೆ.

೭.೨.೧೩ ಗೇರು ಕೃಷಿ ಅಭಿವೃದ್ಧಿಗಾಗಿ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಪ್ರತ್ಯೇಕ ಹಣಕಾಸು ನೆರವಿನ ಯೋಜನೆ ಹಮ್ಮಿಕೊಂಡಿದೆ. ರಾಷ್ಟ್ರೀಯ ತೋಟಗಾರಿಕಾ ಮಿಷನ್‌ನಡಿಯಲ್ಲಿಯೂ ಗೇರು ಕೃಷಿಗಾಗಿ ಸಬ್ಸಿಡಿ ಮತ್ತಿತರ ಸಾಲ ಸೌಲಭ್ಯಗಳು ಜಾರಿಯಾಗಿವೆ. ಆದರೆ ಈ ಯೋಜನೆಗಳ ಫಲಶ್ರುತಿ ಗೇರು ಕೃಷಿಕರಿಗೆ ತಲುಪುವಲ್ಲಿ ವಿಫಲವಾಗಿವೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳ ನಡುವಿನ ತಿಕ್ಕಾಟ, ಸರ್ಕಾರದ ಹಣಕಾಸು ಮುಗ್ಗಟ್ಟು, ರಾಜಕೀಯ ಇಚ್ಛಾಶಕ್ತಿಯ ಕೊರತೆ ಇತ್ಯಾದಿ ಕಾರಣಗಳಿಂದಾಗಿ ಯೋಜನೆ ಹಳಿ ತಪ್ಪುತ್ತದೆ. ಇವುಗಳೊಂದಿಗೆ ರೈತರ ಅನಾಸಕ್ತಿ ನಿಧಾನ ಧೋರಣೆಯೂ ಸಮಸ್ಯೆಗಳನ್ನು ಮತ್ತಷ್ಟು ಉಲ್ಬಣಗೊಳಿಸುತ್ತಿವೆ. ನೆರೆ ರಾಜ್ಯ ಮಹಾರಾಷ್ಟ್ರದ ಸಿಂಧದುರ್ಗ ಜಿಲ್ಲೆಯಲ್ಲಿ ಈ ಯೋಜನೆಯ

ಯಶಸ್ವಿ ಅನುಷ್ಠಾನವಾಗಿದ್ದು, ಕರ್ನಾಟಕದ ಗೇರು ಕೃಷಿಕರು ಇದರಿಂದ ವಂಚಿತರಾಗಿದ್ದಾರೆ. ಸರಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಗೇರು ಬೆಳೆಗಾರರು ಒಂದು ಒಕ್ಕೂಟವನ್ನು ರಚಿಸಿಕೊಂಡು ಹಕ್ಕೊತ್ತಾಯವನ್ನು ಸಲ್ಲಿಸಬೇಕು.

೭.೨.೧೪: ಗೇರು ಸಸಿಗಳಿಗೆ ಕೀಟ ನಾಶಕಗಳ ಸಿಂಪಡಣೆಯಿಂದ ಆದ ಅನಾಹುತಗಳಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ೩೨೯೬ ಎಂಡೋ ಬಾಧಿತರು ತುತ್ತಾಗಿದ್ದಾರೆಂದು ವರದಿಗಳು ತಿಳಿಸುತ್ತವೆ. ಇದರಿಂದಾಗಿ ಈಗಾಗಲೇ ರಾಜ್ಯದಲ್ಲಿ ಒಟ್ಟು ೫೧ ಜನ ಮೃತರಾಗಿದ್ದು ಅವರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯವರು ೪೩ ಮಂದಿ ಎಂದು ದಾಖಲಿಸಲಾಗಿದೆ. ಬದುಕಿ ಉಳಿದವರ ಸ್ಥಿತಿ ಚಿಂತಾಜನಕವಾಗಿದ್ದು ಅವರ ಬದುಕು ನರಕ ಸದೃಶವಾಗಿದೆ. ದೃಷ್ಟಿಯನ್ನು ಕಳೆದುಕೊಂಡ, ಅಂಗಾಂಗಳ ಶಕ್ತಿಯನ್ನು ಕಳೆದುಕೊಂಡ, ಬುದ್ಧಿಮಾಂದ್ಯ ಯುವಕ ಯುವತಿಯರ ಹಾಗೂ ಹಾಸಿಗೆ ಬಿಟ್ಟೇಳಲಾರದ ಕಂದಮ್ಮಗಳ ದುರವಸ್ಥೆ ಕಾಣುವಾಗ ಕರುಳು ಕಿತ್ತು ಬರುತ್ತದೆ. ಎಂಡೋ ಸಲ್ಫಾನ್‌ನ ಬದಲು ಬಳಸಬಹುದೆಂದು ಹೇಳಲಾಗುತ್ತಿರುವ ಕೀಟ ನಾಶಕಗಳು ಕೂಡಾ ಅತ್ಯಂತ ಅಪಾಯಕಾರಿಯಾದವುಗಳು. ಹಾಗಾದರೆ ಗೇರು ಗಿಡಗಳನ್ನು ಕ್ರಿಮಿ ಕೀಟಗಳ ಬಾಧೆಯಿಂದ ರಕ್ಷಿಸುವುದು ಹೇಗೆ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಹಸಿರು ಕ್ರಾಂತಿಗೆ ಮೊದಲು ನಾವು ಕೃಷಿಯಲ್ಲಿ ಯಾವ ಕೀಟ ನಾಶಕಗಳನ್ನು ಬಳಸುತ್ತಿದ್ದೆವು? ಆದರೂ ಕೃಷಿ ಆಗುತ್ತಿತ್ತಲ್ಲ? ಏಕೆಂದರೆ ಆಗ ಕೀಟಗಳನ್ನು ತಿಂದು ಬದುಕುವ ಪರಾನ್ನ ಜೀವಿ (Parasites) ಗಳಿದ್ದವು. ಕೀಟನಾಶಕಗಳ ಸಿಂಪಡಣೆಯಿಂದ ಅಂತಹ ಪರಾನ್ನ ಜೀವಿಗಳು ನಾಶವಾಗಿ ಹೋದವು. ಕ್ರಿಮಿ ಕೀಟಗಳು ಕೀಟನಾಶಕಗಳನ್ನು ಎದುರಿಸಬಲ್ಲ ಪ್ರತಿರೋಧ ಶಕ್ತಿಯನ್ನು ಬೆಳೆಸಿಕೊಂಡವು. ಕೀಟ ನಾಶಕಗಳ ಸಿಂಪಡಣೆಯಿಂದ ತರಕಾರಿ, ಹಣ್ಣು ಹಂಪಲು, ಕುಡಿಯುವ ನೀರು ಎಲ್ಲವೂ ವಿಷಯುಕ್ತವಾಗಿ ಬಿಟ್ಟವು. ಔಷಧಿ ಇಲ್ಲದ ಕಾಯಿಲೆಗಳಿಂದ ಪ್ರಾಣಿ ಸಂಕುಲ ಕಂಗೆಟ್ಟಿತು. ಇಂತಹ ಕೀಟ ನಾಶಕಗಳು ಖಂಡಿತ ನಮಗೆ ಬೇಕಾಗಿಲ್ಲ. ಜೀವ ವಿಜ್ಞಾನಿಗಳಿಗೆ ಇನ್ನಷ್ಟು ಉತ್ತೇಜನ ನೀಡಿ ಅವರು ಪರಾನ್ನ ಜೀವಿಗಳನ್ನು ಅಭಿವೃದ್ಧಿಪಡಿಸಲು ಸಾಧ್ಯವಾದರೆ ಎಂಡೋ ಸಲ್ಫಾನ್ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಿದೆ. ಇದರೊಂದಿಗೆ ಈಗಾಗಲೇ ಎಂಡೋ ಸಲ್ಫಾನ್ ಪೀಡಿತರಾಗಿ ವಿಕಲ ಚೇತನರಾಗಿರುವ ನತದೃಷ್ಟರಿಗೆ ದೊಡ್ಡ ಮೊತ್ತದ ಪರಿಹಾರವನ್ನು ವಿತರಿಸಬೇಕಾದ ಅಗತ್ಯವಿದೆ.

೭.೩. ಗೇರು ಬೀಜ ಮಾರಾಟಗಾರರ ಸಮಸ್ಯೆಗಳ ಅಧ್ಯಯನದ ಫಲಿತಗಳು

ಗೇರು ಬೀಜವನ್ನು ಬೆಳೆಯುವ ರೈತ ಅದನ್ನು ಮಾರಾಟ ಮಾಡುವಾಗ ಕೆಲವು ವಿಶಿಷ್ಟ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅವುಗಳಲ್ಲಿ ಕೆಲವನ್ನು ಗೇರು ಬೀಜ ಉತ್ಪಾದಕರ ಸಮಸ್ಯೆ ಎಂಬ ಭಾಗದಲ್ಲಿ ವಿಶ್ಲೇಷಿಸಿ ಅವುಗಳ ಪರಿಹಾರಕ್ಕೆ ಸಲಹೆಗಳನ್ನು ನೀಡಲಾಗಿದೆ. ಉಳಿದ ಕೆಲವು ಸಮಸ್ಯೆಗಳನ್ನು ಇಲ್ಲಿ ದಾಖಲಿಸಲಾಗಿದೆ.

೭.೩.೧: ಗೇರು ಬೀಜದ ಮಾರುಕಟ್ಟೆ ಅಸಂಘಟಿತವಾಗಿದೆ. ಗೇರು ಬೀಜ ಕೊಂಡುಕೊಳ್ಳಲು ಪ್ರತ್ಯೇಕ ಮಾರುಕಟ್ಟೆಯಾಗಲೀ ಪ್ರತ್ಯೇಕ ವ್ಯಾಪಾರಿಗಳಾಗಲೀ ಇರುವುದಿಲ್ಲ. ತೋಟಗಾರಿಕಾ ಉತ್ಪತ್ತಿಗಳಾದ ಅಡಿಕೆ, ಕೊಕ್ಕೋ, ತೆಂಗು, ಕಾಳುಮೆಣಸು ಇತ್ಯಾದಿಗಳನ್ನು ಕೊಳ್ಳುವವರು ಗೇರು ಬೀಜವನ್ನು ಕೂಡಾ ಖರೀದಿಸುತ್ತಾರೆ. ಗೇರು ಬೀಜದ ವ್ಯಾಪಾರವು ವರ್ಷದಲ್ಲಿ ಮೂರು ನಾಲ್ಕು ತಿಂಗಳುಗಳ ಕಾಲ ನಡೆಯುತ್ತದೆ. ಆದುದರಿಂದ ಖರೀದಿಸುವವರು ಅದನ್ನು ಒಂದು ಪ್ರತ್ಯೇಕ ಉತ್ಪತ್ತಿಯೆಂದು ಭಾವಿಸುವುದು ಇಲ್ಲ. ಗೇರು ಬೀಜವನ್ನು ಮಾತ್ರವೇ ಕೊಳ್ಳುವ ಪ್ರತ್ಯೇಕ ಮಾರುಕಟ್ಟೆ ಇಲ್ಲದಿರುವುದು ಒಂದು ಕೊರತೆ. ಇದರಿಂದಾಗಿ ಬೆಳೆಗಾರನು ಒಂದು ರೀತಿಯ ಕೀಳರಿಮೆಯಿಂದ ಬಳಲುವಂತಾಗುತ್ತದೆ. ಅಸಂಘಟಿತ ಮಾರುಕಟ್ಟೆಯಲ್ಲಿ ರೈತರು ಸುಲಭವಾಗಿ ಶೋಷಣೆಗೆ ಒಳಗಾಗುತ್ತಾರೆ. ಖರೀದಿಗಾರರು ಹೇಳಿದ ಬೆಲೆಗೆ ಗೇರು ಬೀಜವನ್ನು ಮಾರಾಟ ಮಾಡಬೇಕಾದ ಅನಿವಾರ್ಯತೆಗೆ ಅವರು ಸಿಲುಕುತ್ತಾರೆ.

೭.೩.೨: ದ. ಕ. ಜಿಲ್ಲೆಯಲ್ಲಿ ಗೇರು ಬೀಜ ಬೆಳೆಯುವವರಲ್ಲಿ ಬಹುತೇಕರು ಸಣ್ಣ ಮತ್ತು ಅಂಚಿನ ರೈತರಾಗಿರುತ್ತಾರೆ. ಅವರು ಹೊಂದಿರುವ ಭೂಮಿಯ ಪ್ರಮಾಣ ತೀರಾ ಕಡಿಮೆ. ಸಹಜವಾಗಿ ಅವರು ಬೆಳೆಯುವ ಗೇರು ಬೀಜದ ಪ್ರಮಾಣವು ಕಡಿಮೆ. ಕಡಿಮೆ ಪೂರೈಕೆ ಮಾಡುವವರು ಮಾರುಕಟ್ಟೆಯಲ್ಲಿ ತಮಗೆ ಬೇಕಾದ ವಾತಾವರಣವನ್ನು ನಿರ್ಮಿಸಲು ಸಾಧ್ಯವಿಲ್ಲ. ಗೇರು ಕೃಷಿಕರು ಇದುವರೆಗೆ ಒಗ್ಗೂಡಿಲ್ಲ. ಆದುದರಿಂದ ಅವರ ಚೌಕಾಶಿ ಸಾಮರ್ಥ್ಯ ಬಹಳ ದುರ್ಬಲವಾಗಿದೆ. ಉತ್ಪತ್ತಿ ಕಡಿಮೆ ಇರುವುದರಿಂದ ಮತ್ತು ಒಗ್ಗಟ್ಟಿಲ್ಲದಿರುವುದರಿಂದ ಬೆಲೆ ನಿರ್ಧಾರದಲ್ಲಿ ಯಾವುದೇ ನಿರ್ಣಾಯಕ ಪಾತ್ರ ವಹಿಸಲು ಅವರಿಂದ ಸಾಧ್ಯವಾಗುತ್ತಿಲ್ಲ. ಅವರ ಆದಾಯ ಕಡಿಮೆ ಇರುವುದರಿಂದ ಅನಿವಾರ್ಯವಾಗಿ ಅವರು ಸಾಲದ ಸುಳಿಯಲ್ಲಿ ಸಿಕ್ಕಿರುತ್ತಾರೆ. ಅದರಿಂದ ಹೊರಬರಲು ಅವರು ತಮ್ಮ ಕೃಷಿ ಉತ್ಪನ್ನಗಳನ್ನು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ, ಎಷ್ಟು ಸಿಗುತ್ತದೋ ಅಷ್ಟು ಬೆಲೆಗೆ ಮಾರಾಟ ಮಾಡಿ ಬಿಡುತ್ತಾರೆ. ಕೆಲವು ಹಳ್ಳಿಗಳಿಗೆ ಸಣ್ಣ ಖರೀದಿಗಾರರು ಬಂದು ಕಡಿಮೆ ಕ್ರಯಕ್ಕೆ ಗೇರು ಬೀಜವನ್ನು ಕೊಳ್ಳುವುದಿದೆ. ಇನ್ನು ಕೆಲವು ಖರೀದಿಗಾರರು ಬೆಳೆಗಾರರಿಗೆ ಸಾಲ ಕೊಟ್ಟು ಗೇರು ಬೀಜದ ಕೊಯಿಲು ಆದ ತಕ್ಷಣವೇ ಬೀಜವನ್ನು ಕೊಳ್ಳುವುದಿದೆ. ಇಂತಹ ಸಂದರ್ಭದಲ್ಲಿ ಗೇರು ಬೆಳೆಗಾರರಿಗೆ ನ್ಯಾಯವಾದ ಬೆಲೆ ಸಿಗಲು ಸಾಧ್ಯವೇ ಇಲ್ಲ.

೭.೩.೩ ಸಣ್ಣ ಹಾಗೂ ಅಂಚಿನ ರೈತರು ತಾವು ಬೆಳೆದ ಗೇರು ಬೀಜವನ್ನು ಹಳ್ಳಿಯಲ್ಲೇ ಇರುವ ಖರೀದಿದಾರರಿಗೆ ಅಥವಾ ಹಳ್ಳಿಗೆ ಬರುವ ಸಂಚಾರಿ ಖರೀದಿಗಾರರಿಗೆ ಮಾರಾಟ ಮಾಡಲು ಇನ್ನೊಂದು ಪ್ರಬಲ ಕಾರಣವಿದೆ. ಅದು ಜಿಲ್ಲೆಯ ಗ್ರಾಮೀಣ ರಸ್ತೆಗಳ ದುರವಸ್ಥೆ. ಕೆಲವು ಹಳ್ಳಿಗಳಿಗೆ ರಸ್ತೆಯೂ ಇರುವುದಿಲ್ಲ. ಈ ಜಿಲ್ಲೆಯ ಗ್ರಾಮೀಣ ರಸ್ತೆಗಳ ಅವಸ್ಥೆ ಎಂದೂ ಮುಗಿಯದ ಗೋಳು. ರಸ್ತೆ ಕಾಮಗಾರಿ ನಡೆಯುವಾಗ ಅದರ ಬಗ್ಗೆ ಊರವರಾಗಲೀ, ಜನಪ್ರತಿನಿಧಿಗಳಾಗಲೀ ಯಾವುದೇ ಕಾಳಜಿ ವಹಿಸುವುದಿಲ್ಲ. ಆದುದರಿಂದ ಕಾಮಗಾರಿ ನಡೆಸುವವರು ಕಳಪೆ ರಸ್ತೆಗಳನ್ನು ನಿರ್ಮಿಸುತ್ತಾರೆ. ಅಂತಹ ರಸ್ತೆಗಳು ಮೊದಲನೆಯ ಮಳೆಗೆ ಶಿಥಿಲಗೊಳ್ಳುತ್ತವೆ. ಮಳೆಗಾಲದಲ್ಲಿ ರೋಡು ಯಾವುದು ತೋಡು ಯಾವುದು ಎಂದು ನಿರ್ಧರಿಸಲಾಗದ ಪರಿಸ್ಥಿತಿ ಉದ್ಭವವಾಗುತ್ತದೆ. ಮರು ಬೇಸಿಗೆಯಲ್ಲಿ ಅಂತಹ ರಸ್ತೆಗಳನ್ನು ವೈಜ್ಞಾನಿಕವಾಗಿ ದುರಸ್ತಿ ಮಾಡುವುದಿಲ್ಲ. ಡಾಮರು ರಸ್ತೆಯಲ್ಲಿ ಹೊಂಡ ಬಿದ್ದರೆ ಅದನ್ನು ಮಣ್ಣಿನಿಂದ ಮುಚ್ಚಿ ವಾಯುಮಾಲಿನ್ಯಕ್ಕೆ ಕಾರಣರಾಗುತ್ತಾರೆ. ಇಂತಹ ರಸ್ತೆಗಳಲ್ಲಿ ರೈತರ ಗೇರು ಬೀಜವನ್ನು ಮಾರುಕಟ್ಟೆಗೆ ಸಾಗಿಸಬಲ್ಲ ವಾಹನಗಳು ಬಹುತೇಕವಾಗಿ ಬರುವುದಿಲ್ಲ. ಹಾಗಾಗಿ ಸಿಕ್ಕಿದ್ದು ಭಾಗ್ಯ ಎಂದುಕೊಂಡು ಗೇರು ಬೀಜ ಬೆಳೆಗಾರರು ಸ್ಥಳೀಯ ವ್ಯಾಪಾರಿಗಳಿಗೆ ತಮ್ಮ ಉತ್ಪತ್ತಿಯನ್ನು ಮಾರಿಬಿಡುತ್ತಾರೆ. ರೈತರ ಅನಿವಾರ್ಯ ಪರಿಸ್ಥಿತಿಯನ್ನು ಚೆನ್ನಾಗಿ ಬಲ್ಲ ಸ್ಥಳೀಯ ವ್ಯಾಪಾರಿಗಳು ರೈತರ ಅಸಾಹಯಕತೆಯ ದುರ್ಲಾಭವನ್ನು ಪಡೆದುಕೊಳ್ಳುತ್ತಾರೆ.

೭.೩.೪: ದಕ್ಷಿಣ ಕನ್ನಡ ಜಿಲ್ಲೆಯ ಗೇರು ಬೆಳೆಗಾರರು ಪೂರೈಕೆ ಮಾಡುವ ಗೇರು ಬೀಜದ ಗುಣಮಟ್ಟ ಕಡಿಮೆ ಇರುತ್ತದೆ. ಬಹುತೇಕ ರೈತರು ಗೇರು ಬೀಜ ಪೂರ್ತಿ ಬಲಿಯುವವರೆಗೆ ಕಾಯದೆ ಬೇಗನೆ ಬೀಜವನ್ನು ಕಿತ್ತು ಬಿಡುತ್ತಾರೆ. ಅಂತಹ ಗೇರು ಬೀಜದ ಗುಣಮಟ್ಟ ಕಡಿಮೆ ಇರುತ್ತದೆ. ಅದಕ್ಕೆ ಸಿಗುವ ಬೆಲೆಯೂ ಕಡಿಮೆ ಇರುತ್ತದೆ. ಈ ವಾಸ್ತವಿಕತೆ ಗೇರುಬೀಜ ಬೆಳೆಯುವ ಅಸಂಖ್ಯಾತ ಸಣ್ಣ ಮತ್ತು ಅಂಚಿನ ರೈತರಿಗೆ ಗೊತ್ತಿಲ್ಲವೆಂದಲ್ಲ. ಅವರ ಅಸಹಾಯಕ ಅನಿವಾರ್ಯತೆ ಅವರಿಂದ ಹಾಗೆ ಮಾಡಿಸುತ್ತದೆ. ಅವರು ಗೇರು ಬೀಜ ಬೆಳೆಯುವ ಪ್ರದೇಶ ಅವರ ಮನೆಗಳಿಂದ ಸ್ವಲ್ಪ ದೂರದಲ್ಲಿರುತ್ತದೆ. ಕೆಲವೊಮ್ಮೆ ಊರ ಕಾಲುದಾರಿಯು ಅವರ ಗೇರು ಹಾಡಿಗಳ ಮಧ್ಯದಲ್ಲೇ ಹಾದು ಹೋಗುತ್ತದೆ. ಹಾಗೆ ಹೋಗುವ ಹಾದಿ ಹೋಕರು ಗೇರು ಬೀಜವನ್ನು ಕಿತ್ತುಕೊಂಡು ಹೋಗುವುದಿದೆ. ಕೆಲವೊಮ್ಮೆ ಕೆಲವರು ಗೇರು ಬೀಜ ಕದಿಯಲೆಂದೇ ದಾರಿ ಹೋಕರಂತೆ ನಟಿಸುವುದಿದೆ. ಹಣ್ಣು ತಿನ್ನುವ ಮಂಗ, ಅಳಿಲುಗಳು ಬೀಜಗಳನ್ನು ಎತ್ತೆತ್ತಲೋ ಎಸೆಯುತ್ತವೆ. ಬಿದ್ದ ಹಣ್ಣುಗಳನ್ನು ತಿನ್ನುವ

ಜಾನುವಾರುಗಳು ಗೇರು ಬೀಜವನ್ನು ಕಚ್ಚಿ ನಿರುಪಯುಕ್ತವನ್ನಾಗಿ ಮಾಡುತ್ತವೆ. ಅಕ್ಕ ಪಕ್ಕದ ಮನೆಗಳ ಮಕ್ಕಳು ಗೇರು ಹಾಡಿಗೆ ನುಗ್ಗಿ ಬೀಜ ಕದಿಯುವುದು ತೀರಾ ಸಾಮಾನ್ಯ. ಹಾಗಾಗಿ ರೈತರು ಪೂರ್ತಿ ಬಲಿಯದ ಗೇರು ಬೀಜಗಳನ್ನು ಕಿತ್ತು ಮಾರಾಟ ಮಾಡಿ ಬಿಡುತ್ತಾರೆ. ಕಡಿಮೆ ಗುಣಮಟ್ಟದ ಈ ಬೀಜಗಳಿಗೆ ಸಿಗುವ ಬೆಲೆ ತೀರಾ ಕಡಿಮೆ ಇರುತ್ತದೆ.

೭.೩.೫ : ದೊಡ್ಡ ಪ್ರಮಾಣದಲ್ಲಿ ಗೇರು ಬೀಜ ಬೆಳೆಯುವ ರೈತರು ತಾವೇ ಸ್ವತಃ ಗೇರು ಬೀಜ ಬೆಳೆಯ ಸಂಪೂರ್ಣ ಕೆಲಸಕಾರ್ಯ ಮಾಡಲು ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಅವರು ಕೂಲಿಯಾಳುಗಳನ್ನು ನೇಮಕ ಮಾಡಬೇಕಾಗುತ್ತದೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಈಗ ಕೂಲಿ ಕಾರ್ಮಿಕರ ಕೊರತೆ ಇದೆ. ಈಗಿನ ತಲೆಮಾರು ಸಂಪೂರ್ಣವಾಗಿ ವಿದ್ಯಾಭ್ಯಾಸದತ್ತ ಮುಖ ಮಾಡಿರುವುದು ಮತ್ತು ಯುವ ಜನತೆ ಪಟ್ಟಣಗಳಿಗೆ ವಲಸೆ ಹೋಗಿರುವುದು ಇದಕ್ಕೆ ಮುಖ್ಯ ಕಾರಣ. ಕೆಲಸದಾಳುಗಳು ಸಿಗದ ಸಮಸ್ಯೆ ಒಂದು ಕಡೆಯಾದರೆ ಗೇರು ಬೀಜದ ಕಳ್ಳತನದ ಭೀತಿ ಮತ್ತೊಂದೆಡೆ. ಈ ಸಮಸ್ಯೆಗಳ ಪರಿಹಾರಕ್ಕಾಗಿ ದೊಡ್ಡ ಪ್ರಮಾಣದ ಗೇರು ಬೆಳೆಗಾರರು ಗುತ್ತಿಗೆದಾರರಿಗೆ ಕೊಯ್ಲು ಪೂರ್ವದಲ್ಲೇ ತಮ್ಮ ಗೇರು ಹಾಡಿಗಳನ್ನು ಗುತ್ತಿಗೆಗೆ ವಹಿಸಿಕೊಟ್ಟು ಬಿಡುತ್ತಾರೆ. ಗೇರು ಹಾಡಿಗಳ ಫಸಲನ್ನು ಮೇಲ್ನೋಟಕ್ಕೆ ಕಣ್ಣಂದಾಜು ಮಾಡಿ ಗುತ್ತಿಗೆ ಒಪ್ಪಂದ ಮಾಡಿಕೊಳ್ಳಲಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಗೇರು ಬೀಜ ಬೆಳೆಯುವವರಿಗೆ ನ್ಯಾಯ ದೊರೆಯುವುದಿಲ್ಲ. ಹಾಗಂತ ಅವರು ಬೇರೆನನ್ನೂ ಮಾಡಲಾಗದ ಅಸಹಾಯಕ ಪರಿಸ್ಥಿತಿಯಲ್ಲಿರುತ್ತಾರೆ. ಇಂತಹ ಪರಿಸ್ಥಿತಿಯ ದುರ್ಲಾಭವನ್ನು ಗುತ್ತಿಗೆದಾರರು ಚೆನ್ನಾಗಿಯೇ ಎತ್ತಿಕೊಳ್ಳುತ್ತಾರೆ.

೭.೪ ಗೇರುಬೀಜ ಮಾರಾಟ ಸಮಸ್ಯೆಗಳ ಪರಿಹಾರಕ್ಕೆ ಸಲಹೆಗಳು

೭.೪.೧: ಗೇರು ಬೀಜದ ಮಾರುಕಟ್ಟೆ ಅಸಂಘಟಿತವಾಗಿರುವುದು ಬಲು ದೊಡ್ಡ ಸಮಸ್ಯೆ. ಹಾಗೆ ನೋಡಿದರೆ ಗೇರು ಬೀಜದ ಮಾರುಕಟ್ಟೆ ಎಂಬುದೊಂದಿಲ್ಲ. ತೋಟಗಾರಿಕಾ ಅಥವಾ ಕೃಷಿ ಉತ್ಪನ್ನಗಳ ಜೊತೆಯಲ್ಲೇ ಗೇರು ಬೀಜವನ್ನುಕೊಳ್ಳಲಾಗುತ್ತದೆ. ಅದರ ಪೂರೈಕೆ ಮೇಲೆ ಪೂರೈಕೆದಾರರಿಗೆ ಯಾವ ಹತೋಟಿಯೂ ಇಲ್ಲದಿರುವುದು ಗೇರು ಬೀಜದ ಮಾರುಕಟ್ಟೆ ಅಸಂಘಟಿತವಾಗಿರಲು ಕಾರಣ. ಪರಿಪೂರ್ಣ ಪೈಪೋಟಿಯನ್ನು ಹೊರತು ಪಡಿಸಿದರೆ ಬೇರಾವುದೇ ಮಾರುಕಟ್ಟೆಯಲ್ಲಿ ಪೂರೈಕೆದಾರ ಇಂತಹ ದಯಾನೀಯ ಅವಸ್ಥೆಯಲ್ಲಿ ಇರುವುದಿಲ್ಲ. ಈ ಸಮಸ್ಯೆಗೆ ಪರಿಹಾರ ಗೇರು ಬೀಜ ಬೆಳೆಗಾರರ ಸಹಕಾರಿ ಸಂಸ್ಥೆಯೊಂದನ್ನು ಸ್ಥಾಪಿಸಿ ಅದು ಒಂದು ನಿಗದಿತ ಬೆಲೆಗೆ ಗೇರು ಬೀಜವನ್ನು ಕೊಳ್ಳುವಂತೆ ಮಾಡುವುದು. ಗೇರು ಬೆಳೆಗಾರರಲ್ಲಿ ಇತರ ಸಹಕಾರಿ ಸಂಘದ ಸದಸ್ಯತ್ವ ಪಡೆದಿರುವವರು ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಗೇರು ಬೆಳೆಗಾರರ ಸಹಕಾರಿ ಸಂಘವು ಒಂದು ವಿನೂತನ ಕಲ್ಪನೆ. ಈ ಬಗ್ಗೆ ಇದುವರೆಗೆ ಯಾವುದೇ ಪ್ರಯತ್ನ ನಡೆದಂತೆ ಕಂಡುಬರುವುದಿಲ್ಲ. ದ. ಕ. ಜಿಲ್ಲೆಯಲ್ಲಿ ಸಹಕಾರಿ ಚಳುವಳಿ ಯಶಸ್ವಿಯಾಗಿದೆ. ಈ ಜಿಲ್ಲೆಯ ಸಹಕಾರಿ ಪಿತಾಮಹ ಮೊಳಹಳ್ಳಿ ಶಿವರಾಯರು ಹಾಕಿದ ಅಸ್ತಿಭಾರ ತುಂಬಾ ಗಟ್ಟಿಯಾಗಿಯೇ ಇದೆ. ಗೇರು ಬೆಳೆಗಾರರ ಸಂಘವು ಪ್ರತಿ ತಾಲೂಕಿಗೊಂದರಂತೆ ಸ್ಥಾಪನೆಯಾಗಲೇ ಬೇಕಾದ ತುರ್ತು ಅವಶ್ಯಕತೆ ಇದೆ.

೭.೪.೨: ಈ ಜಿಲ್ಲೆಯಲ್ಲಿ ಗೇರು ಬೆಳೆಯುವವರಲ್ಲಿ ಬಹುತೇಕರು ಸಣ್ಣ ಮತ್ತು ಅಂಚಿನ ರೈತರು. ಅವರು ಗೇರು ಬೆಳೆಯುವ ಭೂಮಿಯ ವಿಸ್ತೀರ್ಣ ಬಹಳ ಕಡಿಮೆ. ಪರಿಣಾಮವಾಗಿ ಅವರ ಉತ್ಪತ್ತಿಯೂ ತೀರಾ ಕಡಿಮೆ ಇರುತ್ತದೆ. ಅವರು ಒಗ್ಗಟ್ಟಾಗಿ ತಮ್ಮ ಚೌಕಾಶಿ ಸಾಮರ್ಥ್ಯವನ್ನು ಹೆಚ್ಚಿಸುವ ಪ್ರಯತ್ನವನ್ನು ಇದುವರೆಗೆ ಮಾಡಿಲ್ಲ. ಹಾಗಾಗಿ ಖರೀದಿಗಾರರು ಹೇಳಿದ ಬೆಲೆಗೆ ರೈತರು ಗೇರು ಬೀಜವನ್ನು ಮಾರಾಟ ಮಾಡುವ ದುರವಸ್ಥೆ ಇದೆ. ಈ ಸಮಸ್ಯೆಗೆ ಗೇರು ಬೀಜ ಬೆಳೆಗಾರರ ಸಹಕಾರ ಸಂಘದ ಸ್ಥಾಪನೆಯ ಮೂಲಕ ಪರಿಹಾರ ಕಂಡುಕೊಳ್ಳಲು ಸಾಧ್ಯವಿದೆ. ಅದರೊಂದಿಗೆ ಜಿಲ್ಲಾ ಮಟ್ಟದಲ್ಲಿ ಗೇರು ಬೀಜ ಬೆಳೆಗಾರರ

ಒಕ್ಕೂಟವೊಂದನ್ನು ರಚಿಸಬೇಕು. ಅದರಲ್ಲಿ ಪ್ರತೀ ತಾಲೂಕಿನ ಪ್ರತೀ ಗ್ರಾಮದಿಂದ ಒಬ್ಬನಂತೆ ಪ್ರತಿನಿಧಿ ಇರಬೇಕು. ಇಂತಹ ಒಕ್ಕೂಟವೊಂದರ ರಚನೆಯಿಂದ ಗೇರು ಬೀಜ ಬೆಳೆಗಾರರು ತಮ್ಮ ಹಕ್ಕುಗಳನ್ನು ನಿರ್ಭಯವಾಗಿ ಚಲಾಯಿಸಲು ಶಕ್ತರಾಗುತ್ತಾರೆ. ಗೇರು ಬೀಜ ಬೆಳೆಗಾರರ ಸಹಕಾರ ಸಂಘದಂತೆ ಇದು ಕೂಡಾ ಒಂದು ವಿನೂತನವಾದ ಕಲ್ಪನೆಯಾಗಿದೆ. ಒಗ್ಗೂಡಿ ಗೊತ್ತಿಲ್ಲದ ಗೇರು ಬೀಜ ಬೆಳೆಗಾರರು ಒಕ್ಕೂಟವೊಂದನ್ನು ರಚಿಸಬೇಕಾದರೆ ಅವರನ್ನು ಮಾನಸಿಕವಾಗಿ ಸಿದ್ಧರನ್ನಾಗಿ ಮಾಡಬೇಕು. ಈ ಕೆಲಸವನ್ನು ಸೇವಾ ಸಂಸ್ಥೆಗಳು ಧಾರಾಳವಾಗಿ ಕೈಗೆತ್ತಿಕೊಳ್ಳಬಹುದು.

೭.೪.೩: ಮೂಲ ಸೌಕರ್ಯಗಳ ಕೊರತೆಯಿಂದಾಗಿ ಗೇರು ಬೀಜ ಬೆಳೆಗಾರರು ತಮ್ಮ ಸಮೀಪದಲ್ಲಿರುವ ವ್ಯಾಪಾರಿಗಳಿಗೆ ತಮ್ಮ ಉತ್ಪತ್ತಿಯನ್ನು ಮಾರಾಟ ಮಾಡಿಬಿಡುತ್ತಾರೆ. ಇದರಿಂದಾಗಿ ಗೇರು ಬೀಜದಬೆಳೆಗಾರರು ಬಹಳ ಕಡಿಮೆ ಹಣ ಗಳಿಸುತ್ತಾರೆ. ಮೂಲ ಸೌಕರ್ಯವೃದ್ಧಿ ಈ ಸಮಸ್ಯೆಗೆ ಪರಿಹಾರ. ಅದರಲ್ಲೂ ಮುಖ್ಯವಾಗಿ ಹಳ್ಳಿ ಹಳ್ಳಿಗಳಿಗೆ ಉತ್ಕೃಷ್ಟ ಗುಣ ಮಟ್ಟದ ಸರ್ವಋತು ರಸ್ತೆಗಳನ್ನು ನಿರ್ಮಿಸಿ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು. ದಕ್ಷಿಣ ಕನ್ನಡವು ಬುದ್ಧಿವಂತರ ಜಿಲ್ಲೆ ಆಗಿರಲು ಸಾಧ್ಯವಿಲ್ಲ ಎಂಬ ಭಾವನೆ ಇಲ್ಲಿನ ರಸ್ತೆಗಳನ್ನು ಕಂಡಾಗ ಮೂಡುತ್ತದೆ. ಈ ಜಿಲ್ಲೆಯ ಜನರು ಮೃದು ಸ್ವಭಾವದವರು. ಮತದಾನ ಮಾಡಿ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಶಾಸನ ಸಭೆಗಳಿಗೆ ಕಳುಹಿಸುತ್ತಾರೆಯೇ ವಿನಾ ಕಡಕ್ಕಾಗಿ ನಿಂತು ಅವರಿಂದ ಅಭಿವೃದ್ಧಿ ಕಾರ್ಯ ಮಾಡಿಸಿಕೊಳ್ಳುವುದಿಲ್ಲ. ರಸ್ತೆ ನಿರ್ಮಾಣ ಮತ್ತು ದುರಸ್ತಿ ಸಂದರ್ಭದಲ್ಲಿ ಕಾಮಗಾರಿಯನ್ನು ಮತದಾನ ಮಾಡಿದ ಪ್ರಜೆಗಳಾಗಲೀ, ಮತ ಪಡೆದು ಆಯ್ಕೆಯಾದ ಪ್ರತಿನಿಧಿಗಳಾಗಲೀ ಗಮನಿಸಲು ಹೋಗುವುದೇ ಇಲ್ಲ. ಹಾಗಾಗಿ ಎಲ್ಲಾ ಕಡೆಗಳಲ್ಲಿ ಕಳಪೆ ಕಾಮಗಾರಿಗಳು. ಜನರು ಒಗ್ಗಟ್ಟಾಗಿ ಅಭಿವೃದ್ಧಿ ಕಾರ್ಯಗಳ ಗುಣ ಮಟ್ಟವನ್ನು ವಸ್ತು ನಿಷ್ಠವಾಗಿ ಪರಿಶೀಲಿಸಿ ಭ್ರಷ್ಟರನ್ನು ನ್ಯಾಯಾಂಗಕ್ಕೆ ಒಪ್ಪಿಸುವುದೇ ಇದಕ್ಕೆ ಪರಿಹಾರ. ಆದರೆ ಇದಕ್ಕೆ ತುಂಬಾ ಮಾನಸಿಕ ಸಿದ್ಧತೆ ಬೇಕಾಗುತ್ತದೆ.

೭.೪.೪: ದ.ಕ. ಜಿಲ್ಲೆಯ ಗೇರು ಬೆಳೆಗಾರರಲ್ಲಿ ಅನೇಕರು ಕಳ್ಳ ಕಾಕರ ಭಯದಿಂದ, ಜಾನುವಾರುಗಳ ಉಪಟಳದಿಂದ ಸಂಪೂರ್ಣವಾಗಿ ಬಲಿಯುವುದಕ್ಕೆ ಮೊದಲೇ ಬೀಜವನ್ನು ಕಿತ್ತು ಮಾರಾಟ ಮಾಡುತ್ತಾರೆ. ಇದರಿಂದಾಗಿ ಗೇರು ಬೀಜದ ಗುಣಮಟ್ಟ ಕುಸಿಯುತ್ತದೆ. ಅಂತಹ ಗೇರು ಬೀಜಕ್ಕೆ ಒಳ್ಳೆಯ ಬೆಲೆ ಸಿಗಲು ಸಾಧ್ಯವಿಲ್ಲ. ಗೇರು ಹಾಡಿಗೆ ಸಂಪೂರ್ಣವಾಗಿ ಬೇಲಿ ಹಾಕುವುದು ಈ ಸಮಸ್ಯೆಗೆ ಪರಿಹಾರ. ಆದರೆ ಕೆಲವೊಮ್ಮೆ ಹಾಡಿಯ ಮಧ್ಯದಲ್ಲಿ ಕಾಲು ದಾರಿ ಹಾದು ಹೋಗುವುದಿದೆ. ಅಂತಹ ಸಂದರ್ಭದಲ್ಲಿ ಬೇಲಿ ಹಾಕಿಯೂ ಉಪಯೋಗವಿಲ್ಲ. ಈ ಜಂಜಾಟವೇ ಬೇಡವೆಂದು ಗೇರು ಬೆಳೆಗಾರರು ಕಣ್ಣಂದಾಜಿನಲ್ಲಿ ಗೇರು ಹಾಡಿಯನ್ನು ದಲ್ಲಾಳಿಗಳಿಗೆ ಗುತ್ತಿಗೆ ಕೊಡುವುದುಂಟು. ಇಲ್ಲೂ ಗೇರು ಬೆಳೆಗಾರರಿಗೆ ಅನ್ಯಾಯವಾಗುತ್ತದೆ. ಊರಲ್ಲಿರುವ ಸ್ವಸಹಾಯ ಸಂಘಗಳು ಗೇರು ಹಾಡಿಯನ್ನು ಗುತ್ತಿಗೆ ಪಡಕೊಳ್ಳುವಂತೆ ಮಾಡುವುದು ಇದಕ್ಕೊಂದು ಪರಿಹಾರ. ಸ್ವಸಹಾಯ ಗುಂಪುಗಳು ತಮ್ಮದೇ ಗುಂಪಿಗೆ ಸೇರಿದ ಗೇರು ಬೆಳೆಗಾರರಿಗೆ ಅನ್ಯಾಯ ಮಾಡಲು ಸಾಧ್ಯವಿಲ್ಲ. ಗೇರು ಗುತ್ತಿಗೆಯಿಂದ ದೊರೆತ ಲಾಭವು ಎಲ್ಲಾ ಸದಸ್ಯರಿಗೆ ಹಂಚಲ್ಪಡುವುದರಿಂದ ಸ್ವಸಹಾಯ ಗುಂಪುಗಳು ಇನ್ನಷ್ಟೂ ಬಲಿಷ್ಠವಾಗುತ್ತವೆ. ಕೃಷಿ ಕೂಲಿ ಕಾರ್ಮಿಕರ ಸಮಸ್ಯೆಯನ್ನು ಹೀಗೆಯೇ ಪರಿಹರಿಸಿಕೊಳ್ಳಲು ಸಾಧ್ಯವಿದೆ.

೭.೫. ಗೇರು ವ್ಯಾಪಾರಿಗಳ ಸಮಸ್ಯೆಗಳ ವಿಶ್ಲೇಷಣೆಯ ಫಲಿತಗಳು

೭.೫.೧: ಗೇರು ಬೀಜ ಬೆಳೆಯುವ ಸಣ್ಣ ಹಾಗೂ ಅಂಚಿನ ರೈತರು ತಮ್ಮ ಉತ್ಪನ್ನವನ್ನು ಸ್ಥಳೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಾರೆ. ಸ್ಥಳೀಯ ವ್ಯಾಪಾರಿಗಳು ಗೇರು ಬೀಜ ಮಾತ್ರವಲ್ಲದೆ ಅಡಿಕೆ, ಕೋಕ್ಕೋ, ತೆಂಗಿನಕಾಯಿ, ಕಾಳುಮೆಣಸು ಇತ್ಯಾದಿಗಳನ್ನು ಕೂಡಾ ಕೊಂಡುಕೊಳ್ಳುತ್ತಾರೆ. ಈ ವ್ಯಾಪಾರಿಗಳು ರೈತರಿಗೆ ಚಿರಪರಿಚಿತರಾದುದರಿಂದ ವ್ಯವಹಾರದಲ್ಲಿ

ವಿಶ್ವಾಸಾರ್ಹತೆ ಅಧಿಕವಿರುತ್ತದೆ. ಸ್ಥಳೀಯ ವ್ಯಾಪಾರಿಗಳು ಸ್ವಂತ ಅಥವಾ ಬಾಡಿಗೆ ಕಟ್ಟಡಗಳನ್ನು ಹೊಂದಿರುತ್ತಾರೆ. ಅವರು ಗೇರು ಬೀಜವನ್ನು ಖರೀದಿಸಲು ಒಂದಷ್ಟು ಹಣವನ್ನು ಹೊಂದಿಸಿಕೊಳ್ಳಬೇಕಾಗುತ್ತದೆ. ಸಣ್ಣ ವ್ಯಾಪಾರಿಗಳಿಗೆ ಹಾಗೇ ಹಣ ಹೊಂದಿಸಿಕೊಳ್ಳಲು ಕಷ್ಟವಾಗುತ್ತದೆ. ಅವರು ಬ್ಯಾಂಕುಗಳಿಂದ ಮತ್ತು ಖಾಸಗಿ ಮೂಲಗಳಿಂದ ಸಾಲ ಪಡೆಯಬೇಕಾಗುತ್ತದೆ. ಬ್ಯಾಂಕುಗಳ ಬಡ್ಡಿ ಸಹನೀಯ. ಆದರೆ ಖಾಸಗಿ ಮೂಲಗಳು ಮೀಟರ್ ಬಡ್ಡಿ ಹಾಕಿ ವ್ಯಾಪಾರಿಗಳನ್ನು ಸುಲಿದು ಬಿಡುತ್ತವೆ. ಸಾಮಾನ್ಯವಾಗಿ ಸಣ್ಣ ನ್ಯಾಪಾರಿಗಳು ವಂಶ ಪಾರಂಪರ್ಯವಾಗಿ ವೃತ್ತಿ ನಡೆಸುತ್ತಾ ಬಂದವರು. ಅವರಿಗೆ ತಮ್ಮ ವ್ಯವಹಾರ ನಡೆಸಲು ಸಾಕಷ್ಟು ಹಣಕಾಸು ಕಡಿಮೆ ಬಡ್ಡಿಯಲ್ಲಿ ಲಭ್ಯವಾಗಬೇಕಾದ ಅಗತ್ಯವಿದೆ.

೭.೫.೨: ಸಣ್ಣ ವ್ಯಾಪಾರಿಗಳು ಗೇರು ಬೀಜ ಸಂಗ್ರಹಿಸಿಡಲು ಸ್ವಲ್ಪ ಖರ್ಚು ಮಾಡಬೇಕಾಗುತ್ತದೆ. ಸಣ್ಣ ಪ್ರಮಾಣದಲ್ಲಿ ಗೇರು ಬೀಜಗಳ ಸಂಸ್ಕರಣೆ, ಶೇಖರಣೆ, ಹೊರೆ ಏರಿಸುವ ಮತ್ತು ಇಳಿಸುವ ವೆಚ್ಚವನ್ನು ಅವರು ಭರಿಸಬೇಕಾಗುತ್ತದೆ. ಗೇರು ಖರೀದಿಗಾರ ಕೃಷಿ ಉತ್ಪನ್ನ ಖರೀದಿಗಾರನಾಗಿರುವುದರಿಂದ ಆತ ಕೃಷಿ ಉತ್ಪನ್ನ ಮಾರುಕಟ್ಟೆಯಿಂದ ಲೈಸನ್ಸ್ ಪಡೆಯಬೇಕಾಗುತ್ತದೆ. ಅದನ್ನು ಅವಧಿಗೆ ಮುನ್ನ ನವೀಕರಿಸಬೇಕಾಗುತ್ತದೆ. ಸರಕಾರದ ವಿವಿಧ ಇಲಾಖೆಗಳ ತಪಾಸಣೆಗೆ ಆತ ಸಿದ್ಧನಾಗಿರಬೇಕಾಗುತ್ತದೆ. ಅಲ್ಲದೆ ಅದಕ್ಕೆ ಸಂಬಂಧಿಸಿದ ವೆಚ್ಚವನ್ನೂ ಕೂಡಾ ಭರಿಸಬೇಕಾಗುತ್ತದೆ. ಗೇರು ಬೀಜವನ್ನು ಖರೀದಿಸುವಾಗ ಭಾರ ಅಧಿಕವಿರುತ್ತದೆ. ಕೆಲ ಸಮಯದ ಬಳಿಕ ಬೀಜವನ್ನು ಮಾರಾಟ ಮಾಡುವಾಗ ಗೇರು ಬೀಜದ ತೂಕ ಕಡಿಮೆಯಾಗಿ ಬಿಡುತ್ತದೆ. ಹಾಗಾಗಿ ಅಲ್ಲೂ ಗೇರು ವ್ಯಾಪಾರಿಗೆ ನಷ್ಟವಾಗುತ್ತದೆ. ಸ್ವಂತ ಕಟ್ಟಡ ಇಲ್ಲದ ವ್ಯಾಪಾರಿಗಳು ಬಾಡಿಗೆಗೆ ಕಟ್ಟಡವನ್ನು ಪಡೆದುಕೊಳ್ಳಬೇಕಾಗುತ್ತದೆ. ಕನಿಷ್ಠ ಒಬ್ಬ ಸಹಾಯಕನನ್ನು ನೇಮಕ ಮಾಡಿಕೊಳ್ಳಬೇಕಾಗುತ್ತದೆ. ಹೀಗೆ ನಾನಾ ಕಾರಣಗಳಿಂದಾಗಿ ನಿರ್ವಹಣಾ ವೆಚ್ಚ ಅಧಿಕವಾಗಿ ಗೇರು ವ್ಯಾಪಾರಿಯ ಲಾಭದ ಪ್ರಮಾಣ ಕುಂಠಿತವಾಗುತ್ತದೆ. ಕೆಲವೊಮ್ಮೆ ಆತ ನಷ್ಟವನ್ನು ಅನುಭವಿಸಬೇಕಾಗುತ್ತದೆ.

೭.೫.೩: ಗೇರು ಬೀಜದ ಬೆಲೆಗಳಲ್ಲಿನ ಏರಿಳಿತಗಳ ಅನಿಶ್ಚಿತತೆಯಲ್ಲಿ ಗೇರು ಬೀಜ ಖರೀದಿಗಾರನು ವ್ಯಾಪಾರ ನಡೆಸಬೇಕಾಗುತ್ತದೆ. ಆತ ಗೇರು ಬೀಜ ಕೊಳ್ಳುವ ಕಾಲದಲ್ಲಿ ಬೆಲೆ ಹೆಚ್ಚಿದ್ದು ಮಾರುವ ಕಾಲದಲ್ಲಿ ಬೆಲೆ ಕುಸಿದರೆ ಆತ ಸಂಕಷ್ಟಕ್ಕೆ ಈಡಾಗುತ್ತಾನೆ. ಕೇಂದ್ರೀಯ ಮಾರುಕಟ್ಟೆಯು ಬೆಲೆಗಳ ಬಗ್ಗೆ ಸರಿಯಾದ ಮಾಹಿತಿ ನೀಡದಿದ್ದರೆ ಸ್ಥಳೀಯ ವ್ಯಾಪಾರಿಯು ತೊಂದರೆಗೊಳಗಾಗುತ್ತಾನೆ. ವ್ಯಾಪಾರಿಗಳು ಹೆಚ್ಚು ದಿನ ಗೇರು ಬೀಜಗಳನ್ನು ದಾಸ್ತಾನು ಇಟ್ಟುಕೊಳ್ಳಲು ಸರಿಯಾದ ವ್ಯವಸ್ಥೆ ಇರುವುದಿಲ್ಲ. ಹಾಗಾಗಿ ಬೆಲೆ ಏರುವವರೆಗೆ ಅವರು ಮಾರಾಟಕ್ಕೆ ಕಾಯುವಂತಿಲ್ಲ. ಕೆಲವೊಮ್ಮೆ ಸಂಸ್ಕರಣಾ ಘಟಕಗಳು ಕಡಿಮೆ ಬೆಲೆಯಲ್ಲಿ ದೊರಕುವ ಆಮದು ಗೇರು ಬೀಜವನ್ನು ಕೊಂಡುಕೊಳ್ಳುವುದರಿಂದ ಸ್ಥಳೀಯ ವ್ಯಾಪಾರಿಗಳು ನಷ್ಟ ಅನುಭವಿಸುವುದುಂಟು. ಸದಾ ಕಾಲ ವ್ಯಾಪಾರಿಗಳು ಲಾಭ ಗಳಿಸುತ್ತಾರೆಂಬ ಗ್ರಹಿಕೆ ಗೇರು ಬೀಜ ವ್ಯಾಪಾರದ ಮಟ್ಟಿಗೆ ಸುಳ್ಳಾಗಿರುವುದಕ್ಕೆ ಯಥೇಚ್ಛ ದೃಷ್ಟಾಂತಗಳು ಸಿಗುತ್ತವೆ. ಗೇರು ವ್ಯಾಪಾರಿಗಳು ಗೇರು ಬೆಳೆಗಾರರ ಅಜ್ಞಾನ ಅಥವಾ ಮುಗ್ಧತೆಯ ದುರುಪಯೋಗ ಮಾಡುವುದಿಲ್ಲವೆಂದಲ್ಲ. ಕ್ರಿಸ್ತ ಪೂರ್ವ ಯುಗದಲ್ಲೇ ಕೌಟಿಲ್ಯ ಹೇಳಿರುವ " ವ್ಯಾಪಾರಂ ದ್ರೋಹ ಚಿಂತನಮ್" ಎಂಬ ಮಾತು ಇಂದಿಗೂ ಸತ್ಯವೇ. ಆದರೆ ಸ್ವತಃ ಈ ವ್ಯಾಪಾರಿಗಳು ಆಗಾಗ ಅನಿಶ್ಚಿತತೆಗೆ ಸಿಲುಕಿ ಸಂಕಷ್ಟ ಅನುಭವಿಸುತ್ತಿರುವುದು ಕೂಡಾ ಸತ್ಯವೇ.

೭.೬. ಗೇರು ವ್ಯಾಪಾರಿಗಳ ಸಮಸ್ಯೆ ಪರಿಹಾರಕ್ಕೆ ಸಲಹೆಗಳು

೭.೬.೧: ಗೇರು ಕೃಷಿಕರಿಗೆ ಗೇರು ಖರೀದಿಗಾರರಿಂದ ಆಗುವ ತೊಂದರೆಗಳ ಬಗ್ಗೆ ಈಗಾಗಲೇ ವಿವರಣೆ ನೀಡಲಾಗಿದೆ. ಅದು ಸಮಸ್ಯೆಯ ಒಂದು ಮುಖವಾದರೆ ಸ್ವತಃ ಗೇರು ಬೀಜ ಖರೀದಿಗಾರರು ತೊಂದರೆಗೆ ಸಿಲುಕುವುದು ಸಮಸ್ಯೆಯ ಇನ್ನೊಂದು

ಆಯಾಮ. ಅದರಲ್ಲಿ ಬಹಳ ಮುಖ್ಯವಾದುದು ದುಡಿಯುವ ಬಂಡವಾಳದ ಕೊರತೆ. ಈ ಕೊರತೆಯನ್ನು ನಿವಾರಿಸಲು ರಾಷ್ಟ್ರೀಕೃತ ವಾಣಿಜ್ಯ ಬ್ಯಾಂಕುಗಳು ಮುಂದೆ ಬರಬೇಕಾಗಿದೆ. ಗೇರು ಬೀಜ ಕೊಳ್ಳಲೆಂದೇ ಅಲ್ಪಾವಧಿ ಸಾಲವನ್ನು ಬ್ಯಾಂಕುಗಳು ಕಡಿಮೆ ಬಡ್ಡಿಗೆ ನೀಡಬೇಕು. ಗೇರು ಬೀಜ ಖರೀದಿಗಾರರಲ್ಲಿ ಬಹುತೇಕರು ಸಣ್ಣ ವ್ಯಾಪಾರಿಗಳು. ಅವರ ವ್ಯವಹಾರ ಶುದ್ಧತೆಯ ಬಗ್ಗೆ ಸಂಶಯವಿದ್ದರೂ ಅವರ ಅಸ್ತಿತ್ವವೂ ಅನಿವಾರ್ಯ. ಏಕೆಂದರೆ ಗೇರು ಬೀಜ ಬೆಳೆಗಾರರಲ್ಲಿ ಬಹುತೇಕರು ಸಣ್ಣ ಹಾಗೂ ಅಂಚಿನ ರೈತರು ಅವರು ಸಣ್ಣ ವ್ಯಾಪಾರಿಗಳನ್ನು ಸುಲಭವಾಗಿ ಸಂಪರ್ಕಿಸುತ್ತಾರೆ. ಮತ್ತು ನಂಬುತ್ತಾರೆ. ಹೀಗೆ ನಮ್ಮ ಬಹುತೇಕ ವ್ಯವಹಾರಗಳು ನಂಬುಗೆಯ ಮೇಲೆ ನಿಂತಿದೆ. ಒಂದು ವೇಳೆ ಗೇರು ಅಭಿವೃದ್ಧಿ ಸಹಕಾರಿ ಸಂಘ ರಚನೆಯಾದರೂ ಎಲ್ಲಾ ಬೆಳೆಗಾರರು ತಮ್ಮ ಬೆಳೆಯನ್ನು ಮಾರಾಟ ಮಾಡುವುದಿಲ್ಲ. ಇದಕ್ಕೆ ಕೃಷಿಕರ ಸಹಕಾರಿ ಸಂಘಗಳ ಉದಾಹರಣೆ ನಮ್ಮ ಮುಂದಿದೆ. ಆದುದರಿಂದ ಸಣ್ಣ ವ್ಯಾಪಾರಿಗಳ ನಿಜವಾದ ಸಮಸ್ಯೆಗಳನ್ನು ಪರಿಹರಿಸಲು ಪ್ರಾಮಾಣಿಕ ಯತ್ನ ನಡೆಯಬೇಕಿದೆ.

೭.೬.೨: ಗೇರು ಬೀಜ ಕೊಳ್ಳುವ ವ್ಯಾಪಾರಿಗಳು ನಿರ್ವಹಣಾ ವೆಚ್ಚದ ಏರಿಕೆ, ಸಾಗಾಟ ವೆಚ್ಚದ ಏರಿಕೆ ಮತ್ತು ಮಾರುಕಟ್ಟೆಯ ಅನಿಶ್ಚಿತತೆಗಳಿಂದ ತೊಂದರೆಗೆ ಒಳಗಾಗುತ್ತಾರೆ. ಮತ್ತು ಕೆಲವೊಮ್ಮೆ ನಷ್ಟ ಅನುಭವಿಸುತ್ತಾರೆ. ವ್ಯಾಪಾರ ಅಂದ ಮೇಲೆ ಅನಿಶ್ಚಿತತೆ ಇದ್ದೇ ಇರುತ್ತದೆ. ಅನಿಶ್ಚಿತತೆ ಮತ್ತು ಅಪಾಯಗಳನ್ನು ಸಮರ್ಥವಾಗಿ ಎದುರಿಸಬಲ್ಲವನಿಗೆ ಲಾಭವೂ ಬರುತ್ತದೆ. ಆದರೂ ವ್ಯಾಪಾರಿಗಳ ಈ ಸಮಸ್ಯೆಯನ್ನು ಮಾನವೀಯ ಅನುಕಂಪದ ದೃಷ್ಟಿಯಿಂದ ಪರಿಶೀಲಿಸಬೇಕಾಗುತ್ತದೆ. ಗೇರು ಬೀಜದ ಬೆಲೆಯ ಅನಿಶ್ಚಿತತೆಯ ವಿರುದ್ಧ ವಿಮೆ ಮಾಡಿಸಲು ಸಾಧ್ಯವೇ ಎಂಬುದನ್ನು ಪರಿಶೀಲಿಸಬಹುದು. ಬೆಲೆಗಳ ಅನಿಶ್ಚಿತತೆಯ ವಿರುದ್ಧ ವಿಮೆ ಮಾಡಿಸುವ ಸವಲತ್ತು ಲಭ್ಯವಿರುವುದಿಲ್ಲ. ಆದರೂ ಈ ಬಗ್ಗೆ ಮರು ಚಿಂತನೆ ನಡೆಸಬಹುದು. ನಾವೀಗ ಜಾಗತೀಕರಣದ ಉದಾರ ಯುಗದಲ್ಲಿದ್ದೇವೆ. ದೇಶದಲ್ಲಿ ಖಾಸಗಿ ಹಾಗೂ ವಿದೇಶೀ ವಿಮಾ ಕಂಪೆನಿಗಳಿಗೆ ಮುಕ್ತ ಸ್ವಾತಂತ್ರ್ಯವಿದೆ. ಇವು ಕೇವಲ ಕೈಗಾರಿಕೋತ್ಪನ್ನಗಳಿಗೆ ವಿಮಾ ಸೌಕರ್ಯ ನೀಡುತ್ತಿವೆ. ಈ ಸೌಲಭ್ಯವನ್ನು ಕೃಷಿ ರಂಗಕ್ಕೂ ಏಕೆ ವಿಸ್ತರಿಸಬಾರದು? ಈ ಬಗ್ಗೆ ಹೊಸ ಚಿಂತನೆ ಮೂಡಿ ಬರಬೇಕಾಗಿದೆ. ಅಂತಹ ವಿಮಾ ಸೌಲಭ್ಯ ದೊರೆತರೆ ಸಣ್ಣ ವ್ಯಾಪಾರಿಗಳು ನಿಶ್ಚಿಂತೆಯಿಂದ ವ್ಯವಹಾರ ನಡೆಸಬಹುದು.

೭.೭. ಗೇರು ಸಂಸ್ಕರಣಾ ಘಟಕಗಳ ಸಮಸ್ಯೆಗಳ ಅಧ್ಯಯನದ ಫಲಿತಗಳು

೭.೭.೧: ಗೇರು ಘಟಕವನ್ನು ಆರಂಭಿಸಲು ವಿಶಾಲವಾದ ಭೂಮಿ, ವಿವಿಧ ಯಂತ್ರೋಪಕರಣಗಳು ಮತ್ತು ದೊಡ್ಡ ಪ್ರಮಾಣದಲ್ಲಿ ಶ್ರಮ ಶಕ್ತಿಯ ಅಗತ್ಯವಿದೆ. ಇವುಗಳೆಲ್ಲದರ ನಿರ್ವಹಣಾ ವೆಚ್ಚವೂ ಕೂಡಾ ತುಂಬಾ ಇರುತ್ತದೆ. ಕನಿಷ್ಠವೆಂದರೂ ಕಟ್ಟಡ, ಯಂತ್ರೋಪಕರಣಗಳಿಗೆ ಸುಮಾರು ರೂ. ೨೫-೩೦ ಲಕ್ಷ ಬಂಡವಾಳ ಬೇಕಾಗುತ್ತದೆ. ಕಚ್ಚಾಗೇರು ಬೀಜ ಕೊಳ್ಳಲು ಕನಿಷ್ಠ ರೂ. ೫೦-೬೦ಲಕ್ಷಗಳ ಅಗತ್ಯವಿರುತ್ತದೆ. ಗೇರು ಸಂಸ್ಕರಣಾ ಘಟಕಗಳಲ್ಲಿ ಶೇಖಡಾ ೬೦ ರಷ್ಟು ಸಂಸ್ಥೆಗಳು ಏಕ ಯಜಮಾನ ಸಂಸ್ಥೆಗಳಾಗಿವೆ. ಶೇ. ४೦ ಪಾಲುಗಾರಿಕೆಯಲ್ಲಿ ನಡೆಯುತ್ತಿವೆ. ಅದು ಕೂಡಾ ಒಂದೇ ಕುಟುಂಬದ ಸದಸ್ಯರುಗಳೇ ಪಾಲುದಾರಿಕೆಯಲ್ಲಿ ಕಂಡು ಬರುತ್ತಾರೆ. ತಮ್ಮ ವ್ಯವಹಾರಕ್ಕೆ ಬೇಕಾಗುವ ಹಣವನ್ನು ಶೇ. ೮೦ ಸಂಸ್ಥೆಗಳು ರಾಷ್ಟ್ರೀಕೃತ ವಾಣಿಜ್ಯ ಬ್ಯಾಂಕುಗಳಿಂದ ಪಡೆದುಕೊಳ್ಳುತ್ತವೆ. ಉಳಿದವುಗಳು ಸಾಂಸ್ಥಿಕೇತರ ಮೂಲಗಳಿಂದ ಪಡೆದುಕೊಳ್ಳುತ್ತವೆ. ಗೇರು ಸಂಸ್ಕರಣಾ ಘಟಕಗಳು ಲಾಭದಲ್ಲೇ ನಡೆಯುತ್ತಿವೆ. ಈ ಲಾಭವು ಏಕ ಯಜಮಾನ್ಯ ಸಂಸ್ಥೆಯ ಒಡೆಯನಿಗೆ ಅಥವಾ ಪಾಲುದಾರನಿಗೆ ಸಲ್ಲುತ್ತವೆ. ಈ ಉದ್ಯಮದಲ್ಲಿ ಲಾಭವಿದ್ದರೂ ಇದುವರೆಗೆ ಯಾರೂ ಸಂಸ್ಕರಣಾ ಘಟಕಗಳನ್ನು ಕೂಡು ಬಂಡವಾಳ ಸಂಸ್ಥೆಯಾಗಿ ಆರಂಭಿಸಿಲ್ಲ. ಹಾಗಾಗಿ ಗೇರು ಸಂಸ್ಕರಣಾ ಘಟಕಗಳ ಲಾಭಗಳು ಕೇವಲ ಕೆಲವರ ಪಾಲಿಗೆ ಸಂದಾಯವಾಗುತ್ತಿದೆ. ಇದು ಆದಾಯದ ಅಸಮತೋಲನಕ್ಕೆ ತನ್ನದೇ ಆದ ದೇಣಿಗೆಯನ್ನು ನೀಡುತ್ತಿದೆ.

೭.೭.೨: ಒಂದು ಗೇರು ಸಂಸ್ಕರಣಾ ಘಟಕ ಸ್ಥಾಪನೆಗೆ ವಿಶಾಲ ಕಟ್ಟಡ ಮತ್ತು ಗೇರು ಬೀಜ ಒಣಗಿಸಲು ಅಂಗಳ ಎಂದು ಕನಿಷ್ಠ ಒಂದು ಎಕರೆ ಭೂಮಿ ಬೇಕಾಗುತ್ತದೆ. ಬಹುತೇಕ ಗೇರು ಸಂಸ್ಕರಣಾ ಘಟಕಗಳು ಸ್ವಂತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಇವು ನಗರದ ಹೊರ ವಲಯದಲ್ಲಿ ಸ್ಥಾಪಿಸಲ್ಪಟ್ಟಿರುವುದು ಭೂಮಿಯು ತುಲನಾತ್ಮಕವಾಗಿ ಕಡಿಮೆ ದರದಲ್ಲಿ ಹೊರ ವಲಯದಲ್ಲಿ ಸಿಗುತ್ತದೆ ಎಂಬ ಕಾರಣಕ್ಕಾಗಿ. ಆದರೆ ತಮಗೆ ಬೇಕಾದ ಕಚ್ಚಾಗೇರನ್ನು ಒಂದೇ ಒಂದು ಘಟಕವು ಉತ್ಪಾದಿಸುತ್ತಿಲ್ಲ. ಶೇ. ೧೩ರಷ್ಟು ಘಟಕಗಳು ಸಾಕಷ್ಟು ಭೂಮಿಯನ್ನು ಹೊಂದಿಯೂ ಗೇರು ಕೃಷಿಯನ್ನು ಮಾಡಲು ಮನಸ್ಸು ಮಾಡುತ್ತಿಲ್ಲ. ಇವು ಕಚ್ಚಾ ಗೇರಿಗಾಗಿ ಹೊರಗಿನ ಮೂಲಗಳನ್ನು ಅವಲಂಬಿಸಿವೆ. ಕಚ್ಚಾಗೇರಿನ ಬೆಲೆ ಅಧಿಕವಾಗಿರುವುದರಿಂದ ಘಟಕಗಳ ಉತ್ಪಾದನಾ ವೆಚ್ಚ ಅಧಿಕವಾಗುತ್ತದೆ. ಹಾಗಾಗಿ ಗೇರು ತಿರುಳಿನ ಬೆಲೆ ಹೆಚ್ಚಾಗುತ್ತದೆ. ಗೋಡಂಬಿ ಸ್ವಾದಿಷ್ಟವಾದ ವಿಟಮಿನ್‌ಯುಕ್ತ ಆಹಾರವಾದರೂ ಅದನ್ನು ಬಡವರು ಮತ್ತು ಮಧ್ಯಮ ವರ್ಗೀಯರು ಕೊಳ್ಳಲಾಗದಷ್ಟು ಅದರ ಬೆಲೆ ಅಧಿಕವಿದೆ. ಗೇರು ಸಂಸ್ಕರಣಾ ಘಟಕಗಳು ಗೇರು ಬೀಜವನ್ನು ಸ್ವಂತವಾಗಿ ಬೆಳೆದರೆ ಗೇರು ತಿರುಳಿನ ಅಂದರೆ ಗೋಡಂಬಿಯ ಬೆಲೆಯು ತಾನಾಗಿಯೇ ಕಡಿಮೆಯಾಗಿ ಅದು ಮಧ್ಯಮ ವರ್ಗೀಯರಿಗೆ ಮತ್ತು ಬಡವರಿಗೆ ಕೈಗೆಟುಕುತ್ತದೆ.

೭.೭.೩: ಗೇರು ಸಂಸ್ಕರಣಾ ಘಟಕಗಳು ಸ್ವಂತವಾಗಿ ಕಚ್ಚಾಗೇರನ್ನು ಉತ್ಪಾದಿಸದ ಕಾರಣ ಕಚ್ಚಾ ಸರಕಿಗಾಗಿ ಮಾರುಕಟ್ಟೆಯನ್ನು ಅವಲಂಬಿಸಬೇಕಾಗಿ ಬಂದಿದೆ. ಸ್ಥಳೀಯ ಗೇರು ಬೀಜವನ್ನು ಬಳಸುವ ಘಟಕಗಳ ಪ್ರಮಾಣ ಶೇ. ೨೩ ಮಾತ್ರ. ಉಳಿದವುಗಳು ಹೊರ ರಾಜ್ಯಗಳಿಂದ ಅಥವಾ ಹೊರ ದೇಶಗಳಿಂದ ಕಚ್ಚಾಗೇರನ್ನು ತರಿಸಿಕೊಳ್ಳುತ್ತವೆ. ಇದರಿಂದಾಗಿ ಸ್ಥಳೀಯ ಬೆಳೆಗಾರರಿಗೆ ಉತ್ತೇಜನವಿಲ್ಲದಂತಾಗಿದೆ. ಸ್ಥಳೀಯವಾಗಿ ಗೇರು ಉತ್ಪಾದನೆ ಹೆಚ್ಚಿಸುವ ಪ್ರಯತ್ನಕ್ಕೂ ಕಲ್ಲು ಬಿದ್ದಿದೆ. ಹೊರ ರಾಜ್ಯಗಳಿಂದ ಗೇರು ಬೀಜ ತರಿಸಿಕೊಂಡರೆ ಇಲ್ಲಿನ ಹಣ ಪರ ರಾಜ್ಯಗಳ ಪಾಲಾಗುತ್ತದೆ. ಹೊರ ದೇಶಗಳಿಂದ ಗೇರು ಬೀಜಗಳನ್ನು ಆಮದು ಮಾಡಿಕೊಂಡರೆ ಅಮೂಲ್ಯವಾದ ವಿದೇಶಿ ವಿನಿಮಯ ಅನ್ಯ ದೇಶಗಳ ಪಾಲಾಗುತ್ತದೆ. ವಿದೇಶಿ ವಿನಿಮಯಕ್ಕೆ ಬೇಡಿಕೆ ಅಧಿಕವಾಗಿ ರೂಪಾಯಿ ಮೌಲ್ಯ ಕುಸಿಯುತ್ತದೆ. ಆಮದು ಗೇರು ಬೀಜಗಳು ನಿರಂತರವಾಗಿ ವರ್ಷವಿಡೀ ಪೂರೈಸಲ್ಪಡುತ್ತವೆ ಮತ್ತು ಅವುಗಳು ನೇರವಾಗಿ ಸಂಸ್ಕರಣೆಗೆ ಲಭ್ಯ ಎಂಬ ಕಾರಣಗಳಿಗಾಗಿ ಘಟಕಗಳು ವಿದೇಶಿ ಗೇರು ಬೀಜವನ್ನು ತರಿಸುತ್ತವೆ. ವಿಶ್ವ ವ್ಯಾಪಾರ ಸಂಘಟನೆಯ ಸದಸ್ಯ ರಾಷ್ಟ್ರವಾಗಿರುವ ಭಾರತವು ಯಾವ ದೇಶದ ಕೃಷಿ ಉತ್ಪನ್ನವೇ ಆಗಲೀ ನಮ್ಮ ದೇಶಕ್ಕೆ ಆಮದಾದಾಗ ಅದನ್ನು ಪ್ರಬಲ ಕಾರಣಗಳಿಲ್ಲದೆ ನಿಷೇಧಿಸುವಂತಿಲ್ಲ. ಆಮದು ಸುಂಕವನ್ನು ಒಂದು ಮಿತಿಗಿಂತಲೂ ಹೆಚ್ಚಿಸುವಂತಿಲ್ಲ. ಗೇರು ಸಂಸ್ಕರಣಾ ಘಟಕಗಳ ಆಮದಿನಿಂದಾಗಿ ವಿದೇಶಿ ವಿನಿಮಯ ಸಂಗ್ರಹ ಕಡಿಮೆಯಾಗುತ್ತದೆ.

೭.೭.೪ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ನಿರ್ಣಾಯಕವೆನಿಸಿದ ಗೋಡಂಬಿಯ ಗುಣಮಟ್ಟ ಕುಸಿಯುತ್ತಿದ್ದು ಇದಕ್ಕೆ ಅನೇಕ ಕಾರಣಗಳು ಇವೆ. ಸಣ್ಣ ಸಂಸ್ಕರಣಾಗಾರರು ಗೋಡಂಬಿ ಸಂಸ್ಕರಣೆಯಲ್ಲಿ ಕಾರ್ಖಾನೆಗಳಲ್ಲಿ ಆರೋಗ್ಯಕರ ಪರಿಸರವನ್ನು ಕಾಯ್ದುಕೊಳ್ಳುತ್ತಿಲ್ಲ. ಇದರಿಂದಾಗಿ ಗೋಡಂಬಿ ಮಾರುಕಟ್ಟೆ ಹಿನ್ನೆಡೆ ಅನುಭವಿಸಬೇಕಾಗಿದೆ. ಇದರೊಂದಿಗೆ ಗೋಡಂಬಿ ಬೆಲೆಯ ಅಸ್ಥಿರತೆಯು ದೊಡ್ಡ ಸವಾಲಾಗಿ ಪರಿಣಮಿಸಿದೆ. ಗೋಡಂಬಿ ಆಮದು ಮಾಡಿಕೊಳ್ಳುವ ರಾಷ್ಟ್ರಗಳು ಸ್ಥಿರ ಬೆಲೆ ಹೊಂದಿರುವ ಇತರೆ ಸಸ್ಯ ಜನ್ಯ ಬೀಜಗಳಾದ ಬಾದಾಮಿ, ಪಿಸ್ತಾ, ಅಕ್ರೂಟ್ ಇತ್ಯಾದಿಗಳನ್ನು ಆಮದು ಮಾಡಿಕೊಳ್ಳುವಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿವೆ. ಇದರೊಂದಿಗೆ ಬಾದಾಮಿಯಂತಹ ಬೀಜಗಳು ವಿಶೇಷ ಜಾಹಿರಾತುಗಳೊಂದಿಗೆ ಮಾರುಕಟ್ಟೆಗೆ ಪರಿಚಯಿಸಲ್ಪಡುತ್ತದೆ. ಆದರೆ ಗೋಡಂಬಿ ಈ ಅವಕಾಶದಿಂದ ವಂಚಿತಗೊಂಡಿದೆ.

೭.೭.೫: ಗೇರು ಸಂಸ್ಕರಣಾ ಘಟಕಗಳು ಕಾರ್ಮಿಕರ ಕೊರತೆಯ ಸಂಕಷ್ಟದಿಂದ ಬಳಲುತ್ತಿವೆ. ಕಾರ್ಮಿಕರ ಕೊರತೆಯುಂಟಾಗಲು ಎರಡು ಕಾರಣಗಳಿವೆ. ಮೊದಲನೆಯದು ದ.ಕ. ಜಿಲ್ಲೆಯಲ್ಲಿ ಸಾಕ್ಷರತಾ ಮಟ್ಟ ಮೇಲಕ್ಕೇರಿ ದೈಹಿಕ ಪರಿಶ್ರಮಿಗಳು ಅಲಭ್ಯರಾಗುತ್ತಿರುವುದು. ಎರಡನೆಯ ಕಾರಣ ಗೇರು ಬೀಜ ಒಡೆಯುವ ಮತ್ತು ಸುಲಿಯುವ ಕೆಲಸಗಳಿಂದ ತಮ್ಮ ಕೈಗಳು ಅಂದಗೆಡುತ್ತವೆ ಎಂದು ಹೆಣ್ಣು ಮಕ್ಕಳು ಇತ್ತೀಚೆಗೆ ಗೇರು ಸಂಸ್ಕರಣಾ ಘಟಕಗಳಿಂದ ವಿಮುಖರಾಗುತ್ತಿರುವುದು. ಕೆಲಸಕ್ಕೆ ಹೊಸತಾಗಿ ಸೇರಿಕೊಂಡವರ ದಕ್ಷತೆ ಮತ್ತು ಕೌಶಲ ಕಡಿಮೆ ಇರುವುದರಿಂದ ಉತ್ಪಾದನಾ ಸಾಮರ್ಥ್ಯ ಕುಂಠಿತವಾಗುತ್ತದೆ. ಗೇರು ಘಟಕಗಳಲ್ಲಿ ಡ್ರೈವರ್, ಮೆಕಾನಿಕ್‌ಗಳಾಗಿ ಗಂಡಸರಿದ್ದರೆ ಉಳಿದಂತೆ ಶೇ. ೯೫ ರಷ್ಟು ಹೆಂಗಸರದ್ದೇ ಪಾರಮ್ಯ. ಯೌವನ ಇರುವಷ್ಟು ಕಾಲ ಇವರ ಉತ್ಪಾದನಾ ಸಾಮರ್ಥ್ಯ ಅಧಿಕವಿರುತ್ತದೆ. ನಲುವತ್ತು ವರ್ಷಗಳ ಬಳಿಕ ಕಡಿಮೆಯಾಗುತ್ತದೆ. ಉತ್ತರ ಭಾರತದಲ್ಲಿ ಶ್ರಮ ವೆಚ್ಚ ಕಡಿಮೆ. ದಕ್ಷಿಣ ಭಾರತದಲ್ಲಿ ಅಧಿಕ. ದಕ್ಷಿಣ ಕನ್ನಡದಲ್ಲಿ ಇನ್ನೂ ಅಧಿಕ. ಇದರಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯ ಘಟಕಗಳು ಗೋಡಂಬಿಯ ಮಾರಾಟದಲ್ಲಿ ಉತ್ತರ ಭಾರತದ ಘಟಕಗಳಿಂದ ತೀವ್ರ ಸ್ಪರ್ಧೆಯನ್ನು ಎದುರಿಸಬೇಕಾಗಿ ಬಂದಿದೆ. ಸ್ವಲ್ಪ ಕೂಲಿ ಹೆಚ್ಚಿಸಿ ಕಾರ್ಮಿಕರನ್ನು ಆಕರ್ಷಿಸುವ ಸ್ಥಿತಿಯಲ್ಲಿ ಘಟಕಗಳು ಇಲ್ಲ. ಏಕೆಂದರೆ ಆಗ ಉತ್ಪಾದನಾ ವೆಚ್ಚ ಅಧಿಕವಾಗಿ ಗೋಡಂಬಿ ಬೆಲೆ ಇನ್ನಷ್ಟೂ ಏರುತ್ತದೆ. ಅಂತಹ ಪರಿಸ್ಥಿತಿಯಲ್ಲಿ ಉತ್ತರ ಭಾರತದ ಘಟಕಗಳ ಪೈಪೋಟಿಯನ್ನು ಎದುರಿಸಲು ಸಾಧ್ಯವೇ ಆಗುವುದಿಲ್ಲ.

೭.೭.೬: ವಿದ್ಯುತ್ತಿನ ಅನಿಶ್ಚಿತ ಪೂರೈಕೆಯಿಂದ ದ.ಕ. ಜಿಲ್ಲೆಯ ಗೇರು ಸಂಸ್ಕರಣಾ ಘಟಕಗಳು ಸಂಕಷ್ಟಕ್ಕೆ ತುತ್ತಾಗಿವೆ. ವಿದ್ಯುತ್ತಿನ ಸಮಸ್ಯೆಯಿಂದಾಗಿ ಗೇರು ಸಂಸ್ಕರಣಾ ಘಟಕಗಳು ತಮ್ಮ ಪೂರ್ತಿ ಸಾಮರ್ಥ್ಯವನ್ನು ಬಳಸುವಲ್ಲಿ ವಿಫಲವಾಗಿವೆ. ವಿದ್ಯುತ್ತಿನ ಸಮಸ್ಯೆ ಇಡೀ ನಾಡಿನ ಸಮಸ್ಯೆ. ಕೇವಲ ಗೇರು ಬೀಜ ಸಂಸ್ಕರಣಾ ಘಟಕಗಳದ್ದು ಮಾತ್ರವೇ ಅಲ್ಲ. ಹಣ ಕೊಟ್ಟರೂ ದಿನದ ಇಪ್ಪತ್ತನಾಲ್ಕು ಗಂಟೆಯೂ ವಿದ್ಯುತ್ ಪೂರೈಕೆ ಮಾಡಲಾಗದ ದೇಶ ನಮ್ಮದು. ಹಾಗಾಗಿ ಎಲ್ಲಾ ಕಡೆಗಳಲ್ಲಿ ವಿದ್ಯುತ್ ಕ್ಷಾಮವಿದೆ. ನೆದರ್‌ಲ್ಯಾಂಡಿನಲ್ಲಿ ಪವನ ಶಕ್ತಿಯಿಂದ ವಿದ್ಯುತ್ ಉತ್ಪಾದಿಸುವ ಕಾರ್ಯ ಬೃಹತ್ ಪ್ರಮಾಣದಲ್ಲಿದೆ. ನಮ್ಮ ದೇಶದಲ್ಲಿ ಗಾಳಿಗೇನೂ ಕೊರತೆಯಿಲ್ಲ. ದಕ್ಷಿಣ ಭಾರತದಲ್ಲಿ ವರ್ಷಕ್ಕೆ ಏನಿಲ್ಲವೆಂದರೂ ಹತ್ತು ತಿಂಗಳು ಸೂರ್ಯನ ದರ್ಶನವಾಗುತ್ತದೆ. ಆದರೆ ಪವನಶಕ್ತಿ ಮತ್ತು ಸೌರ ಶಕ್ತಿಯ ದೊಡ್ಡ ಪ್ರಮಾಣದ ಬಳಕೆಯಾಗುತ್ತಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆಗಾಲ ಸುಮಾರು ನಾಲ್ಕು ತಿಂಗಳ ಕಾಲ ಇರುತ್ತದೆ. ತುಂಬಿ ಹರಿಯುವ ಹೊಳೆ, ಹಳ್ಳ, ತೋಡುಗಳು, ತೊರೆ, ಜಲಪಾತಗಳು ಸಾಕಷ್ಟು ಇವೆ. ಇವುಗಳನ್ನು ಬಳಸಿಕೊಂಡು ಕಿರು ವಿದ್ಯುತ್ ಘಟಕಗಳನ್ನು ಸ್ಥಾಪಿಸಿದರೆ ವಿದ್ಯುತ್ ಉತ್ಪಾದನೆಯಲ್ಲಿ ಜಿಲ್ಲೆ ಸ್ವಾವಲಂಬಿಯಾಗಲು ಸಾಧ್ಯವಿದೆ. ಆದರೆ ಅಂತಹ ಪ್ರಯತ್ನಗಳನ್ನು ದೊಡ್ಡ ಪ್ರಮಾಣದಲ್ಲಿ ಮಾಡಲು ಯಾರೂ ಮುಂದಕ್ಕೆ ಬರುತ್ತಿಲ್ಲ.

೭.೮ ಗೇರು ಸಂಸ್ಕರಣಾ ಘಟಕಗಳ ಸಮಸ್ಯಾ ಪರಿಹಾರಕ್ಕೆ ಸಲಹೆಗಳು

೭.೮.೧: ಗೇರು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಮತ್ತು ಅವುಗಳ ನಿರ್ವಹಣೆಯನ್ನು ಮಾಡಲು ದೊಡ್ಡ ಮೊತ್ತದ ಬಂಡವಾಳ ಅಗತ್ಯವಿದೆ. ರಾಷ್ಟ್ರೀಕೃತ ವಾಣಿಜ್ಯ ಬ್ಯಾಂಕುಗಳು ಈ ಅಗತ್ಯವನ್ನು ಪೂರೈಸುತ್ತವೆ. ಸುಮಾರು ಶೇ. ೮೦ ರಷ್ಟು ಗೇರು ಸಂಸ್ಕರಣಾ ಘಟಕಗಳು ರಾಷ್ಟ್ರೀಕೃತ ವಾಣಿಜ್ಯ ಬ್ಯಾಂಕುಗಳಿಂದ ಸಾಲ ಸೌಲಭ್ಯವನ್ನು ಪಡೆದುಕೊಳ್ಳುತ್ತಿವೆ. ಗೇರು ಸಂಸ್ಕರಣಾ ಘಟಕಗಳು ಬಹುತೇಕವಾಗಿ ಏಕ ಯಜಮಾನ್ಯ ಸಂಸ್ಥೆಗಳಾಗಿವೆ. ತಪ್ಪಿದರೆ ಒಂದೇ ಕುಟುಂಬದ ಸದಸ್ಯರ ಪಾಲುದಾರಿಕಾ ಸಂಸ್ಥೆಗಳಾಗಿವೆ. ಕೂಡು ಬಂಡವಾಳ ಸಂಸ್ಥೆಯ ರೂಪದಲ್ಲಿ ಗೇರು ಬೀಜ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವ ಯಾವುದೇ ಪ್ರಯತ್ನ ಇದುವರೆಗೆ ಯಾರಿಂದಲೂ ನಡೆದಿಲ್ಲ. ಇದರಿಂದಾಗಿ ಆದಾಯದ ಅಸಮಾನ

ವಿತರಣೆಯಾಗುತ್ತದೆ. ಗೇರು ಸಂಸ್ಕರಣಾ ಘಟಕಗಳೆಲ್ಲವೂ ಲಾಭದಲ್ಲಿ ನಡೆಯುತ್ತಿವೆ. ಈ ಲಾಭದಲ್ಲಿ ಬಹುತೇಕರಿಗೆ ಪಾಲು ಸಿಗಬೇಕಾದರೆ ಗೇರು ಸಂಸ್ಕರಣಾ ಘಟಕಗಳನ್ನು ಕೂಡು ಬಂಡವಾಳ ಸಂಸ್ಥೆಯ ರೂಪದಲ್ಲಿ ಸಂಘಟಿಸಬೇಕು. ಈ ಬಗ್ಗೆ ಮುಂದಡಿ ಇಡುವ ಸಾಹಸಿಗ ಸಂಘಟಕರ ಕೊರತೆ ಇದೆ. ಹೊಸದಾಗಿ ಸಂಸ್ಕರಣಾ ಘಟಕಗಳನ್ನು ಕೂಡು ಬಂಡವಾಳ ಸಂಸ್ಥೆಯನ್ನಾಗಿ ಆರಂಭಿಸುವುದು ಸುಲಭ. ಹಳೆಯ, ತುಂಬಾ ಲಾಭ ಗಳಿಸುವ ಗೇರು ಬೀಜ ಸಂಸ್ಕರಣಾ ಘಟಕಗಳನ್ನು ಕೂಡಾ ಕೂಡು ಬಂಡವಾಳ ಸಂಸ್ಥೆಗಳಾಗಿ ಪರಿವರ್ತಿಸಲು ಸಾಧ್ಯವಿದೆ.

೭.೮.೨: ಸಾಕಷ್ಟು ಜಮೀನು ಹೊಂದಿರುವ ಗೇರು ಸಂಸ್ಕರಣಾ ಘಟಕಗಳು ಕೂಡಾ ಕಚ್ಚಾಗೇರನ್ನು ಉತ್ಪಾದಿಸದಿರುವುದು ಇನ್ನೊಂದು ಸಮಸ್ಯೆ. ದ. ಕ. ಜಿಲ್ಲೆಯ ಎಲ್ಲಾ ಗೇರು ಸಂಸ್ಕರಣಾ ಘಟಕಗಳು ಕಚ್ಚಾ ಸರಕಿನ ವಿಷಯದಲ್ಲಿ ಪರಾವಲಂಬಿಗಳಾಗಿವೆ. ಇದರಿಂದಾಗಿ ಕಚ್ಚಾ ಸರಕಿನ ಬೆಲೆ ಅಧಿಕವಾಗುತ್ತದೆ. ಅದು ಉತ್ಪಾದನಾ ವೆಚ್ಚ ಸೇರಿ ಗೋಡಂಬಿಯ ಬೆಲೆಯನ್ನು ಹೆಚ್ಚಿಸುತ್ತದೆ. ಗೇರು ಸಂಸ್ಕರಣಾ ಘಟಕಗಳೇ ಗೇರು ಬೀಜವನ್ನು ಬೆಳೆದರೆ ಗೋಡಂಬಿ ಬೆಲೆಯನ್ನು ಸ್ವಲ್ಪ ಮಟ್ಟಿಗೆ ಇಳಿಸಲು ಸಾಧ್ಯವಿದೆ. ಆದರೆ ಗೇರು ಸಂಸ್ಕರಣಾ ಘಟಕಗಳು ಈ ಬಗ್ಗೆ ಮನಸ್ಸು ಮಾಡುತ್ತಿಲ್ಲ. ಕನಿಷ್ಠ ಪಕ್ಷ ಸಾಕಷ್ಟು ಭೂಮಿ ಹೊಂದಿರುವ ಘಟಕಗಳು ಗೇರು ಬೀಜವನ್ನು ತಾವೇ ಬೆಳೆಯಬೇಕು. ಭೂಮಿ ಇಲ್ಲದ ಗೇರು ಬೀಜ ಸಂಸ್ಕರಣಾ ಘಟಕಗಳು ಗೇರು ಬೀಜದ ಹಾಡಿಗಳನ್ನು ಗುತ್ತಿಗೆಗೆ ತೆಗೆದುಕೊಂಡು ತಮಗೆ ಬೇಕಾದ ಕಚ್ಚಾಗೇರನ್ನು ತಾವೇ ಪೂರೈಸಲು ಯತ್ನಿಸಬೇಕು. ಇದು ಗೇರು ಬೆಳೆಗಾರರ ಮತ್ತು ಗೇರು ಬೀಜ ಸಂಸ್ಕರಣೆಗಾರನ ನಡುವೆ ನೇರ ಸಂಪರ್ಕವನ್ನು ಬೆಸೆಯುತ್ತದೆ. ಸಣ್ಣ ಮತ್ತು ಅಂಚಿನ ರೈತರ ಕಚ್ಚಾಗೇರನ್ನು ನೇರವಾಗಿ ಪಡೆದುಕೊಳ್ಳಲು ಘಟಕಗಳು ಪ್ರಯತ್ನಿಸಬೇಕು. ಆಗ ಗೇರು ತಿರುಳಿನ ಉತ್ಪಾದನಾ ವೆಚ್ಚ ಕಡಿಮೆಯಾಗಿ ಬೆಲೆ ಇಳಿದು ಹೆಚ್ಚು ಅನುಭೋಗಿಗಳು ಅದನ್ನು ಕೊಳ್ಳಲು ಸಾಧ್ಯವಾಗುತ್ತದೆ.

೭.೮.೩: ಗೇರು ಸಂಸ್ಕರಣಾ ಘಟಕಗಳು ತಾವೇ ಸ್ವಂತವಾಗಿ ಕಚ್ಚಾಗೇರು ಬೆಳೆಸುವುದಿಲ್ಲ. ತನಗೆ ಬೇಕಾಗುವ ಕಚ್ಚಾಗೇರನ್ನು ಸ್ಥಳೀಯವಾಗಿಯೇ ಪಡೆದರೆ ಉತ್ಪಾದನಾ ವೆಚ್ಚ ಸ್ವಲ್ಪ ಮಟ್ಟಿಗೆ ಕಡಿಮೆಯಾಗುತ್ತದೆ. ಗ್ರಾಮ ಸ್ವರಾಜ್ಯ ಪರಿಕಲ್ಪನೆಯನ್ನು ಪ್ರತಿ ಪಾದಿಸುವಾಗ ಗಾಂಧೀಜಿ ಗ್ರಾಮಗಳು ತಮಗೆ ಬೇಕಾಗುವ ಎಲ್ಲಾ ವಸ್ತುಗಳನ್ನು ತಾವೇ ಉತ್ಪಾದಿಸಬೇಕು ಎಂದಿದ್ದರು. ಸ್ವಾವಲಂಬನೆ ಸಾಧಿಸುವ ನಿಟ್ಟಿನಲ್ಲಿ ಇದು ಅಗತ್ಯ. ಗೇರು ಸಂಸ್ಕರಣಾ ಘಟಕಗಳಿಗೆ ಕಚ್ಚಾಗೇರು ಸ್ಥಳೀಯವಾಗಿ ಯಥೇಚ್ಛವಾಗಿ ಲಭ್ಯವಾಗುವಂತಹ ವಾತಾವರಣ ನಿರ್ಮಾಣ ಮಾಡಬೇಕು. ಕಚ್ಚಾಗೇರು ಬೀಜದ ಉತ್ಪಾದನೆಯನ್ನು ಸಮರೋಪಾದಿಯಲ್ಲಿ ಹೆಚ್ಚಿಸಲು ಎಲ್ಲಾ ಕ್ರಮ ಕೈಗೊಳ್ಳಬೇಕು. ಸ್ಥಳೀಯ ಗೇರು ಬೀಜಗಳನ್ನು ಬಳಸುವ ಘಟಕಗಳಿಗೆ ಸರಕಾರ ವಿಶೇಷ ಉತ್ತೇಜನ ನೀಡಬೇಕು. ಆಮದು ಗೇರು ಬೀಜದ ಮೇಲಿನ ಅವಲಂಬನೆಯನ್ನು ತಪ್ಪಿಸಬೇಕು.

೭.೮.೪ ಗೇರು ಬೆಳೆಯುವ ರಾಷ್ಟ್ರಗಳು ಹೆಚ್ಚಾಗಿ ಹಿಂದುಳಿದ ಹಾಗೂ ಅಭಿವೃದ್ಧಿ ಶೀಲ ರಾಷ್ಟ್ರಗಳು ಆದುದರಿಂದ ಉದ್ಯಮದ ಅಭಿವೃದ್ಧಿಗೆ ಯಾವುದೇ ಪ್ರೋತ್ಸಾಹ ಇಲ್ಲ. ಗೋಡಂಬಿಗೆ ಬೇಡಿಕೆ ಇರುವುದು ಅಭಿವೃದ್ಧಿ ಹೊಂದಿದ ದೇಶಗಳಿಂದ ಈ ನಿಟ್ಟಿನಲ್ಲಿ ಬೇಡಿಕೆಯನ್ನು ಹೆಚ್ಚಿಸಿ ಮಾರುಕಟ್ಟೆಯನ್ನು ವಿಸ್ತರಿಸುವುದು ಇಂದಿನ ಅವಶ್ಯಕತೆಯಾಗಿದೆ. ಗೋಡಂಬಿಯ ಸ್ವಾದಿಷ್ಟತೆ ಹಾಗೂ ಪೌಷ್ಟಿಕತೆಯ ಕುರಿತಂತೆ ವ್ಯಾಪಕದ ಪ್ರಚಾರದ ಅಗತ್ಯವಿದೆ.

೭.೮.೫: ದ.ಕ. ಜಿಲ್ಲೆಯ ಗೇರು ಸಂಸ್ಕರಣಾ ಘಟಕಗಳು ಆಗಾಗ ಕೈಕೊಡುವ ವಿದ್ಯುತ್ತಿನ ಕಣ್ಣಾ ಮುಚ್ಚಾಲೆಯಿಂದ ಅಥವಾ ವಿದ್ಯುತ್ತಿನ ಕೊರತೆಯಿಂದ ತಮ್ಮ ಪೂರ್ಣ ಸಾಮರ್ಥ್ಯದ ಬಳಕೆ ಮಾಡಲು ಅಸಾಧ್ಯವಾಗಿದೆ. ಆ ಸಾಂಪ್ರದಾಯಿಕ ಶಕ್ತಿಯ ಮೂಲಗಳಾದ ಸೂರ್ಯನ ಬೆಳಕು ಮತ್ತು ಗಾಳಿಯನ್ನು ಬಳಸಿ ವಿದ್ಯುತ್ ಉತ್ಪಾದಿಸುವ ಪ್ರಯತ್ನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೈಶವಾವಸ್ಥೆಯಲ್ಲಿದೆ. ಗೇರು ಬೀಜದ ಸಿಪ್ಪೆಯಿಂದ ಶಕ್ತಿ ಉತ್ಪಾದನೆ ಮಾಡಲು ಸಾಧ್ಯವಿದೆ. ಈ ಬಗ್ಗೆ ಸಾಕಷ್ಟು

ಪ್ರಯತ್ನಗಳಾಗಿಲ್ಲ. ಸಂಸ್ಕರಣಾ ಘಟಕಗಳು ಗೋಬರ್ ಗ್ಯಾಸ್ ಅಥವಾ ಬಯೋಗ್ಯಾಸ್ ಸ್ಥಾವರಗಳ ಮೂಲಕ ತಮಗೆ ಬೇಕಾದ ವಿದ್ಯುತ್ ಅನ್ನು ತಾವೇ ಉತ್ಪಾದಿಸುವ ಪ್ರಯತ್ನವನ್ನು ಮಾಡಬಹುದು. ಇಂತಹ ಪ್ರಯತ್ನಗಳನ್ನು ಉತ್ತೇಜಿಸಲು ಸರಕಾರವು ಸಬ್ಸಿಡಿ ನೀಡಬಹುದು. ವಿದ್ಯುತ್ತಿನ ವಿಷಯದಲ್ಲಿ ಸ್ವಾವಲಂಬನೆ ಸಾಧಿಸುವ ಘಟಕಗಳಿಗೆ ವಿಶೇಷ ಉತ್ತೇಜಕಗಳನ್ನು ನೀಡಬಹುದು. ಹಾಗೆಯೇ ಸಂಸ್ಕರಣಾ ಘಟಕಗಳು ಗಾಳಿಯಿಂದ ಮತ್ತು ಸೂರ್ಯನ ಬಿಸಿಲಿನಿಂದಲೂ ವಿದ್ಯುತ್ ಉತ್ಪಾದಿಸುವ ಪ್ರಯತ್ನವನ್ನೂ ಮಾಡಲು ಸಾಧ್ಯವಿದೆ. ಅಂತಹ ಪ್ರಯತ್ನಗಳಿಗೆ ಸರಕಾರದ ಬೆಂಬಲವೂ ಬೇಕಾಗುತ್ತದೆ.

೭.೮.೬: ಗೇರು ಸಂಸ್ಕರಣಾ ಘಟಕಗಳು ಕಾರ್ಮಿಕರ ಲಭ್ಯತೆಯ ಸಮಸ್ಯೆಯನ್ನು ಎದುರಿಸುತ್ತಿವೆ. ಈ ಸಮಸ್ಯೆಯ ಪರಿಹಾರಕ್ಕಾಗಿ ಜಾಬ್ ವರ್ಕಿಂಗ್ ಪದ್ಧತಿಯನ್ನು ಕೆಲವು ಘಟಕಗಳು ಅನುಸರಿಸುತ್ತಿವೆ. ಕಾರ್ಮಿಕರು ಲಭ್ಯವಿರುವ ಪ್ರದೇಶಗಳಿಗೆ ಹುರಿದ ಗೇರು ಬೀಜವನ್ನು ಒಯ್ದು ಅಲ್ಲಿ ಬಾಡಿಗೆಗೆ ಪಡೆದ ಕಟ್ಟಡದಲ್ಲಿ ಅಥವಾ ತಾತ್ಕಾಲಿಕವಾಗಿ ನಿರ್ಮಿಸಿದ ಶೆಡ್ಡ್‌ಗಳಲ್ಲಿ ಗೇರು ಬೀಜವನ್ನು ಸುಲಿಸುವುದನ್ನು ಗೇರು ಉದ್ಯಮದಲ್ಲಿ ಜಾಬ್ ವರ್ಕಿಂಗ್ ಎಂದು ಕರೆಯುತ್ತಾರೆ. ಆದರೆ ಜಾಬ್ ವರ್ಕಿಂಗ್‌ನಿಂದಾಗಿ ಕಾರ್ಮಿಕರು ಹೆಚ್ಚುವರಿ ಭತ್ತೆ ಮತ್ತು ಸೌಕರ್ಯಗಳಿಂದ ವಂಚಿತರಾಗುತ್ತಾರೆ. ಇದಕ್ಕೆ ಸ್ತ್ರೀಶಕ್ತಿ ಗುಂಪುಗಳಿಗೆ ಸ್ವಂತ ತರಬೇತಿ ನೀಡಿ ಅವರನ್ನು ಸಂಸ್ಕರಣಾ ಘಟಕಗಳಲ್ಲಿ ಬಳಸುವುದು ಪರಿಹಾರ. ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಕೂಲಿ ಕಾರ್ಮಿಕರ ಸಂಖ್ಯೆ ಕಡಿಮೆ ಇರುವುದು ನಿಜ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಸ್ವಸಹಾಯ ಗುಂಪುಗಳಿವೆ. ಸ್ತ್ರೀ ಶಕ್ತಿ ಸಂಘಟನೆಗಳಿವೆ. ಇವುಗಳನ್ನು ಕೃಷಿ ಉದ್ದೇಶಕ್ಕೆ ಬಳಸುವ ಪ್ರಯತ್ನ ಆಗಬೇಕು. ಹುರಿದ ಗೇರು ಬೀಜ ಸುಲಿಯುವ ಕೆಲಸಕ್ಕೆ ಇವರುಗಳನ್ನು ಆಕರ್ಷಿಸಬೇಕು. ಪ್ರಾಥಮಿಕ ಶಿಕ್ಷಣ ಪಡೆದು ಶಾಲೆ ಬಿಟ್ಟವರಿಗೆ ಕೃಷಿ ಶಿಕ್ಷಣ ನೀಡಿ ಇಂತಹ ಕಾರ್ಯಗಳಿಗೆ ಬಳಸಬಹುದು ಗೇರು ಸಂಸ್ಕರಣಾ ವಿಷಯದಲ್ಲಿ ಕೃಷಿ ಕಾರ್ಮಿಕತನದಲ್ಲಿ ತರಬೇತಿ ನೀಡುವ ಸಂಸ್ಥೆಗಳ ಸ್ಥಾಪನೆಯಿಂದ ಕಾರ್ಮಿಕರ ಸಮಸ್ಯೆಯನ್ನು ನಿವಾರಿಸಬಹುದು.

೭.೯ ಗೋಡಂಬಿ ನಿರ್ಯಾತದ ಸಮಸ್ಯೆಗಳ ವಿಶ್ಲೇಷಣೆಯ ಫಲಿತಗಳು

೭.೯.೧: ಭಾರತ ವಿಶ್ವದ ಅರವತ್ತಕ್ಕೂ ಹೆಚ್ಚು ರಾಷ್ಟ್ರಗಳಿಗೆ ಗೋಡಂಬಿಯನ್ನು ನಿರ್ಯಾತ ಮಾಡುತ್ತಿದೆ. ಭಾರತದ ನಿರ್ಯಾತ ಗಳಿಕೆಯಲ್ಲಿ ಕೃಷಿ ಉತ್ಪನ್ನದ ಪಾಲು ಶೇ. ೭.೪೬ ರಷ್ಟಿದ್ದು ಅದರಲ್ಲಿ ಶೇ. ೩.೩೪ ರ ಪಾಲನ್ನು ಗೋಡಂಬಿ ಪಡೆದಿದೆ. ದೇಶದ ವಿದೇಶೀ ವಿನಿಮಯ ಗಳಿಕೆಯಲ್ಲಿ ಗೋಡಂಬಿಯ ಪಾಲು ಕೇವಲ ೦.೨೫ ರಷ್ಟು ಮಾತ್ರವೇ ಇದೆ. ಎಲ್ಲಾ ಗೋಡಂಬಿ ಘಟಕಗಳು ನಿರ್ಯಾತ ಮಾಡದಿರುವುದು ಇದಕ್ಕೆ ಕಾರಣ. ದ. ಕ. ಜಿಲ್ಲೆಯ ಸಂಸ್ಕರಣಾ ಘಟಕಗಳಲ್ಲಿ ಕೇವಲ ಹತ್ತು ಮಾತ್ರವೇ ನಿರ್ಯಾತ ಮಾಡುತ್ತಿವೆ. ಉಳಿದ ಘಟಕಗಳು ಸಣ್ಣ ಪ್ರಮಾಣದವುಗಳು. ಅವು ನಿರ್ಯಾತದ ಗೋಜಿಗೆ ಹೋಗದೆ ಗೋಡಂಬಿಗೆ ದೇಶೀಯ ಬೇಡಿಕೆಯನ್ನು ಕಂಡುಕೊಂಡಿವೆ. ಇದರಿಂದಾಗಿ ದೇಶಕ್ಕೆ ಅಮೂಲ್ಯವಾದ ವಿದೇಶೀ ವಿನಿಮಯ ಗಳಿಕೆಯ ಅವಕಾಶ ಕಡಿಮೆಯಾಗಿದೆ. ಗೋಡಂಬಿಯ ದೇಶೀಯ ಬಳಕೆ ಹೆಚ್ಚಾಗುತ್ತಿದ್ದು ಕಾಲಕ್ರಮೇಣ ನಿರ್ಯಾತ ಇನ್ನಷ್ಟು ಕಡಿಮೆಯಾಗುವ ಸಂಭವವಿದೆ.

೭.೯.೨: ಆಗಾಗ ರೂಪಾಯಿಯ ಬೆಲೆ ಡಾಲರ್‌ನೆದುರು ಕುಸಿಯುವುದು ನಿರ್ಯಾತದಾರರಿಗೆ ಸಮಸ್ಯೆಯನ್ನು ತಂದೊಡ್ಡಿದೆ. ವಿದೇಶೀ ವಿನಿಮಯದ ದರದಲ್ಲಿ ಸ್ಥಿರತೆ ಇಲ್ಲದಿರುವುದು ಇದಕ್ಕೆ ಕಾರಣ. ಗೋಡಂಬಿ ನಿರ್ಯಾತದಾರರು ಬಹುತೇಕವಾಗಿ ಕಚ್ಚಾ ಗೇರನ್ನು ಅನ್ಯ ದೇಶಗಳಿಂದ ಆಮದು ಮಾಡಿಕೊಳ್ಳುತ್ತಿದ್ದಾರೆ. ಇದಕ್ಕೆ ಅವರು ಹೆಚ್ಚಾಗಿ ಡಾಲರ್ ರೂಪದಲ್ಲೇ ಹಣ ಪಾವತಿ ಮಾಡಬೇಕಾಗುತ್ತದೆ. ಗೋಡಂಬಿ ನಿರ್ಯಾತ ಮಾಡುವ ದೊಡ್ಡ ಸಂಸ್ಕರಣಾ ಘಟಕಗಳು ಕಚ್ಚಾಗೇರಿಗಾಗಿ ವಿದೇಶಗಳನ್ನೇ ಅವಲಂಬಿಸಿವೆ. ಕಾರಣ ದೇಶೀ ಉತ್ಪಾದನೆ ಬೇಡಿಕೆಯ ಅರ್ಧದಷ್ಟನ್ನು ಮಾತ್ರ ಪೂರೈಸಲು ಸಾಧ್ಯ. ಹಾಗಾಗಿ

ಆಮದು ಗೇರು ಬೀಜದ ಅನಿವಾರ್ಯತೆ ಇದೆ. ರೂಪಾಯಿಯ ಮೌಲ್ಯ ಕುಸಿದಾಗಲೆಲ್ಲಾ ಈ ಘಟಕಗಳು ಸಂಕಷ್ಟಕ್ಕೆ ಈಡಾಗುತ್ತವೆ.

೭.೯.೩: ಗೋಡಂಬಿ ನಿರ್ಯಾತದಾರರು ಏಕ ಕಾಲದಲ್ಲಿ ಬೃಹತ್ ಮೊತ್ತವನ್ನು ತಮ್ಮ ಘಟಕಗಳಲ್ಲಿ ತೊಡಗಿಸಬೇಕಾಗುತ್ತದೆ. ಸಾಮಾನ್ಯವಾಗಿ ಗೋಡಂಬಿ ಸಾಗಾಟದ ಮೂರು ವಾರಗಳ ಒಳಗೆ ಗ್ರಾಹಕ ದೇಶಗಳು ಹಣವನ್ನು ಪಾವತಿ ಮಾಡಬೇಕಾದುದು ವಾಡಿಕೆ. ಪಾವತಿ ಅವಧಿ ಅಧಿಕವಾದರೆ ನಿರ್ಯಾತದಾರರು ಬ್ಯಾಂಕಿಗೆ ಅಧಿಕ ಬಡ್ಡಿಯನ್ನು ಪಾವತಿಸಬೇಕಾಗುತ್ತದೆ. ಕೆಲವೊಮ್ಮೆ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೇಡಿಕೆ ಮತ್ತು ಬೆಲೆಗಳ ವ್ಯತ್ಯಯದಿಂದಾಗಿ ನಿರ್ಯಾತದಾರರು ಸಂಕಷ್ಟಕ್ಕೆ ಸಿಲುಕಿಕೊಳ್ಳುತ್ತಾರೆ. ಈ ಎಲ್ಲಾ ಆಪತ್ತು ಮತ್ತು ಅನಿಶ್ಚಿತತೆಗಳು ಬೇಡವೆಂದು ಕೆಲವು ಗೇರು ಬೀಜ ಸಂಸ್ಕರಣಾ ಘಟಕಗಳು ಗೋಡಂಬಿ ನಿರ್ಯಾತದಿಂದ ದೂರ ಉಳಿದಿವೆ. ಇದೊಂದು ಗಂಭೀರ ಸಮಸ್ಯೆಯಾಗಿದ್ದು ನಿರ್ಯಾತ ಪ್ರಮಾಣವನ್ನು ಕಡಿಮೆ ಮಾಡಿದೆ.

೭.೯.೪: ನಿರ್ಯಾತದಾರರು ರಫ್ತಿನ ಗೋಡಂಬಿಯನ್ನು ಪ್ಯಾಕ್ ಮಾಡಲು ತುಂಬಾ ಎಚ್ಚರ ವಹಿಸಬೇಕು. ಪ್ಯಾಕ್‌ಗಳು ಭದ್ರವಾಗಿರದಿದ್ದರೆ ಒಳಗಿರುವ ಗೋಡಂಬಿ ಕೆಡುತ್ತದೆ. ಆಗ ಅದು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ತಿರಸ್ಕೃತವಾಗುತ್ತದೆ. ಗುಣಮಟ್ಟ ಉತ್ತಮವಾಗಿಲ್ಲದ ಗೋಡಂಬಿಯನ್ನು ಯಾವ ರಾಷ್ಟ್ರವೂ ಸ್ವೀಕರಿಸುವುದಿಲ್ಲ. ಆದುದರಿಂದ ಗುಣ ಮಟ್ಟ ಕಡಿಮೆಯಾದ ಗೋಡಂಬಿ ಪೊಟ್ಟಣಗಳು ನಿರ್ಯಾತದಾರರಿಗೆ ವಾಪಾಸ್ಸಾಗುತ್ತದೆ. ಇಂತಹ ಪ್ರಕರಣಗಳಿಂದ ನಿರ್ಯಾತದಾರ ಸಂಕಷ್ಟಕ್ಕೆ ಒಳಗಾಗುತ್ತಾನೆ. ಇದಲ್ಲದೆ ಗೋಡಂಬಿ ಹೊರೆಯನ್ನು ಬಂದರಿಗೆ ಸಾಗಿಸುವುದು, ಹಡಗಿಗೆ ಹೇರುವುದು ಮತ್ತು ಸುರಕ್ಷಿತವಾಗಿ ಗುರಿಗೆ ತಲುಪಿಸುವುದು ನಿರ್ಯಾತಗಾರನ ಜವಾಬ್ದಾರಿಯಾಗಿರುತ್ತದೆ. ಈ ಪ್ರಕ್ರಿಯೆಯುದ್ದಕ್ಕೂ ನಿರ್ಯಾತದಾರ ತುಂಬಾ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಇಲ್ಲವಾದಲ್ಲಿ ತೀವ್ರ ನಷ್ಟಕ್ಕೊಳಗಾಗಬೇಕಾಗುತ್ತದೆ.

೭.೯.೫: ಗೋಡಂಬಿಯ ಅಂತಾರಾಷ್ಟ್ರೀಯ ವ್ಯಾಪಾರವು ಬಹುತೇಕವಾಗಿ ದಲ್ಲಾಳಿಗಳನ್ನು ಅವಲಂಬಿಸಿದೆ. ದಕ್ಷಿಣ ಕನ್ನಡ ಜಿಲ್ಲೆಯ ಗೋಡಂಬಿ ನಿರ್ಯಾತದಾರರು ತಮ್ಮ ವ್ಯವಹಾರಕ್ಕಾಗಿ ಸಂಪೂರ್ಣವಾಗಿ ದಲ್ಲಾಳಿಗಳನ್ನು ನೆಚ್ಚಿಕೊಂಡಿದ್ದಾರೆ. ಗ್ರಾಹಕರನ್ನು ನಿಗದಿ ಮಾಡುವುದು, ಬೆಲೆಗಳನ್ನು ನಿರ್ಧರಿಸುವುದು, ಸಾಗಾಟದ ಪ್ರಕ್ರಿಯೆ ಎಲ್ಲಕ್ಕೂ ದಲ್ಲಾಳಿಗಳನ್ನೇ ಅವಲಂಬಿಸಲಾಗುತ್ತಿದೆ. ದಲ್ಲಾಳಿಗಳು ಕಮಿಷನ್ ರೂಪದಲ್ಲಿ ನಿರ್ಯಾತದಾರರಿಂದ ತುಂಬಾ ಹಣ ಪಡೆಯುತ್ತಾರೆ. ಇದರಿಂದಾಗಿ ನಿರ್ಯಾತದಾರರ ಗಳಿಕೆ ಕಡಿಮೆಯಾಗುತ್ತದೆ.

೭.೯.೬: ವಿಶ್ವ ಮಾರುಕಟ್ಟೆಯಲ್ಲಿ ಭಾರತದ ಗೋಡಂಬಿ ಉದ್ಯಮವು ವಿಯೆಟ್ನಾಂ ಮತ್ತು ಬ್ರೆಜಿಲ್ ದೇಶಗಳಿಂದ ತೀವ್ರ ಪೈಪೋಟಿ ಎದುರಿಸಬೇಕಾಗಿದೆ. ಇದರಿಂದಾಗಿ ಭಾರತೀಯ ನಿರ್ಯಾತಗಾರರು ಆತಂಕಕ್ಕೆ ಒಳಗಾಗಿದ್ದಾರೆ. ವಾಸ್ತವವಾಗಿ ಭಾರತೀಯ ಗೋಡಂಬಿಗಿಂತ ವಿಯೆಟ್ನಾಂ ಮತ್ತು ಬ್ರೆಜಿಲ್ ದೇಶಗಳ ಗೋಡಂಬಿಯ ಗುಣಮಟ್ಟ ಕಡಿಮೆ. ಆದರೆ ಅವು ಭಾರತೀಯ ಗೋಡಂಬಿಗಿಂತ ಕಡಿಮೆ ಬೆಲೆಯಲ್ಲಿ ವಿಶ್ವ ಮಾರುಕಟ್ಟೆಯಲ್ಲಿ ಲಭ್ಯ ಇವೆ. ಇದರಿಂದಾಗಿ ಭಾರತೀಯ ಗೋಡಂಬಿ ನಿರ್ಯಾತದಾರರು ತೊಂದರೆ ಅನುಭವಿಸುವಂತಾಗಿದೆ.

೭.೧೦: ನಿರ್ಯಾತದ ಸಮಸ್ಯಾ ಪರಿಹಾರಕ್ಕೆ ಸಲಹೆಗಳು

೭.೧೦.೧: ಭಾರತದ ಒಟ್ಟು ನಿರ್ಯಾತ ವ್ಯಾಪಾರದಲ್ಲಿ ಗೋಡಂಬಿಯ ಪಾಲು ಶೇಕಡಾ ಒಂದರಷ್ಟು ಇಲ್ಲ. ಹೆಚ್ಚಿನ ಗೇರು ಬೀಜ ಸಂಸ್ಕರಣಾ ಘಟಕಗಳು ಗೋಡಂಬಿಯನ್ನು ನಿರ್ಯಾತ ಮಾಡುವುದಿಲ್ಲ. ದೇಶೀಯ ಅನುಭೋಗ ಪ್ರಮಾಣ ಇದೀಗ ಹೆಚ್ಚಾಗುತ್ತಿದ್ದು ನಿರ್ಯಾತ ಪ್ರಮಾಣ ಇನ್ನಷ್ಟು ಕಡಿಮೆಯಾಗುವ ಸಾಧ್ಯತೆಗಳಿವೆ. ವಿದೇಶಿ ವಿನಿಮಯ ಗಳಿಕೆಯನ್ನು

ಹೆಚ್ಚಿಸಬೇಕಾದರೆ ಗೋಡಂಬಿಯ ನಿರ್ಯಾತ ವ್ಯಾಪಾರವನ್ನು ಹೆಚ್ಚಿಸಬೇಕು. ಹೆಚ್ಚಿಸಲು ಸಾಧ್ಯವಿದೆ. ಹಾಗೆ ಹೆಚ್ಚಿಸಬೇಕಾದರೆ ದೇಶೀಯ ಗೇರು ಬೀಜ ಉತ್ಪಾದನೆ ಹೆಚ್ಚಾಗಬೇಕಾಗುತ್ತದೆ. ಪರಿಷ್ಕರಣ ಘಟಕಗಳ ಕಾರ್ಯ ಸಾಮರ್ಥ್ಯ ಅಧಿಕವಾಗಬೇಕಾಗುತ್ತದೆ. ಸಣ್ಣ ಘಟಕಗಳು ಒಂದು ಕಾರ್ಟೆಲ್ಲು (ಕೆಲವು ಸಂಸ್ಥೆಗಳ ಒಕ್ಕೂಟ) ಸಂಸ್ಥೆ ರಚಿಸಿ ಅದರ ಮೂಲಕ ಗೋಡಂಬಿ ನಿರ್ಯಾತ ಮಾಡಲು ಸಾಧ್ಯವಿದೆ. ಅಥವಾ ಕೂಡು ಬಂಡವಾಳ ಸಂಸ್ಥೆಯ ರೂಪದಲ್ಲಿ ಹೊಸದಾಗಿ ಗೇರು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಿ ಗೋಡಂಬಿ ಉತ್ಪಾದನೆಯನ್ನು ಹೆಚ್ಚಿಸಿ ನಿರ್ಯಾತವನ್ನು ಅಧಿಕಗೊಳಿಸಲು ಸಾಧ್ಯವಿದೆ. ಗೋಡಂಬಿ ಉದ್ಯಮದಲ್ಲಿ ಕೂಡು ಬಂಡವಾಳ ಸಂಸ್ಥೆಗಳ ನಿರ್ಮಾಣ ಒಂದು ಹೊಸ ಅವಿಷ್ಕಾರವಾಗಿರುತ್ತದೆ.

೭.೧೧.೨: ಆಗಾಗ ರೂಪಾಯಿಯ ಅಪಮೌಲ್ಯವಾಗುತ್ತಿರುವುದು ಅಥವಾ ಡಾಲರಿನೆದುರು ರೂಪಾಯಿ ಕುಸಿಯುತ್ತಿರುವುದು ನಿರ್ಯಾತದಾರರಿಗೆ ತೀವ್ರ ಸಮಸ್ಯೆಯನ್ನು ಉಂಟುಮಾಡುತ್ತದೆ. ಈ ಸಮಸ್ಯೆ ತೀವ್ರವಾಗಿರುವುದು ಕಚ್ಚಾಗೇರು ಬೀಜಗಳಿಗಾಗಿ ಈ ಸಂಸ್ಕರಣಾ ಘಟಕಗಳು ವಿದೇಶಗಳನ್ನು ಅವಲಂಬಿಸಿರುವುದರಿಂದಾಗಿ. ಈ ಸಮಸ್ಯೆಗೆ ಪರಿಹಾರವೇನೆಂದರೆ ಗೇರು ಬೀಜದ ದೇಶೀಯ ಉತ್ಪನ್ನವನ್ನು ಹೆಚ್ಚಿಸುವುದು. ದೇಶೀಯವಾಗಿ ಗೇರು ಬೀಜದ ಉತ್ಪಾದನೆ ಹೆಚ್ಚಿದರೆ ಮಾತ್ರ ಸಾಕಾಗುವುದಿಲ್ಲ. ಸ್ಥಳೀಯ ಗೇರು ಬೀಜದ ಗುಣಮಟ್ಟವೂ ಉತ್ಕೃಷ್ಟವಾಗಿರಬೇಕು. ಆಧುನಿಕ ತಳಿಗಳನ್ನು ನೆಟ್ಟು ದೇಶೀಯ ಉತ್ಪನ್ನವನ್ನು ಹೆಚ್ಚಿಸುವಂತೆ ದೇಶೀಯ ಬೆಳೆಗಾರರನ್ನು ಪ್ರೋತ್ಸಾಹಿಸಬೇಕು.

೭.೧೧.೩: ತಮ್ಮ ವ್ಯವಹಾರಗಳಿಗೆ ನಿರ್ಯಾತದಾರರು ಬೃಹತ್ ಬಂಡವಾಳ ಹೂಡಬೇಕಾಗುತ್ತದೆ. ಆದರೆ ಗೋಡಂಬಿಯ ಅಂತರ್ರಾಷ್ಟ್ರೀಯ ಬೆಲೆ ವ್ಯತ್ಯಯದಿಂದಾಗಿ ನಿರ್ಯಾತದಾರರು ನಷ್ಟ ಅನುಭವಿಸುವ ಸಂಭವವಿರುತ್ತದೆ. ಈ ವ್ಯವಹಾರವನ್ನು ವಿಮೆ ಮಾಡಿಸಲು ಸಾಧ್ಯವಾಗಬೇಕು. ಆಗ ನಷ್ಟದ ಸಂದರ್ಭದಲ್ಲಿ ವಿಮಾ ಕಂಪೆನಿಗಳು ನಷ್ಟವನ್ನು ಭರಿಸುವಂತಾಗಬೇಕು. ನಿರ್ಯಾತದಾರರು ನಷ್ಟ ಹೊಂದುವುದು ತಪ್ಪುತ್ತದೆ.

೭.೧೧.೪: ಪ್ಯಾಕಿಂಗ್ ದೋಷದಿಂದಾಗಿ ನಿರ್ಯಾತ ಮಾಡುವ ಗೋಡಂಬಿ ವಿಶ್ವ ಮಾರುಕಟ್ಟೆಯಲ್ಲಿ ತಿರಸ್ಕೃತವಾಗುವ ಅಪಾಯವಿರುತ್ತದೆ. ನಿರ್ಯಾತ ಮಾಡುವ ಗೋಡಂಬಿಯ ಗುಣಮಟ್ಟ ಉತ್ಕೃಷ್ಟವಾಗಿರುವಂತೆ ನೋಡಿಕೊಳ್ಳುವುದು ಅನಿವಾರ್ಯ. ಈ ಕೆಲಸವನ್ನು ಗೋಡಂಬಿ ನಿರ್ಯಾತ ಅಭಿವೃದ್ಧಿ ಮಂಡಳಿಗೆ ವಹಿಸಿಕೊಟ್ಟರೆ ಸಮಸ್ಯೆ ಪರಿಹಾರವಾಗುತ್ತದೆ. ಗೋಡಂಬಿ ನಿರ್ಯಾತದಲ್ಲಿ ಈ ಮಂಡಳಿ ಈಗಾಗಲೇ ಗಣನೀಯ ಪಾತ್ರ ವಹಿಸುತ್ತಿದೆ. ದೇಶ ವಿದೇಶಗಳಲ್ಲಿ ಪ್ರದರ್ಶನಗಳನ್ನು ಏರ್ಪಡಿಸಿ ಗೋಡಂಬಿಯನ್ನು ಗ್ರಾಹಕರತ್ತ ಒಯ್ಯುತ್ತದೆ. ಗುಣಮಟ್ಟ ನಿಯಂತ್ರಣವನ್ನು ಮಂಡಳಿಯೇ ಮಾಡುವುದು ಉತ್ತಮ. ನಿರ್ಯಾತ ಗೋಡಂಬಿಯನ್ನು ಪ್ಯಾಕಿಂಗ್ ಅನ್ನು ಅದು ಪರಿಶೀಲಿಸಿ ತನ್ನ ಮೊಹರು ಒತ್ತಿದ ಬಳಿಕವಷ್ಟೇ ನಿರ್ಯಾತ ಮಾಡುವಂತಿದ್ದರೆ ಗುಣಮಟ್ಟ ನಿಯಂತ್ರಣ ಸುಲಭ ಸಾಧ್ಯ.

೭.೧೧.೫: ಗೋಡಂಬಿ ನಿರ್ಯಾತವು ದಲ್ಲಾಳಿಗಳನ್ನು ಬಹುತೇಕವಾಗಿ ಅವಲಂಬಿಸಿದೆ. ಇದರಿಂದಾಗಿ ನಿರ್ಯಾತ ಘಟಕಗಳಿಗೆ ಗಳಿಕೆ ಕಡಿಮೆಯಾಗುತ್ತದೆ. ಅನೇಕ ಘಟಕಗಳು ಗೋಡಂಬಿ ನಿರ್ಯಾತದಲ್ಲಿ ಯಾವುದೇ ಆಸಕ್ತಿಯನ್ನು ತೋರಿಸುತ್ತಿಲ್ಲ. ಇದು ವಿದೇಶಿ ವಿನಿಮಯ ಗಳಿಕೆಯ ಅವಕಾಶವನ್ನು ಮೊಟಕುಗೊಳಿಸುತ್ತದೆ. ಗೋಡಂಬಿ ನಿರ್ಯಾತ ಅಭಿವೃದ್ಧಿ ಮಂಡಳಿಯು ಇದುವರೆಗೆ ದಲ್ಲಾಳಿಗಳು ನಿರ್ವಹಿಸುತ್ತಿದ್ದ ಪಾತ್ರವನ್ನು ನಿರ್ವಹಿಸಲು ಸಾಧ್ಯವಾದರೆ ಈ ಸಮಸ್ಯೆಯನ್ನು ಪರಿಹರಿಸಬಹುದು. ಆದರೆ ಗೋಡಂಬಿ ನಿರ್ಯಾತ ಅಭಿವೃದ್ಧಿ ಮಂಡಳಿಯು ಪ್ರಾಮಾಣಿಕತೆಯಿಂದ ಮತ್ತು ಬದ್ಧತೆಯಿಂದ ಈ ಕೆಲಸ ಮಾಡುವ ಅಗತ್ಯವಿದೆ.

[illegible]

೭.೧೦.೬: ವಿಯೆಟ್ನಾಂ ಮತ್ತು ಬ್ರೆಜಿಲ್ ದೇಶಗಳ ಗೋಡಂಬಿ ನಿರ್ಯಾತದಾರರಿಂದ ಭಾರತದ ಗೋಡಂಬಿ ನಿರ್ಯಾತದಾರರು ತೀವ್ರ ಪೈಪೋಟಿ ಎದುರಿಸುತ್ತಿದ್ದಾರೆ. ಇವೆರಡು ದೇಶಗಳ ಗೋಡಂಬಿಯ ಗುಣಮಟ್ಟ ಕಡಿಮೆ ಇದ್ದರೂ ಬೆಲೆ ಕಡಿಮೆ ಇರುವುದು ಭಾರತದ ಮಟ್ಟಿಗೆ ಆತಂಕಕಾರಿಯಾದ ವಿಷಯವಾಗಿದೆ. ಈ ಪೈಪೋಟಿಯನ್ನು ಸಮರ್ಥವಾಗಿ ಎದುರಿಸಬೇಕಾದರೆ ಭಾರತದ ಗೋಡಂಬಿಯ ಉತ್ಪಾದನಾ ವೆಚ್ಚ ಕಡಿಮೆಯಾಗಿ ಬೆಲೆ ಇಳಿಯಬೇಕು. ಇದು ಸುಲಭದ ವಿಷಯವೇನೂ ಅಲ್ಲ. ಗೇರು ಬೀಜ ಸಂಸ್ಕರಣಾ ಘಟಕಗಳು ತಮಗೆ ಬೇಕಾದ ಕಚ್ಚಾಗೇರನ್ನು ತಮ್ಮ ಸ್ವಂತ ಜಾಗದಲ್ಲಿ ಉತ್ಪಾದಿಸಿ ಆ ನಿಟ್ಟಿನಲ್ಲಿ ಸ್ವಾವಲಂಬಿಗಳಾಗಲು ಪ್ರಯತ್ನಿಸಬೇಕು. ಇದು ಉದ್ಯಮಕ್ಕೆ ದೊಡ್ಡ ಸವಾಲು.

೭.೧೧ ಮಹಿಳಾ ಕಾರ್ಮಿಕರ ಸಮಸ್ಯೆಗಳ ವಿಶ್ಲೇಷಣೆಯ ಫಲಿತಗಳು

ಗೇರು ಕಾರ್ಖಾನೆಗಳಲ್ಲಿ ದುಡಿಯುವವರಲ್ಲಿ ಶೇ. ೯೫ ರಷ್ಟು ಮಹಿಳೆಯರು. ಹುರಿದ ಗೇರು ಬೀಜದ ಸಿಪ್ಪೆ ಸುಲಿದು ತಿರುಳನ್ನು ಸಂಗ್ರಹಿಸುವುದು ಇವರ ಕೆಲಸ. ಗೇರು ಸಂಸ್ಕರಣವು ಮಹಿಳೆಯರಿಗೆಂದೇ ಇರುವ ಉದ್ಯಮದಂತಿದೆ. ಆದುದರಿಂದ ಮಹಿಳಾ ಕಾರ್ಮಿಕರ ಸಮಸ್ಯೆಯನ್ನು ಪ್ರತ್ಯೇಕವಾಗಿ ಪರಿಗಣಿಸಿ ವಿಶ್ಲೇಷಿಸಲಾಗಿದೆ

೭.೧೧.೧: ಗೇರು ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಮಹಿಳೆಯರಲ್ಲಿ ಬಹುತೇಕರು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗದಿಂದ ಬಂದವರು. ಮೇಲು ವರ್ಗದ ಮಹಿಳೆಯರು ಗೇರು ಕಾರ್ಖಾನೆಗಳಲ್ಲಿ ದುಡಿಯುತ್ತಿಲ್ಲ. ಗೇರು ಸಂಸ್ಕರಣಾ ಘಟಕಗಳಲ್ಲಿ ದುಡಿಯುತ್ತಿರುವವರಲ್ಲಿ ಸಾಮಾಜಿಕವಾಗಿಯೂ, ಆರ್ಥಿಕವಾಗಿಯೂ ಹಿಂದುಳಿದವರೇ ಹೆಚ್ಚು. ಒಂದು ಕಾಲದಲ್ಲಿ ಗೇರು ಬೀಜದ ಕಾರ್ಖಾನೆಗೆ ಕೆಲಸಕ್ಕೆ ಹೋಗುವುದು ಒಂದು ಪ್ರತಿಷ್ಠೆಯ ವಿಷಯವಾಗಿತ್ತು. ಜಾತಿಗಳು ಧ್ರುವೀಕರಣವಾಗುತ್ತಿರುವ ವರ್ತಮಾನದಲ್ಲಿ ಪರಿಶಿಷ್ಟರು ಮತ್ತು ಹಿಂದುಳಿದವರು ಮಾತ್ರ ಗೇರು ಕಾರ್ಖಾನೆಗೆ ಕೆಲಸಕ್ಕೆ ಹೋಗುತ್ತಿದ್ದಾರೆ ಎನ್ನುವುದು ಕೀಳರಿಮೆಯನ್ನುಂಟು ಮಾಡುತ್ತಿದೆ. ಗೇರುಬೀಜ ಒಡೆದು ಸುಲಿಯುವಕೆಲಸ ನಿಕೃಷ್ಟವಾದುದು ಎಂಬ ಭಾವನೆ ಬೆಳೆಯತೊಡಗಿದೆ. ಗೇರು ಬೀಜ ಕಾರ್ಖಾನೆಯ ಕೆಲಸದ ವೃತ್ತಿ ಗೌರವ ಕಡಿಮೆಯಾಗಿದೆ. ಕಾರ್ಖಾನೆಯ ಕೆಲಸಕ್ಕೆ ಹೋಗುವ ಮಹಿಳೆಯರ ಮನೆಗಳ ವಿದ್ಯಾವಂತರು ಕಾರ್ಖಾನೆಯ ಕೆಲಸಕ್ಕೆ ಹೋದರೆ ಮರ್ಯಾದೆಗೆ ಕುಂದು ಎಂದು ಮಹಿಳೆಯರನ್ನು ನಿರುತ್ತೇಜಿಸುತ್ತಿದ್ದಾರೆ. ಈಗೇನೋ ಹೆಚ್ಚಿನ ಅನಾಹುತ ಸಂಭವಿಸಿಲ್ಲ ಪರಿಸ್ಥಿತಿ ಹೀಗೆ ಮುಂದುವರಿದರೆ ಮತ್ತು ಮಹಿಳೆಯರೆಲ್ಲಾ ವಿದ್ಯಾವಂತರಾದರೆ ಗೇರು ಕಾರ್ಖಾನೆಯ ಕೆಲಸಕ್ಕೆ ಮಹಿಳೆಯರು ಸಿಗದೆ ಹೋಗಬಹುದು. ಮುಂದಿನ ದಿನಗಳಲ್ಲಿ ಕಾರ್ಮಿಕರ ಕೊರತೆ ಗೇರು ಕಾರ್ಖಾನೆಗಳನ್ನು ಕಾಡಲಿದೆ.

೭.೧೧.೨. ಮಹಿಳಾ ಕಾರ್ಮಿಕರ ಅನಿಯಮಿತ ಆಹಾರ ಕ್ರಮದಿಂದಾಗಿ ಹೆಚ್ಚಿನ ಕಾರ್ಮಿಕರು ವಾಯು ಪ್ರಕೋಪ (Acidity) ದಂತಹ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಗೇರು ಕಾರ್ಖಾನೆಗಳಲ್ಲಿ ದುಡಿಯುವ ಹೆಣ್ಣು ಮಕ್ಕಳು ತಮ್ಮ ೧೫-೧೬ ನೇ ವಯಸ್ಸಿಗೆ ಕೆಲಸಕ್ಕೆ ಸೇರುತ್ತಾರೆ. ಬೆಳಗ್ಗೆ ಎಂಟು ಗಂಟೆಗೆ ಕೆಲಸಕ್ಕೆ ಬರಬೇಕಾದ ಇವರು ಮನೆ ಕೆಲಸವನ್ನು ಮುಗಿಸಿಯೇ ಬರಬೇಕಾಗುತ್ತದೆ ಅದರಲ್ಲೂ ಮದುವೆಯಾಗಿ ಮಕ್ಕಳು ಇರುವಂತಹ ಮಹಿಳೆಯರಿಗೆ ಮನೆ ಕೆಲಸದ ಒತ್ತಡ ಹೆಚ್ಚು. ಆದಷ್ಟು ಬೇಗ ಎದ್ದು ಮನೆ ವಾರ್ತೆಗಳನ್ನು ಮುಗಿಸಿ, ಅರೆ ಹೊಟ್ಟೆ ತಿಂದು, ಹಿಂದಿನ ದಿನ ಉಳಿದ ಅನ್ನವನ್ನೇ ಮದ್ಯಾಹ್ನದ ಊಟಕ್ಕೆಂದು ಬುತ್ತಿ ಕಟ್ಟಿಕೊಂಡು ಬರುತ್ತಾರೆ. ಮಧ್ಯಾಹ್ನದ ಊಟದ ಹೊತ್ತಿಗೆ ಅವರು ತಂದ ಆಹಾರ ಹಳಸಿ ಹೋಗಿರುವುದು ಸರ್ವೇ ಸಾಮಾನ್ಯವಾಗಿರುತ್ತದೆ. ಸಂಜೆ ೫ ಗಂಟೆಯವರೆಗೆ ದುಡಿದು ಮನೆ ಸೇರಿದ ನಂತರ ಮತ್ತೆ ಮನೆ ಕೆಲಸಗಳನ್ನು ಮಾಡಬೇಕು. ಅಡುಗೆ, ಮನೆಯ ಸ್ವಚ್ಛತೆ, ಮಕ್ಕಳ ಲಾಲನೆ ಪೋಷಣೆ ಇತ್ಯಾದಿ ಕೆಲಸಗಳನ್ನು ನಿರ್ವಹಿಸಿ ಊಟ ಮಾಡುವಾಗ ತಡ

ರಾತ್ರಿಯಾಗಿರುತ್ತದೆ. ಮತ್ತೆ ಮರುದಿನ ಇದೇ ದಿನಚರಿಯ ಪುನಾರಾವರ್ತನೆ. ಈ ರೀತಿಯ ದುಡಿಮೆ ಮತ್ತು ಅನಿಯಮಿತ ಆಹಾರ ಕ್ರಮದಿಂದಾಗಿ ಬಹುತೇಕ ಮಹಿಳೆಯರು ತಮ್ಮ ೩೦ –೩೫ ನೇ ವರ್ಷದಲ್ಲಿ ವಾಯು ಪ್ರಕೋಪದಂತಹ ಕಾಯಿಲೆಗಳಿಗೆ ತುತ್ತಾಗುತ್ತಾರೆ. ಇದರೊಂದಿಗೆ ಕಾರ್ಖಾನೆಗಳ್ಲಿ ನಿರಂತರವಾಗಿ ಕೆಲಸ ಮಾಡುವುದರಿಂದ ಬೆನ್ನು ನೋವು ಕಾಲು ನೋವು ಇತ್ಯಾದಿ ಸಮಸ್ಯೆಗಳಿಗೆ ಬಲಿಯಾಗುತ್ತಾರೆ. ಬಹಳ ಬೇಗ ತಮ್ಮ ದುಡಿಮೆಯ ಸಾಮರ್ಥ್ಯ ಹಾಗೂ ಉತ್ಸಾಹ ಕಳೆದುಕೊಳ್ಳುತ್ತಾರೆ. ಇಲ್ಲಿನ ಮಹಿಳಾ ಕಾರ್ಮಿಕರು ಅತ್ಯಂತ ಪೌಷ್ಟಿಕತೆಯಿಂದ ಕೂಡಿದ ಗೋಡಂಬಿಯ ತಯಾರಿಕಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದರೂ ಅದರ ಬಳಕೆಯಿಂದ ವಂಚಿತರಾಗಿ ಅಪೌಷ್ಟಿಕತೆಯಿಂದ ಬಳಲುತ್ತಿರುವುದು ವಿಪರ್ಯಾಸ.

೭.೧೧.೩: ಗೇರು ಕಾರ್ಖಾನೆಯಲ್ಲಿ ದುಡಿಯುವ ಅವಿವಾಹಿತ ಮಹಿಳೆಯರಿಗೆ ತಕ್ಕ ವಯಸ್ಸಿಗೆ ಮದುವೆ ಮಾಡಿಸಲು ಮನೆಯವರು ಯಾವ ಆಸಕ್ತಿಯನ್ನೂ ತೋರಿಸುತ್ತಿಲ್ಲ. ಗೇರು ಕಾರ್ಖಾನೆಯ ಕೆಲಸದಿಂದ ಸಾಕಷ್ಟು ಆದಾಯ ತರುತ್ತಿರುವ ಯುವತಿಯರನ್ನು ಮದುವೆ ಮಾಡಿಸಿ ಬಿಟ್ಟರೆ ಆದಾಯದ ಮೂಲವೊಂದು ತಪ್ಪಿ ಹೋದಂತಾಗುತ್ತದೆ ಎಂಬ ಭೀತಿ ಮನೆಯವರನ್ನು ಕಾಡುತ್ತದೆ. ಫ್ಯಾಕ್ಟರಿಗೆ ಹೋಗುವ ಹೆಣ್ಣು ಬೇಡ ಎಂಬ ಧೋರಣೆಯಿಂದ ವಿವಾಹ ಸಂಬಂಧಗಳು ಬರುತ್ತಿಲ್ಲ. ಇದರಿಂದಾಗಿ ಮಹಿಳೆಯರಲ್ಲಿ ಅನೇಕರು ವಿವಾಹವಾಗದೆ ಕಾರ್ಖಾನೆಗಳಲ್ಲಿ ದುಡಿಯುತ್ತಿದ್ದಾರೆ. ಪರಿಣಾಮವಾಗಿ ಗೇರು ಕಾರ್ಖಾನೆಗೆ ಕೆಲಸಕ್ಕೆ ಹೋದರೆ ಬೇಗ ಮದುವೆಯಾಗುವುದಿಲ್ಲ ಎಂಬ ಭಾವನೆ ಸಾರ್ವತ್ರಿಕವಾಗುತ್ತಿದೆ. ಇದು ಗೇರು ಕಾರ್ಖಾನೆಗೆ ಮಹಿಳಾ ಕಾರ್ಮಿಕರ ಲಭ್ಯತೆಯ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರುತ್ತಿದೆ. ಕಾರ್ಖಾನೆಯಲ್ಲಿ ದುಡಿಯಲು ಸಾಧ್ಯವಿರುವ ಮಹಿಳೆಯರು ಕಾರ್ಖಾನೆಗಳಿಂದ ದೂರವುಳಿಯಲು ಬಯಸುವಂತಾಗಿದೆ.

೭.೧೧.೪: ಮಹಿಳಾ ಕಾರ್ಮಿಕರ ಆದಾಯವು ಅವರು ಎಷ್ಟು ಗೇರು ಬೀಜವನ್ನು ಸುಲಿಯುತ್ತಾರೆ ಎನ್ನುವುದನ್ನು ಆಧರಿಸಿಕೊಂಡಿರುತ್ತದೆ. ಗೇರು ಬೀಜವನ್ನು ಸುಲಿಯುವ ಸಾಮರ್ಥ್ಯ ಅಧಿಕವಾದರೆ ಅವರ ಆದಾಯವೂ ಅಧಿಕವಾಗಿರುತ್ತದೆ. ಆದರೆ ಮಹಿಳಾ ಕಾರ್ಮಿಕರ ಸಾಮರ್ಥ್ಯವು ಮಾಸಿಕ ಋತುಚಕ್ರದ ಸಂದರ್ಭದಲ್ಲಿ ಕಡಿಮೆ ಇರುತ್ತದೆ. ವಯಸ್ಸಾಗುತ್ತಾ ಹೋದಂತೆ ಅವರ ಸಾಮರ್ಥ್ಯ ಕುಗ್ಗುತ್ತದೆ. ದುಡಿದರೆ ಮಾತ್ರ ಇವರು ಆದಾಯ ಗಳಿಸುತ್ತಾರೆ. ಗೇರು ಕಾರ್ಖಾನೆಗಳಲ್ಲಿ ಗೇರು ಬೀಜ ಸುಲಿಯುವವರಿಗೆ ದಿನಕೂಲಿ ಅಥವಾ ಮಾಸಿಕ ವೇತನ ಇರುವುದಿಲ್ಲ. ದುಡಿಯಲು ಸಾಧ್ಯವಾಗದಿದ್ದರೆ ಗಳಿಕೆ ಎಂಬುದಿರುವುದಿಲ್ಲ. ಕಚ್ಚಾಗೇರು ಬೀಜದ ಕೊರತೆ ಇದ್ದಾಗ ಕೆಲವು ಸಂಸ್ಕರಣಾ ಘಟಕಗಳು ವರ್ಷದಲ್ಲಿ ಎರಡೋ ಮೂರೋ ತಿಂಗಳು ಕೆಲಸ ನಿಲ್ಲಿಸುತ್ತವೆ. ಅಂತಹ ಸಂದರ್ಭಗಳಲ್ಲಿ ಮಹಿಳಾ ಕಾರ್ಮಿಕರಿಗೆ ಯಾವ ಗಳಿಕೆಯೂ ಇರುವುದಿಲ್ಲ. ಋತು ಸಂಬಂಧಿ ನಿರುದ್ಯೋಗ, ಆರ್ಥಿಕ ಅಭದ್ರತೆ, ಉದ್ಯೋಗದ ಅಸ್ಥಿರತೆ ಮಹಿಳಾ ಕಾರ್ಮಿಕರನ್ನು ಕಾಡುವ ಸಮಸ್ಯೆಗಳಾಗಿವೆ.

೭.೧೧.೫: ಮಹಿಳಾ ಕಾರ್ಮಿಕರಲ್ಲಿ ಬಹುತೇಕರು ಪ್ರಾಥಮಿಕ ಶಿಕ್ಷಣವನ್ನಷ್ಟೇ ಪಡೆದವರು. ಅವರಲ್ಲಿ ಭವಿಷ್ಯದ ಬಗ್ಗೆ ಚಿಂತನೆಗಳಿಲ್ಲ. ಶೈಕ್ಷಣಿಕವಾಗಿಯೂ ಹಿಂದುಳಿದಿರುವ ಅವರು ಭವಿಷ್ಯಕ್ಕಾಗಿ ಉಳಿತಾಯ ಮಾಡುವುದಿಲ್ಲ. ಹಾಗಾಗಿ ಬಂಡವಾಳ ಸಂಚಯನಕ್ಕೆ ಅವರ ಕೊಡುಗೆ ಶೂನ್ಯ. ಕೆಲವರಿಗೆ ಉಳಿತಾಯ ಮಾಡುವ ಮನಸ್ಸಿದೆ. ಆದರೆ ಉಳಿತಾಯದ ಸಾಮರ್ಥ್ಯ ಇರುವುದಿಲ್ಲ. ಅವರು ಅನಾರೋಗ್ಯಕ್ಕೆ ತುತ್ತಾದಾಗ ಅವರಿಗೆ ವೈದ್ಯಕೀಯ ಚಿಕಿತ್ಸೆಯಾಗಲೀ, ಯಾವುದೇ ಭತ್ಯೆಯಾಗಲೀ, ಸವಲತ್ತಾಗಲೀ ಇಲ್ಲ. ಕಾರಣ ಹೆಚ್ಚಿನ ಮಹಿಳಾ ಕಾರ್ಮಿಕರು ಖಾಯಂ ನೆಲೆಯಲ್ಲಿ ಉದ್ಯೋಗ ಮಾಡುತ್ತಿರುವುದಿಲ್ಲ. ಹಾಗಾಗಿ ನಿವೃತ್ತಿ ವೇತನದಿಂದಲೂ ವಂಚಿತರಾಗುತ್ತಾರೆ. ಮಹಿಳಾ ಕಾರ್ಮಿಕರು ಜೀವನದುದ್ದಕ್ಕೂ ಆರ್ಥಿಕ ಅಭದ್ರತೆಯ ಅಸ್ಥಿರತೆಯಲ್ಲಿ ಕೆಲಸ ಮಾಡಬೇಕಾಗುತ್ತದೆ.

೭.೧೧.೬ ಮಹಿಳಾ ಕಾರ್ಮಿಕರ ಶೈಕ್ಷಣಿಕ ಮಟ್ಟ ಬಹಳ ಕಡಿಮೆ ಇರುವುದರಿಂದ ಅವರು ಆರ್ಥಿಕೇತರ ವಿಷಯಗಳಿಗೆ ಹೆಚ್ಚು ಖರ್ಚು ಮಾಡುತ್ತಾರೆ. ದ.ಕ. ಜಿಲ್ಲೆಯಲ್ಲಿ ಭೂತಾರಾಧನೆ ಬಹಳ ವಿಶಿಷ್ಟವಾದುದು. ಸಾಮಾಜಿಕವಾಗಿ ಕೆಳ ಹಂತದಲ್ಲಿರುವ ಮಹಿಳಾ ಕಾರ್ಮಿಕರು ಭೂತಗಳ ಬಗ್ಗೆ ವಿಶೇಷ ಭಯ ಭಕ್ತಿ ಹೊಂದಿರುವವರು. ಭೂತಾರಾಧನೆಗಾಗಿ, ದೇವರು, ಪೂಜೆ, ಹಬ್ಬ ಹರಿದಿನಗಳು, ಜಾತ್ರೆಗಾಗಿ ಅವರ ಗಳಿಕೆಯೆಲ್ಲಾ ಸೋರಿ ಹೋಗುತ್ತದೆ. ಆರ್ಥಿಕೇತರ ಕಾರಣಗಳಿಗಾಗಿ ಅವರು ತಮ್ಮ ಗಳಿಕೆಯ ಬಹುಪಾಲನ್ನು ಖರ್ಚು ಮಾಡುವುದರಿಂದ ಮಹಿಳಾ ಕಾರ್ಮಿಕರ ಜೀವನ ಮಟ್ಟ ಬಹಳ ಕೆಳಗಿದೆ.

೭.೧೧.೭: ಮಹಿಳಾ ಕಾರ್ಮಿಕರ ಸಬಲೀಕರಣ ಆಗಿದೆಯೇ ಎಂಬ ವಿಶ್ಲೇಷಣೆ ನಡೆಸಲಾಗಿದೆ. ತಾವು ಗಳಿಸಿದ ಆದಾಯವನ್ನು ಅವಿವಾಹಿತರು ಬಹುತೇಕವಾಗಿ ತಂದೆಗೆ ನೀಡಿದರೆ ವಿವಾಹಿತರು ಗಂಡನಿಗೆ ನೀಡಿಬಿಡುತ್ತಾರೆ. ಅದನ್ನು ಹೇಗೆ ಖರ್ಚು ಮಾಡಬೇಕು ಎಂಬ ಬಗ್ಗೆ ಸಂಪೂರ್ಣವಾಗಿ ತೀರ್ಮಾನ ಕೈಗೊಳ್ಳುವ ಅಧಿಕಾರ ಅವರಿಗಿಲ್ಲ. ಮನೆಯಲ್ಲಿ ನಡೆಯುವ ಯಾವುದೇ ವಿಷಯಗಳ ಬಗ್ಗೆ ಅಂತಿಮ ನಿರ್ಧಾರ ಪುರುಷರದ್ದೇ ಆಗಿರುತ್ತದೆ. ಅದನ್ನು ತೀರಾ ಸಹಜವಾದುದು ಎಂದು ಒಪ್ಪಿಕೊಳ್ಳುವ ಮನೋಸ್ಥಿತಿ ಮಹಿಳಾ ಕಾರ್ಮಿಕರದ್ದು. ಆರ್ಥಿಕ ಸ್ವಾತಂತ್ರ್ಯ ಗಳಿಸಿದರೂ ಪರಿಸ್ಥಿತಿಯೊಂದಿಗೆ ರಾಜಿ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಇದೆ.

೭.೧೨ ಮಹಿಳಾ ಕಾರ್ಮಿಕರ ಸಮಸ್ಯೆ ಪರಿಹಾರಕ್ಕೆ ಸಲಹೆಗಳು

೭.೧೨.೧: ಗೇರು ಕಾರ್ಖಾನೆಯ ಕೆಲಸ ನಿಕೃಷ್ಟವಾದುದು ಎಂಬ ಭಾವನೆ ವಿದ್ಯಾವಂತ ಮಹಿಳೆಯರಲ್ಲಿ ಬಲಿಯುತ್ತಿರುವುದು ಒಂದು ಆತಂಕಕಾರಿ ವಿಷಯ. ಗೇರು ಕಾರ್ಖಾನೆಗಳಲ್ಲಿ ದುಡಿಯುವವರಲ್ಲಿ ಬಹುತೇಕರು ಸಾಮಾಜಿಕವಾಗಿ ಹಿಂದುಳಿದವರು ಎಂಬುದೇನೋ ನಿಜವೇ. ಆದರೆ ಅದು ಕೀಳರಿಮೆಯಾಗಿ ಕಾಡದಂತೆ ಮಹಿಳೆಯರಲ್ಲಿ ಜಾಗೃತಿ ಮೂಡಿಸಬೇಕಿದೆ. ಎಲ್ಲಾ ಉದ್ಯೋಗಗಳ ವೃತ್ತಿ ಗೌರವ ಸಮಾನವಾದುದು ಎಂಬ ಪ್ರಾಥಮಿಕ ಸತ್ಯವನ್ನು ಮನಗಾಣಿಸುವ ಪ್ರಯತ್ನಗಳಾಗಬೇಕು. ಮಹಿಳಾ ಸಂಘಟನೆಗಳು, ಸ್ತ್ರೀಶಕ್ತಿ ಗುಂಪುಗಳು ಈ ಕೆಲಸವನ್ನು ಮಾಡಬಹುದು. ಈ ಬಗ್ಗೆ ಹೆಚ್ಚು ಅಧ್ಯಯನಗಳುನಡೆದು ಸಮರ್ಪಕ ಪರಿಹಾರವನ್ನು ಕಂಡುಕೊಳ್ಳಬೇಕಿದೆ.

೭.೧೨.೨: ಮಹಿಳಾ ಕಾರ್ಮಿಕರಿಗೆ ನಿಯಮಿತವಾಗಿ ಊಟ ಉಪಹಾರಗಳ ವ್ಯವಸ್ಥೆಯನ್ನು ಕಾರ್ಖಾನೆಗಳಲ್ಲಿಯೇ ಮಾಡಬೇಕು. ಕೆಲವು ಕಾರ್ಖಾನೆಗಳಲ್ಲಿ ಬೆಳಗ್ಗೆ ೧೧ ಗಂಟೆಗೆ ಚಹಾದ ವ್ಯವಸ್ಥೆಯಿರುತ್ತದೆ. ಆದರೆ ದಿನಪೂರ್ತಿ ದುಡಿಯುವ ಮಹಿಳೆಯರಿಗೆ ಮಧ್ಯಾಹ್ನದ ಹೊತ್ತು ಬಿಸಿಯಾದ ಊಟ ದೊರೆಯುವಂತಾದರೆ ಅವರ ಆರೋಗ್ಯದೊಂದಿಗೆ ಕೆಲಸದ ಸಾಮರ್ಥ್ಯ ಕೂಡಾ ಹೆಚ್ಚಾಗುತ್ತದೆ. ಲಾಭದಾಯಕವಾಗಿ ನಡೆಯುತ್ತಿರುವ ಗೇರು ಸಂಸ್ಕರಣಾ ಘಟಕದ ಮಾಲಿಕರಿಗೆ ಕಾರ್ಮಿಕರಿಗೆ ಊಟ ದೊರಕಿಸುವುದು ಹೆಚ್ಚಿನ ಹೊರೆಯಾಗದು. ಮಾತ್ರವಲ್ಲ ಕಾರ್ಮಿಕರ ದಕ್ಷತೆ ಹೆಚ್ಚಿದಂತೆ ಗುಣಮಟ್ಟದ ಕೆಲಸ ಪಡೆಯಲು ಸಾಧ್ಯವಾಗುತ್ತದೆ.

೭.೧೨.೩: ಗೇರು ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಅವಿವಾಹಿತ ಮಹಿಳೆಯರ ಮದುವೆಯನ್ನು ಬೇಕೆಂದೇ ಮುಂದೂಡಲಾಗುತ್ತದೆ. ಈ ಮಹಿಳೆಯರು ಮದುವೆಯಾಗಿ ಗಂಡನ ಮನೆಗೆ ಹೋಗಿ ಬಿಟ್ಟರೆ ತಮ್ಮ ಗಳಿಕೆಯ ಮೂಲವೊಂದು ಕಡಿಮೆಯಾಗುತ್ತದೆ ಎನ್ನುವ ಹೆತ್ತವರ ಭೀತಿ ಈ ವಿದ್ಯಾಮಾನಕ್ಕೆ ಕಾರಣವಾಗಿದೆ. ಇಂತಹ ಸಂದರ್ಭಗಳಲ್ಲಿ ದುಡಿಯುವ ಮಹಿಳೆಯರು ಸ್ವಲ್ಪ ಸ್ವತಂತ್ರ ಮನೋಭಾವವನ್ನು ರೂಢಿಸಿಕೊಳ್ಳಬೇಕು. ತಮ್ಮ ಕೊರಗನ್ನು ನೇರವಾಗಿ ಹೆತ್ತವರಲ್ಲಿ

[illegible]

ಅಭಿವ್ಯಕ್ತಿಸಬೇಕು. ತಮಗೆ ಸರಿಯಾದ ವರನನ್ನು ತಾವೇ ಹುಡುಕುವ ಛಾತಿ ತೋರಿಸಬೇಕು. ಅಂತಹ ಮಹಿಳೆಯರು ಸ್ತ್ರೀ ಸಂಘಟನೆಗಳ ನೆರವನ್ನು ಪಡೆದು ಸ್ವತಂತ್ರವಾಗಿ ತೀರ್ಮಾನ ಕೈಗೊಳ್ಳುವ ಧೈರ್ಯವಂತಿಕೆಯನ್ನು ತೋರಿಸಬೇಕು.

೭.೧೨.೪: ಮಹಿಳಾ ಕಾರ್ಮಿಕರ ಸಾಮರ್ಥ್ಯಕ್ಕನುಗುಣವಾಗಿ ಅವರ ಗಳಿಕೆ ಇರುತ್ತದೆ. ಸಾಮರ್ಥ್ಯ ಕಡಿಮೆಯಾದಾಗ ಅವರ ಗಳಿಕೆ ಕಡಿಮೆಯಾಗುತ್ತದೆ. ಇದರಿಂದಾಗಿ ಅವರು ಆರ್ಥಿಕ ಅಭದ್ರತೆಯಿಂದ ನರಳಬೇಕಾಗುತ್ತದೆ. ಇದು ಅವರ ದುಡಿಯುವ ಸಾಮರ್ಥ್ಯದ ಮೇಲೆ ಋಣಾತ್ಮಕ ಪರಿಣಾಮವನ್ನು ಬೀರುತ್ತದೆ. ಗೇರು ಕಾರ್ಖಾನೆಗಳಲ್ಲಿ ಕಾರ್ಮಿಕ ಸಂಘಟನೆಗಳಿಲ್ಲ. ಗೇರು ಕಾರ್ಮಿಕರು ಕಾರ್ಮಿಕ ಸಂಘಟನೆಗಳನ್ನು ಮಾಡಿಕೊಂಡು ತಮ್ಮ ಅಸಹಾಯಕ ಪರಿಸ್ಥಿತಿಯಲ್ಲಿ ಕಾರ್ಖಾನೆಯಿಂದ ಕನಿಷ್ಠ ಆರ್ಥಿಕ ನೆರವು ಪಡೆದುಕೊಳ್ಳಲು ಪ್ರಯತ್ನಿಸಬೇಕು. ಗೇರು ಕಾರ್ಖಾನೆಗಳು ಸಾಕಷ್ಟು ಲಾಭ ಪಡೆಯುತ್ತಿರುವುದರಿಂದ ಕಾರ್ಮಿಕರ ಸಂಕಷ್ಟದಲ್ಲಿ ಸಹಕಾರ ನೀಡುವುದು ಅವುಗಳ ನೈತಿಕ ಜವಾಬ್ದಾರಿಯಾಗುತ್ತದೆ.

೭.೧೨.೪: ಬಹುತೇಕ ಮಹಿಳಾ ಕಾರ್ಮಿಕರು ತುಂಬಾ ಕಡಿಮೆ ಶಿಕ್ಷಣ ಪಡೆದವರು. ಅವರು ಆರ್ಥಿಕೇತರ ವಿಷಯಗಳಿಗೆ ತುಂಬಾ ಖರ್ಚು ಮಾಡಿಬಿಡುತ್ತಾರೆ. ಅವರ ಸಂಕಷ್ಟ ಕಾಲದಲ್ಲಿ ಅವರ ಕೈಯಲ್ಲಿ ಹಣ ಇರುವುದಿಲ್ಲ. ಈ ಪರಿಸ್ಥಿತಿ ನಿಭಾಯಿಸಲು ಮಹಿಳಾ ಕಾರ್ಮಿಕರು ಪ್ರತೀ ದಿನ ಪಿಗ್ಮಿ ಖಾತೆಯಲ್ಲಿ ಹಣ ತೊಡಗಿಸುವಂತೆ ಮಾಡಬೇಕು. ಪ್ರತೀ ಗೇರು ಕಾರ್ಖಾನೆಗೆ ಒಬ್ಬ ಪಿಗ್ಮಿ ಸಂಗ್ರಾಹಕ ಪ್ರತೀ ದಿನ ಭೇಟಿ ನೀಡುವಂತಾಗಬೇಕು. ಮಹಿಳಾ ಕಾರ್ಮಿಕರು ಪ್ರತೀ ದಿನ ಒಂದು ನಿಗದಿತ ಮೊತ್ತವನ್ನು ಪಿಗ್ಮಿಯಲ್ಲಿ ಜಮಾವಣೆ ಮಾಡಬೇಕು. ಅಥವಾ ಅವರು ಸ್ತ್ರೀ ಶಕ್ತಿ ಸಂಘಗಳನ್ನು ರಚಿಸಿಕೊಂಡು ಅದರ ಮೂಲಕ ಹನಿ ಹಣಕಾಸು ವ್ಯವಸ್ಥೆಯಲ್ಲಿ ಪಾಲ್ಗೊಳ್ಳಬೇಕು. ಆಗ ಅವರ ಉಳಿತಾಯವು ಅಧಿಕವಾಗುತ್ತದೆ. ಅವರು ರಕ್ಷಿಸಿದ ಹಣವು ಅವರನ್ನು ರಕ್ಷಿಸುತ್ತದೆ.

೭.೧೨.೫: ಮಹಿಳಾ ಕಾರ್ಮಿಕರು ತಾವೇ ಸ್ವತಃ ಗಳಿಸುತ್ತಿದ್ದರೂ ಎಲ್ಲರೂ ಆರ್ಥಿಕ ಸಬಲೀಕರಣ ಹೊಂದಿಲ್ಲ. ಅವರು ಹೆತ್ತವರಿಗೆ ಅಥವಾ ಗಂಡಂದಿರಿಗೆ ತಮ್ಮ ಆದಾಯವನ್ನು ಕೊಟ್ಟು ಬಿಡುವುದುಂಟು. ಇದರಿಂದಾಗಿ ಕೆಲವು ಕುಟುಂಬಗಳ ಗಂಡಸರು ಸೋಮಾರಿಯಾಗಿ ಕಾಲ ಕಳೆದು ಮಹಿಳಾ ಕಾರ್ಮಿಕರ ಗಳಿಕೆಯಲ್ಲಿ ಮೋಜಿನ ಜೀವನ ನಡೆಸುತ್ತಾರೆ. ಬಹುತೇಕ ಮಹಿಳಾ ಕಾರ್ಮಿಕರು ಸಾಮಾಜಿಕವಾಗಿ ತೀರ್ಮಾನ ಕೈಗೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುವುದಿಲ್ಲ. ಇದಕ್ಕೆ ಮಹಿಳಾ ಕಾರ್ಮಿಕರ ಹಿಂಜರಿಕೆ ಕಾರಣ. ಇಂದು ಸ್ತ್ರೀಶಕ್ತಿ ಹಾಗೂ ಸ್ವಸಹಾಯ ಸಂಘಗಳಿಂದಾಗಿ ಬಹುತೇಕ ಮಹಿಳೆಯರು ಸಬಲೀಕರಣ ಹೊಂದಿರುವಾಗ ಗೇರು ಕಾರ್ಖಾನೆಯ ಮಹಿಳೆಯರು ಹಿಂದೆ ಬಿದ್ದಿರುವುದು ಆತಂಕದ ವಿಷಯ. ಈ ಮಹಿಳೆಯರ ಸಬಲೀಕರಣಕ್ಕಾಗಿ ಇನ್ನಷ್ಟು ಪ್ರಯತ್ನಗಳು ಆಗಬೇಕಿದೆ.

ಮಹಿಳಾ ಕಾರ್ಮಿಕರ ಹೆಚ್ಚಿನ ಸಮಸ್ಯೆಗಳಿಗೆ ಅರಿವಿನ ಕೊರತೆ ಕಾರಣ. ಅವರು ಮಹಿಳಾ ಸಂಘಗಳನ್ನು ರಚಿಸಿಕೊಂಡು ಸಬಲೀಕರಣ ಹೊಂದಲು ಯತ್ನಿಸಬೇಕಾಗಿದೆ. ಅಂತಹ ಪ್ರಯತ್ನಗಳಿಗೆ ಸಮಾಜದ ಮುಕ್ತ ಮನಸ್ಸಿನ ಸಹಕಾರ ಅಗತ್ಯವಿದೆ.

ಅಧ್ಯಾಯ ೮

ಉಪಸಂಹಾರ

೮.೧. ಅಧ್ಯಯನದ ಸಾರ ಸಂಗ್ರಹ

೮.೨. ಭವಿಷ್ಯಕ್ಕೊಂದು ಮಾರ್ಗ ಸೂಚಿ

ಅಧ್ಯಾಯ ೮
ಉಪಸಂಹಾರ

೮.೧ ಅಧ್ಯಯನದ ಸಾರ ಸಂಗ್ರಹ

ಹಿಂದೆ ಬ್ರಿಟಿಷರು ಆಳುತ್ತಿದ್ದ ಕಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಈಗಿನ ಕಾಸರಗೋಡು, ದಕ್ಷಿಣಕನ್ನಡ, ಉಡುಪಿ ಜಿಲ್ಲೆಗಳನ್ನು ಪೂರ್ಣವಾಗಿ ಮತ್ತು ಉತ್ತರಕನ್ನಡವನ್ನು ಭಾಗಶಃ ಒಳಗೊಂಡಿತ್ತು. ದಕ್ಷಿಣ ಕನ್ನಡ ಜಿಲ್ಲೆಯು ಭತ್ತದ ಬೆಳೆಗೆ ಜಗದ್ವಿಖ್ಯಾತವಾಗಿತ್ತು. ಎಂಟನೇ ಶತಮಾನಕ್ಕೂ ಪೂರ್ವದಲ್ಲೇ ಅರಬ್ಬೀ ವರ್ತಕರು ಅಕ್ಕಿಗಾಗಿ ದಕ್ಷಿಣ ಕನ್ನಡಕ್ಕೆ ಬರುವಂತಾಗಿತ್ತು. ಈಗಿನ ದಕ್ಷಿಣ ಕನ್ನಡದ ವ್ಯಾಪ್ತಿ ಕೇವಲ ಐದು ತಾಲೂಕುಗಳಿಗಷ್ಟೇ ಸೀಮಿತಗೊಂಡಿದೆ. ಭತ್ತದ ಬೆಳೆ ಕಡಿಮೆಯಾದರೂ ಪೂರ್ತಿ ನಾಶವಾಗಿಲ್ಲ. ಸಾಂಪ್ರದಾಯಿಕ ಬೆಳೆಗಳಾದ ಅಡಿಕೆ ಮತ್ತು ಗೇರನ್ನು ನಿಧಾನವಾಗಿ ರಬ್ಬರ್ ಆಕ್ರಮಿಸುತ್ತಾ ಇದೆ. ಜಾಗತೀಕರಣದ ಅಂಗವಾಗಿ ಜಿಲ್ಲೆಯು ಕೈಗಾರಿಕೀಕರಣಕ್ಕೆ ಒಳಗಾಗಿದ್ದು ಕೃಷಿಯು ತನ್ನ ಮಹತ್ವವನ್ನು ಕಳೆದುಕೊಳ್ಳುತ್ತಿದೆ.

ಇಂತಹ ಸಂಕ್ರಮಣ ಘಟ್ಟದಲ್ಲಿ ನಿಧಾನವಾಗಿ ಕಣ್ಮರೆಯಾಗುತ್ತಿರುವ ಗೇರು ಕೃಷಿಯ ಭವಿಷ್ಯದ ಬಗ್ಗೆ ಒಂದು ವಿಶ್ಲೇಷಣೆಯ ಅಗತ್ಯವಿದೆ. ಭವಿಷ್ಯದ ಬಗ್ಗೆ ಯೋಚಿಸಬೇಕಾದರೆ ಭೂತ ಮತ್ತು ವರ್ತಮಾನ ಗೊತ್ತಿರಬೇಕು. ಈ ನಿಟ್ಟಿನಲ್ಲಿ ಪ್ರಸಕ್ತ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ. ಗೇರು ಉತ್ಪಾದನೆ, ಸಂಸ್ಕರಣೆ ಮತ್ತು ಮಾರಾಟಕ್ಕೆ ಸಂಬಂಧಿಸಿದ ಸಮಸ್ತ ಸಮಸ್ಯೆಗಳನ್ನು ಕಂಡು ಹಿಡಿದು ಅವುಗಳಿಗೆ ಸೂಕ್ತ ಪರಿಹಾರಗಳನ್ನು ಸೂಚಿಸುವುದು ಈ ಅಧ್ಯಯನದ ಪ್ರಮುಖ ಉದ್ದೇಶವಾಗಿರುತ್ತದೆ. ಅದನ್ನು ಏಳನೇ ಅಧ್ಯಾಯದಲ್ಲಿ ಸಮಗ್ರವಾಗಿ ಮಾಡಲಾಗಿದೆ. ಪ್ರಸಕ್ತ ಅಧ್ಯಯನದ ಸಾರವನ್ನು ಹೀಗೆ ಸಂಗ್ರಹಿಸಬಹುದು.

- ಗೇರು ಬೆಳೆಗಾರರು ಮನಸ್ಸಿಟ್ಟು ಗೇರು ಬೆಳೆಯುತ್ತಿಲ್ಲ. ಭೂಮಿ ತಪ್ಪಿ ಹೋಗಬಾರದು ಎಂಬ ಕಾರಣಕ್ಕೋ ಅಥವಾ ಯಾವುದಾದರೂ ಒಂದು ಕೃಷಿ ಇದ್ದರಾಯಿತು ಎಂಬ ಕಾರಣಕ್ಕೋ ಗೇರು ಬೆಳೆಯುತ್ತಿದ್ದಾರೆ. ಗೇರು ಇಳುವರಿಯ ಹೆಚ್ಚಳ, ಅಧಿಕ ಉತ್ಪತ್ತಿಯ ಗೇರು ತಳಿಗಳ ಬಳಕೆ, ಸುಧಾರಿತ ಗೇರು ಬೇಸಾಯ ಕ್ರಮಗಳನ್ನು ಅಳವಡಿಸಿ ಗೇರನ್ನು ಒಂದು ಆರ್ಥಿಕ ಬೆಳೆಯನ್ನಾಗಿಸುವ ಆಸಕ್ತಿ ಅವರಲ್ಲಿ ಇಲ್ಲ. ಪರಿಣಾಮವಾಗಿ ಗೇರು ಬೆಳೆಗಾರರು ನಿಜವಾಗಿ ಪಡೆಯಬೇಕಿರುವುದಕ್ಕಿಂತ ಕಡಿಮೆ ಆದಾಯ ಪಡೆಯುತ್ತಿದ್ದಾರೆ. ಈ ಸಮಸ್ಯೆಯನ್ನು ಪರಿಹರಿಸಿ ಅವರ ಆದಾಯವನ್ನು ಹೆಚ್ಚಿಸಬೇಕಾದರೆ ಗೇರು ಬೆಳೆಗಾರರಿಗೆ ವೈಜ್ಞಾನಿಕ ಶಿಕ್ಷಣ ಮತ್ತು ತರಬೇತಿಯನ್ನು ನೀಡಬೇಕು. ಪುತ್ತೂರಿನಲ್ಲಿರುವ ಗೇರು ಸಂಶೋಧನಾ ನಿರ್ದೇಶನಾಲಯ ಈ ಕಾರ್ಯವನ್ನು ತುರ್ತಾಗಿ ಮಾಡಬೇಕಾಗಿದೆ. ಗೇರು ಬೆಳೆಯನ್ನು ಪೂರ್ಣ ಪ್ರಮಾಣದ ಆರ್ಥಿಕ ಬೆಳೆಯನ್ನಾಗಿಸುವ ದಿಶೆಯಲ್ಲಿ ಈ ಸಂಸ್ಥೆ ಕಾರ್ಯೋನ್ಮುಖವಾಗಬೇಕು.
- ಗೇರು ಬೆಳೆಗಾರರಲ್ಲಿ ಅನೇಕರು ಗೇರು ಕೃಷಿಯಿಂದ ರಬ್ಬರ್ ಬೆಳೆಯತ್ತ ವಾಲುತ್ತಿದ್ದಾರೆ. ರಬ್ಬರ್ ಬೆಳೆ ಹೆಚ್ಚು ಲಾಭದಾಯಕ ಮತ್ತು ನಿಶ್ಚಿತ ಆದಾಯವನ್ನು ತರುವ ಬೆಳೆ ಎಂಬ ಕಲ್ಪನೆ ಇದಕ್ಕೆ ಕಾರಣ. ಈ ಭ್ರಮೆಯನ್ನು ನಿವಾರಿಸಲೆಂದು ಪ್ರಸಕ್ತ ಅಧ್ಯಯನವು ಗೇರು ಮತ್ತು ರಬ್ಬರ್ ಬೆಳೆಗಳ ಖರ್ಚು- ಆದಾಯಗಳ ತುಲನಾತ್ಮಕ ವಿಶ್ಲೇಷಣೆ ನಡೆಸಿದೆ. ಅದರ ಪ್ರಕಾರ ರಬ್ಬರ್ ಬೆಳೆಗಿಂತ ಗೇರು ಬೆಳೆಯೆ ಹೆಚ್ಚು ಲಾಭದಾಯಕ. ಆದರೂ ಗೇರು ಭೂಮಿಯಲ್ಲಿ ರಬ್ಬರ್

ಕೃಷಿ ಮಾಡುವ ಕಾಯಕ ಎಡೆಬಿಡದೆ ನಡೆಯುತ್ತಿದೆ. ಹೀಗಾದಲ್ಲಿ ಮುಂದೊಂದು ದಿನ ಗೇರು ಕೃಷಿ ಜಿಲ್ಲೆಯಿಂದ ಸಂಪೂರ್ಣವಾಗಿ ಮಾಯವಾಗಲಿದೆ. ಈ ಬಗ್ಗೆ ಸರಕಾರ ಗೇರು ನೀತಿಯೊಂದನ್ನು ರೂಪಿಸಬೇಕಾಗಿದೆ.

- ಗೇರು ಇಳುವರಿಯು ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಾ ಹೋಗುತ್ತಿದೆ. ಪ್ರತಿಕೂಲಕರ ಹವಮಾನವು ಇಳುವರಿಯ ಇಳಿಕೆಯಲ್ಲಿ ತನ್ನದೇ ಆದ ಪಾತ್ರ ವಹಿಸುತ್ತಿದೆ. ಗೇರು ಬೆಳೆಯನ್ನು ವೈಜ್ಞಾನಿಕವಾಗಿ ನಿರ್ವಹಿಸಬಹುದು; ಗೇರು ಬೀಜದಿಂದ ಸಮೃದ್ಧ ಆದಾಯ ಪಡೆಯಬಹುದು ಎಂಬ ವಾಸ್ತವಿಕ ಸಂಗತಿ ಬಹುತೇಕ ಕೃಷಿಕರಿಗಿಲ್ಲ. ಈ ಬಗ್ಗೆ ಕೃಷಿ ಇಲಾಖೆಯು ಗೇರು ಬೆಳೆಗಾರರಿಗೆ ಮಾಹಿತಿ ನೀಡಿ ಅವರಲ್ಲಿ ಹೊಸ ಉತ್ಸಾಹ ಉಕ್ಕಿಸಬೇಕಿದೆ. ರಬ್ಬರ್ ಬೆಳೆಯನ್ನು ಹೆಚ್ಚಿಸಲು ರಬ್ಬರ್ ಬೋರ್ಡ್ ಇರುವಂತೆ ಗೇರು ಕೃಷಿಯನ್ನು ಉತ್ತೇಜಿಸಲು ಗೇರು ಮಂಡಳಿಯೊಂದನ್ನು ರಚಿಸಬೇಕಾಗಿದೆ. ಆದರೆ ಅದು ಹಳೆಯ ಗೇರು ನಿಗಮದಂತೆ ನಿಷ್ಕ್ರಿಯವಾಗದೆ ಸಕ್ರಿಯವಾಗಿ ಗೇರು ಕೃಷಿಯ ಹೆಚ್ಚಳದಲ್ಲಿ ತನ್ನನ್ನು ತೊಡಗಿಸಿಕೊಳ್ಳಬೇಕಿದೆ.
- ಸರಕಾರ ಒದಗಿಸುವ ಅಂಕಿ ಅಂಶಗಳ ಪ್ರಕಾರ ಪ್ರತೀ ವರ್ಷ ಗೇರು ಇಳುವರಿ ಮತ್ತು ಗೇರು ಬೆಳೆಯುವ ಪ್ರದೇಶವು ಅಧಿಕವಾಗುತ್ತಾ ಹೋಗುತ್ತಿದೆ. ಆದರೆ ಸಂಶೋಧಕರು ಮತ್ತು ಪುತ್ತೂರಿನ ಗೇರು ನಿರ್ದೇಶನಾಲಯ ಇದನ್ನು ಒಪ್ಪುತ್ತಿಲ್ಲ. ಸರಕಾರ ಅಂದಾಜಿಗೆ ಅಂಕಿ ಅಂಶಗಳನ್ನು ನೀಡುತ್ತಿದೆ. ಹಿಂದಿನ ವರ್ಷದ ಅಂಕಿ ಅಂಶಗಳನ್ನು ಒಂದಷ್ಟು ಹೆಚ್ಚಿಸಿ ಚಾಲ್ತಿ ವರ್ಷದ ಅಂಕಿ ಅಂಶಗಳಾಗಿ ಪರಿವರ್ತಿಸಲಾಗಿದೆ ಎನ್ನುವುದು ಸಂಶೋಧಕರ ಮತ್ತು ಗೇರು ನಿರ್ದೇಶನಾಲಯದ ವಾದ. ಕ್ಷೇತ್ರಾಧ್ಯಯನ ನಡೆಸುವಾಗ ಎಷ್ಟೋ ಗೇರು ಪ್ರದೇಶ ರಬ್ಬರ್ ಪ್ರದೇಶವಾಗಿ ಮಾರ್ಪಟ್ಟದ್ದು ಅನುಭವಕ್ಕೆ ಬರುತ್ತಿದೆ. ಇನ್ನಾದರೂ ಸರಕಾರ ವಾಸ್ತವಿಕತೆಗೆ ಕಣ್ಣು ತೆರೆಯಬೇಕು. ಜಿಲ್ಲೆಯಲ್ಲಿ ಗೇರು ಕೃಷಿಯ ಸ್ಥಿತಿಗತಿ ಏನಾಗಿದೆ ಎಂಬ ಬಗ್ಗೆ ಸಮಗ್ರ ಅಧ್ಯಯನ ನಡೆಸಿ ಗೇರು ಕೃಷಿಯನ್ನು ಉಳಿಸುವ ಮತ್ತು ವಿಸ್ತರಿಸುವ ಪ್ರಾಮಾಣಿಕ ಪ್ರಯತ್ನ ಪಡಬೇಕು.
- ಗೇರು ಸಸಿಗಳನ್ನು, ಗೇರು ಹಣ್ಣುಗಳನ್ನು ಹಾಗೂ ಗೇರು ಬೀಜಗಳನ್ನು ಮೃಗಗಳಿಂದ ಮತ್ತು ಕಳ್ಳ ಕಾಕರಿಂದ ಸಂರಕ್ಷಿಸುವುದು ಒಂದು ಸಮಸ್ಯೆಯಾಗಿದೆ. ಈ ಸಮಸ್ಯೆ ಬಹುತೇಕವಾಗಿ ಎಲ್ಲಾ ಕೃಷಿ ಬೆಳೆಯಲ್ಲೂ ಇದೆ. ಅವಶ್ಯಕತೆಯೆ ಆವಿಷ್ಕಾರದ ಅಮ್ಮ ಎಂಬ ಗಾದೆಯಿದೆ. ಅದರಂತೆ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಿದೆ. ಗೇರು ಹಾಡಿಗೆ ಸಮರ್ಪಕವಾದ ಬೇಲಿ ನಿರ್ಮಾಣ ಒಂದು ಹಾದಿಯಾದರೆ ಅಗತ್ಯ ಬಿದ್ದಾಗ ಕಾವಲು ಕಾಯುವುದು ಇನ್ನೊಂದು ಹಾದಿ. ಆದರೂ ಬೆಳೆ ನಷ್ಟವಾದರೆ, ಬೆಳೆ ವಿಮೆಯಿಂದ ಈ ನಷ್ಟವನ್ನು ಭರಿಸಲು ಸಾಧ್ಯವಿದೆ. ಹವಮಾನದ ಪ್ರತಿಕೂಲತೆಯಿಂದ ಬೆಳೆ ನಷ್ಟವಾಗುವ ಸಂದರ್ಭಗಳಲ್ಲಿ ಬೆಳೆ ವಿಮೆಯು ಗೇರು ಕೃಷಿಕರನ್ನು ರಕ್ಷಿಸುತ್ತದೆ. ಆದರೆ ವಿಮಾ ಸೌಲಭ್ಯವನ್ನು ಪಡೆಯುವಲ್ಲಿ ರೈತರು ಎದುರಿಸಬೇಕಾದ ಹಲವಾರು ಅಡ್ಡಿ ಆತಂಕಗಳನ್ನು ನಿವಾರಿಸಿ ಸಂತ್ರಸ್ತ ಗೇರು ಬೆಳೆಗಾರರಿಗೆ ಅದರ ಪೂರ್ಣ ಪ್ರಮಾಣದ ಪ್ರಯೋಜನ ದೊರೆಯುವಂತಾಗಬೇಕು.
- ಗೇರು ಬೀಜ ಬೆಳೆಗಾರರು ಸಂಗ್ರಹಿಸಿಡುವ ಹಾಗೂ ಸಾಗಾಟದ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದಿದೆ. ಬಹುತೇಕ ಗೇರು ಬೆಳೆಗಾರರು ಸಣ್ಣ ಮತ್ತು ಅಂಚಿನ ರೈತರು. ಹಾಗಾಗಿ ಅವರಲ್ಲಿ ಗೇರು ಬೀಜ ಸಂಗ್ರಹಿಸಿಡುವ ವ್ಯವಸ್ಥೆ ಇಲ್ಲ. ಮುಖ್ಯ ರಸ್ತೆಯಿಂದ ದೂರದಲ್ಲಿರುವ ಅವರ ಗೇರು ಹಾಡಿಗಳಿಗೆ ಸಾರಿಗೆ ಸಂಪರ್ಕವಿಲ್ಲ. ಈ ಕಾರಣಗಳಿಂದಾಗಿ ಅವರು ತಮ್ಮ ಉತ್ಪನ್ನವನ್ನು ಸಿಕ್ಕಿದ ಬೆಲೆಗೆ ಸ್ಥಳೀಯ ವ್ಯಾಪಾರಿಗಳಿಗೆ ಮಾರಾಟ ಮಾಡಬೇಕಾದ ಅನಿವಾರ್ಯತೆ ಇದೆ. ಗೇರುಬೀಜದ ಬೆಲೆ ನಿರ್ಣಯಕ್ಕೆ ವೈಜ್ಞಾನಿಕ ಮಾನದಂಡಗಳಿಲ್ಲ. ಮಧ್ಯವರ್ತಿಗಳ ಅಸ್ತಿತ್ವದಿಂದಾಗಿ ಗೇರು ಬೆಳೆಗಾರರು ತಮ್ಮ ಬೆಳೆಗೆ ನ್ಯಾಯ ಬದ್ಧವಾದ ಪ್ರತಿಫಲ ಪಡೆಯುತ್ತಿಲ್ಲ. ಗೇರು ಬೆಳೆಗಾರರನ್ನು ಶೋಷಿಸಲಾಗುತ್ತಿದೆ. ಈ ಸಮಸ್ಯೆಗಳ ಪರಿಹಾರಕ್ಕೆ

ಗೇರು ಬೆಳೆಗಾರರ ಸಹಕಾರಿ ಸಂಘವೊಂದನ್ನು ಸ್ಥಾಪಿಸುವುದು ಸೂಕ್ತ. ಅದು ಎಲ್ಲಾ ಗೇರು ಬೆಳೆಗಾರರಿಂದ ಗೇರು ಬೀಜ ಕೊಳ್ಳುವ ಏಕ ಗ್ರಾಹಕನಾಗಬೇಕು. ಸಂಸ್ಕರಣಾ ಘಟಕಗಳಿಗೆ ಬೀಜ ಮಾರಾಟ ಮಾಡುವ ಏಕ ವ್ಯಾಪಾರಿಯಾಗಬೇಕು. ಆಗ ಮಾತ್ರ ಗೇರು ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆ ಪರಿಹಾರವಾಗಲು ಸಾಧ್ಯ. ಈ ಸಹಕಾರಿ ಸಂಘವು ಸ್ವಂತ ವಾಹನವನ್ನು ಮತ್ತು ಉಗ್ರಾಣವನ್ನು ಹೊಂದಿರಬೇಕು. ಆಗ ಸಾಗಾಟದ ಮತ್ತು ಸಂಗ್ರಹಿಸಿಡುವ ಸಮಸ್ಯೆಗಳಿಗೂ ಪರಿಹಾರ ದೊರೆಯುತ್ತದೆ.

- ಗೇರು ಬೆಳೆಗಾರರು ಮತ್ತು ಸಂಸ್ಕರಣಾ ಘಟಕಗಳು ಕೃಷಿ ಕೂಲಿ ಕಾರ್ಮಿಕರ ಕೊರತೆ ಎದುರಿಸಬೇಕಾಗಿದೆ. ಇದು ಜಿಲ್ಲೆಯ ಒಂದು ಸಮಗ್ರ ಸಮಸ್ಯೆ. ಸಣ್ಣ ಮತ್ತು ಅಂಚಿನ ರೈತರಿಗೆ ಕೃಷಿ ಕೂಲಿ ಕಾರ್ಮಿಕರ ಅಗತ್ಯವಿರುವುದಿಲ್ಲ. ದೊಡ್ಡ ಗೇರು ಹಾಡಿಗಳನ್ನು ಹೊಂದಿರುವವರು ಕೃಷಿ ಕೂಲಿ ಕಾರ್ಮಿಕರನ್ನು ವಿವಿಧ ಕಾರ್ಯಗಳಿಗೆ ಅವಲಂಬಿಸಬೇಕಾಗಿ ಬಂದಿದೆ. ಗೇರು ಬೆಳೆಗಾರರು ಸ್ವಸಹಾಯ ಸಂಘಗಳನ್ನು ರಚಿಸಿಕೊಂಡು ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಿದೆ. ಸಣ್ಣ ಮತ್ತು ಅಂಚಿನ ರೈತರು ದೊಡ್ಡ ಹಾಡಿಗಳಲ್ಲಿ ನಿಶ್ಚಿತ ಆದಾಯಕ್ಕೆ ಕೆಲಸ ಮಾಡಲು ಸಾಧ್ಯವಿದೆ. ಯಾವ ವೃತ್ತಿಯೂ ಮೇಲಲ್ಲ; ಯಾವ ವೃತ್ತಿಯೂ ಕೀಳಲ್ಲ ಎಂಬ ಮನೋಬಾವ ಮೂಡಿದರೆ ಈ ಸಮಸ್ಯೆ ಪರಿಹಾರವಾಗುತ್ತದೆ. ಇದನ್ನೇ ನಾವು ಶ್ರಮ ಗೌರವ ಎಂದು ಕರೆಯುತ್ತೇವೆ. ಗೇರು ಬೆಳೆಗಾರರ ಒಕ್ಕೂಟವೊಂದು ರಚನೆಯಾಗಿ ಈ ಕೆಲಸವನ್ನು ಮಾಡಬೇಕಿದೆ.
- ಗೇರು ಬೆಳೆಗಾರರಿಗೆ ಸಾಮಯಿಕ ಹಣಕಾಸು ನೆರವು ಸಿಗುತ್ತಿಲ್ಲ. ಇದರಿಂದಾಗಿ ಅವರು ತೊಂದರೆಗೆ ಒಳಗಾಗುತ್ತಾರೆ. ಗೇರು ಬೆಳೆಗಾರರ ಸಹಕಾರಿ ಸಂಘವೊಂದು ರಚನೆಯಾದರೆ ಈ ಸಮಸ್ಯೆ ಬಗೆ ಹರಿಯುತ್ತದೆ. ಅಂತಹ ಸಹಕಾರಿ ಸಂಘವು ಕಡಿಮೆ ಬಡ್ಡಿ ದರದಲ್ಲಿ ಗೇರು ಬೆಳೆಗಾರರಿಗೆ ಅತ್ಯಂತ ಅಲ್ಪಾವಧಿ ಸಾಲವನ್ನು ನೀಡಬೇಕು. ಬಹುಬೇಗ ಪ್ರತಿಫಲ ನೀಡುವ ಸುಧಾರಿತ ತಳಿಯ ಗೇರು ಸಸಿಗಳನ್ನು ರೈತರು ನೆಡಲಿಕ್ಕೆ ಮಧ್ಯಮಾವಧಿ ಸಾಲವನ್ನು ಕೂಡಾ ನೀಡಬಹುದು.
- ಗೇರು ಬೀಜಕ್ಕಿಂತ ಹತ್ತು ಪಟ್ಟು ಹೆಚ್ಚು ಬೆಳೆಯುವ ಗೇರು ಹಣ್ಣುಗಳ ಸಮರ್ಪಕ ಬಳಕೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗುತ್ತಿಲ್ಲ. ಗೇರು ಹಣ್ಣಿನಿಂದ ಫೆನಿ ತಯಾರಿಸಬಹುದು. ಗೇರು ಹಣ್ಣಿನಿಂದ ಪಾನೀಯ ಜಾಮು, ಚಾಕಲೇಟ್ ಮತ್ತು ಇತರೆ ತಿನಿಸುಗಳನ್ನು ತಯಾರಿಸಬಹುದು. ಗೇರು ಹಣ್ಣು ಅತ್ಯಂತ ಪೌಷ್ಟಿಕವಾದುದು. ಅದು ನಿರುಪಯೋಗಿಯಾಗಿ ಪೋಲಾಗುವುದನ್ನು ತಪ್ಪಿಸಬೇಕು. ಗೇರು ಬೆಳೆಗಾರರು ಒಂದು ಒಕ್ಕೂಟ ರಚಿಸಿ ತಾಲೂಕಿಗೊಂದು ಗೇರು ಫೆನಿ, ಪಾನೀಯ, ಜಾಮು ಮತ್ತಿತರ ಉತ್ಪನ್ನಗಳನ್ನು ತಯಾರಿಸುವ ಘಟಕ ಆರಂಭಿಸಬೇಕು. ಗ್ರಾಮಗಳಿಂದ ಗೇರು ಹಣ್ಣು ನೇರವಾಗಿ ಇಲ್ಲಿಗೆ ಪೂರೈಕೆಯಾಗುವಂತಿರಬೇಕು. ಈ ಘಟಕವು ಹೆಚ್ಚು ಕಾಲ ಚಟುವಟಿಕೆ ನಡೆಸುವಂತಾಗಲು ಹಲಸಿನ ಹಣ್ಣಿನ ಮತ್ತು ಅನಾನಸಿನ ಜಾಮ್ ಕೂಡಾ ತಯಾರಿಸುವ ಕಾಯಕಕ್ಕೆ ಇಳಿಯಬೇಕು. ದ.ಕ. ಜಿಲ್ಲೆಯ ಪುತ್ತೂರು ತಾಲೂಕಿನ ಸಮೀಪ ಕಾವು ಎಂಬಲ್ಲಿ ಗೇರು ಹಣ್ಣಿನಿಂದ ಸೋಡಾ ತಯಾರಿಸುವ ಗೃಹ ಕೈಗಾರಿಕೆಯೊಂದು ಪ್ರಾರಂಭವಾಗಿದ್ದು ಇದೊಂದು ಪ್ರಾರಂಭಿಕ ಪ್ರಯತ್ನವಾಗಿದೆ. ಗೇರು ಹಣ್ಣಿನ ಆರ್ಥಿಕ ಬಳಕೆಯಿಂದ ಗೇರು ಕೃಷಿಕರ ಆದಾಯ ಅಧಿಕವಾಗುತ್ತದೆ. ಪರಿಣಾಮವಾಗಿ ಜೀವನ ಮಟ್ಟ ಮೇಲಕ್ಕೇರುತ್ತದೆ. ಗೇರು ಕೃಷಿ ವಿಸ್ತರಣೆಗೆ ಉತ್ತೇಜನ ದೊರೆತಂತಾಗುತ್ತದೆ.

[illegible]

❖ ಗೇರು ಬೆಳೆಗಾರರು ಎದುರಿಸುತ್ತಿರುವ ಒಂದು ವಿಪತ್ತೆಂದರೆ ಎಂಡೋ ಸಲ್ಫಾನ್ ಸಮಸ್ಯೆ. ಈ ವಿಷಯುಕ್ತ ಕೀಟನಾಶಕದ ಬಳಕೆಯಿಂದ ಅನೇಕರು ವಿಕಲ ಚೇತನರಾಗಿದ್ದಾರೆ. ಕೆಲವರು ವಿಕಲಮತಿಗಳಾಗಿದ್ದಾರೆ. ವಿಕಲಚೇತನ ಮತ್ತು ವಿಕಲ ಮತಿಯ ಮಕ್ಕಳು ಜನನವಾಗುತ್ತಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯೊಂದರಲ್ಲೇ ೪೩ ಮಂದಿ ಎಂಡೋಸಲ್ಫಾನ್ ದುಷ್ಪಾರಿಣಾಮಗಳಿಂದಾಗಿ ಮರಣ ಹೊಂದಿದ್ದು ೩೧೯೬ ಮಂದಿ ಎಂಡೋ ಬಾಧಿತರಾಗಿ ಸಾವು ಬದುಕಿನ ನಡುವೆ ಹೋರಾಟ ನಡೆಸಿದ್ದಾರೆ. ೨೦೧೩ ರಲ್ಲಿ ಎಂಡೋ ಸಲ್ಫಾನ್ ನಿಷೇಧ ಕಾಯ್ದೆ ಜಾರಿ ಮಾಡಿದರೂ ಎಂಡೋ ಸಲ್ಫಾನಿನಿಂದಾಗಬಹುದಾದ ಹಾನಿ ಆಗಿಹೋಗಿದೆ. ಎಂಡೋ ಸಲ್ಫಾನ್ ಪೀಡಿತರಿಗೆ ಸಾಕಷ್ಟು ಪರಿಹಾರ ದೊರೆತಿಲ್ಲ. ಪುನರ್ವಸತಿ ಕಾರ್ಯ ಸಂಪೂರ್ಣವಾಗಿ ನಡೆದಿಲ್ಲ. ಎಂಡೋ ಸಲ್ಫಾನ್ ಸಂತ್ರಸ್ತರ ಪರವಾಗಿ ಸಾಕಷ್ಟು ಹೋರಾಟಗಳೂ ನಡೆದಿವೆ. ಸರ್ಕಾರ ಒಂದಷ್ಟು ಪರಿಹಾರವನ್ನು ನೀಡುತ್ತಿದೆ. ಒಂದೆಡೆ ಗೇರು ಕೃಷಿ ಬಡವರ ಬದುಕಿಗೆ ಆಧಾರವಾಗಬಲ್ಲದು ಎಂಬ ಆಶಾವಾದ ವ್ಯಕ್ತವಾಗುತ್ತಿದ್ದರೆ, ಇನ್ನೊಂದೆಡೆ ಹಲವು ಅಮಾಯಕರ ಬದುಕುವ ಹಕ್ಕನ್ನು ಕಸಿದುಕೊಳ್ಳುತ್ತಿರುವುದು ವಿಪರ್ಯಾಸ. ಆರ್ಥಿಕ ಲಾಭಕ್ಕಾಗಿ ಸಾಮಾಜಿಕ ಸ್ವಾಸ್ಥ್ಯವನ್ನು ಬುಡಮೇಲು ಮಾಡುತ್ತಿರುವ ಎಂಡೋ ಸಲ್ಫಾನ್ ಸಮಸ್ಯೆಯ ಕುರಿತಾಗಿ ವಿಸ್ತೃತವಾದ ಅಧ್ಯಯನವಾಗಬೇಕಾಗಿದೆ. ಎಂಡೋ ಸಲ್ಫಾನ್‌ಗೆ ಬದಲಿಯಾಗಿ ಕೇಳಿ ಬರುತ್ತಿರುವ ಕೀಟ ನಾಶಕಗಳು ಇನ್ನೂ ಘೋರವಾದ ಪರಿಣಾಮಗಳನ್ನು ಉಂಟುಮಾಡುವಂತಹುದು. ಈ ಎಲ್ಲಾ ಸಮಸ್ಯೆಗಳಿಗೆ ವಿಷಯುಕ್ತ ಕೀಟ ನಾಶಕಗಳನ್ನು ಬಳಸದಿರುವುದೇ ಸೂಕ್ತ ಪರಿಹಾರ. ಗೇರಿಗೆ ಬರುವ ಕ್ರಿಮಿಕೀಟಗಳನ್ನು ನಾಶ ಮಾಡಲು ಪ್ರಯೋಗಾಲಯಗಳಲ್ಲಿ ಪರಾನ್ನ ಜೀವಿಗಳನ್ನು ಅಭಿವೃದ್ಧಿ ಪಡಿಸಬೇಕಾಗಿದೆ ನಮ್ಮ ಜೀವ ವಿಜ್ಞಾನಿಗಳು ಈ ಬಗ್ಗೆ ಸಂಶೋಧನೆ ನಡೆಸಿ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಅಗತ್ಯವಿದೆ. ಕೆಂಪು ಮರ ಇರುವೆ (ಚಿಗಳಿ) ಗೇರು ಮರದಲ್ಲಿ ಗೂಡು ಕಟ್ಟುವಂತೆ ಮಾಡಿದರೆ ಅವುಗಳು ವ್ಯಾಪಕವಾಗಿ ಮರದ ಗೆಲ್ಲು, ಎಲೆ ಮತ್ತು ಹೂವುಗಳ ಮೇಲೆ ಸುತ್ತಾಡಿ ಚಹಾ ಸೊಳ್ಳೆಯ ಹಾವಳಿಯನ್ನು ಬಹುಮಟ್ಟಿಗೆ ತಡೆಗಟ್ಟುವಲ್ಲಿ ನೆರವಾಗುತ್ತದೆ. ಚಹಾ ಸೊಳ್ಳೆಯ ಮೊಟ್ಟೆ ಹಾಗೂ ಮರಿಗಳನ್ನು ಈ ಇರುವೆಗಳು ತಿನ್ನುತ್ತವೆ. ಕಾಸರಕ ಮರದ ಎಲೆ, ರೆಂಬೆ, ಕಾಯಿಗಳನ್ನು ಜಜ್ಜಿ ತೆಗೆದ ಕಹಿ ರಸವನ್ನು ಸಿಂಪಡಣೆ ಮಾಡುವುದರಿಂದಲೂ ಚಹಾ ಸೊಳ್ಳೆಯ ನಿಯಂತ್ರಣ ಸಾಧ್ಯವೆಂದು ಕೆಲವು ಕೃಷಿಕರ ಅಭಿಮತ. ಅದೇ ರೀತಿ ಬೇವಿನ ಬೀಜದ ಕಷಾಯ ಹೊಗೆಸೊಪ್ಪಿನ ಕಷಾಯ, ಲಂಟಾನ ಸೊಪ್ಪಿನ ರಸ ಇತ್ಯಾದಿಗಳನ್ನು ಸಿಂಪಡಿಸುವುದರಿಂದ ಕೀಟ ಬಾದೆಯನ್ನು ನಿಯಂತ್ರಿಸಬಹುದು. ಪುತ್ತೂರು ತಾಲೂಕಿನ ಕೆಯ್ಯೂರು ಗ್ರಾಮದ ಪ್ರಗತಿಪರ ಗೇರು ಕೃಷಿಕರಾದ ಎಂ. ರಾಮ ಮೂರ್ತಿ ಎಂಬುವವರ ಅನುಭವದಂತೆ ಗೇರು ಗಿಡಗಳಿಗೆ ಕಾಳು ಮೆಣಸಿನ ಬಳ್ಳಿಯನ್ನು ನೆಟ್ಟು ಹಬ್ಬಿಸುವುದರಿಂದ ಕೀಟ ಬಾಧೆಯನ್ನು ಸಾಕಷ್ಟು ನಿಯಂತ್ರಿಸಬಹುದು. ಮಾತ್ರವಲ್ಲ ಉಪಬೆಳೆಯಾಗಿ ಕಾಳು ಮೆಣಸಿನಿಂದ ಆದಾಯವನ್ನೂ ಗಳಿಸಬಹುದು. ಈ ಕುರಿತಂತೆ ಇನ್ನಷ್ಟೂ ಅಧ್ಯಯನಗಳು ನಡೆಯಬೇಕಾಗಿದೆ.

❖ ಗೇರು ಬೀಜಕ್ಕೆಂದೇ ಪ್ರತ್ಯೇಕ ಮಾರುಕಟ್ಟೆಯೊಂದಿಲ್ಲ. ಇತರ ಕೃಷಿ ಅಥವಾ ತೋಟಗಾರಿಕಾ ಉತ್ಪನ್ನಗಳೊಡನೆ ಗೇರು ಬೀಜವನ್ನು ಕೂಡಾ ಕೊಳ್ಳಲಾಗುತ್ತದೆ. ಕೃಷಿ ಮಾರುಕಟ್ಟೆ ಅಸಂಘಟಿತವಾಗಿದೆ. ಪ್ರತ್ಯೇಕ ಗೇರು ಮಾರುಕಟ್ಟೆ ಇಲ್ಲದಿರುವುದರಿಂದ ಗೇರು ಬೀಜ ಮಾರುವಾಗ ಸಣ್ಣ ಮತ್ತು ಅಂಚಿನ ರೈತರಲ್ಲಿ ಕೀಳರಿಮೆ ಕಾಡುತ್ತದೆ. ಅಲ್ಲದೆ ರೈತರು ಶೋಷಣೆಗೆ ಒಳಗಾಗುವ ಸಂಭವವೂ ಇದೆ. ಗೇರು ಬೆಳೆಗಾರರ ಸಹಕಾರಿ ಸಂಘವೊಂದು ರಚನೆಯಾದರೆ ಗೇರು ಬೀಜಕ್ಕೆ ಪ್ರತ್ಯೇಕ ಮಾರುಕಟ್ಟೆಯೊಂದು ನಿರ್ಮಾಣವಾದಂತಾಗುತ್ತದೆ. ರೈತರ ಕೀಳರಿಮೆ ತಪ್ಪುತ್ತದೆ. ಅವರು ಶೋಷಣೆಗೆ

ಒಳಗಾಗುವುದು ಕೂಡಾ ತಪ್ಪುತ್ತದೆ. ಗೇರು ಬೆಳೆಗಾರರ ಬಹುತೇಕ ಸಮಸ್ಯೆಗಳಿಗೆ ಅವರದೇ ಆದ ಸಹಕಾರಿ ಸಂಘವೊಂದನ್ನು ರಚಿಸುವುದು ಪರಿಹಾರವಾಗಿದೆ.

- ಗೇರುಬೀಜ ಪೂರ್ತಿಯಾಗಿ ಬಲಿಯುವ ಮೊದಲೇ ಹಣ್ಣಿನಿಂದ ಬೀಜವನ್ನು ಕಿತ್ತು ಮಾರಾಟ ಮಾಡುವ ಪರಿಪಾಠ ಅನೇಕ ಗೇರು ಬೆಳೆಗಾರರಲ್ಲಿದೆ. ಕಳ್ಳ ಕಾಕರಿಂದ, ಮೃಗ ಪಕ್ಷಿಗಳಿಂದ ಗೇರು ಬೀಜವನ್ನು ರಕ್ಷಿಸಲಿಕ್ಕಾಗಿ ಹೀಗೆ ಮಾಡಲಾಗುತ್ತದೆ. ಬಲಿಯುವ ಮೊದಲೇ ಬೀಜವನ್ನು ಕಿತ್ತರೆ ಅದರ ಗುಣಮಟ್ಟ ಕಡಿಮೆಯಾಗುತ್ತದೆ. ರೈತರು ತಮ್ಮ ಹಾಡಿಗಳಿಗೆ ಭದ್ರವಾದ ಬೇಲಿ ಮತ್ತು ಅಗತ್ಯ ಬಿದ್ದರೆ ಕಾವಲು ವ್ಯವಸ್ಥೆಯನ್ನು ಏರ್ಪಡಿಸಿ ಬೀಜ ಬಲಿತ ಮೇಲಷ್ಟೇ ಅವನ್ನು ಕೀಳುವ ಪರಿಪಾಠ ಬೆಳೆಸಿಕೊಳ್ಳಬೇಕು. ಇಲ್ಲದಿದ್ದರೆ ಬೀಜಕ್ಕೆ ಸಿಗುವ ಬೆಲೆ ಕಡಿಮೆ. ಮಾತ್ರವಲ್ಲ ಬೀಜದ ಗುಣಮಟ್ಟ ಕಡಿಮೆಯಾಗುವುದರಿಂದ ಗೇರು ಕಾರ್ಖಾನೆಗಳು ನಷ್ಟವನ್ನು ಅನುಭವಿಸಬೇಕಾಗುತ್ತದೆ.
- ಗೇರು ಬೀಜವನ್ನು ಬೆಳೆಸುವವರಲ್ಲಿ ಬಹುತೇಕರು ಸಣ್ಣ ಮತ್ತು ಅಂಚಿನ ರೈತರು. ಗೇರು ಬೀಜ ಕೊಳ್ಳುವವರಲ್ಲಿ ಬಹುತೇಕರು ಸಣ್ಣ ವ್ಯಾಪಾರಿಗಳು. ಇವರ ನಡುವೆ ಒಂದು ಅನ್ಯೋನ್ಯ ಬಂಧವಿದೆ. ಒಂದು ವೇಳೆ ಗೇರು ಬೆಳೆಗಾರರ ಸಹಕಾರಿ ಸಂಘವೊಂದು ಸ್ಥಾಪನೆಯಾದರೂ ಅನೇಕ ಬೆಳೆಗಾರರು ಸಣ್ಣ ವ್ಯಾಪಾರಿಗಳಿಗೆ ತಮ್ಮ ಬೆಳೆಯನ್ನು ಮಾರುವ ಸಂಭವವಿದೆ. ಸಣ್ಣ ವ್ಯಾಪಾರಿಗಳ ಅಗತ್ಯವನ್ನು ಮನಗಂಡು ಅವರ ಸಮಸ್ಯೆಗಳನ್ನು ಮಾನವೀಯ ನೆಲೆಗಟ್ಟಿನಿಂದ ಪರಿಶೀಲಿಸಬೇಕಾಗಿದೆ. ವ್ಯವಹಾರ ನಡೆಸಲು ಅವರಲ್ಲಿ ಸಾಕಷ್ಟು ಹಣಕಾಸು ಇಲ್ಲದಿರುವುದು ಬಲುದೊಡ್ಡ ಸಮಸ್ಯೆಯಾಗಿದೆ. ಖಾಸಗಿ ಲೇವಾದೇವಿಯವರು ಅಂಥ ಸಂದರ್ಭದ ದುರುಪಯೋಗ ಪಡೆಯುತ್ತಿದ್ದಾರೆ. ಇದನ್ನು ತಡೆಗಟ್ಟಲು ರಾಷ್ಟ್ರೀಕೃತ ವಾಣಿಜ್ಯ ಬ್ಯಾಂಕುಗಳು ಕಡಿಮೆ ಬಡ್ಡಿ ದರದಲ್ಲಿ ಗೇರು ವ್ಯಾಪಾರಿಗಳಿಗೆ ಅತ್ಯಂತ ಅಲ್ಪ ಕಾಲಿಕ ಮತ್ತು ಅಲ್ಪಾವಧಿ ಸಾಮಯಿಕ ಸಾಲ ನೀಡಬೇಕಾಗಿದೆ.
- ಮಾರುಕಟ್ಟೆಯ ಅಸ್ಥಿರತೆಯಿಂದಾಗಿ ಬೆಲೆಗಳು ಇಳಿದರೆ ಹೆಚ್ಚು ಬೆಲೆಗೆ ಗೇರು ಬೀಜ ಕೊಂಡ ವ್ಯಾಪಾರಿ ನಷ್ಟಕ್ಕೆ ಈಡಾಗುತ್ತಾನೆ. ಕೇಂದ್ರೀಯ ಮಾರುಕಟ್ಟೆಯಿಂದ ಬೆಲೆಗಳ ಬಗ್ಗೆ ಸರಿಯಾದ ಮಾಹಿತಿ ಸಿಗದಿದ್ದರೆ ಗೇರು ಬೀಜ ಖರೀದಿ ಮಾಡಿದ ವ್ಯಾಪಾರಿ ತೊಂದರೆಗೆ ಸಿಲುಕುವುದುಂಟು. ಮಾರುಕಟ್ಟೆಯ ಅನಿಶ್ಚಿತತೆಗಳಿಂದ ವ್ಯಾಪಾರಿ ನಷ್ಟ ಅನುಭವಿಸಿದರೆ ಅದನ್ನು ತುಂಬಿಕೊಡುವ ವಿಮಾ ವ್ಯವಸ್ಥೆಯೊಂದಿರಬೇಕು. ಇದುವರೆಗೆ ಅಂತಹ ವಿಮಾ ವ್ಯವಸ್ಥೆಯೊಂದು ಜಾರಿಗೊಂಡಿಲ್ಲ. ಈ ಬಗ್ಗೆ ಯೋಚಿಸಲು ಇದು ಸಕಾಲವಾಗಿದೆ.
- ಗೇರು ಸಂಸ್ಕರಣಾ ಘಟಕಗಳ ಸ್ಥಾಪನೆಗೆ ದೊಡ್ಡ ಮೊತ್ತದ ಬಂಡವಾಳದ ಅಗತ್ಯವಿದೆ. ಗೇರು ಸಂಸ್ಕರಣಾ ಘಟಕಗಳು ಬಹುತೇಕವಾಗಿ ಏಕ ವ್ಯಕ್ತಿ ಸಂಸ್ಥೆ ಅಥವಾ ಪಾಲುದಾರಿಕಾ ಸಂಸ್ಥೆಗಳಾಗಿದ್ದು, ಪಾಲುದಾರಿಕಾ ಸಂಸ್ಥೆಗಳು ಬಹುತೇಕವಾಗಿ ಕುಟುಂಬದ ಸದಸ್ಯರುಗಳನ್ನೇ ಒಳಗೊಂಡಿರುತ್ತದೆ. ಈ ಘಟಕಗಳು ಸಾಕಷ್ಟು ಲಾಭ ಗಳಿಸುತ್ತವೆ. ಇವು ಕೂಡು ಬಂಡವಾಳ ಸಂಸ್ಥೆಗಳಾಗುತ್ತಿದ್ದರೆ ಇವುಗಳ ಲಾಭವು ಲಾಭಾಂಶಗಳ ರೂಪದಲ್ಲಿ ಶೇರುದಾರರಿಗೆ ಹಂಚಿ ಹೋಗುತ್ತಿತ್ತು. ಇವು ಏಕ ಯಜಮಾನ್ಯ ಅಥವಾ ಪಾಲುದಾರಿಕಾ ಸಂಸ್ಥೆಗಳಾದುದರಿಂದ ಲಾಭವು ಕೆಲವರಿಗೆ ಮಾತ್ರ ಹಂಚಲ್ಪಡುತ್ತದೆ. ಸಮಾಜದಲ್ಲಿ ಆದಾಯದ ಅಸಮಾನತೆ ಅಧಿಕವಾಗುತ್ತದೆ. ಈ ಕಾರಣದಿಂದಾಗಿ ಕೂಡು ಬಂಡವಾಳ ಸಂಸ್ಥೆಯಾಗಿ ಗೇರು ಕಾರ್ಖಾನೆಗಳನ್ನು ಸ್ಥಾಪಿಸುವುದು ಅಗತ್ಯ. ಯುವ ಆವಿಷ್ಕಾರಿಕ ಉದ್ಯಮ ಸಾಹಸಿಗಳು ಈ ಬಗ್ಗೆ ಯೋಚಿಸಿ ಕಾರ್ಯ ಪ್ರವೃತ್ತರಾಗಲು ಅವಕಾಶವಿದೆ.

- ಗೇರು ಕಾರ್ಖಾನೆಳು ತಮಗೆ ಬೇಕಾದ ಗೇರು ಬೀಜವನ್ನು ತಾವೇ ಬೆಳೆಯದೇ ಮಾರುಕಟ್ಟೆಯಿಂದ ಕೊಳ್ಳುತ್ತವೆ. ಸ್ವಂತ ಜಮೀನು ಹೊಂದಿರುವ ಕಾರ್ಖಾನೆಗಳು ಕೂಡಾ ಗೇರು ಬೀಜವನ್ನು ಬೆಳೆಯುವ ಮನಸ್ಸು ಮಾಡಿಲ್ಲ. ಇದರಿಂದಾಗಿ ಕಾರ್ಖಾನೆಗಳ ಉತ್ಪಾದನಾ ವೆಚ್ಚ ಅಧಿಕವಾಗುತ್ತದೆ. ಉತ್ಪಾದನಾ ವೆಚ್ಚ ಇಳಿಸಬೇಕಾದರೆ ಗೇರು ಕಾರ್ಖಾನೆಗಳು ಸ್ವಂತವಾಗಿ ಗೇರುಬೀಜ ಬೆಳೆಯಬೇಕು. ಈ ಪ್ರಯೋಗವನ್ನು ಭೂಮಿ ಹೊಂದಿದ ಗೇರು ಕಾರ್ಖಾನೆಗಳು ಆರಂಭಿಸಬೇಕು. ಗೇರು ಕಾರ್ಖಾನೆಗಳು ಹೆಚ್ಚಾಗಿ ಕಚ್ಚಾ ಗೇರಿಗಾಗಿ ಹೊರ ರಾಜ್ಯಗಳನ್ನು ಮತ್ತು ಹೊರ ದೇಶಗಳನ್ನು ಅವಲಂಬಿಸಿಕೊಂಡಿದೆ. ಸ್ಥಳೀಯ ಗೇರು ಬೀಜವನ್ನೇ ಅವರು ನೆಚ್ಚಿಕೊಂಡಿಲ್ಲ. ಇದರಿಂದಾಗಿ ಸ್ಥಳೀಯ ಗೇರು ಬೀಜ ಬೆಳೆಯುವವರಿಗೆ ಉತ್ತೇಜನವಿಲ್ಲದಂತಾಗುತ್ತದೆ. ಆಮದು ಗೇರು ಬೀಜದಿಂದಾಗಿ ಅಮೂಲ್ಯವಾದ ವಿದೇಶಿ ವಿನಿಮಯ ದೇಶದಿಂದ ಹೊರಗೆ ಹರಿದು ಹೋಗುತ್ತದೆ. ಸ್ಥಳೀಯ ಗೇರು ಬೀಜವನ್ನೇ ಬಳಸಿದರೆ ಸಾಗಾಟದ ವೆಚ್ಚ ಹೆಚ್ಚು ಇರುವುದಿಲ್ಲ. ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಲು ಸಾಧ್ಯವಿದೆ. ಭಾರತ ಗೇರು ಬೀಜದ ಉತ್ಪಾದನೆಯಲ್ಲಿ ಸ್ವಾವಲಂಬಿಯಾದರೆ ವಿದೇಶಿ ವಿನಿಮಯ ಉಳಿಸಿ ರೂಪಾಯಿಯ ಮೌಲ್ಯವನ್ನು ಹೆಚ್ಚಿಸಲು ಅವಕಾಶಗಳಿವೆ. ಈ ನಿಟ್ಟಿನಲ್ಲಿ ಕೇವಲ ಸರ್ಕಾರ ಮಾತ್ರ ಕಾರ್ಯ ಪ್ರವೃತ್ತವಾದರೆ ಸಾಲದು. ಗೇರು ಸಂಸ್ಕರಣಾ ಘಟಕಗಳು ತಮ್ಮ ವ್ಯಾಪಾರಿ ಮನೋಭಾವವನ್ನು ಬದಿಗಿಟ್ಟು ಚಿಂತನೆ ನಡೆಸಬೇಕಾಗಿದೆ. ಗೇರು ಬೆಳೆಗಾರರಿಂದ ಆಕರ್ಷಕ ಬೆಲೆ ನೀಡಿ ನೇರವಾಗಿ ಗೇರು ಖರೀದಿಸುವಂತಾದರೆ ಗೇರು ಕೃಷಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ. ಇದರಿಂದ ಕಾರ್ಖಾನೆಯ ಲಾಭಾಂಶದಲ್ಲಿ ಹೆಚ್ಚೇನೂ ವ್ಯತ್ಯಾಸವಾಗುವುದಿಲ್ಲ. ಇಷ್ಟಕ್ಕೂ ಅಂತರ್ರಾಷ್ಟ್ರೀಯ ವಿದ್ಯಮಾನಗಳನ್ನು ಅವಲೋಕಿಸಿದರೆ ಆಮದು ಗೇರು ಪೂರೈಕೆ ಹೆಚ್ಚು ವರ್ಷಗಳ ಕಾಲ ಮುಂದುವರಿಯಲು ಸಾಧ್ಯವಿಲ್ಲ. ಆ ಕಾರಣದಿಂದ ದೇಶೀ ಉತ್ಪಾದನೆಯ ಹೆಚ್ಚಳ ಕಾರ್ಖಾನೆಗಳ ಉಳಿವಿನ ದೃಷ್ಟಿಯಿಂದ ಅನಿವಾರ್ಯ. ಈ ನಿಟ್ಟಿನಲ್ಲಿ ಸಂಸ್ಕರಣಾ ಘಟಕಗಳು ಚಿಂತಿಸುವ ಮೂಲಕ ತಮ್ಮ ಸಾಮಾಜಿಕ ಬದ್ಧತೆಯನ್ನು ಪ್ರಕಟಿಸಬೇಕು. ಸರಕಾರವು ಸ್ವಂತವಾಗಿ ಗೇರು ಬೆಳೆಯುವ ಗೇರು ಕಾರ್ಖಾನೆಗಳಿಗೆ ವಿಶೇಷ ಉತ್ತೇಜನ ನೀಡಬೇಕು. ಸ್ವಂತ ಭೂಮಿಯಲ್ಲಿ ಗೇರು ಬೀಜ ಬೆಳೆಯುವ ಗೇರು ಕಾರ್ಖಾನೆಗಳಿಗೆ ವಿಶೇಷ ಉತ್ತೇಜನ ನೀಡಬೇಕು.
- ವಿದ್ಯುತ್ತಿನ ಕೊರತೆಯು ಗೇರು ಕಾರ್ಖಾನೆಗಳ ಪೂರ್ಣ ಸಾಮರ್ಥ್ಯ ಬಳಕೆಗೆ ಅಡ್ಡಿಯಾಗಿದೆ. ಸ್ಥಳೀಯವಾಗಿ ತಮ್ಮ ಘಟಕಕ್ಕೆ ಬೇಕಾಗುವಷ್ಟು ಜಲವಿದ್ಯುತ್ ಅಥವಾ ಪವನ ಶಕ್ತಿ ಅಥವಾ ಸೌರಶಕ್ತಿ ಉತ್ಪಾದಿಸಲು ಗೇರು ಕಾರ್ಖಾನೆಗಳು ಯತ್ನಿಸಬೇಕು. ಇಂತಹ ಪ್ರಯತ್ನ ಮಾಡುವ ಗೇರು ಕಾರ್ಖಾನೆಗಳಿಗೆ ಸರಕಾರ ಉತ್ತೇಜಕಗಳನ್ನು ನೀಡಬೇಕು. ಪರಿಸರ ವಿನಾಶವಾಗದ ಅಥವಾ ಮಾಲಿನ್ಯಗೊಳ್ಳದ ಯಾವುದೇ ಶಕ್ತಿ ಯೋಜನೆಗೆ ಸರಕಾರ ವಿಶೇಷ ನೆರವು ನೀಡುವ ಅಗತ್ಯವಿದೆ.
- ಗೇರು ಕಾರ್ಖಾನೆಗಳು ಕಾರ್ಮಿಕರ ಕೊರತೆಯ ಸಮಸ್ಯೆಯ ಸುಳಿಗೆ ಸಿಲುಕಿವೆ. ಗೇರು ಕಾರ್ಖಾನೆಗಳಲ್ಲಿ ದುಡಿಯುವವರಲ್ಲಿ ಶೇ. ೯೫ ಮಂದಿ ಮಹಿಳೆಯರು. ಹುರಿದ ಗೇರು ಬೀಜವನ್ನು ಸುಲಿಯುವವರು ಇವರೆ. ಕಾರ್ಖಾನೆಗಳು ಬಹುತೇಕವಾಗಿ ಊರ ಹೊರಗಿರುತ್ತವೆ. ಅಲ್ಲದೆ ಮಹಿಳೆಯರಿಗೆ ಮನೆಯಲ್ಲಿ ಸಾಕಷ್ಟು ಗೃಹ ಕೃತ್ಯಗಳಿರುವುದರಿಂದ ಕಾರ್ಖಾನೆಗಳಿಗೆ ಹೋಗಲು ಇಷ್ಟ ಪಡುವುದಿಲ್ಲ. ಕಾರ್ಖಾನೆಗಳು ಕಾರ್ಮಿಕರಲ್ಲಿಗೆ ಹುರಿದ ಗೇರು ಬೀಜವನ್ನು ತಂದು ಕೊಡುತ್ತವೆ. ಮಹಿಳಾ ಕಾರ್ಮಿಕರು ತಮ್ಮ ಬಿಡುವಿನ ಸಮಯದಲ್ಲಿ ಗೇರು ಬೀಜ ಸುಲಿಯುತ್ತಾರೆ. ಹೀಗೆ ಮಾಡುವುದನ್ನು ಜಾಬ್ ವರ್ಕಿಂಗ್ ಎಂದು ಕರೆಯುತ್ತವೆ. ಇದರಿಂದ ಕಾರ್ಖಾನೆಗಳಿಗೆ ಹೆಚ್ಚುವರಿ ಸಾಗಾಟದ ವೆಚ್ಚ ತಗಲುತ್ತದೆ. ಮಹಿಳಾ ಕಾರ್ಮಿಕರು ಹೆಚ್ಚುವರಿ ಭತ್ಯೆ ಮತ್ತಿತರ ಸೌಲಭ್ಯಗಳಿಂದ ವಂಚಿತರಾಗುತ್ತಾರೆ. ಈ ಸಮಸ್ಯೆಯನ್ನು ಪರಿಹರಿಸಲು ಸ್ತ್ರೀ ಶಕ್ತಿ

ಸಂಘಗಳನ್ನು ಗೇರು ಕಾರ್ಖಾನೆಯತ್ತ ಆಕರ್ಷಿಸಬೇಕಾಗುತ್ತದೆ. ಕಡಿಮೆ ಓದಿ ಮನೆಯಲ್ಲೇ ಕುಳಿತಿರುವ ಹುಡುಗಿಯರಿಗೆ ತರಬೇತಿ ನೀಡಿ ಅವರಿಗೆ ಗೇರು ಬೀಜ ಸುಲಿಯುವ ಕೆಲಸ ಕೊಡಬೇಕಾಗುತ್ತದೆ.

❖ ಗೇರು ಕಾರ್ಖಾನೆಗಳಲ್ಲಿ ಶೇಕಡಾ ೧೦ ರಷ್ಟು ಘಟಕಗಳು ಗೋಡಂಬಿ ನಿರ್ಯಾತ ಮಾಡುತ್ತವೆ. ಆದರೆ ದೇಶದ ಒಟ್ಟು ನಿರ್ಯಾತದಲ್ಲಿ ಗೋಡಂಬಿಯ ಪಾಲು ಶೇಕಡಾ ಒಂದರಷ್ಟೂ ಇಲ್ಲ. ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರತವು ವಿಯೆಟ್ನಾಂ ಮತ್ತು ಬ್ರೆಜಿಲ್ ದೇಶಗಳಿಂದ ತೀವ್ರ ಸ್ಪರ್ಧೆಯನ್ನು ಎದುರಿಸಬೇಕಾಗಿದೆ. ಭಾರತದ ಗೋಡಂಬಿ ಬೆಲೆಯನ್ನು ಕಡಿಮೆ ಮಾಡಲು ಸಾಧ್ಯವಾದರೆ ದೇಶಕ್ಕೆ ಇವೆರಡು ರಾಷ್ಟ್ರಗಳ ಪ್ರತಿಸ್ಪರ್ಧೆಯನ್ನು ಸಮರ್ಥವಾಗಿ ಎದುರಿಸಲು ಸಾಧ್ಯವಿದೆ. ಹಾಗಾಗಬೇಕಾದರೆ ದೇಶೀಯವಾಗಿ ಗೋಡಂಬಿಯ ಉತ್ಪಾದನಾ ವೆಚ್ಚ ಕಡಿಮೆಯಾಗಬೇಕು. ಅದಕ್ಕೆ ಗೇರು ಬೀಜದ ದೇಶೀಯ ಉತ್ಪಾದನೆ ಹೆಚ್ಚಾಗಬೇಕು.

❖ ಗೋಡಂಬಿ ನಿರ್ಯಾತ ಹೆಚ್ಚಲು ಗುಣಮಟ್ಟ ಉತ್ಕೃಷ್ಟವಾಗಿರಬೇಕು. ಅಲ್ಲದೆ ಪ್ಯಾಕಿಂಗ್ ಸುಭದ್ರವಾಗಿರಬೇಕು. ವಿದೇಶಿ ಗ್ರಾಹಕರು ತಾವು ಬಳಸುವ ಉತ್ಪನ್ನಗಳು ಶ್ರೇಷ್ಠ ಗುಣಮಟ್ಟದ್ದು ಮತ್ತು ನಿರ್ದಿಷ್ಟ ಚಿಹ್ನೆ ಹಾಗೂ ಮುದ್ರೆಯನ್ನು ಹೊಂದಿರಬೇಕು ಎಂದು ಬಯಸುವುದರಿಂದ ಗೋಡಂಬಿ ರಫ್ತು ವ್ಯಾಪಾರದ ಗುಣಮಟ್ಟದ ಬಗ್ಗೆ ಗಮನ ಹರಿಸಬೇಕಾಗಿದೆ. ಭಾರತದಲ್ಲಿ ಕೃಷಿ ಉತ್ಪನ್ನ ಗುಣಮಟ್ಟ ತೇರ್ಗಡೆಯಾದ ಉತ್ಪನ್ನಗಳಿಗೆ ಆಗ್‌ಮಾರ್ಕ್ ಮತ್ತು ಕೈಗಾರಿಕಾ ಉತ್ಪನ್ನ ಗುಣಮಟ್ಟ ತೇರ್ಗಡೆಯಾದ ಉತ್ಪನ್ನಗಳಿಗೆ ಐ.ಎಸ್.ಐ ಮುದ್ರೆ ಹಾಕಲಾಗುತ್ತದೆ. ನಿರ್ಯಾತ ಗೋಡಂಬಿಯ ಗುಣಮಟ್ಟವನ್ನು ಗೋಡಂಬಿ ನಿರ್ಯಾತ ಅಭಿವೃದ್ಧಿ ಮಂಡಳಿ ಪರಿಶೀಲಿಸಿ ಮೊಹರು ಹಾಕುವಂತಾಗಬೇಕು. ನಿರ್ಯಾತ ಅಭಿವೃದ್ಧಿ ಮಂಡಳಿಯ ಮೊಹರಿಲ್ಲದ ಪೊಟ್ಟಣಗಳನ್ನು ನಿರ್ಯಾತ ಮಾಡಲು ಅನುಮತಿ ನೀಡಬಾರದು. ಗೋಡಂಬಿ ನಿರ್ಯಾತ ವ್ಯಾಪಾರದಲ್ಲಿ ಮಧ್ಯವರ್ತಿಗಳು ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಇದು ಗೇರು ಕಾರ್ಖಾನೆಗಳ ಲಾಭವನ್ನು ಕಡಿಮೆ ಮಾಡುತ್ತದೆ. ಗೋಡಂಬಿ ನಿರ್ಯಾತ ಅಭಿವೃದ್ಧಿ ಮಂಡಳಿಯು ಹೆಚ್ಚಿನ ಮುತುವರ್ಜಿ ವಹಿಸಿ, ದಲ್ಲಾಳಿಗಳ ಪಾತ್ರವನ್ನು ತಾನು ನಿರ್ವಹಿಸಬೇಕು. ಆಗ ಗೇರು ನಿರ್ಯಾತ ಮಾಡುವ ಕಾರ್ಖಾನೆಗಳ ಲಾಭ ಅಧಿಕವಾಗುತ್ತದೆ.

❖ ಗೋಡಂಬಿಯ ಅಂತರಾಷ್ಟ್ರೀಯ ಬೆಲೆ ವ್ಯತ್ಯಯ ಮತ್ತು ಆಗಾಗ ಆಗುತ್ತಿರುವ ರೂಪಾಯಿಯ ಸಹಜ ಅಪಮೌಲ್ಯದಿಂದ ಗೋಡಂಬಿ ನಿರ್ಯಾತಗಾರರು ಕೆಲವೊಮ್ಮೆ ನಷ್ಟ ಅನುಭವಿಸಬೇಕಾಗುತ್ತದೆ. ಇದು ಬಹು ದೊಡ್ಡ ನಷ್ಟವಾಗಿರುತ್ತದೆ. ಇಂತಹ ಸಂದರ್ಭದಲ್ಲಿ ವಿಮಾ ಕಂಪೆನಿಗಳು ಗೇರು ಕಾರ್ಖಾನೆಗಳಿಗೆ ನಷ್ಟವನ್ನು ತುಂಬಿ ಕೊಡುವಂತಾಗಬೇಕು. ಸಣ್ಣ ಕಾರ್ಖಾನೆಗಳು ಕಾರ್ಟೆಲ್ಲುಗಳನ್ನು (ಕೆಲವು ಸಂಸ್ಥೆಗಳ ಒಕ್ಕೂಟ) ರಚಿಸಿ ಗೋಡಂಬಿ ನಿರ್ಯಾತ ಮಾಡುವಂತಾಗಬೇಕು. ಕೂಡು ಬಂಡವಾಳ ಸಂಸ್ಥೆಯಾಗಿ ಗೋಡಂಬಿ ಕಾರ್ಖಾನೆಗಳನ್ನು ಇದುವರೆಗೆ ಯಾರೂ ಸ್ಥಾಪಿಸಿಲ್ಲ. ಸ್ಥಾಪಿಸಿದರೆ ಗೇರು ನಿರ್ಯಾತ ಹೆಚ್ಚಾಗುವ ಸಂಭವವಿದೆ. ಕೂಡು ಬಂಡವಾಳ ಸಂಸ್ಥೆಯು ನಷ್ಟ ಅನುಭವಿಸಿದರೆ ಅದು ಹಂಚಿ ಹೋಗುವುದರಿಂದ ದೊಡ್ಡ ಸಮಸ್ಯೆ ಉಂಟಾಗುವುದಿಲ್ಲ.

❖ ಗೇರು ಕಾರ್ಖಾನೆಗಳಲ್ಲಿ ದುಡಿಯುವ ಕಾರ್ಮಿಕರಲ್ಲಿ ಶೇಕಡಾ ೯೫ ರಷ್ಟು ಮಹಿಳೆಯರು. ಅವರಲ್ಲಿ ಬಹುತೇಕರು ಸಾಮಾಜಿಕವಾಗಿ ಹಿಂದುಳಿದವರು ಮತ್ತು ಶೈಕ್ಷಣಿಕ ಮಟ್ಟ ಕಡಿಮೆ ಇರುವವರು. ಇವರಲ್ಲಿ ಉಳಿತಾಯ ಮಾಡುವ ಪ್ರವೃತ್ತಿ ಬಹಳ ಕಡಿಮೆ ಇದೆ. ಆರ್ಥಿಕೇತರ ಕಾರಣಗಳಿಗಾಗಿ ತುಂಬಾ ಖರ್ಚು ಮಾಡುತ್ತಾರೆ. ಮಹಿಳಾ ಕಾರ್ಮಿಕರು ಉಳಿತಾಯ ಮಾಡುವಂತಾಗಬೇಕಿದ್ದರೆ ಪ್ರತಿದಿನ ಕಾರ್ಖಾನೆಗೆ ಒಬ್ಬ ಪಿಗ್ಮಿ ಉಳಿತಾಯ ಸಂಗ್ರಾಹಕ ಪ್ರತಿದಿನ ಭೇಟಿ

ನೀಡುವಂತಾಗಬೇಕು. ಆತ ಪ್ರತಿದಿನ ಪ್ರತಿಯೊಬ್ಬ ಮಹಿಳಾ ಕಾರ್ಮಿಕಳಿಂದ ನಿಗದಿತ ಉಳಿತಾಯ ಸಂಗ್ರಹಿಸುವಂತಾಗಬೇಕು. ಆಗ ಮಹಿಳಾ ಕಾರ್ಮಿಕರು ಬಂಡವಾಳ ಸಂಚಯನದಲ್ಲಿ ಪಾಲ್ಗೊಂಡಂತಾಗುತ್ತದೆ.

❖ ಕಾರ್ಮಿಕರ ದಕ್ಷತೆ ಹೆಚ್ಚಿಸುವಲ್ಲಿ ಹಾಗೂ ಅವರಲ್ಲಿ ವಿಶ್ವಾಸಾರ್ಹತೆಯನ್ನು ಮೂಡಿಸುವಲ್ಲಿ ಕಾರ್ಖಾನೆಗಳ ಮಾಲಿಕರು ಯಶಸ್ವಿಯಾಗಿರುವುದು ಕ್ಷೇತ್ರಾಧ್ಯಯನದ ಅವಧಿಯಲ್ಲಿ ಕಂಡು ಬಂತು. ದಕ್ಷಿಣ ಕನ್ನಡದ ಬಂಟ್ವಾಳ ತಾಲೂಕಿನ ವಿಟ್ಲದಲ್ಲಿರುವ ಶ್ರೀ ವೆಂಕಟೇಶ್ವರ ಪ್ರೊಸೆಸರ್ಸ್ ಎಂಬ ಗೇರು ಕಾರ್ಖಾನೆಯ ಮಾಲಿಕರಾದ ಪಿ. ಸುಬ್ರಾಯ ಪೈಯವರು ತಮ್ಮ ಕಾರ್ಖಾನೆಯಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಉಚಿತವಾಗಿ ಊಟವನ್ನು ನೀಡುತ್ತಿದ್ದಾರೆ. ಸುಮಾರು ೧೮೦ ಮಹಿಳಾ ಕಾರ್ಮಿಕರು ಇಲ್ಲಿ ದುಡಿಯುತ್ತಿದ್ದು ಅವರೆಲ್ಲರಿಗೂ ಬಿಸಿಯಾದ, ರುಚಿಯಾದ ಊಟದ ವ್ಯವಸ್ಥೆಯನ್ನು ಮಾಡಿದ್ದಾರೆ. ಇದಕ್ಕಾಗಿ ಯಾವುದೇ ಹೆಚ್ಚುವರಿ ಹಣವನ್ನು ಕಾರ್ಮಿಕರಿಂದ ಪಡೆಯುತ್ತಿಲ್ಲ. ಪಿ. ಸುಬ್ರಾಯ ಪೈ ಹೇಳುವಂತೆ ಈ ರೀತಿ ನಿಯಮಿತವಾಗಿ ಆಹಾರ ತೆಗೆದುಕೊಳ್ಳುವುದರಿಂದ ಮಹಿಳಾ ಕಾರ್ಮಿಕರ ಆರೋಗ್ಯ, ದಕ್ಷತೆ ಎರಡೂ ಹೆಚ್ಚಾಗುತ್ತದೆ. ಇಲ್ಲದೇ ಹೋದಲ್ಲಿ ಎಳೆ ವಯಸ್ಸಿನಲ್ಲಿಯೇ ದುಡಿಯಲು ಪ್ರಾರಂಭಿಸುವ ಹೆಣ್ಣು ಮಕ್ಕಳು ೩೦-೩೫ರ ವಯಸ್ಸಿನಲ್ಲಿಯೇ ವಾಯುಪ್ರಕೋಪದಂತಹ ಕಾಯಿಲೆಗೆ ತುತ್ತಾಗಬೇಕಾಗುತ್ತದೆ. ಇದರಿಂದ ಯುವ ಪೀಳಿಗೆ ನಿಸ್ತೇಜವಾಗಿ ಬಿಡುತ್ತದೆ ಎನ್ನುತ್ತಾರೆ. ಈ ರೀತಿಯ ಉಚಿತ ಊಟದ ವ್ಯವಸ್ಥೆ ಎಲ್ಲಾ ಕಾರ್ಖಾನೆಗಳಲ್ಲಿ ದೊರೆಯುವಂತಾಗಬೇಕು. ಸರಕಾರ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಬಿಸಿಯೂಟದ ವ್ಯವಸ್ಥೆ ಮಾಡಿದಂತೆ ಕಾರ್ಖಾನೆಗಳಲ್ಲಿ ದುಡಿಯುವ ಕಾರ್ಮಿಕರಿಗೆ ಇದೇ ರೀತಿಯ ಸೌಲಭ್ಯವನ್ನು ವಿಸ್ತರಿಸಬೇಕು. ಮತ್ತು ಈ ರೀತಿಯ ಸೌಲಭ್ಯ ನೀಡುತ್ತಿರುವ ಕಾರ್ಖಾನೆಯ ಮಾಲಿಕರಿಗೆ ಪ್ರೋತ್ಸಾಹ ಧನ ನೀಡಬೇಕು.

❖ ಅವಿವಾಹಿತ ಮಹಿಳಾ ಕಾರ್ಮಿಕರು ಆದಾಯದ ಮೂಲಗಳಾದುದರಿಂದ ಅವರ ಹಿರಿಯರು ಅವರಿಗೆ ಸಕಾಲದಲ್ಲಿ ಮದುವೆ ಮಾಡಿಸುತ್ತಿಲ್ಲ. ಹಾಗಾಗಿ ಅನೇಕರು ಕೇವಲ ದುಡಿಯುವ ಯಂತ್ರಗಳಾಗಿ ಬಿಟ್ಟಿದ್ದಾರೆ. ಮಹಿಳಾ ಕಾರ್ಮಿಕರು ತಮ್ಮ ಜೀವನದ ಸಂಗಾತಿಯನ್ನು ತಾವೇ ಆರಿಸುವ ಧೈರ್ಯ ತೋರಿದರೆ ಈ ಸಮಸ್ಯೆ ಪರಿಹಾರವಾಗುತ್ತದೆ. ವಿವಾಹಿತ ಮಹಿಳೆಯರ ಆದಾಯವನ್ನು ಹೇಗೆ ಖರ್ಚು ಮಾಡಬೇಕೆಂಬುದರ ತೀರ್ಮಾನವನ್ನು ತೆಗೆದುಕೊಳ್ಳಲು ಅಧಿಕಾರ ಅನೇಕ ಮಹಿಳಾ ಕಾರ್ಮಿಕರಿಗಿಲ್ಲ. ಇದಕ್ಕೆ ಮುಖ್ಯ ಕಾರಣ ಅವರ ಶೈಕ್ಷಣಿಕ ಮಟ್ಟ ಕಡಿಮೆ ಇರುವುದು. ಇಂತಹ ಸಮಸ್ಯೆಗಳನ್ನು ಮಹಿಳಾ ಕಾರ್ಮಿಕರು ತಮ್ಮದೇ ಆದ ಸಂಘಗಳನ್ನು ರಚಿಸುವ ಮೂಲಕ ಬಗೆಹರಿಸಲು ಸಾಧ್ಯವಿದೆ. ಪ್ರಾಯ ಸಂದ ಹಾಗೆ ಮಹಿಳಾ ಕಾರ್ಮಿಕರ ದುಡಿಮೆಯ ಸಾಮರ್ಥ್ಯ ಕುಗ್ಗುವುದರೊಂದಿಗೆ ಅವರ ಗಳಿಕೆ ಕಡಿಮೆಯಾಗುತ್ತದೆ. ವಯಸ್ಸು ಅಧಿಕವಾಗಿ ಸಾಮರ್ಥ್ಯ ಕುಗ್ಗಿದ ಕಾರ್ಮಿಕರಿಗೆ ಪರಿಹಾರ ಭತ್ಯೆಯನ್ನು ಕಾರ್ಖಾನೆಗಳು ನೀಡಬೇಕು. ಕಾರ್ಮಿಕ ಸಂಘಟನೆಗಳ ಮೂಲಕ ಈ ಹಕ್ಕೊತ್ತಾಯ ಮಂಡಿಸಲು ಮಹಿಳಾ ಕಾರ್ಮಿಕರಿಗೆ ಸಾಧ್ಯವಾಗಬೇಕು.

❖ ಭಾರತದ ಜಾತಿ ಪದ್ಧತಿಯ ಕರಿಛಾಯೆ ಗೇರು ಉದ್ಯಮ ಮೇಲೂ ಇದೆ. ಇಲ್ಲಿನ ಮಹಿಳಾ ಕಾರ್ಮಿಕರಲ್ಲಿ ಬಹುತೇಕರು ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ಪಂಗಡಗಳಿಂದ ಬಂದವರು. ಇದರಿಂದಾಗಿ ಗೇರು ಕಾರ್ಖಾನೆಯಲ್ಲಿ ದುಡಿಯುವುದು ನಿಕೃಷ್ಟ ವೃತ್ತಿ ಎಂಬ ಭಾವನೆ ಅನೇಕರಲ್ಲಿದೆ. ಇದೊಂದು ವ್ಯಕ್ತಿ ನಿಷ್ಠ ಸಮಸ್ಯೆ. ಗೇರು ಕಾರ್ಖಾನೆಗಳಲ್ಲಿ ಕೆಲಸ ಮಾಡುವುದರಿಂದ ಕೈಗಳ ಅಂದ ಹೋಗಿ ಬಿಡುತ್ತದೆ. ಅದಕ್ಕಿಂತ ಮಾಲ್‌ಗಳಲ್ಲಿ ಕೆಲಸ ಮಾಡುವುದು ಉತ್ತಮ ಎಂದು ಭಾವಿಸುವ ಮಹಿಳೆಯರೂ ಸಾಕಷ್ಟಿದ್ದಾರೆ. ವಾಸ್ತವಿಕವಾಗಿ ಸದ್ಯದ ಪರಿಸ್ಥಿತಿಯಲ್ಲಿ ಮಹಿಳಾ ಕಾರ್ಮಿಕರಿಗೆ ಗೇರು ಕಾರ್ಖಾನೆಗಳಲ್ಲಿ ಗಳಿಸುವಷ್ಟು ಬೇರೆಲ್ಲೂ ಗಳಿಸಲು ಸಾಧ್ಯವಿಲ್ಲ. ಆದರೆ ವ್ಯಕ್ತಿ ನಿಷ್ಠ ಭಾವನೆಗಳನ್ನು ತೊಡೆದು ಹಾಕುವುದು

ಅಷ್ಟು ಸುಲಭವಲ್ಲ. ಮಹಿಳಾ ಸಂಘಟನೆಗಳ ಮೂಲಕ ಜಾಗೃತಿ ಮೂಡಿಸಿ ಎಲ್ಲಾ ವೃತ್ತಿಗೂ ಅದರದೇ ಆದ ಗೌರವವಿದೆ ಎಂಬ ಅರಿವನ್ನು ಮೂಡಿಸಿ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಿದೆ.

❖ ಗೇರು ಉದ್ಯಮವು ಸ್ತ್ರೀ ಕೇಂದ್ರಿತವಾದುದರಿಂದ ಅದರ ಮೂಲಕ ಮಹಿಳಾ ಸಬಲೀಕರಣ ಸಾಧಿಸಲು ಸಾಧ್ಯ ಎಂಬ ಒಂದು ಪೂರ್ವ ಕಲ್ಪನೆಯೊಡನೆ ಈ ಅಧ್ಯಯನವನ್ನು ಆರಂಭಿಸಲಾಯಿತು. ಗೇರು ಕಾರ್ಖಾನೆಗಳಲ್ಲಿ ಶೇ. ೯೫ ರಷ್ಟು ಮಂದಿ ಮಹಿಳಾ ಕಾರ್ಮಿಕರೇ ಆಗಿದ್ದಾರೆ. ಆದರೆ ಸಾಮಾಜಿಕವಾಗಿ ಇವರ ಸ್ಥಾನಮಾನವೇನೂ ಹೆಚ್ಚಾಗಿಲ್ಲ. ರಾಜಕೀಯ ತೀರ್ಮಾನಗಳನ್ನು ಕೈಗೊಳ್ಳುವಲ್ಲಿ ಇವರ ಪಾತ್ರವಿಲ್ಲ. ಆದರೆ ಆರ್ಥಿಕವಾಗಿ ಇವರು ತಕ್ಕ ಮಟ್ಟಿಗೆ ಸಬಲೀಕರಣಗೊಂಡಿದ್ದಾರೆ. ಆದರೂ ಅನೇಕರು ತಮ್ಮ ಗಳಿಕೆಯನ್ನು ಕುಟುಂಬದ ಯಜಮಾನನಿಗೊಪ್ಪಿಸಿ ಆರ್ಥಿಕ ಸ್ವಾತಂತ್ರ್ಯವನ್ನು ಕಳೆದುಕೊಂಡದ್ದೂ ಇದೆ. ಇವೆಲ್ಲ ವ್ಯಕ್ತಿ ನಿಷ್ಠ ವಿಷಯಗಳು. ಮಹಿಳಾ ಸಂಘಟನೆಗಳು ಸ್ತ್ರೀ ಶಕ್ತಿ ಗುಂಪುಗಳು ಮಹಿಳಾ ಕಾರ್ಮಿಕರಿಗೆ ಶಿಕ್ಷಣ ನೀಡಿ ಅವರು ವೈಚಾರಿಕವಾಗಿ ಚಿಂತಿಸುವಂತೆ ಮಾಡಬೇಕಿದೆ.

೮.೨. ಭವಿಷ್ಯಕ್ಕೊಂದು ಮಾರ್ಗ ಸೂಚಿ

ಜಾಗತೀಕರಣ ಪ್ರಕ್ರಿಯೆಯು ದಕ್ಷಿಣ ಕನ್ನಡ ಜಿಲ್ಲೆಯ ಸ್ವರೂಪವನ್ನೇ ಬದಲಾಯಿಸಿದೆ. ೧೭೯೯ ರಲ್ಲಿ ಈ ಜಿಲ್ಲೆ ಬ್ರಿಟಿಷರ ಕೈವಶವಾಯಿತು. ಆಗ ಜಿಲ್ಲೆಯ ಪ್ರಥಮ ಕಲೆಕ್ಟರನಾಗಿ ನೇಮಕಗೊಂಡ ಮನ್ರೋ ಸಾಹೇಬನು ದಕ್ಷಿಣ ಕನ್ನಡ ಜಿಲ್ಲೆ ಕೃಷಿ ಬೆಳೆಗೆ ಯೋಗ್ಯವೇ ಹೊರತು ಕೈಗಾರಿಕೆಗಳಿಗಲ್ಲ ಎಂದು ಸ್ಪಷ್ಟವಾಗಿ ಅಧ್ಯಯನಗಳ ಮೂಲಕ ಸಾರಿದ್ದ. ಆದರೀಗ ಜಿಲ್ಲೆಯ ಧಾರಣ ಸಾಮರ್ಥ್ಯ ಮೀರಿ ಕೈಗಾರಿಕೀಕರಣ ನಡೆಯುತ್ತಿದೆ. ತಥಾಕಥಿತ ಅಭಿವೃದ್ಧಿ ಯೋಜನೆಗಳು ಜಿಲ್ಲೆಯ ಮೇಲೆ ಹೇರಲ್ಪಟ್ಟಿವೆ. ಇದೆಲ್ಲಾ ಜಿಲ್ಲೆಯ ಮೂಲ ಸ್ವರೂಪವನ್ನೇ ಬಲಿತೆಗೆದುಕೊಳ್ಳುತ್ತಿವೆ.

೧೯೬೬ ರಿಂದ ೭೯ ರವರೆಗಿನ ವರ್ಷಗಳನ್ನು ಹಸಿರುಕ್ರಾಂತಿಯ ಆರಂಭಿಕ ವರ್ಷಗಳು ಎಂದು ಕರೆಯಲಾಗುತ್ತದೆ. ಐ.ಆರ್.-೮, ಜಯಾ, ಪದ್ಮ ಮುಂತಾದ ಭತ್ತದ ತಳಿಗಳು ಮತ್ತು ಬಲು ಬೇಗನೆ ಪ್ರತಿಫಲ ನೀಡುವ ಅಡಿಕೆ ಮತ್ತು ತೆಂಗಿನ ಸಸಿಗಳು ರೈತಾಪಿ ವರ್ಗದ ಆದಾಯವನ್ನು ಹೆಚ್ಚಿಸಿದವು. ಆದುವರೆಗೆ ಎತ್ತರದ ಪ್ರದೇಶಗಳಲ್ಲಿ ಅಡಿಕೆ ಕೃಷಿ ಮತ್ತು ತಗ್ಗು ಪ್ರದೇಶಗಳಲ್ಲಿ ಭತ್ತದ ಕೃಷಿ ಮಾಡಲಾಗುತ್ತಿತ್ತು. ದ. ಕ. ಜಿಲ್ಲೆಯಲ್ಲಿ ಮಳೆಗಾಲದಲ್ಲಿ ಎಣೆಲು, ಚಳಿಗಾಲದಲ್ಲಿ ಸುಗ್ಗಿ ಮತ್ತು ಬೇಸಿಗೆ ಕಾಲದಲ್ಲಿ ಕೊಳ್ಕೆ ಭತ್ತದ ಬೆಳೆ ಸಮೃದ್ಧವಾಗಿ ಬೆಳೆಯುತ್ತಿತ್ತು. ಆದರೆ ಇದ್ದಕ್ಕಿದ್ದ ಹಾಗೆ ಅಡಿಕೆಯ ಬೆಲೆ ಹೆಚ್ಚಾದುದರಿಂದ ಎಣೆಲು ಬೆಳೆ ಮಾತ್ರ ಬೆಳೆಯುತ್ತಿದ್ದ ಭತ್ತದ ಗದ್ದೆಗಳು ಅಡಿಕೆ ತೋಟಗಳಾದವು. ಅಡಿಕೆ ಬೆಲೆ ಏರಿದಂತೆಲ್ಲಾ ಸುಗ್ಗಿ ಮತ್ತು ಕೊಳ್ಕೆ ಗದ್ದೆಗಳನ್ನು ಅಡಿಕೆ ಕೃಷಿ ವ್ಯಾಪಿಸಿಕೊಂಡಿತು. ಜಿಲ್ಲೆಯಲ್ಲಿ ಜನಪ್ರಿಯವಾಗಿದ್ದ ಬೀಡಿ ಉದ್ಯಮದಿಂದಾಗಿ ಕೃಷಿ ಕಾರ್ಮಿಕರ ಅಭಾವ ತಲೆದೋರಿದ್ದು ಭತ್ತದ ಅವಗಣನೆಗೆ ಕಾರಣವಾಯಿತು.

೧೯೬೫ ರ ಶಾಸ್ತ್ರಿ-ಸಿರಿಮಾವೋ ಒಪ್ಪಂದದಿಂದಾಗಿ ಶ್ರೀಲಂಕಾದ ತಮಿಳು ನಿರಾಶ್ರಿತರು ದಕ್ಷಿಣ ಕನ್ನಡ ಜಿಲ್ಲೆಗೆ ಬಂದು ಸುಳ್ಯ ತಾಲೂಕಿನಲ್ಲಿ ನೆಲೆ ಕಂಡುಕೊಂಡರು. ಅದರಿಂದಾಗಿ ರಬ್ಬರ್ ಬೆಳೆಯನ್ನು ಕಂಡಿತು. ರಬ್ಬರ್ ಬೆಳೆಗೆ ಹೆಚ್ಚು ಶ್ರಮದ ಅಗತ್ಯವಿಲ್ಲ. ಕೆಲವೇ ವರ್ಷಗಳಲ್ಲಿ ಖಚಿತವಾದ ಆದಾಯ ದೊರಕುತ್ತದೆ. ಇದರಿಂದಾಗಿ ರಬ್ಬರ್ ಬೆಳೆ ಆಕರ್ಷಣೆ ಪಡೆದುಕೊಂಡಿತು. ಸುಳ್ಯ ರೈತರು ತಮ್ಮ ವಶದಲ್ಲಿದ್ದ ಅರಣ್ಯ ಭೂಮಿಯನ್ನು ಸವರಿ ರಬ್ಬರ್ ಬೆಳೆಸಿದರು. ಗುಡ್ಡ ಮತ್ತು ಇಳಿಜಾರುಗಳಲ್ಲಿನ ಗೇರು ಗಿಡಗಳು ಕೊಡಲಿಗೆ ಬಲಿಯಾಗಿ, ರಬ್ಬರ್ ಬೆಳೆ ಅಸ್ತಿತ್ವನ್ನು ಕಂಡುಕೊಂಡಿತು. ಏಳೆಂಟು ವರ್ಷಗಳಲ್ಲಿ ರಬ್ಬರ್ ಗಿಡಗಳು ನಳನಳಿಸಿ ನಿಂತು ಆದಾಯ ನೀಡಲಾರಂಭಿಸಿದವು.ರಬ್ಬರ್ ಬೆಳೆದ ರೈತರು ದಿಢೀರನೆ ಸಿರಿವಂತರಾದುದನ್ನು ಕಂಡು ರಬ್ಬರ್ ಬೆಳೆಯದ ರೈತರು ತಮ್ಮ ಜಮೀನಿನಲ್ಲಿ ರಬ್ಬರ್ ಬೆಳೆಯಲಾರಂಭಿಸಿದರು. ರಬ್ಬರ್ ಬೆಳೆಗೆ ಸಬ್ಸಿಡಿ

ಸಿಕ್ಕಲಾರಂಭವಾದುದರಿಂದ ಸುಳ್ಯದಾದ್ಯಂತ ಹೆಚ್ಚಿನ ರೈತರು ರಬ್ಬರ್ ಬೆಳೆಯ ತೊಡಗಿದರು. ಕಾಲಕ್ರಮೇಣ ರಬ್ಬರ್ ಮೋಹ ಜಿಲ್ಲೆಯಾದ್ಯಂತ ಪಸರಿಸಿತು. ಅರಣ್ಯಗಳು ನಾಶವಾದವು. ಗೇರು ಮರಗಳು ಧರೆಗುರುಳಿದವು. ಡೆಂಗ್ಯೂನಂತಹ ಕಾಯಿಲೆಗಳು ಕಾಣಿಸಿಕೊಂಡವು. ಅಂತರ್ಜಲ ಮಟ್ಟ ಕುಸಿಯತೊಡಗಿತು. ಜಲಕ್ಷಾಮ ತಲೆದೋರಿತು. ಮಳೆಯ ಕ್ರಮಬದ್ಧತೆಯು ತಪ್ಪಿ ಹೋಯಿತು. ಏನಾದರೇನು? ಕುರುಡು ಕಾಂಚಾಣ ಕುಣಿಯುತ್ತಲಿತ್ತು!

ಇದರೊಂದಿಗೆ ಜಿಲ್ಲೆಗೆ ಬೃಹತ್ ಕೈಗಾರಿಕೆಗಳು ಧಾಳಿ ಇಡತೊಡಗಿದವು. ಎಂ. ಆರ್.ಪಿ.ಎಲ್., ಎಂ. ಸಿ. ಎಫ್. ನಂತಹ ಕೈಗಾರಿಕೆಗಳು ವಾಯು ಮಾಲಿನ್ಯಕ್ಕೆ ಮತ್ತು ಜಲ ಮಾಲಿನ್ಯಕ್ಕೆ ಕಾರಣವಾದವು. ಸಮುದ್ರ ಜಲಮಾಲಿನ್ಯದಿಂದಾಗಿ ಮತ್ಸ್ಯ ಕ್ಷಾಮ ತಲೆದೋರಿತು. ವಿಶೇಷ ವಿತ್ತ ವಲಯ ನಿರ್ಮಾಣವಾಗತೊಡಗಿತು. ಅಭಿವೃದ್ಧಿಯ ಹೆಸರಲ್ಲಿ ಅನೇಕ ಯೋಜನೆಗಳು ಬಂದು ಸಮೃದ್ಧ ಕೃಷಿ ಭೂಮಿಯನ್ನು ರೈತರು ಕಳೆದುಕೊಳ್ಳಬೇಕಾಗಿ ಬಂತು. ಕೃಷಿ ಮಾಡುವವರು ತಮ್ಮ ಭೂಮಿಯನ್ನು ಯಾರು ಯಾರಿಗೋ ಮಾರಬೇಕಾಯಿತು. ಕೃಷಿ ಮಾಡುವುದಕ್ಕಿಂತ ಕೃಷಿ ಭೂಮಿ ಮಾರಾಟ ಮಾಡುವುದೇ ಲಾಭಕರ ಎಂಬ ಭಾವನೆ ಬಲಿಯಿತು. ರಿಯಲ್ ಎಸ್ಟೇಟ್ ವ್ಯವಹಾರವು ಅತ್ಯಂತ ಲಾಭದಾಯಕ ಎನಿಸಿತು. ರಿಯಲ್ ಎಸ್ಟೇಟ್ ದಂದೆಯಿಂದಾಗಿ ಅಪರಾಧ ಪ್ರಕರಣಗಳು ಜಿಲ್ಲೆಯಲ್ಲಿ ಹೆಚ್ಚಾಯಿತು. ಜಿಲ್ಲೆಯ ಜೀವನದಿ ನೇತ್ರಾವತಿಯ ಹರಿವನ್ನು ತಿರುಗಿಸುವ ಅಸಹಜ ಯೋಜನೆ ಆದ್ಯತೆ ಪಡೆದುಕೊಂಡಿತು.

ಹೀಗೆ ಸಮಸ್ಯೆಗಳ ಅಗ್ನಿ ಪರ್ವತದ ಮೇಲೆ ಕುಳಿತಿರುವ ದ. ಕ. ಜಿಲ್ಲೆಯಲ್ಲಿ ಕೃಷಿ ಅಸಡ್ಡೆಗೊಳಗಾದರೂ ಸಣ್ಣ ಹಾಗೂ ಅಂಚಿನ ರೈತರು ಬದುಕಿಗಾಗಿ ಹೋರಾಟ ನಡೆಸಿಕೊಂಡೇ ಬಂದಿದ್ದಾರೆ. ಇವರ ಉಳಿವೇ ಕೃಷಿಯ ಉಳಿವು. ಕೃಷಿಯು ಮೂಲ ವಲಯದ ಚಟುವಟಿಕೆ. ಮೂಲ ವಲಯವು ಆನುಷಂಗಿಕ ವಲಯಕ್ಕೆ ಕಚ್ಚಾ ಸರಕನ್ನು ಒದಗಿಸುತ್ತದೆ. ಸೇವಾ ವಲಯದ ಅಭಿವೃದ್ಧಿಗೆ ಕಾರಣವಾಗುತ್ತದೆ. ಮೂಲ ವಲಯವು ತಾಯಿ ಬೇರು ಇದ್ದಂತೆ. ಭಾರತದ ಆರ್ಥಿಕತೆಯ ಬೆನ್ನೆಲುಬು ಮೂಲ ವಲಯ; ಅದರಲ್ಲೂ ಮುಖ್ಯವಾಗಿ ಬೇಸಾಯ. ತಾಯಿ ಬೇರನ್ನು ಘಾಸಿಗೊಳಿಸಿದರೆ ಗಿಡ ಹೆಚ್ಚು ದಿನ ಬದುಕುವುದಿಲ್ಲ. ಮೂಲ ವಲಯ ಕಡೆಗಣಿಸಲ್ಪಟ್ಟರೆ ಭಾರತದಂತಹ, ಇನ್ನೂ ಸಂಪೂರ್ಣ ಅಭಿವೃದ್ಧಿ ಸಾಧಿಸದ ಆರ್ಥಿಕತೆ ಅಭಿವೃದ್ಧಿ ಹೊಂದುವುದು ಕನಸಿನ ಮಾತಾಗುತ್ತದೆ. ಸಣ್ಣ ಮತ್ತು ಅಂಚಿನ ರೈತರ ಅಳಿವೆಂದರೆ ಅದು ಭಾರತದ ಆರ್ಥಿಕತೆಯ ಸರ್ವ ನಾಶ ಎಂದೇ ಅರ್ಥ. ಇದು ಗೊತ್ತಿದ್ದೇ ಮಹಾತ್ಮ ಗಾಂಧಿ ಗ್ರಾಮೀಣ ಭಾರತವೇ ನೈಜ ಭಾರತ ಎಂದಿರುವುದು. ಗಾಂಧೀಜಿ ಅಭಿವೃದ್ಧಿ ಎಂಬ ಪದಕ್ಕೆ ಬದಲಿಯಾಗಿ ಸರ್ವೋದಯ ಎಂಬ ಪದ ಬಳಸಿದರು. ಅಭಿವೃದ್ಧಿ ಎಂದಾಗ ಕೆಲವರಾದರೂ ಅದಕ್ಕಾಗಿ ತ್ಯಾಗ ಮಾಡಲೇಬೇಕಾಗುತ್ತದೆ. ಸರ್ವೋದಯ ಎಂದಾಗಲೇ ಎಲ್ಲರಿಗೂ ಒಳಿತಾಗುತ್ತದೆ. ಆದುದರಿಂದ ಗ್ರಾಮೀಣ ಕೃಷಿ ಮತ್ತು ವೃತ್ತಿಗಳನ್ನು ಉಳಿಸಿದರೆ ಮಾತ್ರ ಸರ್ವೋದಯ ಸಾಧಿಸಲು ಸಾಧ್ಯ ಎಂಬ ಅರಿವು ಗಾಂಧೀಜಿಗಿತ್ತು. ನಾವೀಗ ಆ ನಿಟ್ಟಿನಲ್ಲಿ ಚಿಂತಿಸಬೇಕಾಗಿದೆ.

ಸಣ್ಣ ಮತ್ತು ಅಂಚಿನ ರೈತರನ್ನು ಉಳಿಸುವುದರೊಂದಿಗೆ ನಾವು ಗೇರು ಕೃಷಿಯನ್ನು ಉಳಿಸಲೇಬೇಕಾಗಿದೆ. ಗೇರು ಬೀಜವು ರೈತರಿಗೆ ರಬ್ಬರಿಗಿಂತಲೂ ಹೆಚ್ಚು ಆದಾಯ ತರುವ ಬೆಳೆಯಾಗಿದೆ. ಗೇರು ಬೀಜದ ಲಾಭದಾಯಕತೆಯ ಅರಿವಿಲ್ಲದೆ ಅನೇಕ ರೈತರು ರಬ್ಬರ್ ಬೆಳೆಯಲು ಆರಂಭಿಸಿದುದರಿಂದ ಹಾನಿಯೇ ಉಂಟಾಗಿದೆ. ರಬ್ಬರಿನ ಬೆಲೆ ಕುಸಿಯುತ್ತಲೇ ಹೋಗುತ್ತಿದೆ. ಭತ್ತ ಮತ್ತು ಗೇರು ಬೀಜದ ಬೆಲೆ ಹೆಚ್ಚಾಗುತ್ತಿದೆ. ಇದನ್ನು ಆಧಾರವಾಗಿರಿಸಿಕೊಂಡು ರೈತರ ಮನೋ ಭೂಮಿಕೆಯನ್ನು ಭತ್ತ ಮತ್ತು ಗೇರು ಕೃಷಿಗಾಗಿ ಸಿದ್ಧಗೊಳಿಸಬೇಕಿದೆ. ಭತ್ತ ಬದುಕಲು ಅನಿವಾರ್ಯವಾದರೆ ಗೇರು ಕೃಷಿಯಿಂದ ಜೀವನ ಮಟ್ಟ ಹೆಚ್ಚಾಗುತ್ತದೆ. ಆದುದರಿಂದ ಮತ್ತೆ ಮರಳಿ ಭತ್ತಕ್ಕೆ ಎಂದು ರೈತರನ್ನು ಹುರಿದುಂಬಿಸಬೇಕಾಗಿದೆ. ಗೇರು ಬೀಜ

ಬೆಳೆಯುವಂತೆ ಅವರ ಮನವೊಲಿಸಬೇಕಿದೆ. ಅಧಿಕೃತ ಮೂಲಗಳು ತಿಳಿಸುವಂತೆ ೨೦೨೧ನೇ ಇಸವಿಯ ಸುಮಾರಿಗೆ ಭಾರತದ ಕಚ್ಚಾಗೇರಿನ ಸಂಸ್ಕರಣಾ ಸಾಮರ್ಥ್ಯ ೨೨ ಲಕ್ಷ ಟನ್‌ಗಳಿಗೆ ತಲುಪಬಹುದೆಂದು ಅಂದಾಜಿಸಲಾಗಿದೆ. ಸಾಂಪ್ರದಾಯಿಕವಲ್ಲದ ಪ್ರದೇಶಗಳಲ್ಲಿ ಗೇರು ಬೆಳೆಯುವ ಪ್ರಯತ್ನ ಹೆಚ್ಚಾಗುತ್ತಿದ್ದು ಕಚ್ಚಾಗೇರು ಉತ್ಪಾದನೆಯು ಹೆಚ್ಚುವ ಸಂಭವವಿದೆ. ಹಾಗಾಗಿ ಹೆಚ್ಚುತ್ತಿರುವ ಕಚ್ಚಾಗೇರಿನ ಕೊರತೆಯನ್ನು ಸರಿದೂಗಿಸುವ ನಿರೀಕ್ಷೆಯಿದೆ. ಹಾಗಾಗಿ ೨೦೨೦ನೇ ಇಸವಿಯ ಸಂದರ್ಭದಲ್ಲಿ ಭಾರತ ಕಚ್ಚಾಗೇರು ಉತ್ಪಾದನೆಯಲ್ಲಿ ಸ್ವಾವಲಂಬಿಯಾಗುವ ಸಾಧ್ಯತೆಗಳು ನಿಚ್ಚಳವಾಗಿದೆ.

ಇದು ಕಾರ್ಯಗತವಾಗಬೇಕಾದರೆ ಸರಕಾರ ಒಂದು ಸಮಗ್ರವಾದ ಗೇರು ನೀತಿಯನ್ನು (Cashew Policy) ಜಾರಿಗೆ ತರಬೇಕು. ರಬ್ಬರಿಗಾಗಿ ಗೇರು ಮರಗಳ ಮಾರಣ ಹೋಮ ನಡೆಸುವುದನ್ನು ನಿಷೇಧಿಸಬೇಕು. ಅಗತ್ಯ ಬಿದ್ದರೆ ಗೇರು ಬೀಜಕ್ಕೆ ಬೆಂಬಲ ಬೆಲೆ (Support Price) ಘೋಷಿಸಬೇಕು. ಗೇರು ಕೃಷಿಕರಿಗೆ ಸುಲಭವಾಗಿ ವಾಣಿಜ್ಯ ಬ್ಯಾಂಕುಗಳು ಸಾಲ ಕೊಡುವಂತಾಗಬೇಕು. ಗೇರು ಬೆಳೆ ಸಾಲ ಮತ್ತು ಗೇರು ವಿಮಾ ಯೋಜನೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳಬೇಕು. ಸಹಜ ಕೃಷಿಗೆ (Natural Farming) ಒತ್ತು ನೀಡಿ ಕೀಟ ನಾಶಕಗಳಿಗೆ ಬದಲಾಗಿ ಕೀಟಗಳನ್ನು ನಾಶ ಪಡಿಸುವ ಪರಾನ್ನ ಜೀವಿಗಳನ್ನು ಅಭಿವೃದ್ಧಿಪಡಿಸಬೇಕು.

ಗೇರು ಬೀಜದ ಬೆಳೆಯನ್ನು ಹೆಚ್ಚಿಸುವ ದೃಷ್ಟಿಯಿಂದ ವ್ಯಾಪಕ ಮತ್ತು ತೀಕ್ಷ್ಣ ಬೇಸಾಯ ಕ್ರಮಗಳೆರಡನ್ನೂ ಕೈಗೊಳ್ಳಬೇಕು. ವ್ಯಾಪಕ ಕ್ರಮವೆಂದರೆ ಕೃಷಿ ಭೂಮಿಯ ವಿಸ್ತೀರ್ಣ ಹೆಚ್ಚಿಸುವುದು. ದ. ಕ. ಜಿಲ್ಲಾ ಅಂಕಿ ಅಂಶಗಳ ಪ್ರಕಾರ ಜಿಲ್ಲೆಯಲ್ಲಿ ಶೇಕಡಾ ೯ ರಷ್ಟು ಭೂಮಿ ಉಪಯೋಗವಿಲ್ಲದೆ ಉಳಿದಿದೆ. ಈ ಭೂಮಿಯನ್ನು ಸರಕಾರ ವಶಪಡಿಸಿಕೊಂಡು ಗೇರು ಕೃಷಿಗೆ ಬಳಸಬೇಕು. ಸರಕಾರದ ಒಡೆತನದಲ್ಲಿರುವ ಗೇರು ಕೃಷಿ ಭೂಮಿಯಲ್ಲಿ ಅಧಿಕ ಇಳುವರಿಯ ಹೊಸ ತಳಿಗಳನ್ನು ಬೆಳೆಸಬೇಕು. ಸರಕಾರದ ಗೇರು ತೋಟಗಳನ್ನು ಗೇರು ಕಾರ್ಖಾನೆಗಳಿಗೆ ದೀರ್ಘಾವಧಿ ಭೋಗ್ಯಕ್ಕೆ (Lease) ನೀಡಬೇಕು. ಇದರಿಂದ ಗೇರು ಕಾರ್ಖಾನೆಗಳ ಗೋಡಂಬಿ ಉತ್ಪಾದನಾ ವೆಚ್ಚ ಕಡಿಮೆಯಾಗಿ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರತದ ಸ್ಪರ್ಧಾ ಶಕ್ತಿ ಅಧಿಕವಾಗುತ್ತದೆ. ಆದರೆ ಆಹಾರ ಬೆಳೆಯುವ ಪ್ರದೇಶವನ್ನು ಪರಿಪೂರ್ಣ ಆಹಾರವಲ್ಲದ ಗೇರು ಬೆಳೆಗೆ ಬಿಟ್ಟುಕೊಡಲು ಸರಕಾರ ಒಪ್ಪುವುದಿಲ್ಲ. ಈ ನಿಟ್ಟಿನಲ್ಲಿ ಸರಕಾರ ತನ್ನ ನಿಲುವನ್ನು ಸಡಿಲಿಸಿಕೊಳ್ಳಬೇಕು.

ತೀಕ್ಷ್ಣ ಬೇಸಾಯದ ಮೂಲಕ ಗೇರು ಇಳುವರಿ ಹೆಚ್ಚಾಗುವಂತೆ ನೋಡಿಕೊಳ್ಳಲು ಸಾಧ್ಯವಿದೆ. ಅದಕ್ಕಾಗಿ ಅಧಿಕ ಇಳುವರಿಯ ಶೀಘ್ರ ಪ್ರತಿಫಲ ನೀಡುವ ಗೇರು ಗಿಡಗಳನ್ನು ಪುತ್ತೂರಿನ ಗೇರು ನಿರ್ದೇಶನಾಲಯ ಆವಿಷ್ಕರಿಸಿದೆ. ಅದರೊಂದಿಗೆ ಸುಧಾರಿತ ಗೇರು ಬೇಸಾಯ ಕ್ರಮಗಳನ್ನು ಪ್ರಚಾರ ಮಾಡುತ್ತಿದೆ. ಈ ಸುಧಾರಿತ ತಂತ್ರಜ್ಞಾನ ರೈತಾಪಿ ಜನರಿಗೆ ಸಮರ್ಪಕವಾಗಿ ತಲುಪಬೇಕಾದ ತುರ್ತು ಅವಶ್ಯಕತೆ ಇದೆ. ಬಹುತೇಕ ರೈತರು ಗೇರು ನಿರ್ದೇಶನಾಲಯದ ಸಂಪರ್ಕವನ್ನೇ ಹೊಂದಿಲ್ಲದಿರುವುದು ದೊಡ್ಡ ಕೊರತೆಯಾಗಿದೆ. ಈ ನಿಟ್ಟಿನಲ್ಲಿ ಸ್ವಯಂ ಸೇವಾ ಸಂಘಗಳು ಕಾರ್ಯ ಪ್ರವೃತ್ತರಾಗಬೇಕಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮೀಣಾಭಿವೃದ್ಧಿಯಲ್ಲಿ ಪ್ರಭಾವಿ ಪಾತ್ರ ನಿರ್ವಹಿಸುತ್ತಿರುವ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಈ ದಿಕ್ಕಿನಲ್ಲಿ ತೊಡಗಿಸಿಕೊಳ್ಳಬೇಕು. ಈಗಾಗಲೇ ಸಣ್ಣ ರೈತರಿಗೆ ಮಲ್ಲಿಗೆ, ತೆಂಗು ಸಸಿಗಳನ್ನು ವಿತರಿಸುವುದರ ಮೂಲಕ ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಲು ನೆರವು ನೀಡುತ್ತಿರುವ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಗೇರು ಸಸಿಗಳನ್ನು ವಿತರಿಸುವುದರೊಂದಿಗೆ ಗೇರು ಕೃಷಿಗೆ ಸೂಕ್ತ ಮಾರ್ಗದರ್ಶನ ನೀಡಿದರೆ ಗೇರು ಕೃಷಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ. ಕೆಲವು ವರ್ಷಗಳ ಹಿಂದೆ ಗೇರು ಗಿಡಗಳನ್ನು ವಿತರಿಸುತ್ತಿದ್ದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಪ್ರಸ್ತುತ

ರೈತರ ಅನಾಸಕ್ತಿ ಧೋರಣೆಯಿಂದಾಗಿ ಗೇರು ಗಿಡಗಳನ್ನು ವಿತರಿಸುವುದನ್ನು ನಿಲ್ಲಿಸಿದೆ. ಆದ್ದರಿಂದ ಸರ್ಕಾರ ಈ ನಿಟ್ಟಿನಲ್ಲಿ ಮಧ್ಯ ಪ್ರವೇಶಿಸಿ ಪುತ್ತೂರಿನ ಗೇರು ಸಂಶೋಧನಾ ನಿರ್ದೇಶನಾಲಯದ ಸಹಯೋಗದೊಂದಿಗೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜೊತೆಗೆ ಒಪ್ಪಂದದ ತಿಳುವಳಿಕೆ ಪತ್ರ (Memorondum of Understanding) ಮಾಡಿಕೊಂಡರೆ ತಂತ್ರಜ್ಞಾನದ ವರ್ಗಾವಣೆ ಯಶಸ್ವಿಯಾಗಿ ಕಾರ್ಯಗತವಾಗಲು ಸಾಧ್ಯ. ಈ ನಿಟ್ಟಿನಲ್ಲಿ ಸರಕಾರ ಕಾರ್ಯಪ್ರವೃತ್ತವಾಗಬೇಕಾಗಿದೆ.

ಸುಧಾರಿತ ತಳಿಗಳಿಂದಾಗಿ ಗೇರು ಬೆಳೆಯನ್ನು ಲಾಭದಾಯಕ ಉದ್ಯಮವಾಗಿ ಮಾಡಲು ಸಾಧ್ಯ ಎಂಬುದಕ್ಕೆ ಕ್ಷೇತ್ರಾಧ್ಯಯನ ಕಾಲದಲ್ಲಿ ಕೆಲವು ಉದಾಹರಣೆಗಳು ದೊರೆತಿವೆ. ಪುತ್ತೂರಿನ ಸಮೀಪದ ಶ್ರೀ ಯದುಕುಮಾರ್ ಕೆ. ಎಂಬುವವರು ಮೂರು ಎಕರೆ ಭೂಮಿಯಲ್ಲಿ ಸುಮಾರು ೩೦೦ ಗೇರು ಗಿಡಗಳನ್ನು ನೆಟ್ಟು ಬೆಳೆಸಿದ್ದಾರೆ. ವೈಜ್ಞಾನಿಕವಾಗಿ ಗೇರು ಕೃಷಿ ಮಾಡುತ್ತಿದ್ದು ಕಾಲಕಾಲಕ್ಕೆ ಗಿಡಗಳಿಗೆ ನೀರು ಗೊಬ್ಬರ ನೀಡುತ್ತಿದ್ದಾರೆ. ಅವರ ವಾರ್ಷಿಕ ಖರ್ಚು ೨೬,೦೦೦ ರೂ.ಗಳಾಗಿದ್ದು ಆದಾಯ ರೂ. ೧,೭೦,೦೦೦ ಗಳು ಎಂದು ಅಂದಾಜಿಸಲಾಗಿದೆ. ಸರಾಸರಿ ೬೦೦ ಕೆ.ಜಿ. ಗಳಷ್ಟು ಗೇರು ಬೀಜ ಪಡೆಯುತ್ತಿದ್ದಾರೆ. ಇದು ಗೇರು ಗಿಡಗಳು ಫಲ ನೀಡಲು ಪ್ರಾರಂಭವಾದ ವರ್ಷದ ಇಳುವರಿ ಮುಂದಿನ ವರ್ಷಗಳಲ್ಲಿ ಇಳುವರಿ ಹೆಚ್ಚುತ್ತಾ ಹೋಗುವುದರಿಂದ ಲಾಭದ ಪ್ರಮಾಣ ಹೆಚ್ಚಾಗುವುದು ನಿಶ್ಚಿತ ಎಂಬ ಅಭಿಪ್ರಾಯ ಯದುಕುಮಾರ್‌ರವರದ್ದು. ಇದರೊಂದಿಗೆ ಒಳ ಬೆಳೆಯಾಗಿ ಬೆಳೆದ ಕಾಳುಮೆಣಸು, ಅನಾನಾಸು ಇತ್ಯಾದಿಗಳಿಂದ ವರ್ಷಕ್ಕೆ ರೂ. ೫೦,೦೦೦ ಗಳಷ್ಟು ಲಾಭ ಇದೆ ಎನ್ನುತ್ತಾರೆ.

ಇನ್ನೋರ್ವ ರೈತ ಕೆ. ರತ್ನಾಕರ್ ನ್ಯಾಕ್ ಪುತ್ತೂರು ತಾಲೂಕಿನವರೇ ಆಗಿದ್ದು ಸುಮಾರು ೫ ಎಕರೆ ವಿಸ್ತೀರ್ಣದಲ್ಲಿ ಗೇರು ಬೆಳೆಯುತ್ತಿದ್ದಾರೆ. ಪ್ರತಿ ಗಿಡದಲ್ಲೂ ಸರಾಸರಿ ೮ ಕೆ. ಜಿ. ಗಳಷ್ಟು ಗೇರು ಬೀಜ ದೊರೆಯುತ್ತಿದ್ದು ವಾರ್ಷಿಕ ಆದಾಯ ರೂ. ೨.೫ ಲಕ್ಷವಾಗಿದ್ದು ವಾರ್ಷಿಕ ವೆಚ್ಚ ರೂ. ೩೫,೦೦೦ಗಳು ಮಾತ್ರ. ಗೇರು ಬೀಜ ಬೆಳೆಯಿಂದ ಬದುಕಲು ಸಾಧ್ಯವಿಲ್ಲವೆಂದು ಹೇಳುವವರು ಇಂಥವರ ಕೃಷಿ ಕ್ಷೇತ್ರಕ್ಕೆ ಹೋಗಿ ವೈಜ್ಞಾನಿಕವಾಗಿ ಗೇರು ಬೆಳೆಯುವುದು ಹೇಗೆಂಬುದನ್ನು ಕಲಿತುಕೊಂಡು ಬಂದು ತಮ್ಮ ಕೃಷಿ ಕ್ಷೇತ್ರದಲ್ಲಿ ಅವರ ಆವಿಷ್ಕಾರಗಳನ್ನು ಅಳವಡಿಸಿಕೊಳ್ಳಬೇಕಾದ ಅಗತ್ಯವಿದೆ.

ಗೇರು ಬೆಳೆಗಾರರು ತಮ್ಮದೆ ಆದ ಗೇರು ಬೆಳೆಗಾರರ ಸಹಕಾರಿ ಸಂಘವನ್ನು ತಾಲೂಕಿಗೊಂದರಂತೆ ಸ್ಥಾಪಿಸಬೇಕು. ತಾಲೂಕು ಸಹಕಾರಿ ಸಂಘಗಳ ಕಾರ್ಯಗಳನ್ನು ಸರಿಯಾಗಿ ಕ್ರೋಢೀಕರಿಸಲು ಜಿಲ್ಲಾ ಹಂತದಲ್ಲಿ ಕೇಂದ್ರೀಯ ಗೇರು ಬೆಳೆಗಾರರ ಸಹಕಾರಿ ಸಂಘವಿರಬೇಕು. ತಾಲೂಕು ಹಂತದ ಸಹಕಾರಿ ಸಂಘಗಳು ಗೇರು ಬೆಳೆಗಾರರಿಗೆ ಬೆಳೆ ಆಧಾರಿತ ಸಾಲವನ್ನು ನೀಡಬೇಕು. ಬೆಳೆಗಾರರು ತಮ್ಮ ಬೆಳೆಯನ್ನು ಸಹಕಾರಿ ಸಂಘಗಳಿಗೆ ಮಾರಾಟ ಮಾಡಬೇಕು. ಈ ಸಹಕಾರಿ ಸಂಘಗಳು ಉಗ್ರಾಣ ವ್ಯವಸ್ಥೆಯನ್ನು ಹೊಂದಿರಬೇಕು ಮತ್ತು ಅವು ಕೊಂಡುಕೊಂಡ ಗೇರು ಬೀಜವನ್ನು ನೇರವಾಗಿ ಗೇರು ಕಾರ್ಖಾನೆಗಳಿಗೆ ಮಾರಾಟ ಮಾಡಬೇಕು. ಈ ಸಹಕಾರಿ ಸಂಘಗಳು ಗೇರು ಹಣ್ಣಿನ ಫೆನಿ, ಜಾಮು ತಯಾರಿಸುವ ಘಟಕಗಳನ್ನು ಕೂಡಾ ಹೊಂದಿರಬೇಕು. ಆಗ ಗೇರು ಬೀಜದ ಕೊಳ್ಳುವಿಕೆ ಮತ್ತು ಗೇರು ಹಣ್ಣಿನ ಬಳಕೆ ಸಹಕಾರೀಕರಣಗೊಂಡಂತಾಗುತ್ತದೆ. ಇಂತಹ ಸಹಕಾರೀಕರಣದಿಂದ ಗೋವಾ ರಾಜ್ಯದ ಗೇರು ಬೆಳೆಗಾರರು ತುಂಬಾ ಆದಾಯ ಗಳಿಸುವಂತಾಗಿದೆ. ಈ ಪ್ರಯೋಗ ದಕ್ಷಿಣ ಕನ್ನಡದಲ್ಲೂ ಅನುಷ್ಠಾನಕ್ಕೆ ಬರಬೇಕು.

ಗೋಡಂಬಿಯ ಕೊಬ್ಬಿನ ಅಂಶವನ್ನು ಪ್ರತ್ಯೇಕಿಸಿ ಸೌಂದರ್ಯ ವರ್ಧಕವನ್ನು ತಯಾರಿಸಲು ಸಾಧ್ಯವಿದೆ. ಇಂತಹ ಘಟಕವೊಂದು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ ಅಸ್ತಿತ್ವಕ್ಕೆ ಬರಬೇಕು. ಈ ನಿಟ್ಟಿನಲ್ಲಿ ಸರಕಾರ ಸೂಕ್ತವಾದಂತಹ

[illegible]

ಕಾರ್ಯಕ್ರಮಗಳನ್ನು ಅಳವಡಿಸುವ ಅಗತ್ಯವಿದೆ. ಗೇರು ಹಣ್ಣಿನ ಸಮರ್ಪಕ ಆರ್ಥಿಕ ಬಳಕೆಯು ಭವಿಷ್ಯದಲ್ಲಿ ಗೇರು ಉದ್ಯಮಕ್ಕೆ ಕಾಯಕಲ್ಪ ನೀಡಬಲ್ಲದು. ಗೋವಾ ರಾಜ್ಯವನ್ನು ಹೊರತು ಪಡಿಸಿದರೆ ಬೇರೆ ಯಾವುದೇ ರಾಜ್ಯಗಳಲ್ಲಿ ಗೇರು ಹಣ್ಣಿನ ಸಮರ್ಪಕ ಬಳಕೆ ಇಲ್ಲ. ಗೇರು ಹಣ್ಣಿನಿಂದ ಆರೋಗ್ಯಕ್ಕೆ ಹಾನಿಕಾರಿಯಲ್ಲದ ಮದ್ಯಸಾರ ಫೆನಿ, ಜಾಮ್, ಜ್ಯೂಸ್, ಉಪ್ಪಿನಕಾಯಿ ಹಾಗೂ ಇತರೆ ತಿನಿಸುಗಳನ್ನು ತಯಾರಿಸಬಹುದು ಎಂಬುದನ್ನು ಅಧ್ಯಯನದಲ್ಲಿ ಈಗಾಗಲೇ ಸ್ಪಷ್ಟಪಡಿಸಲಾಗಿದೆ. ಕೇರಳ ರಾಜ್ಯದ ತೋಟಗಾರಿಕಾ ನಿಗಮದ ಒಂದು ಹೊಸ ಯೋಜನೆಯಂತೆ ಗೇರು ಹಣ್ಣಿನಿಂದ ಬಯೋ ಎಥನೋಲ್ ಎಂಬ ಇಂಧನವನ್ನು ಕಡಿಮೆ ವೆಚ್ಚದಲ್ಲಿ ತಯಾರಿಸಬಹುದು ಎಂಬುದನ್ನು ಕಂಡುಕೊಂಡಿದ್ದು, ಈ ಯೋಜನೆಯು ಈಗಾಗಲೇ ಕೇರಳದ ಕಾಸರಗೋಡಿನಲ್ಲಿ ಪ್ರಾರಂಭವಾಗಿದೆ. ಕರ್ನಾಟಕದ ಗೇರು ಉತ್ಪಾದನೆಯಲ್ಲಿ ಶೇ. ೫೦ ರಷ್ಟು ಪಾಲನ್ನು ಹೊಂದಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಯೋಜನೆಯ ಅನುಷ್ಠಾನಕ್ಕೆ ವಿಫುಲವಾದ ಅವಕಾಶವಿದೆ. ಸರಕಾರ ಈ ನಿಟ್ಟಿನಲ್ಲಿ ಶೀಘ್ರ ಕ್ರಮ ಕೈಗೊಂಡು ದ.ಕ. ಜಿಲ್ಲೆಯಲ್ಲಿ ಗೇರು ಹಣ್ಣಿನಿಂದ ಬಯೋ ಎಥನೋಲ್ ಇಂಧನ ತಯಾರಿಕಾ ಘಟಕ ಸ್ಥಾಪಿಸಲು ಮುಂದಾಗಬೇಕು.

ಗೇರು ಬೀಜದ ಸಿಪ್ಪೆಯಿಂದ ಎಣ್ಣೆ ತೆಗೆದ ಬಳಿಕ ಉಳಿಯುವ ಸಿಪ್ಪೆಯ ತೊಗಟೆಯನ್ನು ಉರುವಲಿನಂತೆ ಬಳಸಲಾಗುತ್ತದೆ. ದ.ಕ. ಜಿಲ್ಲೆಯ ಸುರತ್ಕಲ್ಲಿನಲ್ಲಿರುವ ರಾಷ್ಟ್ರೀಯ ತಾಂತ್ರಿಕ ಮಹಾ ವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿಗಳು ನಡೆಸಿದ ಒಂದು ಅಧ್ಯಯನದಲ್ಲಿ ಎಣ್ಣೆ ತೆಗೆದ ಬಳಿಕ ಉಳಿಯುವ ಸಿಪ್ಪೆಯನ್ನು ಕಾರ್ಖಾನೆಗಳ ತ್ಯಾಜ್ಯ ನೀರಿನಲ್ಲಿರುವ ವಿಷಕಾರಕವಾದ ತೆಳು ನೀಲಿ ಬಣ್ಣದ ಕಾರ್ಡಿಮಂ ಎಂಬ ರಾಸಾಯನಿಕವನ್ನು ಹೀರುವ ಗುಣವಿರುವುದರಿಂದ ಗೇರು ಬೀಜದ ಸಿಪ್ಪೆಯನ್ನು ತ್ಯಾಜ್ಯ ಶುದ್ಧೀಕರಣಕ್ಕೆ ಬಳಸುವ ಮೂಲಕ ಜಲಮಾಲಿನ್ಯವಾಗುವುದನ್ನು ತಡೆಗಟ್ಟಲು ಸಾಧ್ಯವಿದೆ ಎಂಬುದನ್ನು ನಿರೂಪಿಸಿದ್ದಾರೆ. ಈ ನಿಟ್ಟಿನಲ್ಲಿ ಇನ್ನಷ್ಟು ಅಧ್ಯಯನಗಳು ನಡೆಯುವ ಅಗತ್ಯವಿದೆ. ಅಷ್ಟು ಮಾತ್ರವಲ್ಲ ಗೇರು ಸಿಪ್ಪೆಯನ್ನು ಕಚ್ಚಾ ಸರಕಾಗಿ ಬಳಸಿ ವಿದ್ಯುತ್ ಉತ್ಪಾದಿಸಬಹುದು. ಗೇರು ಎಣ್ಣೆಯನ್ನು ಚರ್ಮ ರೋಗಕ್ಕೆ ಔಷಧಿಯಾಗಿ ಕೂಡಾ ಬಳಸಬಹುದು.

ಪ್ರಸ್ತುತ ಅಮೇರಿಕಾ ಪಶ್ಚಿಮ ಯುರೋಪ್ ಜಪಾನ್, ಪಶ್ಚಿಮ ಏಷ್ಯಾ ಹಾಗೂ ಆಸ್ಟ್ರೇಲಿಯಾ ಇತ್ಯಾದಿ ದೇಶಗಳು ಭಾರತದ ಪ್ರಮುಖ ಗ್ರಾಹಕ ರಾಷ್ಟ್ರಗಳಾಗಿವೆ. ಪೂರ್ವ ಯುರೋಪ್ ರಾಷ್ಟ್ರಗಳು, ಕಾಮನ್‌ವೆಲ್ತ್ ಸ್ವತಂತ್ರ ರಾಷ್ಟ್ರಗಳು ಮತ್ತು ಚೈನಾ ದೇಶಗಳು ನೂತನ ಮಾರುಕಟ್ಟೆಗಳಾಗಿ ಮೂಡಿ ಬರುತ್ತಿದ್ದು ಅವುಗಳನ್ನು ಪರಿಣಾಮಕಾರಿ ಗ್ರಾಹಕ ರಾಷ್ಟ್ರಗಳಾಗಿ ಬಳಸಿಕೊಳ್ಳುವ ಪ್ರಯತ್ನ ಮಾಡಿಕೊಳ್ಳಬೇಕಾಗಿದೆ. ಪ್ರಸ್ತುತ ಗೋಡಂಬಿಯನ್ನು ಹೆಚ್ಚಾಗಿ ಒಂದು ಕುರುಕಲು ತಿನಿಸು ಎಂಬುದಾಗಿ ಮಾತ್ರ ಬಳಸಲ್ಪಡುವುದರಿಂದ ಮತ್ತು ಅದು ತುಂಬಾ ದುಬಾರಿಯಾಗಿರುವುದರಿಂದ ಗೋಡಂಬಿ ಒಂದು ಉನ್ನತ ವರ್ಗಕ್ಕಷ್ಟೇ ಸೀಮಿತವಾಗಿದೆ. ಗೋಡಂಬಿ ಬಳಕೆಯ ಒಂದು ಹೊಸ ಪೀಳಿಗೆಯನ್ನು ಸೃಷ್ಟಿಸುವ ಅಗತ್ಯವಿದೆ. ಗೋಡಂಬಿಯಲ್ಲಿರುವ ಪೌಷ್ಟಿಕತೆಯ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸಿ ಮಕ್ಕಳಿಗೆ, ಗರ್ಭಿಣಿ ಮಹಿಳೆಯರಿಗೆ, ವಯೋವೃದ್ಧರಿಗೆ ಅದರ ಔಷಧೀಯ ಗುಣಗಳನ್ನು ಹಾಗೂ ಪೌಷ್ಟಿಕತೆಯನ್ನು ಪರಿಚಯಿಸಿ ಅದರ ಅನುಭೋಗವನ್ನು ಹೆಚ್ಚಿಸಬೇಕಾಗಿದೆ. ಟಿವಿ ಮಾಧ್ಯಮಗಳಲ್ಲಿ ಬಾದಾಮಿಯಂತಹ ಇತರೆ ಸಸ್ಯ ಜನ್ಯ ಬೀಜಗಳಿಗೆ ಇರುವ ಪ್ರಚಾರ ಗೋಡಂಬಿಗೆ ಇಲ್ಲ. ಗೋಡಂಬಿಯ ಕುರಿತಾಗಿ ವ್ಯಾಪಕ ಪ್ರಚಾರವನ್ನು ನೀಡಬೇಕು. ಪ್ರಸ್ತುತ ಶಾಲೆಗಳಲ್ಲಿ ಮಕ್ಕಳಿಗಾಗಿ ಮೊಟ್ಟೆ, ಹಾಲು ಇತ್ಯಾದಿ ಆಹಾರ ವಸ್ತುಗಳನ್ನು ವಿತರಿಸುತ್ತಿರುವುದು ಸರಿಯಷ್ಟೇ. ಅದೇ ಪ್ರಕಾರವಾಗಿ ಗೋಡಂಬಿಯನ್ನು ವಿತರಿಸಲು ಪ್ರಾರಂಭಿಸಬೇಕು. ಇದರಿಂದಾಗಿ ಗೋಡಂಬಿಗೆ ವಿಶೇಷ ಮಾರುಕಟ್ಟೆ ಸಿಕ್ಕಂತಾಗುತ್ತದೆ. ಈ ನಿಟ್ಟಿನಲ್ಲಿ ಸರಕಾರ ವಿಶೇಷ ಮುತುವರ್ಜಿ

ವಹಿಸಬೇಕಾಗಿದೆ. ಈಗಾಗಲೇ ಗೋಡಂಬಿಯನ್ನು ಕೆಲವು ಬಿಸ್ಕೆಟ್ ಹಾಗೂ ಚಾಕಲೇಟ್‌ಗಳಲ್ಲಿ ಬಳಸುತ್ತಿದ್ದಾರೆ. ಕ್ಯಾಡ್‌ಬರಿ ಹಾಗೂ ನೆಸ್ಲೆ ಚಾಕಲೇಟ್ ಕಂಪೆನಿಗಳು ತಮ್ಮ ಉತ್ಪನ್ನಗಳಲ್ಲಿ ಗೋಡಂಬಿಯನ್ನು ಬಳಸುತ್ತಿವೆ. ದ. ಕ. ಜಿಲ್ಲೆಯ ಪುತ್ತೂರಿನ ಕ್ಯಾಂಪ್ಕೋ ಚಾಕಲೇಟ್ ಕಂಪೆನಿ ೨೦೧೨–೧೩ ರಿಂದ ಕಾಜೂ- ಸುಪಾರಿ ಎಂಬ ಚಾಕಲೇಟನ್ನು ಮಾರುಕಟ್ಟೆಗೆ ಪರಿಚಯಿಸಿದೆ. ಚಾಕಲೇಟ್‌ಗಳ ಜೊತೆ ಬಿಸ್ಕೆಟ್ ಹಾಗೂ ಇನ್ನಿತರ ಬೇಕರಿ ತಿನಿಸುಗಳಲ್ಲಿ ಕೂಡಾ ಗೋಡಂಬಿಯನ್ನು ಬಳಸುವ ರೂಢಿ ಇರುವುದರಿಂದ ಗೋಡಂಬಿಯ ಮಾರುಕಟ್ಟೆ ಹೆಚ್ಚುತ್ತಿದೆ. ಬಹುತೇಕವಾಗಿ ಮೌಲ್ಯವರ್ಧಿತ ಗೋಡಂಬಿಯ ಬಳಕೆ ಹೆಚ್ಚುತ್ತಿದ್ದು ಈ ದಿಸೆಯಲ್ಲಿ ಇನ್ನಷ್ಟು ಪ್ರಯತ್ನಗಳಾಗಬೇಕಾಗಿದೆ. ಇದಲ್ಲದೆ ಜನಸಾಮಾನ್ಯರ ನಿತ್ಯ ಬಳಕೆಯ ಆಹಾರ ವಸ್ತುಗಳಲ್ಲಿ ಗೋಡಂಬಿಯು ಸ್ಥಾನ ಪಡೆದುಕೊಳ್ಳುವಂತಾಗಬೇಕು.

ಮುಂದುವರಿದ ರಾಷ್ಟ್ರಗಳು ಇತ್ತೀಚೆಗಿನ ವರ್ಷಗಳಲ್ಲಿ ಸಾವಯವ ಕೃಷಿ ಪದ್ಧತಿ ಪ್ರಕಾರ ಸಾಂಪ್ರದಾಯಿಕವಾಗಿ ಬೆಳೆದ ಆಹಾರ ಉತ್ಪನ್ನಗಳಿಗೆ ಮಹತ್ವ ನೀಡುತ್ತಿರುವುದು ಕಂಡು ಬರುತ್ತಿದೆ. ಭಾರತದಲ್ಲಿ ಗೇರು ಬೀಜದ ಉತ್ಪಾದನೆ ಮಾಡುತ್ತಿರುವುದು ಬಹುತೇಕ ಸಣ್ಣ ಹಾಗೂ ಅಂಚಿನ ರೈತರು ಯಾವುದೇ ಬಗೆಯ ರಾಸಾಯನಿಕಗಳನ್ನು ಬಳಸದೇ ಗೇರು ಬೆಳೆಯುತ್ತಿರುವುದರಿಂದ ಭಾರತದಲ್ಲಿ ತಯಾರಾದ ಗೋಡಂಬಿಗೆ ವಿದೇಶಿ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚುತ್ತಿದೆ. ಆದುದರಿಂದ ಸಾವಯವ ಪದ್ಧತಿಯನ್ನು ಇನ್ನೂ ಹೆಚ್ಚಾಗಿ ಅಳವಡಿಸಿಕೊಂಡು ಉತ್ಪಾದನೆಯನ್ನು ಹೆಚ್ಚಿಸುವುದರೊಂದಿಗೆ ರೈತರಿಗೆ ಉತ್ತಮ ಆದಾಯ ಬರುವಂತೆ ಪ್ರಯತ್ನಿಸಬೇಕು.

ಭಾರತದ ಗೋಡಂಬಿ ಸಂಸ್ಕರಣೆಯಲ್ಲಿ ಹೆಚ್ಚಾಗಿ ಮಾನವ ಶಕ್ತಿಯ ಬಳಕೆಯಾಗುತ್ತಿದ್ದು, ನೈಪುಣ್ಯತೆ ಹೊಂದಿದ ಮಹಿಳಾ ಕಾರ್ಮಿಕರನ್ನೇ ಹೆಚ್ಚಾಗಿ ಬಳಸಿಕೊಳ್ಳುತ್ತಿರುವುದರಿಂದ ಗೋಡಂಬಿಯ ಗುಣಮಟ್ಟವು ಉತ್ಕೃಷ್ಟವಾಗಿದೆ. ಅಗ್ಗದ ಶ್ರಮ ವೆಚ್ಚ ಹಾಗೂ ಪರಿಣಿತ ಕಾರ್ಮಿಕರ ಶ್ರಮ ಗೇರು ಕಾರ್ಖಾನೆಗಳ ಬೆಳವಣಿಗೆಗೆ ಪೂರಕ ಅಂಶಗಳಾಗಿ ಹೊರಹೊಮ್ಮಿವೆ. ಭಾರತಕ್ಕೆ ಗೇರು ಉದ್ಯಮದಲ್ಲಿರುವ ಪರಿಣಿತಿ ಹಾಗೂ ಅನುಭವದಿಂದ ಮುಂದಿನ ದಿನಗಳಲ್ಲಿ ಉಜ್ವಲ ಭವಿಷ್ಯವನ್ನು ಕಂಡುಕೊಳ್ಳುವ ಭರವಸೆ ಇದೆ.

ಹೀಗೆ ಗೋಡಂಬಿ ಮತ್ತು ಅದರ ಉಪ ಉತ್ಪನ್ನಗಳನ್ನು ಬೇರೆ ಬೇರೆ ಬಳಕೆಗೆ ಬಳಸಲು ಸಾಧ್ಯವಿದೆ ತನ್ಮೂಲಕ ಉದ್ಯಮದ ಆರ್ಥಿಕ ಹೊರೆಯನ್ನು ಹಗುರಗೊಳಿಸಲು ಸಾಧ್ಯ. ಇದು ಗೇರು ಬೀಜ ಉದ್ಯಮದ ಬೆಳವಣಿಗೆಗೆ ಇರುವ ಅವಕಾಶಗಳು. ಸಣ್ಣ ಮತ್ತು ಅಂಚಿನ ರೈತರು ತಮ್ಮ ಜಮೀನಿನ ಎತ್ತರದ ಪ್ರದೇಶಗಳಲ್ಲಿ ಗೇರನ್ನು ಬೆಳೆದು ಮನೆಯ ಅಂಗಳದ ತುದಿಯಲ್ಲಿ ಮಲ್ಲಿಗೆ ಬೆಳೆದು ಸ್ವಾವಲಂಬಿಗಳಾಗಿ ಬದುಕಲು ಸಾಧ್ಯವಿರುವುದನ್ನು ಹಲವರು ತೋರಿಸಿಕೊಟ್ಟಿದ್ದಾರೆ. ಇಂತಹ ಮಾದರಿಗಳನ್ನು ಉಳಿದ ರೈತರು ಅನುಕರಿಸಬೇಕು. ನಮ್ಮ ದೇಶದಲ್ಲಿ ಗೇರು ಬೀಜದ ಉದ್ಯಮದ ಬೆಳವಣಿಗೆಗೆ ಎರಡು ರೀತಿಯ ಅವಕಾಶಗಳಿವೆ. ಮೊದಲನೆಯದಾಗಿ ಭಾರತವು ಜನಸಂಖ್ಯೆಯಲ್ಲಿ ವಿಶ್ವದ ಎರಡನೇ ರಾಷ್ಟ್ರ. ಇಲ್ಲಿ ಶ್ರಮ ಶಕ್ತಿಯ ವಿಪುಲ ಲಭ್ಯತೆ ಇದೆ. ಸಹಜವಾಗಿ ನಿರುದ್ಯೋಗವು ದೊಡ್ಡ ಪ್ರಮಾಣದಲ್ಲಿದೆ. ಗೇರು ಉದ್ಯಮವು ಶ್ರಮ ಬಾಹುಳ್ಯ ತಂತ್ರಜ್ಞಾನವನ್ನು ಹೆಚ್ಚು ಬಳಸುವ ಉದ್ಯಮವಾಗಿದೆ. ಹಾಗಾಗಿ ಗೇರು ಉದ್ಯಮಕ್ಕೆ ಉದ್ಯೋಗದ ನಿರ್ಮಾಣದ ಶಕ್ತಿ ಇದೆ. ಎರಡನೇಯದಾಗಿ ಭಾರತ ಗೇರನ್ನು ಬೆಳೆಯುವ ಮತ್ತು ಗೇರು ಬೀಜವನ್ನು ಆಮದು ಮಾಡಿಕೊಳ್ಳುವ ವಿಶ್ವದ ಏಕೈಕ ರಾಷ್ಟ್ರ. ಕಳೆದ ಎರಡು ದಶಕಗಳಿಂದ ಭಾರತದ ಜೀವನ ಮಟ್ಟದ ಸುಧಾರಣೆ ಹಾಗೂ ಆದಾಯದ ಹೆಚ್ಚಳದಿಂದಾಗಿ ಗೋಡಂಬಿಯ ದೇಶೀಯ ಬಳಕೆ ಹೆಚ್ಚುತ್ತಿದ್ದು ಗೋಡಂಬಿಗೆ ಯಥೇಚ್ಛ ಬೇಡಿಕೆ ಇದೆ. ಪ್ರಸ್ತುತ ವಾರ್ಷಿಕ ಶೇ. ೧೧ ರ ದರದಲ್ಲಿ ದೇಶೀ ಬಳಕೆ ಹೆಚ್ಚುತ್ತಿದ್ದು, ಮುಂದಿನ ೫–೧೦ ವರ್ಷಗಳಲ್ಲಿ ಭಾರತವು ಗೋಡಂಬಿಯನ್ನು ಆಮದು ಮಾಡಿಕೊಳ್ಳುವ ಸಾಧ್ಯತೆಗಳು ಹೆಚ್ಚಾಗಿವೆ.

ಹಾಗಾಗಿ ಗೇರು ಉದ್ಯಮದ ವಿಸ್ತರಣೆಗೆ ವಿಫುಲ ಅವಕಾಶವಿದೆ. ಇದರಿಂದಾಗಿ ಗ್ರಾಮೀಣ ಭಾಗದಲ್ಲಿ ಯಥೇಚ್ಛವಾಗಿ ಉದ್ಯೋಗ ಅವಕಾಶಗಳು ಸೃಷ್ಟಿಯಾಗಬಲ್ಲದು. ಮಹಾತ್ಮ ಗಾಂಧೀಜಿಯವರ ಗ್ರಾಮ ಭಾರತದ ಕನಸು ಸಾಕಾರಗೊಳ್ಳಬಹುದು. ಸಣ್ಣ ಮತ್ತು ಅಂಚಿನ ರೈತರು ಸ್ವಸಹಾಯ ಗುಂಪುಗಳನ್ನು ರಚಿಸಿಕೊಂಡು ತಮ್ಮ ಆಂತರಿಕ ಸಮಸ್ಯೆಗಳನ್ನು ಪರಿಹರಿಸಿಕೊಂಡರೆ, ಗೇರು ಬೆಳೆಗಾರರ ಸಹಕಾರಿ ಸಂಘ ರಚನೆಯಾದರೆ, ಗೇರು ಹಣ್ಣಿನ ಆರ್ಥಿಕ ಬಳಕೆ ಸಾಧ್ಯವಾದರೆ ಗೇರು ಒಂದು ಆರ್ಥಿಕ ಬೆಳೆಯಾಗಿ ಸಣ್ಣ ಮತ್ತು ಅಂಚಿನ ರೈತರ ಭಾಗ್ಯದ ಬಾಗಿಲನ್ನೇ ತೆರೆಯಲಿದೆ.

*****

ದಕ್ಷಿಣ ಕನ್ನಡ ಜಿಲ್ಲೆಯ ಗೇರು ಉದ್ದಿಮೆ

ವರ್ತಮಾನ ಮತ್ತು ಭವಿಷ್ಯ

ಒಂದು ಅಧ್ಯಯನ

<u>ಬೆಳೆಗಾರರ ಪ್ರಶ್ನಾವಳಿ</u>

೧. ಮಾಹಿತಿದಾರನ ಹೆಸರು ಮತ್ತು ವಿಳಾಸ :

೨. ವಯಸ್ಸು :

೩. ಜಾತಿ/ ಧರ್ಮ :

೪. ಶಿಕ್ಷಣ :

೫. ಪ್ರಧಾನ ವೃತ್ತಿ :

೬. ಕುಟುಂಬದ ಸದಸ್ಯರ ಸಂಖ್ಯೆ ಮತ್ತು ಪ್ರಾಯ :

ಪ್ರಾಯ	೨೦ ಕ್ಕಿಂತ ಕಡಿಮೆ	೨೧–೩೦	೩೧–೪೧	೪೧–೫೦	೫೧–೬೦	೬೧–೭೦	೭೦ ಕ್ಕಿಂತ ಅಧಿಕ	ಒಟ್ಟು
ಗಂಡು								
ಹೆಣ್ಣು								
ಒಟ್ಟು								

೭. ಕುಟುಂಬದ ದುಡಿಯುವ ಜನರು

ಗಂಡಸರು ☐ ಹೆಂಗಸರು ☐ ಮಕ್ಕಳು ☐

೮. ಕುಟುಂಬದ ಸದಸ್ಯರ ಶೈಕ್ಷಣಿಕ ಮಟ್ಟ

ಶಿಕ್ಷಣ	ಅನಕ್ಷರಸ್ಥರು	೧ ರಿಂದ ೫	೬ ರಿಂದ ೮	೯ ರಿಂದ ೧೦	ಪಿಯುಸಿ	ಪದವಿ	ಉನ್ನತ	ಇತರ

೯. ಒಟ್ಟು ಭೂ ಹಿಡುವಳಿಯ ವಿಸ್ತೀರ್ಣ :

a). ಎರಡು ಎಕರೆವರೆಗೆ ☐

b). ಎರಡರಿಂದ ಐದು ಎಕರೆ ☐

c). ಐದರಿಂದ ಹತ್ತು ಎಕರೆ ☐

d). ಹತ್ತಕ್ಕಿಂತ ಅಧಿಕ ☐

೧೦. ಭೂಮಿಯ ಒಡೆತನದ ಸ್ವರೂಪ :

ಪಿತ್ರಾರ್ಜಿತ ☐ ಸ್ವಯಾರ್ಜಿತ ☐ ಸರಕಾರಿ ☐ ಗೇಣಿ ಭೂಮಿ ☐

ಅಕ್ರಮ ಸಕ್ರಮ ☐ ಇತರೆ ☐

೧೧. ಗೇರು ಬೆಳೆಯುವ ಪ್ರದೇಶದ ವಿಸ್ತೀರ್ಣ (ಅಂದಾಜು)

a)ಗಿಡಗಳ ಸಂಖ್ಯೆ (ಅಂದಾಜು) :

b)ಗೇರು ಕೃಷಿ ಭೂಮಿಯ ಒಡೆತನ : ಸ್ವಂತ ☐ ಭೋಗ್ಯ ☐

c)ಗಿಡಗಳ ಪ್ರಾಯ/ಎಷ್ಟು ವರ್ಷಗಳಿಂದ ಬೆಳೆಯುತ್ತಿದ್ದೀರಿ

ಗಿಡಗಳ ಪ್ರಾಯ/ಎಷ್ಟು ವರ್ಷಗಳಿಂದ ಬೆಳೆಯುತ್ತಿದ್ದೀರಿ

೧೨.ಗೇರು ಬೆಳೆಯಲ್ಲಿ ತೊಡಗಿಸಿಕೊಳ್ಳುವವರ ಸಂಖ್ಯೆ (ಕುಟುಂಬದವರು):

ಗಂಡಸರು ☐ ಹೆಂಗಸರು ☐ ಂಡು ಮಕ್ಕಳು ☐ ಮಕ್ಕಳು ☐

೧೩. ಗೇರು ಬೆಳೆಯಲ್ಲಿ ತೊಡಗಿಸಿಕೊಳ್ಳುವ ಕೂಲಿ ಕಾರ್ಮಿಕರ ಸಂಖ್ಯೆ

ಗಂಡಸರು ☐ ಹೆಂಗಸರು ☐ ಗಂಡು ಮಕ್ಕಳು ☐

೧೪. ಗೇರು ಬೀಜದ ಉತ್ಪಾದನೆಯ ಸರಾಸರಿ ಪ್ರಮಾಣ (ಕೆ. ಜಿ. ಗಳಲ್ಲಿ)

೧೫. ಕುಟುಂಬದ ವಾರ್ಷಿಕ ಆದಾಯ (ಅಂದಾಜು):

೧೬. ಗೇರು ಬೆಳೆಯಿಂದ ಲಭಿಸುವ ವಾರ್ಷಿಕ ಆದಾಯ (ಅಂದಾಜು):

೧೭. ಗೇರು ಬೆಳೆಗೆ ತಗಲುವ ವಾರ್ಷಿಕ ಖರ್ಚು (ಅಂದಾಜು):

೧೮. ಗೇರು ಬೆಳೆಯೊಂದಿಗೆ ಬೆಳೆಯುವ ಇತರ ಬೆಳೆಗಳು :

ಬೆಳೆ	ಭತ್ತ	ಅಡಿಕೆ	ತೆಂಗು	ರಬ್ಬರ್	ಕೋಕೊ	ಕರಿಮೆಣಸು	ಇತರೆ
ಆದಾಯ (ರೂ.ಗಳಲ್ಲಿ)							

೧೯. ಬಳಸುವ ಗೇರು ಸಸಿಗಳ ಪ್ರಬೇದಗಳು :

ಬೀಜಾಂಕುರ ಸಸಿಗಳು ☐ ಕಸಿ ಕಟ್ಟಿದ ಸಸಿಗಳು ☐ ಇತರೆ ☐

೨೦. ಗೇರು ಗಿಡಗಳ ಮೂಲ :

ತೋಟಗಾರಿಕಾ ಇಲಾಖೆ	ಖಾಸಗಿ ನರ್ಸರಿ	ಗೇರು ಸಂಶೋಧನಾ ನಿರ್ದೇಶನಾಲಯ	ಸ್ವಂತ ತಯಾರಿಸಿದ್ದು		ಇತರೆ
			ಬೀಜಾಂಕುರ	ಕಸಿ	

೨೧. ಗೇರು ಬೆಳೆಯಲು ಕಾರಣ :

ಜೀವನೋಪಾಯ ☐ ಉಪ ವೃತ್ತಿ ☐

ಸಂಘಟನೆಗಳ ಪ್ರೇರಣೆ ☐ ಬದಲಿ ಬೆಳೆಗೆ ಆಸ್ಪದ ಇಲ್ಲದಿರುವುದು ☐

೨೨. ಗೇರು ಬೆಳೆಗೆ ಹಣಕಾಸಿನ ಮೂಲ:

ವಾಣಿಜ್ಯ ಬ್ಯಾಂಕ್ ☐ ಸಹಕಾರಿ ಬ್ಯಾಂಕ್ ☐

ಸ್ವಂತ ಹಣ ☐ ಖಾಸಗಿ ಮೂಲ ☐

ಸರಕಾರದ ಧನ ಸಹಾಯ ☐

೨೩. ಗೇರು ಬೆಳೆಗೆ ನೀರು ಬೇಕೆ?ಬೇಕು/ ಬೇಡ

ಬೇಕಿದ್ದರೆ ಎಲ್ಲಿಂದ?

ಬಾವಿ ☐ ಕೊಳವೆ ಬಾವಿ ☐ ಕೆರೆ ತೋಡು ☐ ಇತರೆ ☐

೨೪. ಗೇರು ಕೃಷಿಗೆ ಗೊಬ್ಬರ ಬೇಕೆ ? ಬೇಕು/ ಬೇಡ

ಬೇಕಿದ್ದರೆ ಯಾವ ಗೊಬ್ಬರ:

ಹಟ್ಟಿ ಗೊಬ್ಬರ	ಹಟ್ಟಿ ಗಂಜಲ	ಸುಡು ಮಣ್ಣು	ನೆಲಕಡಲೆ ಹಿಂಡಿ	ಕಹಿ ಬೇವಿನ ಹಿಂಡಿ	ರಸಾಯನಿಕ ಗೊಬ್ಬರ	ಇತರೆ

೨೫. ಗೇರು ಕೃಷಿಯೊಂದಿಗೆ ಒಳ ಬೆಳೆಗಳನ್ನು ಬೆಳೆಸಲಾಗುತ್ತಿಯೇ? ಹೌದು ☐ ಇಲ್ಲ ☐

೨೬. ಹೌದಾದಲ್ಲಿ ಅವು ಯಾವುದು?

ಪಪ್ಪಾಯ	ಸುವರ್ಣ ಗೆಡ್ಡೆ	ಕಾಳು ಮೆಣಸು	ಫೈನಾಫಲ್	ಬಾಳೆ ಹಣ್ಣು	ಮರ ಗೆಣಸು	ಇತರೆ

೨೭. ಇಲ್ಲವೆಂದಾದಲ್ಲಿ ಕಾರಣಗಳು:

ಆಸಕ್ತಿ ಇಲ್ಲ ☐ ಮಾಹಿತಿ ಇಲ್ಲ ☐ ಲಾಭ ಇಲ್ಲ ☐

೨೮. ನಾವು ಬೆಳೆಸಿದ ಗೇರು ಗಿಡಗಳ ಜಾತಿ:

ಉಳ್ಳಾಲ1 ☐ ಉಳ್ಳಾಲ3 ☐ ಉಳ್ಳಾಲ4 ☐ ಯು.ಎನ್.50 ☐

ಎನ್.ಆರ್.ಸಿ.ಸಿ ☐ ಭಾಸ್ಕರ ☐ ವೆಂಗುರ್ಲಾ4 ☐ ವೆಂಗುರ್ಲಾ7 ☐

೨೯.ಗೇರು ಹಣ್ಣಿನ ಆರ್ಥಿಕ ಬಳಕೆ ಇದೆಯೇ? (ಉಪ ಉತ್ಪನ್ನಗಳ ತಯಾರಿಕೆ)

ಇದ್ದಲ್ಲಿ ಯಾವ ರೀತಿಯದ್ದು?

ಗೇರು ಹಣ್ಣಿನ ಪಾನೀಯ ☐ ಗೇರು ಹಣ್ಣಿನ ತಿನಿಸುಗಳು ☐

ಗೇರು ಸಾರಾಯಿ ☐ ಇತರ (ವಿವರ ಕೊಡಿ) ☐

ಇಲ್ಲವಾದಲ್ಲಿ ಕಾರಣಗಳೇನು?

ಲಾಭದಾಯಕವಲ್ಲ ☐ ಸೂಕ್ತ ಮಾಹಿತಿ ಇಲ್ಲ ☐

ಆಸಕ್ತಿ ಇಲ್ಲ ☐ ಪರಿಣಿತರ ಕೊರತೆ ☐

೩೦. ಗೇರು ಗಿಡಗಳಿಗೆ ತಗಲುವ ಕೀಟ ಬಾಧೆ ರೋಗಗಳು ಮತ್ತು ಬಳಸುವ ಕೀಟ ನಾಶಕ

ರೋಗ/ಕೀಟ					
ಕೀಟನಾಶಕ					

ಕೀಟ ನಾಶಕ ಬಳಸದಿದ್ದರೆ ಕಾರಣ ಕೊಡಿ

೩೧. ಕೀಟನಾಶಕಗಳ ಬಳಕೆಯಿಂದ ಏನಾದರೂ ತೊಂದರೆಯಾಗಿದೆಯೇ? ಹೌದು ☐ ಇಲ್ಲ ☐

೩೨. ಹೌದು ಎಂದಾದರೆ ಯಾವುದು?

೩೩. ಎಂಡೋ ಸಲ್ಫಾನ್ ಒಳಿತೆ? ಕೆಡುಕೆ? ಒಳಿತು ☐ ಕೆಡುಕು ☐ ಗೊತ್ತಿಲ್ಲ ☐

೩೪. ಎಂಡೋ ಸಲ್ಫಾನ್ ಪೀಡಿತರು ನಿಮ್ಮ ಕುಟುಂಬದಲ್ಲಿ ಇದ್ದಾರೆಯೇ? ಹೌದು ☐ ಇಲ್ಲ ☐

೩೫. ಕುಟುಂಬದಲ್ಲಿ ಎಷ್ಟು ಮಂದಿ ಎಂಡೋ ಸಲ್ಫಾನ್ ಪೀಡಿತರು ಇದ್ದಾರೆ?

----

೩೬. ಅವರ ಸಮಸ್ಯೆಗಳ ಸ್ವರೂಪ ಏನು?

----

೩೭. ಪರಿಹಾರ ದೊರತಿದೆಯೇ?

೩೮.ಎಂಡೋ ಸಲ್ಫಾನ್ ಪೀಡಿತರಿಗೆ ಪರಿಹಾರ ನೀಡಬೇಕೆ? ಹೌದು ☐ ಇಲ್ಲ ☐ ಗೊತ್ತಿಲ್ಲ ☐

೩೯.ಗೇರು ಬೀಜ ಮಾರಾಟದ ವಿಧಾನ

ಪ್ರವಾಸಿ ವ್ಯಾಪಾರಿ	ಕೊಯ್ಲು ಪೂರ್ವ ಗುತ್ತಿಗೆದಾರ	ಗ್ರಾಮೀಣ ವ್ಯಾಪಾರಿ	ಸಗಟು ವ್ಯಾಪಾರಿ	ಸಂಸ್ಕರಣಾ ಘಟಕ

೪೦. ಗೇರು ಕೃಷಿಯಿಂದ ನಿಮ್ಮ ಆದಾಯ ಹೆಚ್ಚಾಗಿರುತ್ತದೆಯೇ? ಇದೆ ☐ ಇಲ್ಲ ☐

೪೧. ಗೇರು ಕೃಷಿ ಪ್ರದೇಶದ ವಿಸ್ತೀರ್ಣ ಆಗಿದೆಯ ಇದೆ ☐ ಇಲ್ಲ ☐

೪೨. ಗೇರು ಉತ್ಪಾದನೆಯಲ್ಲಿ ಹೆಚ್ಚಳ ಆಗಿದೆಯೇ? ಇದೆ ☐ ಇಲ್ಲ ☐

ಕಾರಣ ಕೊಡಿ:_ _

_ _

೪೩. ಗೇರು ಬೆಳೆಯಲ್ಲಿ ನಿಮಗೆ ಎದುರಾಗುವ ಸಮಸ್ಯೆಗಳು ಯಾವುವು?

....

....

....

....

೪೪. ಗೇರು ಕೃಷಿಯ ಅಭಿವೃದ್ಧಿಗೆ ನಿಮ್ಮ ಸಲಹೆಗಳಾವುವು?

....

....

....

....

*****

ದ.ಕ. ಜಿಲ್ಲೆಯ ಗೇರು ಉದ್ಯಮ

ವರ್ತಮಾನ ಮತ್ತು ಭವಿಷ್ಯ ಒಂದು ಅಧ್ಯಯನ

ಗೇರು ಘಟಕದ ಪ್ರಶ್ನಾವಳಿ

ಗೇರು ಸಂಸ್ಕರಣೆ / ನಿರ್ಯಾತ ಘಟಕ

೧. ಘಟಕದ ಹೆಸರು :

೨. ಭೌಗೋಳಿಕ ನೆಲೆ :

೩. ಘಟಕದ ಸ್ವರೂಪ :

ಯಜಮಾನಿಕೆ /ಪಾಲುದಾರಿಕೆ/ ಕೂಡು ಬಂಡವಾಳ ಸಂಸ್ಥೆ

೪. ಘಟಕ ಸ್ಥಾಪನೆಯಾದ ವರ್ಷ :

೫. ಆರಂಭಿಸಿದವರ ವಿವರ ;

೬. ಯಜಮಾನನ / ಪಾಲುದಾರರ ಹೆಸರು :

೭. ಆರಂಭಿಕ ಬಂಡವಾಳ :

೮. ವಾರ್ಷಿಕ ಖರ್ಚು (ಒಟ್ಟು) :

ಕೂಲಿ/ ವೇತನ	ತೆರಿಗೆ/ ದೇಣಿಗೆ	ಕಚ್ಚಾ ಸರಕು	ವಿದ್ಯುತ್ ಇಂಧನ	ಪ್ರಚಾರ/ ಜಾಹೀರಾತು	ಯಂತ್ರ ಸವಕಳಿ	ಇತರ (ವಿವರ ಕೊಡಿ

೯. ಕಚ್ಚಾಗೇರು ಬೀಜದ ಮೂಲ

a) ಸ್ವಂತ ಉತ್ಪಾದನೆ ☐ b) ಸ್ಥಳೀಯ ಮಾರಾಟಗಾರರಿಂದ ☐

c) ಅಂತರ್ ರಾಜ್ಯ ☐ d) ಆಮದು ☐

e) ಗುತ್ತಿಗೆದಾರರಿಂದ ☐ e) ರೈತರಿಂದ ☐

೧೦.ಗೇರುಬೀಜ ಕೊಂಡುಕೊಳ್ಳುವ ಸಂದರ್ಭಗಳು

a) ಬೆಲೆ ಕಡಿಮೆ ಇರುವಾಗ ☐ b) ಬೇಡಿಕೆಯನ್ನು ಅವಲಂಭಿಸಿ ☐

c) ಹಣದ ಲಭ್ಯತೆ ☐ d) ಕಟಾವು ಸಮಯ ☐

೧೧. ವಾರ್ಷಿಕ ಆದಾಯ (ಒಟ್ಟು):

a) ದೇಶೀಯ ಮಾರಾಟ ☐

b) ನಿರ್ಯಾತದಿಂದ ☐

c) ಗೇರೆಣ್ಣೆಯಿಂದ ☐

d) ಗೇರು ಬೀಜದ ಸಿಪ್ಪೆ ☐

e) ಇತರೆ (ವಿವರ ಕೊಡಿ) ☐

೧೨.ಹಣಕಾಸಿನ ಮೂಲಗಳು

a) ರಾಷ್ಟ್ರೀಕೃತ ಬ್ಯಾಂಕ್ ☐

b) ಖಾಸಗಿ ಹಣಕಾಸು ಸಂಸ್ಥೆ ☐

c) ಸ್ನೇಹಿತರು/ಸಂಬಂಧಿ ☐

d). ಸ್ವಂತ ಹಣ ☐

೧೩.ಹಣ ಪಾವತಿಸುವ ವಿಧಾನ

a) ತಕ್ಷಣ ಪಾವತಿ ☐

b) ಒಂದು ವಾರಗಳ ಅವಧಿ ☐

c) ಒಂದು ತಿಂಗಳ ಅವಧಿ ☐

d) ಒಂದು ತಿಂಗಳಿಗೆ ಮೇಲ್ಪಟ್ಟು ☐

೧೪. ಘಟಕದ ಕಾರ್ಮಿಕರ ವಿವರ (ಆವರಣದಲ್ಲಿ ಸಂಖ್ಯೆ ಹಾಕಿ)

	ಮೇನೆಜರ್	ಗುಮಾಸ್ತೆ	ಮೇಸ್ತ್ರಿ	ಕಾರ್ಮಿಕರು		ಡ್ರೈವರ್	ಮೆಕಾನಿಕ್	ಕಾವಲು	ಇತರೆ
				ಗಂ	ಹೆಂ				
ವೇತನ									
ಪ್ರಾವಿಡೆಂಟು									
ಬೋನಸು									
ಡಿವಿಡೆಂಡು									

೧೫. ಕಾರ್ಮಿಕರಿಗೆ ವಾರದ ರಜೆ ಯಾವಾಗ?

- ಇತರ ರಜೆಗಳಿವೆಯೇ? :
- ಆರೋಗ್ಯ ಸವಲತ್ತು ಇದೆಯೇ? :
- ಹೆರಿಗೆ ಭತ್ಯೆ/ ರಜೆಯ ಸ್ವರೂಪ :
- ಇತರ ಸವಲತ್ತು (ವಿವರ ಕೊಡಿ) :

೧೬. ಘಟಕದ ಸಮಸ್ಯೆಗಳು (ವಿವರ ಕೊಡಿ)

- ಕಾರ್ಮಿಕ ಸಮಸ್ಯೆ :
- ಯಂತ್ರಗಳ ಸಮಸ್ಯೆ :
- ಕಚ್ಚಾ ಸಾಮಾಗ್ರಿ ಸಮಸ್ಯೆ :
- ಇಂಧನ/ ವಿದ್ಯುತ್ ಸಮಸ್ಯೆ :

- ಮಾರಾಟ ಸಮಸ್ಯೆ :
- ರಾಜಕೀಯ ಸಮಸ್ಯೆ :
- ಸರಕಾರದಿಂದ ಸಮಸ್ಯೆ :
- ಇತರ ಸಮಸ್ಯೆ (ವಿವರ ಕೊಡಿ) :

೧೭. ಘಟಕಕ್ಕೆ ಸ್ವಂತ ಗೇರು ಕೃಷಿ ಭೂಮಿ ಇದೆಯೇ? ಹೌದು ☐ ಇಲ್ಲ ☐

- ಇದ್ದರೆ ವಿವರ ಕೊಡಿ
- ಇಲ್ಲದಿದ್ದರೆ ಕಾರಣಗಳು

೧೮. ವಾರ್ಷಿಕ ಉತ್ಪಾದನಾ ವಿವರ :

	ಪ್ರಮಾಣ (ಅಂದಾಜು)	ಮಾರಾಟ ಮೌಲ್ಯ (ರೂ.ಗಳಲ್ಲಿ ಅಂದಾಜು)	ಎಲ್ಲಿ ಮಾರಾಟ	
			ದೇಶೀ ಮಾರುಕಟ್ಟೆ	ವಿದೇಶೀ ಮಾರುಕಟ್ಟೆ
ಇಡಿ ಬೀಜ				
ಹುಡಿ ಬೀಜ				
ಗೇರೆಣ್ಣೆ				
ಗೇರು ಬೀಜದ ಸಿಪ್ಪೆ				
ಇತರೆ				

೧೯. ನಿರ್ಯಾತದ ಸ್ವರೂಪ
ನೇರವಾಗಿ ☐ ದಲ್ಲಾಳಿಗಳ ಮೂಲಕ ☐

೨೦. ನಿರ್ಯಾತಕ್ಕೆ ಸರಕಾರದಿಂದ ಪ್ರೋತ್ಸಾಹ
ಇದೆ ☐ ಇಲ್ಲ ☐

೨೧. ಇದ್ದರೆ ಯಾವ ರೀತಿಯ ಸಹಾಯ

....

....

೨೨. ಇಲ್ಲವಾದರೆ ಕಾರಣಗಳು

....

....

....

೨೩.ಗೇರು ಘಟಕದ ಸಮಸ್ಯೆಗಳು:

....

....

....

೨೪.ಗೇರು ಘಟಕಕ್ಕೆ ಸಿಗುವ ಪ್ರೋತ್ಸಾಹ ಸವಲತ್ತುಗಳ ಇತರೆ ಮೂಲಗಳು

ಸರಕಾರ ☐ ಸರಕಾರೇತರ ಸಂಸ್ಥೆ ☐

ಇದ್ದರೆ ವಿವರ ಕೊಡಿ

....

....

ದೊರಕುವ ಸಹಾಯ ಸವಲತ್ತುಗಳ ಸ್ವರೂಪ

....

....

....

೨೫. ಘಟಕದ ಸಮಸ್ಯೆಗಳ ಪರಿಹಾರಕ್ಕೆ ನಿಮ್ಮ ಸಲಹೆಗಳು

....

....

....

೨೬. ಇತರ ವಿವರಗಳು:

....

....

....

*****

ದ.ಕ. ಜಿಲ್ಲೆಯ ಗೇರು ಉದ್ಯಮ

ವರ್ತಮಾನ ಮತ್ತು ಭವಿಷ್ಯ ಒಂದು ಅಧ್ಯಯನ

ಮಹಿಳಾ ಕಾರ್ಮಿಕರ ಪ್ರಶ್ನಾವಳಿ

೧. ಮಹಿಳಾ ಉದ್ಯೋಗಿಯ ಹೆಸರು :

೨. ಜಾತಿ /ಧರ್ಮ :

೩. ವಯಸ್ಸು :

೪. ಶೈಕ್ಷಣಿಕ ಅರ್ಹತೆ :

೫. ವಿವಾಹ : ಆಗಿದೆ/ ಇಲ್ಲ

೬. ಆಗಿದ್ದರೆ ಗಂಡನ ಉದ್ಯೋಗ :

೭. ಮಕ್ಕಳ ಸಂಖ್ಯೆ : ಗಂಡು ☐ ಹೆಣ್ಣು ☐

೮. ಈ ಉದ್ಯೋಗ ಆರಿಸಲು ಕಾರಣ :

೯. ಎಷ್ಟು ವರ್ಷಗಳಿಂದ ಉದ್ಯೋಗದಲ್ಲಿದ್ದೀರಿ? :

೧೦. ಕೂಲಿ/ ವೇತನ ವಿವರ :

೧೧. ಆದಾಯದ ವಿನಿಯೋಗ ಯಾವ ರೀತಿ ಮಾಡುತ್ತೀರಿ?

ಗಂಡನಿಗೆ ☐ ಬ್ಯಾಂಕಿಗೆ ☐

ಸ್ವಂತ ಖರ್ಚಿಗೆ ☐ ಇತರ ☐

೧೨. ಮಾಸಿಕ ಗಳಿಕೆ/ ಮಾಸಿಕ ವೆಚ್ಚ / ಉಳಿತಾಯ (ರೂ.ಗಳಲ್ಲಿ) :

೧೩. ಘಟಕದಲ್ಲಿ ಸಿಗುವ ಸವಲತ್ತು

a) ಸಾಲ ☐ b) ಆರೋಗ್ಯ ಸಂಪತ್ತು ☐ c) ಮಕ್ಕಳಿಗೆ ನೆರವು ☐ d) ಇತರೆ ☐

೧೪. ವಾರದ ರಜೆ ಯಾವಾಗ ?

೧೫. ಹೆಚ್ಚುವರಿ ರಜೆ ಬೇಕಿದ್ದರೆ ಏನು ಮಾಡುತ್ತೀರಿ?

೧೬. ಅನಾರೋಗ್ಯ ಸಂದರ್ಭದಲ್ಲಿ ಯಾವ ನೆರವು ಸಿಗುತ್ತದೆ?

೧೭. ಹೆರಿಗೆ ಭತ್ಯೆ : ಇದೆ ☐ ಇಲ್ಲ ☐

೧೮. ಹೆರಿಗೆ ರಜೆ : ಇದೆ ☐ ಇಲ್ಲ ☐

೧೯. ಪ್ರಾವಿಡೆಂಟು ಫಂಡು : ಇದೆ ☐ ಇಲ್ಲ ☐

೨೦. ಬೋನಸ್ಸು : ಇದೆ ☐ ಇಲ್ಲ ☐

೨೧. ನಿವೃತ್ತಿ ವೇತನ : ಇದೆ ☐ ಇಲ್ಲ ☐

೨೨. ಮಹಿಳಾ ಉದ್ಯೋಗಿಯಾಗಿ ನಿಮ್ಮ ಸಮಸ್ಯೆಗಳು:

೨೩. ಈ ಸಮಸ್ಯೆಗಳಿಗೆ ನೀವು ಕಂಡುಕೊಂಡ ಪರಿಹಾರಗಳು:

೨೪. ಪರಿಷ್ಕರಣ ಘಟಕದಿಂದ ನೀವು ಇನ್ನು ಏನನ್ನು ನಿರೀಕ್ಷಿಸುತ್ತೀರಿ?

೨೫. ಮನೆಯಲ್ಲಿ ಪ್ರಮುಖ ತೀರ್ಮಾನ ಕೈಗೊಳ್ಳುವಾಗ ಪತಿ/ಮಕ್ಕಳು ನಿಮ್ಮ ಅಭಿಪ್ರಾಯ ಕೇಳುತ್ತಾರಾ?

೨೬. ಎಷ್ಟು ವಯಸ್ಸಿನವರೆಗೆ ಈ ವೃತ್ತಿಯಲ್ಲಿ ಮುಂದುವರಿಯುತ್ತೀರಿ?

೨೭. ನಿಮ್ಮ ಮಕ್ಕಳನ್ನು ಈ ವೃತ್ತಿಯಲ್ಲಿ ಮುಂದುವರಿಸುತ್ತೀರಾ?

****

ದ.ಕ. ಜಿಲ್ಲೆಯ ಗೇರು ಉದ್ಯಮ

ವರ್ತಮಾನ ಮತ್ತು ಭವಿಷ್ಯ ಒಂದು ಅಧ್ಯಯನ

<u>ಗೇರುಬೀಜ ವ್ಯಾಪಾರಗಾರರ ಪ್ರಶ್ನಾವಳಿ</u>

೧. ಮಾಹಿತಿದಾರನ ಹೆಸರು :

೨. ವಯಸ್ಸು :

೩. ಜಾತಿ/ಧರ್ಮ :

೪. ಶಿಕ್ಷಣ :

೫. ಮಾರಾಟದ ಅನುಭವ (ವರ್ಷಗಳಲ್ಲಿ) :

೬. ವ್ಯಾಪಾರದ ಸ್ವರೂಪ

ಸಂಚಾರಿ ☐ ಸ್ಥಾಯಿ ☐

೭. ಆರಂಭಿಕ ಬಂಡವಾಳ (ಲಕ್ಷ ರೂ.ಗಳಲ್ಲಿ) :

೮. ವ್ಯಾಪಾರ ಕೇಂದ್ರದ ಒಡೆತನ

ಸ್ವಂತ ☐ ಬಾಡಿಗೆ ☐

೯. ಮಾಸಿಕ ಬಾಡಿಗೆ (ರೂ.ಗಳಲ್ಲಿ) :

೧೦. ಉಗ್ರಾಣದ ವ್ಯವಸ್ಥೆ

ಇದೆ ☐ ಇಲ್ಲ ☐

೧೧. ಸಾಗಾಟಕ್ಕೆ ಸ್ವಂತ ವಾಹನ

ಇದೆ ☐ ಇಲ್ಲ ☐

೧೨. ಖರೀದಿಸುವ ಇತರೆ ಕೃಷಿ ಉತ್ಪನ್ನಗಳು

ತೆಂಗಿನಕಾಯಿ ☐ ಅಡಿಕೆ ☐

ಕೊಕ್ಕೊ ☐ ಕರಿಮೆಣಸು ☐

೧೩. ಗೇರು ಬೀಜ ಕೊಂಡುಕೊಳ್ಳುವ ಮೂಲ

ರೈತರಿಂದ ☐ ಪ್ರವಾಸಿ ವ್ಯಾಪರಿಯಿಂದ ☐

ಕೊಯಿಲು ಪೂರ್ವ ಗುತ್ತಿಗೆದಾರರಿಂದ ☐ ಗ್ರಾಮೀಣ ವ್ಯಾಪಾರಿಯಿಂದ ☐

೧೪. ಗೇರು ಬೀಜದ ಗುಣಮಟ್ಟದ ನಿರ್ಧಾರ

ಕಣ್ಣಂದಾಜು ☐ ಕತ್ತರಿಸುವ ವಿಧಾನ ☐

ನೀರಿನಲ್ಲಿ ಮುಳುಗಿಸುವ ವಿಧಾನ ☐

೧೫. ಗೇರು ಬೆಳೆಗಾರನಿಗೆ ಹಣ ಪಾವತಿಸುವ ವಿಧಾನ

ಮುಂಗಡ ಸಾಲ ☐ ನಗದು ☐

೧೬. ಗೇರು ಬೀಜ ವ್ಯಾಪಾರದಲ್ಲಿ ಎದುರಿಸುವ ಸಮಸ್ಯೆಗಳು

....

....

೧೭.ಸಮಸ್ಯೆಗಳ ಪರಿಹಾರಕ್ಕೆ ನಿಮ್ಮ ಸಲಹೆಗಳು

....

....

*****

ಛಾಯಾಚಿತ್ರಗಳು



ಚಿತ್ರ ೧: ಗೇರು ತೋಪು



ಚಿತ್ರ ೨: ಗೇರು ಹಣ್ಣುಗಳು



ಚಿತ್ರ ೩: ಗೇರು ಬೀಜ ಕತ್ತರಿಸುವುದು



ಚಿತ್ರ ೪: ಗೋಡಂಬಿ ವರ್ಗೀಕರಣ



ಚಿತ್ರ ೫: ಗೋಡಂಬಿ ಪ್ಯಾಕಿಂಗ್



ಚಿತ್ರ ೬: ಗೇರು ಕೃಷಿ ತಜ್ಞರೊಂದಿಗೆ ಸಂವಾದ



ಚಿತ್ರ ೭: ಎಂಡೋಸಲ್ಫಾನ್ ಹೋರಾಟ ಸಮಿತಿಯ ಅಧ್ಯಕ್ಷ ಶ್ರೀಧರ ಗೌಡ ಕೊಕ್ಕಡ ಅವರೊಂದಿಗೆ ಸಂವಾದ



ಚಿತ್ರ ೮ : ಗೇರು ಸಂಶೋಧನಾ ನಿರ್ದೇಶನಾಲಯ, ಪುತ್ತೂರು ದ. ಕ.



ಚಿತ್ರ ೯: ಗೇರು ಸಂಸ್ಕರಣಾ ಘಟಕಗಳಿಗೆ ಭೇಟಿ



ಚಿತ್ರ ೧೦: ಮಹಿಳಾ ಕಾರ್ಮಿಕರೊಂದಿಗೆ ಸಂದರ್ಶನ

ಪರಾಮರ್ಶನ ಸೂಚಿ

ಪುಸ್ತಕಗಳು

1. **Abdul Salam M., K.V Peter**- "Cashew-A Monograph" (2009) published by slaudivm press (India) Private Ltd.
2. **Balasubramanian D**., 2009, "On farming Cashew Nut Processing 2009", Published by DCR Puttur.
3. **Bhat P.S., Dr. T.R. Rupa, Dr. T.N. Raviprasad, Dr. M.G. Bhat**, 2011, "Vision 2030" Published by Dr. M.G. Bhat Directorate of Cashew Research Puttur.
4. Cashew hand book 2011. Global Perspective. 3rd Edition June 2011, Published by Foretell Business Solutions Pvt. Ltd. Bangalore.
5. **Gangadhara Nayak M., Dr. P. Shivarama Bhat, Dr. Sajeev M.V** 2011, "Cashew Production Technology" Compiled and Edited by. Published by Directorate of Cashew Research Puttur.
6. **Giriappa. S** (1989) "The Role of Plantation crops in Agricultural Development. "Daya Publishing House Delhi."
7. **Giriappa. S** (1996) Prospects Agro processing Industry. Daya Publishing House Delhi.
8. **Gorak Singh, V.N. Hubballi, K. Jnanadevan** 2012, "Good Agricultural Practices in Cashew" Technical Bulletin Published by DCCD Kochi.
9. **Gorakh Singh**, **V.N. Hubballi**- 2012, Cashew Development in India Challenges and opportunities published by Director, Directorate of Cashew and Cocoa Development Kochi.
10. "Guide Lines" Clonol Planning Materials of Cashew. Published by Government of India, DCCD Ministry of Agriculture, Department of Agriculture and co-operation Cochin.
11. **Gururaja Bhat P.,** 1975, "Studies in Tuluva History and Culture" By, Manipal Power Press, Manipal, India.
12. Handbook of Horticulture-2001 published by Directorate of Information and Publications of agricultural Research. Krishi Anusandhan Bhavan PUSA New Delhi.
13. Indigenous Technical Knowledge in Cashew published by **M.G.Bhat**, Director NRCC Puttur.

14. **Kannan K.P.** 1983 "Cashew Development in India-Potentialities and constraints-" Published by Agricole Publishing Authority New Delhi.

15. **Lekhi R.K., Joginder Sing** 1996. Agricultural Economics published by Mrs. Usha Rajkumar for Kalyani publishers, New Delhi.

16. **Mini C., Dr. Jose Mathew,** Recipes for Cashew Apple Production Published by Director of Extension, Kerala Agriculture University, Hannuthy, Thrissur.

17. **Nair M.K, Bhaskar Rao EVV, Nambiar KKN, Nambiar M.C**-1979." Monograph on Plantation Crops-1 cashew". (Anacardium accidentale L)-1979. Published by The Director, central plantation crops Research Institute, Kasaragod, Kerala, India.

18. **Rajmohan Pillai, Dr.P.Shantha-2008."** world Cashew Industry-An Indian Pergpective". Published by R. Tajan Pillai Foundations Kollam.

19. **Singh P.C.** 1992. Mode of production in Indian Agriculture published by Rawat publications Jaipur.

20. **Subha Reddy S., P Raghee Ram, T.V. Neela Kanta Sastry, I Bhavani Devi** 2010. Agricultural Economics oxford and IBH publishing company private Ltd., New Delhi.

21. **Swamy K.R.M, Dr. M.G. Nayak.** 1995, "Softwood Grafting and Nursery Management in Cashew" Published by Directorate of Cashew Research Puttur.

22. **Tyagi B.B.,** 2005. Agricultural Economics and Rural Development. Published by Jai Prakash Nath and Co., Meerut India.

23. **Wadkar. S. S Bagade S.R, Jalgankar V.N**-2007. "Indian Cashew processing and Export "Published by Pointer Publishers Jaipur.

24. **ಅನಂತರಾಮ ಕೆ.** ೧೯೯೭, ದಕ್ಷಿಣದ ಸಿರಿನಾಡು, ಅನಂತ ಪ್ರಕಾಶನ, ದೇವಾಂಬ, ಅಗ್ರಹಾರ ಮೈಸೂರು.

25. **ಅನಂತ ರಾಮ ಕೆ.** ೧೯೯೭, ದಕ್ಷಿಣದ ಸಿರಿನಾಡು ಅವಿಭಜಿತ ದ.ಕ. ಜಿಲ್ಲೆಯ ಪ್ರವಾಸ ಕಥನ, ಅನಂತ ಪ್ರಕಾಶನ, ೪೧೪ ದೇವಂಬಾ ಅಗ್ರಹಾರ ಮೈಸೂರು.

26. **ಗೋಪಾಲಕೃಷ್ಣ ಭಟ್ ಎಂ,** ೨೦೦೪, ಸುಧಾರಿತ ಗೇರು ಬೇಸಾಯ ಕ್ರಮ, ಪ್ರಕಾಶಕರು ಪ್ರಭಾರ ನಿರ್ದೇಶಕರು, ರಾಷ್ಟ್ರೀಯ ಗೇರು ಸಂಶೋಧನೆಗೆ ಕೇಂದ್ರ ಪುತ್ತೂರು ದ.ಕ.

27. **ಕಲ್ಲೂರ್ ಎಂ.ಎಸ್, ಡಾ। ಪ್ರಭಾಕರ ಶಿಶಿಲ,** ೨೦೦೦, "ಕೃಷಿ ಅರ್ಥಶಾಸ್ತ್ರ" ಕಲಾ ಪ್ರಕಾಶನ. ರಾಜ್ ಮಹಲ್ ಗುಟ್ಟಹಳ್ಳಿ ಬೆಂಗಳೂರು.

28. **ಕೃಷ್ಣ ಭಟ್ಟ ಪೆರಾಜೆ, ಡಾ। ಎಸ್. ಡಿ. ಶೆಟ್ಟಿ ಕುಂಬಳೆ** ಅರಸು ಮನೆತನ ಡಾ. ಉಪ್ಪಂಗಳ ರಾಮ ಭಟ್ಟ. ತುಳು ಕರ್ನಾಟಕ ಅರಸು ಮನೆತನಗಳಲ್ಲಿ ಕರ್ನಾಟಕ ರಾಜ್ಯ ಸಂಸ್ಥಾನಗಳು.

29. **ಕೃಷ್ಣ ಭಟ್ಟ ಹೆರಂಜೆ, ಡಾ. ಎಸ್. ಡಿ. ಶೆಟ್ಟಿ,** ೧, ೨೦೦೦, ತುಳು ಕರ್ನಾಟಕ ಅರಸು ಮನೆತನಗಳು ಕರ್ನಾಟಕ ರಾಜ ಸಂಸ್ಥಾನಗಳು, ಸಂಪಾದಕರು ಪ್ರಸರಾಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಕಮಲಾಪುರ.

30. **ಕೃಷ್ಣಮೂರ್ತಿ ಹೆಚ್.ಆರ್.**, ೨೦೦೬ "ಭಾರತದ ಆರ್ಥಿಕ ವ್ಯವಸ್ಥೆ." ಪ್ರಕಾಶಕರು ಶ್ರೀಮತಿ ಭಾನುಮತಿ ಎಸ್. ಶಹಾ ಬೆಂಗಳೂರು.

31. **ಕೃಷ್ಣಯ್ಯ ಗೌಡ ಹೆಚ್. ಆರ್**, ೨೦೦೪, "ಕೃಷಿ ಅರ್ಥಶಾಸ್ತ್ರ" ವಿದ್ಯಾನಿಧಿ ಪ್ರಕಾಶನ ಗದಗ.

32. **ಕೇಶವ ಕೃಷ್ಣ ಕುಡ್ವ** ೧೯೪೮, ದಕ್ಷಿಣ ಕನ್ನಡ ಇತಿಹಾಸ, ತುಳುವ ಚರಿತ್ರ, ಮಂಗಳೂರು.

33. **ಮಂಜೇಶ್ವರ ಗೋವಿಂದ ಪೈ.** ೧೯೪೭, ತುಳುನಾಡ ಪೂರ್ವ ಸ್ಮೃತಿ- ತೆಂಕ ನಾಡು

34. **ಶ್ರೀ ಎಂ. ಮುಕುಂದ ಪ್ರಭು**, ಪೊಲಿ ಕೆನರಾ ೨೦೦ (ಸಂ), ಪ್ರಕಾಶಕರು ಜಿಲ್ಲಾಧಿಕಾರಿ ದ.ಕ. ಜಿಲ್ಲೆ ಮಂಗಳೂರು.

35. **ನಾರಾಯಣ ರೆಡ್ಡಿ ಎಂ.ಎ.**, ೧೯೯೬ "ಗೋಡಂಬಿ" ಕನ್ನಡ ಅಧ್ಯಯನ ವಿಭಾಗ ಕೃಷಿ ವಿಶ್ವ ವಿದ್ಯಾಲಯ ಬೆಂಗಳೂರು.

36. **ಪ್ರಭಾಕರ ಶಿಶಿಲ**, ೨೦೦೯, ಭಾರತದ ಆರ್ಥಿಕತೆ ಸಮಸ್ಯೆಗಳು ಮತ್ತು ಸುಧಾರಣೆಗಳು, ಮಂಗಳ ಪ್ರಕಾಶನ ಮಂಗಳೂರು.

37. **ಶಿವರಾಮ ರೈ**, ೧೯೮೨, ಗೋಡಂಬಿ, ಪ್ರಸಾರಾಂಗ ಮೈಸೂರು ವಿ. ವಿ

38. **ಉದಯವರ್ಮ ರಾಜ** ೧೯೯೮, ತುಳುನಾಡಿನ ಗತ ವೈಭವ

39. **ವಾರಣಾಶಿ ಕೃಷ್ಣ ಮೂರ್ತಿ, ಯದುಕುಮಾರ್, ಎನ್. ಶಂಕರ್ ರಾಜ್, ಎನ್.ಎಸ್.** ೨೦೦೬, ಸಾವಯವ ಗೇರು ಕೃಷಿ ಕೈಪಿಡಿ, ಪ್ರಕಾಶಕರು ವಾರಣಾಶಿ ಸಂಶೋಧನಾ ಪ್ರತಿಷ್ಠಾನ.

40. **ವಿವೇಕ ರೈ ಬಿ.ಎ.**, ೧೯೮೫, ತುಳು ಜನಪದ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು.

ಲೇಖನಗಳು

1. **A Abdul Raheem** 2007, Labour Absorption in Agriculture A Micro level study. Agricultural situation in India 64(1)

2. **Amutha D.** 2011, Promoting Sustainable Agriculture in India. Financing Agriculture 43(8):

3. **Babylatha A.K, JayaPrakash Naik B.** and **Bajakrishnan.P.C.** 2009, "Preliminary studies on the Impact of Training on the utilization of Cashew Apple". The cashew & Cocoa Journal. 1(2)

4. **Balasubramaniam D.,** 1979, "Patterns and trends in Indian's Export Trade In Proceedings of International cashew Symposium, Cochin, Kerala, India.

5. **Balasubramanian D.,** 1987, "Cashew can be still Permissive in India". The Cashew 1(3)

6. **Balasubramanian D.,** 2002, "Quality Index for Cashew nut Processing". The Cashew 16(3)

7. **Balasubramanian D.,** 2003, "Cashew nut Processing and its Economic Feasibility in Kolar District of Karnataka. The Cashew 17(4).

8. **Balasubramanian D., Shreekanth P.D** and **EVV Bhaskara Rao** 2002, "Speculation of cashewnut price-An Review. Proceedings of the 15th Plantation Crop Symposium PLACROSYM 15th Mysore 10-13 Dec 2002.

9. **Balasubramanian P. P.**-2009, "Indian cashew In Global Arena" In Cashew Research and Development in humid Tropics with Emphasis on Cashew Apple Processing.

10. **Balasubramanian D.** 2000, "Status Report on Cashew processing industries of Dakshina Kannada". The Cashew 15(2)

11. **BalasubramanianD., 2001,** "Cashew Processing Industries In India". The Cashew 15(2)

12. **Bhaskara Rao EVV, Swamy KRM & Bhat M. G.** 1998, "Status of Cashew Breeding and Future Properties". Journal of plantation Crops 26(2)

13. **Bhat M.G. N. Yadukumar, KV Nagaraja** and **MG Nayak**-2009, "Current status of Research and Technology in India". In 7th National seminar-"Cashew Development in India-Enhancement of Production and Productivity Dec 2009. Bhuvaneshwar, Orissa

14. **Bhat M.G. Nayak M.G.** and **Nagaraja.K.V.** 2006, "Prospects cashew in Next Decade with Reference to North Eastern States." The cashew 20(2)

15. **Bhat M.G.,** 2007, Cashew Research Achievements and Development Strategies silver jubilee souvenir- ZARS, Brahmavar.

16. **Bhat M.G., K.V Nagaraja, P.S. Bhat** and **M.G. Nayak** 2003, "Advances in Production Technology for Cashew in India. In Golden Jubilee Souvenir (1953-2003) university of Agriculture Sciences Bangalore, Agriculture Research Station Ullal Mangalore.

17. **Bhat.M.G, Nagaraja.K.V, Yadukumar.N. & Nayak M.G.,**-2008, "Cashew Research And Technology Status In India'. Pp.55-70. In The 18th Symposium on plantation Crops. Dec 2008 NRCC Puttur. D.K. Karnataka.

18. **Bhat.M.G, Yadukumar.N. Nagaraja.K.V. and Nayak M.G**-2009, "Current Status Of Cashew Research & Technology in India". The Cashew and Cocoa Journal. 1(2):

19. **Bhosale.S.S, Veerkar P.D.,** 2005, "An Economic Analysis of vertical Improvement Of cashew in Konkan Region(M.S.). The cashew 15(3)

20. **Bose. S** and **Biswas**-1979, "The Structure of the Gum of Anacardium occidental". In Proceedings of International Cashew symposium-1979 Cochin, Kerala India.

21. **Carvalho MGR, Raju.V.K,** and **Pushpalatha P.B,** 2003, "Sensory Quality of Cashew Apple Wine as Influenced by Pre-treatments and Clarifying by Pre Agents. The cashew 17 (1)

22. **Chavan .S.A** and **Gawankar M.S.,** 2009, "Prospects of on Farm Processing in Cashew"- In 7th National Seminar-Cashew Development in India. Enhancement of Production and Productivity Nov.2009. Bhuvaneshwar. Orissa.

23. **Chavan.S.A** and **Gawankar.M.S.,** -2010 "Prospects of on Farm processing in Cashew". The Cashew and cocoa Journal 11(2)

24. **Daniel J.N.,** and **Hegde.N.G.,**-2010, "Constrains And Strategic Approach for Cashew Development in Tribal Holdings". The cashew and coca General. 11(2)

25. **Deorukhakar. A.C, Veerkar P. D.** and **Thlathi. J. M.,** 1995, "Yield Gap and Constraints in Technology Adoption of Cashew nut Cultivation in Konkan Region". The Cashew 9(4)

26. **Dixit Sreenath** and **Rao EVVB**. 1999, "Problems in Cashew Cultivation. Farmer's Perspective". The Cashew 13(3)

27. **Fernandez. M**., 2001, "Cashew Nut- A Health Friendly Nut." The cashew 15(4)

28. **Fernandez. M**. and **Sudheer. S.V** 2002, "Managerial Efficiency in the Procurement of Raw Cashew nuts: An Evaluation." Cashew bulletin 40(7)

29. **Flazetti F and Faure J.C.,**-1979, "Cashew Development Programme of FAO in the World". In Proceedings of International Cashew Symposium-1979 Cochin, Kerala, India.

30. **Gangadhara Nayak M.**, 2011, "Prospects of Cashew of Cultivation in Central India." Cashew and Cocoa Journal 3(2)

31. **George M.V.**, 1997,"Status of Plantation Crops in India." Journal of Plantation Crops in India". Journal of plantation Crops 25(1)

32. **Ghosh S.N.** 1995, "Studies on Effect of Watering During Flowering and Fruiting on Yield of Cashew". The Cashew 9(3)

33. **Giridhar Praphu**, 1998, "Cashewnuts- Is India's Global Leadership sustainable.?" The Cashew 12(3)

34. **Giridhara Prabhu G.**, 1993, "Marketing Aspects of Raw Cashew Nuts- Part.2". The Cashew 7(4)

35. **Gopalakrishna Bhat M.,** 2009, "Cashew Research In India"-An overview" In Cashew Research and Development in Humid Tropics with Emphasis on Cashew Apple Processing.

36. **Gosh S. N.,** 1999, "Effects of Rain-Water Harvesting on Nut Yield of Cashew". Journal of plantation crops. 27(3)

37. **Guledagudda.S.S., Patil B.L, Patil A A** and **Basavaraja H**.,-2007, "Marketing Costs and Margins of Raw Cashewnut in Karnataka" The cashew 21(4).

38. **Guledgudda S.S. B.L. Patil** and **G.K. Hiremath** 2003, Production and export potential of cashew Industry in India. Agricultural situation in India 59(12)

39. **Guledgudda S.S., B.L. Patil** and **G.K. Hiremath** 2006, An Appraisal of financial feasibility of Investment in cashew plantations in Karnataka Agricultural situation in India. 62(12)

40. **Guledgudda.S.S, Patil.B.L, Patil. A. A.,** and **Basavaraja H.,** -2009, "Growth Performance of Indian Cashew Industry under Pre- And Post Liberalization Regime". The Cashew and Cocoa Journal 1(2)

41. **Gunjate R.T.,** 1997, "Cashew plantation Management Problems, Perspective and Approach." The Cashew 11(2).

42. **H.P. Singh**, 2011, "Research and Development in Cashew- Strategies towards Self Sufficiency" Souvenier, Silver Jubilee Celebrations (1986-2011).

43. **Harishkumar K.** and **Chinnappa B.,** 2010, "Economic Analysis of cashew processing in Karnataka". The Cashew and cocoa Journal 2(4)

44. **Hemalatha B. Jayachandra Reddy H. Reddy YVR** and **Sastry G.** 2003, Women Empowerment for rural Development in India. Agricultural situation in India 60(9)

45. **Jacob B.,** 1997, Relevance of TQM in Cashew Processing Industry Mangalore, In Souvenir Cashew Manufacturer Association Mangalore 1997.

46. **Jayalekshmy .V.G** and **Salam M.A.** 2002, "Cost of Establisment of a cashew apple processing unit and production cost of cashew apple Syrup". The Cashew 16(2

47. **Jessy Thomas K, Shibu Sebestian** and **Sreeja.K.G.**-2009, "Economics of Cashew Cultivation And Cashew Industry". In Humid Tropics with Emphasis on Cashew Apple Processing.

48. **Joachim von Braun, Ashok Gulati Peter Hazell, Mark W.,** 2011, Rose grant and marie Ruel Financing Agriculture 43(4).

49. **Jose Mathew, Mini. C** and **Sobhana**-2009, "Multiple uses of Cashew Apple and the Contributions of Cashew Research Station, Madakka Thara."- In Cashew Research and Development in Humid Tropics with Emphasis on Cashew Apple Processing.

50. **Jose Mathew, Sabhana A.** and **Mini C**-2009, " Multiple uses of cashew Apple and Opportunities for Commercial Exploitation". The Cashew and cocoa Journal 11(2)

51. **Jose Mathew, Sobhana A** and **Mini C** -2009, "Multiple uses of cashew Apple and Opportunities for Commercial exploitation for Commercial Exploitation". In 7th National seminar-Cashew Development in India. Enhancement of Production and Productivity. Dec 2009. Bhuvaneshwar Orissa.

52. **Kalaimath P., Sitadevi** and **Rajendran,** 2010, Performance of women group action and income level of rural women in Tamilnadu Agricultural situation in India 65(16)

53. **Kalbavi Prakash Rao**., 2005, Importance of cashew to the Development of coastal Economy. Published by Scientific Cashew Farming Horticulture Department D.K. Zilla Panchayath Mangalore.

54. **Khurana S.C**., 2009, "Quality and Safety aspects of Cashew Nuts and Kerrels". In 7th National seminar. Cashew Development in India-enhancement of production and Productivity". Nov 2009. Bhuvaneswar. Orissa.

55. **Krishnaswamy L.**, -1979, "Marketing Trends in Cashew". In Proceedings of International Cashew Symposium-1979. Cochin, Kerala, India.

56. **Kumar D. P.**, and **Hegde M.,** 1997, "Ullal-4" and "Un-50" Promising Cashew Varieties for coastal Karnataka. The cashew 11(3)

57. **Kumar D.P., and Hegde M.**, 1998, "Technologies for Cashew Cultivation in Different Agro-Climate Tracts of Karnataka". The cashew 12(3)

58. **Lenka P.C, Pattnaik A.K**. and **Mohapatra.K.C.**-2007, "Role of Farm Women in Cashew Nursery Management." In National Seminar on Research, Development And Marketing of Cashew, Nov 2007.

59. **Lercker G** and **Pallottav.,** 1979, "Cashew Seed and oil Composition". In-Proceedings of International cashew Symposium 1979. cochin Kerala India.

60. **Mahendra Singh** and **Puran Chand** 2009, Indian Agriculture Development policy. A critical analysis 2009. AGricultural situation in India 66(6)

61. **Mahesh. K.S** and **Appanna.C.P**-2010, "Role of NABARD in Cashew Promotion". The Cashew & Cocoa Journal 11(3)

62. **Mahesha.U.S, Hanamashetti S.I.** and **Hegde N.K**-2005, "Performance of Cashew (Anacardium Occidentate L) varieties under Hill Zone of Karnataka." The cashew 15(3)

63. **Maheswwar P.** 2009, "Status of Cashew Development In Karnataka". In 7th National Seminar-cashew Development in India Enhancement of Production and productivity Nov 2009. Bhuvaneshwar Orissa

64. **Malave D.B., D.C.Paul** and **S.S. Wadkar**, 2012, Economics of Marketing of Raw Cashew nut in Konkan Region of Maharastra, Cashew and Coca Journal, Vol I, No.I.

65. **Mamatha T.G**. and **Gumma Golmath.K.C.** 2002, "Trends Analysis in production and Export of Cashew in India". The cashew 16(1)

66. **Mandal R.C., Dhandar D.G, Dhume C.V.,**-1979, "Cashew Apple Liquor Industry in Goa". In Proceedings of International Cashew Symposium 1979. Cochin. Kerala India.

67. **Mini C. Jose Mathew**,-2009, "Recipes For Cashew apple products." In Cashew Research and Development in Humid Tropics with Emphasis on Cashew Apple Processing.

68. **Mini. C** and **Jose Mathew** 2009, "NHM Project on Transfer, Demonstration and Refinement of Technologies For Cashew Apple Processing". In cashew Research and Development in Humid Tropics with Emphasis on Cashew Apple Processing.

69. **Murthy.B., G.K, Sivasamban M.A.**1979, "Present Trends in CNSL utilization". In Proceedings of International Cashew Synposium-1979 Cochin Kerala, India.

70. **Mussallar S. H.,** 1998, "Value Addition in Cashew Kernels For Export and Internal Marketing". The cashew 12(3).

71. **Nagaraja K.V.,** 1998, "Quality of cashew Kernels in Relation to Export". The Cashew-12(3)

72. **Nagaraja.K.V, Balasubramanian D.,** -2007, "Processing and Value Addition in Cashew ".-In National Seminar on Research Development and Marketing of Cashew, Nov.2007.

73. **Nair G.K.,** 2009, "Cashew Processing". In Cashew Research and Development in Humid Tropics with Emphasis on Cashew Apple Processing.

74. **Nanjunda Swamy A.M. Radhakrishnaiah Shetty.G., Patwardhan.M.V,** 1979, "Utilization of Cashew Apples for the development production". In Proceedings of International Cashew Symposium-1979 Cochin, Kerala, India.

75. **Narayana Kutty M.C., Augustin A.,**-2009, "Cashew apple-Quality Attributes and its Utilization". In. Cashew Research and Development in Humid Tropics with Emphasis on Cashew apple processing.

76. **Nair. G.K.,** 1995, "Cashew: A crop With Unlimited Potential". The Cashew 9(1).

77. **Ohler.J.G.,** -1979, "Cashew has it a Future?" In Proceedings of International cashew Symposium-1979. Cochin, Kerala, India.

78. **Padma Lakshmi,** 2011. "Role of women in Indian Agricultural sector" Financing Agriculture 43(5)

79. Pal Arindam and **Somayaji.K.S.** 1999. "A Status Paper on Cashew Processing Industry". The Cashew 13(3)

80. **Patil A. B, Thalathi**, **J.H., Joshi R.M,** and **Wagle S.A,** 2011. Economic viability of investment in Cashew orchards (M.S.) The cashew and cocoa journal July – Sep 2011 vol III, No. 3,

81. **Peter Morgau.,** 1997, the Role of International Trade Association in the Cashew Industry. In Souvenier Cashew Manufacturer Association Souvenir Mangalore 1997.

82. **Ponnaswamy K.** and **Jancy Gupta**, 2006, credit utilisation, decisi on making pattern and marketing, belavious of farmers in different coastal farming systems. Agricultural situation in India 63(8)

83. **Potty.V**., -2007, "Cashew Scenario in India and Vietnam- a Comparative study". In National Seminar on research, Development and Marketing of cashew. Nov 2007.

84. **Ramesh Chand** 2011, India's National Agricultural policy. A critique Financing Agriculture 43(1).

85. **Rao K.N**-2009, "Cashew Crop Insurance By Agriculture Insurance Company of India Ltd". In 7th National Seminar-Cashew Development in India Enhancement of production and productivity. Nov 2009. Bhuvaneshwar. Orissa.

86. **Ravi Kumar K.N.,** Sree Lakshmi, Chinnama Naidu 2003, Prospects of Indian. Agriculture in the 21st century in the hight of world Trade Agreement. Agricultural situation in India 60(6)

87. **Russell.D.C.,** 1979, "The Future of Cashew Industry". In Proceedings of International Cashew Symposiium 1979. Cochin, Kerala, India.

88. **Salam M.A**. 1996, "Traditional Rubber Planters Turn to Cashew". The cashew 10(2)

89. **Saravanan .M.P.**, **Ponnarsi T** and **Chandra Kumar.M.** 2002, "Study on the Efficiency of Cashew Nut Processing Units in Tamil Nadu". The cashew 16(4)

90. **Sasi Varma** 2007, "Marketing Strategies For Cashews". In National Seminar on Research, Development and Marketing of Cashew No. 2007.

91. **Sasi Varma.K.**, and **Venkiteshwaran** 2009, In "Cashew Export Scenario." Cashew Research and Development in Humid Tropics with Emphasis on Cashew Apple Processing.

92. **Savant. P.V** and **Trinadh Kumar G.,** 2007, In National Seminar on Research, Development and Marketing of Cashew. Nov 2007.

93. **Shahal Hassan Musaliar T.K**., -2009, "Challenges and Opportunities for Indian Cashews In Global Market". In 7th National Seminar-Cashew Development in India. Enhancement of Production and Productivity. Nov 2009 Bhuvaneswar Orissa.

94. **Shahal Hassan Musaliar.T.K.**-2010, "Challenges and opportunities for Indian cashews in Glbal Market". The cashew and cocoa Journal 2(1)

95. **Shankar M.D.**, 1997, Quality in Cashew Processing- An ISO 2002Experience. In Souvenier Cashew Manufacturer Association Souvenier Mangalore 1997.

96. **Sharma N.R.,** 1997, "Introducing HACCP to Cashewnut Processing Industries" Cashew Bulletin 34(1)

97. **Sharma M.R.,** 2002, "Credit Support from NABARD for Development of Cashewnut". The cashew 16(2)

98. **Sheela Immanuel Narayana Kumar R. Ayyappan S.** 2008, Sustainable Alternate livelihood Avocations for coastal women in India. Agricultural situation in India. 66(2).

99. **Sing H.P., 2009,** Triggering Agricultural Development through Horticultural Crops, India Journal of Agricultural Economics January, March 2009

100. **Soman C.R.,**-1997, "Cashew Kernal in Human health"- The cashew 11(4).

101. **Souvenier** 6th National Seminar "Indian Cashew in the Next Decade- Challenges and opportunities. 18-19 May 2007, Raipur.

102. **Souvenier** International Conference on "Sustainable Cashew Production Challenges and Opportunities" 11, 12th October 2012 Panjin Goa, India. Published by DCCD Kochi, V.N. Hubballi, DCCD Kochi.

103. **Sree Lakshm K** and **K. N. Ravi Kumar** 2004, Indian Agriculture in the context of globalisation prospects and reprospects. Agricultural situation in India 60(10)

104. **Subha Rao M. S.,** 1979, "Scope for development of alcoholic beverage from Cashew Apple". In Proceedings of International Cashew Symposium-1979 Cochin. Kerala India.

105. **Sudarsanan.P.K, Vijay Chandran Pillai.** 2001, "Towards the Better Prospects of Indian Cashew" The Cashew 15(2).

106. **Sundaravarada Rajan. K.R** and **Rajesh Kumar K. R.** 2002, "Production and Trade Instability in Cashew-an Economic Analysis." The Cashew 16(1).

107. **Sundersanan P.K.,** 2001. "Cashew nut Good for Health". The Cashew 15(1)

108. **Suresh Zanthe** 1998 "Cashew processing and Marketing". The Cashew 12(3)

109. **Suriya Narayanan P.** 1998 "Cashew- the Wonder Nut-Elixir of Life". Cashew Bulletin 35(7)

110. **Toor M.S., Sukhpal Singh** and **Indrjith Kaur**, 2006, changing scenario of Indian Agriculture in the wake of Globalization. Agricultural situation in India 63(2)

111. **Unnikrishnan.U.K**., -1979, "A Review of quality control and Pre-Shipment Inspection of cashew kernels". In Proceedings of International cashew Symposium-1979. Cochin, Kerala. India.

112. **Velavan.C.** 2004, "Performance of Cashew: A Growth Rate Analysis". The Cashew 18(3)

113. **Venkataraman T.M.,** -1979, "Cashew Development Programme in India." In Proceedings of the International Cashew Symposium.Cashew-Research and Development. Cochin Kerala

114. **Venkataramana.T.H.** 1979, "Cashew Development Programme in India". In Proceedings of International Cashew Symposium-1979. Cochin, Kerala, India.

115. **Venkatesh N. Hubballi** 2003, Cashew Development in India, In Golden Jubilee Souvenir (1953-2003) University of Agriculture Sciences Bangalore, Agriculture Research station Ulla, Mangalore.

116. **Venkatesh N. Hubballi** 2005, Cashew Development in India with special reference to Karnataka, Published by Scientific Cashew Farming Horticulture Department D.K. Zilla Panchayath Mangalore.

117. **Venkatesh N. Hubballi** 2006. "Indian Cashew-Cashew Development Strategies in Next Decade". The cashew 20(2)

118. **Venkatesh.N. Hubballi** 2006, "Cashew Development in India-strategies for Golden Revolution". The cashew 20(2)

119. **Venkatesh.N. Hubballi** 2009, "Cashew Development In India. Enhancement of Production and Productivity". In 7th National Seminar "cashew Development In India. Enhancement of Production and Productivity". In & 7th National Seminar "Cashew Development in India. Enhancement of Production and Productivity Dec 2009. Bhuvaneshwar Orissa. Published by The director, Directorate of Cashew nut and Cocoa Development. Ministry of Agriculture, Government of India, Cochin.

120. **Venkatesh N. Hubballi**, 2009, "Transfer of Technology and Development Aspects of Cashew"- In Cashew Research and Development in Humid Tropics with Emphasis on Cashew Apple processing.

121. **Venkattakumar R.,** 2006, "Socio Economic Impact of cashew Cultivation in Kannur District of Kerala India". Journal of Plantation Crops. 34(3)

122. **Vilas Chandran T, Damodaran V.K.,** 1979, "Physio chemical qualities of cashew Apples of high yielding types" In Proceedings of International cashew Symposium-1979. Cochin Kerala India.

123. **Vishnuvardhana Venkatesha.J.** and **Madaiah D.**-2007, "Prospectus and Problems of Cashew cultivation in The Hill zone of Karnataka." In National Seminar on Research, Development and Marketing of Cashew Nov.2007.

124. **Yadukumar N., Nayak.M.G, Bhat M.G.,** -2009, "Organic Production of Cashew". The Cashew and Cocoa Journal 1(4)

125. **ಶ್ರೀಮತಿ ಆರುಂದತಿ ಚಟ್ಟೋಪಾಧ್ಯಾಯ** ಅನುವಾದ ಡಾ।। ಮಹದೇವ "ಉದ್ಯಮ ಶೀಲತೆಯ ಮುಖಾಂತರ ಸ್ತ್ರೀ ಸಬಲೀಕರಣ" ಯೋಜನಾ, ಜನವರಿ ೨೦೦೫, ಸಂಪುಟ ೨೦, ಸಂಚಿಕೆ ೬.

126. **ಪ್ರೊ. ಛಾಯಾ ಕೆ. ದೇಗಾಂವಕರ್, ವಿಠೋಬ ಭೀಮಣ್ಣ,** "ಗ್ರಾಮೀಣ ಕೃಷಿ ಅಭಿವೃದ್ಧಿಯಲ್ಲಿ ಮಹಿಳಾ ಕಾರ್ಮಿಕರ ಸಮಸ್ಯೆಗಳು", ಯೋಜನಾ, ಸಂಪುಟ ೨೨, ಸಂಚಿಕೆ ೨.

127. **ಎಸ್. ಎಸ್, ಗುಳೆದಗುಡ್ಡ** ಮತ್ತು **ಡಾ|| ಎಲ್. ಜಿ. ಕುನ್ನಾಳ**, "ಗೋಡಂಬಿ ಉತ್ಪಾದನೆ ಮತ್ತು ರಫ್ತು", ಯೋಜನಾ, ಸಂಪುಟ ೧೭, ಸಂಚಿಕೆ ೧೨, ಜುಲೈ ೨೦೦೨.

128. **ಎಂ. ಎಸ್. ಲಕ್ಷ್ಮಣಾಚರ್**, "ಗೇರು ಉತ್ಪಾದನೆ ಮತ್ತು ಸಂಸ್ಕರಣೆ", ಯೋಜನಾ, ಸಂಪುಟ ೧೪, ಸಂಚಿಕೆ ೧೨, ಜುಲೈ ೧೯೯೯.

129. **ಕೆ. ಎಂ. ನಂಜುಡಪ್ಪ** "ಅಭಿವೃದ್ಧಿ ಮತ್ತು ಜೀವನದ ಗುಣಮಟ್ಟ", ಯೋಜನಾ ಸಂಪುಟ ೧೫, ಸಂಚಿಕೆ ೨, ಸೆಪ್ಟೆಂಬರ್ ೧೯೯೯. ಪುಟ ೨–೧೫. (ಅನುವಾದ: ಜಿ.ಎನ್. ಗುರುಮೂರ್ತಿ)

130. **ಡಾ| ಜಿ. ಪ್ರಭಾಕರ ಶಿಶಿಲ,** "ಜಾಗತೀಕರಣ ಮತ್ತು ಭಾರತದ ಕೃಷಿ", ಯೋಜನಾ, ಸಂಪುಟ ೧೫, ಸಂಚಿಕೆ ೩, ಅಕ್ಟೋಬರ್ ೧೯೯೯.

131. **ಪ್ರೊ|| ಸಮರ ಕೆ. ದತ್ತ,** "ಭಾರತೀಯ ಕೃಷಿ ಅವಲೋಕನ", ಯೋಜನಾ, ಸಂಪುಟ ೧೭, ಸಂಚಿಕೆ ೮, ಮಾರ್ಚ್ ೨೦೦೨, (ಅನುವಾದ: ಎಂ. ಕೆ. ಸುಬ್ಬರಾವ್)

132. **ಸುರೀಂದರ್ ಸೂದ್**, ಅನುವಾದ ನಾಗರತ್ನ ಗ್ಯಾಲ್, "ಕೃಷಿ- ಒಂದು ವಿಶ್ಲೇಷಣೆ", ಯೋಜನಾ, ಸಂಪುಟ ೨೮, ಸಂಚಿಕೆ ೧

133. **ಎ. ಎಸ್. ಸೂರ್ಯ ನಾರಾಯಣ** "ರಾಷ್ಟ್ರೀಯ ಕೃಷಿ ನೀತಿ", ಯೋಜನಾ, ಸಂಪುಟ ೧೬, ಸಂಚಿಕೆ ೬, ಜನವರಿ ೨೦೦೧.

134. **ಡಾ| ಶ್ರೀನಾಥ್ ದೀಕ್ಷಿತ್** "ಗೋಡಂಬಿ ಬೆಳೆಗೆ ಅಧಿಕ ಉತ್ತೇಜನ", ಯೋಜನಾ, ಸಂಪುಟ ೯, ಸಂಚಿಕೆ ೧೦, ಮೇ ೧೯೯೪.

135. **ಡಾ| ಎಸ್. ಸಿ ಶೆಟ್ಟರ್** ಮತ್ತು **ಎಂ.ಪಿ. ದೊಡ್ಡಮನಿ** "ಗ್ರಾಮೀಣ ಮಹಿಳೆಯ ಸಮಸ್ಯೆಗಳು", ಯೋಜನಾ, ಸಂಪುಟ ೨೧, ಸಂಚಿಕೆ ೧೨, ಜುಲೈ ೨೦೦೬.

136. **ವಿಘ್ನೇಶ್ವರ ವರ್ಮುಡಿ** ೧೯೯೦ "ಗೋಡಂಬಿ ಕೃಷಿ ಸಮಸ್ಯೆಗಳು ಮತ್ತು ಅವಕಾಶಗಳು" ಯೋಜನಾ ಸೆಪ್ಟಂಬರ್ – ಅಕ್ಟೋಬರ್ ೧೯೯೦

137. **ವಿಘ್ನೇಶ್ವರ ವರ್ಮುಡಿ** ೧೯೯೧ "ಭಾರತದಲ್ಲಿ ತೋಟಗಾರಿಕಾ ಬೆಳೆಗಳ ಉತ್ಪಾದನೆ ಮತ್ತು ಸಮಸ್ಯೆ" ಯೋಜನಾ ಸೆಪ್ಟಂಬರ್ ೧೯೯೧.

138. ವಾರ್ತಾ ಮತ್ತು ಪ್ರಚಾರ ಇಲಾಖೆ, ಕರ್ನಾಟಕ ಸರ್ಕಾರ, "ಗೇರು ಬೀಜ ಬಡವರ ಕಲ್ಪವೃಕ್ಷ ಶ್ರೀಮಂತರ ಆಹಾರ", ಯೋಜನಾ, ಸಂಪುಟ ೬, ಸಂಚಿಕೆ ೧೨, ಜುಲೈ ೧೯೯೧.

139. **ಯೋಗಿಂದರ್ ಕೆ. ಅಲಘ್,** ಅನುವಾದ ಎಂ. ಟಿ. ಮಹಾದೇವ, "ಭಾರತೀಯ ಕೃಷಿ, ಸಮಸ್ಯೆಗಳು ಮತ್ತು ಭವಿಷ್ಯ" ಯೋಜನಾ, ಸಂಪುಟ ೨೨,ಸಂಚಿಕೆ ೧, ಆಗಸ್ಟ್ ೨೦೦೬.

ವರದಿಗಳು/ದಾಖಲೆಗಳು ಮತ್ತು ಅಂಕಿ ಅಂಶಗಳು

1. "A Study on Employees Job Satisfaction" at KSA Kamath & Sons Cashew Factory Sullia-2011. Project Report Submitted by **Charitha Kumari B. B**, MBA Student KVGCE Sullia.
2. "Marketing-using Business ethics in cashew Industry"-2008-09. A project Report Submitted by KVGCE Students, Sullia.
3. Annual Report 2010-11, DCCD Kochi.
4. Annual Report 2011-12, Directorate of Cashew nut and Cocoa Development Kochi. Published by **V.N. Hubballi,** DCCD Kochi.
5. **Gulegudda S. S.** 2005 "Production and Export performance of cashew. An Economic Analysis." Thesis submitted to university of Agricultural sciences Dharwad.
6. In plant Training undergone At KSA Kamath & Sons Cashew Factory, Sullia-2001. A project work submitted by MBA Student KVGCE Sullia.
7. **Kiran K. B.** (2007) Technological change and development of coffee plantation – a case study Ph.D. Thesis Mangalore University.
8. **Mridul Eapen, J. Jeyaranjan, K.N. Harilal, Padmini Swaminatha & Nazreen Kanji** 2003. "Liberalisation Gender and livelihoods: The cashewnut case. Working paper 3" A Report By Internation Institute for Environment and Development."
9. **Nair B.K.** (2009) Business Line, 22nd August 2009.
10. **Paul Alexander Rego** 1991 "Resource use Efficiency in Cashew Cultivation-A case study in Dakshina Kannada Dist." D.K. Ph. D Dissertation Mangalore University Mangalore.
11. Post Harvest Technology Annual report 2010-11. Directorate of Cashew research Puttur D.K. PP. 46-54.
12. **Shalini Yadav 2010.,** "Economics of cashew in India" A Report Department of Economics Analysis and Research. NABARD Mumbai.
13. **Shriprasad H.,** 2008 "Economic Enpowerment of Rural women Through self help groups.-A case study of Dakshina Kannada Dist" Ph. D Dessertation Mangalore University.
14. **Sudarshan Kumar** 2009. "Socio-Economic Analysis of cashewnut processing Unit in Karkala Taluk. Unpublished M. Phil Dissertation submitted to Vinayaka Missions University Salem, Tamil Nadu.
15. ದಕ್ಷಿಣ ಕನ್ನಡ ಜಿಲ್ಲೆಯ ಅಂಕಿ ಅಂಶಗಳ ನೋಟ, ೨೦೦೦-೦೧ ರಿಂದ ೨೦೧೧-೧೨
16. **ಮಹೇಶ್ ಪುಚ್ಚಪ್ಪಾಡಿ,** ಈ ಕಣ್ಣೀರಿಗೆ ಬೆಲೆ ಇಲ್ಲವೇಕೆ? ೨೬ ಜುಲೈ ೨೦೧೪, ಹೊಸದಿಗಂತ.
17. **ಎ. ಶೇಷಗಿರಿ ಭಟ್,** "ಬೇಸಿಗೆಯ ದಾಹಕ್ಕೆ ಗೇರು ಪಾನೀಯ" ಪ್ರಜಾವಾಣಿ ೫ನೇ ಏಪ್ರಿಲ್ ೨೦೧೨.